REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಸಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್‌ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಜನವರಿ ೧೯೪೪ [ಸಂಚಿಕೆ ೩೭

॥ ಶ್ರೀಜಗದ್ಗುರು ದಾರುಕಾಚಾರ್ಯಾಯ ನಮಃ ॥

ಗುರುವು ಹೇಗಿರಬೇಕು?

ಲೇ॥ ಮಲ್ಲಿಕಾರ್ಜುನಾರಾಧ್ಯ ರಾಚೇಪಲ್ಲಿಯವರು, ಮುದೇನೂರು

ಯೇ ಗುರುಃ ಸ ಶಿವಃ ಪ್ರೋಕ್ತೋ ಯಶ್ಶಿವಸ್ಸಗುರುಃ ಸ್ಮೃತಃ ।
ಉಭಯೋರಂತರಂ ನಾಸ್ತಿ ಗುರೋರಪಿ ಶಿವಸ್ಯ ಚ ॥

ಎಂಬ ವಾಕ್ಯಾಭಿಪ್ರಾಯಾನುಸಾರವಾಗಿ ಗುರುವು ಶಿವ ಸ್ವರೂಪನಾಗಿರುವನು ಗುರುವು ಭವರೋಗವೈದ್ಯನೂ, ಅನುಭವವೇದ್ಯನೂ, ಸಾಧಕರಿಗೆ ಸಾಧ್ಯನೂ ಆಗಿರುವನು ಗುರುವಿಗೆ ಮೊದಲನೆಯದಾಗಿ ಶಾಸ್ತ್ರಗಳ ಸಾರ ತಿಳಿದಿರಬೇಕು ಶಾಸ್ತ್ರಸಾರವೆಂದರೆ ಶಾಸ್ತ್ರಪಾಂಡಿತ್ಯವಲ್ಲ ಅದು ಗಿಳಿಪಾಠ! ಇಂದು ದೇಶದ ಸಮಾಚಾರವನ್ನು ಪುಸ್ತಕವನ್ನು ಓದಿ ತಿಳಿದಂತೆ ಅದು ಪ್ರತ್ಯಕ್ಷಜ್ಞಾನವೆನ್ನಲು ಶಾಸ್ತ್ರವು ಯಾವುದನ್ನು ಉದ್ದೇಶಿಸಿ ಹೇಳುವುದೋ ಅದರ ದರ್ಶನವಾಗಿರಬೇಕು ನಾರದಭಕ್ತಿಸೂತ್ರವಲ್ಲಿ– 'ಸತ್ ಶಾಸ್ತ್ರೀಕುರ್ವಂತಿ ಕಾಸ್ತ್ರಾಣಿ" ಎಂದು ಹೇಳಿರುವದು

ನಿಜವಾದ ಗುರುವಿಗೆ ಬ್ರಹ್ಮಸಾಕ್ಷಾತ್ಕಾರವಾಗಿರಬೇಕು ಆಡುವ ಮಾತಿನ ಹಿಂದುಗಡೆ ಭಗವಂತನ ಸಾಕ್ಷಾತ್ಕಾರದ ಶಕ್ತಿ ಇರಬೇಕು ಮಾತು ಸರಳವಾಗಿ ವ್ಯರೂಪ ಅದು ಸಾಕ್ಷಾತ್ಕಾರದ ಅಗ್ನಿಕುಂಡದಿಂದ ಬಂದಿದ್ದರೆ ಕೇಳುವವರ ಹೃದಯವಲ್ಲಿ ಪ್ರತಿಸ್ಪುರಣಗತಿಯಿಂದ ಪ್ರತಿಬಿಂಬಿಸುವದು. ಅರ್ಥಾತ್ ಸರಳವಾದ ಮಾತು ಮೋಧವಾಗಿ ನಾಟುವುದು ಇಂತಹ ಮಹಾಪುರುಷರ ವಾಕ್ಯವು ಬ್ರಹ್ಮಾನಂದದ ಕಡಲಿನಲ್ಲಿ ಮುಳಿಗಿ ತಂದ ಅನರ್ಘ್ಯರತ್ನದಂತಿರುವುದು

ಗುರುವಾದವನು ಸತ್ಕ್ರಿಯಾಚರಣೆಯಲ್ಲಿ ನಿರತನಾಗಿರಬೇಕು, ನಿಸ್ಪೃಹನಾಗಿರಬೇಕು ಮತ್ತು ಪರಿಶಾಸ್ತ್ರತ್ತ ನಾಗಿರಬೇಕು ಗುರುವು ದಕ್ಷಿಣೆಗಾಗಲೀ, ತನ್ನ ಶಿಷ್ಯರ ಮೂಲಕ ತನ್ನ ವಾರ್ತಾಕೇತಿಕ ಸರ್ವತ್ರ ಹುಬ್ಬಲಿ ಎಂಬ ಹೀನ ಆಸೆಗೆ ವಾಸನಾಗಿಯಾಗಲೀ ಇರಬಾರದು ಶಿಷ್ಯನ ಶ್ರೇಯೋಭಿವೃದ್ಧಿಯೊಂದೇ ಗುರುವಿನ ಮುಖ್ಯ ಗುರಿಯಾಗಿರಬೇಕು ಶಿಷ್ಯರ ಮೇಲ್ಕೈಗಾಗಿ ಅವರ ಪಾಪವನ್ನೆಲ್ಲ ತಿವಮು ವಿಪಪಾನನಾಡಿದಂತೆ ಸ್ವೀಕರಿಸಲೂ ಸಿದ್ಧನಾಗಿರಬೇಕು ಅವರ ಎಳ್ಳಷ್ಟಾಗಿ ತನ್ನ ತಪಶಕ್ತಿಯನ್ನೆಲ್ಲ ಧಾರೆಯೆರೆಯಲು ಸಿದ್ಧನಾಗಿರಬೇಕು

ವಿದ್ಯುಚ್ಛಕ್ತಿಯಂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರವಹಿಸಬೇಕಾದರೆ 'ತಂತಿ' ಎಂಬುದು ಹೇಗೆ ಮಧ್ಯವರ್ತಿಯಾಗಿರುವದೋ ಹಾಗೆಯೇ ಗುರುವಿನ ಕೃಪೆಯು ಶಿಷ್ಯನ ಹೃದಯಕೋಶಕ್ಕೆ ಹರಿಯ ಬೇಕಾದರೆ 'ಪ್ರೇಮ"ವೆಂಬುದು ಮಧ್ಯವರ್ತಿಯಾಗಿರುವ. ಆದೊಂದಿಲ್ಲದಿದ್ದರೆ ಎಷ್ಟು ಜ್ಞಾನಭಂಡಾರವು ಗುರುವಿನಲ್ಲಿದ್ದರೂ ಶಿಷ್ಯನಿಗೆ ಪ್ರಯೋಜನವಿಲ್ಲ ಅರ್ಥಾತ್. ಗುರುವಿನಲ್ಲಿ ಶಿಷ್ಯರಮೇಲೆ ನಿಸ್ಸೀಮಕಾವಾದ ಪ್ರೇಮವಿರಬೇಕೆಂದು ಭಾವವು ಇದು ಎಲ್ಲ ಗುಣಗಳ ಗಿಂತಲೂ ಎಲ್ಲರಿಗೂ ಅರ್ಥವಾಗುವಂತಹದ್ದು ಮೇಲೆದ್ದು ಕಾಣುವ ಪ್ರೇಮದ ಗುಣವಾಗಿರುವದು

ಮಧ್ಯವಾಗಿ ಗುರುವಾದವನು ತನ್ನ ಶಿಷ್ಯರ ಹೃನ್ಮಂದಿರದಲ್ಲಿ 'ಪರರ ಕನ್ಯನೇ ನಮ್ಮ ಕನ್ಯ, ಇತರರ ಸುಖವೇ ನನ್ನ ಸುಖ' ಎಂದು ಮರುಗುವ ವಿಶ್ವ ಕಾರುಣ್ಯದ ದೀಪವನ್ನು ಹೊತ್ತಿಸುವಂತೆ ಮಾಡಬೇಕು ಪ್ರತಿಯೊಬ್ಬ ಜೀವಿಯಲ್ಲಿಯೂ ಪರಶಿವನು ಇರುವನು ಆತನಿಗೆ ನಿವು ಮಾಡುವ ಪ್ರೇಮದಿಂದ (ಸೇವೆಯಿಂದ) ನನಸ್ಸಿನ ಕಲ್ಮಷ ಒಳರುವುದು ನಮ್ಮ ಆತ್ಮದರ್ಪಣ ದಲ್ಲಿ ಪರಂಜ್ಯೋತಿಯ ಪ್ರಭೆಯು ಬೆಳಗುವುದು ಎಂಬು ದೋದಿಸಬೇಕು ತಾಯಿಯಾದವಳು ತನ್ನ ಮಕ್ಕಳನ್ನು ಪ್ರೇವ ದಿಂದ ಸಲಹಿ ಕಾರ್ಯರಂಗಕ್ಕೆ ಕಳುಹಿಸುವಂತೆ ಗುರುವಾದವನು ತನ್ನ ಶಿಷ್ಯರನ್ನು ಸರ್ವತೋಮುಖ ವಾಗಿ ಬೆಳೆಯಿಸಿ ಭಕ್ತಿ, ಜ್ಞಾನ, ವೈರಾಗ್ಯಗಳಲ್ಲಿ ಪರಿ ಪ್ರಪ್ತರನ್ನಾಗಿ ನೂಡಿ ಜಗತ್ಪಿನ ಸುಖ ಶಾಂತಿಗೆ ದುಡಿ ಯುವಂತೆ ಹರಿಸಿ ಭವರಂಗಿಕ್ಕೆ ಕಳುಹಿಸಬೇಕು

ಪ್ರಿಯ ಬಾಚಕರೇ, ಯಾವ ಗುರುವಿನ ಕೃಪಾಕಟಾಕ್ಷವಾಗಲೀ ಉಶ್ಚರಿಸಿ ಅನುಗ್ರಹವಾಗಲೀ ಎದಕ್ಕೆ ನಮ್ಮ ಸೌಪ್ರಯತ್ನ ಸತತಾಭ್ಯಾಸವೆ ಬೆನರು ಬೀಳದೆ ಇದ್ದರೆ ಫಲಪ್ರದವಾಗುವುದಿಲ್ಲ ಸುಮ್ಮನೆ ಗುರು ಕೊಟ್ಟ ಜೋಳಿಗೆ ಎಂದು ಗಟ್ಟಿಕ್ಕೆ ನೀತುಹಾಕಿದರೆ ಭಿಕ್ಷೆ ನಿಕ್ಕು ವುದಿಲ್ಲ ಹೊಟ್ಟೆ ತುಂಬುವುದಿಲ್ಲ ಜೋಳಿಗೆಯನ್ನು ತೆಗೆದುಕೊಂಡು ಮನೆಮನೆಗೆ ಭಿಕ್ಷೆಗೆ ಹೋಗಬೇಕು "ಭವತಿ ಭಿಕ್ಷಾಂದೇಹಿ" ಎಂದು ಅನ್ನಬೇಕು ಆಗ ಜೋಳಿಗೆಯೊ ತುಂಬುವುದು, ಹೊಟ್ಟೆಯೂ ತುಂಬು ವುದು ಅಂತೆಯೇ ಗುರುವಿನ ಉಪದೇಶವೆಂಬ ಮಂತ್ರದ ಕಡಿಗೋಲಿನಿಂದ ನನ್ನ ಮನಸ್ಸನ್ನು ಕಡೆಯ ಬೇಕು ಆಗ ಮಾತ್ರ ಅಲ್ಲಿ ಹುದುಗಿರುವ ಅತ್ಯಜ್ಞಾನ ವೆಂಬ ನವನೀತವು (ಬೆಣ್ಣೆಯು) ಸಿಕ್ಕುವುದು

॥ ಯಾದೃಶೀ ಭಾವನಾ ಯತ್ರ ಸಿದ್ಧಿರ್ಭವತಿ ತಾದೃಶೀ ॥

ನಿಜಾಂ ಸರ್ಕಾರದ ನಾಣ್ಯ ನೀತಿಯು ಒಪ್ಪಂದಕ್ಕೆ ವಿರುದ್ಧವಾಗಿದೆ

ಇಂಡಿಯನ್ ನಾಣ್ಯ ಚಲಾವಣೆಗೆ ವಿರುದ್ಧವಾಗಿ ನಿಜಾಂ ಸರ್ಕಾರವು ಈಚೆಗೆ ಹೊರಡಿಸಿದ ಆಜ್ಞೆಗೆ ಪ್ರತಿ ಯಾಗಿ ಇಂಡಿಯಾ ಸರ್ಕಾರವು ಪ್ರತೀಕಾರ ಕಾರ್ಯ ಕ್ರಮಗಳನ್ನು ಕೈಗೊಳ್ಳುವುದು ಅಸಂಭವವೆಲ್ಲವೆಂದು ದೆಹಲಿಯ ಅದಿಕಾರಯುಕ್ತವಾದ ವೃತ್ತಗಳ ಅಭಿಪ್ರಾಯ ವಾಗಿದೆ

ಹೈದರಾಬಾದಿನ ಈ ಹೊಸ ಆಜ್ಞೆಯು ಇಂಡಿಯಾ ಹೈದರಾಬಾದ್ ಒಪ್ಪಂದಕ್ಕೆ ವಿರುದ್ಧವಾಗಿದೆಯೆಂದು ಅಭಿಪ್ರಾಯಪಡಲಾಗಿದೆ ಹೈದರಾಬಾದ್ ಸರ್ಕಾರವು ಇಂಗ್ಲ ನೀತಿಯನ್ನೇ ಮುಂದೆಯೂ ಅನುಸರಿಸಿದರೆ, ಇಂಡಿಯಾ ಸರ್ಕಾರದಲ್ಲಿರುವ ನಿಜಾಂ ಸರ್ಕಾರದ ಆಸ್ತಿ ಪಾಸ್ತಿಗಳ ಮೇಲೆ ಪ್ರತಿಬಂಧಕ ಹಾಕಲು ಇಂಡಿಯಾ ಸರ್ಕಾರಕ್ಕೆ ಹಕ್ಕಿದೆಯೆಂದು ಹೇಳಲಾಗುತ್ತಿದೆ.

ಪಾಕಿಸ್ತಾನ್ ಸರ್ಕಾರದ ಫೈನಾನ್ಸ್ ಮಂತ್ರಿ ಹೈದ್ರಾಬಾದಿಗೆ ಭೇಟಿ ಕೊಟ್ಟ ಮೇಲೆ ನಿಜಾಂ ಸರ್ಕಾರವು ಹೊಸ ಆಜ್ಞೆಯನ್ನು ಹೊರಡಿಸಿರುವುದು ಗಮನಾರ್ಹ ವಾಗಿದೆ ಪಾಕಿಸ್ತಾನವು ಹೈದರಾಬಾದಿನಿಂದ ಸಾಲ ತೆಗೆಯುವ ಯೋಜನೆಯಲ್ಲಿದೆಯೆಂದೂ ಹೇಳಲಾಗಿದೆ ಆದರೆ, ಈಗಿನ ಒಪ್ಪಂದದ ಪ್ರಕಾರ, ಹೈದರಾಬಾದು ಇಂಡಿಯಾ ಸರ್ಕಾರದ ಗಮನಕ್ಕೆ ತರದೆ ಮತ್ತು ಅದರ ಅನುಮತಿಯಿಲ್ಲದೆ ಇಂಥ ಸಾಲ ಕೊಡಲು ಸಾಧ್ಯವಿಲ್ಲ ಒಂದು ವೇಳೆ ಸಾಲ ಕೊಡಲು ನಿಜಾಂ ಸರ್ಕಾರವು ನಿರ್ಧರಿಸಿದರೆ, ಆಗ ಪರಿಸ್ಥಿತಿ ವಿಷಮಿಸಬಹುದು

ನಿಜಾಂ ಸರ್ಕಾರವು ಆಜ್ಞೆಯನ್ನು ಹೊರಡಿಸಿರುವುದ ಲ್ಲದೆ, ನೇರವಾಗಿ ಸ್ಟರ್ಲಿಂಗ್, ಏನಿಯಾಳ ಅಧಿಕಾರವನ್ನು ಪಡೆಯಲು ಕೂಡ ಪ್ರಯತ್ನಿಸಬಹುದೆಂದು ಹೇಳಲಾ ಗಿದೆ ಅಂಥ ಪ್ರಯತ್ನ ನಡೆದರೆ ಆಗ ಬ್ರಿಟಿಷ್ ಸರ್ಕಾರ ನಿಜಾಮ್ ಸರ್ಕಾರಕ್ಕೆ ಸಹಾಯ ಮಾಡುವುದೋ ಇಲ್ಲವೋ ಎಂಬುದನ್ನು ಕಾದು ನೋಡಬೇಕಾಗಿದೆ

ಶಾಲೆ, ಕಾಲೇಜುಗಳಿಗೆ ವಿದ್ಯಾರ್ಥಿಗಳ ಬಹಿಷ್ಕಾರ

ನಿಜಾಂ ಇಲಾಖಾ ಡೆಂಗಾಬಾದಿನ ವಿದ್ಯಾರ್ಥಿಗಳು ಸ್ಟೇಟ್ ಕಾಂಗ್ರೆಸ್ಸಿನ ಬೇಡಿಕೆಗಳನ್ನು ಈಡೇರಿಸುವ ವರೆಗೂ ಶಾಲೆ ಕಾಲೇಜುಗಳಿಗೆ ವ್ರವೇಶ ಮಾಡುವುದಿಲ್ಲ ವೆಂದು ಸಂಕಲ್ಪ ಮಾಡಿದ್ದಾರೆ

ಮೈಸೂರು ಸಂಸ್ಥಾನದ ಗ್ರಾಮಾಧಿಕಾರಿಗಳ ಸಂಘದ ರಜತ ಮಹೋತ್ಸವ

ತಾ॥ ೩೧-೧೫-೪೫ ನೆಯ ದಿವಸ ರಾಜಧಾನಿಯ ದಸರಾ ವಸ್ತುಪ್ರದರ್ಶನಾಲಯದಲ್ಲಿ ಮೇಳ್ಕಂಡ ಸಂಘದ ರಜತ ಮಹೋತ್ಸವವು ಮಹಾ ವೈಭವದಿಂದ ನಡೆಯಿತು ಮಹಾಪ್ರಭುಗಳವರು ದರ್ಬಮಾಡಿಸಿದ್ದರು ಸಂಘದ ಪರವಾಗಿ ಮೈಸೂರಪ್ರಭುಗಳವರಿಗೆ ಬಿನ್ನವತ್ತಳೆಯನ್ನರ್ಪಿಸಲಾಯಿತು

ಮಹಾಪ್ರಭುಗಳು ಬಿನ್ನವತ್ತಳೆಗೆ ಉತ್ತರವನ್ನೀ ಯುತ್ತ — ಭಾರತವಲ್ಲಿ ನಡೆಯುತ್ತಿರುವ ಒಬಲಾವಣೆಗೆ ತಕ್ಕಂತೆ ಗ್ರಾಮಾಧಿಕಾರಿಗಳು ಸಂಘಟಿಸಿ ಮುಂದೆಹೋಗ ಬೇಕೆಂದೂ, ಎಲ್ಲರೂ ಸರ್ವತೋಮುಖವಾಗಿ ಏಳಿಗೆ ಯಾಗಬೇಕೆಂಬ ಫಲೋಕ್ಷೆಗಳಿಂದಲೇ ಜವಾಬ್ದಾರಿ ಸರ್ಕಾರವನ್ನು ಕೊಡಲಾಗಿದೆಯೆಂದೂ, ನಿಮ್ಮ ಬೇಡಿಕೆ ಗಳನ್ನೆಲ್ಲಾ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವರೆಂದೂ ಅಪ್ಪಣೆ ಕೊಡಿಸಿದರು ಮೈಸೂರು ವೇಷದವ್ಲರಿರುವ ಒಟ್ಟು ೨೩ ಸಾವಿರ ಗ್ರಾಮಾಧಿಕಾರಿಗಳಲ್ಲಿ ೪-೫ ಸಾವಿರ ಗ್ರಾಮಾಧಿಕಾರಿಗಳು ಈ ಮಹೋತ್ಸವದಲ್ಲಿ ಭಾಗವಹಿಸಿದ್ದರು.

ಶ್ರೀಜಗದ್ಗುರು ಶ್ರೀಶೈಲಪೀಠದ ಸೂಕ್ಷ್ಮಪರಿಚಯ

ಈ ಪೀಠದ ಬಗ್ಗೆ ಪ್ರೊತೆತಿರುವ ಕೆಲವು ಶಾಸನಗಳ ವಿವರಣೆ

ಶ್ರೀಜಗದ್ಗುರುಶಂಜೀರಗಳ ಪ್ರಾಚೀನತ್ವದಬಗ್ಗೆ ಮದ್ರಾಸ್ ಹೈಕೋರ್ಟಿನ ತೀರ್ಮಾನ

ಭರತಖಂಡದಲ್ಲಿರಕಕ್ಕ ದ್ಯಾದರ್ಜ್ಯೋತಿರ್ಲಿಂಗಗಳಲ್ಲಿ ಶ್ರೀಶೈಲ ಕ್ಷೇತ್ರವಲ್ಲಿರತಕ್ಕ ಶ್ರೀಮಲ್ಲಿಕಾರ್ಜುನ ಮಹಾಲಿಂಗವು ಒಂದಾಗಿರುವುದೆಂಬ ವಿಷಯವು ಶಾಸ್ತ್ರಸಿದ್ಧವು ಲೋಕಪ್ರಸಿದ್ಧವೂ ಆಗಿದೆ ಈ ಮಲ್ಲಿಕಾರ್ಜುನ ಮಹಾಲಿಂಗದಿಂದ ನಿರಾಜಸುತ್ತಿರುವ ಶ್ರೀಶೈಲಕ್ಷೇತ್ರವು ಭರತ ಖಂಡದಲ್ಲಿರತಕ್ಕ ಸಮಸ್ತ ಪವಿತ್ರಕ್ಷೇತ್ರಗಳಲ್ಲಿ ಅಗ್ರಸ್ಥಾನವನ್ನು ಪಡೆದಿರುವುದು ಅದುದರಿಂದಲೇ ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು "ಶ್ರೀಶೈಲಶಿಖರೇ ದೃಷ್ಟೇ ಪುನರ್ಜನ್ಮ ನ ವಿದ್ಯತೇ" ಎಂದು ತಮ್ಮಿಂದ ಬರೆಯಲ್ಪಟ್ಟಿರುವ ಸ್ಕಂದಪುರಾಣಾಂತರ್ಗತವಾದ ಶ್ರೀಶೈಲ ಖಂಡದಲ್ಲಿ ಈ ಮಹಾಕ್ಷೇತ್ರದ ಮಹಿಮೆಯನ್ನು ಉದ್ಘೋಷಿಸಿರುವರು ಇಂತಹ ಪವಿತ್ರಕ್ಷೇತ್ರದಲ್ಲಿ ರಾರಾಜಿಸುತ್ತಿರುವ ಶ್ರೀಮಲ್ಲಿಕಾರ್ಜುನ ಮಹಾಲಿಂಗದಿಂದ ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಡಿತಾರಾಧ್ಯರು ಅವತರಿಸಿದರು ಈ ವಿಷಯವನ್ನು ಸ್ವಾಯಂಭುವಾದಿಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವವು

ಸುಧಾಕುಂಡಾಖ್ಯಸುಕ್ಷೇತ್ರೇ ಮಲ್ಲಿಕಾರ್ಜುನಲಿಂಗತಃ ।
ಜನನಂ ಪಂಡಿತಾರ್ಯಸ್ಯ ನಿವಾಸಃ ಶ್ರೀಗಿರೌ ಶಿವೇ ॥

(ಸಾ ಯಂಭುವಾಗಮ)

ಇತ್ಯಾದಿ ಶಿವಾಗಮವಾಕ್ಯಗಳಿಂದ ಶ್ರೀಸುಪ್ರಖಂಡಿತಾರಾಧ್ಯರು ಶ್ರೀಮಲ್ಲಿಕಾರ್ಜುನಲಿಂಗದಿಂದ ಅವತರಿಸಿ ಅಲ್ಲಿಯೇ ತಮ್ಮ ಧರ್ಮಪೀಠವನ್ನು ಸ್ಥಾಪಿಸಿದರೆಂದು ಸ್ಪಷ್ಟವಾಗುನದು ಶ್ರೀಪಂಡಿತಾರಾಧ್ಯರ ಅವತಾರಕ್ಕೆ ಮೂಲಭೂತನಾದ ಶ್ರೀಮಲ್ಲಿಕಾರ್ಜುನಿಸ್ವಾಮಿಯು ದೇವಸ್ಥಾನವು ಅನಾದಿ ಕಾಲದಿಂದ ಆ ಪೀಠಾಧಿಪತಿಗಳ ಸ್ವಾದೀನದಲ್ಲಿಯೇ ಇತ್ತು ಆದರೆ ಮುಸಲ್ಮಾನರ ಪಾವಳಿಯ ಕಾಲದಲ್ಲಿ ಶ್ರೀಶೈಲಕ್ಷೇತ್ರವು ಪಾಳುಬಿದ್ದ ಕಾರಣ, ಅಂದಿನಿಂದ ಆ ಕ್ಷೇತ್ರದ ಅಧಿಪತ್ಯವು ಇವರ ಕೈಬಿಟ್ಟು ಹೋಯಿತು ಆದರೂ ಶ್ರೀಮಲ್ಲಿಕಾರ್ಜುನಸ್ವಾಮಿಯ ಪೂಜಾದಿಗಳು ಇಂದಿನವರೆಗೂ ಜಂಗಮುಂಪತೀಯಂದಲೇ ನೆರವೇರಿಸಲ್ಪಡುತ್ತಿರುವವು

ಶ್ರೀಶೈಲಕ್ಷೇತ್ರದ ಅಧಿಪತ್ಯವು ಪೂರ್ವಕಾಲದಲ್ಲಿ ಶ್ರೀಶೈಲಧರ್ಮ ಪೀಠಾಧಿಪತಿಗಳ ಆಧೀನದಲ್ಲಿದ್ದಿತೆಂಬ ವಿಷಯವನ್ನು ಅನೇಕತುರ ಪಿಟ್ಟಿಸ್ಸಿಲ್ಲ್ ತಾಡಪತ್ರಿ ರಾಮೇಶ್ವರ ದೇವಾಲಯದಲ್ಲಿರುವ ಒಂದು ಶಿಲಾಶಾಸನವು ಸೂಚಿಸುತ್ತಿರುವುದು ಈ ಶಾಸನವು ಆಂಧ್ರಭಾಷೆಯಲ್ಲಿದ್ದು "South Indian Inscriptions (Texts Vol IV ~~"~~ ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್" ೪ ನೆಯ ಭಾಗದ ೬೧೨ ನೆಯ ಪುಟದಲ್ಲಿ ಮುದ್ರಿಸಲ್ಪಟ್ಟಿರುವುದು ಶಾಸನದಲ್ಲಿ ಕಾಲವು ಉಲ್ಲೇಖವಿಲ್ಲ (A. R. No-349 of 1892)

ಈ ಶಾಸನವಲ್ಲಿ ಶ್ರೀಶೈಲಪೀಠದ ಸಿದ್ಧಭಿಕ್ಷಾವೃತ್ತಿಸ್ವಾಮಿಗಳವರ ಆಜ್ಞಾಧಾರಕನಾದ "ಶಾಂತಯ್ಯ" ಎಂಬಾತನು ತಾಡಪತ್ರಿಯಲ್ಲಿರುವ ರಾಮೇಶ್ವರದೇವರಿಗೆ ದಾನಮಾಡಿರುವ ವಿಷಯವು ಹೇಳಲ್ಪಟ್ಟಿರುವುದು ಈ ಶಾಸನದಲ್ಲಿ ಮೇಲ್ಕಂಡ ಶ್ರೀಸ್ವಾಮಿಗಳವರಿಗೆ ಕೊಡಲ್ಪಟ್ಟಿರುವ ವಿಶೇಷಣಗಳನ್ನು ವಿಮರ್ಶಿಸಿದರೆ ಆ ಸ್ವಾಮಿಗಳವರು ದೇವಸ್ಥಾನದ ಧರ್ಮದರ್ಶಿಗಳಾಗಿದ್ದರೆಂದು ತೋರಬರುತ್ತದೆ

ಮದ್ರಾಸ್ ಗವರ್ನಮೆಂಟಿನ ಶಾಸನ ಇಲಾಖೆಯವರಿಗೆ ೧೯೧೩ನೆಯ ಇಸ್ವಿಯಲ್ಲಿ ಕರ್ನೂಲ ಡಿಸ್ಟಾನೆಂ ಎಂಬ ಗ್ರಾಮದಲ್ಲಿ ಎರಡು ಶಿಲಾಶಾಸನಗಳು ದೊರೆತಿರುತ್ತವೆ (ಶಾಸನಗಳ ನಂಬರು ೧೬೮-೧೯೯.)

೧೬೯ನೆಯ ನಂಬರಿನ ಶಾಸನದಲ್ಲಿ—ಶ್ರೀಪಂಡಿತಾರಾಧ್ಯರ ಪವಿತ್ರಸಾಮವು ಉಲ್ಲೇಖಿಸಲ್ಪಟ್ಟಿರುತ್ತದೆ ಆ ಶಾಸನದಲ್ಲಿರುವ ಸಂಸ್ಕೃತ ಪದ್ಯವು ಈ ಕೆಳಗೆ ಉದಾಹರಿಸಲ್ಪಟ್ಟಿರುವುದು

ಶ್ರೀಯೋರುಗಂಟ್ಯಂತಿಳಮಾಜೆರಾಜು
ಪಲ್ಲೀಜನಿಃ ಶ್ರೀಗಿರಿತ್ಯಂಗವಾಸಿಃ ।
ಶ್ರೀಪಂಡಿತಾರಾಧ್ಯಗೃಹಸ್ಯ ದಾಸೋ
ವಿಭೂತಿಗೌರಃ ಕುಲನಾಗತೋ ಮಃ ॥

"ಯೋರುಗಂಟ್ ಎಂಬ ಗ್ರಾಮದ ಸಮಾಪದಲ್ಲಿರುವ ಮಾಚಿ ರಾಜುಪಲ್ಲಿಯಲ್ಲಿ ಹುಟ್ಟಿದವನೂ, ಶ್ರೀಶೈಲಪರ್ವತದ ಮೇಲ್ಭಾಗದಲ್ಲಿ ವಾಸವಾಗಿರುವವನೂ, ಶ್ರೀಪಂಡಿತಾರಾಧ್ಯರ ಮತದ ಸೇವಕನೂ ಆದ ವಿಭೂತಿಗೌರಯ್ಯನು ನಿನ್ನಗಳಿಗೆ ಶರಣಾಗತನಾಗಿದ್ದಾನೆ" ಎಂಬುದು ಮೇಲಿನ ಪದ್ಯದ ಅರ್ಥ ಈ ಶಾಸನದಲ್ಲಿ ಶ್ರೀಶೈಲಪಂಡಿತಾರಾಧ್ಯರ ನಾಮವು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವುದು ಆದರೆ ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ

೧೬೪ನೆಯ ನಂಬರಿನ ಶಾಸನವೂ ಸಹ ವಿಭೂತಿ ಗೌರಯ್ಯನ ವಿಷಯಕವಾಗಿಯೇ ಇರುವುದು. ಆ ಶಾಸನದಲ್ಲಿ—

ದೇವರ ಜಾಯಿಸ್ಟೇಳಿಕ್ಕೊಂಣ್ಣಳ್ಳ ಪಡಿಯಾರಿನ್
ಶ್ರೀವಿಭೂತಿ ಗೌರಯ ಶರಣಾರ್ತ್ತಿ

ಈ ರೀತಿ ಅಕ್ಷರಗಳು ಕೆತ್ತಲ್ಪಟ್ಟಿರುವವು ಮದ್ರಾಸ್ ಗವರ್ನಮೆಂಟಿನ ಶಾಸನ ಇಲಾಖೆಯವರು ಈ ಶಾಸನದಲ್ಲಿರುವ ಅಕ್ಷರಗಳು ಕ್ರಿಸ್ತಶಕ ೮ ನೆಯ ಶತಮಾನದವುಗಳೆಂದು ಅಭಿಪ್ರಾಯಪಟ್ಟಿದ್ದಾರೆ ಈ ವಿಷಯವನ್ನು ವಿಮರ್ಶಿಸಿ ನೋಡಿದರೆ ವಿಭೂತಿ ಗೌರಯ್ಯ ಎಂಬವನು ಈಗ್ಗೆ ೧೨೦೦ ವರ್ಷಗಳ ಪೂರ್ವದಲ್ಲಿದ್ದನೆಂದು ಸ್ಪಷ್ಟವಾಗುವದು ಈಗ್ಗೆ ೧೨೦೦ ವರ್ಷಗಳ ಪೂರ್ವದ ಶಾಸನದಲ್ಲಿ ಶ್ರೀಪಂಡಿತಾರಾಧ್ಯಪೀಠದ ಪವಿತ್ರಸಾಮವು ಉಲ್ಲಿಖಿತವಾಗಿರುವದನ್ನು ನೋಡಿದರೆ ಶ್ರೀಶೈಲಪೀಠವು ಬಹು ಪೂರ್ವತನವಾದುದೆಂದು ಸ್ಪಷ್ಟವಾಗುವದು

ಶ್ರೀಶೈಲಪೀಠಕ್ಕೆ ಪೂರ್ವಕಾಲದಲ್ಲಿ ಈಶ್ವರಶಿವಾಚಾರ್ಯರೆಂಬವರು ಅಧಿಪತಿಗಳಾಗಿದ್ದರೆಂಬ ವಿಷಯವು ಆ ಕ್ಷೇತ್ರದಲ್ಲಿರುವ ಒಂದು ಶಾಸನದಲ್ಲಿ ಹೇಳಲ್ಪಟ್ಟಿರುವದೆಂದು ಶ್ರೀಶೈಲಮ್ಯಾನೇಜ್‌ಮೆಂಟ್ ಬೋರ್ಡಿನವರು ಈಗ್ಗೆ ೧೫೩ ೨೦ ವರ್ಷಗಳ ಪೂರ್ವದಲ್ಲಿ ತಮ್ಮ ರಿಪೋರ್ಟಿನಲ್ಲಿ ಪ್ರಕಟಿಸಿರುವರೆಂದು ತೀರ್ಮಾನಿಸಿರುತ್ತಾರೆ ಈ ಶಾಸನವನ್ನು ಪ್ರತ್ಯಕ್ಷವಾಗಿ ನೋಡಿದ ಮೇಲೆ ಅದರಲ್ಲಿರುವ ವಿಷಯವನ್ನು ಸರಿಯಾಗಿ ಪರಿಶೋಧಿಸಿ ಮುಂದ ನಿರ್ಣಯಿಸಲಾಗುವುದು ಈ ಪೀಠದ ಬಗ್ಗೆ ಆಂಧ್ರದೇಶದಲ್ಲಿ ಇನ್ನೂ ಅನೇಕ ಶಾಸನಗಳು ದೊರೆಯುವವು. ಶಾಸನ ಶೋಧಕಶ್ರದ್ಧಾಸಕ್ತಿಯುಳ್ಳವರು ಈ ಕಾರ್ಯವನ್ನು ಕೈಕೊಂಡರೆ ಈ ಪೀಠಕ್ಕೂ ವೀರಶೈವಸಮಾಜಕ್ಕೂ ಮಹೋಪಕಾರವನ್ನು ಮಾಡಿದಂತಾಗುವದು. ಅಸ್ತು

ಶ್ರೀಶೈಲಕ್ಷೇತ್ರವು ಪೂರ್ವಕಾಲದಲ್ಲಿ ಈಗಿನಂತಿ ನಿರ್ಜನಪ್ರದೇಶವಾಗಿರದೆ, ಅನೇಕ್ಯ ಜನಸಮೂಹದಿಂದ ವಿರಾಜಿಸುತ್ತಿದ್ದಿತು ಆಂಧ್ರದೇಶದಲ್ಲಿರುವ ಓರಂಗಲ್ಲನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಕಾಕತೀಯನಂತದ ಗಣಪತಿರಾಜನ ಕಾಲದಲ್ಲಿಯೂ, ಆವನ ಮಗಳಾದ ರುದ್ರಾಂಬೆಯ ಕಾಲದಲ್ಲಿಯೂ ಈ ಮಹಾಕ್ಷೇತ್ರವು ಜನಭರಿತವಾಗಿ ಒಳ್ಳೆ ವೈಭವಸ್ಥಿತಿಯಲ್ಲಿತ್ತು ಮಹಾಕೂರಿಯಾದ ರುದ್ರಾಂಬೆಯು ಮೃತಳಾದ ಮೇಲೆ ಆವಳ ಮಗಳ ಮಗನಾದ ಪ್ರತಾಪರುದ್ರನೆಂಬವನು ಆ ದೇಶವನ್ನು ಆಳಪತ್ತಿದನು ಹೇಡಿಯೂ ಹತಭಾಗ್ಯನೂ ಆದ ಆ ಪ್ರತಾಪರುದ್ರನ ಕಾಲದಲ್ಲಿ ದಿಲ್ಲಿಯಿಂದ ಮಲ್ಲಿಕ್‌ಕಾಫರನೆಂಬವನು ದಕ್ಷಿಣದೇಶಕ್ಕೆ ದಂಡೆತ್ತಿ ಬಂದು ಅವನನ್ನು ಯುದ್ಧದಲ್ಲಿ ಸೋಲಿಸಿ, ಅವನ ದೊಕ್ಕಸವನ್ನೆಲ್ಲಾ ಲೂಟಿಮಾಡಿ, ಶ್ರೀ ಶ. ೧೩೨೬ ರಲ್ಲಿ ಅವನನ್ನು ಸೆರೆಹಿಡಿದು ದಿಲ್ಲಿಗೆ ಒಯ್ದನು ಪ್ರತಾಪರುದ್ರನು ಸೆರೆಸಿಕ್ಕ ಮೇಲೆ ಆ ರಾಜ್ಯವು ಅನಾಯಕವಾಗಿ, ಆ ರಾಜವಂಶದವರಿಗೆ ಕುಲದೈವವಾಗಿದ್ದ ಶ್ರೀಮಲ್ಲಿಕಾರ್ಜುನಸ್ವಾಮಿಯ ದೇವಸ್ಥಾನದ ವೈಭವವು ತಗ್ಗಿಹೋಯಿತು ಮುಸಲ್ಮಾನರ ಪಾವಳಿಯಿಂದ ಆ ಕ್ಷೇತ್ರದಲ್ಲಿದ್ದ ಆಸಂಖ್ಯ ಜನ ಹಿಂದೂಗಳು ಆ ಸ್ಥಾನವನ್ನು ಬಿಟ್ಟು ದಿಕ್ಕುಪಾಲಾಗಿ ಒಡಿಹೋದರು ಆ ಕಾಲದಲ್ಲಿಯೇ ಶ್ರೀಶೈಲಕ್ಷೇತ್ರದಲ್ಲಿದ್ದ ವೀರಶೈವಧರ್ಮಪೀಠವು ಸಹ ನಾಳುದಿದ್ದಿತು ಅಂದಿನಿಂದೀಚೆಗೆ ಆ ಪೀಠಾಧಿಪತಿಗಳು ಶ್ರೀಶೈಲಕ್ಕೆ ಸಮೀಪವಲ್ಲಿರುವ ಅಕ್ಕಳಕೂರು ಎಂಬ ಗ್ರಾಮದಲ್ಲಿ ಬೀಡಿರಿಂದು ನೆರವನ್ನು ಕಳ್ಪಿಸಿಕೊಂಡು ವಾಸಿಸತೊಡಗಿದರು

ಈ ಅಕ್ಕಳಕೂರು ಮಠದ ಬಗ್ಗೆ ಇತ್ತೀಚೆಗೆ ಆ ಮಠದ ಸ್ವಾಮಿಗಳವರಲ್ಲಿ ಪರಸ್ಪರ ವ್ಯಾಜ್ಯವು ಹುಟ್ಟಿ, ಆ ವ್ಯಾಜ್ಯವು ಮದ್ರಾಸ್ ಹೈಕೋರ್ಟಿನವರೆಗೆ ಹೋಯಿತು. ಮದ್ರಾಸ್ ಹೈಕೋರ್ಟಿನ ಚೀಫ್ ಜಸ್ಟಿಸ್ ಸರ್. ಆಲ್ಫರ್ಡ್ ಹೆನ್ರಿ ಎಂಬವರು ಆ ಪೀಠದ ಮತ್ತು ಮಿಕ್ಕ ನಾಲ್ಕು ಪೀಠಗಳ ಪ್ರಾಚೀನ ಚರಿತ್ರೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಶಾ॥ ೨-೩-೧೯೪೪ನೆಯ ದಿನಸ ತೀರ್ಮಾನವನ್ನಿತ್ತರು ಹೈಕೋರ್ಟಿನ ಶ್ರೇಷ್ಠನ್ಯಾಯಾಧೀಶರು ತಮ್ಮ ತೀರ್ಮಾನದ ಒಂದು ಕಡೆಯಲ್ಲಿ ಸಂಚಿ ಪೀಠಗಳು ಬಹುಪುರಾತನವಾದವುಗಳೆಂದು ಸ್ಪಷ್ಟಪಡಿಸಿರುತ್ತಾರೆ. ಅವರು ತಮ್ಮ ಜಡ್ಜ್‌ಮೆಂಟಿನಲ್ಲಿ ಬರೆದಿರುವ ವಿಷಯವು ಈ ಮುಂದೆ ಉದಾಹರಿಸಲ್ಪಟ್ಟಿರುವದು.

ಮದ್ರಾಸ್ ಹೈಕೋರ್ಟಿನ ಜಡ್ಜ್‌ಮೆಂಟ್

IN THE HIGH COURT OF MADRAS

Thursday 2nd March 1944

Present :

The Honourable
Sir Alfred Henry Leonel Leach
Chief Justice & Shahabuddin

Letters Patent Appeal No 18/1941

Judgment of the Court was delivered by the Honourable the Chief Justice

'The appellant claims to be the sole heir of a Math at Atmakoor in the Karnool District called the Gnana Surya Simhasana Math It is one of **the five ancient Maths** instituted for the benefit of a sect of worshippers of Shiva known as Lingayats The other Maths are situated in various parts of India When they were founded, is not known but it is accepted that they are all of ancient origin,'

ಜಡ್ಜ್‌ಮೆಂಟಿನ ಅಭಿಪ್ರಾಯ

'ಕರ್ನೂಲ್ ಡಿಸ್ಟ್ರಿಕ್ಟ್ ಆತ್ಮಕೂರಿನಲ್ಲಿರುವ ಶ್ರೀಗಿರಿ ರಾಜಸೊಯ್ ಸಿಂಹಾಸನಮಠಕ್ಕೆ ಅಪೀಲ್‌ದಾರಿಗಳು ತಾವೊಬ್ಬರೇ ಹಕ್ಕುದಾರರೆಂಬುದಾಗಿ ಹೇಳುತ್ತಾರೆ ತಿನನೆಲ್ಲ ಆಂಧ್ರಿಸುವ ವಿರಶೈವ ಸಮಾಜದ ಉಪಾಸಾಕ್ಯೋಪ್ಪರ ಸ್ಥಾಪಿಸಲ್ಪಟ್ಟಿರತಕ್ಕ ಏದು ಪುರಾತನ ಮಠ ಗಳಲ್ಲಿ ಇದೂ ಒಂದಾಗಿದೆ ಇತರ ಮಠಗಳು ಇಂಡಿಯಾ ನೇಶದ ಇತರ ಕಡೆಗಳಲ್ಲಿರುತ್ತವೆ ಈ ಮಠಗಳು ಯಾವಾಗ ಸ್ಥಾಪಿಸಲ್ಪಟ್ಟವೆಂಬುದು ತಿಳಿಯದಾದರೂ, ಇವುಗಳು ಬಹು ಪುರಾತನ ಮಠಗಳೆಂದು ಒಪ್ಪಲ್ಪಟ್ಟಿವೆ"

ಈ ರೀತಿಯಾಗಿ ಮದ್ರಾಸ ಹೈಕೋರ್ಟಿನವರು ಜಡ್ಜ್‌ಮೆಂಟ್ ಬರೆದು ಪಂಚಪೀಠಗಳ ಪ್ರಾಚೀನತ್ವ ವನ್ನು ಸ್ಪಷ್ಟಪಡಿಸಿದ್ದಾರೆ ಹೈಕೋರ್ಟಿನವರ ಈ ವಿಷಯವಾದ ತೀರ್ಮಾನವು ಸಂಚಪೀಠಗಳಿಗೂ, ವೀರಶೈವ ಸಮಾಜಕ್ಕೂ ಮಹಾಭೂಷಣಪ್ರದವಾಗಿರುವುದೆಂಬುದನ್ನು ಅತ್ಯಾನಂದದಿಂದ ಹೇಳಬೇಕಾಗಿದೆ

ಆಸಾಧಾರಣಧರ್ಮಾಭಿಮಾನಿಗಳಾದ ಶ್ರೀಮಾನ್ ಪಿ ಆರ್ ಹಿರೇಮಠ ಹರಕುಣಿ ಹೈಕೋರ್ಟು ವಕೀಲ ಹುಬ್ಬಳ್ಳಿ ಇವರು ಇಲ್ಲಿ ಮುದ್ರಿಸಿರುವ 'ಜಡ್ಜ್‌ಮೆಂಟಿನ ವಿಷಯವನ್ನು ಕಳುಹಿಸಿಕೊಟ್ಟು ಜಗದಾಚಾರ್ಯರ ಕೃಪೆಗೆ ಪಾತ್ರರಾಗಿರುತ್ತಾರೆ.

ವರ್ತಮಾನಸಂಗ್ರಹ

ಪಾಕಿಸ್ತಾನದ ಮೇಲೆ ಭಾರತದ ಆರೋಪಣೆ

ಭಾರತ ಸರ್ಕಾರವು ಕಾಶ್ಮೀರದ ಸಮಸ್ಯೆಯನ್ನು ಸಂಯುಕ್ತ ಜಾತಿಂಗಗಳ ಮಹಾಸಭೆಯ ಮುಂದಿಟ್ಟಿದೆ ಈ ವಿಷಯದಲ್ಲಿ ಸೂಕ್ತಕಾರ್ಯಶ್ರಮವನ್ನು ತೆಗೆದು ಕೊಳ್ಳಬೇಕೆಂದು ಲೇಕ್‌ಸೆಕ್ಸ್‌ಸ್‌ವಲ್ಲರಿಗೆ ಭಾರತದ ಪ್ರತಿನಿಧಿಗೆ ಸೂಚನೆ ಕೊಡಲಾಗಿದೆ. ದೆಹಲಿಯಲ್ಲಿರುವ ಪಾಕಿಸ್ತಾನ್ ಮತ್ತು ಇತರ ಡೊಮಿನಿಯನ್ ಪ್ರತಿನಿಧಿ ಗಳಿಗೂ ಭಾರತದ ಸಂಕಲ್ಪವನ್ನು ತಿಳಿಯಪಡಿಸಲಾಗಿದೆ

ಕಾಶ್ಮೀರದಲ್ಲಿ ನಡೆಯುತ್ತಿರುವ ಘೋರ ಕದನಕ್ಕೆ ಪಾಕಿಸ್ತಾನವು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪ್ರೋತ್ಸಾಹ ಕೀಡುತ್ತಿರುವುದು ಸ್ಪಷ್ಟವಾಗಿದೆ. ಕಾಶ್ಮೀರವು ಭಾರತಕ್ಕೆ ಸೇರಿದ ಕ್ಷೇತ್ರವಾದುದರಿಂದ ಭಾರತದ ವಿಚಾರದಲ್ಲಿ ಪಾಕಿಸ್ತಾನವು ದ್ರೋಹಚಿಂತನೆ ಮಾಡಿ ದಂತಾಗಿದೆ. ದಾಳಿಕಾರರು ಪಾಕಿಸ್ತಾನದ ಮೂಲಕ ಹಾದು ಹೋಗಲು ಅವಕಾಶ ಕೊಡುವುದೆಂದು ಭಾರತ ಸರ್ಕಾರವು ಮಾಡಿದ ಪ್ರಾರ್ಥನೆ ವಿಫಲವಾಗಿದೆ ಪಾಕಿಸ್ತಾನವು ದಾಳಿಕಾರರಿಗೆ ಯುದ್ಧೋಪಕರಣಗಳನ್ನು ಸಹ ಒದಗಿಸುತ್ತಿದೆಯೆಂಬುದಕ್ಕೆ ನಿರ್ದಶನಗಳಿವೆ ಆದಕಾರಣ ಪಾಕಿಸ್ತಾನವು ಅಪರಾಧವನ್ನೆಸಗಿದೆಯೆಂಬದರಲ್ಲಿ ಅನು ಮಾನವೇ ಇರುವುದಿಲ್ಲ

ಪಾಕಿಸ್ತಾನದ ವರ್ತನೆಯನ್ನು ವಿಶ್ವಸಂಸ್ಥೆಯ ಅವ ಗಾಹನೆಗೆ ತರಲು ಭಾರತ ಸರ್ಕಾರವು ಮಾಡಿರುವ ನಿರ್ಧಾರವನ್ನು ಬ್ರಿಟಿಷ್ ಪ್ರಧಾನರಿಗೂ ತಿಳಿಸಲಾಯಿತು

ಭಾರತದ ಸಂಕಲ್ಪವು ಲಂಡನ್ನಿನ ಅಧಿಕಾರವಲಯ ಗಳಲ್ಲಿ ಕುತೂಹಲವನ್ನುಂಟುಮಾಡಿದೆ ಭಾರತ ಮತ್ತು ಪಾಕಿಸ್ತಾನಗಳ ವಿವಾದವು ಶಾಂತಿಯುತವಾಗಿಯೂ, ಸರಸ್ಪರ ಮೈತ್ರಿಯಿಂದಲೂ ಬಗೆಹರಿಯಬೇಕೆಂಬುದೇ ಬ್ರಿಟಿಷ್ ಸರ್ಕಾರದ ಆಶಯವಾಗಿದೆ ಈ ಸಮಸ್ಯೆ ಯನ್ನು ತ್ವರಿತವಾಗಿಯೂ ಶಾಂತಿಯುತವಾಗಿಯೂ, ಬಗೆಹರಿಸಲು ಮಂಡಿಸಲಾಗುವ ರಚನಾತ್ಮಕ ಸಲಹೆಗೆ ಬ್ರಿಟಿಷ್ ಸರಕಾರವು ಬೆಂಬಲ ಕೊಡುವುದು

ಮೇಲ್ಕಂಡ ಘಟನೆಗಳಿಂದ ಪಾಕಿಸ್ತಾನ್ ಮತ್ತು ಭಾರತಗಳ ನಡುರಬಾಂಧವ್ಯವು ದಿನೇ ದಿನೇ ಕೆಡು ತ್ತಿದೆಯೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ ಭಾರತ ಪಾಕಿಸ್ತಾನಗಳಿಗೆ ಈಗಾಗಲೇ ಆಗಿರುವ ಒಪ್ಪಂದಗಳನ್ನು ಕಾರ್ಯರೂಪಕ್ಕೆ ತರುವುದು ಕಾಶ್ಮೀ ರದ ಪ್ರಶ್ನೆಯನ್ನೇ ಅವಲಂಬಿಸಿದೆಯೆಂದು ಹೇಳ ಲಾಗುತ್ತಿದೆ

ಕಾಶ್ಮೀರದಲ್ಲಿ ದಿನೇ ದಿನೇ ಶತ್ರುಕಾರ್ಯಾಚರಣೆಯು ಪ್ರಬಲವಾಗಿರುವುದರಿಂದ ಭಾರತ ಸರ್ಕಾರವು ತೀವ್ರ ಕಾರ್ಯ ಕ್ರಮವನ್ನು ಕೈಗೊಳ್ಳುವುದು ಭಾರತದ ಸೈನಿಕರು ಶತ್ರುಗಳ ಮೇಲೆ ಯಶಸ್ವಿಯಾಗಿ ಕಾರ್ಯಾಚರಣೆ ನಡೆಸಲು ಕ್ಲಿಷ್ಟಾವಸ್ಥೆ ಕಾಶ್ಮೀರದ ಸಮಸ್ಯೆಯನ್ನು ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ ಮುಂದಿಟ್ಟಿದ್ದರೂ ಕಾಶ್ಮೀರದಲ್ಲಿ ಭಾರತದ ಕಾರ್ಯಾಚರಣೆ ನಡೆಯುತ್ತಲೇ ಇರುವ ದೆಂದೂ, ದಾಳಿಕಾರರನ್ನು ಸದೆಬಡಿಯಲು ಭಾರತವು ಪ್ರಬಲಕಾರ್ಯಾಚರಣೆಯನ್ನಾರಂಭಿಸುವುದೆಂದೂ ತಿಳಿದು ಬಂದಿದೆ

ಕಾಶ್ಮೀರದ ಬಗ್ಗೆ ಪಾಕಿಸ್ತಾನದ ಮಂತ್ರಿ ಸರ್ ಜಫರುಲ್ಲಾರವರ ಹೇಳಿಕೆ

—

ಭಾರತ ಮತ್ತು ಪಾಕಿಸ್ತಾನಗಳಿಗೆ ಉದ್ಭವಿಸಿರುವ ಭಿನ್ನತೆಗಳಲ್ಲಿ ಕಾಶ್ಮೀರದ ಪ್ರಶ್ನೆಯು ಒಂದಾಗಿದೆ ಉಭಯ ಡೊಮಿನಿಯನ್‌ಗಳ ಎಲ್ಲಾ ಸಮಸ್ಯೆಗಳನ್ನೂ ನ್ಯಾಯವಾಗಿಯೂ, ನಿಷ್ಪಕ್ಷಪಾತವಾಗಿಯೂ ಒಗೆಸರಿ ಸಲು ವಿಶ್ವಸಂಸ್ಥೆಯು ಮುಂದೆ ಬಂದರೆ ಅದಕ್ಕೆ ಸ್ವಾಗತ ವಿದೆ ಆದರೆ ಉಳಿದೆಲ್ಲಾ ಸಮಸ್ಯೆಗಳನ್ನು ಬಿಟ್ಟು, ಕಾಶ್ಮೀರ ಸಮಸ್ಯೆಯಲ್ಲಿ ಮಾತ್ರ ವಿಶ್ವಸಂಸ್ಥೆಯು ಪ್ರವೇ ಶಿಸಲು ನಾವು ಒಪ್ಪುವುದಿಲ್ಲ ಭಾರತ ಪಾಕಿಸ್ತಾನಗಳ ವ್ಯವಹಾರದಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಪ್ರತ್ಯೇಕಿಸು ವುದು ಸಾಧ್ಯನೇ ಇಲ್ಲ" ಎಂದು ಸರ್ ಜಫರುಲ್ಲಾ ಖಾನರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ಪಾಕಿಸ್ತಾನ ರಾಷ್ಟ್ರ ಸ್ಥಾಪನೆಗೆ ದೃಢಸಂಕಲ್ಪದಿಂದ ಶ್ರಮಿಸಿ, ಭಾರತವನ್ನು ಎರಡು ಭಾಗಗಳಾಗಿ ವಿಭಜಿಸಿ ದುದು ಭಾರತ ಸರ್ಕಾರಕ್ಕೆ ಅಕ್ಕೋಶವನ್ನುಂಟು ಮಾಡಿದೆ ಪಾಕಿಸ್ತಾನದ ಶಕ್ತಿಯು ಕುಂದುವಂತೆ ಮಾಡಿ ಆದು ಭಾರತ ಸರ್ಕಾರಕ್ಕೆ ಶರಣು ಹೋಗಬೇ ಕೆಂಬುದೇ ಭಾರತದ ಉದ್ದೇಶವಾಗಿದೆ ಭಗವಂತನ ಕೃಪೆಯಿಂದ ಆ ದುರ್ದೆಶೆ ಎಂದಿಗೂ ಪ್ರಾಪ್ತವಾಗದಿರಲಿ'

ಮಾನವ ಜನಾಂಗದ ಉದ್ಧಾರವಾಗಬೇಕಾದರೆ ಪರಸ್ಪರ ಪ್ರೇಮ ಆತ್ಮಗೌರವೆಂಬುದನ್ನು ನಾವು ಮತ್ತೆ ಗಂಡಿದ್ದೇವೆ ಭಾರತದೊನೆಗೆ ನೌಹಾರ್ದದಿಂದ ಬಾಳ ಬೇಕೆಂಬುದೇ ನಮ್ಮ ಆಶಯ

ಪಾಕಿಸ್ತಾನದ ರಕ್ಷಣೆಯ ದೃಷ್ಟಿಯಿಂದ ಭಾರತವು ಒಳಿತ್ನನಾಗಿಯೂ, ಸಂಪದ್ಯುಕ್ತವಾಗಿಯೂ ಶುಭೋಭ ವೃದ್ಧಿ ಹೊಂದಲೆಂಬುದೇ ನಮ್ಮ ಮನೋಭಿಲಾಷೆಯಾ ಗಿದೆ ಆದರು ತೆಯೇ ಬಲಯುತನಾದ ಪಾಕಿಸ್ತಾನವು ಭಾರತದ ರಕ್ಷಣೆಗೆ ಅತ್ಯವಶ್ಯಕವೆಂಬುದನ್ನು ಮರೆಯು ವಂತಿಲ್ಲ

ಭಾರತ ವಿಭಜನೆಯಾದಮೇಲೆ ಪಡೆದ ಘೋರ ಹತ್ಯಾಕಾಂಡವನ್ನು ಪ್ರಸ್ತಾಪಿಸುತ್ತಾ ಸರ್ ಜಫರುಲ್ಲಾ ಖಾನರು— ಈ ದುರ್ಘಟನೆಗಳಿಗೆಲ್ಲಾ ಹಿಂದೂಗಳ ಮತ್ತು ಸಿಕ್ಖರ ಘೋರಣೆಯೇ ಕಾರಣವೆಂದು ಭಾರತ ಸರ್ಕಾರವು ಅನಾಜಕತೆಯನ್ನು ತಡೆಗಟ್ಟಿ ಅಪರಾಧಿ ಗಳನ್ನು ಶಿಕ್ಷೆಗೆ ಗುರಿಪಡಿಸಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವೆಂದು ಹೇಳಿ ಭಾರತ ಸರ್ಕಾರದ ಕರ್ತವ್ಯ ಲೋಪವನ್ನು ಟೀಕಿಸಿದರು

ಸಂಸ್ಥಾನಗಳ ಬಗ್ಗೆ ಬಿಕ್ಕಟ್ಟು

ಸಂಸ್ಥಾನಗಳ ವಿಚಾರದಲ್ಲಿ ಭಾರತ ಸರ್ಕಾರವು ತನು ಸರಿಸಿದ ನೀತಿಯು ನ್ಯಾಯಬದ್ಧವಾಗಿಲ್ಲ ಇನ್ನಕ್ಕೆ ನಿದ ರ್ಶನ ಜುನಾಘಡದ ಸಮಸ್ಯೆ! ಬೊಂಬಾಯಿಯಲ್ಲಿ ಸ್ವಾಪಿತವಾದ ಜುನಘಡದ ತಾತ್ಕಾಲಿಕ ಸರ್ಕಾರಕ್ಕೆ ಭಾರತ ಸರಕಾರವು ಸಹಾಯ ಮತ್ತು ಸ್ಫೋತ್ಸಾಹ ನೀಡಿದೆ ದಿವಾನರು ಆಜ್ಞಾನವಿಶ್ವರೇಂಜ್ ನೆಪದಿಂದ ಭಾರತ ಸೇನೆಯು ಜುನಾಘಡವನ್ನು ಆಕ್ರಮಿಸಿರುಂ ದಿದೆ ಭರತಪುರ ಅಲ್ವಾರ್, ಧೌಲಿಯರ್, ಕಪೂರ್ತಲ, ಫರೀದ್‌ಕೋಟೆ, ನಾಭಾ, ಜಿಂದ್, ಪಾಟಿಯಾಲ ಮತ್ತು ಕಾಶ್ಮೀರ ಈ ದೇಶಗಳಲ್ಲಿ ನುಸ್ಸಿನ ರಕ್ಷಣೆ ಹೊರದೂಡಲು ಪ್ರಯತ್ನಗಳಾಗುತ್ತಿವೆ

ಹೊರ ಧಣವನ್ನು ಕೊಡದಿರುವುದು ನ್ಯಾಯವಲ್ಲ !

"ಭಾರತಕ್ಕೂ, ಪಾಕಿಸ್ತಾನಕ್ಕೂ ಆಗಿರುವ ಆರ್ಥಿಕ ಒಪ್ಪಂದದ ಪ್ರಕಾರ ಪಾಕಿಸ್ತಾನಕ್ಕೆ ತೆರಬೇಕಾದ ೫೮ ಕೋಟಿ ರೂ ಗಳನ್ನು ಕೊಡಲು ಭಾರತ ಸರ್ಕಾರವು ನಿರಾಕರಿಸಿದೆ ಉಭಯ ಡೊಮಿನಿಯನ್‌ಗಳಿಗೂ ಎಲ್ಲಾ ವಿಚಾರಗಳಲ್ಲಿಯೂ ಮಧುರ ಬಾಂಧವ್ಯವೇರ್ಪಟ್ಟಿರೆ ಮಾತ್ರ ಆರ್ಥಿಕ ಒಪ್ಪಂದವನ್ನು ಕಾರ್ಯಗತಮಾಡ ಲಾಗುವುದೆಂದು ಹೇಳಲಾಗುತ್ತಿದೆ ಆದರೆ ಆರ್ಥಿಕ ಒಪ್ಪಂದಕ್ಕೂ ಇತರ ಸಮಸ್ಯೆಗಳೂ ಯಾವ ಸಂಬಂ ಧವೂ ಇರುವುದಿಲ್ಲ ಆ ಹಣವನ್ನು ಭಾರತವು ಔದಾರ್ಯ ದಿಂದ ದಾನವಾಗಿ ಕೊಡುವುದಿಲ್ಲ ಅದು ಪಾಕಿಸ್ತಾನಕ್ಕೆ ಸೇರಿದ ಹಣ ಭೌಗೋಳಿಕ ಕಾರಣಗಳಿಂದ ಆ ಹಣವು ಭಾರತದ ವಶವಲ್ಲಿದೆ" ! ಎಂಬುದಾಗಿ ಸರ್ ಜಫರುಲ್ಲಾ ಖಾನ್‌ರವರು ತಿಳಿಸಿದ್ದಾರೆ

ಬೊಂಬಾಯಿಯಲ್ಲಿ ವಿದ್ಯಾರ್ಥಿಗಳ ಮೇಲೆ ಗುಂಡುಹಾರಿಸಲಾಯಿತು

—

ಬೊಂಬಾಯಿಯಲ್ಲಿ ಅಖಿಲಭಾರತವಿದ್ಯಾರ್ಥಿಸಮ್ಮೇ ಳನದ ಸದಸ್ಯರು ಸ್ಥಳೀಯ ಕಮ್ಯೂನಿಸ್ಟರ ಪ್ರೇರಣೆ ಮತ್ತು ಪ್ರೋತ್ಸಾಹಗಳಿಂದ ಪ್ರತಿಬಂಧಾಜ್ಞೆಯನ್ನು ಉಲ್ಲಂಘಿಸಿ ಸಭೆ ನಡೆಸಲು ಪ್ರಯತ್ನಪಟ್ಟರು ೩೧ ನೇ ತಾರೀ ದಿನ ಸಂಜೆ ೪ ಘಂಟೆಯಲ್ಲಿ ಸಭಾಂಗಣವನ್ನು ಒಳಾತ್ಕಾರದಿಂದ ಪ್ರವೇಶಿಸಲು ಪ್ರಯತ್ನಪಟ್ಟ ವಿದ್ಯಾರ್ಥಿ ಸಮೂಹವನ್ನು ಚದುರಿಸಲು ಪೋಲೀಸರು ಶಾಂತಿ ಯುತವಾಗಿ ಎಷ್ಟು ಪ್ರಯತ್ನಪಟ್ಟರೂ ಫಲಕಾರಿಯಾ ಗದೆ ಅವರು ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸ ಬೇಕಾಯಿತು ಎಂಬುದಾಗಿ ಬೊಂಬಾಯಿ ಸರ್ಕಾರದ ಪ್ರಕಟಣೆಯೊಂದು ತಿಳಿಸುತ್ತದೆ ವಿದ್ಯಾರ್ಥಿಗಳು, ಕಮ್ಯೂನಿಸ್ಟರ ಪ್ರಭಾವಕ್ಕೆ ಸಿಕ್ಕಿ ಹಿಂಸಾಕೃತ್ಯಗಳಿಗೆ ಕೈಹಾಕಲು ಸಹ ಸಿದ್ಧರಿದ್ದುದರಿಂದ ಸರ್ಕಾರವು ಕ್ರಮ ತೆಗೆದುಕೊಳ್ಳಬೇಕಾಯಿತೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಗಿ ಭಾಗಿ ವಿದ್ಯಾರ್ಥಿಸಮ್ಮೇಳನದ ೧೧ ನೆಯ ಅಧಿ ವೇಶನದ ಮೇಲೆ ದೊಂಬಾಯಿ ಸರಕಾರದವರು ವಿಧಿ ನಿಷೃ ಪ್ರತಿಬಂಧಾಜ್ಞೆಯನ್ನು ಮುದು ಸಭೆ ನಡೆ ಸಲು ಯತ್ನಿಸಿದ ೩೦೦ ವಿದ್ಯಾರ್ಥಿಗಳಮೇಲೆ ಪೋಲೀ ಸರು ಗುಂಡುಹಾರಿಸಿದರು ೬ ಮಂದಿ ವಿದ್ಯಾರ್ಥಿಗಳಿಗೂ ಒಬ್ಬ ವಿದ್ಯಾರ್ಥಿನಿಗೂ ಗುಂಡಿನೇಟು ತಗುಲಿತು. ೨೦ ಮಂದಿಗೆ ತೀವ್ರ ಗಾಯುಗಳಾಗಿವೆ ಟಯರ್ ಗ್ಯಾಸ್ ಪ್ರಯೋಗಮಾಡಿದುದರ ಪರಿಣಾಮವಾಗಿ ೩೦೦ ವಿದ್ಯಾ ರ್ಥಿಗಳಿಗೆ ಸಾಧಾರಣ ಗಾಯುಗಳಾಗಿವೆ.

ಆ ದಿನ ಸಂಜೆ ೪ ಗಂಟೆಗೆ ಮುಂಚೆಯೇ ಶಸ್ತ್ರಸಜ್ಜಿತ ಪೋಲೀಸರು ಕಾಮಗರ್ ಮೈದಾನವೆದಲ್ಲಿ ನಿರ್ಮಿಸಲಾ ಗಿದ್ದ ಭವ್ಯವಾದ ಚಪ್ಪರವನ್ನು ಸ್ವಾಧೀನಕ್ಕೆ ತೆಗು ಕೊಂಡರು. ಸಭಾಂಗಣಕ್ಕೆ ಸ್ವಲ್ಪ ದೂರದಲ್ಲಿ ಗುಂಪು

ಸೇರುತ್ತಿದ್ದ ೩೦೦೦ ವಿದ್ಯಾರ್ಥಿಗಳನ್ನು ಪೋಲೀಸು ಕಮಿಷನರು ಚದುರಿಸೇಕೆಂದು ಪ್ರಾರ್ಥಿಸಿದರೂ ಪ್ರಯೋಜನವಾಗದೆ ವಿದ್ಯಾರ್ಥಿಗಳು ಪೆಂಡಾಲಿನ ಕಡೆಗೆ ನುಗ್ಗಿದರು ಸ್ಪೇಶಲ್‌ರು ಲಾರಿಯಿಂದ ಹೊಡೆದರು ವಿದ್ಯಾರ್ಥಿಗಳು ಜಗ್ಗಲಿಲ್ಲ ಟಿಯರ್‌ಗ್ಯಾಸ್ ಪ್ರಯೋಗ ಮಾಡಿದರೂ ವಿದ್ಯಾರ್ಥಿಗಳು ವ್ಯವಸ್ಥಿತವಾಗಿ ಯಥಾಸ್ಥಿತಿ ಯಾಗಿದ್ದರು ವಿದ್ಯಾರ್ಥಿಗಳು ಕುರ್ಚಿ ಮೇಜುಗಳನ್ನು ಪೋಲೀಸರ ಕಡೆಗೆ ಎಸೆದರು ಆತ್ಮರಕ್ಷಣೆಗಾಗಿ ಪೋಲೀಸರು ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದರು ಪೆಂಡಾಲಿಗೆ ೪ ಲಾತ್ಕಾರಿಂದ ನುಸುಳಿಕೊಂಡು ಹೋಗಿದ್ದ ವಿದ್ಯಾರ್ಥಿ ಸಮೂಹವು ಸರ್ಕಾರದ ವರ್ತನೆಯನ್ನು ಖಂಡಿಸುವ ನಿರ್ಣಯಮಾಡಿತು ಪೋಲೀಸರು ಲಾಠಿ ಗುತ್ತು ಟಿಯರ್‌ಗ್ಯಾಸ್ ಪ್ರಯೋಗಮಾಡಿದುದರ ಫಲವಾಗಿಯೂ ಗುಂಪು ಹಾರಿಸಿದುದರಿಂದಲೂ ಸಾಯಗೊಂಡ ೫೦೦ ಮಂದಿಯನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಗುಂಡಿನೇಟಿನಿಂದ ಸಾಯರೆ ೪ ನಾಲ್ಕರಲ್ಲಿ ಒಬ್ಬನನ್ನು ಆಸ್ಪತ್ರೆಯಿಂದ ಚಿಕಿತ್ಸೆಯಾದ ನಂತರ, ಹೊರಗೆ ಕಳುಹಲಾಯಿತು ಪರಿಸ್ಥಿತಿಯು ಈಗ ಶಾಂತವಾಗಿದ

೪೦೦೦ ಜನ ಶಸ್ತ್ರಸಜ್ಜಿತ ದಾಳಿಕಾರರ ಹಾವಳಿ

ಕಾಶ್ಮೀರದಲ್ಲಿ ಚಿಕ್ಕೋಗ್ರಿಂದ ನುಸುಳಲ್ ವರೆಗೆ ಸುಮಾರು ೧೬ ಸ್ಥಳಿಗಳು ಇದರಿಂದ ರಣಭೀತ್ರದಲ್ಲಿ ೩೦೦೦ ದಾಳಿಕಾರರು ಸೆಪ್ಟಿಂ ೧೧ ಗಳು ಮತ್ತು ಮಾರ್ಟರ್ ಸಮೇತ ದಾಳಿ ಎಲ್ಲಾಂಬಿಸಿರು ಗಡಿಯ ರಕ್ಷಣ ಸ್ಕೌಟ್ ಪಡೆಗಳು ದಾಳಿಕಾರರ ಮೇಲೆ ಕಾಂಪ್ರಾ ಚರ್ ಪಡೆಗಳ ಸಾವನೋವುಗಳನ್ನುಂಟುಮಾಡಿದವೆಯಾದರೂ ೧೦ ಗ್ರಾಮಗಳು ಬಸ್ಮಾತಾಗಿವೆ ಭಾರತ ಸೇನೆ ಸ್ಥಳಕ್ಕೆ ಒಯ್ದ ವೇಳೆಗೆ ದಾಳಿಕಾರರು ಓಡಿಹೋದರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಪೂರ್ವಚಿತ್ರಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧೫ ಕ್ಕೆ ೦—೩—೦

ಶ್ರೀರೇಣುಜಗದ್ಗುರುಗಳ ಲಿಂಗಾವತಾರದ ಫೋಟೋ (ನಾನಾವಿಧವರ್ಣದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ ೦—೪—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೫ ಕ್ಕೆ ೦—೪—೦

" " " ಚಿಕ್ಕ ಸೈಜು ಬೆಲೆ ೦—೧—೦

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೧—೦

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೦

ಶ್ರೀರೇಣುಕಾಚಾರ್ಯರು ಶ್ರೀ ಚಂಡಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೦

ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೦

ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯರುಮಹಾಸ್ವಾಮಿಗಳವರ ಫೋಟೋ ೦—೧—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಾಶೀಪಟ್ಟಾಭಿಷೇಮಾಡುವ ಫೋಟೋ ೦—೧—೦

* ಇಮಡಿಜಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೦

ಶ್ರೀಮಚ್ಛಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೦

ಶ್ರೀಮದ್ರಂಭಾಪುರೀ ಪೀಠಾಧಿಶ್ವರ ಜಗದ್ಗುರು ಶಿವಾಸಂಯಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೦

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಶಂಕುಸ್ಥಾಪನೆಮಾಡುವ ಫೋಟೋ ೦—೧—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೦—೪—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೦—೪—೦

* ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಸ್ವಾಮಿಗಳ ಅತ್ಯಂತ ಸುಂದರವಾದ ಫೋಟೋ ೦—೧—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೦—೧—೦

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೦

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ನಹಾರಾಜರವರು ವಿಜಾಪುರಿಸುತ್ತಿರುವ ಫೋಟೋ ೦—೧—೦

ಸಿಂಗಳೂರು ಜಗನ್ನಿವಾಸದಲ್ಲಿ ನೆನೆವರಿಂದ ರಂಭಾಪುರೀ ಜಗದ್ಗುರುಗಳ ಅದ್ದೂರಿಯ ಮೆರವಣಿಗೆಯ ಫೋಟೋ ೦—೧—೦

ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾಶಾಸನಗಳು ೦—೪—೦

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ) ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ) ೨ ಆಣೆ
ಶ್ರೀಪಂಚಾಚಾರ್ಯ ಮಹಸ್ತೋತ್ರಾವಳಿ (೧೮ನೆಯ ಆವೃತ್ತಿ) ೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ೨ ಆಣೆ
ಚತುರಾದಿಸಿದ್ಧಾಂತಪಣ (೨ನೆಯ ಆವೃತ್ತಿ) ೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ) ೨ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ೨ ಆಣೆ
ಶಿವಶಕ್ತಿವಿಲಾಸ ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ) ೩ ಆಣೆ
ಪಂಚಾಚಾರ್ಯಪ್ರಕಾಶ ೩ ಆಣೆ
ಪಂಚಾಚಾರ ಪ್ರಕಾಶಿಕಾ ೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ೪ ಆಣೆ
ಲಿಂಗಧಾರಣವಿಧಿ ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ೪ ಆಣೆ
ಶೈವೋಪಸಿಷತ್ಸಂಗ್ರಹ (ಸಂಸ್ಕೃತ) ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ೪ ಆಣೆ
ವೈದಿಕಾಮ್ನಾಯರಹಸ್ಯ ೪ ಆಣೆ
ಸನ್ಯಾಸಾಶ್ರಮವಿಮರ್ಶ ಪತ್ರಸ್ಥಿರೀಕರಣ (೩ನೆಯ ಆವೃತ್ತಿ) ೬ ಆಣೆ
ವೀರಶೈವಾಂಶ್ಯೋಪಾಧ್ಯಾಯವಿಧಿ ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ೮ ಆಣೆ
ಶಿವಾಪ್ಪೈತಪರಿಭಾಷಾ (ಸಂಸ್ಕೃತ) ೮ ಆಣೆ

ವೀರಶೈವಮಹಾತ್ಮರು ೮ ಆಣೆ
ಬಸವಧ್ಯಾಂತದಿನಾಕರ (೩ನೆಯ ಆವೃತ್ತಿ) ೮ ಆಣೆ
ಆಗಮಪರಿಜ್ಞಾನ ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ
ಸರ್ವೋದ್ಧಾರರತ್ನಾವಳಿ ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಚನಶಿವಾಚಾರ್ಯಕೃತ) ೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ೧೩ ಆಣೆ
ಶಿಖಾಸೂತ್ರಸಿದ್ಧಾಂತಪದರ್ಪಣ ೧೩ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ತ ರಯಂಕ್ತವಾದುದು ೩ನೆಯ ಆವೃತ್ತಿ) ೧। ರೂ
ಶ್ರೀಕರಭಾಷ್ಯಂ (ಬರಿಸ್ಯಾತ್ರಿಗಳ) ೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಪುಟದ ಫೋಟೋಗಳಿರುವುದು) ೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಛಂದಸ್ಸಿನಲ್ಲಿದೆ) ೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ೨ ರೂ
ಶಿವಾಗಮಸಂಗ್ರಹ (ಪಂಚಾಚಾರ್ಯಾಗಮಾಂಕಾರಾಗಮಾಮಕ-ಟೀಕಾಗಮ ಸಂಸ್ಕೃತಾಗಮಗಳಿಂದ ಸಂಗ್ರಹಿಸಲ್ಪಟ್ಟದು) ೩ ರೂ
ಶಿವಾದ್ವೈತಮಂಜರಿ (ಕನ್ನಡನ್ಯಾಖ್ಯಾನ ೧೩೪೪ ಪುಟ) ೮ ರೂ

A brief life-sketch of Pandit Sri Kashinatha Shastriyi (*English*) 4 As
The Philosophical Aspect of Virasaivism (*English*) 8 As
Speeches by Pandit Shri Kashinatha Shastriyi (*English*) 12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ೩ ಕ
ವೀರಶೈವರತ್ನ (ಮರಾಠಿ) ೧ ಕ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯಸಹಿತ-ಸಂಸ್ಕೃತ) ೧ ಕ
ನಂದಿಕೇಶ್ವರಕಾರಿಕಾ (ಸಂಸ್ಕೃತ) ೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗನ್ಮಂಗಳ ಪಂಚಾಚಾರ್ಯಾಯಾಗ್ರಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನಸಂಕಜಾತಜನಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರತ್ರೀಪಂಚಲಿಂಗೋದ್ಭವರ್ ।
ಪಂಚಾಚಾರಧಿಯಾಮಕರ್ ಸರಲಸತ್ಪಂಚಾಕ್ಷರೀಮೋಧರ್ ಪಂಚಾಚಾರ್ಯಜಗದ್ಗುರೂತ್ತಮವರಪ್ರಾಲಿಪ್ಪುವೀಯೋಕಮಂ ॥

ಸ್ವದವರಿಗೆ ೨ ರೂ ೪ ಆಣೆ ಪರಸ್ವದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಜನವರಿ ೧೯೪೮ [ಸಂಚಿಕೆ ೩೮

ಕಣ್ಮಿಡಿಗರೇ ಇತ್ತ ಗಮನಕೊಡಿರಿ

ಕಾಶೀ ಹಿಂದೂ ವಿಶ್ವವಿದ್ಯಾಲಯವು ಪ್ರಾಂತೀಯ ವಿಶ್ವವಿದ್ಯಾಲಯವುಯೇ? ರಾಷ್ಟ್ರೀಯ ವಿಶ್ವವಿದ್ಯಾಲಯವೋ?

ಹಿಂದೂಧರ್ಮಸಂಸ್ಥಾಪಕಗಳನ್ನು ಸಂರಕ್ಷಿಸಿಕೊಳ್ಳಲೂ, ಸರ್ವತ್ರ ಅದರ ತತ್ತ್ವಪ್ರಭೆಯನ್ನು ಪ್ರಸಾರಿಸಲೂ, ಕಲೆ, ವಿಜ್ಞಾನ, ಯಂತ್ರ ಕೌಶಲಾದಿಗಳಲ್ಲಿ ಸರ್ವಾಪೇಕ್ಷಿತ ಕೂಲ ರಾಷ್ಟ್ರೀಯ ಶಿಕ್ಷಣವು ಭಾರತೀಯರಾದವರೆಲ್ಲರಿಗೂ ಮೊರೆಯಲೆಂಬ ಮಹೋದ್ದೇಶದಿಂದ ದಿವಂಗತ ಪಂಡಿತ ಮದನಮೋಹನ ಮಾಳವೀಯರವರು ಧೀಕ್ಷ ತುಂಬೆಲ್ಲ ಸಂಚರಿಸಿ ಧನಸಂಗ್ರಹಣಾದಿ ಇತ್ತೀ ಹಿಂದೂ ವಿಶ್ವವಿದ್ಯಾಲಯವನ್ನು ಸಂಸ್ಥಾಪಿಸಿ ತಾವಿರುವವರೆಗೂ ಆ ಮಹೋದ್ದೇಶಕ್ಕೆ ಕೊಂಚವೂ ಲೋಪಬರದಂತೆ ಸರ್ವತೋಮುಖವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿ ಕಾರ್ಯವನ್ನು ಸಾಗಿಸಿಕೊಂಡು ಹೋದರು ತಮ್ಮ ರಾಷ್ಟ್ರೀಯ ಸಂಸ್ಕೃತಿಸಂಪತ್ತನ್ನು ಸಂರಕ್ಷಿಸುವ ಈ ವಿಶ್ವವಿದ್ಯಾಲಯಕ್ಕಾಗಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ದ್ರಾವಿಡ, ಮೆಲಯಾಳ, ಒರಿಸ್ಸ, ಬಂಗಾಲ, ಗುಜರಾಥ, ಹಿಂದೀಸ್ಥಾದಿ ಪ್ರಾಂತಗಳ ಮಹೋದಾರಿ ಪುರುಷರಿಂದಲೂ, ಕಾಶ್ಮೀರ, ನೇಪಾಳ, ಗ್ವಾಲಿಯರ್, ಜಯಪುರ, ಬಹೋದಾ, ಹೈದರಾಬಾದು, ಮೈಸೂರು ಇತ್ಯಾದಿ ಸಂಸ್ಥಾನಾಧೀಶರುಗಳಿಂದಲೂ ಕೋಟ್ಯಂತರ ಹಣ ಸಂದಾಯವಾಗಿದೆ, ಸಂದಾಯವಾಗುತ್ತಿದೆ ಮಾಳವೀಯರವರು ಶಕ್ತಿಸಂಪನ್ನರಾಗಿರುವವರೆಗೆ ತಾವೇ ವೈಸ್-ಛಾನ್ಸಲರಾಗಿದ್ದುಕೊಂಡು ಈಚೆಗೆ ತಮ್ಮ ವೃದ್ಧಾಪ್ಯದ ದೆಸೆಯಿಂದ ಕುಲಪತಿಸ್ಥಾನಕ್ಕೆ ವಲ್ಲರಾದ ಸರ್ ಎಸ್ ರಾಧಾಕೃಷ್ಣನ್‌ರವರನ್ನು ನಿಯಮಿಸಿ ತಮ್ಮ ನೇತೃತ್ವದಲ್ಲಿ ಇಳಿಯುತ್ತಿದ್ದರು, ತಮ್ಮ ಶ್ರಮ ಸಾರ್ಥಕವಾಯಿತೆಂದೂ ಸಂತೋಷಪಟ್ಟರು

ಮಾನ್ಯಮಾಳವೀಯರಿಬ್ಬರವರೆಗೆ 'ಚ' ಕಾರವನ್ನು ಚ್ಯುತಿಸಲಿಕ್ಕೆ ಧೈರ್ಯವಿಲ್ಲದಿದ್ದ ಈ ಸಂಯುಕ್ತಪ್ರಾಂತದ ಜನರಿಗೆ ಅವರು ಪರೋಕ್ಷಾಮನಸ್ಸಿನ್ನೆಯುಕ್ತರಲೇ ಎಂದೂ ಇಲ್ಲವ ದುರಭಿಮಾನವು ಬೆಳೆಯುತ್ತ ಒಂದಿದೆ ಇದು ಎಪ್ಪರಮಟ್ಟಿಗೆ ಅತೀವಕಕ್ಷಿಟ್ಟುಕೊಂಡಿದೆಯೆಂದರೆ 'ಈ ವಿಶ್ವವಿದ್ಯಾಲಯವು ಸಂಯುಕ್ತಪ್ರಾಂತದಲ್ಲರುವುದರಿಂದ ವಿಶ್ವವಿದ್ಯಾಲಯದಾಡಳಿತವೆಲ್ಲವೂ ಕೇವಲ ಸಂಯುಕ್ತ ಪ್ರಾಂತೀಯರಿಗೇ ಇರತಕ್ಕಾದು, ಪರಪ್ರಾಂತೀಯರಿಗೆ ಇವರಲ್ಲಾವ ಹಕ್ಕೂ ಇಲ್ಲ' ಎಂದು ಬಲವಾಗಿ ವಿರೋಧಿಸುತ್ತಿದ್ದಾರೆ ಸಂಯುಕ್ತಪ್ರಾಂತೀಯ ಸರ್ಕಾರವು ಸಹ ಈ ಬಗೆಯ ಪ್ರಚಾರಕ್ಕೆ ಬೇಕಾದಷ್ಟು ಸಹಾಯವನ್ನು ಮಾಡತ್ತದೆ ಈ ಸ್ವಾರ್ಥಗಳ ಸ್ವಾರ್ಥಕ್ಕೆ ಹೇಸಿಯೇ ಸರ್ ಎಸ್. ರಾಧಾಕೃಷ್ಣನ್‌ರವರು ತಮ್ಮ ಸ್ಥಾನಕ್ಕೆ ತ್ಯಾಗಪತ್ರವನ್ನಿತ್ತುದು ಯಾವ ಮದನಮೋಹನಮಾಳವೀಯರವರು ಜೀವನಪರ್ಯಂತ ರಾಷ್ಟ್ರೀಯ ವಿಶ್ವವಿದ್ಯಾಲಯಕ್ಕಾಗಿ ತಮ್ಮ ತಮ ಮನಧನಗಳನ್ನು ತೆತ್ತರೋ ಅಂತಹವರ ಮೆಳ್ಳೂ ಪ್ರೊವೈಸ್ ಛಾನ್ಸಲರೂ ಆಗಿರುವ ಗೋವಿಂದ ಮಾಳವೀಯರು ಸಮ ಪ್ರಾಂತೀಯ ವಿಶ್ವವಿದ್ಯಾಲಯವನ್ನು ಮಾಡಲು ಉತ್ಸುಕರಾಗಿರೆ.ವುದು ತುಂಬಾ ನಾಚಿಕೆಗೇಡು ಅಸ್ತು!

ಕಾಶಿಯು ಹಿಂದೂ ವಿಶ್ವವಿದ್ಯಾಲಯವು ರಾಷ್ಟ್ರೀಯ ವಿಶ್ವವಿದ್ಯಾಲಯ ಇದರಲ್ಲಿ ಯಾವ ವಿಕಪ್ರಾಂತದ ಸಂಸ್ಕೃತಿತತ್ವವಿರಕೂಡದು, ರಾಷ್ಟ್ರೀಯ ವಿಶ್ವವಿದ್ಯಾಲಯಕ್ಕೆ ದಕ್ಷರಾದ ಸರ್ ಸರ್ವಪಲ್ಲಿ ರಾಧಾಕೃಷ್ಣನ್ ರವರೇ ಕುಲಪತಿಗಳಾದ್ದರಿಂದ ಅವರು ತಾವು ಕೊಟ್ಟಿರುವ ತ್ಯಾಗಪತ್ರವನ್ನು ಹಿಂತೆಗೆದುಕೊಳ್ಳಬೇಕೆಂಬ ಸದ್ಭೀಯಕ್ಕಾಗಿ ವಿಶ್ವವಿದ್ಯಾಲಯವನ್ನೆ ೫ ಜನ ವಿದ್ಯಾರ್ಥಿನಿಯರ ಮತ್ತು ಒಬ್ಬರು ಕನ್ನಡಿಗ ವಿದ್ಯಾರ್ಥಿಗಳೂ ನಿರಶನ ಸತ್ಯಾಗ್ರಹವನ್ನಾರಂಭಿಸಿದರು ಪಂಡಿತ ನೆಹರೂ ಮೊದಲಾದ ನಾಯಕರ ಆಜ್ಞಾನೆಯಂತೆ ಪ್ರಕಾರ ೪ ೧೦ ದಿನಗಳನಂತರ ಸತ್ಯಾಗ್ರಹಿಗಳು ತಮ್ಮ ಉಪವಾಸವನ್ನು ನಿಲ್ಲಿಸಿದರು. ಈಗ ಡಾಕ್ಟರ್ ಅಮರನಾಥಝಾವರವನ್ನು (ಇನೂರ ಯುಕ್ತಪ್ರಾಂತವರೇ) ವೈಸ್ ಛಾನ್ಸಲರ್ ಆಗಲು ಪ್ರೊ ವೈಸ್ ಛಾನ್ಸಲರ್ ಗೋವಿಂದಮಾಳವೀಯರವರನ್ನು ಕೇಳಿ ಒಪ್ಪಿಸಿರುವರಲ್ಲದೆ ಪ್ರಾಂತೀಯ ಸರ್ಕಾರವವರಿಂದಲೂ ಸಂಪೂರ್ಣ ಪ್ರೋತ್ಸಾಹವನ್ನೂ ಪೊರಕಿಸಿಕೊಂಡಿರುವರು ಇದೇ ಜನವರಿಯಲ್ಲಿ ವಿಶ್ವವಿದ್ಯಾಲಯದಕೋರ್ಟ್ ಮಿಟಿಂಗಿಗೆ ಅವರಲ್ಲಿ ಅಮರನಾಥಝಾರವರ ನೇಮಕವಾದ ನಂತರ ಕೇಳುವಂತೆಯೇ ಇಲ್ಲ ದಕ್ಷಿಣದ ವಿದ್ಯಾರ್ಥಿಗಳು ಈ ಕಡೆ ಹೆಜ್ಜೆಯಿಡುವಂತಿಲ್ಲ ಮತ್ತು ಈಗಿರುವ ಅಧ್ಯಾಪಕವರ್ಗದವರೂ ಬಿಟ್ಟುಹೋಗದೇಳು ಯಾವ ವಿಧಿ ನಿಯಮು, ನೇಮುಳ ನಾಗುವುದಾದರೂ ಇವರ ಕೈಯಲ್ಲೇ ಅಡ್ಡಕಂಡ ಇತಿಹಸ ಸಂಬುಚಿತ ಮೇಸ್ಥಾರ್ಥಕ್ಕೆ ಅವಕಾಶನಾಗದಂತೆ ತತ್ಪಾಕ್ಷಣ ಇವನ್ನೋ ವಿಷಯ ಮಳವೀಯರಿಲ್ಲರೂ ವೈಯ ಕ್ತಿಕವಾಗಿಯೂ ಸಂಘಸಂಸ್ಥಗಳ ಮೂಲಕವೂ ಜವಹರ ಲಾಲ್‌ನೆಹರೂ, ಸರದಾರ ವಲ್ಲಭಭಾಯಿ ಪಟೇಲ ಮತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರವರಿಗೆ ಈ ಬಗೆಯ ತಂತಿಯನ್ನು ಕಳಿಸಿಕೊಡಿ " ಸದ್ಯ: ಕಾಶೀ ಹಿಂದೂ ವಿಶ್ವವಿದ್ಯಾಲಯದ ಆಡಳಿತ ಚಿನ್ನಾಗಿಲ್ಲ ಆದ್ದರಿಂದ ಕೇಂದ್ರಸರಕಾರವು ತೀಳ್ಪುವಾಗಿ ಅದನ್ನು ತನ್ನ ಆಧೀನಕ್ಕೆ ತೆಗೆದುಕೊಂಡು ಕಾಶೀ ಹಿಂದೂ ವಿಶ್ವವಿದ್ಯಾಲಯವನ್ನು ರಾಷ್ಟ್ರೀಯ ವಿಶ್ವವಿದ್ಯಾಲಯವನ್ನು ರಾಷ್ಟ್ರೀಯ ವಿಶ್ವವಿದ್ಯಾಲಯವೆಂದು ಘೋಷಿಸಬೇಕೆಂದು"

ಸತ್ಯಾಗ್ರಹ ಸಂಘರ್ಷ ಸಮಿತಿ,
ಹಿಂದೂ ವಿಶ್ವವಿದ್ಯಾಲಯ, ಕಾಶಿ

'ರೆಫೆರೆಂಡಂ' ಸಲಹೆಗೆ ವಿಶ್ವಭದ್ರತಾ ಸಮಿತಿ ಒಪ್ಪಬಹುದು

ವಿಶ್ವಭದ್ರತಾ ಸಮಿತಿಯು ಪುನಃ ಸಮಾವೇಶವಾದಾಗ ಕಾಶ್ಮೀರದ ಬಗ್ಗೆ ವಿಭಿನ್ನ ಚರ್ಚೆ ನಡೆಯುವ ಸಂಭವ ವಿದೆಯೆಂದು ನಂಬಲಅರ್ಹವಾದ ಕ್ಷೇತ್ರಗಳಲ್ಲಿ ಹೇಳಲಾಗು ತ್ತಿದೆ ಕಾಶ್ಮೀರದ ಸಮಸ್ಯೆಯನ್ನು ಶಾಂತಿಕೀತಿಯಲ್ಲಿ ಬಗೆಹರಿಸಲು ಪಾಕಿಸ್ತಾನವು ಬಹಳವಾಗಿ ಪ್ರಯತ್ನ ಪಟ್ಟರೂ ಅದೆಲ್ಲವೂ ವಿಫಲವಾಯಿತೆಂದು ಪಾಕಿಸ್ತಾನವು ಭದ್ರತಾ ಸಮಿತಿಗೆ ಸೂಚಿಸುವುದೆಂದೂ, ಕಾಶ್ಮೀರದಲ್ಲಿ ನಿಷ್ಪಕ್ಷ ಪಾತವಾದ ಜನಮತ ಗಣನೆ ನಡೆಯಬೇಕೆಂದು ಪಾಕಿಸ್ತಾನವು ಒತ್ತಾಯ ಮಾಡುವುದೆಂದೂ ಅಭಿಪ್ರಾಯ ಪಡಲಾಗಿದೆ

ಭದ್ರತಾ ಸಮಿತಿಯ ಒಮುಮಂದಿ ಸದಸ್ಯರು ಈ ಸಲಹೆಗೆ ಬೆಂಬಲ ಕೊಡಬಹುದೆಂದು ರಾಯಿಟರ್ ವರದಿಗಾರರು ತಿಳಿಸಿದ್ದಾರೆ

ಉಭಯ ಪಕ್ಷಗಳೂ ವಿಲಿಟೆರಿ ಕಾಶ್ಮೀರಣೆಯನ್ನು ನಿಲ್ಲಿಸಬೇಕೆಂದು ಭದ್ರತಾ ಸಮಿತಿಯು ಸೂಚಿಸಬಹುದು ಕಾಂತಿಯುತವಾದ ಒಪ್ಪಂದಕ್ಕೆ ಧಕ್ಕೆ ತರುವಂತಹ ಕಾರ್ಯಗಳಲ್ಲಿ ಉದ್ಯುಕ್ತರಾಗಿರಕೂಡದೆಂದು ಭದ್ರತಾ ಸಮಿತಿಯ ಅಧ್ಯಕ್ಷರು ಉಭಯ ಪಕ್ಷಗಳಿಗೂ ವೈಯಕ್ತಿಕ ವಾಗಿ ತಿಂತಿ ಳಿಸಿದ್ದಾರೆ.

ಕಾಶ್ಮೀರದ ಪಶ್ಚಿಮಭಾಗವು ಪಾಕ್ಷಾರೆ ನೋಡಿ, ಅಲ್ಲಿಯ ವಿದ್ಯಮಾನಗಳನ್ನು ವರದಿಮಾಡಲು ಭದ್ರತಾ ಸಮಿತಿಯು ಒಂಮ ಸಮಿತಿಯನ್ನು ನೇಮಕ ಮಾಡುವುದರಲ್ಲಿ ಅನುಮಾನವೇ ಇಲ್ಲವೆಂದು ಅಭಿಪ್ರಾಯ ಪಡಲಾಗಿದೆ

ಕಾಶ್ಮೀರದ ಕೆಲವು ಗುಡ್ಡ ಪ್ರದೇಶಗಳು ಭಾರತ ಸೇನೆಯ ವಶ

ನೌಷೇರಾಕ್ಕೆ ದಕ್ಷಿಣದಲ್ಲಿ ದಾಳಿಕಾರರ ಪ್ರಾಬಲ್ಯವು ಹೋಗಾಗಿದೆ ಭಾರತ ಯೋಧರು ಶತ್ರು ನೆಲೆಗಳ ಮೇಲೆ ದಾಳ ನಡೆಸಿ ಕೆಲವು ಗುಡ್ಡ ಪ್ರದೇಶಗಳನ್ನು ವಶಪಡಿಸಿಕೊಂಡರು ಇದರ ಬಹಳ ಬಿರುಸಾಗಿ ನಡೆಯಿತು ೧೭ ಶತ್ರು ವಾಹನಗಳು ಧ್ವಂಸವಾಗಿವೆ ಉಟ್ಟಿ ಬಳಿ ರಸ್ತೆಯೊಂದನ್ನು ದಾಟಲು ಸಾಹಸಪಡುತ್ತಿದ್ದ ೨೦೦ ಮಂದಿ ದಾಳಿಕಾರರನ್ನು ಭಾರತ ಸೇನೆಯು ಅಟ್ಟಿಸಿ ಕೊಂಯ ಹೋಗಿ ೩೦ ಮಂದಿಯನ್ನು ಕೊಂಮಹಾಕಿತು. ದಾಳಿಕಾರರು ಪಾಕಿಸ್ತಾನ ಕ್ಷೇತ್ರಕ್ಕೆ ಓಡಿಹೋದರು

ಪೂರ್ವ ಪಂಜಾಬ್ ಹಳ್ಳಿಯ ಮೇಲೆ ಶಸ್ತ್ರ ಸಜ್ಜಿತ ಮುಸ್ಲಿಮರ ದಾಳಿ

ಜಲಂಧರ್ ಜಿಲ್ಲೆಯ ಖಾಜ್‌ಪುರ್ ಎಂಬ ಹಳ್ಳಿಯ ಮೇಲೆ ಶಸ್ತ್ರಸಜ್ಜಿತ ಮುಸ್ಲಿಂ ದಾಳಿಕಾರರು ಬೆಮ್ಮ ಹಳ್ಳಿಯ ನಿವಾಸಿಗಳ ಮೇಲೆ ಗುಂಡುಹಾರಿಸಿದರು. ಹಳ್ಳಿಯ ಬಹಳಕುಗಳನ್ನು ಸೆಗಿಸಲು ದಾಳಿಕಾರರು ಪ್ರಯತ್ನಿಸಿದರು. ಗಡಿ ಬಳಿ ಇದ್ದ ಪೋಲೀಸರು ಈ ಆಕ್ರಮಣವನ್ನು ತಡೆದರೆಂದು ಪೂರ್ವಪಂಜಾಬ್ ಸರ್ಕಾರವು ಒಂದು ಪ್ರಕಟಣೆ ಹೊರಡಿಸಿದೆ ಈ ದಾಳಿಯಲ್ಲಿ ಪಾಕ್ಸ್ಥಾ ಹೋಗಾರ್ಡ್ಸ್ ಯೋಧರೂ ಸಹ ಭಾಗವಹಿಸಿದ್ದರೆಂತೆ!

॥ ಶ್ರೀ ಜಗದ್ಗುರು ರಾಮಕಾಶ್ಯಾರ್ಯಾಯನಮಃ ॥

ಗೃಹಸ್ಥಾಶ್ರಮಿಯೂ ಪುರುಷಾರ್ಥಸಾಧನವೂ

ಲೇ॥ ಮಲ್ಲಿಕಾರ್ಜುನಾರ್ಯ ರಾಣಿ ಚಿಕ್ಕೂರು ಮುನಿಸಾ, ಮುದೇಸಮುದ

ಪರಮಪುರುಷಾರ್ಥ (ಮೋಕ್ಷ) ಸಾಧನೆಗೆ ಗೃಹ, ಕ್ಷೇತ್ರ, ದಸ, ಪತ್ನಿಸುತಾದಿಗಳನ್ನು ಸೃಜಿಸಿ ಕಾಷಾಯಾಂಬರಗಳನ್ನು ಧರಿಸಿ ಗಪ್ಪೆ ಮಂಡೆಗಳನ್ನು ಬಳಿಯಿಸಿಯೋ ಬೋಳಿಸಿಯೋ ವನವಾಸಿಗಳಾದ ಸನ್ಯಾಸಿಗಳೇ ಅರ್ಪರಿಂದು ಬಹು ಜನರು ತಿಳಿದುಕೊಂಡಿರುತ್ತಾರೆ ಅದರ ಪುರುಸಾರ್ಥಸಾಧನೆಗೆ ದೇಶ, ಕಾಲ, ವಯಸ್ಸು, ಜಾತಿ, ವೇಷ ಆಶ್ರಮಗಳು ಕಾರಣಗಳಲ್ಲ! ಸನ್ಯಾಸನವನ್ನು ಸ್ವೀಕರಿಸಿ ಪರಮಾರ್ಥವನ್ನು ಸಾಧಿಸಬೇಕೆಂ ೨ ವರ್ಷಗಳಲ್ಲೆಲ್ಲ ಸನ್ಯಾಸ ಶಬ್ದಕ್ಕೆ ಕಾತಾಯದಂಡಗಳನ್ನು ದರಿಂ ಪ್ರಪಂಚವನ್ನು ತ್ಯಜಿಸಿ ಹೋಗಬೇಕೆಂಬರ್ಥವೊಂದನ್ನೇ ಮಾಡಬೇಕಾದುದಿಲ್ಲ ಏಕೆಂದರೆ ಪ್ರಪಂಚವನ್ನು ಬಿಟ್ಟು ಅವನು ಎಲ್ಲಿಗೆ ಹೋಗುವನು? ಎಲ್ಲಿಗೆ ಹೋದರೂ ಪ್ರಪಂಚವು ಇದ್ದೇ ಇರುವದು ಸೃಷ್ಟಿಎನ್ನು ಬಿಟ್ಟರೆ ಪರಸ್ಥಳಕ್ಕೆ ಹೋಗುವನು ಇಲ್ಲವೆ ಊರನ್ನು ಬಿಟ್ಟರೆ ಕಾಡಿಗೆ ಹೋಗುವನು ಮನೆಯನ್ನು ಬಿಟ್ಟರೆ ಗುಹೆಯನ್ನು ಸೇರುವನು ಅನ್ನವನ್ನು ಬಿಟ್ಟರೆ ಹಣ್ಣು ಗೆಡ್ಡೆ ಗೆಣಸುಗಳನ್ನು ತಿನ್ನುವನು, ಇಲ್ಲಾ ಜಲವಾಯು ಸಣಗಳನ್ನಾದರೂ ಸೇವಿಸುವನು ಆರಣ, ಗುಹಿ ಹಣ್ಣು, ಜಲವಾಯುಗಳಲ್ಲಿಯೂ ಪ್ರಪಂಚವಿಲ್ಲವೆ? ಸಂಚಿಭೂತಾತ್ಮಕವಾದ ದೇಹನ ಸಂಬಂಧ (ಉಣಾದಿ) ಇರುವವರೆಗೆ ಪ್ರಪಂಚದಿ ಸಂಬಂದವಿದ್ದೇ ಇರುವದು

ಮನುಷ್ಯನು ಕ್ರಮುವಾಗಿ ಬ್ರಹ್ಮಚಾರಿ ಗೃಹಸ್ಥ, ವಾಸಸ್ಥಾಶ್ರಮಿಗಳನ್ನು ಸಾಧಿಸಿ ಕೊನೆಗೆ ಆತ್ಮಸಾಕ್ಷಾತ್ಕಾರಕ್ಕೆ ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕೆಂದು ಶಾಸ್ತ್ರಗಳು ಬೋಧಿಸುತ್ತವೆ ಆದರೆ ಇಲ್ಲಿ ನ್ಯಾಸ ಶಬ್ದಕ್ಕೆ ಸಾರ್ಥಕವೇನೆಂದರೆ ಪರಮಾರ್ಥಸಾಧನೆಗೆ ಕಂಟಕ ಪ್ರಾಯಗಳಾದ ವಸ್ತುತಾದಿ ವಿಷಯಾಗಳು ನಮ್ಮಲ್ಲಿರಬಾರದೆಂಬ ಇದ್ದರೆ ಇರಲಿ, ಅವುಗಳ ಮೇಲಣ ಆಸಕ್ತಿಯನ್ನು ತೊರೆದರೆ ಸರಿ! "ತಿವನ ಕಂಡರೆ ಯವುನಪಾಧೆಯಿಲ್ಲ" ದಂತೆ ಅಭಿಮಾನವನ್ನು ತೊರೆದ ಮೇಲೆ ಯಾವ ವಿಷಯವೂ ನಮಗೆ ಯಾವ ಬಾಧೆಯನ್ನೂ ಮಾಡುವದಿಲ್ಲ ಪರಮಾತ್ಮನು ಸೃಷ್ಟಿಸಿರುವ ಯಾವ ವಿಷಯವೂ ಕಂಟಕವಲ್ಲ ಯಾವುದಾದರೊಂದು ವಿಷಯವನ್ನು ನಮ್ಮದೆಂದು ಅಭಿಮಾನಿಸಿ ಅದಕ್ಕೆ ಕೃತಕಸೌಂದರ್ಯವನ್ನು ಕೊಟ್ಟು ತದೇಧ್ಯಾನಾಸಕ್ತರಾಗಿ ರೇಸಿಮೆ ಹುಳುವು ತಾನು ರಚಿಸಿದ ಗೂಡಿನಲ್ಲಿ ಬಂಧಿಸಲ್ಪಡುವಂತೆ ಕಂಟಕವಾದ ಸೃಷ್ಟಿಯನ್ನು ನಾವೇ ಮಾಡಿಕೊಳ್ಳುತ್ತೇವೆ, ಪರಮಾತ್ಮನು ಸೃಷ್ಟಿಸಿರುವ ವಸ್ತುಗಳು ಹೇಗಾದರೂ ಇರಲಿ, ಅವುಗಳ ಆಧಾರದಿಂದ ನಾವು ಮನೋಮಯ ಪ್ರಪಂಚವನ್ನು ಬೆಳೆಸದೆ ಬಿಟ್ಟರೆ ಸಾಕಾಗಿದೆ. ದೇಹದಲ್ಲಿ ಹುಟ್ಟಿದ ರೋಗವು ಅವಶ್ಯಸೇವನ ಸಮಯದಲ್ಲಿ ವೃದ್ಧಿಯನ್ನು ಹೊಂದಿ ಕಾಲಕ್ರಮದಲ್ಲಿ ಶರೀರವನ್ನು ನಾಶಮಾಡುವಂತೆ ನಮ್ಮ ಇಚ್ಛೆಯೇ ನಮಗೆ ದುಃಖವನ್ನುಂಟು ಮಾಡುವದು. ಹೀಗೆ ನಮ್ಮ ಸುಖಕ್ಕಾಗಿ ಬಯಸಿದ ಇಚ್ಛೆಯೇ ದುಃಖಕ್ಕೆ ಕಾರಣವಾದ ಮೇಲೆ, ಗ್ರಾಮದ ಆವಲಂಬನೆಗೆಂದು ಬೆಳೆಯಿಸಿದ ಬೇರೆಯು ಹೋರ ವ್ಯಾಘ್ರಾದಿಗಳಿಗೆ ಅಶ್ರಯವಾದರೆ ಅದನ್ನು ನಿರ್ಮೂಲ ಮಾಡುವದು ಆಗತ್ಯವಾಗಿರುವಂತೆ ದುಃಖಕಾರಣವಾದ ಇಚ್ಛೆಯನ್ನು ಮೂಲೋತ್ಪಾಟನೆ ಮಾಡುವದು ಆತ್ಯಗತ್ಯವಾಗಿರುವದು.

ವಿಚಾರಮಾಡಿ ನೋಡಿದರೆ ಸನ್ಯಾಸ ಶಬ್ದಕ್ಕೆ ಮನೋಮಯ ಪ್ರಪಂಚವನ್ನು ತೊರೆಯುವದೆಂಬರ್ಥವನ್ನಿಟ್ಟು ಕೊಳ್ಳುವದೇ ಪ್ರಶಸ್ತವು ಜಗತ್ತಿನಲ್ಲಿ ಯತಿಯಾಗಲಿ ಭೂಪತಿಯಾಗಲಿ, ಗುರುವಾಗಲಿ, ಶಿಷ್ಯನಾಗಲಿ, ಪ್ರಾಪಂಚಿಕನಾಗಲಿ, ಪಂಡಿತನಾಗಲಿ, ಧನಿಕನಾಗಲಿ, ಯಾವ ಉನ್ನತ ಶ್ರೇಣಿಯಲ್ಲಿದ್ದರೂ ತನ್ನ ಯೋಗ್ಯತೆ ಗಳುಗುಣವಾಗಿ ಅವನವನು ಮಾಡತಕ್ಕ ಕರ್ತವ್ಯ ಕರ್ಮಗಳಿದ್ದೇ ಇರುತ್ತವೆ ಅವನ್ನು ಅವನು ಮಾಡಲೇ ಬೇಕು ಮಾಡದಿದ್ದರೆ ಅವನಿಗೆ ಹೀನತ್ವ ಬರುತ್ತದೆ ಪ್ರಾಣ ಹೋಗುವ ಪ್ರಸಂಗ ಒಂದೂರ ಸಲ್ಲದ ಕಾರ್ಯವನ್ನು ಸರ್ವದಾ ಮಾಡಬಾರದು, ಮಾಡತಕ್ಕದ್ದನ್ನು ಎಂದೂ ಬಿಡಬಾರದು ಇದೇ ಶಾಶ್ವತ ಧರ್ಮ ಸೂಕ್ಷ್ಮವು ಅದುಕಾರಣವೇ ಕ್ರಮತಪ್ಪಿ ನಡೆಯುದಕಂ ಕೆಪ್ಪವಿಲ್ಲಂಬೆ?" ಎಂದು ಜ್ಞಾನಿಗಳು ಹೊದಿರುವರು ಆದ್ದರಿಂದ ಗೃಹಸ್ಥಾಶ್ರಮಿಯು ಪ್ರಪಂಚನನ್ನು ಕೈಬಿಡುವರಾಗಿಲ್ಲ ಪರಮಾರ್ಥದಲ್ಲಿ ನಿಶ್ಚಯಬುದ್ಧರು ವುದರಿಂದ ಆಪತ್ಸು ಉಪೇಕ್ಷಿಸುವನಾಗಲಿ ಇಲ್ಲ ಆದ ಕಾರಣ 'ಜಾಣನು ಲೌಕಿಕಪರಮಾರ್ಥದೊಡನು, ಮಾಣದೆ ಕೂಡಿ ನಡೆಸುತಿಹನಿಂತು। ತರುಣಿಯ ಮೊಲೆಯೊಂದಪಣಿತ ಲಣುಗನಲ್ಲಿ। ತರದುಗುಳದ ಕುಚಾಗ್ರವನೋವುವಂತೆ!" ಎಂಬ ನಿಜಗುಣಶಿವಯೋಗಿಗಳ ಪಜಪದಂತೆ ಗೃಹಸ್ಥಾಶ್ರಮೋಚಿತವಾದ ಕರ್ಮಗಳನ್ನು ಮಾಡುತ್ತ ಗೃಹಸ್ಥಾಶ್ರಮವೊಂದರಿಂದಲೇ ಇಹಪರಗಳೆರಡನ್ನೂ ಸಾಧಿಸಬೇಕು ಆತ್ಮಾನಂದಕ್ಕಾಗಿ ಎಲ್ಲಿಯೂ ಮುಡುಕಿಕೊಂಡು ಹೋಗಬೇಕಾದುದಿಲ್ಲ, ಅದು ಮನೆಯಲ್ಲಿಯೇ ಹೂಳಿಟ್ಟ ನಿಧಿಯಂತೆ ನಮ್ಮ ಲ್ಲಿಯೇ ಇರುವುದು ಅದನ್ನು ಕಂಡುಕೊಳ್ಳಬೇಕು ಸ್ವಯಂಕೃತಾಸಾರಾಭಕ್ಕಾಗಿ ಪ್ರಪಂಚವನ್ನು ದೂಷಿಸಬಾರದು ಶಾಸ್ತ್ರಗಳಲ್ಲಿ ಎಷ್ಟೋ ಕಡೆ ಪ್ರಪಂಚವನ್ನು ತುಚ್ಛಮಾಡಿರುವದು, ಕೇವಲ ಆದಸ್ಟೇ ನಂಬಿಕೊಂಡು ಕೂಡದೆ ಇರಬೇಂದೇ ಹೊರತು ಅನ್ಯಥಾ ಅಲ್ಲ ಪ್ರಸಂಚವು ಪರಮಾತ್ಮನ ಸತ್ಸಾನಿಧ್ಯಕಾಗಿರುವುದರಿಂದ ಅದನ್ನು ದೂಷಿಸಿದರೆ ಪ್ರಕಾಂತರದಿಂದ ಪರಮಾತ್ಮನನ್ನೇ ದೂಷಿಸಿದಂತಾಗುವದು ಪ್ರಪಂಚ ವ್ಯವಹಾರ ವೆಂಬುದು ಪರಮಾರ್ಥವನ್ನು ಅಭ್ಯಾಸಿಸಕ್ಕ ಶಿಕ್ಷಣಾಲಯವಾಗಿರುವದು. ಪ್ರಸಂಚ ವ್ಯವಹಾರಗಳನ್ನು ನಡೆಯಿಸುತ್ತಿರುವಾಗ ನಾನು ನನ್ನದೆಂಬ ಅಹಂಕಾರಮಮಕಾರಗಳನ್ನು ತ್ಯಜಿಸಿ ಕಾಮಕ್ರೋಧ ಈರ್ಷ್ಯಾಸೂಯೆಗಳಿಗೊಳಗಾಗದೆ ಶಾಶ್ವಾಲಾಭಗ-ನ್ನೂ ಜಯಿಸಬೇಕು ಗಳನ್ನೂ, ಸ್ತುತಿ ನಿಂದಗಳನ್ನೂ ಸಮವಾಗಿ ಭಾವಿಸುತ್ತ ಸರ್ವತ್ರ ಭಗನದೃಷ್ಟಿವನ್ನು ಅನುಸಂಧಾನಮಾಡುತ್ತ ವಿವೇಕ ಸತ್ಸಂಗಗಳಿಂದಿರುವುದಕ್ಕೆ ವಿರೇಸ ಸನ್ನಿವೇಶಗಳು ಒದಗುತ್ತವೆ ಇಂತಹ ಸನ್ನಿವೇಶಗಳನ್ನು ಬಿಟ್ಟು ತನುಮನದಭಿಮಾನವಳಿದ ವನವಾಸಿಯಾಗಿ-ನದು ವಿಹಿತವಲ್ಲ

ಆಸೆ ಮತ್ತು ತನುಮನನಭಿಮಾನವಳಿದ ವನವಾಸಿಯಾಗಿ ಕಾಮಕ್ರೋಧಾದಿಗಳನ್ನು ಜಯಿಸಿದ್ದೇನೆಂದು ಹೇಳುವದು ಹೇಗಾಗುವದೆಂದರೆ, ಹೆಗ್ಗಣವನ್ನು ಒಳಗೆ ಬಿಟ್ಟು ಬಿಲದ ಬಾಯನ್ನು ಮುಚ್ಚಿದಂತಾಗು ವದು ಆದ್ದರಿಂದಲೇ "ತನುಮನಾದಭಿಮಾನವಳಿದ ವನವಾಸಿಯಾದೆನೆಂಬ ಬದ್ಧನು ಎಂದು ಜ್ಞಾನಿಗಳು ಹೇಳಿರುವರು ಆದ್ದರಿಂದ ಪ್ರಪಂಚಿದ್ದಲ್ಲಿದ್ದು ಅದಿರಲ್ಲಿ ಅಸಾಸಕ್ತನಾಗಿದ್ದರೆ ಮಾತ್ರ ಅವನು ಪ್ರಪಂಚವನ್ನು ಗೆದ್ದು ಪರಮಾರ್ಥವನ್ನು ಸಾಧಿಸಿದನೆಂದು ಹೇಳಬಹುದು ಹೀಗೆ ಪ್ರಪಂಚವ್ಯವಹಾರದಲ್ಲಿ ಸಿಕ್ಕು ಹೋರಾಡಿದ ಪ್ರಜ್ಞಾಕಾಲಿಯಾದ ಪುರುಷನು ಪುಟಕ್ಕೆ ಹಾಕಿದ ಚಿನ್ನದಂತೆ ಶುದ್ಧನೂ ಬುದ್ಧನೂ ಆಗುವನು

ಪ್ರಪಂಚದಲ್ಲಿದ್ದೂ ಇಲ್ಲದ ಹಾಗಿರಬೇಕೆಂಬ ಪರಸ್ಪರ ವಿರೋಧೋಕ್ತಿಯು ಆಚರಣೆಗೆ ಹೇಗೆ ಸಾಧ್ಯವೆಂಬ ಶಂಕೆಬರಬಹುದು ಆದರೆ "ಜಲದೊಳಗುದಿಸಿ ರಾಜಸು ತಿಪ್ಪ ಕಮಲವು। ಜಲವನಿಹಾದರು ಅಂಟದಿರುವಂತೆ। ಮಲಿನಸಂಸಾರದೊಳು ಮುಳುಗಿ ತಾನಿದ್ದರು। ಸಲೆ ಮಾಯಾವಶವಾಗದಾತ್ಮಾನುಭವಿಗೆ। ಸಂಸಾರದೊಳು ಮುಕ್ತಿಸಿದ್ಧ॥" ಎಂದು ಜ್ಞಾನಿಗಳು ಹೇಳಿರುವಪ್ರಕಾರ ವಿಷಯಗಳಲ್ಲಿ ಆನಾಸಕ್ತನಾಗಿದ್ದರೆ ಇದ್ದೂ ಇಲ್ಲದ ಹಾಗೆಯೇ ಆಗುವು ಉದಾಹರಣೆಗಾಗಿ ನೋಡಿರಿ. ಒಬ್ಬ ಕಮಯ ಭೋಜನಕ್ಕೆ ಕುಳಿತಿರುವಾಗ ಅವನಿಗೆ ಆತಿ ಮಹತ್ವವಾದ ಒಂದು ಸಮಸ್ಯೆಯು ಪೂರ್ಣವಾಗುವಂತೆ ತೋರಲು, ಆಗ ಅವನಿಗೆ ಯಾವ ಭಕ್ಷ್ಯಭೋಜ್ಯಗಳ ರುಚಿಯೂ ತಿಳಿಯುವದಿಲ್ಲ; ಅಲ್ಲಿ ನಡೆಯುವ ಮಾತುಕತೆಗಳ ಮೇಲೆಯೂ ಲಕ್ಷ್ಯವಿರುವುದಿಲ್ಲ. ಒಂದೊಂದು ವೇಳೆ ಊಟಮಾಡುವುದಕ್ಕೇ ಬಿಟ್ಟು ಆ ಸಮಸ್ಯಾ ಪೂರ್ತಿಯನ್ನು ಬರೆದಿಡುವುದಕ್ಕೆ ಹೋಗುವನು ಇದು ಅನುಭವಸಿದ್ಧವಾದುದು ಹಾಗೆಯೇ ಪರಮಾರ್ಥಾರ್ಥಿಯು ವಿಷಯಗಳ ಮಧ್ಯದಲ್ಲಿ ಹೊರಳಾಡುತ್ತಿದ್ದರೂ ತನ್ನ ಸರ್ವಾಸಕ್ತಿಯನ್ನೂ ಪರಮಾತ್ಮನಲ್ಲಿಟ್ಟಿರಲಿ ಅವನು ಪ್ರಪಂಚದಲ್ಲಿದ್ದರೂ ಇಲ್ಲದಂತಾಗುವನು ಯಾವ ಭಗವದ್ಭಕ್ತರು ವ್ಯವಹಾರಾರ್ಥವಾಗಿ ಸಂಸಾರದಲ್ಲಿದ್ದೂ ಸಂಸಾರವೇ ಹಿತ್ಯಿಳಿಗಾಗುವದಿಲ್ಲವೋ ಅಂಥವರಿಗೇನೇ ಸಾಧುಸಂತರು "ಜೀವನ್ಮುಕ್ತ" ನೆಂದು ಹೇಳುವರು ಸಕಲ ನೈಭವನಗಳಿಂದ ಕೂಡಿದ್ದು ಜೀವನ್ಮುಕ್ತನೆನಿಸಿಕೊಂಡಿರುವ ಜನಕಮಹಾರಾಜನೇ ಇದಕ್ಕೆ ಸಾಕ್ಷಿಯಾಗಿದುನು ಹೀಗೆ ಪ್ರಪಂಚದಲ್ಲಿದ್ದೂ ಪರಮಾರ್ಥವನ್ನು ಸಾಧಿಸುವದು ಸುಲಭಸಾಧ್ಯವಲ್ಲ, ಎರಡು ಕೈಯಲ್ಲಿಯೂ ಕತ್ತಿಯನ್ನು ಕಿರುಗಿಸುವಷ್ಟು ಕಸ್ಟನೇ ಸರಿ! ಪ್ರಪಂಚವನ್ನೂ ಬಿಟ್ಟು ಪರಮಾರ್ಥವನ್ನೂ ಸಾಧಿಸಬೆ "ಇತೋಭ್ರಷ್ಟಸ್ತತೋಭ್ರಷ್ಟ"ರಾಗುವದಕ್ಕಿಂತಲೂ ಪ್ರಪಂಚದಲ್ಲಿಯೇ ಇದ್ದು ಕೆಲವುಕಾಲ ವಿಕಾಂತದಲ್ಲಿರುತ್ತಲೂ ಸತ್ಸಂಗ ಸದ್ಗ್ರಂಥಗಳ ವ್ಯಾಸಂಗ ಮಾಡುತ್ತಲೂ ಪರಮಾರ್ಥವನ್ನು ಸಾಧಿಸುವದು ಶ್ರೇಯಸ್ಕರವು ಗೋಡೆಯನ್ನು ಕಟ್ಟದಮೇಲೆ ಪಡಿಕೆಯನ್ನು ತೆಗೆಯಬೇಕೆಂದಂತೆ ಪರಮಾರ್ಥವನ್ನು ಸಾಧಿಸದಂತೆ ಪ್ರಪಂಚವನ್ನು ಬಿಡಬೇಕು ಅವ್ಯತವು ದೊರೆತ ಮೇಲೆ ಹುಲಮಜ್ಜಿಗೆಯನ್ನು ಯಾರು ಬಯಸುವರು?

ಸಾಧಾರಣ ಜನರು ಭುಕ್ತಿಗೂ ಮುಕ್ತಿಗೂ ಸಾಧನ ವಾಗಿರುವ ಪ್ರವೃತ್ತಿರೂಪ ಧರ್ಮವನ್ನವಲಂಬಿಸುವ ಮತ್ತವುಪಕ್ಷವು ಶ್ರೀಂಠಂಕರಾಚಾರ್ಯರು.'—ವರ್ಣಾಶ್ರಮ ಗಳನ್ನು ಕುರಿತು ಹೇಳಲ್ಪಟ್ಟ ಅಭ್ಯುದಯಾರ್ಥವಾದ, ಪ್ರವೃತ್ತಿರೂಪ ಧರ್ಮವು ಸ್ಮಗಾಗಿರುವ ಪ್ರಾಪ್ತಿಗೆ ಹೇತು ಭೂಪವಾಗಿದ್ದರೂ ಉತ್ಪಾರ್ಷಣ ಭಾವನೆಯಿಂದ ಅನು ಸ್ಥಾನ ಮಾಡಲ್ಪಟ್ಟರೆ ಚಿತ್ತಶುದ್ಧಿಗೆ ಕಾರಣವಾಗುವ ದೆಂದೂ, ಚಿತ್ತಶುದ್ಧಿಯಿಂದ ಜ್ಞಾನನಿಷ್ಠಾಯೋಗ್ಯತೆಯು ಬಂದು ಕರ್ಮೂರ್ಣ ಮೋಕ್ಷವಾಗುವುದೆಂದೂ ಆ ಪ್ರವೃತ್ತಿ ರೂಪ ಧರ್ಮವು ಪರಂಪರೆಯಾಗಿ ಕಾರಣವೆನಿಸುವ ದೆಂದೂ ಬೋಧಿಸಿರುವರು ಆದ ಪ್ರಯುಕ್ತ ಗೃಹಸ್ಥಾಶ್ರಮಿಯು ಸ್ವನ್ಮತ್ತಿರೂಪ ಧರ್ಮವನ್ನವಲಂಬಿಸಿದರೆ ಅವ ನಿಗೆ ಇಚ್ಛೆಯು ಇದ್ದರೆ ಸಂಸಾರದಲ್ಲಿ ಅಭ್ಯುದಯವೂ ಇಲ್ಲದಿದ್ದರೆ ನಿಶ್ರೇಯಸವೂ ಲಭಿಸುವದು

ಸಂಸಾರ ನೀರಸನೆಂದು ಎಷ್ಟು ಬಗೆಯಿಂದ ಕಂಡರೂ ಪುನಃ ಪುನಃ ಜನರು ವಿಷಯಗಳ ಕಡೆಗೆ ಮುಖವಿದು ವುದನ್ನು ಬಿಡುವದೇ ಇಲ್ಲ ವಿಷಯಗಳಿಂದಾಗುವ ಸುಖವು ಕಷ್ಟದಿಂದ ದೊರೆಯತಕ್ಕದ್ದೆಂದೂ ಆಮ ಕ್ಷಣಮಾತ್ರವಿರುವದೆಂದೂ, ಉಪಭೋಗವಾದನಂತರ ದುಃಖದಲ್ಲಿಯೇ ಕೊನೆಗಾಣತಕ್ಕದ್ದೆಂದೂ ಗೊತ್ತಿದ್ದರೂ, ವಿಷಯಗಳು ಎದುರಿಗೆ ಬಂದಾಗ ಅವುಗಳಲ್ಲಿಯೇ ಮನಸ್ಸು ಎರಗುವುದೇ ಹೊರತು ಹಿಂದಕ್ಕೆ ಸರಿಯು ವಷ್ಟು ವಿವೇಕವು ಆಗ್ಗೆ ಒರುದಿಲ್ಲ ವಿಷಯಾನಂದವು ಅನಿತ್ಯವಾದರೂ ಸಿಕ್ಕುವಷ್ಟುಕಾಲವಾದರೂ ಅದು ಇರುವ ದೆಂದೂ ಆ ಸುಖಕ್ಕೆ ವಿಷಯಗಳೇ ಕಾರಣಗಳೆಂದೂ ಪುನಃ ಪುನಃ ಧ್ಯಾಂತಯಂತಾಗುವದು. ವಿಷಯಗಳಲ್ಲಿ ಸುಖವನ್ನು ಕೊಡುವ ಸಾಮರ್ಥ್ಯವು ಇರುವದೆಂಬ ಭ್ರಾಂತಿ ಇರುವವರೆಗೂ ಪರಮಾತ್ಮನ ಕಡೆಗೆ ತಿರುಗು ವದು ಕಷ್ಟವಾಗಿರುವದು ಪರಮಾತ್ಮನ ಕಡೆಗೆ ತಿರುಗಿದ ಹೊರತು ನಿಜಾನಂದವು ದೊರೆಯದು ಸವಿಯು ತೋದವಿದ್ದಿಲ್ಲ; ನಿಜಾನಂದವು ಅನುಭವಕ್ಕೆ ಬಂದೆ ಹೊರತು ಸಂಸಾರದಲ್ಲಿ ಪೇಯಬುದ್ಧಿಯಂಟಾಗುವದೇ ಇಲ್ಲ ಅವಶ್ಯಯಿಕ್ತ ಭಗವತಾನ ಸೇವೆಯಿಂದಾಗಿ ಅವರಂತವನ್ನು ಕಾಣುವ ಪೂರ್ವದಲ್ಲಿಯೇ ವಿಷಯಗಳಲ್ಲಿ ದೋಷವನ್ನು ಕಂಡು ಅವುಗಳನ್ನು ಉಚ್ಚಿಬ್ಬದಂತೆ ಕಡೆಗಾಣುವ ಶಕ್ತಿಯನ್ನು ಪಡೆದುಕೊಳ್ಳುವದು ಮುಮ್ಮುಕ್ಷರ್ಕವ್ಯವು.

ಗೃಹಸ್ಥಾಶ್ರಮಿಗಳಾದವರೇ ಸಂಸಾರದಲ್ಲಿದ್ದೂ ಇಲ್ಲ ದಂತಿರಬೇಕೆಂದು ಅನುಭವಿಗಳೂ ಶಾಸ್ತ್ರಗಳೂ ಬೋಧಿಸುತ್ತಿರುವಾಗ, ಎಂದೂ ಪ್ರಪಂಚಿಕ್ಯವಾದದಲ್ಲಿ ಮನವಿಡುವದಿಲ್ಲೆಂಬ ಪ್ರತಿಜ್ಞೆಯನ್ನು ಮಾಡಿ 'ಕಾಷಾಯಾಂಬರಗಳನ್ನು ಧರಿಸಿದ ಮಾತ್ರಕಾಯರು ಹೇಗಿರಬೇಕೆಂಬುದನ್ನು ಬೇರೆ ಹೇಳಬೇಕಾದುದೇ ಇಲ್ಲ ಆದರೆ ಕೆಲಜನ ಕಾಮಾಯವೇಷಧಾರಿಗಳು "ಪರೋಪದೇಶೇ ಪಾಂಡಿತ್ಯಂ" ಎಂಬಂತೆ ಸಭೆಗಳಲ್ಲಿ ಧರ್ಮ, ನೀತಿ, ಆಚಾರತತ್ವಗಳ ಬಗ್ಗೆ ಹಾಗಿರಬೇಕೆಂದು ಒಳ್ಳೆ ಹುರುಪಿನಿಂದ ಮಾತಾಡುತ್ತಾರೆ. ಆದರೆಂತೆ ತಾವು ನಡೆಯುವದೇನು? ಸರ್ವಥಾ ಇಲ್ಲ "ಹೇಳುವದು ವೇದ, ಹಾಳುವದು ಗಾಳ" ಎಂಬಂತೆ ಇವರ ವರ್ತನವಿರುವದು ಇವರು ತಮ್ಮ ಮನೆ-ಅಜ್ಜಿತಮ್ಮಂದಿ

ರಲ್ಲಿ ವಿದೇಸವಾದ ಮಮಕಾರವನ್ನಿಟ್ಟುಕೊಂಡು ಶ್ರಾಂತಿಕರಿಂತಲೂ ದೊಡ್ಡಾಸ್ಪತ್ರೆಗಳ ಪ್ರಸಂಚವ್ಯವಹಾರಗಳನ್ನು ಮಾಡುತ್ತಾರೆ .ವೇದಿಗಾರರು ಮಧುರವಾದ ಕೋಲಮ್ಮನ್ನಾದಿ ಜಿಂಕೆಗಳನ್ನು ಮುಗ್ಧಗೊಳಿಸಿ ಬಲೆಯಲ್ಲಿ ಕೆಡವಿಕೊಳ್ಳುವಂತೆ ಈ ಮಹಾಶಯರು ಮಂದಾಸದೆ ಮಾತುಗಳನ್ನಾಡುತ್ತ ದೊಡ್ಡಸ್ಪತ್ರೆಗಳ ಕಡೆಗೆ ಅಲ್ಲಿ ನಾವು ಮಂಟಪ ಕಟ್ಟಿಸುತ್ತೇವೆ, ಗೋಪುರ ಕಟ್ಟಿಸುತ್ತೇವೆ, ಕಾಲೇಜ್ ಕಟ್ಟಿಸುತ್ತೇವೆ, ಪಾರಖಾಲೆ ಇದು ನ್ತೇವೆಂದು ಹೇಳುತ್ತ ಜನರಿಂದ ಹಣವನ್ನು ಸೆಳೆಯುತ್ತಿರುವರು ಆ ಹಣವನ್ನು ಸ್ತ್ರೀನಿಯಕಕಾದ ಮರ್ಮ್ಯ ನಪಾಠಕ್ಕೆ ಉಪಯೋಗಿಸುತ್ತಾರೆ ಮೂರೆಗಡವನಿಗೆ ಇವರ ಮರ್ಮ್ಯಕ್ತಿಯು ಹೇಗೆ ಗೊತ್ತಾಗಬೇಕು? ಆರ್ಜಿಸಲು ಸುಭವ್ಯಾಪರಣಕ್ಕಾಗಿ ಸನ್ಯಾಸಿವೇಸವನ್ನು ಧರಿಸಿ ದಂತೆ ಪರದ್ರವ್ಯಾಪಹಾರಕ್ಕಾಗಿಯೇ ಇವರು ಕಾಷಾಯ ವೇಸವನ್ನು ಧರಿಸಿ ಸಂಚರಿಸುತ್ತಿರುವಂತೆ ತೋರುತ್ತದೆ ಇಂತಹವರಿಗೆ ದ್ರವ್ಯದಾನ ಮಾಡುವುದರಿಂದ ಭಕ್ತರು ಸುರ್ವ್ಯಕ್ತಿಗೆ ಪ್ರೋತ್ಸಾಹಕೊಟ್ಟಂತಾಗುವಲ್ಲದೆ, ಪುಣ್ಯಕ್ಕೆ ಬದಲಾಗಿ ಪಾಪವೇ ಒಲಿವದು ." ಸತ್ಪಾತ್ರದೊಳ್ ದಾನಮಂ " ಎಂಬ ವಾಕ್ಯದಂತೆ ಯೋಗ್ಯರಿಗೆ ದಾನ ಮಾಡಬೇಕಲ್ಲದೆ ಸ್ತ್ರೀಲಂಪಟರಿಗೆ ಎಂದೂ ದಾನಮೂಡ ಬಾರದು. ಕಾಮನ ಬಾಧೆಯನ್ನು ತಡೆಯಲಾರದ ಕಾಷಾಯವಸ್ತ್ರಧಾರಿಗಳು ತಮ್ಮ ಅಧಿಕಾರವನ್ನು ಬೇರೆ ಯವರಿಗೆ ಮಹಿಷಿ, ತಾವು ಗೃಹಸ್ಥಾಶ್ರಮಿಗಳಾಗುವದು ಭೂಷಣವಲ್ಲವೇ?

ವಾಚಕರೇ, ಜಗತ್ಪ್ರಸಿದ್ಧರು " ಮಹಾಜನೋ ಯೇನ ಗತಃ ಸ ಪಂಥಾಃ " ಎಂಬ ವಾಕ್ಯದಂತೆ ದೊಡ್ಡವರ ಮಾರ್ಗವನ್ನೇ ಇತರರು ಅನುಕರಣಮಾತ್ರರಾಗಿರುವುದರಿಂದ ಗ್ರಸ್ಥರು ಯಾರೇ ಆಗಿರಿ, ಯಾರೇ ಆಗಿರಿ, ಸ್ವಯಂ ಕ್ರಿಯಾಶಾಕ್ತರಿನ್ನವರಾಗಿ ಜಗತ್ತಿಗೆ ಮಾರ್ಗದರ್ಶಕರಾಗಬೇಕು ಒಬರನ್ನು ನೋಡಗೊಳಿಸುವ ಬೋಧೆಯಿಂದ ಯಾವ ಸುಖವೂ ಇಲ್ಲವೆಂಬುದನ್ನು ತ್ಯಾಗಿಯಲ್ಲಿಯೂ ಸ್ಫುರಿಸಬೇಕು ಯೌವನದ ಮದೆದಲ್ಲಿ ಈಗ ರಂಭೆಯಂತೆ ತೋರುತ್ತಿರುವ ನಾರಿಯು ೭೦ ವರ್ಷಗಳು ಕಳೆದ ಮೇಲೆ ಮಾರಿಯಂತೆ ತೋರಹತ್ತುವಳೆಂಬುವಲ್ಲು ಮರೆ ಯಬಾರದು. ಆದುದರಿಂದ,ತತ್ಪುರೋಜ್ಞನ್ಮದ್ವಿಯನ್ನು ಒಯಸಿತಕ್ಕವರು ಸರ್ವಾನರ್ಥಕ್ಕೆ ಕಾರಣೀಭೂತವಾದ ಸ್ತ್ರೀ ಮೋಹನವನ್ನೂ ನಾನು ನನ್ನದು ಎಂಬ ಅಹಂಕಾರ ಮಮಕಾರಗಳನ್ನೂ ತೊರೆದು. ವಿವೇಕ, ವೈರಾಗ್ಯ, ಸತ್ಯಂಗಾದಿ ಸಾಧನಸಂಲಂದ ಮನಸ್ಸನ್ನು ನಿರ್ಮಲ ಗೊಸಿ ಇಹಪರಗಳರಿಡನ್ನೂ ಸಾಧಿಸಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕು.

ವರ್ತ್ಮಾನಸಂಗ್ರಹ

ರಿಸರ್ವ್ ಬ್ಯಾಂಕಿಗೆ ಆಜ್ಞೆ ಮಾಡಲು ಭಾರತಸರ್ಕಾರಕ್ಕೆ ಅಧಿಕಾರವಿಲ್ಲ

ಆ ಅಧಿಕಾರ ಬ್ರಿಟಿಷ್ ಪೊರೆಗಳಿಗೆ ಸೇರಿದುದು

ಪಾಕಿಸ್ತಾನಕ್ಕೆ ಸಲ್ಲಬೇಗಾದ ೫೫ ಕೋಟಿ ರೂ ಗಳನ್ನು ಪಾವತಿ ಮಾಡಕೂಡದೆಂದು ಭಾರತ ಸರ್ಕಾರವು ರಿಸರ್ವ್ ಬ್ಯಾಂಕಿಗೆ ಸೂಚನೆ ಇತ್ತಿರುವುದು ನ್ಯಾಯ ಬಾಹಿರವಾದ ವರ್ತನೆ ಇದೆಂದು ಪಾಕಿಸ್ತಾನದ ವಿತಾರದಲ್ಲಿ ಅಸಭ್ಯರೀತಿಯಲ್ಲಿ ವರ್ತಿಸಿದಂತಾಗಿದೆ-ಎಂಬುದಾಗಿ ಪಾಕಿಸ್ತಾನದ ಸಚಿವರಾದ ಮಿ|| ಗುಲಾಂ ಮೆಹಮದ್ ರವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ರಿಸರ್ವ್ ಬ್ಯಾಂಕಿಗೆ ಸೂಚನೆ ಕೊಡಲು ಉಭಯ ದೊಮಿನಿಯನ್‌ಗಳಿಗೂ ಅಧಿಕಾರವಿಲ್ಲವೆಂಬುದನ್ನು ಸ್ವಸ್ಥ ಪಡಿಸುತ್ತಾ ಅವರು " ರಿಸರ್ವ್ ಬ್ಯಾಂಕಿನಲ್ಲಿರುವ ನಗದು ಹಣದ ಮೇಲಿನ ಅಂತಿಮ ಅಧಿಕಾರವು ಬ್ರಿಟಿಷ್ ರೊರೆಗಳಿಗೆ ಸೇರಿದೆ" ಎಂದು ತಿಳಿಯಪಡಿಸಿದರು ಒಂದು ವೇಳೆ ರಿಸರ್ವ್ ಬ್ಯಾಂಕಿನಿಂದ ಪಾಕಿಸ್ತಾನಕ್ಕೆ ಹಣ ಸಂದಾಯವಾಗದಿದ್ದರೆ ಆಗ ಪಾಕಿಸ್ತಾನವು ಈ ಸಮಸ್ಯೆಯನ್ನು ಇನ್ನೂ ಉನ್ನತ ಅಧಿಕಾರಿಗಳೊಡನೆ ಚರ್ಚಿಸ ಲಾಗುವುದೆಂದು ತಿಳಿಸಿದರು.

ರಿಸರ್ವ್ ಬ್ಯಾಂಕಿಗೆ ಪಾಕಿಸ್ತಾನದ ಸೂಚನೆ

ಅಧಿಕೃತ ಒಪ್ಪಂದದ ಪ್ರಕಾರ ಪಾಕಿಸ್ತಾನಕ್ಕೆ ಒಟ್ಟೇ ಕಾಡ ೫೫ ಕೋಟಿ ರೂಗಳನ್ನು ಕೊಡಲು ಭಾರತ ಸರ್ಕಾರವು ನಿರಾಕರಿಸಿರುವುದರಿಂದ ಆ ವಿಷಯದಲ್ಲಿ ಪಾಕಿತ ಮಾಡಬೇಕೆಂದು ಪಾಕಿಸ್ತಾನವು ಬಾರತದ ರಿಸರ್ವ್ ಬ್ಯಾಂಕಿಗೆ ಸೂಚನೆ ಕೊಟ್ಟಿದೆ ಒಂದು ವೇಳೆ ರಿಸರ್ವ್‌ಬ್ಯಾಂಕ್ ಸಂಸ್ಥೆಯೂ ಈ ಸೂಚನೆಗೆ ಮನ್ನಣೆ ಕೊಡದಿದ್ದರೆ ಪಾಕಿಸ್ತಾನದ ಖಚಿತ ಅನುಮತಿ ಪಡೆದೆ ಭಾರತವು ಉಳಿದಿರುವ ಜಾಯಿಂಟ್ ನಗದು ಹಣವನ್ನು ಉಪಯೋಗಿಸಕೂಡದೆಂದು ಪಾಕಿಸ್ತಾನವು ಎಚ್ಚರಿಕೆ ಇತ್ತಿದೆ

ಹೈದರಾಬಾದಿನಿಂದ ಪಾಕಿಸ್ತಾನಕ್ಕೆ ಸಾಲ !

ಹೆಚ್ಚು ನಿಷಯ ಸಂಗ್ರಹಿಸಲು ಭಾರತ ಸರ್ಕಾರದ ಪ್ರಯತ್ನ

ಹೈದರಾಬಾದ ಸಂಸ್ಥಾನ ಸರ್ಕಾರವು ಪಾಕಿಸ್ತಾನಕ್ಕೆ ೨೫ ಕೋಟಿ ರೂ ಸಾಲಕೊಡಲು ನಿರ್ಧರಿಸಿದೆಯೆಂಬು ದಾಗಿ ಒಂದಿರುವ ವರದಿ ಕುರಿತು ಹೆಚ್ಚಿನ ವಿಷಯವನ್ನು ಸೆಂಗ್ರಹಿಸಬೇಕೆಂದು ಭಾರತ ಸರ್ಕಾರದವರು ಹೈದರಾ ಬಾದಿನಲ್ಲಿರುವ ವಿಜೆಂಟ್ ಜನರಲ್‌ರವರಿಗೆ ಸೂಚನೆ ಇತ್ತಿರುವುದಾಗಿ ತಿಳಿದುಬಂದಿದೆ

ಹೀಗೆ ಭಾರತ ಸರ್ಕಾರಕ್ಕೆ ತಿಳಿಸದೆ ಮತ್ತೊಂದು ಸ್ವತಂತ್ರ ದೇಶಕ್ಕೆ ಸಾಲಕೊಡುವುದು ಸೈದಾಬಾದು ನುತ್ತು ಭಾರತ ಸರಕಾರಗಳಿಗೆ ಆಗುವ ಒಪ್ಪಂದಕ್ಕೆ ವಿರುದ್ಧವಾಗಿದೆಯೆಂಬು ಅಧಿಕಾರಿಯತ್ತ ಕ್ಷೇತ್ರಗಳಲ್ಲಿ ತಿಳಿಸಲಾಗಿದೆ

ಸಾಲ ಕೊಟ್ಟರೆ ತಪ್ಪೇನು

ನಿಜಾಮ ಸರ್ಕಾರವು ಪಾಕಿಸ್ತಾನಕ್ಕೆ ೨೫ ಕೋಟಿರೂ ಸಾಲಕೊಡಲು ಒಪ್ಪಿದೆಯೆಂಬ ವಾರ್ತೆಯ ಬಗ್ಗೆ ನಿಜಾಂ ಸರಕಾರದವರು ಇಲ್ಲ ಅಥವಾ ಉಂಟು ಎಂದು ಕೂಡ ಹೇಳಲು ಇಸ್ಟವುಳ್ಳವರಾಗಿಲ್ಲ ಈ ವಿಚಾರವನ್ನು ಬಹಳ ರಹಸ್ಯವಾಗಿಟ್ಟಲಾಗಿದೆ ಸಾಲವು ಇನ್ನೂ ಕೊಡಲ್ಪಟ್ಟಿಲ್ಲ ವೆಂದು ಹೆಲವು ಕ್ಷೇತ್ರಗಳಲ್ಲಿ ತಿಳಿಸಲಾಗಿದೆ ತಾಗೆ ಸಾಲಕೊಡುವುದರಲ್ಲಿ ತಪ್ಪೇನಿದೆ? ಹೈದರಾಬಾದಿನವರು ೮೦ ಕೋಟಿ ರೂ ಗಳನ್ನು ಭಾರತದಲ್ಲಿ ಬಂಡವಾಳ ಹಾಕಿ ರುವಾಗ ಸ್ವಲ್ಪ ಹಣವನ್ನು ಪಾಕಿಸ್ತಾನದಲ್ಲಿ ಪಾಕುವು ದೇನು ತಪ್ಪು? ಹೀಗೆ ಸಾಲ ಕೊಡುವುದು ತಾರ್ಕಿಕ್ಯಕ್ಕೆ ಒಪ್ಪಂದಕ್ಕೇನೂ ವಿರುದ್ಧವಾಗಿಲ್ಲ ಎಂದು ಸೂಚಿಸ ಲಾಗಿದೆ

ನಿಜಾಂ ಸರ್ಕಾರದ ಹಣಕಾಸಿನ ಮಂತ್ರಿಗಳು ದೆಹಲಿಗೆ ತೆರಳಿರುವರು ಒಹುತಃ ಅಲ್ಲಿ ಈ ಬಗ್ಗೆ ಮಾತು ಕತೆ ನಡೆಬಹುದು ಸಾಲ ಕೊಡುವುದು ನಿಜವೆಂದು ಇತ್ತೀಚೆಗೆ ಪ್ರಕಟವಾಗಿದೆ

ಮುನಿಸಿಯವರ ವಾಸಕ್ಕೆ ರಿಸಿಡೆನ್ಸಿ ಕೊಡಲು ನಿಜಾಮರ ತಕರಾರು

ಹೈದ್ರಾಬಾದಿಗೆ ಭಾರತದ ವಿಜೆಂಟ್ ಜನರಲ್ಲಾಗಿ ನೇಮಕವಾಗಿರುವ ಶ್ರೀ ಕೆ. ಎಂ. ಮುನಿಸಿಯವರಿಗೆ ವಾಸವಾಗಿರಲು ಹೈದ್ರಾಬಾದಿನಲ್ಲಿರುವ ಅಥವಾ ಬೇಲಾ ರಾಂನಲ್ಲಿರುವ ರಿಸಿಡೆನ್ಸಿ ಭವನಗಳನ್ನು ಕೊಡಲಾಗದೆಂದು ನಿಜಾಮರು ಹಟ ಹಿಡಿದಿದ್ದಾರೆ ಶ್ರೀ ಮುನಿಸಿಯವರು ಅಲ್ಲಿ ವಾಸಮಾಡುವುದಾದರೆ ಬ್ರಿಟಿಷ್ ರೆಸಿಡೆಂಟರ ದರ್ಜೆಗೆ ಬಂದಂತೆ ಎಂದು ನಿಜಾಮರು ವಾದಿಸಿ ಇನ್ನೂ ತಾವಾಗಲಿ ತಮ್ಮ ಸರಕಾರವಾಗಲೀ ಸಹಿಸುವದಿಲ್ಲವೆಂದು ಹೇಳಿದರು ಇಂತಹ ಸಣ್ಣಪುಟ್ಟ ವಿಷಯಗಳ ಮೇಲೆ ಹೈದ್ರಾಬಾದ್ ಭಾರತದ ಮಧುರ ಬಾಂಧವ್ಯಕ್ಕೆ ಧಕ್ಕೆ ಸರಬಾರದೆಂದು ಭಾರತದ ಗೌರ್ನರ್ ಜನರಲ್ಲಾದ ಮೌಂಟ್ ಬ್ಯಾಟನ್‌ರವರು ಬರೆದ ಮೇಲೆ ಜನವರಿ ೧೫ನೇ ತಾ|| ನರೆಗೆ ಸ್ವಾತ್ರ ರಿಸಿಡೆನ್ಸಿ ಭವನಗಳನ್ನು ಶ್ರೀ ಮುನಿಸಿಯವರಿಗೆ ಕೊಡಲು ನಿಜಾಮರು ಒಪ್ಪಿಕೊಂಡಿ ದ್ದಾರೆ ಈ ಅವಧಿಯ ಮೇಲೆ ಅವರು ಅಲ್ಲಿ ಇರಲಾಗ ದೆಂದು ನಿಜಾಮರು ಒತ್ತಿಹೇಳಿದ್ದಾರೆ

ಶ್ರೀ ಕೆ. ಎಂ. ಮುನಷಿಯವರು ನಿಜಾಮರನ್ನು ಭೇಟಿನೂಡಿದರು

ಭಾರತದ ವಿಜೆಂಟ್ ಜನರಲ್ ಆದ ಶ್ರೀ ಕೆ ಎಂ. ಮುನಷಿಯವರು ೮ನೇ ತಾ|| ದಿನವೆ ಅರಮನೆಯಲ್ಲಿ ನಿಜಾಮರನ್ನು ಕಂಡು ೪೦ ನಿಮಿಷಗಳ ಕಾಲ ಸಂಧಾ ನೆ ನಡೆಸಿದರು ಮುಖ್ಯ ಸಚಿವರಾದ ನಿ|| ಲಿಯಾಕ್ ಅಲಿಯವರು ಸಹ ಆಗ ಹಾಜರಿದ್ದರು

ಕಾಶ್ಮೀರದ ಯುದ್ಧ ಬಹಳ ಬಿರುಸಾಗಿದೆ

ಜಮ್ಮು ರಣಕ್ಷೇತ್ರದಲ್ಲಿ ಭಾರತೀಯ ಪಡೆಗಳು ೪೫೦೦ ಪಾಕಿಕಾರರ ಸಮೂಹದೊಡನೆ ೮ ಗಂಟೆಗಳ ಕಾಲ ಅನಿಶ್ಚಿಂತವಾಗಿ ಹೋರಾಡಿ ಶತ್ರುಗಳಿಗೆ ಸಾವು ನೋವುಗಳನ್ನುಂಟುಮಾಡಿವೆ. ಕ್ಷದನವು ಬಿರುಸಾಗಿ ನಡೆಯಿತೆಂದು ವರದಿಯಾಗಿದೆ. ಸುಮಾರು ೫೦೦ ಮುಂದಿ ಪಾಕಿಕಾರರು ಸತ್ತಿರಬಹುದೆಂದು ಅಂದಾಜು ಮಾಡಲಾಗಿದೆ

ಭಾರತದ ಯೋಧರು ಆಕ್ರತಿಮ ಸಾಹಸದಿಂದ ಹೋರಾಡಿ ಶತ್ರುಗಳು ಹಿಮ್ಮೆಟ್ಟುವಂತೆ ನೂಡುತ್ತಿದ್ದಾ ರೆಂದು ತಿಳಿದು ಬಂದಿದೆ ಪಾಕಿಕಾರರೆಲ್ಲರೂ ಬಿಲಿಟೆರಿ ಯೂನಿಫಾರಂ ದರಿಸಿ ಬಿಲಿಟರಿ ಚಾತುರ್ಯವನ್ನು ಪ್ರದರ್ಶಿಸುತ್ತಿದ್ದಾರೆಂದು ಹೇಳಲಾಗಿದೆ ಸತ್ತ ಪಾಕಿಕಾರ ರೆನ್ನು ಪರೀಕ್ಷಿಸಲಾಗಿ ಅವರೆಲ್ಲ ಹೆಚ್ಚು ಮಂದಿ ಪಶ್ಚಿಮ ಸಂಜಾಬಿನ ಪರಾಣರಾಗಿದ್ದರು ಕೆಲವು ಪರಾಣರೂ ಪಾಕಿಯಲ್ಲಿ ಭಾಗವಹಿಸಿದ್ದರೆಂದು ತಿಳಿದು ಬಂದಿದೆ

ಭಾರತ-ಕಾಶ್ಮೀರ ಸಂಜಾರ ಮಾರ್ಗಗಳಿಗೆ ಯಾವ ಅಪಾಯವೂ ಉಂಟಾಗಿರುವುದಿಲ್ಲ

ಅಮೇರಿಕಕ್ಕೆ ಷೇಕ್ ಅಬ್ದುಲ್ಲಾರವರೂ ಸಹ ಪ್ರಯಾಣಮಾಡಿದರು

ಭದ್ರತಾ ಸಮಿತಿಯ ಅಧಿವೇಶನದಲ್ಲಿ ಕಾಶ್ಮೀರ ಪ್ರಶ್ನೆ ಯನ್ನು ಪ್ರತಿಪಾದಿಸಲು ನೇಮಕವಾಗಿರುವ ಭಾರತ ನಿಯೋಗಿಗಳು ಜನವರಿ ೮ನೆಯ ತಾ|| ಬೊಂಬಾಯಿ ಯಿಂದ ಅಮೆರಿಕಾಕ್ಕೆ ಪ್ರಯಾಣ ಮಾಡಿತು ಶ್ರೀ ಎ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ನಿಯೋಗದ ನಾಯಕರು ಶ್ರೀ ಎಂ. ಸಿ ಶೆಟೆಲ್‌ವಾಡ್‌ರವರು ನಿಯೋಗದ ಸದಸ್ಯರು

ಕಾಶ್ಮೀರದ ತಾತ್ಕಾಲಿಕ ಪ್ರಧಾನ್ತ್ರಿಯ ಪ್ರಧಾನ ಅಧಿ ಕಾರಿಗಳಾದ ಷೇಕ್ ಮಹಮದ್ ಅಬ್ದುಲ್ಲಾರವರೂ ಸಹ ಲೇಕ್ ಸಕ್ಸಸ್‌ಗೆ ಹೋಗಿರುವರು.

ಕಾಶ್ಮೀರದ ಬಗ್ಗೆ ಸರ್ ಕ್ರಿಪ್ಸ್‌ರ ಹೇಳಿಕೆ

ಪಾಕಿಸ್ತಾನ ಮತ್ತು ಭಾರತಗಳ ವ್ಯವಹಾರವು ಅಂತರ ರಾಷ್ಟ್ರೀಯ ಪ್ರಶ್ನೆ. ಇದನ್ನು ಸೂಕ್ಷ್ಮವಾಗಿ ಬಗೆ ಹರಿಸಬೇಕಾದರೆ ಎರಡು ಪಕ್ಷಗಳೂ ಸಹನೆ ಮತ್ತು ರಾಜಕೀಯ ನಿವುಣತೆಯನ್ನು ಪ್ರದರ್ಶಿಸಬೇಕು ಎಂದು ದಾಗಿ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ತಿಳಿಸಿದ್ದಾರೆ.

ಬೆಂಗಳೂರು ಜಿಲ್ಲೆಗೆ ನೂತನ ಡೆಪ್ಯುಟಿ ಕಮೀಷನರು

ಆಹಾರ ಇಲಾಖೆಯ ಹೆಚ್ಚಿನ ಡೈರೆಕ್ಟರಾಗಿ ಕೆಲಸ ನೂಡುತ್ತಿದ್ದ ಅಕ್ಕೌಂ ಡೆಪ್ಯುಟಿ ಕಮೀಷನರ್ ದರ್ಜೆಯ ಅಧಿಕಾರಿಗಳಾದ ಮಿ|| ಸೈಯ್ಯದ್ ಅಬ್ದುಲ್ ಖಾದರ್‌ರವರನ್ನು ಬೆಂಗಳೂರು ಜಿಲ್ಲಾ ಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ಸಿದ್ಧಾಂತ ಶಿಖಾಮಣಿ

ವೀರಶೈವಮತಸಿದ್ಧಾಂತ ಜನ್ಮಧಾರಣಮಾಡಿದ ಪ್ರತಿಯೊಬ್ಬ ಶಿಷ್ಟಾಂತರಶಿಖಾಮಣಿ-ಶ್ರೀಲಶ್ರೀ ಪ್ರಾಣದಂತಿರುವುದೆ ಈ ಮಹಾಗ್ರಂಥದಲ್ಲಿ ಶ್ರೀಮದ್ಗುರು ಕಾಶೀನಾಥಶಾಸ್ತ್ರಿಯವರು ಜಗದ್ವಿಖ್ಯಾತರಾದ ಆಸ್ಥಾನಮಹಿದ್ವಾಂಸರುಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಿಸುವ ಪ್ರತಿಜ್ಞೆಯನ್ನು ಅನುಷ್ಠಾನಮಾಡಿದ ವಿಷಯವನ್ನು ಪ್ರತಿಪಾದಿಸಲ್ಪಟ್ಟಿರುತ್ತದೆ. ಈ ಗ್ರಂಥವು ಈಗ್ಗೆ ಸುಮಾರು ೨೫ವರ್ಷಗಳ ಹಿಂದೆ ಮೈಸೂರು ಮಹಾರಾಜರವರ ಆಸ್ಥಾನ ವಿದ್ವಾಂಸರಾಗಿದ್ದ ಶ್ರೀಮದ್ಗುರು ಕಾಶೀನಾಥಶಾಸ್ತ್ರಿಯವರಿಂದ ಪ್ರಾರಂಭವಾಗಿ ಅವರ ಸ್ವರ್ಗಾರೋಹಣಾನಂತರ ಅವರ ಶಿಷ್ಯರಾದ ಶ್ರೀಮದ್ಗುರು ಕಾಶೀನಾಥಶಾಸ್ತ್ರಿಯವರಿಂದ ಪೂರ್ಣಗೊಳಿಸಲ್ಪಟ್ಟಿರುತ್ತದೆ. ಈ ಗ್ರಂಥದಲ್ಲಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದನಂತರ ಗಂಡಿತರ ಪ್ರಾಮಾಣ್ಯದ ಮಹತ್ವವು ಸ್ಪಷ್ಟವಾಗಿ ವೇದವಾಕ್ಯವಾಗುವುದು ಪಾಶ್ಚಿಕರು ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು ಸರ್ವಾಂಗ ಸುಂದರವಾಗಿ ಪ ಎಲ್ಲಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಭಾವನಾ ಸಾರವಾಗಿ ಶ್ರೀಜಗದ್ಗುರುವೀರ ಕಾಚಾರ್ಯರ ಲೀಲಾತ್ಮಕವಾದ ಮನೋರಂಜನಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರು ವಿನಿಂತಿರುವ ಈ ಅಪೂರ್ವಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಲೇಳು ಬೆಲೆ ೨ ರೂಪಾಯಿ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಪ್ಪಟಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮನಮೋಹಕವಾದ) ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹಾಸ್ಥಳಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ ೦—೩—೦

" " " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಪಂಡಿತಾರಾಧ್ಯರಿಗೆ ಚಂದ್ರಮತಿಶೇಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಧೀಪಾಸನ ಕ್ರಾಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಂಠಮಾಲೆಧಾರಣಮಾಡುವ ಫೋಟೋ ೦—೧—೬

ಶ್ರೀಮಮ್ಮಡಿಯೋ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .. ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಸುಜಾಸ್ಥಾ ಮಿಗಳವರ ಫೋಟೋ ೦—೧—೬

ಶ್ರೀಮಮ್ಮಡಿಯೋ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೦—೩—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಧ್ವಾರದ ಅತ್ಯಂತ ಸುಂದರವಾದ ಫೋಟೋ ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಳೆಟ್ಟಿಪದ ಸುಂದರ ಫೋಟೋ ೦—೧—೬

ಶ್ರೀ ಜಗದ್ಗುರು ಕೇದಾರನಿಂಬಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರರು ವಿರಾಜಿಸುತ್ತಿರುವ ಫೋಟೋ ೦—೧—೬

ಲೆಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಅಷ್ಟಸಹಸ್ರಿಕ ಮಹೋತ್ಸವದ ಫೋಟೋ ೦—೧—೬

ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ	ವೀರಶೈವಮಹಾತ್ಮರು	೮ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ಬಸವಧ್ಯಾಂಕದಿವಾಕರ (೩ನೆಯ ಆವೃತ್ತಿ)	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) -	೧ ಆಣೆ	ಆಗಮಪರಿಜ್ಞಾನ	೮ ಆಣೆ
ಸಂಪ್ತಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೨ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	೩ ಆಣೆ	ಸದ್ಯೋಧರತ್ನಾವಳಿ ..	೮ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ	ಸಿದ್ಧಾಂತನಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) -	೧೨ ಆಣೆ
ಬಸವಾದಿಶಿವಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ -	೧೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ	ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) .	೩ ಆಣೆ	ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೩ನೆಯ ಆವೃತ್ತಿ) •	೧। ರೂ
ಶ್ರೀರುದ್ರಮುನಿಶಿವಾಚಾರ್ಯಶತಕ ...	೩ ಆಣೆ	ಶ್ರೀಕರಭಾಷ್ಯಂ (ಚಮಸ್ಸೂಶ್ರೀ) -	೧॥ ರೂ
ಶಿವಶಕ್ತಿವಿಲಾಸ -	೩ ಆಣೆ	ವೀರಶೈವವಿಮರ್ಶ (ಜನೆಯ ಆವೃತ್ತಿ. ೪೦ ಮಹತ್ತರ ಫೋಟೋಗಳಿರುವುದು)	೨ ರೂ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ -	೨ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರವಿದೆ)	೨ ರೂ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ) -	೨ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಪಂಚಾಚಾರ್ಯಪ್ರಕಾಶ ...	೩ ಆಣೆ	ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಪಂಚಾಚಾರ ಪ್ರಕಾಶಿಕಾ	೩ ಆಣೆ		
ವೀರಶೈವಾಚಾರವಿಧಿ (೪ನೆಯ ಆವೃತ್ತಿ) .... -	೪ ಆಣೆ	ಶಿವಾದ್ವೈತಮಂಜರಿ (ಕನ್ನಡ ದೇವ್ಯಾಖ್ಯಾನ ೧೫೪೪ ಪುಟ) -	೮ ರೂ
ಲಿಂಗಧಾರಣವಿಧಿ	೪ ಆಣೆ		
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ	**A brief life-sketch of Pandit Sri Kashinatha Shastrya** (*English*)	4 As
ಶ್ರೀಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ	**The Philosophical Aspect of Viraasaivism** (*English*) ..	8 As
ಕೈವೋಪನಿಷತ್ಸಂಗ್ರಹ (ಸಂಸ್ಕೃತ) -	೪ ಆಣೆ	**Speeches by Pandit Shri Kashinatha Shastriji** (*English*)	12 As
ವೀರಶೈವ ಪ್ರಾಯಶ್ಚಿತ್ತವಿಧಿ -	೪ ಆಣೆ	**ಶಿಷ್ಟಾಚಾರಚಂದ್ರಿಕಾ** (ಸಂಸ್ಕೃತ)	೩ ಕ.
ವೈದಿಕಾನ್ಯುದರೆಹಸ್ಯ	೪ ಆಣೆ	**ಶೀಲಧಾರಣ** (ಸಂಸ್ಕೃತ)	೧ ಕ.
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) -	೬ ಆಣೆ	**ಮಹಾಚಾರಚಂದ್ರಿಕಾ** (ಶೀಲಧಾರಣ-ಸಂಸ್ಕೃತ)	೧ ಕ.
ವೀರಶೈವಾಂತ್ಯೇಷ್ಟಿ—ಕ್ರಾದ್ಧವಿಧಿ - -	೬ ಆಣೆ	**ಶಂಕಿತೋದ್ಧಾರಕಾರಿಕಾ** (ಸಂಸ್ಕೃತ)	೨ ಆ.
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) -	೪ ಆಣೆ		
ಶಿವಾದ್ವೈತಪರಿಭಾಷಾ (ಸಂಸ್ಕೃತ)	೪ ಆಣೆ		

ಮ್ಯಾನೇಜರ್—ಶ್ರೀಪಂಚಾಚಾರ್ಯಾ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sriyaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿಕರ್ ಪಂಚಾಸ್ಯವೀರಾಧಿಪರ್ । ಪಂಚಕ್ಲೇಶವಿನಾಶಕರ್ ಪರಿತರತ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಜಾರ್ಯಜಗದ್ಗುರೂಕ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವಳದನಿರಿಗೆ ೨ ರೂ ೪ ಆಣೆ ಪರಸ್ವಳದನಿರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೯ನೇ ಜನವರಿ ೧೯೩೮ [ಸಂಚಿಕೆ ೩೪

॥ ಶ್ರೀಜಗದ್ಗುರು ವಿಶ್ವಾರಾಧ್ಯಾಯ ನಮಃ ।

ಭಸ್ಮಧಾರಣೆ ಮತ್ತು ಧರಿಸುವ ಕ್ರಮ

ಲೇ॥ ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಟ್ಟೂರು

ಭಸ್ಮವನ್ನು ಮಾಡುವ ಕೆಲವರು ಶಾಸ್ತ್ರದ ಕ್ರಮವು ಗೊತ್ತಿಲ್ಲದಾಗಲಿ, ಕೆಲವರು ಗೊತ್ತಿದ್ದರೂ ಕ್ರಮವಾಗಿ ಮಾಡುವದು ಕಠಿನವೆಂದು ತಿಳಿದು ದೊಡ್ಡಿನ ಆಕೆಗಾಗಿ ಸಿಕ್ಕ ಸಿಕ್ಕ ಕುಳ್ಳು-ಕಟ್ಟಿಗೆಗಳ ಬೂದಿಯಿಂದಾಗಲಿ, ಕುಲುಮೆಯೊಳಗಿನ ಬೂದಿಯಿಂದಾಗಲಿ, ಗುಡ್ಡುಮೊಳಗಿನ ಬೆಳಮಣ್ಣಿನಿಂದಾಗಲಿ ಮಾಡಿ ಜಾತ್ರೆ ಮೊದಲಾದವು ಗಳಲ್ಲಿ ಅಗ್ಗವಾಗಿ ಮಾಡಬಹುದೆಂದು ಹೀಗೆ ಕ್ರಮಬದ್ಧವಿಲ್ಲದೆ ಮಾಡಿ ಜಾತ್ರೆ ಮೊದಲಾದವು ಗಳಲ್ಲಿ ಅಗ್ಗವಾಗಿ ಮಾಡಬಹುದೆಂದು ಹೀಗೆ ಕ್ರಮಬದ್ಧವಿಲ್ಲದೆ ಮಾಡಿ ನಾವು ಶಾಸ್ತ್ರಕ್ರಮವಿಂದ ಮಾಡಿರುವೆವೆಂದು ಜನರನ್ನು ವಂಚಿಸಿ, ವ್ಯವಹಾರಮಾಡುವ ಜನರು ಧರ್ಮದ್ರೋಹಿಗಳಾಗುವರಲ್ಲದೆ ಆ ಅಪಸ್ಮಾರವು ಅವರನ್ನು ನಾಶಮಾಡದೆ ಎಂದು ಬಿಡದು ನಾವು ಹೆಣ್ಣು ಹುಟ್ಟಲಿವೆನ್ನಾಗಲಿ, ಕಾಯಿಪಲ್ಲೆಯನ್ನಾಗಲಿ, ಧಾನ್ಯವನ್ನಾಗಲಿ ಅಗ್ಗವೆಂದು ತೆಗೆದುಕೊಂಡು ಸೇವಿಸಿದರೆ ಅದರಿಂದ ಆರೋಗ್ಯವು ಹೇಗೆ ಉಂಟಾಗುವದಿಲ್ಲವೋ ಹಾಗೆ ಅದರಂತೆ ಬೆಲೆ ಕಡಿಮೆಯೆಂದು ಕ್ರಮದಲ್ಲಿ ಮಾಡಿದ ಭಸ್ಮವನ್ನು ತೆಗೆದುಕೊಂಡು ಧರಿಸಿಕೊಳ್ಳುವದರಿಂದ ಅದರ ಸಿದ್ಧಿಯೂ, ಫಲವೂ ಸಿಗಲಾರದು ಆದುದರಿಂದ ಜನರು ದುಡ್ಡಿನ ಕಡೆಗೆ ಲಕ್ಷ್ಯಗೊಡದೆ ಧರ್ಮದ ಕಡೆಗೆ ದೃಷ್ಟಿಯನ್ನಿಟ್ಟು ಹೆಚ್ಚು ಬೆಲೆಯನ್ನಾದರೂ ಕೊಟ್ಟು, ಕ್ರಮದಿಂದ ಮಾಡಿದ ವಿಭೂತಿಯನ್ನು ತೆಗೆದು ಕೊಂಡು ಧರಿಸಿ ಅದರ ಫಲವನ್ನು ಪಡೆಯಬೇಕು

ವಿಭೂತಿಯು ತಯಾರಾದ ಮೇಲೆ ಇದು ಕ್ರಮ ದಿಂದ ಆದುದೇ ಅಥವಾ ಅಕ್ರಮವಾಗಿ ಆದುದೇ ಎಂದು ಕಂಡುಹಿಡಿಯುವದು ಯಾರಿಂದಲೂ ಸಾಧ್ಯ ವಿಲ್ಲ. ಗುರುವರ್ಗದವರಾಗಲಿ, ಪ್ರಮುಖಭಕ್ತರಾಗಲಿ ಗುರ್ತುಪರಿಚಿಯಿಂದ ವಿಭೂತಿಮಾಡುವ ಕಾರಣಾನೆಗೆ ಹೋಗಿ ವಿಜಸ್ಥಿತಿಯನ್ನು ಕಂಡುಹಿಡಿದು ಕ್ರಮತಪ್ಪಿ ಮಾಡುವವರಿಗೆ ಧರ್ಮಪದ್ಧತಿಪ್ರಕಾರ ತಕ್ಕ ಶಾಸನ ಮಾಡಬೇಕು ಮತ್ತು ಕ್ರಮದಂತೆ ವಿಭೂತಿಯನ್ನು ತಯಾರಿಸುವ ಕಾರಣಾನೆಗಳನ್ನು ಅಲ್ಲಲ್ಲಿ ಸ್ಥಾಪಿಸಬೇಕು ಅಂದಾಗ ವೀರಶೈವ ಮತಕ್ಕೊಂದು ಮೊಡ್ಡ ಉಪಕಾರ ಮಾಡಿದಂತಾಗುತ್ತದೆ

"ವಿಭೂತಿರ್ಭೂತಿಹೇತುತ್ವಾತ್" ಅಣೆಮಾದಿ ಐಶ್ವರ್ಯಪ್ರಾಪ್ತಿಗೆ ಕಾರಣಭೂತವಾದುದರಿಂದ ಇದು ವಿಭೂತಿಯೆಂದು ಹೆಸರುಪಡೆದಿದೆ ವಿಭೂತಿರಚನಾ ಕ್ರಮವು—ವಿಭೂತಿಯು ಕಲ್ಪ, ಅನುಕಲ್ಪ, ಉಪಕಲ್ಪ, ಅಕಲ್ಪವೆಂದು ನಾಲ್ಕು ವಿಧವಾಗಿರುವದು ಗೋವನ್ನು ಮಡಿಸ್ನಾನಮಾಡಿಸಿ ಸಾತ್ವಿಕ ಆಹಾರವನ್ನು ತಾತೆ ಮಡಿಸೀರನ್ನು ಕಡಿಸಿ ಪವಿತ್ರಸ್ಥಾನದಲ್ಲಿ ಕಟ್ಟಬೇಕು ಸದ್ಯೋಜಾತಮಂತ್ರದಿಂದ ಗೋಮಯವನ್ನು ಅಂತರದಲ್ಲಿ ಹಿಡಿದು, ವಾಮದೇವನಮಂತ್ರದಿಂದ ಉಂಡೆ ಯನ್ನು ಮಾಡಿ, ತತ್ಪುರುಷಮಂತ್ರದಿಂದ ಒಣಗಿಸಿ ಅಘೋರಮಂತ್ರದಿಂದ ಸುಟ್ಟು ಈಶಾನಮಂತ್ರದಿಂದ ಬಿಲ್ವದ ಪಾತ್ರೆಯಲ್ಲಿಡಬೇಕು ಹೀಗೆ ರಚಿಸುವದೇ ಕಲ್ಪಭಸ್ಮವೆನಿಸುವದು ಯಾವದೋದೂ ನಿಯಮ ವಿಲ್ಲದ ಕಾಡಿನಲ್ಲಿ ಬಿದ್ದಿರುವ ಕಾಡುನೆರಣೆ (ಕುಳ್ಳು) ಗಳನ್ನು ಕೂಡಿದಾಕಿ ಸುಟ್ಟು ಒಡಿಸಿದಾಡಿಟ್ಟರೆ ಅದು ಅನುಕಲ್ಪಭಸ್ಮವೆನಿಸುವದು ಅಂಗಡಿಯಲ್ಲಿ ಮಾರುವ ವಿಭೂತಿಯನ್ನು ತಂದು ನೋಸಿ ಗೋಮೂತ್ರದಿಂದ ಉಂಡೆಗಳನ್ನು ಮಾಡಿ ವಿದಿಪ್ರಕಾರ ಅಗ್ನಿಯಲ್ಲಿ ಸುಟ್ಟರೆ ಅದು ಉಪಕಲ್ಪಭಸ್ಮವೆನಿಸುವದು ಮಂತ್ರತಂತ್ರ ಗಳೇನೂ ಇಲ್ಲದ ಸಂಗ್ರಹಸಲ್ಪಟ್ಟುದೇ ಅಕಲ್ಪಭಸ್ಮವೆನಿ ಸುವದು ಈ ನಾಲ್ಕುಪ್ರಕಾರದ ಭಸ್ಮಗಳೊಳಗೆ ಮೊದ ಲನೆಯ ಕಲ್ಪಭಸ್ಮವೇ ಶಾಸ್ತ್ರೀಯವಾದುದು ವೇದ ಮಾರ್ಗಾನುಯಾಯಿಗಳಾದವರೆಲ್ಲರೂ ಈ ನಾಲ್ಕುವಿಧ ಭಸ್ಮಗಳೊಳಗೆ ಕಲ್ಪಭಸ್ಮವನ್ನೇ ದರಿಸಬೇಕು ಇಂಥ ಶ್ರೇಷ್ಠವಾದ ಕಲ್ಪಭಸ್ಮವನ್ನು ತಯಾರಿಸಿ ತ್ರಿಕಾಲದಲ್ಲಿ ಗಲಿ, ದ್ವಿಕಾಲದಲ್ಲಾಗಲಿ, ಏಕಕಾಲದಲ್ಲಾಗಲಿ ವಿಧಿಗನು ಸಾರವಾಗಿ ಮೊದಲು ಭಸ್ಮಸ್ನಾನವನ್ನೂ, ಆನಂತರ ಉದ್ಧೂಲನವನ್ನೂ, ಆ ಮೇಲೆ ತ್ರಿಪುಂಡ್ರಧಾರಣವನ್ನೂ ಮಾಡಬೇಕು ಭಸ್ಮಸ್ನಾನಕ್ಕಿಂತ ಉದ್ಧೂಲನವು, ಉದ್ಧೂಲನಕ್ಕಿಂತ ತ್ರಿಪುಂಡ್ರಧಾರಣವು ಶ್ರೇಷ್ಠವಾಗಿರು ವದು ಸಾಧಕನಾದ ವೀರಶೈವನು ಪ್ರತಿದಿವಸವೂ ತನ್ನ ಶರೀರದ ಹದಿನೈದು ಸ್ಥಾನಗಳಲ್ಲಿ ಜಲಮಿಶ್ರವಾದ ವಿಭೂತಿಯಿಂದ ತ್ರಿಪುಂಡ್ರವನ್ನು ಧರಿಸಿಕೊಳ್ಳಬೇಕು. ೧ ಮಸ್ತಕ ೨ ಹಣೆ ೩ ಇ ಎರೆಡು ಕಿವಿಗಳು ೫ ಕಂಠ ೬ ಬಲ ಎರಡು ಭುಜಗಳು ೮ ಹೃದಯ ೯ ನಾಭಿ ೧೦ ಬೆನ್ನ, ೧೧ ೧೨ ಎರಡು ಬಾಹುಗಳು ೧೩ ಹೆಗಲು ೧೪ ೧೫ ಎರಡು ಮುಂಗೈಗಳು ಈ ೧೫ ಸ್ಥಾನಗಳಲ್ಲಿ ಆಯಾಯ ಮಂತ್ರವನ್ನು ಚ್ಚರಿಸುತ್ತ ತ್ರಿಪುಂಡ್ರಧಾರಣ ವನ್ನು ಮಾಡಬೇಕು ಮೊಕ್ತೆ ಸಾಧಕನಾದ ಮತ್ತು ಮಂಗಳಕರವಾದ ವಿಭೂತಿಯನ್ನು ಕೆಲವು ಇಂಗ್ಲಿಷ ಕಲಿತ ಮಹಾಶಯರು ಧರಿಸುವದಿಲ್ಲ ಕೆಲಜನ ಸ್ತ್ರೀಯರು ಸಹ ತಮ್ಮ ಮಕ್ಕಳಿಗೆ ವಿಭೂತಿಯನ್ನು ಧರಿಸದೆ ಅಶಾಸ್ತ್ರೀಯವೂ, ಅಮಂಗಲವೂ ಆದ ಕಾಡಿಗೆಯ ಚಿಕ್ಕೆ ಯನ್ನು ಹಣೆಯಲ್ಲಿಡುತ್ತಾರೆ ಧರ್ಮಭಿಮಾನಿಗಳು ಈ ಧರ್ಮವಿರೋಧಪದ್ಧತಿಯನ್ನು ದೂರಮಾಡಬೇಕು ಮತ್ತೆ ಕೆಲವರು ಎರಡು ಬೆರಳುಗಳಿಂದಲ್ಲಾ, ಒಂದೇ ಬೆರಳಿನಿಂದಲೂ ವಿಭೂತಿಯನ್ನು ಧರಿಸುತ್ತಾರೆ ಈ ಅಶಾಸ್ತ್ರೀಯಪದ್ಧತಿಯನ್ನು ದೂರಮಾಡಿ ತನ್ನ ವೈಷ್ಣವ ಕ್ಷತ್ರದ (ಬಲಗೈ) ಮಧ್ಯದ ಮೂರು(ತರ್ಜನಿ-ಮಧ್ಯಮ-ಅನಾಮಿಕಾ) ಬೆರಳುಗಳಿಂದ ಆರು ಅಂಗಲ ಉದ್ದ ವಾಗಲಿ, ಹಣೆಯುರುವಷ್ಟಾಗಲಿ, ಎರಡೂ ನೇತ್ರಗಳ ಸಮಾನಕ್ಕಾಗಲಿ ತ್ರಿಪುಂಡ್ರಧಾರಣವನ್ನು ಮಾಡಿಕೊಳ್ಳ ಬೇಕು

ತ್ರಿಪುಂಡ್ರೇಣ ವಿನಾ ಸಂಧ್ಯಾ ತ್ರಿಪುಂಡ್ರೇಣ ವಿನಾ ಜಪಃ ।
ತ್ರಿಪುಂಡ್ರೇಣ ವಿನಾ ಶಾಸ್ತ್ರಂ ರಾಕ್ಷಸಂ ಪರಿಕೀರ್ತಿತಂ ॥

'ಸಾಲ ೫೦ ಸಾವಿರ ಅದೆ ೧೪ ೧೫ ಸಾವಿರದಿಂದ ಇದನ್ನೆಲ್ಲ ತೀರಿಸಬಹುದು ನಾವು ೧೬ ಸಾವಿರ ರೂಪಾಯಿಗಳನ್ನು ಕೋರ್ಟಿನಲ್ಲಿ (ಇಂ ಬ್ಯಾಂ) ತುಂಬಿ ದ್ದೇವೆ ಆದ್ದರಿಂದ ಮರಕ್ಕೆ ಸಾಲದ ಭಯವು ಸರ್ವಷ ದೆಷ್ಟೂ ಇಲ್ಲ'

ಇದೇ ಸಮಯದಲ್ಲಿ ಬರೆದಿರುವ ಬೇರೊಂದು ಪತ್ರ ದಲ್ಲಿ— ನಮ್ಮ ಕಾಲದಲ್ಲಿ ಇಲ್ಲಿಗೆ ಒರುವನ್ನು ಆರೋಗ್ಯ ಮತ್ತು ಆಸೇಕ್ಷೆಗಳನ್ನು ಶ್ರೀಜಗದ್ಗುರು ವಿಶ್ವಾರಾಧ್ಯನು ನಮಗೆ ಅನುಗ್ರಹಿಸಲಿ ಎಂದರೆ ಈ ಶರೀರದಿಂದ ಶ್ರೀವಿಶ್ವಾರಾಧ್ಯನು ಎಷ್ಟು ಮಹತ್ಕರವಾದ ಕಾರ್ಯವನ್ನು ಮಾಡಿಸಿರುವನೆಂಬುದು ಗೊತ್ತಾಗುವುದು''

ಈ ಎಲ್ಲ ವಿಷಯಗಳನ್ನೂ ವಿಚಾರಮಾಡಿ ನೋಡಿ ದರೆ ಅವರಲ್ಲಿ ಕಾರ್ಯದಕ್ಷತೆಯು ಎಷ್ಟು ಅದ್ಭುತವಾಗಿ ತ್ತೆಂಬುದು ಪ್ರತಿಯೊಬ್ಬರಿಗೂ ಸ್ಪಷ್ಟವಾಗಿ ತಿಳಿದು ಬರುವದು ನಮ್ಮ ಪ್ರೋತ್ಸಾಹದಿಂದಲೇ ಅವರು ಪ್ರತಿ ಯೊಂದು ಕಾರ್ಯದಲ್ಲಿಯೂ ಮುಂದುವರೆಯುತ್ತಿದ್ದರು ಶ್ರೀಗಳವರಿಗೆ ಪಟ್ಟಾಭಿಷೇಕವಾದಮೇಲೆ ನಾವು ಕಾಶೀ ಕ್ಷೇತ್ರಕ್ಕೆ ಹೋಗಿರಲಿಲ್ಲ ನಮ್ಮನ್ನು ಅಲ್ಲಿಗೆ ಬರಮಾಡಿ ಕೊಳ್ಳಬೇಕೆಂಬುದು ಅವರ ಪೂರ್ಣ ಆಶೆಯಾಗಿತ್ತು. ಪ್ರತಿಯೊಂದು ಪತ್ರದಲ್ಲಿಯೂ ಇದೇ ಅಭಿಪ್ರಾಯವನ್ನು ಸೂಚಿಸುತ್ತಿದ್ದರು ಈ ಪತ್ರದಲ್ಲಿಯೂ ಸಹ ಅದೇ ರೀತಿ ಸೂಚಿಸಿದ್ದುದರಿಂದ, ಶಿವರಾತ್ರಿಯ ಸಮಯಕ್ಕೆ ಅಲ್ಲಿ ಹವೆಯು ಚೆನ್ನಾಗಿರುವುದರಿಂದ ಹೋಗಬೇಕೆಂದು ನಿಶ್ಚಯಿಸಿ, ಅವರಂತೆ ಪತ್ರವನ್ನು ಬರೆದುಕೊಳ್ಳಲಾಯಿತು ಅದಕ್ಕೆ ಶ್ರೀಗಳವರು—

'ಶಿವರಾತ್ರಿ ಕಾಣುವ ವಿಶ್ವಾಸವಿಲ್ಲ ವಿಶ್ವಾರಾಧ್ಯನ ಇಚ್ಛೆ' ಮುಂದೆ ಪತ್ರ ಒರೆಯುವುದಾಗುವುದೋ ಇಲ್ಲವೋ ? ''

ಎಂದು ತಾ॥ ೧೫-೧೧-೪೮ನೆಯ ಪತ್ರದಲ್ಲಿ ಅಪ್ಪಣೆ ಕೊಡಿಸಿದರು ಈ ಪತ್ರವು ೨೦ ನೆಯ ತಾರೀಖಿನ ದಿವಸ ಬಂದಿತು ನೋಡಿ ಆಸಾರವಾದ ದುಃಖ ವಾಯಿತು ನಮ್ಮ ಶರೀರಕ್ಕೆ ಎಷ್ಟು ಕಷ್ಟವಾದರೂ ಹೊರಡಬೇಕೆಂದು ಯೋಚಿಸುತ್ತಿರು ವಷ್ಟರಲ್ಲಿಯೇ, ೨೫ ನೆಯ ತಾರೀಖಿನ ದಿವಸ ಶಿವಾಧೀನ ರಾದೆವೆಂಬ ಹೃದಯವ್ಯಾಪಕವಾದ ವಿಷಾದ ವಾರ್ತೆಯು ಬಂದಿತು ಇದು ನಮ್ಮ ದೌರ್ಭಾಗ್ಯವೆಂದೇ ಹೇಳ ಬೇಕಾಗಿದೆ ಈಶ್ವರೇಚ್ಛೆಗೆ ಉಪಾಯವಿಲ್ಲ ಅಸ್ತು'

ಶ್ರೀಜಗದ್ಗುರುಗಳವರು ಸಕಲ ಶಾಸ್ತ್ರಗಳಲ್ಲಿ ಪಾರಂ ಗತರಾಗಿದ್ದರು ಕಾಶೀಕ್ಷೇತ್ರದಲ್ಲಿ ೧೨ ವರ್ಷಗಳ ವರೆಗೆ ಇದ್ದು ವೇದತೀರ್ಥ, ಕಾವ್ಯತೀರ್ಥ, ಸಾಂಖ್ಯತೀರ್ಥ ಸರ್ವದರ್ಶನತೀರ್ಥ ಇತ್ಯಾದಿ ದೊಡ್ಡ ದೊಡ್ಡ ಪರೀಕ್ಷೆ ಗಳಲ್ಲಿ ಉತ್ತೀರ್ಣರಾಗಿದ್ದರು ಅಲ್ಲದೆ ಆ ವೇಶವ ಮಹಾ ಮಹಾ ಪಂಡಿತರು ಇವರಿಗೆ ನಿದ್ಯಾನಿಧಿ, ವಿದ್ಯಾನಾಚಿ ಸ್ವತ ಇತ್ಯಾದಿ ವಿರುದುಗಳನ್ನು ಕೊಟ್ಟಿದ್ದರು ಇವರ ಮಾತೃಭಾಷೆಯು ತೆಲುಗು ಆಗಿದ್ದರೂ ಕನ್ನಡ, ಮಹಾ ರಾಷ್ಟ್ರ, ಹಿಂದಿ, ಸಂಸ್ಕೃತ ನೊದಲಾದ ಭಾಷೆಗಳಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರು ಈ ಎಲ್ಲ ಭಾಷೆಗಳ ಲ್ಲಿಯೂ ಅನ್ಗಳಿತವಾಗಿ ಭಾಷಣ ಮಾಡುತ್ತಿದ್ದರು. ನಿಷ್ಪತ್ತಾಪುರಿತವಾದ ಇವರ ಭಾಷಣವನ್ನು ಕೇಳಿ ಬಹು ಜನರು ಮುಗ್ಧರಾಗುತ್ತಿದ್ದರು ಇದಲ್ಲದೆ ಪ್ರಾಚೀನ ಶಾಸನಗಳನ್ನು ಓದುವುದರಲ್ಲಿ ಅದ್ವಿತೀಯವಾದ ಪಾಂಡಿತ್ಯ ವನ್ನು ಸಂಪಾದಿಸಿಕೊಂಡಿದ್ದರು ಅತೀಕ್ಷಣ ಕಾಲದ ಲಿಪಿಯನ್ನು ಸಹ ನಿರರ್ಗಳವಾಗಿ ಓದುತ್ತಿದ್ದರು. ಹಂಸಾಲಯ ಪ್ರಾಂತದಲ್ಲಿರುವ ಯಾವಂಬಲಂ ಒದಲು ಸಾಧ್ಯವಾಗದೆ ಇದ್ದ ಅತೀಕ್ಷಣ ಕಾಲದ ಒಂದು ಶಾಸನ ವನ್ನು ಓದಿ ಉತ್ತರ ಇಂಡಿಯಾದಲ್ಲೆಲ್ಲ ವಿಶೇಷವಾಗಿ ಕೀರ್ತಿಯನ್ನು ಪಡೆದಿದ್ದರು ವಿದ್ವತ್ತಿಗೆ ತಕ್ಕಂತೆ ಧೈರ್ಯ, ಸಾಹಸ ಮೊದಲಾದ ಅಮೂಲ್ಯ ಗುಣಗಳು

ನರಲ್ಲಿ ಮನೆಮಾಡಿಕೊಂಡಿದ್ದುವು ಯಾವ ಧಾಮೆಯ
ಗ್ರಂಥಗಳೇ ಇರಲಿ, ಅವುಗಳನ್ನು ಸಂಗ್ರಹಿಸುವುದರಲ್ಲಿ
ಷ್ಟು ದತ್ತರಾಗಿದ್ದರು ತಮ್ಮ ಜೀವನಮಾನದಲ್ಲಿ ಇವರು
೧೦ ಸಾವಿರ ಗ್ರಂಥಗಳನ್ನು ಸಂಗ್ರಹಿಸಿರಬಹುದು
೪ ಗ್ರಂಥಗಳಿಗಾಗಿಯೇ ಜಂಗಮವಾಡೀ ಮಠದಲ್ಲಿ ೨೦
ನವರ ರೂಪಾಯಿಗಳ ಖರ್ಚಿನಿಂದ ಒಂದು ಜ್ಞಾನ
ಮಂದಿರವನ್ನು ನಿರ್ಮಿಸಿರುವರು ಈ ಮಂದಿರಕ್ಕೆ
ಕರ್ಣಾಟಕ. ಅಂಧ್ರ, ಮಹಾರಾಷ್ಟ್ರ ದೇಶದ ಅನೇಕ
ನ ಭಕ್ತರು ಸಹಾಯಮಾಡಿದುದರು ಜ್ಞಾನಮಂದಿರ
ನ್ನು ಇವರು ತಮ್ಮ ಪ್ರಾಣವೆಂದು ತಿಳಿದಿದ್ದರು
ನೈಕ್ಯರಾಗುವುದಕ್ಕೆ ೧೦ ದಿವಸಗಳ ಪೂರ್ವದಲ್ಲಿ
ಸುಗೆ ಬರೆದಿರುವ ಪತ್ರದಲ್ಲಿ ಮುಕ್ಕೆ ಸಂಬಂಧಪಟ್ಟ
ಸುಪ್ತವಿಷಯಗಳನ್ನು ತಿಳಿಸಿರುವರಲ್ಲದೆ, " ಬೆಜವಾಡ
ಲ್ಲಿ ಬಹು ಬೆಲೆಬಾಳುವ ತಮ್ಮ ಪೂರ್ವಾಶ್ರಮದ ಆಸ್ತಿ
ಲ್ಲಿ ನಾಲ್ಕು ಆಣೆ ಭಾಗವನ್ನು ಜ್ಞಾನಮಂದಿರಕ್ಕೂ,
ಾಲ್ಕು ಆಣೆ ಭಾಗವನ್ನು ತಮ್ಮ ಮಂತಿವನಿಗೂ,
ರ್ಧಭಾಗವನ್ನು ಪಾಠಶಾಲೆಗೂ ವೈತ್ಯಪತ್ರ ಮೂಲಕ
ರೆದಿಡಬೇಕೆಂದು ನನ್ನು ಸಂಕಲ್ಪಿಸಿದೆ ' ಎಂದು
ಪ್ತಸಿಕೊಡಿಸಿರುವರು ಇವರಿಂದ ಇವರಲ್ಲಿ ಸ್ವಾರ್ಥ
ತ್ಯಾಗವೂ, ವಿದ್ಯಾಭಿರುಚಿಯೂ ಎಷ್ಟರಮಟ್ಟಿಗಿದ್ದಿತೆಂ
ುದು ಸರ್ವರಿಗೂ ಸ್ಪಷ್ಟವಾಗುವುದು. ಇಂತಹ ಮಹಾ
ವ್ಯಕ್ತಿಯನ್ನು ಕಳೆದುಕೊಂಡು ಈ ಪೀಠದ ಮತ್ತು
ನೀರಶೈವಸಮಾಜವ ಮಹಾದೌರ್ಭಾಗ್ಯವೆಂದೇ ಹೇಳ
ಬೇಕಾಗಿದೆ ಜಗದ್ಗುರುಗಳವರಿಗೆ ಆವಸಾನಕಾಲದಲ್ಲಿ
೦ ವರ್ಷ ವಯಸ್ಸಾಗಿತ್ತು ಈಶ್ವರೇಚ್ಛೆಗೆ ಉಪಾಯ
ಲ್ಲ ಶ್ರೀಜಗದಿಶ್ವರನು ಶ್ರೀಗಳವರ ಪವಿತ್ರಾತ್ಮಕ್ಕೆ
ಂತಿಯನ್ನಿತ್ತಾಯಲೆಂದು ಪ್ರಾರ್ಥಿಸುತ್ತೇನೆ

ಪೀಠಕ್ಕೆ ಉತ್ತರಾಧಿಕಾರಿಗಳು

ಶ್ರೀಜಗದ್ಗುರುಗಳವರು ಧರ್ಮಪೀಠಕ್ಕೆ ಮುಂದೆ
ಯಾವವಿಧವಾದ ತೊಂದರೆಯೂ ಬರಬಾರದೆಂಬ
ುದಾತ್ತ ಧ್ಯೇಯದಿಂದ ಮೊದಲೇ ಪೂರ್ಣವಾಗಿ
ಂಲೋಚಿಸಿ ವಿದ್ಯಾ, ಬುದ್ಧಿ, ಮೊದಲಾದ ಸಕಲ
ಸದ್ಗುಣಗಳಿಂದ ಯುಕ್ತರಾಗಿರುವ ಶ್ರೀ ವಿಶ್ವೇಶ್ವರ
ಶಿವಾಚಾರ್ಯ ಉರ್ಫ್ ಜಯಗುರುಶಿವಾಚಾರ್ಯ
ೈಸೂರು ಎಂಬವರ ಹೆಸರಿಗೆ ಮೃತ್ಯುಪತ್ರವನ್ನು
ಬರೆದು ಇವರೇ ತಮ್ಮ ಮಠದ ಉತ್ತರಾಧಿಕಾರಿಗಳೆಂದು
ರಜಿಷ್ಟರ್ ಮಾಡಿಸಿರುವದು ಸಂತೋಷದಾಯಕವಿಷಯ
ವಾಗಿದೆ ಶ್ರೀಜಗದ್ಗುರುಗಳವರು ನೇಮಿಸಿರುವ ಉತ್ತ
ರಾಧಿಕಾರಿಗಳು **ಧಾರವಾಡ** ಡಿಸ್ಟ್ರಿಕ್ಟ್ ಹರೀಕೇರೂರು
ತಾಲ್ಲೂಕು ಮೂಗೂರು ಗ್ರಾಮದವರು ಇವರು ಉತ್ತ್ರಾ
ಗುರುವಂಶೀಯರಾಗಿದ್ದು ಗುರುತ್ವಕ್ಕೆ ಸಲ್ಲುವ ಸಕಲ
ಸ್ಥಿಕ್ಷಣಗಳಿಂದ ಯುಕ್ತರಾಗಿರುವರು ಗಂಭೀರಸ್ವಭಾವ
ವವರಾಗಿಯೂ, ಮನೋಹರಾಕೃತಿಯುಳ್ಳವರಾಗಿಯೂ,
ನಿಯಾಸ್ಪತಿಕರಾಗಿಯೂ, ಆಜಾನುಬಾಹುಗಳಾಗಿಯೂ,
ಉವಾರಿಗಳಾಗಿಯೂ ಇರುವುದರಿಂದ, ಇವರು ಆ ಪೀಠಕ್ಕೆ
ರ್ವರೀತಿಯಿಂದಲೂ ಅರ್ಹರಾಗಿದ್ದಾರೆಂಬುದರಲ್ಲಿ
ಯಾವ ಸಂದೇಹವೂ ಇರುವುದಿಲ್ಲ ಶ್ರೀಜಗನ್ನಾಥರುರು
ಶ್ವೇಷ್ಟ ಜಗದ್ಗುರುಗಳಂತೆ ಇವರಲ್ಲಿಯೂ ಸಹ ಅಂತಹ
ಲೌಕ್ಯತಕ್ಕೆ ಯನ್ನು ಅನುಗ್ರಹಿಸಿ ಆ ಪೀಠದ ಪ್ರಕಾಶ
ರ್ವತ್ರ ಚೆಲ್ಲುವುದಕ್ಕೆ ಅನುಗ್ರಹಿಸಿ ಆ ಪೂಜ್ಯಪಾದ
ನ್ನು ಅನನ್ಯಸಾಧಾರಣಭಕ್ತಿಭಾವದಿಂದ ಭಜಿಸುತ್ತೇನೆ

ಗಾಂಧೀಜಿಯವರ ನಿಧನ

ಹಿಂದೂ ಯುವಕನ ಗುಂಡಿನೇಟಿಗೆ ಬಲಿಯಾದರು

ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟು ದಿಗಂತ
ವಿಶ್ರಾಂತ ಕೀರ್ತಿಶಾಲಿಗಳಾಗಿದ್ದ ಶ್ರೀ ಗಾಂಧೀಜಿಯವರು
ತಾ॥ ೩೦-೧-೪೮ ನೆಯ ಶುಕ್ರವಾರ ಸಾಯಂಕಾಲ
೪ ಗಂಟೆ ಸಮಯದಲ್ಲಿ ಪ್ರಾರ್ಥನಾ ಸಭೆಗೆ ಹೋಗುವುದ
ಕ್ಕಾಗಿ ಬಿರ್ಲಾ ಭವನದಿಂದ ಹೊರಗಿಣ ವೈದಾನಕ್ಕೆ
ಒಂದರು ಪ್ರಾರ್ಥನಾ ಸಭೆಯು ಜರಿಂದ ತುಂಬಿ
ಹೋಗಿದ್ದಿತು ಅಲ್ಲಿದ್ದ ಜನರೆಲ್ಲರೂ ಗಾಂಧೀಜಿಯವರಿಗೆ
ಸ್ವಾಗತ ನೀಡುತ್ತ ಹರ್ಷಧ್ವನಿಯನ್ನು ಮಾಡುತ್ತಿರುವ
ಸಮಯದಲ್ಲಿ ಕಾಕಿ ಬಣ್ಣದ ಬಟ್ಟೆಯನ್ನು ಧರಿಸಿದ್ದ
ಯಾನರೋ ಒಬ್ಬನು ಅವರ ಎದುರಿಗೆ ಬಂದು ಏಕಾ
ಏಕಿ ನಾಲ್ಕುಸಾರಿ ಗುಂಡುಹಾರಿಸಿದನು. ಎರಡು ಗುಂಡು
ಗಳು ಅವರ ಕೆಚ್ಚೆಬ್ಬಿಟ್ಟೆಯನ್ನೂ ಒಂದು ಗುಂಡು
ಎದೆಯನ್ನೂ ಸ್ಪರ್ಶಿಸಿದವು ಕೂಡಲೇ ಗಾಂಧಿಯವರು
ನಿಶ್ಚೇಷ್ಟಿತರಾಗಿ ನೆಲಕ್ಕೆ ಬಿದ್ದು ಬಿಟ್ಟರು ಅಷ್ಟರಲ್ಲಿ
ಅವರ ಪ್ರಾಣವು ಹಾರಿಹೋಗಿದ್ದಿತು ಅಪರಾಧಿಯು
ಮಹಾರಾಷ್ಟ್ರದೇಶದವನಾಗಿದ್ದು ಅವನ ಹೆಸರು
ನಾಥೂರಾಮು ವಿನಾಯಕ ಗೋಡಸೆ ಎಂದು ಪ್ರಕಟ
ವಾಗಿದೆ ಅಪರಾಧಿಯನ್ನು ಬಂಧಿಸಲಾಗಿದೆ

ಈ ದು ಬವಾರ್ತೆಯು ದಿಲ್ಲಿ ನಗರದಲ್ಲಿಯೂ ಮತ್ತು
ಭಾರತದಲ್ಲಿಯೂ ವಿದ್ಯುದ್ವೇಗದಿಂದ ವ್ಯಾಪಿಸಿತು
ಕೂಡಲೆ ಪಂಡಿತ ನೆಹರೂ, ಸರ್ದಾರ್ ವಲ್ಲಭಭಾಯಿ
ಪಟೇಲ್ ಮೊದಲಾದ ರಾಷ್ಟ್ರನಾಯಕರು ಅಲ್ಲಿಗೆ ಬಂದು
ಗಾಂಧೀಜಿಯವರ ಪಕ್ಕದಲ್ಲಿ ಕುಳಿತು ಕಣ್ಣೀರು ಸುರಿ
ಹತ್ತಿದರು ಭಾರತದ ಗೌರ್ನರ್ ಜನರಲ್ ಲಾರ್ಡ್
ಲೂಯಿ ಮೌಂಟ್‌ಬ್ಯಾಟನ್‌ರವರು ಸಹ ಬಂದು ತಮ್ಮ
ಆಪಾರವಾದ ದುಃಖವನ್ನು ವ್ಯಕ್ತಪಡಿಸಿದರು ಈ
ವಿಷಾದ ವಾರ್ತೆಯು ರೇಡಿಯೋ ಮೂಲಕ ಆ ದಿನಸವೇ
ವಿಶ್ವದಲ್ಲೆಲ್ಲಾ ವ್ಯಾಪಿಸಿತು ಪ್ರಪಂಚದ ಜನರಲ್ಲರೂ
ಕಣ್ಣೀರು ಇಳ್ಳಿರು ಬ್ರಿಟಿಷ್ ರಾಜರು, ಬ್ರಿಟಿಷ್
ಮಂತ್ರಿಗಳು, ಅಮೆರಿಕಾ, ಸ್ವಾನ್ಸ್, ರಷ್ಯಾ, ಚೀನಾ
ಮೊದಲಾದ ಅಸಂಖ್ಯ ದೇಶಗಳ ಅಧಿಪತಿಗಳು ಗಾಂಧೀಜಿ
ಯವರ ನಿಧನದ ಬಗ್ಗೆ ತಮ್ಮ ಆಪಾರವಾದ ಸಂತಾಪ
ವನ್ನು ವ್ಯಕ್ತಪಡಿಸಿರುವರು ಮೈಸೂರು, ಹೈದ್ರಾಬಾದ್,
ಕಾಶ್ಮೀರ್, ತಿರುವಾಂಕೂರು, ಬಡೋದಾ, ಇಂದೂರ್,
ಸ್ವಾಲಿಯರ್ ಮೊದಲಾದ ಅನೇಕ ಜನ ಮಹಾರಾಜರು
ತಮಗುಂಟಾಗಿರುವ ಆಪಾರ ದುಃಖವನ್ನು ವ್ಯಕ್ತಪಡಿ
ಸಿರುವುದಲ್ಲದೆ, ತಮ್ಮ ತಮ್ಮ ದೇಶದಲ್ಲಿ ಅವರ ಸೌರ
ವಾರ್ಥವಾಗಿ ಸರಕಾರದ ಎಲ್ಲಾ ಇಲಾಖೆಗಳೂ ರಜಾ
ದಿನವಾಗಿರುತ್ತಾರೆ ೩೧ ನೆಯ ತಾರೀಖು ಶನಿವಾರ
ದಿವಸ ಗಾಂಧೀಜಿಯವರ ದೇಹವನ್ನು ಸರ್ವರಿಗೂ
ಕಾಣುವಂತೆ ಒಂದು ರಥದಲ್ಲಿಟ್ಟು ದೆಹಲಿಯ ಮುಖ್ಯ
ಮುಖ್ಯ ಬೀದಿಗಳಲ್ಲಿ ಉತ್ಸವೋಪೋಪಕವಾಗಿ ಒಯ್ಯ
ಲಾಯಿತು ಲಕ್ಷಾಂತರ ಜನರು ಅವರ ಅಂತ್ಯದರ್ಶನ
ವನ್ನು ಪಡೆದು ಕಣ್ಣೀರು ಸುರಿಸಿದರು ಬೆಳಿಗ್ಗೆ ೧೧॥
ಘಂಟೆಗೆ ಹೊರಟ ಈ ಉತ್ಸವವು ೫ ಮೈಲಿ ದೂರದ
ಲ್ಲಿರುವ ಯಮುನಾ ನದಿಯ ತೀರಕ್ಕೆ ತಲ್ಪಬೇಕಾದರೆ
ಸಾಯಂಕಾಲ ೫ ಘಂಟೆಯಾಯಿತು ೫ ಘಂಟೆಯಾದ
ಮೇಲೆ ಯಮುನಾ ನದೀ ತೀರದಲ್ಲಿ ಅವರ ಶರೀರಕ್ಕೆ
ನಿಧ್ಯಕ್ರಮಾಗಿ ಅಗ್ನಿಸಂಸ್ಕಾರವು ಮಾಡಲ್ಪಟ್ಟಿತು
ಗಾಂಧೀಜಿಯವರು ಅಹಿಂಸಾ ಮತ್ತು ಸತ್ಯ ತತ್ವಗಳಿಂದ
ಸಮಸ್ತ ಪ್ರಪಂಚವನ್ನಲ್ಲಾ ಮಹಾವ್ಯಕ್ತಿಗಳೆಂದು ಪ್ರಸಿದ್ಧ
ರಾಗಿದ್ದರು ಇಂತಹ ಮಹಾವ್ಯಕ್ತಿಯು ಭಾರತದಿಂದ
ಅಗಲಿದುದು ಭಾರತೀಯರ ದೌರ್ಭಾಗ್ಯವೆಂದೇ ಹೇಳ
ಬೇಕಾಗಿದೆ ಜಗದೀಶ್ವರನು ಶ್ರೀ ಗಾಂಧೀಜಿಯವರ
ಆತ್ಮಕ್ಕೆ ಶಾಂತಿಯನ್ನೀಯಲಿ

ಉತ್ತರಕ್ರಿಯಾಸಮಾರಂಭ

ಶಿವಮೊಗ್ಗ ಡಿ॥ ಚನ್ನಗಿರಿ ತಾ॥ ಹರೋಸಾಗರದ
ಲ್ಲಿರುವ ೬೪ ವರ್ಷದ ಕ್ಷಾತ್ರಿಸಿನೆರೆ ಬಸಪ್ಪ ಎಂಬವರಿಗೆ
ಅವರ ಬಂಧುಬಾಂದವ ಮಿತ್ರವರ್ಗದವರು. ಸೇರಿ
ತಾ॥ ೨೧-೧೧-೪೮ ನೇ ಬುಧವಾರ ಸಾಯಂಕಾಲ
ಸದರಿ ಗ್ರಾಮದಲ್ಲಿರುವ ಸೋಮ್ಲಾಪುರ ಮಠಾಧ್ಯಕ್ಷ
ರಾದ ಶ್ರೀ ಸಿದ್ಧಲಿಂಗತಿವಾಚಾರ್ಯಸ್ವಾಮಿಗಳವರನ್ನು
ಬರಮಾಡಿಕೊಂಡು ವಾದಪೂಜಾದಿಗಳನ್ನು ಅನುಗೋಡು
ಮರದ ಪಾಲಸಿದ್ದಪ್ಪಯ್ಯನವರ ನೈದಿಕತ್ವದಲ್ಲಿ ನೆರವೇರಿ
ಸಿದರು ಶ್ರೀಗಳ ಅಪ್ಪಣೆ ಪ್ರಕಾರ ಪ್ರಭಾಪೌಢಣಕ್ಕಾಗಿ
ಒಂದು ರೂಪಾಯಿಯು ಸಮರ್ಪಿಸಲ್ಪಟ್ಟಿತು ಬಸಪ್ಪ
ನವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಆಯು
ರಾರೋಗ್ಯಭಾಗ್ಯವನ್ನು ದಯಪಾಲಿಸಲೆಂದು ಪ್ರಾರ್ಥಿಸು
ತ್ತೇನೆ

ಒರ್ವ ಗುರುಭಕ್ತ

ವರ್ತಮಾನಸಂಗ್ರಹ

ಕಾಫೀವಾಡಿ ಸಂಸ್ಥಾನಗಳ ಒಕ್ಕೂಟ

ಕಾಫೀವಾಡಿನ ಸುಮಾರು ಮುನ್ನೂರು ಸಂಸ್ಥಾನ
ಗಳು ಒಂದುಗೂಡಿ " ಸೌರಾಷ್ಟ್ರ " ಎಂಬ ಒಂದೇ ಒಂದು
ಸಂಸ್ಥಾನವನ್ನು ರಚಿಸಿಕೊಳ್ಳಲು ನಿರ್ಧರಿಸಿದೆ ಈ
ಸಂಸ್ಥಾನವನ್ನು ಫೆಬ್ರವರಿ ೨೦ ನೆಯ ತಾರೀಖಿನಿಂದ
ಸ್ಥಾಪಿಸಲಾಗುವುದು ಈ ಸಂಸ್ಥಾನದ ಆಡಳಿತವನ್ನು
ನೋಡಿಕೊಳ್ಳಲು ಏವರು ರಾಜರಿಂದ ಕೂಡಿದ ಸಮಿತಿ
ಯೊಂದನ್ನು ರಚಿಸಲಾಗಿದೆ

ಸೈನಿಕರು ' ಜೈ ಹಿಂದ್ ' ಹೇಳಬೇಕು

ನಾಗಪುರ ಸೈನ್ಯಾಧಿಕಾರಿಗಳು ಒಂದು ಪ್ರಕಟನೆ
ಹೊರಡಿಸಿ, ಸೈನಿಕರು ಸೆಲ್ಯೂಟ್ ಮಾಡುವಾಗ ' ಗುಡ್
ಮಾರ್ನಿಂಗ್ " ಎಂದು ಇಂಗ್ಲಿಷಿನಲ್ಲಿ ಹೇಳುವುದರ
ಬದಲು " ಜೈಯ್ ಹಿಂದ್ " ಎಂದು ಕೇಳಬೇಕೆಂದು
ತಿಳಿಸಿದ್ದಾರೆ

ಗವರ್ನರ್ ಜನರಲ್ಲರಿಗೆ ನಿಜಾಮರ ತಂತಿ

ಸಂಸ್ಥಾನದಲ್ಲಿ ಈಗ ಏರ್ಪಟ್ಟಿರುವ ಪರಿಸ್ಥಿತಿಯ
ದೃಷ್ಟಿಯಲ್ಲಿ ಅಜ್ಮೀರದಲ್ಲಿರುವ ಹಜರತ್ ಖ್ವಾಜ
ಮೊಯುದ್ದೀನ್ ಮಸೀದಿಯನ್ನು ರಕ್ಷಿಸಬೇಕೆಂದು
ನಿಜಾಮರು ಗವರ್ನರ್ ಜನರಲ್‌ರವರಿಗೆ ತಂತಿ ಕಳಿಸಿ
ದ್ದಾರೆ

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷರ ದಸ್ತಗಿರಿ

ಹೈದರಾಬಾದ್ ಸಂಸ್ಥಾನದ ಕಾಂಗ್ರೆಸ್ಸಿನ ಅಧ್ಯಕ್ಷ
ರಾದ ಸ್ವಾಮಿ ರಮಾನಂದತೀರ್ಥರವರನ್ನು ಕಳೆದ
ಸೋಮವಾರ ದಸ್ತಗಿರಿ ಮಾಡಲಾಯಿತು

ನಿಜಾಮರು ಹೆದರಿಸಿದರೆಂಬ ಸುದ್ದಿ ಸುಳ್ಳು

ದಕ್ಷಿಣ ಸಂಸ್ಥಾನಗಳು ಕೆಲವು ಜೊಂಬಾಯಿ ಪ್ರಾಂತ
ದಲ್ಲಿ ಮಿಳವಣಿಗಾಗಿ ಪ್ರಯತ್ನಿಸಿದ್ದರಿಂದ ಆ ಸಂಸ್ಥಾನ
ಗಳಿಗೆ ನಿಜಾಮರು ಎಚ್ಚರಿಕೆಯ ಸೂಚನೆ ಕೊಟ್ಟು
ರೆಂದು ಪ್ರಕಟಿಸಿದ್ದಾಗಿದ್ದ ಸುದ್ದಿ ಸುಳ್ಳು ಎಂದು ಹೈದ್ರಾ
ಬಾದ್ ಸರ್ಕಾರವು ಪ್ರಕಟಿಸಿದೆ

ಹೈದ್ರಾಬಾದ್ ಪರಿಸ್ಥಿತಿ ಕೆಡುತ್ತಿದೆ

ನಿಜಾಮರಲ್ಲಿ ಮನವಿ

ಈಗಿರುವ ತಾತ್ಕಾಲಿಕ ಮಂತ್ರಿಮಂಡಲವನ್ನು ರದ್ದು
ಗೊಳಿಸಿ ಸಮ್ಮಿಶ್ರಮಂಡಲವನ್ನು ಸ್ಥಾಪಿಸುವಂತೆ ಹೈದ್ರಾ
ಬಾದಿನ ಪ್ರೊಗ್ರೆಸೀವ್ ಪಕ್ಷದ ೬ ಜನ ಪ್ರಮುಖರೂ
ಮತ್ತು ಹೈದ್ರಾಬಾದ್ ಸಿವ್ಮಿಸರ್ವಗದ ಪೊಡೇಷನ್
ಅಧ್ಯಕ್ಷರೂ ನಿಜಾಮರಲ್ಲಿ ಮನವಿಮಾಡಿಕೊಂಡಿದ್ದಾರೆ
ಇತ್ತೀಹಾದುಲ್ ಮುಸ್ಲಿಮಿನ್ ಸಂಸ್ಥೆಯವರೆ ಹಾವಳಿ
ಬಲವಾಗುತ್ತಿದೆಯೆಂದೂ ಇದರಿಂದ ಜನರಲ್ಲಿ ಬಹಳ
ಗಾಬರಿಗೊಂಡಿರುವೆಂದೂ ಒಂದು ಹೇಳಿಕೆಯನ್ನು
ಹೊರಡಿಸಿದ್ದಾರೆ ಈ ಸ್ವಯಂಸೇವಕರ ದಳವನ್ನು
ಅಕ್ರಮಸಂಸ್ಥೆಯೆಂದು ನಿಜಾಮರು ತತ್‌ಕ್ಷಣ ಘೋಷಿಸ
ಬೇಕೆಂದು ಹೇಳಿಕೆಯಲ್ಲಿ ವ್ಯಕ್ತಪಡಿಸಲಾಗಿದೆ

ಹೈದ್ರಾಬಾದ್-ಭಾರತ ಸಂಧಾನ

ಹೈದ್ರಾಬಾದ್ ಪ್ರಧಾನಿಗಳಾದ ಮಿ॥ ಲಾಯಕ್‌ಅಲಿ,
ಹಣಕಾಸಿನ ಮಂತ್ರಿಗಳಾದ ನವಾಬ್ ಮೊಯಿನ್
ನವಾಜ್‌ಜಂಗ್‌ರವರು ಗವರ್ನರ್ ಜನರಲ್ ಮತ್ತು
ಸರ್ದಾರ್ ಪಟೇಲರೊಂದಿಗೆ ಸ್ಟಾಂಡ್‌ಸ್ಟಿಲ್ ಒಪ್ಪಂದದ
ವಿಚಾರದಲ್ಲಿ ಮಾತುಕತೆ ನಡೆಸಲು ೨೯ ನೆಯ ತಾ॥
ದಿವಸ ನವದೆಹಲಿಗೆ ಆಗಮಿಸಿದರು. ಹೈದ್ರಾಬಾದಿನಲ್ಲಿ

"ಇರತದ ಏಜೆಂಟ್ ಜನರಲ್ ಆಗಿರುವ ಶ್ರೀ ಕೆ. ಎಂ. ಮುನ್ಷಿಯವರೂ ಸಹ ಬಂದಿದ್ದಾರೆ.

ಸರ್ದಾರ್ ಪಟೇಲರೊಂದಿಗೆ ಹೈದ್ರಾಬಾದ್ ಮಂತ್ರಿಗಳು ೨೯ನೇ ತಾ! ದಿನದ ೪೫ ನಿಮಿಷಗಳ ಕಾಲ ಮಾತುಕತೆ ನಡೆಸಿದರು

ಹೈದ್ರಾಬಾದ್ ಬೇಗನೆ ಭಾರತ ಡೊಮಿನಿಯನ್ನಿಗೆ ಸೇರುವುದೆಂದು ಸರ್ದಾರ್ ಪಟೇಲರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿದರು.

ಸ್ಟ್ಯಾಂಡ್‌ಸ್ಟಿಲ್ ಒಪ್ಪಂದದಂತೆ ಹೈದ್ರಾಬಾದಿಗೆ ಶಸ್ತ್ರಾಸ್ತ್ರಗಳನ್ನು ಕಳಿಸಿಕೊಡಲು ಭಾರತ ಸರ್ಕಾರವು ನಿರಾಕರಿಸಿರುವುದನ್ನು ಹೈದ್ರಾಬಾದ್ ಸರ್ಕಾರವು ಆರೋಪಿಸಿದ ಆದರೆ ಸ್ಟ್ಯಾಂಡ್‌ಸ್ಟಿಲ್ ಒಪ್ಪಂದವನ್ನು ಹೈದ್ರಾಬಾದವು ಅನೇಕ ಬಾಬುಗಳಲ್ಲಿ ಮುರಿದಿರುವುದು ಧೃಢಪಟ್ಟಿದೆ ಹೈದ್ರಾಬಾದ್ ಸ್ಟೇಟ್‌ನ್ನು ತನಿಖೆಮಾಡಿ ಆದರ ಬಗ್ಗೆ ಅಂತಿಂತ ಜಂಟರಗಳನ್ನು ತೀರ್ಮಾನಕೊಳ್ಳಲು ಭಾರತ ಸರ್ಕಾರಕ್ಕೆ ಹೈದ್ರಾಬಾದ್ ಸರ್ಕಾರವು ಈವರೆಗೂ ಅವಕಾಶಗಳನ್ನು ಕಲ್ಪಿಸಿಕೊಡಲಿಲ್ಲವೆಂದು ತಿಳಿದುಬಂದಿದೆ

ಪೆಟ್ರೋಲ್ ಸರಬರಾಜಿನ ವಿಚಾರದಲ್ಲೂ ಚರ್ಚೆ ನಡೆಯುವ ಸಂಭವವಿದೆ. ಭಾರತ ಸರ್ಕಾರವು ಹೈದ್ರಾಬಾದಿಗೆ ಸರಬರಾಜು ಮಾಡುತ್ತಿರುವ ಪೆಟ್ರೋಲನ್ನು ಇತ್ತೀಚಾದುಲ್-ಸಂಸ್ಥೆಯವರಿಗೆ ಕೊಡಲಾಗುತ್ತಿದೆಯೆಂದು ಹೇಳಲಾಗಿದೆ

ಪಾಕಿಸ್ತಾನದೊಂದಿಗೆ ಸುಮಾರು ೨೦ ಕೋಟಿ ರೂ. ವ್ಯವಹಾರವನ್ನು ಇಟ್ಟುಕೊಂಡಿರುವ ನಿಜಾರದಲ್ಲಿ ಹೈದ್ರಾಬಾದ್ ಸರ್ಕಾರ ಭಾರತ ಸರ್ಕಾರಕ್ಕೆ ಸೂಕ್ತವಾದ ಕಾರಣಗಳನ್ನು ಕೊಟ್ಟಿಲ್ಲವೆಂದು ಹೇಳಲಾಗುತ್ತಿದೆ ಮಹತ್ವಪೂರಿತ ಮಾತುಕತೆಗಳು ಇನ್ನೂ ಮುಗಿದಿಲ್ಲ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಥತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧವರ್ಣಗಳಿಂದ ಮುದ್ರಿತವಾದುದು)ಸೈಜು ೧೪ × ೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮುಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ .... ೦—೩—೦

,, ,, ,, ಚಿಕ್ಕ ಸೈಜು ಬೆಲೆ ... ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಜೂಗರ್ಭದಿಂದ ಅವತರಿಸುವ ಫೋಟೋ .... ೦—೧—೬

ಶ್ರೀ ವೀಣಾಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೧—೬

ಶ್ರೀರೇಣುಕಾಚಾರ್ಯರು ಶ್ರೀಪಂಕರಾಚಾರ್ಯರಿಗೆ ಚಂದ್ರಮೌಲೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಏಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ .... ೦—೧—೬

ಶ್ರೀ ಶೈಲಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ .... ೦—೧—೬

ಶ್ರೀಸುಮುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೧—೬

ಶ್ರೀಮಜ್ಜುಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ವರ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧ಕ್ಕೆ ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ವರ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧ಕ್ಕೆ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ .... ೦—೧—೬

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ... ೦—೧—೬

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅದ್ಧೂರಿಯ ರುಥೋತ್ಸವದ ಫೋಟೋ ೦—೧—೬

ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ... ೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	..		೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)			೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	.		೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	.		೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ)	.		೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	..		೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	.		೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	..		೨ ಆಣೆ
ಶ್ರೀಗುರುತತ್ವಪದಗಳು (೩ನೆಯ ಆವೃತ್ತಿ)	...	....	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	.....	..	೨ ಆಣೆ
ಶಿವಶಕ್ತಿವಿಲಾಸ	...	-	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	...		೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	....	...	೨ ಆಣೆ
ಪಂಚಾಚಾರ್ಯಪ್ರಕಾಶ	.....	.....	೩ ಆಣೆ
ಪಂಚಾಚಾರ ಪ್ರಕಾಶಿಕಾ	.....	.....	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	....	.....	೪ ಆಣೆ
ಲಿಂಗಧಾರಣವಿಧಿ	.....	..	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	.....	.....	೪ ಆಣೆ
ಶ್ರೀಪಟಿಪಂಡಿತಾರಾಧ್ಯರ ಕಾಲನಿರ್ಣಯ	...	.....	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	....	.....	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	.....	.....	೪ ಆಣೆ
ವೈದಿಕವಾಙ್ಮಯರಹಸ್ಯ	.....	.....	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)		.....	೬ ಆಣೆ
ವೀರಶೈವಾನ್ತ್ಯೇಷ್ಟಿ-ಶ್ರಾದ್ಧವಿಧಿ	.....	.....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕ ಸೈಜು)		.....	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	.....	.....	೮ ಆಣೆ
ವೀರಶೈವಮಹಾತ್ಮರು	..	.....	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	.....	.....	೮ ಆಣೆ
ಆಗಮಪರಿಜ್ಞಾನ	... ..	.....	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆಣೆ
ಸದ್ಯೋಧರತ್ನಾವಳಿ	.	.....	೮ ಆಣೆ
ಸಿದ್ಧಾಂತಸಾರಾವಳಿ (ಪ್ರತ್ಯೋಚನಶಿವಾಚಾರ್ಯಕೃತ)		....	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ		...	೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ		.....	೧೩ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೩ನೆಯ ಆವೃತ್ತಿ)			೧೫ ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	..	.....	೧೫ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)			೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)		....	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	..	...	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)			೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪ಳಲ ಪುಟ)		. .	೮ ರೂ.
A brief life-sketch of Pandit Sri Kashinatha Shastriji (*English*)			**4 As.**
The Philosophical Aspect of Virasaivism (*English*)		...	**8 As.**
Speeches by Pandit Shri Kashinatha Shastriji (*English*)			**12 As**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	.	...	**೩ ಕ.**
ವೀರಶೈವರತ್ನ (ಮರಾಠೀ)	.	....	**೧ ಕ.**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)		...	**೧ ಕ.**
ಸಂದೇಹಾರ್ಥಕಾರಿಕಾ (ಸಂಸ್ಕೃತ)	..	....	... **೨ ಆಣೆ.**

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ. ಪಿ. ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಫೆಬ್ರವರಿ ೧೯೪೪ [ಸಂಚಿಕೆ ೪೨

ಕಾಶೀ ಜಗದ್ಗುರುಗಳ ಬಗ್ಗೆ ದುಃಖಪ್ರದರ್ಶನ ಸಭೆಗಳು

ಹುಬ್ಬಳ್ಳಿ

ಶ್ರೀ ಕಾಶೀ ಜ್ಞಾನಪೀಠಾಧೀಶ್ವರ ಜಗದ್ಗುರು ವೀರಭದ್ರ ಶಿವಾಚಾರ್ಯಮಹಾಸ್ವಾಮಿಗಳವರು ಅಕಾಲದಲ್ಲಿ ಶಿವಾಧೀನರಾದುದು ವೀರಶೈವ ಸಮಾಜಕ್ಕೆ ಕಿಡಿಲು ಬಡೆದಂತಾಗಿ ಅಪಾರ ಹಾನಿಯನ್ನುಂಟುಮಾಡಿದೆ ಆಪ್ರತಿಮ ಮೇಧಾವಿಗಳಾದ ಜಗದ್ಗುರುಗಳನ್ನು ಕಳೆದುಕೊಂಡುದು ನಮ್ಮ ದೌರ್ಭಾಗ್ಯ! ಶ್ರೀ ಜಗದ್ಗುರುಗಳವರ ವಿಯೋಗದಿಂದುಂಟಾಗಿರುವ ದುಃಖಪ್ರದರ್ಶನಕ್ಕಾಗಿ ಹುಬ್ಬಳ್ಳಿ ಹನ್ನೆರಡು ಮರದಲ್ಲಿ ತಾ॥ ೨೯-೧-೪೪ನೆಯ ದಿವಸ ಡಾ॥ ಪಿ. ಪಿ ಹಳೇಮನೆ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ಸಭೆಗೆ ಅನೇಕ ಜನ ಪುರಪ್ರಮುಖರು ಆಗಮಿಸಿದ್ದರು ಆ ಸಮಯದಲ್ಲಿ ಶ್ರೀ ಷ॥ ಬ್ರ॥ ಚರಮೂರ್ತಿಸ್ವಾಮಿಗಳು ಹನ್ನೆರಡು ಮರ, ಶ್ರೀ ಸಿದ್ಧಲಿಂಗದೇವರು ಕುಂದಗೋಳ ಹಿರೇಮಠ, ಶ್ರೀಮಾನ್ ಜಿ ಸಿ ಹಿರೇಮಠ ವಕೀಲ, ಶ್ರೀಮಾನ್ ಬಿ ವಿ ಸಾಲೀಮಠ ಮಾಸ್ತರ, ಶ್ರೀಮತಿ ವೀರಮ್ಮನವರು ಚಿಕ್ಕಸಾಲೀಮಠ, ವೇ॥ ವೀರಯ್ಯಶಾಸ್ತ್ರಿಗಳು ಸೂರಕೋಡ ಇವರೇ ಮೊದಲಾದವರು ಜಗದ್ಗುರುಗಳ ಅಪ್ರತಿಮ ಪ್ರತಿಭೆಯ ಬಗ್ಗೆ ಭಾಷಣ ಮಾಡಿದರು. ಶ್ರೀಮಾನ್ ಪಿ ಆರ್ಯ ಹಿರೇಮಠ ವಕೀಲ ಇವರು ಶ್ರೀ ಜಗದ್ಗುರುಗಳ ಪೂರ್ವಾಶ್ರಮದ ಕಾರ್ಯಕಲಾಪಗಳನ್ನೂ ಪೀಠಾಧಿಕಾರಿಗಳಾದ ಮೇಲೆ ಮಾಡಿದ ಪೀಠೋದ್ಧಾರ ಮೊದಲಾದ ಕಾರ್ಯಗಳನ್ನು ವಿವರಿಸಿದರು. ಆಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು ಶ್ರೀಮಾನ್ ಗುರುಸಿದ್ಧಯ್ಯನವರು ನನೇಂದ್ರ ಮಠ ಇವರು ಸಭೆಯ ಕಾರ್ಯವು ಯಶಸ್ವಿಯಾಗಿ ನೆರವೇರುವಂತೆ ಸಕಲ ಏರ್ಪಾಡುಗಳನ್ನು ಮಾಡಿದ್ದರು

ಶಿವನಗೌಡ ಪಾಟೀಲ

ಸೊಲ್ಲಾಪುರ

ಶ್ರೀ ಕಾಶೀ ಜ್ಞಾನಪೀಠಾಧೀಶ್ವರ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು ಶಿವಾಧೀನರಾದ ಬಗ್ಗೆ ನಂದಿಮಠದಲ್ಲಿ ತಾ॥ ೨೬-೧-೪೪ ನೇ ಸೋಮವಾರ ದಿವಸ ಸೌ॥ ಮುಕ್ತಾಬಾಯಿ ನಂದಿಮಠ, ಇವರ ಅಧ್ಯಕ್ಷತೆಯಲ್ಲಿ ಸ್ತ್ರೀಯರ ಸಭೆ ಸೇರಿತು ಸೌ॥ ರತ್ನಾಬಾಯಿ ಮಹಾಣೆ, ಸೌ॥ ಗೌರಾಬಾಯಿ ಪಾಟೀಲ್, ಸೌ॥ ಗಂಗಾಬಾಯಿ ಪಾಟೀಲ್, ಸೌ॥ ಭಾಗೀರಥೀಬಾಯಿ ಮುಲಂಗೇ, ಸೌ॥ ಪಾರ್ವತೀಬಾಯಿ ಮಂಡಕೆ, ಸೌ॥ ಶಿದ್ಧವ್ವಾಬಾಯಿ ಉಪಾಶಿ, ಸೌ॥ ವತ್ಸಲಾಬಾಯಿ ಸೋಂಗದೆ, ಸೌ॥ ದಾನವ್ವಾಬಾಯಿ ಹಿರೇಮಠ, ಸೌ॥ ಬಸಮ್ಮಾ ನಂದಿಮಠ ಮೊದಲಾದವರು ಶ್ರೀಗಳವರ ಗುಣಗಾನವನ್ನು ಮಾಡಿ ಅವರ ವಿಯೋಗದ ಬಗ್ಗೆ ಅಪಾರ ದುಃಖವನ್ನು ವ್ಯಕ್ತಪಡಿಸಿದರು ಆಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು

ಕಾರ್ಯದರ್ಶಿನಿ
ವೀರಶೈವ ಸದಾಚಾರ ಸ್ತ್ರೀ ಸಮಾಜ ಸೊಲ್ಲಾಪುರ

ಬಾರ್ಸಿ

ಸೂಲ್ಲಾಪುರ ಡಿ॥ ಬಾರ್ಸಿ ನಗರದಲ್ಲಿರುವ ವೀರಶೈವ ಮಹಾಜನಗಳು ತಾ॥ ೨೭-೧-೪೪ನೇ ದಿವಸ ಶ್ರೀಗುರು ಪರಾಂಡಕರ್ ಸ್ವಾಮಿಗಳವರ ಮರದಲ್ಲಿ ಕಾಶೀ ಜಗದ್ಗುರುಗಳ ವಿಯೋಗದ ಬಗ್ಗೆ ಸಭೆಯನ್ನು ನೆರವೇರಿಸಿದರು. ಶ್ರೀಮಂತ ಮಾರುತಿಪ್ಪ ಘೋಡಕೆ ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಈ ಕೆಳಗೆ ಕಂಡಂತೆ ಠರಾವು ಪಾಸು ಮಾಡಿದರು

"ಶ್ರೀ ೧೦೮ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರು ಶಿವಾಧೀನರಾದುದನ್ನು ತಿಲಿದು ಸಮಸ್ತ ವೀರಶೈವ ಪುಸಂಜನೆ ದುಃಖಪಡುವಂತಾಯಿತು ಪರಮೇಶ್ವರನು ಶ್ರೀಗಳವರ ಆತ್ಮಕ್ಕೆ ಶಾಂತಿಯನ್ನೀಯಲಿ"

ಈ ದುಃಖಪ್ರದರ್ಶನ ಸಭೆಗೆ ನಗರದಲ್ಲಿರುವ ಅನೇಕ ಸ್ತ್ರೀ ಪುರುಷರು ಆಗಮಿಸಿದ್ದರು ಪರಾಂಡಕರ್ ಸ್ವಾಮಿಗಳವರು ಜಗದ್ಗುರುಗಳವರ ಅದ್ಭುತ ಕರ್ತೃತ್ವ ಶಕ್ತಿಯ ಬಗ್ಗೆ ಭಾಷಣ ಮಾಡುತ್ತಿದ್ದಾಗ್ಗೆ ಪ್ರತಿಯೊಬ್ಬರ ಕಣ್ಣಾಗಳಿಂದಲೂ ಮುತ್ತಾಶ್ರುಗಳು ಹೊರಹೊಮ್ಮುತ್ತಿದ್ದುವು ಇಂತಹ ಮಹಾವ್ಯಕ್ತಿಯನ್ನು ಕಳೆದುಕೊಂಡುದು ಸಮಾಜವ ದುರ್ದೈವ

ಓರ್ವ ದುಃಖಭಾಗಿ

ಪಂಢರಪುರ

ಸೊಲ್ಲಾಪುರ ಡಿ॥ ಪಂಢರಪುರ ನಗರದಲ್ಲಿರುವ ಸಮಸ್ತ ವೀರಶೈವರು ತಾ॥ ೨೯-೧-೪೪ನೇ ದಿವಸ ಶ್ರೀ ಮನ್ಮಠ ಸ್ವಾಮಿ ಮಠದಲ್ಲಿ ದುಃಖ ಸಭೆಯನ್ನು ಶ್ರೀ ನಿರ್ವಾಣ ರುದ್ರಪಶುಪತಿಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು ಆ ಸಮಯದಲ್ಲಿ ವೇ॥ ಕಲ್ಲಯ್ಯಸ್ವಾಮಿ ಕಾಶೀಗಾಂವಕರ್, ಶ್ರೀ ಮಹಾದೇವರಾವ್ ಭಿಂಗೆ, ಶ್ರೀ ಕಂಕರರಾವ್ ಕಟಪ್, ಸಾತಾರೆಯ ವೇ॥ ಗಂಗಾಧರ ಶಾಸ್ತ್ರಿ ಮೊದಲಾದವರ ಭಾಷಣಗಳಾದವು. ಬಳಿಕ ಕೆಳಗೆ ಕಂಡಂತೆ ನಿರ್ಣಯವು ಪಾಸು ಮಾಡಲ್ಪಟ್ಟಿತು.

"ವೇದತೀರ್ಥ, ಕಾವ್ಯತೀರ್ಥ, ಸ್ಮೃತಿತೀರ್ಥ, ಸರ್ವದರ್ಶನತೀರ್ಥ, ಧರ್ಮಾಚಾರ್ಯ, ವಿದ್ಯಾನಿಧಿ, ವಿದ್ಯಾರತ್ನ ಇತ್ಯಾದಿ ಪದವೀವಿಭೂಷಿತರಾದ ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು ತಾ॥ ೨೫-೧ ಆಲನೆಯ ದಿವಸ ಶಿವಾಧೀನರಾದುದರಿಂದ ತಾ॥ ೨೫-೧ ಆಲನೆಯ ದಿವಸ ಶಿವಾಧೀನರಾದುದರಿಂದ ವೀರಶೈವ ಸಮಾಜದ ಮೇಲೂ ಮತ್ತು ಸನಾತನ ವೈದಿಕ ಸಮಾಜದ ಮೇಲೂ ಮಹಾ ಪರ್ವತವೇ ಕಳಚಿ ಬಿದ್ದಂತಾಗಿದೆ. ಇಂತಹ ಆದರ್ಶ ಜಗದ್ಗುರುಗಳ ಪಾದ ಕಮಲದಲ್ಲಿ ಈ ಸಭೆಯು ಬಾಷ್ಪಾಂಜಲಿಯನ್ನು ಸಮರ್ಪಿಸುತ್ತದೆ" ಈರೀತಿ ಠರಾವು ಪಾಸಾದ ಮೇಲೆ ಶ್ರೀಗಳವರ ಛಾಯಾ ಚಿತ್ರಕ್ಕೆ ಮಂಗಳಾರತಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಗುರುಭಕ್ತ

ಮುಧೋಳ

ಶ್ರೀ ಕಾಶೀ ಪೀಠಾಧೀಶ್ವರ ಜಗದ್ಗುರು ವೀರಭದ್ರ ಶಿವಾಚಾರ್ಯಮಹಾಸ್ವಾಮಿಗಳವರು ಕಳೆದ ತಿಂಗಳು ೨೫ನೇ ತಾರೀಖಿನ ದಿವಸ ಶಿವಾಧೀನರಾದ ಬಗ್ಗೆ ಸಂಸ್ಥಾನ ಮುಧೋಳ ಗ್ರಾಮದಲ್ಲಿರುವ ವೀರಶೈವರೆಲ್ಲರೂ ಕೂಡಿ ದುಃಖಪ್ರದರ್ಶನ ಸಭೆಯನ್ನು ನೆರವೇರಿಸಿದರು. ಶ್ರೀ ಜೈನಾಪುರ ಹಿರೇಮಠದ ಚರಮೂರ್ತಿಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಅಧ್ಯಕ್ಷರು ಶಿವೈಕ್ಯ ಜಗದ್ಗುರುಗಳ ಕರ್ತೃತ್ವ ಶಕ್ತಿಯ ಬಗ್ಗೆ ಅಮೋಘವಾದ ಭಾಷಣ ಮಾಡಿದರು ಬಳಿಕ ಸರ್ವರೂ ಎದ್ದುನಿಂತು ಶ್ರೀಗಳವರ ಆತ್ಮಕ್ಕೆ ಪ್ರಾರ್ಥನೆಯ ಮೂಲಕ ಶಾಂತಿಯನ್ನು ಕೋರಿದರು ಆಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು

ಬಸಪ್ಪ ಕರಡಿ
ಸಂಸ್ಥಾನ ಮುಧೋಳ

ಕೊಣ್ಣೂರು

ಕಾಶೀ ಜಗದ್ಗುರುಗಳವರು ಶಿವೈಕ್ಯರಾದರೆಂಬ ವಾರ್ತೆಯನ್ನು ಪ್ರಭಾ ಪತ್ರಿಕೆಯಲ್ಲಿ ನೋಡಿದ ಕೂಡಲೇ ಅತ್ಯಂತ ವ್ಯಸನವುಂಟಾಯಿತು ಇಂಥ ದಿವ್ಯಜ್ಯೋತಿಯು ಭೂಮಿಯಲ್ಲಿ ಹುಟ್ಟುವದು ಅಪೂರ್ವ! ಕೋಲ್ಮಿಂಚಿನಂತೆ ತೋರಿ ಕ್ಷಣದಲ್ಲಿಯೇ ಅಡಗಿದುದು ನಮ್ಮ ಪೀಠದ ಮತ್ತು ವೀರಶೈವ ಸಮಾಜದ ದುರ್ದೈವ ವೆಂದೇ ಭಾವಿಸಬೇಕಾಗಿದೆ. ಇವರು ಅಧಿಕಾರಕ್ಕೆ ಬಂದ ೩ ವರ್ಷಗಳಲ್ಲಿಯೇ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿ ಜಗದ್ವಂದ್ಯರಾದರು. ಮುಂದೆ ಇವರಿಂದ ಇನ್ನೂ ಅನೇಕ ಮಹತ್ಪದ ಕಾರ್ಯಗಳು ಜರಗಶಕ್ಯವಾಗಿದ್ದುವು. ಭಗವಂತನು ಅವುಗಳನ್ನು ನೆರವೇರಿಸಬೆ ಅವರ ಪವಿತ್ರಾತ್ಮವನ್ನು ತನ್ನಲ್ಲಿ ಐಕ್ಯಮಾಡಿಕೊಂಡನು. ಈ ಮಹಾತ್ಮರ ಧೌತಿಕ ಶರೀರವು ಮಾಯವಾದರೂ ಕೀರ್ತಿಶರೀರವು ಸ್ಥಿರವಾಗಿ ಉಳಿದಿರುವದು. ಆ ಮಹಾತ್ಮರು ನಮ್ಮ ಕಣ್ಣಿಗೆ ಕಾಣಿಸದಿದ್ದರೂ ಇದ್ದಂತೆಯೇ ಸರಿ! ಪರಶಿವನು ಶ್ರೀಗಳವರ ಪವಿತ್ರಾತ್ಮಕ್ಕೆ ಶಾಂತಿಯನ್ನೀಯಲೆಂದು ಜಗದೀಶ್ವರನನ್ನು ಪ್ರಾರ್ಥಿಸುತ್ತೇವೆ. ಉತ್ತರಾಧಿಕಾರಿಗಳಾಗಿ ಬರತಕ್ಕವರು ಶಿವೈಕ್ಯ ಶ್ರೀಗಳವರಂತೆ ದಕ್ಷರಾಗಿ ಆವರು ಕೈಕೊಂಡ ಕಾರ್ಯಗಳನ್ನು ಪೂರ್ತಿಗೊಳಿಸಬೇಕೆಂದು ಸ್ವಾರ್ಥನೆ

ಶ್ರೀ ಪಟ್ಟದಸ್ವಾಮಿ ಹಿರೇಮಠ ಕೊಣ್ಣೂರು

ಭಾರತ ಸರ್ಕಾರದ ಘೋಷಣೆ

ಹಿಂಸಾತ್ಮಕ ಕೃತ್ಯಗಳನ್ನು ಮೂಲೋತ್ಪಾಟನೆ ಮಾಡಲು ಸರಕಾರದ ದೃಢ ಸಂಕಲ್ಪ

ಭಾರತದ ಸಾರ್ವಭೌಮತ್ವ ಮತ್ತು ಕೀರ್ತಿಗೆ ಕಳಂಕ ತಂದಿರುವ ದ್ವೇಷಾಸೂಯೆಗಳ ಮತ್ತು ಹಿಂಸಾತ್ಮಕ ಶಕ್ತಿಗಳನ್ನು ಮೂಲೋತ್ಪಾಟನೆ ಮಾಡುವುದಾಗಿ ಭಾರತ ಸರ್ಕಾರವು ಪೆಬ್ರವರಿ ೨ ನೆಯ ತಾ|| ಸಂಕಲ್ಪ ಮಾಡಿರುತ್ತಾ ಭಾರತಾದ್ಯಂತ ರಾಷ್ಟ್ರೀಯ ಸ್ವಯಂಸೇವಕ ಸಂಘವು ನ್ಯಾಯಬಾಹಿರವಾದ ಸಂಸ್ಥೆಯೆಂದು ಕೇಂದ್ರ ಸರಕಾರವು ಘೋಷಿಸಿದೆ.

ಹಿಂಸಾತ್ಮಕೃತ್ಯಗಳು ಉಗ್ರಸ್ವರೂಪ ತಾಳಿದಂತೆ ತಡೆಯುವುದು ಸರಕಾರದ ಕರ್ತವ್ಯ. ರಾಷ್ಟ್ರೀಯಸ್ವಯಂಸೇವಕ ದಳದವರು ಸತತವಾಗಿ ಸ್ವಾಧಾರಮಾಡುತ್ತಿರುವ ಹಿಂಸಾವಾದಕ್ಕೆ ಅನೇಕರು ಬಲಿಯಾಗಿದ್ದಾರೆ. ಅಲ್ಲದೆ ಪೂಜ್ಯ ಬಾಪುಜಿಯವರ ಅಮೂಲ್ಯವಾದ ಜೀವನವನ್ನು ಈ ತತ್ವವು ಅಪಹರಿಸಿ ತೆಗೆದುಕೊಂಡಿದೆ. ಎಂಬುದಾಗಿ ಭಾರತ ಸರಕಾರದ ಪ್ರಕಟನೆಯಲ್ಲಿ ತಿಳಿಸಲಾಗಿದೆ. ಭಾರತದ ಪ್ರಾಂತ ಸರ್ಕಾರಗಳೂ ಸಹ ಆರ್ ಎಸ್ ಎಸ್ ಸಂಸ್ಥೆಗಳು ಅಕ್ರಮ ಸಂಸ್ಥೆಗಳೆಂದು ಸಾರಿವೆ

ಅಕ್ಷೇಪಣೀಯವಾದ ಚಟುವಟಿಕೆ

ಒಳಾಡಳಿತ ಶಾಖೆಯ ಪ್ರಕಟಣೆಯಾಂದು ಈ ರೀತಿ ತಿಳಿಸುತ್ತದೆ

ಭಾರತದ ವಿವಿಧ ಸಂಸ್ಥಾನಗಳ ನಡತೆ ಪಕ್ಷಗಳ ನ್ಯಾಯವಾದ ರಾಜಕೀಯ, ಸಮಾಜಿಕ, ಆರ್ಥಿಕ ಚಟುವಟಿಕೆಗಳಿಗೆ ಅಡ್ಡಿ ಪಡಿಸಿಬರದೆಂಬುದೇ ಸರಕಾರದ ಆಶಯ. ಹಿಂದೂಗಳಲ್ಲಿ ಪರಸ್ಪರ ಸೌಹಾರ್ದ ಮತ್ತು ಸಹಾಯಗಳನ ಬೆಳೆಸಿ ಅವರ ವೈಹಿಕ, ಮಾನಸಿಕ ಜೀವನಗಳಿಗೆ ಪ್ರೋತ್ಸಾಹಕೊಡುವದೇ ರಾಷ್ಟ್ರೀಯಸ್ವಯಂಸೇವಕ ಸಂಘದ ಧ್ಯೇಯಗಳೆಂದು ಹೇಳಲಾಗಿದೆ ಆದರೆ ಕಾರ್ಯತಃ ಈ ಸಂಸ್ಥೆಯ ಕಾರ್ಯಕರ್ತರು ಸಂಘದ ಧ್ಯೇಯ ಗಳಿಂತೆ ನಡೆದುಕೊಳ್ಳುತ್ತಿಲ್ಲ! ಭಾರತದ ನಾನಾ ಪ್ರದೇಶಗಳಲ್ಲಿ ಸಂಘದ ಸದಸ್ಯರು ಹಿಂಸಾತ್ಮಕೃತ್ಯಗಳಲ್ಲಿ ಉದ್ಯುಕ್ತರಾಗಿರುವುದು ಸರಕಾರದ ಗಮನಕ್ಕೆ ಬಂದಿದೆ ಆರ್ ಎಸ್ ಎಸ್ ಕಾರ್ಯಕರ್ತರು ಲೂಟಿ, ಅಗ್ನಿಸ್ಪರ್ಶನ ಮುಂತಾದ ಭಯೋತ್ಪಾದಕ ಕೃತ್ಯಗಳನ್ನು ನಡೆಸುತ್ತಿದ್ದಾರೆ ಜನರಲ್ಲಿ ಹಿಂಸಾ ಪ್ರಚಾರಮಾಡಿ, ಪ್ರಜೆಗಳಲ್ಲಿ ಸರಕಾರದ ಮೇಲೆ ಅಪಪ್ರಚಾರ ಮಾಡುತ್ತಿದ್ದಾರೆ ಈ ಸಂಘದ ಹಿಂಸಾತ್ಮಕ ಚಟುವಟಿಕೆಗಳಿಗೆ ಅನೇಕರು ಬಲಿಯಾಗಿದ್ದಾರೆ ಈ ಹಿಂಸಾವಾದವು ಬಾಪೂಜಿಯವರ ಅತ್ಯಮೂಲ್ಯ ಪ್ರಾಣವನ್ನೂ ಅಪಹರಿಸಿ ತೆಗೆದುಕೊಂಡಿತು! ಈ ಹಿಂಸಾತ್ಮಕ ಚಟುವಟಿಕೆಗಳು ಮತ್ತೆ ಉಗ್ರರೂಪದಲ್ಲಿ ತಲೆಯೆತ್ತದಂತೆ ತಡೆಯಲೋಸುಗ ಭಾರತ ಸರಕಾರವು ಈ ಕ್ರಮ ತೆಗೆದುಕೊಂಡಿದೆ ಹಿಂಸೆಯನ್ನು ನಿರ್ಮೂಲ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕಾರ್ಯಕ್ರಮದಲ್ಲಿ ಇದು ಮೊದಲನೆಯ ಹೆಜ್ಜೆ—ಎಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ

ಗಾಂಧೀಜಿಯವರ ರಕ್ಷಣೆಗೆ ಮಾಡಲಾಗಿದ್ದ ಏರ್ಪಾಟನ್ನು ಕುರಿತು ಸರದಾರರ ಹೇಳಿಕೆ

ಡೊಮಿನಿಯನ್ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷವು ೪ ದಿಯ ತಾ|| ದಿನ ದೀರ್ಘಕಾಲ ಸಭೆ ಸೇರಿತ್ತು. ಪಂ|| ನೆಹರುರವರೂ, ಸರದಾರ್ ಪಟೇಲರೂ ಸಭೆಗೆ ಬಂದಿದ್ದರು ತಮಗೂ ಪಟೇಲರಿಗೂ ಭಿನ್ನಾಭಿಪ್ರಾಯವಿತ್ತೆಂಬುದನ್ನು ನಿರಾಕರಿಸಿ ಹಾಗೆ ಸುದ್ದಿ ಹರಡುವುದು ಆಗೌರವಯುತವಾದುದೆಂದು ನೆಹರೂರವರು ಹೇಳಿದರು

ಪಟೇಲರ ಭಾಷಣ

ಪಟೇಲರು ಸುಮಾರು ೪೦ ನಿಮಿಷ ಮಾತನಾಡಿದರು ಭಾಷಣ ಆಶ್ಚರ್ಯವಾಗಿತ್ತೆಂದು ಎಲ್ಲರೂ ಅಭಿಪ್ರಾಯಪಟ್ಟರು ಗಾಂಧೀಜಿಯ ಉಪವಾಸ ಆಮೇಲೆ ನಡೆದ ಘಟನೆಗಳನ್ನು ಹೇಳುವಾಗ ಪಟೇಲರು ಮುಂದು ನರೆಯವಾದರು ಎರಡು ನಿಮಿಷ ಸುಧಾರಿಸಿಕೊಂಡು ಭಾಷಣವನ್ನು ಮುಂದುವರಿಸಿದರು

ಪಟೇಲರು ಸೋಷಲಿಸ್ಟರ ಆರೋಪಗಳನ್ನು ನಿರಾಕರಿಸಿದರು ಬಡ್ತಿಕೊಡಿ ಕೈಗೊಂಡ ಕಾರ್ಯಕ್ರಮಗಳನ್ನು ಸ್ಪಷ್ಟ ವಿವರಿಸಿ ಮಾನವನ ದೂರದೃಷ್ಟಿಗೆ ಸಾಧ್ಯವಾದುದನ್ನೆಲ್ಲ ಮಾಡಲಾಗಿತ್ತೆಂದರು ಬಾಂಬಿನ ಘಟನೆಗೆ ೨ ಬಂಡೆಗಳಿಗೂ ಒಬ್ಬ ಪೋಲೀಸ್ ಅಧಿಕಾರಿಯನ್ನು ಇದು ಗಾಂಧೀಜಿಗೆ ಇಷ್ಟವಿರಲಿಲ್ಲ ಯಾರಾದರೂ ಕೊಲ್ಲುವಂತಿದ್ದರೆ ಪ್ರಾರ್ಥನಾ ಸಭೆಯಲ್ಲಿ ಕೊಲ್ಲಲಿ ಪೋನರ ಇಚ್ಛೆಯಿದ್ದ ತಾಗುದಲ್ಲಿ ಎಂದು ತಾವು ಹೇಳಿದರು ಆದರೂ ಒಳ್ಳೆ ಚರ್ಚೆಯಾದನಂತರ ಅವರು ಒಪ್ಪಿದರು ತದರ ಒಳಗೆ ಬರುವವರನ್ನು ಪೋಲಿಸರು ಒಪ್ಪಿಲಿಲ್ಲ ಮಹಾತ್ಮರ ಕೊಲೆಯ ದಿನವೂ ಕೂಡ ಆ ಸಭೆಯಲ್ಲಿ ೩೦ ಜನ ಸದಸ್ಯರಿಗಿಂತ ಹೆಚ್ಚು ಸದಸ್ಯರಿರಲಿಲ್ಲವೆಂದು ಹೇಳಿದರು ಆದರೆ ಜಾಸ್ತಿ ಜನರಿಗೆ ಪಾಸ್ ಕೊಟ್ಟಿದ್ದರು ಆದರೆ ಜಾಸ್ತಿ ಜನರು ಬರಲಿಲ್ಲವೆಂದು ಹೇಳಿದರು ಮಹಾತ್ಮರ ಕೊಲೆಯ ದಿನವೂ ಕೂಡ ಆ ಸಭೆಯಲ್ಲಿ ೩೦ ಜನ ಸದಸ್ಯರಿಗಿಂತ ಹೆಚ್ಚು ಜನರಿರಲಿಲ್ಲವೆಂದು ಹೇಳಿದರು ಆದರೆ ಜಾಸ್ತಿ ಜನರಿಗೆ ಪಾಸ್ ಕೊಟ್ಟಿದ್ದರು ಆದರೆ ಜಾಸ್ತಿ ಜನರು ಬರಲಿಲ್ಲವೆಂದು ಹೇಳಿದರು

ಟೀಕೆಗಳಿಗೆ ಉತ್ತರ

ಒಬಾಡಳಿತ ಶಾಖೆಯ ಪ್ರಕಟಣೆಯಲ್ಲಿ ಒಂದು ಟೀಕೆಗಳನ್ನು ಮುಖ್ಯವಾಗಿ ಸೋಷಲಿಸ್ಟ್ ನಾಯಕರ ಟೀಕೆಗಳನ್ನು ಪ್ರಸ್ತಾಪಿಸುತ್ತ ಆವರಿಗೆ ಕಾರ್ಯಕಾರಿ ಸಮಿತಿಯಲ್ಲಿ ಸ್ಥಳ ಕೊಟ್ಟಾಗ ಸಹಕರಿಸಲಿಲ್ಲ ಕೇಂದ್ರ ಸರಕಾರದಲ್ಲಿ ಅವರ ಕಾರ್ ಕೊಟ್ಟರೆ ಏಸಿಕರ್ದರು ಹೋಗಲಿ, ಒಂದು ಪ್ರಾಂತವನ್ನಾ ತೆಗೆದು ಕೊಂಡು ಆತಂಕವಿಲ್ಲದೆ ನಿನ್ನ ವ್ಯವಹಾರಗಳನ್ನು ನಡೆಸಿರಿ ಎಂದರೆ ಅವನ್ನೂ ಬೇಡ ಎಂದರು ಇದರಿಂದ ಸ್ಪಷ್ಟವಾಗಿ ಅವರಿಗೆ ಜನರ ಬೆಂಬಲವಿಲ್ಲವೆಂಬುದು ಉಪಯೋಗಿಸಿಕೊಳ್ಳಲು ಬಿಲ್ಲುತ್ತಾರೆ ಇಂಗ್ಲಂಡಿನಲ್ಲಿ ಕಾಂಗ್ರೆಸ್ಸಿನಲ್ಲಿ ಸಂವಿಧಾನವಿದೆ? ಎಂದು ಸರಕಾರರು ಆರ್ಥಿಕ ಸಟ್ಟರು ಅವರು ಅಧಿಕಾರಿಗಳನ್ನು ಅನಹೇಳನ ಮಾಡಿದ್ದಾರೆ ಪೋಲೀಸರನ್ನೂ ಆಡಳಿತ ನೀತಿಯನ್ನು ಒಪ್ಪಿದ್ದಾರೆ ಆದರೂ ಒಗೆ ಒಂದು ದೇಶವನ್ನು ಆಳಲು ಇಷ್ಟವಿಲ್ಲವಾದಾಗ ಅದು ಹೇಗೆ? ಎಂಬುದನ್ನು ಅಹಿಂಸಾವಾದ ಎಂದರು

ಮಿಷ್ಟ್ರ ಸಚಿವರಿಗೂ ಮತ್ತು ತಮಗೂ ಯಾವುದೇ ಒಗೆಯ ಭಿನ್ನಾಭಿಪ್ರಾಯವೂ ಇರಲಿಲ್ಲವೆಂದು ಸರದಾರ್ ಪಟೇಲರು ತಿಳಿಸಿದರು ಈಗಿನ ಮಂತ್ರಿ ಮಂಡಲವು ಜಂಟಿ ಜವಾಬ್ದಾರಿಯ ಮೇಲೆ ಕೆಲಸ ಮಾಡುತ್ತಿದೆಯೆಂದು ಹೇಳಿದರು ಆದ್ದರಿಂದ ಯಾವಾಗಲೂ ಎಲ್ಲ ಮಂತ್ರಿಗಳ ರಾಜೀನಾಮೆಗಳೂ ಮುಖ್ಯ ಮಂತ್ರಿಗಳ ಜೇಬಿನಲ್ಲಿ ದ್ದಂತೆಯೇ ಎಂದು ನುಡಿದರು

"ನನಗೆ ನನ್ನ ನಾಯಕನ ನಂಬಿಕೆ ಇಲ್ಲವೆಂದು ಕೋರಿಬಂದಕ್ಷಣದಲ್ಲೇ ನಾನು ಈ ಸರಕಾರದಲ್ಲಿರುವುದಿಲ್ಲ' ಎಂದು ಸರದಾರರು ಸೂಚಿಸಿದರು

ಡೊಮಿನಿಯನ್ ಶಾಸನಸಭೆಯಲ್ಲಿ ಮಹಾತ್ಮರ ನಿಧನದ ಬಗ್ಗೆ ಪಂ|| ಜವಹರಲಾಲರ ದುಃಖಸೂಚನೆ

ಭಾರತದ ಡೊಮಿನಿಯನ್ ಪಾರ್ಲಿಮೆಂಟಿನ ನಿರೀಕ್ಷಸಭೆಯಲ್ಲಿ, ಮಹಾತ್ಮಾ ಗಾಂಧೀಜಿಯವರಿಗೆ ರಾಷ್ಟ್ರದ ಗೌರವವನ್ನು ಸಲ್ಲಿಸಲಾಯಿತು ಪ್ರಧಾನರು ಮತ್ತು ಸಭೆಯ ನಾನಾಪಕ್ಷ, ಪಂಗಡ ಪ್ರತಿನಿಧಿಗಳ ಭಾಷಣಗಳಾದ ಮೇಲೆ, ಎಲ್ಲ ಸದಸ್ಯರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು ಅನಂತರ ಸಭೆಯನ್ನು ಮುಂದಕ್ಕೆ ಶಾಕಲಾಯಿತು

ಪಂಡಿತ ನೆಹರೂರವರ ಭಾಷಣ

ಮಹಾತ್ಮಾ ಗಾಂಧೀಜಿಯವರಿಗೆ ಆವರು ಜೀವಂತ ರಾಗಿರುವಾಗಲೇ ದೊರೆತಷ್ಟು ಪ್ರಶಸ್ತಿ, ಇಡೀ ಪ್ರಪಂಚದ ಇತಿಹಾಸದಲ್ಲೇ ಮತ್ತಾವ ವ್ಯಕ್ತಿಗೂ ದೊರೆತಿಲ್ಲ ಬೀಗಿರವಾಗಿ ಈಗ ಅವರನ್ನು ಹೊಗಳುವ ಅವಶ್ಯವಾದರೂ ಏನಿದೆ? ಅವರ ಜೀವನಾದರ್ಶಕ್ಕೇ ದೊರೆತ ಪ್ರಶಸ್ತಿಗಿಂತ ಹೆಚ್ಚಿನದನ್ನು ನಾವು ಕೊಡಬಲ್ಲೆವೇ? ಗಾಂಧೀಜಿಯವರ ಸ್ವಂತ ಮಕ್ಕಳಿಗಿಂತಲೂ ಅವರೊಡನೆ ಹೆಚ್ಚು ನಿಕಟಸಂಬಂಧವನ್ನು ಹೊಂದಿ, ಅವರ ಮಕ್ಕಳಾಗಿರುವ ನಾವು, ನಮ್ಮ ರಾಷ್ಟ್ರವಿತನವನ್ನು ಹೇಗೆತಾನೇ ಹೊಗಳೋಣ? ಅತ್ಯೀಯವಾಗಿ ನಾವೆಲ್ಲರೂ ಹೆಚ್ಚುಕಡಿಮೆ ಅವರ ಮಕ್ಕಳಾಗಿದ್ದೇವೆ ನಮ್ಮ ಜೀವನವನ್ನು ಪ್ರಕಾಶಗೊಳಿಸಿದ್ದ ಸೂರ್ಯನಿಂದು ಅಸ್ತಂಗತನಾಗಿದ್ದಾನೆ ಹೀಗೆಂದು ಪಂ|| ನೆಹರೂರವರು ತೋಕತಪ್ತವಾದ ಕಂಠದಿಂದ ನುಡಿದರು ರಾಷ್ಟ್ರದ ಅಮೂಲ್ಯರತ್ನವನ್ನು ಕಾಪಾಡಿದೆ ಇದ್ದ ಲೋಪ, ಸರಕಾರಕ್ಕೆ ಅತ್ಯಂತ ನಾಚಿಕೆ ಗೇಡಿತನದ ವಿಷಯವಾಗಿದೆ ನಾವೆಲ್ಲರೂ ಅತ್ಯಂತವಾಗಿ ಘೋರವಿಷ, ಪ್ರೀತಿಸುತ್ತಿದ್ದ ಈ ಶ್ರೇಷ್ಠ ಪುರುಷರಿಗೆ ನಾವು ಸರಿಯಾದ ರಕ್ಷಣೆಯನ್ನು ಕೊಡದೆ, ಅವರು ಇಂತಹ ದುರಂತ ಮರಣಕ್ಕೀಡಾದುದು, ನಮ್ಮೆಲ್ಲರಿಗೂ ಅತ್ಯಂತ ಅಪಮಾನಕಾರವಾದ ವಿಚಾರವಾಗಿದೆ" ಎಂದು ನುಡಿದರು ಮಹಾತ್ಮಾ ಗಾಂಧೀಜಿಯವರ ಕೊಲೆಯ ದುರಂತವನ್ನು ಕುರಿತು ಪ್ರಧಾನರು—" ಆವರ ಕೊಲೆ, ಕೇವಲ ಒಬ್ಬ ಹುಚ್ಚು ಮನುಷ್ಯನ ಉನ್ಮಾದ ಕೃತ್ಯ ವೆಲ್ಲ ಇದು ನನ್ನು ದೇಶದಲ್ಲಿ ಅನೇಕ ವರ್ಷಗಳಿಂದ ತೋರಿಬಂದ, ಹಿಂಸೆ ಮತ್ತು ದ್ವೇಷದ ವಾತಾವರಣದ ಫಲವಾಗಿದೆ ಎಂದರು ಳಕೆದ ನೂರಾತ್ತು ವರ್ಷಗಳಲ್ಲಿ ನನ್ಮ ರಾಷ್ಟ್ರ ನಿರ್ಮಾಣಕ್ಕೆ ಗಾಂಧೀಜಿಯವರೇ ಕಾರಣರೆಂಬುದಾಗಿ ಅವರ ಸಾಧನೆಯನ್ನು ನಿವರಿಸಿ, ನನ್ಮ ದೇಶಕ್ಕೆ ಈಗ ನಾನಾ ಒಗೆಯ ವಿಪತ್ತುಗಳೊದಗಿವೆ ಆದರೆ ಈ ವಿಪತ್ತಾಲವು ಬೀಗನೆ ಕಳೆದುಹೋಗುವುದು" ಎಂಬುದಾಗಿ ರಾಷ್ಟ್ರಭವಿಷ್ಯದಲ್ಲಿ ತಮಗಿರುವ ನಂಬಿಕೆಯನ್ನು ವ್ಯಕ್ತಪಡಿಸಿದರು ಪ್ರಧಾನರ ಭಾಷಣವಾದ ನಂತರ ಮಿ|| ಮಹಮ್ಮದ್ ಸಾದುಲ್ಲಾ, ರೆ|| ಫಾದರ್ ಡಿಸೌಜಾ, ಶ್ರೀ ಎಂ ಆರ್ ಮಸಾನಿ, ಶ್ರೀಮತಿ ಹಂಸಾ ಮೆಹತಾ, ಮಿ|| ಫ್ರಾಂಕ್ ಆಂಥೋನಿ ಮೊದಲಾದವರು ಭಾಷಣಮಾಡಿದರು

ಗಾಂಧೀಜಿಯವರ ನಿಧನದ ಬಗ್ಗೆ ಶ್ರೀ ರಾಜಗೋಪಾಲಾಚಾರಿಯವರ ಹಿತೋಕ್ತಿ

ಭಾರತದ ಅತ್ಯಮೂಲ್ಯ ರತ್ನ ಬಾಪೂಜಿಯವರ ರಕ್ಷಣೆಗೆ ಸೂಕ್ತ ವಿರ್ಪಾಡುಗಳನ್ನು ಮಾಡಲಿಲ್ಲವೆಂದು ಸರ್ಕಾರದ ಮೇಲೆ ಕರ್ತವ್ಯಭ್ರಷ್ಟತೆಯ ಆರೋಪನವು ಹೊರಿಸುವುದು ಕುದ್ದು ತಪ್ಪು! ನನ್ಮ ನಾಡಿಗೆ ಊಹಿಸಲಸಾಧ್ಯವಾದ ದೌರ್ಭಾಗ್ಯವು ಪ್ರಾಪ್ತವಾಗಿರುವ ಈ ಕಷ್ಟಸಮಯದಲ್ಲಿ ಈ ರೀತಿ ಆಕ್ಷೇಪಿಸುವುದು ಕುತ್ಸಿತ ಮನಃ ಪ್ರವೃತ್ತಿಯ ದಿಶರ್ನ! " ಎಂಬುದಾಗಿ ಪಶ್ಚಿಮ ಬಂಗಾಳದ ಗವರ್ನರಾದ ರಾಜಗೋಪಾಲಾಚಾರಿಯವರು ತಿಳಿಸಿದರು

ಗಾಂಧೀಜಿಯವರ ೬೦ ವರ್ಷಗಳ ಜೀವಮಾನದಲ್ಲಿ ಆವರು ಅನೇಕ ಗಂಡಾತರಗಳಿಂದ ಪಾರಾಗಿದ್ದಾರೆ ಕಳೆದ ೪೦ ವರ್ಷಗಳಲ್ಲಿ ದಕ್ಷಿಣ ಮತ್ತು ಭಾರತದಲ್ಲಿ ಅವರು ಅಪಾಯಗಳನ್ನೆದುರಿಸಿದಾಗ ಅವರಿಗೆ ಭಾರತ ಸರ್ಕಾರ ರಕ್ಷಣೆಯಾಗಿದ್ದಿತೇನು? ತೋಮುವಾರು ದ್ವೇಷಾಸೂಯೆಯ ವಿಷ್ಯದಲ್ಲಿ ವಿಕಾಂಗಿಯಾಗಿ ಅವರು ನಿಂತಾಗ ಅವರ ಜೀವನವನ್ನು ಅಪಹರಿಸುವುದು ಕಷ್ಟ ವಾಗಿತ್ತೇ? ಆಗ ಅವರಿಗೆ ಯಾವ ರಕ್ಷಣೆ ಕೊಡಲಾಗಿತ್ತು? ಬಾಪೂವಿಗೆ ದೇವರ ಕರೆಬಂತು! ಅವರು ಭಗವಂತನ ಸಾನ್ನಿಧ್ಯ ಸೇರಿದರು ಅದು ದೈವಸಂಕಲ್ಪ.

ಇತರ ನಾಯಕರಿಗೂ ಕ್ರೋಧವಿಲ್ಲವೇ?

ಪಂ|| ನೆಪೂ, ಸರ್ದಾರ್ ವಲ್ಲಭಭಾಯಿ ಪಟೇಲ್ ಮುಂತಾದ ನಾಯಕರ ಮೇಲೂ ಕೆಲವರಿಗೆ ಕ್ರೋಧವಿಲ್ಲವೇ? ಭಾರತ ಸರಕಾರ ಅವರನ್ನು ರಕ್ಷಿಸುತ್ತಿದೆಯೇನು? ಜನರಲ್ಲಿ ವಿಪರೀತ ಉದಯಸಿದ್ದರೆ ಯಾರನ್ನೂ ರಕ್ಷಿಸಲು ಸಾಧ್ಯವಿಲ್ಲ ' ಎಂಬುದಾಗಿ ಗವರ್ನರು ನುಡಿದರು

ಹೃದಯಸ್ತಂಭನೆಯಿಂದ ಪ್ರಿನ್ಸಿಸಾಲರ ಮರಣ

ಗಾಂಧೀಜಿಯರ ಕೊಲೆ ವಾರ್ತೆಯನ್ನು ಕೇಳಿ ವಿಜಯನಗರಂ ಮಹಾರಾಜ ಕಾಲೇಜಿನ ಪ್ರಿನ್ಸಿಪಾಲರು

ಒಂದು ದಿವಸ ಪೂರ್ತಿಯಾಗಿ ಉಪವಾಸ ಮಾಡಿದರು ಉಪವಾಸ ಮುಕ್ತಾಯ ಮಾಡುವ ವೇಳೆಗೆ ಸರಿಯಾಗಿ ೬ ಪ್ರಜೆಪ್ರತಿಯ ನಿಂತು ನಿಧನರಾದರು

ಪ್ರೆಸಿಡೆಂಟ್ ಟ್ರೂಮನ್‌ರವರ ಸಂತಾಪ ಸಂದೇಶಕ್ಕೆ ಲಾರ್ಡ್ ಸೌಂಟ್‌ಬೇಟನ್‌ರ ಉತ್ತರ

ಗಾಂಧೀಜಿಯವರಂತಹ ವ್ಯಕ್ತಿಯನ್ನು ಭಾರತದ ಎಲ್ಲಿಗಲಿ, ಇಡೀ ಪ್ರಪಂಚದಲ್ಲಾಗಲಿ ಹಲವಾರು ಶತಮಾನಗಳು ಕಳೆದರೂ ಪುನಃ ಕಾಣುವುದು ಅಸಂಭವ! ಅವರ ಸತ್ಯ, ಸಹನೆ ಮತ್ತು ಪ್ರೇಮಮಯ ಜೀವನ ಜಗತ್ತಿಗೆ ಸ್ಫೂರ್ತಿ ತುಂಬಲಿ' ಮುಷ್ಕಾಕ್ಷರ ಉನ್ನತ ವರ್ತನೆಯನ್ನು ಅನುಸರಿಸುವುದರ ಮೂಲಕ ಜಗತ್ತು ನಾನಾವಿಧವಾದ ತೊಂದರೆಗಳಿಂದ ಪಾರಾಗಲೆಂಬುದೇ ಈ ಸಹಿಸಲಸಾಧ್ಯವಾದ ದುಃಖಸಾಗರದ ಪರ್ಯವಸಾನದಲ್ಲಿ ನಮ್ಮನ್ನು ಸಂತೈಸುವ ಮಹದಾಶೆ! ಎಂಬುದಾಗಿ ಅಮೇರಿಕದ ಸಂಯುಕ್ತಸಂಸ್ಥಾನಗಳ ಅಧ್ಯಕ್ಷ ಮಿ॥ ಟ್ರೂಮನ್‌ರವರ ಸಂದೇಶಕ್ಕೆ ಉತ್ತರವಾಗಿ ಗವರ್ನರ್-ಜನರಲ್ ಮೌಂಟ್‌ಬೇಟ್ಟನ್‌ರು ತಿಳಿಸಿದ್ದಾರೆ "ಮಹಾತ್ಮಗಾಂಧಿಯವರ ಅಂತ್ಯ ಕ್ರಿಯೆಯ ಸಂದರ್ಭದಲ್ಲಾಗಿ ಯಮುನಾ ನದಿಯ ದಡದಲ್ಲಿ ನೆರೆದಿದ್ದ ಲಕ್ಷಾಂತರ ಜನಸಂದಣಿಯು ಮಾನವ ಲೋಕದ ಮೇಲೆ ಅವರ ಪ್ರಭಾವವಿತ್ತೆಂಬುದನ್ನು ತೋರಿಸುತ್ತಿದ್ದಿತು ಈ ಜನಸಮೂಹದ ಶೋಕ, ಗಾಂಧೀಜಿಯವರಲ್ಲಿ ಈ ನಾಡಿನ ಜನರ ಭಕ್ತಿ ಗೌರವವನ್ನೆತ್ತಿ ತೋರಿಬಂದದ್ದನ್ನು ವ್ಯಕ್ತಗೊಳಿಸಿತು ಎಂದು ಅರಿಸಿರುವರು

ಆರ್ ಎಸ್. ಎಸ್. ಮೇಲೆ ಪ್ರತಿಬಂಧಕ

ಮೈಸೂರು ಸರ್ಕಾರದ ಘೋಷಣೆ

ಮೈಸೂರು ಸರ್ಕಾರದವರು ಸಾರ್ವಜನಿಕರಕ್ಷಣಾ ಶಾಸನದ ಪ್ರಕಾರ, (೧೯೧೯ ನೇ ವಿಧಿ) ಸಂಸ್ಥಾನವಲ್ಲಿ ರಾಷ್ಟ್ರೀಯ ಸ್ವಯಂಸೇವಕಸಂಘ ಎಂಬುದನ್ನು ನ್ಯಾಯಬಾಹಿರವಾದ ಸಂಸ್ಥೆ ಎಂಬುದಾಗಿ ಸಾರಿದ್ದಾರೆ ಬೆಂಗಳೂರು ಶ್ರೀರಾಮಪುರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಾಲಯವನ್ನು ನ್ಯಾಯಬಾಹಿರವೆಂದೂ ಮಾಡಿದೆಂದು ಸರ್ಕಾರದವರು ಪ್ರಕಟಿಸಿರುತ್ತಾರೆ ಆರ್ ಎಸ್ ಎಸ್ ಮೇಲೆ ಸರ್ಕಾರದವರು ಪ್ರತಿಬಂಧಕಾಜ್ಞೆ ಹೊರಡಿಸಿದುದರಿಂದ ಪೋಲೀಸಿನವರು ಶ್ರೀರಾಮಪುರದಲ್ಲಿರುವ ಆರ್ ಎಸ್ ಎಸ್ ಕಛೇರಿಗೆ ಬೀಗಮುದ್ರೆ ಹಾಕಿದ್ದಾರೆ ಆಲ್ಲಿದ್ದ ೩೫,೦೦೦ ರೂಪಾಯಿ ಬೆಲೆಯ ಡೇರೆಗಳು, ೩೦೦೦ ಕಂಬಳಿ, ಚಿಲ್ಲರೆ ಸಾಮಾನುಗಳ ಸ್ಥಳ ವಶಪಡಿಸಿಕೊಂಡಿದ್ದಾರೆ

ದೆಹಲಿಯಲ್ಲಿ ಮೈಸೂರು ಕಛೇರಿ

ಭಾರತ ಸರ್ಕಾರ ಮೈಸೂರು ಸರ್ಕಾರಗಳ ವ್ಯವಹಾರಗಳನ್ನು ಸುಸೂತ್ರವಾಗಿ ನಡೆಯುವಂತೆ ಮಾಡಲು ದೆಹಲಿಯಲ್ಲಿ ಮೈಸೂರು ಕಛೇರಿಯೊಂದನ್ನು ಸ್ಥಾಪನೆ ಮಾಡಲಾಗುವುದೆಂದೂ ಮತ್ತು ಅಲ್ಲಿಗೆ ಒಬ್ಬರು ಉನ್ನತ ಅಧಿಕಾರಿಗಳನ್ನು ಕಳಿಸಲಾಗುವುದೆಂದೂ ತಿಳಿದು ಬಂದಿದೆ

ದುಃಖಪ್ರದರ್ಶನ ಸಭೆ, ಅವಿನಹಳ್ಳಿ

ಶಿವಮೊಗ್ಗಾ ಡಿಸ್ಟ್ರಿಕ್ಟ್ ಅವಿನಹಳ್ಳಿ ಗ್ರಾಮದಲ್ಲಿರುವ ಸಮಸ್ತ ವೀರಶೈವರು ಈಶ್ವರ ದೇವಾಲಯದಲ್ಲಿ ಸೇರಿ ಕಾಶೀ ಜಗದ್ಗುರುಗಳ ವಿಯೋಗದ ಬಗೆ ದುಃಖ ಪ್ರದರ್ಶನವನ್ನು ಮಾಡಿದರು ಸದರಿ ಸಭೆಗೆ ಶ್ರೀಮಾನ್ ಒನವರಾಜ್ ಹಿರೇಮಠ ಕುಮಾರಶೆಟ್ಟಿ, ಇವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಜಗದ್ಗುರುಗಳ ಗುಣಾನವನ್ನು ಮಾಡಿದ ಮೇಲೆ ಆ ಮಹಾತ್ಮರ ಪಾದ ಕಮಲದಲ್ಲಿ ಚಾಪ್ಪಾಂಜಲಿಯು ಸಮರ್ಪಿಸಲ್ಪಟ್ಟಿತು

ಕೆ ಬಸಪ್ಪ

ಪುಣ್ಯದಿನೋತ್ಸವಗಳು

ಪಂಢರಪುರ

ಪಂಢರಪುರ ನಗರದಲ್ಲಿರುವ ಶ್ರೀರ ಪ್ರಪಕಾಪತಿ ಸ್ವಾಮಿಗಳವರ ಮಹದಲ್ಲಿ ತಾ॥ ೬೯-೧೪೪೪ ನೇ ದಿವಸ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯದಿನೋತ್ಸವವು ಒಹಳ ವೈಭವದೊಡನೆ ನೆರವೇರಿಸಲ್ಪಟ್ಟಿತು ಆ ದಿವಸ ಮಧ್ಯಾಹ್ನ ೪ ಘಂಟೆಯಿಂದ ೬ ಘಂಟೆಯವರೆಗೆ ವೀರಶೈವ ಸ್ತ್ರೀಸಮಾಜದವರು ಭಜನೆಯನ್ನು ಮಾಡಿದರು ಬಳಿಕ ಧಾರ್ಮಿಕ ಸಂವಾದವು ನೆಡೆಸಿರುತು ರಾತ್ರಿ ೯ ಘಂಟೆಯಿಂದ ೧೧ ಘಂಟೆಯವರೆಗೆ ನೇ ಸಾತಾರಕರ ಗಂಗಾಧರಶಾಸ್ತ್ರಿಗಳು ಪ್ರವಚನವನ್ನು ಮಾಡಿದರು ರಾತ್ರಿ ೧೧ ಘಂಟೆಯಿಂದ ೨ ಘಂಟೆಯ ವರೆಗೆ ಸಾಮೂಹಿಕ ಭಜನೆಯು ನೆರವೇರಿತು ಆ ಮೇಲೆ ಜಗದ್ಗುರು ಜಯಘೋಷ ಪೂರ್ವಕ ಪಾದಪೂಜೆ ಸಮಾಪ್ತಿಗೊಂಡಿತು

ಪ್ರತ್ಯಕ್ಷದರ್ಶಿ

ಸೊಲ್ಲಾಪುರ

ಸೊಲ್ಲಾಪುರ ನಗರದಲ್ಲಿರುವ ಮಂ॥ ರಾ॥ ಶಿವಶಂಕರಪ್ಪ ಚಿಮ್ಮಾಡ ಇವರ ಮನೆಯಲ್ಲಿ ಕಳೆದ ತಿಂಗಳು ೨೯ ನೆಯ ತಾರೀಖಿನ ದಿವಸ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯತಿಥಿಸಮಾರಂಭವು ಒಹು ಆಟ್ಟುಂಬಾಸೊಡನೆ ನೆರವೇರಿತು ಪ್ರಾತಃಕಾಲ ಸೂಜಾದಿಗಳು ನೆರವೇರಿದುವು ಎಳಕ ಗಣಾರಾಧನೆಯು ನೆರವೇರಿತು ಸಾಯಂಕಾಲ ೫ ಘಂಟೆಗೆ ಸೌ॥ ರಾಜಾಬಾ ಶೀರಾಯಿ ಚಿಡಗುಂಪಿ ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ವೀರಶೈವಸದಾಚಾರ ಸ್ತ್ರೀಸಮಾಜದವರು ಸಭೆಯನ್ನು ನೆರವೇರಿಸಿರು ಕ ಮಾರಿ ಕಸ್ತೂರಿಬಾಯಿ, ಕುಮಾರಿ ಕಮಲಾಬಾಯಿ ಇವರು ಸಿದ್ಧಲಿಂಗ ಜಗದ್ಗುರುಗಳ ಸ್ತೋತ್ರಗಳನ್ನು ಹಾಡಿದರು ಆ ಮೇಲೆ ಸೌ॥ ಬಸಮ್ಮ ನಂಬಿನಿಕಿ, ಸೌ॥ ಪಾರ್ವತಮ್ಮ ಹಿರೇಮಠ, ಸೌ॥ ಸಿದ್ಧಮ್ಮಾಬಾಯಿ ಗುಡಾ ಸೌ॥ ಪಾರ್ವತಮ್ಮ ಮೇಂಡಿಕೆ, ಸೌ॥ ವತ್ಸಲಾಬಾಯಿ ಸೋಲಾಪುರೆ, ಸೌ॥ ಶಾರದಾಬಾಯಿ ಮೇಗಣೇಕರ್ ಸೌ॥ ಗುರು ಶಾಂತಮ್ಮ ಖಂಂಠರಜೆ ಇವರೇ ಮೊದಲಾದವರು ಜಗದ್ಗುರುಗಳ ಮಹಿಮೆಯ ಬಗ್ಗೆ ಭಾಷಣಗಳನ್ನು ಮಾಡಿದರು ಆ ಮೇಲೆ ಶ್ರೀಮತಿ ಪಾರ್ವತೀಬಾಯಿ ಚಿಮ್ಮಾಡ ಇವರು ಸರ್ವರ ಆಭಾರವನ್ನು ಮನ್ನಿಸಿದರು ಒಳಕ ಜಗದ್ಗುರುಗಳ ಮಂಗಳದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಒಸವಯ್ಯ, ನಂದಿಸುರ

ಬಿಗವೇರಿ

ತಾ॥ ೨೮-೧೪೪೪ ನೇ ಗುರುವಾರ ಸಂಜೆಬೀರೋ ಡ್ಯಾಕರೂ, ಪರಮ ತಪಸ್ವಿಗಳೂ ಆದ ಶ್ರೀಮದ್ಜಂಗಮಯೋಗಿ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಹತ್ತೆರಡನೆಯ ವರ್ಷದ ಪುಣ್ಯದಿನಾಚರಣೆಯನ್ನು ಪರಸನಹಳ್ಳಿ ತಾಪ್ಲೂರು ಚಿಗಟೇರಿ ಗ್ರಾಮದ ಸಕಲ ಮತೀಯರೂ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು ಗ್ರಾಮವಲ್ಲಿ ಎಲ್ಲಾ ಕಾರ್ಯಗಳಿಗೂ ಬಿಡುವು ಸಿಕ್ಕಿದ್ದಿತು ಸಾಯಂಕಾಲ ೪॥ ಗಂಟೆಗೆ ಶ್ರೀವೀರಭದ್ರನ ತಿಲಾನುಟಿವಲ್ಲಿ ಶ್ರೀಸಿದ್ಧಲಿಂಗ ಭಗವತ್ಪಾದರ ಭಾವಚಿತ್ರದ ಪೂಜೆಯು ವಾದ್ಯಗಳೊಡನೆ ಭಕ್ತಿಶ್ರದ್ಧೆಗಳಿಂದ ಭಾವಪೂರ್ಣವಾಗಿ ಜರುಗಿಸಲ್ಪಟ್ಟಿತು ಪ್ರಾರ್ಥನಾನಂತರ ಮೋಹನ ಜಡೆಯ ಮೇಹದ ಶ್ರೀ॥ ಪಂ॥ ಬ್ರ॥ ಗಂಗಾಧರ ಶಿವಾಚಾರ್ಯರು ಕೈಕ್ಕಿರದ ಪತ್ರವ್ಯವಹಾರಕ್ಕೆ ಶ್ರೀಕಾಶೀಯೋಗಿ ಪುಂಗವರ ಮಹಿಮಾಪ್ರಭಾವವನ್ನು ವಿಶದೀಕರಿಸಿದರು ಅಮೇಲೆ ವಿದ್ಯಾನಿಧಿಗಳೂ, ಸಕಲೇತಿಹಾಸತೇಜವಿದರೂ ಆದ ಕಾಶೀ ಶ್ರೀಜ್ಞಾನಸಿಂಹಾಸನಾಧೀಶ್ವರ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರು ಶಿವೈಕ್ಯರಾದ ವಿಷಯವನ್ನು ಶೋಕತಪ್ತರಾಗಿ ಹೇಳುತ್ತಿರುವಾಗ್ಗೆ ಸಭೆಯ ಎಲ್ಲಾ ಕಡೆಗಳಿಂದಲೂ ದುಃಖೋದ್ಗಾರಗಳು ಹೊರಟುವು ಮಹಾತ್ಮರಾದ ಶಿವೈಕ್ಯರ ಪವಿತ್ರಾತ್ಮಕ್ಕೆ ಜಗದಾಚಾರ್ಯರು ಶಾಂತಿಯನ್ನೀಯಲೆಂದು ಸ್ವಾರ್ಥಿಸಿದ ಮೇಲೆ ಮಂಗಲದೊಡನೆ ಸಭೆಯು ಮುಕ್ತಾಯವಾಯಿತು

ಪಂಚಾಚಾರ್ಯ ಭಜನಸಂಘದ ಕಾರ್ಯದರ್ಶಿ

ಗದಗ

ಧಾರವಾಡ ಡಿ॥ ಗದಗ ಗ್ರಾಮದಲ್ಲಿರುವ ಮಂ॥ ರಾ॥ ಬಳೆಗಾರ ವೀರಪ್ಪನವರು ತಮ್ಮ ಗೃಹದಲ್ಲಿ ಉಜ್ಜಯಿನೀ ಜಗದ್ಗುರುಗಳ ಪುಣ್ಯದಿನೋತ್ಸವವನ್ನು ಬಹುಭಕ್ತಿಯಿಂದ ಆಚರಿಸಿದರು ತಾ॥ ೯೯-೧೧-೪೪ ನೆಯ ದಿವಸ ವೇ॥ ಚೆನ್ನ ಮಲ್ಲಯ್ಯ ಹಿರೇಮಠ ಇವರು ಜಗದ್ಗುರುಗಳ ಭಾವ ಚಿತ್ರಕ್ಕೆ ವೇದೋಕ್ತವಾಗಿ ಪೂಜೆಮಾಡಿ ಸಪ್ತಸ್ವರಾಮಾಮ ವಳಿಯಿಂದ ಸಪ್ತಸ್ವರಬದ್ಧವಚನಗಳನ್ನು ಸವರ್ಸಿದರು ಈ ಪೂಜೆಯನ್ನು ಮಂ॥ ರಾ॥ ಮಹಾದೇವಪ್ಪನವರು ಮತ್ತು ಅವರ ಧರ್ಮಪತ್ನಿಯವರು ಒಕ್ಕುಳ್ತೆಯಿಂದ ನೆರವೇರಿಸಿದರು ಈ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೆಯ್ಸರ ೩ ರೂ ಗಳನ್ನು ಸಮರ್ಪಿಸಿದರು ಆ ಮೇಲೆ ಗಣಾರಾಧನೆಯಾಗಿ ಕಾರ್ಯ ಕ್ರಮವು ಸಮಾಪ್ತಿಗೊಂಡಿತು

ಓರ್ವ ಗುರುಭಕ್ತ

ಬೆಳಗಾಂವ

ಬೆಳಗಾಂವ ತಿವಿನ್ನಲ್ಲಿರುವ ಉದಾಸ್ತಿ ಹಿರೇಮಠದಲ್ಲಿ ನೇ॥ ಸಂ॥ ಶ್ರೀಕೈಲಾಸನಾಥಶಾಸ್ತ್ರಿಗಳು ಪ್ರತಿವರ್ಷ ಪದ್ಧತಿಯಂತೆ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಪುಣ್ಯದಿನೋತ್ಸವವನ್ನು ಒಹು ವೈಭವದಿಂದ ನೆರವೇರಿಸಿದರು ಸ್ವಾತಃಕಾಲ ರುದ್ರಾಭಿಷೇಕ, ಬಿಲ್ವಾರ್ಚನಾದಿಗಳು ನೆರವೇರಿದುವು ಸಾಯಂಕಾಲ ೫ ಘಂಟೆಗೆ ಸಭೆ ಸೇರಿತು ಸಭೆಗೆ ಅನೇಕ ಜನರು ಆಗಮಿಸಿದ್ದರು ಪಂಡಿತ ಶ್ರೀಕೈಲಾಸನಾಥಶಾಸ್ತ್ರಿಗಳು ಜಗದ್ಗುರುಗಳ ಮಹಿಮಾತಿಶಯವನ್ನು ಕುರಿತು ಮನೋಹರವಾಗಿ ಭಾಷಣವನ್ನು ಮಾಡಿದರು ಆಮೇಲೆ ಕಾಶೀಜಗದ್ಗುರುಗಳವರು ಶಿವಾಧೀನರಾದ ಬಗ್ಗೆ ದುಃಖ ಪ್ರದರ್ಶನವು ಮೂಡಲ್ಪಟ್ಟಿತು ಒಳಕ ಜಗದಾಚಾರ್ಯರ ಮಂಗಲದೊಡನೆ ಸಭೆಯು ಸಮಾಪ್ತಿಗೊಂಡಿತು

ಪ್ರತ್ಯಕ್ಷದರ್ಶಿ.

ಸ್ವೀಕಾರ

ಧಾರವಾಡ ಡಿ॥ ಗದಗ ಗ್ರಾಮದಲ್ಲಿರುವ ಮಂ॥ ರಾ॥ ಒಳೆಗಾರ ವೀರಪ್ಪನವರು ತಮ್ಮ ಗೃಹದಲ್ಲಿ ಉಜ್ಜಯಿನೀ ಜಗದ್ಗುರುಗಳ ಪುಣ್ಯದಿನೋತ್ಸವವನ್ನು ಬಹುಭಕ್ತಿಯಿಂದ ನೆರವೇರಿಸಿದ ಸಮಯದಲ್ಲಿ ಶ್ರೀಪ್ರಭಾಪೋಷಣ ಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ತಿಪಟೂರು ತಿವಿನ್ನಲ್ಲಿರುವ ಮಂ॥ ರಾ॥ ಶೀಲ ಮತ್ತರ ರುದ್ರಪ್ಪನವರು ತಮ್ಮ ಪುತ್ರನಿಗೆ ತಾ॥ 14-1-44 ನೆಯ ಮಕರಸಂಕ್ರಾಂತಿ ದಿವಸ "ರೇಣುಕ" ನೆಂಬು ನಾಮಕರಣ ಮಾಡಿದ ಸಮಯದಲ್ಲಿ ಶ್ರೀಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ತುಂಬಾ ಪುರಸಭೆದ ಪುರೋಹಿತ ವೇ॥ ನಂಜುಂಡಯ್ಯನವರ ದ್ವಾರಾ ತಲಪಿರುತ್ತದೆ

ಬೆಳಗಾಂವ ಡಿ॥ ಸತ್ತಿಗೇರಿ ಗ್ರಾಮದಲ್ಲಿರುವ ಮಂ॥ರಾ॥ ವೀರಪ್ಪ ಪಟ್ಟಣಶೆಟ್ಟಿ ಇವರಿಗೆ ಪುತ್ರನು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ಸತ್ತಿಗೇರಿ ಹಿರೇಮಠದ ಶ್ರೀಸಪ್ಪಟ್ಟದ ಸ್ವಾಮಿಗಳವರ ದ್ವಾರಾ ತಲಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತವಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ಹಿಂದೂ ಸಿದ್ಧಾಂತಶಿಖಾಮಣಿಯನ್ನು ಸ್ವಾಧೀನಮಾಡಿಕೊಳ್ಳುವುದು ಅತ್ಯಾವಶ್ಯಕವಾಗಿದೆ. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರುದ್ರೇಣುಕಾಚಾರ್ಯರು ಜಗತ್ತಿನ ಉತ್ಪತ್ತಿಸ್ಥಿತಿಲಯಕಾರಣವಾದ ಅಷ್ಟಮೂರ್ತಿಗಳಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಸಂಗ್ರಹಿಸಿ ಸಂಸ್ಕೃತಭಾಷೆಯಲ್ಲಿ ಬರೆದಿರುತ್ತಾರೆ. ಅದರ ಒಂದು ವ್ಯಾಖ್ಯಾನವನ್ನೂ ಗೂಢಾರ್ಥಗರ್ಭಿತವಾದ ಪ್ರತ್ಯೇಕ ಶ್ಲೋಕಗಳಿಗೆ ಸರಳವಾದ ಅರ್ಥವನ್ನು ಬರೆಯಲ್ಪಟ್ಟಿದ್ದು ಈ ಕೊರತೆಯನ್ನು ದೂರವಾಗಿಸುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಈ ಗ್ರಂಥವನ್ನು ಓದಿದೊಡನೆ ಅಂತರಾತ್ಮದಲ್ಲಿ ಮಹತ್ತ್ವವು ಪಾರಲೌಕಿಕ ವೇದ್ಯವಾಗುವುದು. ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೬ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥವನ್ನು ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಪುನೀತಚರಿತ್ರೆಗಳು ಬೋಧಿಸಲ್ಪಟ್ಟಿರುವುದರಿಂದ ಗ್ರಂಥದ ಘನತೆಯು ಮತ್ತಷ್ಟು ಹೆಚ್ಚಿದೆ. ಈ ಅಮೂಲ್ಯಗ್ರಂಥವನ್ನು ವೀರಶೈವಬಂಧುಗಳೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅಮೃತಲಿಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧೫ ೦—೬—೦

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೪—೦

ಶ್ರೀ ಜಗದ್ಗುರು ಪಂಚಾಚಾರ್ಯರಿಗೆ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೪ ೦—೩—೦

" " " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಜಂಬೂದ್ವೀಪಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಏಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀ ಶೈಲಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳ ಕಿರೀಟಧಾರಣಮಾಡಿಸುವ ಫೋಟೋ ೦—೧—೬

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದುಜ್ಜಯಿನೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಶುಶ್ರೂಷೆಮಾಡುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಸ್ವಾಧೀನ ಶಿಷ್ಟದ ಸುಂದರ ಫೋಟೋ ೦—೧—೬

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಮಾನರಾಗಿರುವ ಫೋಟೋ .... ೦—೧—೬

ಲಿಂಗಳೂರು ಕಂಟೋನ್ಮೆಂಟಿನಲ್ಲಿ ನೆಲೆಗೊಂದ ರಂಭಾಪುರೀ ಜಗದ್ಗುರುಗಳ ಅಶ್ವಪಲ್ಲಕ್ಕಿ ಮೆರವಣಿಗೆಯ ಫೋಟೋ ೦—೧—೬

ಶ್ರೀಜಗದ್ಗುರು ರಂಭಾಪುರೀ ವೀರಪಟ್ಟಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೨—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ) ೧ ಆಣೆ

ಸಧ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ

ಪಂಚವಿಂಶತಿ ಪ್ರಶ್ನಪ್ರಶ್ನೆ (೫ನೆಯ ಆವೃತ್ತಿ) ೧ ಆಣೆ

ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ) ೨ ಆಣೆ

ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೦ನೆಯ ಆವೃತ್ತಿ) ೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ೨ ಆಣೆ

ಬಸವಾದಿಪ್ರಮಥತತ್ಪದರ್ಪಣ (೪ನೆಯ ಆವೃತ್ತಿ) ೨ ಆಣೆ

ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) ೨ ಆಣೆ

ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) .. ೨ ಆಣೆ

ಶ್ರೀರುದ್ರಮುನಿಶಿವಾಚಾರ್ಯಶತಕ ೨ ಆಣೆ

ಶಿವಶಕ್ತಿವಿಲಾಸ .... .. ೨ ಆಣೆ

ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ೨ ಆಣೆ

ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ) ೨ ಆಣೆ

ಪಂಚಾಚಾರ್ಯಪ್ರಕಾಶ .... .. ೩ ಆಣೆ

ಪಂಚಾಚಾರ ಪ್ರಕಾಶಿಕಾ .. .... ೩ ಆಣೆ

ವೀರಶೈವಾಚಾರವಿಧಿ (೪ನೆಯ ಆವೃತ್ತಿ) .. .... ೪ ಆಣೆ

ಲಿಂಗಧಾರಣವಿಧಿ .. .. ೪ ಆಣೆ

ವಿವಾಹವಿಧಿ (೪ನೆಯ ಆವೃತ್ತಿ) .. ೪ ಆಣೆ

ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ .... ೪ ಆಣೆ

ಶೈವೋಪಪತ್ತಿಕತ್ಖಂಗ್ರಹಃ (ಸಂಸ್ಕೃತ) ..... ೪ ಆಣೆ

ವೀರಶೈವ ಪ್ರಾಯಶ್ಚಿತ್ತವಿಧಿ .. .... ೪ ಆಣೆ

ವೈದಿಕನಾಮ್ನಾಯರಹಸ್ಯ .... ೪ ಆಣೆ

ಸಧ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ... ೬ ಆಣೆ

ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ .... ೬ ಆಣೆ

ಸಿದ್ಧಾಂತ ಶಿಖಾಮಣಿ (ಮೂಲಸೂತ್ರ, ಚಿಕ್ಕಸೈಜು) ..... ೮ ಆಣೆ

ಶಿವಾದ್ವೈತಸರಭಾಷಾ (ಸಂಸ್ಕೃತ) .... ೮ ಆಣೆ

ವೀರಶೈವಮಹಾತ್ಮರು .. ೮ ಆಣೆ

ಬಸವಧ್ವಾಂತವಿದಾರಕರ (೩ನೆಯ ಆವೃತ್ತಿ) ... ೮ ಆಣೆ

ಆಗಮಪರಿಜ್ಞಾನ .. ... ೮ ಆಣೆ

ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ

ಪದ್ಮೋದರತ್ನಾವಳಿ .. ೮ ಆಣೆ

ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ೧೨ ಆಣೆ

ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ೧೨ ಆಣೆ

ಶಿವಾಸೂಕ್ತಸಿದ್ಧಾಂತದರ್ಪಣ ೧೨ ಆಣೆ

ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು ೩ನೆಯ ಆವೃತ್ತಿ) ೧೫ ರೂ

ಶ್ರೀಕರಭಾಷ್ಯಂ (ಚತುರ್ಥಪ್ರತಿ) ೧೫ ರೂ

ವೀರಶೈವರತ್ನ (ಶನೆಯ ಆವೃತ್ತಿ, ೩೦ ಮಹತ್ತಮ ಫೋಟೋಗಳಿರುವುದು) ೨ ರೂ

ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಿಸಿಪಟ್ಟದ್ದು) ೨ ರೂ

ಸಿದ್ಧಾಂತಶಿಖಾಮಣಿ (ಕನ್ನಡ ವೀಕಾಸಹಿತ) .. ೨ ರೂ

ಶಿವಾಗಮಸಂಗ್ರಹಃ (ಶಂಭ್ವಾಖ್ಯಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು) ೨ ರೂ.

ಶಿವಾದ್ವೈತಮಂಜರಿ (ಕನ್ನಡ ದೇವ್ಯಾಖ್ಯಾನ ೧೩೪೪ ಪುಟ) .. ೯ ರೂ

A brief life-sketch of Pandit Sri Kashinatha Shastriji (*English*) 4 As

The Philosophical Aspect of Virasaivism (*Engli h*) ... 8 As

Speeches by Pandit Shri Kashinatha Shastriji (*English*) 12 As

ಲಿಂಗಧಾರಣಚಂದ್ರಿಕಾ (ಸಂಸ್ಕೃತ) ೩ ಆ.

ವೀರಶೈವರತ್ನ (ಸಂಗಡಿ) ೧ ರೂ.

ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ) ೧ ರೂ.

ಸಂಧಿಕೌಮುದೀಕಾರಿಕಾ (ಸಂಸ್ಕೃತ) ೨ ಆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No. M 2266 ॥ ಶ್ರೀಚಾಮ್ಲುರು ಪಂಚಾಚಾರ್ಯರು ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಭವಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಾನಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರುತ್ವನುರವರ್ ಪಾಲಿಪ್ಪುದೀಲೋಕಮಂ ॥

ಸ್ವಳದವರಿಗೆ ೨ ರೂ. ೪ ಆಣೆ ಪರಸ್ಥಳದವರಿಗೆ ೩ ರೂ ಏ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೬ನೇ ಫೆಬ್ರವರಿ ೧೯೪೪ [ಸಂಚಿಕೆ ೪೩

ಗಾಂಧೀಜಿಯವರ ನಿಧನದ ಬಗ್ಗೆ ಬೆಂಗಳೂರಿನಲ್ಲಿ ನೆರವೇರಿದ ಶೋಕ ಸಭೆಯಲ್ಲಿ ಮಹಾಪ್ರಭುಗಳವರು ಅಪ್ಪಣೆ ಕೊಡಿಸಿದ ಭಾಷಣ

"ನಮ್ಮ ವೇಶದ ಶ್ರೇಷ್ಠ ನಾಯಕರೂ ಧಾರ್ಮಿಕ ಮಾರ್ಗದರ್ಶಿಗಳೂ ಮತ್ತು ಹಿತೋಪದೇಶಕರೂ ಆದ ಮಹಾತ್ಮಾ ಗಾಂಧಿಯವರು ನಮ್ಮನ್ನಗಲಿ ಹೋದುದು ರಿಂದ, ನಮ್ಮ ರಾಧವಾದ ದುಃಖವನ್ನು ಸೂಚಿಸುವುದ ಕ್ಕಾಗಿ, ಈದಿನ ನಾವು ಇಲ್ಲಿ ಸೇರಿರುತ್ತೇವೆ ಮಹಾತ್ಮಾ ಗಾಂಧಿಯವರ ಮರಣದಲ್ಲಿ ಪರಿಣಾಮಗೊಂದ ಘಟನೆಯು ಬಹಳ ದುರಂತವಾದುದು ನಮ್ಮ ದೇಶಕ್ಕೆ ಈಗ ಒದಗಿರತಕ್ಕ ಬಿಕ್ಕಟ್ಟಿನ ಸ್ಥಿತಿಗೇದಲ್ಲ, ಜನಗಳಲ್ಲಿ ಸೌಹಾರ್ದವನ್ನು ನೆಲೆಗೊಳಿಸುವುದಕ್ಕೂ, ದೇಶವು ಸರಿಯಾದ ರೀತಿಯಲ್ಲಿ ಪ್ರಗತಿ ಹೊಂದುವಂತೆ ಮಾಡುವ ದಕ್ಕೂ, ಅತ್ಯಂತ ಪ್ರಭಾವಶಾಲಿಗಳೂ ಮತ್ತು ದಕ್ಷರೂ ಆಗಿದ್ದ ಮಹಾತ್ಮಾ ಗಾಂಧಿಯವರ ನೆರವು ಕಳ್ಪಿಹೋದುದ ರಿಂದ ಉಂಟಾಗಿರತಕ್ಕ ನಷ್ಟವು ಅಪಾರವಾದುದು ಮಹಾತ್ಮಾ ಗಾಂಧಿಯವರು ಸರ್ವದಾ ಅಹಿಂಸಾವಾದಿ ಗಳಾಗಿದ್ದರು ಅಹಿಂಸಾ ತತ್ತ್ವತದಲ್ಲಿ ಅವರಿಗೆ ಅಚಲ ವಾದ ನಂಬಿಕೆಯಿದ್ದಿತು ಸಮಸ್ತ ಸ್ಥಿತಿಗತಿಯಲ್ಲಿಯೂ, ಅವರು ಯಾವಶ್ಚಿತ್ತವೂ ಅಹಿಂಸಾ ವರ್ತನೆಯನ್ನೇ ಕೈಗೊಂಡಿದ್ದರು ಅಂತಹ ಅಹಿಂಸಾವರರು ಅತ್ಯಂತ ಘೋರವಾದ ಹಿಂಸಾಕೃತ್ಯಕ್ಕೆ ಗುರಿಯಾಗಿ ಪ್ರಾಣವನ್ನು ಒಪ್ಪಿಸಿರುವುದು ವಿಚಿತ್ರವಾದ ವಿಧಿಲೀಲೆಯೆಂದು ಕೇಳ ಬೇಕಾಗಿದೆ ಅತ್ಯಂತ ಹೇಯವಾದ ಈ ಕೊಲೆಯಿಂದ ಭಾರತೀಯರ ಹೃದಯವು ಬಹಳವಾಗಿ ಕಲಕಿಹೋಗಿದೆ

ಮಹಾತ್ಮಾ ಗಾಂಧಿಯವರನ್ನು ಭಾರತೀಯ ಜನಾಂಗದ ತಂದೆಯೆಂದು ಕರೆದಿರುವುದು ಸೂಕ್ತವಾಗಿದೆ ೭೪ನೆ ವರುಷಗಳಿಂದಲೂ ನಮ್ಮ ದೇಶಕ್ಕೆ ಅವರು ಅಮೋಘವಾದ ಉಪಕಾರಗಳನ್ನು ಮಾಡಿದ್ದಾರೆ ಅವರು ರಾಜಕೀಯ ಕ್ಷೇತ್ರದಲ್ಲಿ ವಿಶೇಷವಾಗಿ ಕಾರ್ಯ ತತ್ಪರರಾಗಿದ್ದುದು ಮಾತ್ರವೇ ಅಲ್ಲದೆ, ಆಧ್ಯಾತ್ಮಿಕ ಸಾಧನೆಯಲ್ಲಿಯೂ ಬಹಳವಾಗಿ ಮುಂದುವರೆದು ಧಾರ್ಮಿಕ ಶಾಂತಿಯನ್ನು ಸಾಧಿಸಿದ್ದರು. ಇದರ ಪರಿಣಾಮವಾಗಿ, ಜನಾಂಗಗಳ ಪಂಕ್ತಿಯಲ್ಲಿ ಭಾರತೀಯ ಜನಾಂಗವು ಉಚಿತವಾದ ಸ್ಥಾನಮಾನಗಳನ್ನು ಹೊಂದಲು ಸಹಾಯವಾಯಿತು. ಭಾರತೀಯ ಜನಾಂಗದ ಗೌರವವೂ ಮತ್ತು ಘನತೆಯೂ ಹೆಚ್ಚುವಂತೆ ಮಾಡಲು ಮಹಾತ್ಮಾ ಗಾಂಧಿಯವರು ಶ್ರಮಿಸಿರುವುದಕ್ಕಿಂತ ಹೆಚ್ಚಾಗಿ ಮತ್ತಾರೂ ಶ್ರಮಿಸಿಲ್ಲ ಭಾರತೀಯರಲ್ಲಿ ಪಾವಿತ್ರ್ಯವೂ ಬೇಕೆಂದು ಅವರಿಗೆ ತಮ್ಮ ತತ್ತ್ವಸಾಮರ್ಥ್ಯಗಳಲ್ಲಿ ನಂಬಿಕೆ ಯುಂಟಾಗುವಂತೆ ಪ್ರಯೋಧಗೊಳಿಸಿ ಭಾರತ ಜನಾಂಗವನ್ನು ಉಚ್ಚಿದ ಶಿಖರದಲ್ಲಿ ನಿಲ್ಲಿಸಿದವರು ಮಹಾತ್ಮಾ ಗಾಂಧಿಯವರೆಂದು ನಿಜವಾಗಿಯೂ ಹೇಳಬಹುದಾಗಿದೆ ಅದರೆ ಧಾರ್ಮಿಕ ಕ್ಷಾತ್ರದಲ್ಲಿ ಅವರಿಂದ ಲಭಿಸಿರತಕ್ಕ ಪ್ರಯೋಜನವು ಮತ್ತಕ್ಕು ಗಣ್ಯವಾಗಿದೆ ಆ ಪ್ರಯೋಜನವು ಭರತಖಂಡಕ್ಕೆ ಮಾತ್ರವಲ್ಲದೇ ಅಲ್ಲದೆ, ಒಟ್ಟು ಪ್ರಪಂಚಕ್ಕೆ ದೊರೆತಿದೆ ಅದು ಚಿರಕಾಲ ನಿಲ್ಲುವುದು ಮಾತ್ರವಲ್ಲದೇ ಅಲ್ಲದೆ, ಒಟ್ಟು ಮಾನವ ಕುಲಕ್ಕೆ ನಿರಂತರವಾಗಿ ಶ್ರೇಯಸ್ಸನ್ನುಂಟುಮಾಡುವುದಾಗಿಯೂ, ಇದೆ

ಯುದ್ಧದ ಪರಿಸ್ಥಿತಿಯೂ ಮತ್ತು ಅದರ ದುಸ್ಪರಿಣಾಮಗಳಿಂದ ಜನರ ಮನಸ್ಸಿನಲ್ಲಿ ಭಾವನೆಗಳನ್ನು ನಾನಾ ರೀತಿಗಳಲ್ಲಿ ಕುಗ್ಗಿಸಿದ್ದ ಸಮಯವನ್ನಲ್ಲಿ ಶಾಂತಿ ಮತ್ತು ಅಹಿಂಸಾ ತತ್ತ್ವಗಳನ್ನು ಪ್ರತಿಪಾದಿಸಿ ಅವುಗಳನ್ನು ಲೋಕಕ್ಕೆ ಸಾಧಿಸ ಮಹತ್ತಿನೀಯರೆಂದರೆ ಒಟ್ಟು ಮಾನವ ಕೋಟಿಯಲ್ಲಿಲ್ಲಿ ಒಹುತರವಾಗಿ ಮಹಾತ್ಮಾ ಗಾಂಧಿಯವ ರೊಬ್ಬರೇ ಆಗಿನ ಯುದ್ಧ ಸಮಯದಲ್ಲಿ ಕೂಡ " ಅಚಲ ವಾದ ಧೈರ್ಯದಿಂದ ಅವರು ಶಾಂತಿಯ ಮತ್ತು ಅಹಿಂಸಾ ತತ್ತ್ವಗಳನ್ನು ಒಹಿಕರಿಸಿದರು ಪ್ರಾಚೀನರಾದಿ ಜ್ಞಾನಿಗಳೂ ಮತ್ತು ಸಾಧು ಸಂತರೂ ಮಾನವರನ್ನುದ್ಧರಿಸಿ ಶಾಂತಿಯಿಂದಲೂ ಸೌದರ ಪ್ರೇಮದಿಂದಲೂ ವರ್ತಿಸುವಂತೆ ಮಾಡಲು ಪ್ರಯತ್ನಿಸುವುದಕ್ಕಿಂತ ತೀರಾ ಸುಲಭವಾದ ಮಾರ್ಗವನ್ನೇ ಮಹಾತ್ಮಾ ಗಾಂಧಿಯವರೂ ತೋರಿಸಿದರು ಈಚೆಗೆ ಕೋಮುವಾರು ಪ್ರೇಷದಿಂದ ವಿಕಟವಾಗಿ ವರ್ತಿಸಿರುವಂತಹ ಪರಿಸ್ಥಿತಿಯಲ್ಲಿಯೂ ಶಾಂತಿಸೌಹಾರ್ದಗಳನ್ನು ನೆಲೆಗೊಳಿಸಬೇಕೆಂದು ಸ್ಥಿರಸಂಕಲ್ಪಮಾಡಿ ಮಹಾತ್ಮಾ ಗಾಂಧಿಯವರು ಚಿರತ್ವಾರ್ಹವಾದ ತಮ್ಮ ಉಪವಾಸ ವ್ರತಗಳನ್ನು ಕೈಕೊಂಡರು

ಸಮಸ್ತ ಜಾತಿ ಪಂಗಡಗಳವರನ್ನೂ ಒಟ್ಟುಗೂಡಿಸಿ ಅವರಲ್ಲಿ ಸೌಜಾರ್ದವನ್ನು ಸದ್ಭಾವನೆಗಳನ್ನೂ ಉಂಟು ಮಾಡಿ, ಅವರೆಲ್ಲರೂ ತಮ್ಮ ತಮ್ಮಲ್ಲಿಯೂ ಮತ್ತು ಪ್ರಪಂಚದ ನಾನಾ ಜನಾಂಗಗಳಲ್ಲಿಯೂ ಶಾಂತಿ ವಿಶ್ವಾಸ ಗಳಿಂದ ವರ್ತಿಸುವ ಸ್ಥಿರಸಂಕಲ್ಪದಿಂದಲೂ ಆತ್ಮ ಭರ ವಸೆಯಿಂದಲೂ ಕೂಡಿರುವಂತೆ ಮಾಡುವ ಅಭಿಲಾಷೆ ಯಿಂದ ಮಹಾತ್ಮಾ ಗಾಂಧಿಯವರು ಉದ್ದೀಪಿತರಾಗಿದ್ದರು. ಆ ಉದ್ದೇಶ ಸಾಧನೆಗಾಗಿ ಅವರು ಯಾವಶ್ಚಿತ್ತವೂ ಶ್ರಮಿಸಿದರು ಅವರ ದಾರುಣ ಮರಣವೇ ಶ್ರೇಷ್ಠವಾದ ಆ ಉದ್ದೇಶಸಾಧನೆಗೆ ಕಾರಣವಾಗುತ್ತದೆಂದು ನಮ್ಮ ಮನಸ್ಸಿಗೆ ಸ್ಪಷ್ಟವಾಗಿ ತೋರುತ್ತಿದೆ. ಹಿಮಾಲಯ ಪರ್ವತ ಮತ್ತು ಒಂಡೆಗಳಂದಲೂ ಕೂಡಿಸಂತೆ ತೋರುತ್ತದೆ ಅದರೆ ಮಹರುಗಳ್ಕೆ ಹೋದಂತೆಲ್ಲಾ, ನಗಾಧಿರಾಜ ಹಿಮಾಲಯ ಪರ್ವತವೆನ್ನು ಶ್ರೇಷ್ಠವಾಗಿದೆ ಮತ್ತು ಅಪೆಕ್ಕು ಭವ್ಯವಾಗಿದೆ—ಎಂಬುದು ಅರಿವಾಗುತ್ತದೆ. ಮಹಾತ್ಮಾ ಗಾಂಧಿಯವರ ವಿಚಾರವೂ ಅಷ್ಟೇ ರೀತಿಯ ದ್ದಿದೆ. ಅವರು ಸಾಧುಶ್ರೇಷ್ಠರಾದ ಜ್ಞಾನಿಗಳಂಬದನ್ನೂ, ಶಾಂತಿಸ್ವರೂಪಿಯೆಂಬುದನ್ನೂ, ಪರಸಹಿಷ್ಣುತೆ ಮತ್ತು ಸೋದರ ಪ್ರೇಮವನ್ನು ಬೋಧಿಸಿದ ಉದ್ಧಾರಕರೆಂಬ ದನ್ನೂ, ನಮಗಿಂತಲೂ ಹೆಚ್ಚಾಗಿ ಮುಂದಿನ ತಲೆಮಾರು ಗಳವರು ಗ್ರಹಿಸುತ್ತಾರೆಂದು ಹೇಳಬಹುದಾಗಿದೆ.

ಮಹಾತ್ಮಾ ಗಾಂಧಿಯವರು ಮೈಸೂರು ಸಂಸ್ಥಾನದ ರಾಜಮನೆತನದವರಲ್ಲಿ ಸರ್ವದಾ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದುದೇ ಒಂದು ಗೌರವವೆಂದು, ನಾವೂ ಮತ್ತು ನಮ್ಮ ಕುಟುಂಬದವರೂ ಭಾವಿಸಿದ್ದೇವೆ. ಹಿಂದೆ ಅವರನ್ನು ಸಂಸ್ಥಾನಕ್ಕೆ ಸ್ವಾಗತಿಸುವುದರಲ್ಲಿ ನಾವು ಹೆಮ್ಮೆ ಪಟ್ಟಿದ್ದೇವೆ ಈಗ, ಆತ್ಯಯಿಕ್ಕೋರ್ವ ವಿಯೋಗವುಂಟಾದಂತೆ ಭಾವಿಸಿ, ಅವರ ಮರಣದಿಂದ ಕಾವುದೂ ಮತ್ತು ನಮ್ಮ ಕುಟುಂಬದವರೂ ದುಃಖಿಸುತ್ತಿದ್ದೇವೆ ಮಹಾತ್ಮಾ ಗಾಂಧಿಯವರು ಅಚಲ ಧೈರ್ಯದಿಂದ ಬೋಧಿಸಿದ ತತ್ತ್ವಗಳಿಂದಲೂ, ಅವರು ನಿರಂತರವಾಗಿ ಸಮರ್ಥನೆ ಮಾಡಿದ ತತ್ತ್ವಗಳಿಂದಲೂ ಮತ್ತು ಅವರು ತಮ್ಮ ಪ್ರಾಣವನ್ನೇ ಒಪ್ಪಿಸಬೇಕಾಗಿ ಬಂದುದಕ್ಕೆ ಕಾರಣವಾದ ತತ್ತ್ವಗಳಿಂದಲೂ, ನಮ್ಮೆಲ್ಲರಿಗೂ ಪ್ರಯೋಜನವುಂಟಾಗಲೆಂದು ಭಾವಿಸುವುದು ಮಾತ್ರವೇ ನಮಗೆ ಈಗ ಸಾಧ್ಯವಿದೆ ನಾವೂ ನಮ್ಮ ಕುಟುಂಬದವರೂ ಮತ್ತು ಮೈಸೂರು ಸಂಸ್ಥಾನದ ಪ್ರಜೆಗಳೆಲ್ಲರೂ ಮಹಾತ್ಮಾ ಗಾಂಧಿಯವರ ಜೀವನದ ಸುತ್ತು ದೋಧನೆಯ ಉಸಿರಿ ಸೆಂತಿರುವ ಪರಸಹಿಷ್ಣುತೆ ಮತ್ತು ಸೌಹಾರ್ದ ಭಾವನೆ ಗಳನ್ನು ಸಾಧ್ಯವಾದಷ್ಟು ಮಟ್ಟಿಗೂ ಅತ್ಯಂತ ಅಧಿಕ ವಾದ ಅನುಷ್ಠಾನಕ್ಕೆ ತಂದುಕೊಳ್ಳುವ ಪ್ರಯತ್ನ ನಡೆ ಯುವಂತಾಗಲೆಂಬುದು ನಮ್ಮ ಹಾರ್ದಿಕೆಯಾಗಿದೆ ಹಾಗೆ ಮಾಡಿದಲ್ಲಿ, ಪ್ರಸಂಚದಲ್ಲಿ ಈಚೆಗೆ ಅವತರಿಸಿದ ಅತ್ಯಂತ ಶ್ರೇಷ್ಠನಾಯಕರಾದ ಮಹಾತ್ಮಾ ಗಾಂಧಿಯವರ ಸವ ನೆನಪಿನಾಗಿ ಅತ್ಯುತ್ತಮವಾದ ಸ್ಮಾರಕವನ್ನೇ ನಾವು ಏರ್ಪಡಿಸಿದಂತಾಗುತ್ತದೆಂದು ಸೂಚಿಸಲಿಚ್ಛಿಸುತ್ತೇನೆ"

ಶ್ರೀ ಗಂಗಾಂಬಿಕೆಯ ರಥೋತ್ಸವ
ಹಂಪಸಾಗರ

ಒಳ್ಳಾರಿ ಡಿ॥ ಹಂಪಸಾಗರ ಗ್ರಾಮದಲ್ಲಿ ಮೇಲ್ಕಂಡ ರಥೋತ್ಸವವು ಇದೇ ತಿಂಗಳು ೧೬ ನೇ ತಾರೀಖಿನಿಂದ ೧೮ ನೇ ತಾರೀಖಿನವರೆಗೆ ನೆರವೇರುವುದು ದಸರಾ ಜಾತ್ರೆಯು ೧೬ ನೇ ತಾರೀಖಿನಿಂದ ೧ ತಿಂಗಳವರೆಗೆ ನಡೆಯುವುದು ಉತ್ಸವ ದಸರಗಳಿಗೆ ಪಾಂಡೋಪಕ ವನ್ನು ಕೊಡಲಿಹೊಗುವುದು ಈ ಗ್ರಾಮವು ತುಂಗಭದ್ರಾ ನದಿಯ ತೀರದಮೇಲಿರುವುದರಿಂದ ಫೀರು ಮತ್ತು ನೆರೆಕ ಸೌಕರ್ಯವು ಚೆನ್ನಾಗಿದೆ ರಥೋತ್ಸವದ ಮೂರು ದಿವಸಗಳಲ್ಲಿ ಭಾಷಣ, ಗಾಯನ, ಕುಸ್ತಿ ಮೊದಲಾದುವುಗಳು ಜರುಗುತ್ತವೆ. ಎಲ್ಲರೂ ಇದರ ಲಾಭವನ್ನು ಪಡೆಯುವೇಕೆಂದು ಆಶಿಸುವ.

ಸಿದ್ಧಲಿಂಗಪ್ಪ ಯಾದಗಿರಿ
ಹಂಪಸಾಗರ

ಕಾಶೀಜಗದ್ಗುರುಗಳು ಕಣ್ಮರೆಯೊಹಾದರು

ತಾ|| ೨೫ ಗಳನೆಯ ದಿನ ಶಿವತತ್ವವಿಜ್ಞಾನ ಕೇಂದ್ರರೂ, ವೀರಶೈವದರ್ಮಾಕಾಶಚಂದ್ರರೂ ಸಮ್ಮಣ ಗಣಾಂಪ್ರರೂ ವೇದವೇದಾಂ ವಿದಿಪಾರಂಗತರೂ ಹಿಂದೂ ಧರ್ಮ ರಕ್ಷಣಕ್ಕಾಗಿ ಸರ್ವಸ್ವ ತ್ಯಾಗವನ್ನು ಮಾಡಿ ಭಾಷಾಜ್ಞರೂ, ವೇದ ಕಾವ ಸ್ಕಂಧ ವಿದ್ಯಾ ನಿಧಿ, ವಿದ್ಯಾಧಿಷ್ಠಾನ ಪರಬ್ರಹ್ಮಸ್ವರೂಪ ಸರ್ವಜ್ಞಶ್ರೀ ಜಗದ್ಗುರು ವೀರ ಭದ್ರಶಿವಾಚಾರ್ಯ ಸ್ವಾಮಿಗಳು ತಮ್ಮ ಭೌತಿಕದೇಹವನ್ನು ತೊರೆದು ಲಿಲೈಕ್ಯರಾದೆಂದು ಬರೆಯಲು ಅತ್ಯಂತ ಪಶ್ಚಾತ್ತಾಪವಾಗುತ್ತದೆ.

ವೈಜ್ಞಾನಿಕ ತತ್ವಾ ಸಂಶೋಧನೆಯಲ್ಲಿ ವೇದ ಸಂಸ್ಕೃತಿಗಳಲ್ಲಿ ಎಂದು ಜಗತ್ತಿಗೆ ಪ್ರಕಾಶವನ್ನು ಕೊಡುತ್ತಿರುವ ಸಕಲ ಶಾಸ್ತ್ರವಿಶಾರದರೂ ವೇದ ಸಂಸ್ಕೃತಿಗಳಲ್ಲಿ ಎಂದು ಜಗತ್ತಿಗೆ ಪ್ರಕಾಶವನ್ನು ಕೊಡುತ್ತಿರುವ ಸಕಲ ಶಾಸ್ತ್ರವಿಶಾರದರೂ ಆದ ಅಭಿನವವಿದ್ಯಾರಣ್ಯ ಶ್ರೀ ಸಚ್ಚಿದಾನಂದ ಜಗದ್ಗುರು ವೀರ ಭದ್ರಶಿವಾಚಾರ್ಯ ಸ್ವಾಮಿಗಳು ತಮ್ಮ ಭೌತಿಕದೇಹವನ್ನು ತೊರೆದು ಲಿಲೈಕ್ಯರಾದೆಂದು ಬರೆಯಲು ಅತ್ಯಂತ ಪಶ್ಚಾತ್ತಾಪವಾಗುತ್ತದೆ.

ಶ್ರೀಯುತರು ಸಂಸ್ಕೃತ ಕನ್ನಡ ತಮಿಳು ಮಹಾರಾಷ್ಟ್ರಾದಿ ಪ್ರಾಂತಗಳಲ್ಲಿ ಎಲ್ಲಾ ಭಾಷೆಗಳಲ್ಲಿಯೂ ಸಕಲ ಶಾಸ್ತ್ರಗಳಲ್ಲಿಯೂ ಅಸಾಧಾರಣ ಪಾಂಡಿತ್ಯವನ್ನು ಪಡೆದಿದ್ದರು. ಅವರು ಸಂಸ್ಕೃತ, ತೆಲುಗು, ಕನ್ನಡ ಮರಾಠಿ, ಹಿಂದೀ, ಬಂಗಾಲಿ ಮುಂತಾದ ಭಾಷೆಗಳಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರೂ ಯಾವ ಭಾಷೆಗೂ ಮೋಸಹೋದವರಲ್ಲ. ಅಂಟಿಕೊಳ್ಳಲಿಲ್ಲ. ಹುಟ್ಟಿದ ನಾಡು ಆಂಧ್ರವಾದರೂ ಕನ್ನಡ ತಮಿಳು, ಮಹಾರಾಷ್ಟ್ರಾದಿ ಪ್ರಾಂತಗಳನ್ನು ಅಕ್ಕರೆಯಿಂದ ಬೆಗೆಯಲಿಲ್ಲ ಸಕಲ ಭಾಷೆಗಳಲ್ಲಿಯೂ ಸಮಾನವಾದ ಪ್ರೇಮಾಭಿಮಾನವನ್ನು ತಾಳಿ, ಆಯಾ ಪ್ರಾಂತಗಳ ಭಿನ್ನ ಭಿನ್ನ ಬಾಷಾಸಂಪತ್ತಿಗೆ ಸಾಕಷ್ಟು ಮೆಚ್ಚುಗೆಗೆ ಪಾತ್ರರಾಗಿದ್ದರು. ಎಲ್ಲಿಂದಲಾ ಸುತಿವೆದರು ಪೂಜೆಗೊಂಡರು ನಾಡಿನುದ್ದಗಲಕ್ಕೂ ತಲೆತಲೆಮಾರಿಗೂ ಹೊಯ್ದಾಡುತ್ತಿರುವ ಈ ಸಮಯದಲ್ಲಿ ಜನರು ನಮ್ಮ ಜಗದ್ಗುರು ಗಳವರ ಚರಿತ್ರೆಯಿಂದ ಕಲಿತುಕೊಳ್ಳಬೇಕಾಗಿದೆ

ತಾ ೨೨ ೧೨ ೧೯೪೩ ರಲ್ಲಿ ಆಭೂತಪೂರ್ವವಾಗಿ ಜರುಗಿದ ಜಗದ್ಗುರು ಪಟ್ಟಾಭಿಷೇಕಮಹೋತ್ಸವಸಮಯ ದಲ್ಲಿ ನ ಪಾಸನ್ನಾಧಿಯವರ ಒಕ್ಕೊ ಒಂದಿರುವ ಸ್ತುತಿರೂಪ ವಾದ ನಾನಾಭಾಷೆಯ ಕವಿತೆಗಳನ್ನು ಒಟ್ಟುಗೂಡಿಸಿದಲ್ಲಿ ಒಂದು ಮಹಾಗ್ರಂಥವೇ ಆಗುವುದು

ಜಗದ್ಗುರುಗಳವರು ಉದ್ದಾಮ ಸಾಹಿತಿಗಳೂ, ಇತಿ ಹಾಸಸಂಶೋಧಕರೂ ಆಗಿರುವದೆ ಅಧುನಿಕರ ತಲೆಗೆ ಹತ್ತಿದರಿಂದ ವೇದಾಗಮಾದಿ ಧರ್ಮಶಾಸ್ತ್ರಗಳ ರಹಸ್ಯ ವನ್ನು ಅಧುನಿಕವಿಜ್ಞಾನದೊಂದಿಗೆ ಸಮನ್ವಯಮಾಡಿ ಬಾವಮಾದುರವಾದ ರೀತಿಯಲ್ಲಿ ಬೋಧಿಸುವ ಮಹಾನು ಭಾವರೂ ಆಗಿದ್ದರೆಯೆ ಇದರಿಂದಾಗಿ ಕಾಶೀ ಪಂಡಿತ ನಿಶ್ಚವಿದ್ಯಾಲಯದ ಮತ್ತು ಮದ್ರಾಸ್, ಪಾಟ್ನಾ ವಿಶ್ವ ವಿದ್ಯಾಲಯಗಳ ದಕ್ಷಪರೀಕ್ಷಕ ಸ್ಥೂಪಿಸರು ಅದರಲ್ಲಿ ಅತ್ಯಂತ ಪೂಜ್ಯಭಾವವುಳ್ಳವರಾಗಿದ್ದರು

ವಿವಿಧ ಭಾಷೆಗಳಲ್ಲಿ ಉತ್ತಮಗ್ರಂಥಗಳ, ಪತ್ರಿಕೆಗಳ ಪ್ರಕಟನೆ, ವಿದ್ಯಾಂಸರ ಗ್ರಂಥಪರಿಶೋಧನೆ, ಧರ್ಮಚಾರ ತ್ರೆಯ ನಿರ್ಮಾಣ, ವೀರಶೈವವಿಶ್ವಕೋಶದ ಸಂಕಲನ, ಧಾರ್ಮಿಕ ಮಹಾಸಭೆಯ ಸ್ಥಾಪನೆ, ದರ್ಮಪರೀಕ್ಷಗಳ ಧರ್ಮಬೋಧಕರ ಪ್ರಚಾರ, ಯೋಗಾಶ್ರಮ, ಮಹಾ ವಿದ್ಯಾಲಯ, ಮುದ್ರಣಾಲಯಗಳ ಸ್ಥಾಪನೆ ಮುಂತಾದ ಮಹತ್ಕರವಾದ ಕಾರ್ಯಗಳನ್ನು ತಮ್ಮ ಜೀವನದಲ್ಲಿ ನೆರವೇರಿಸಬೇಕೆಂದೂ ಇಪಕ್ಕೆಲ್ಲಾ ಒಟ್ಟಿಗೆ ಮೂರು ಲಕ್ಷ ರೂಪಾಯಿಗಳ ವಿಶಿಷ್ಟೋದ್ದೇಶಗಳಿಗಾಗಿ ಒಂದು ಲಕ್ಷ ದ್ರವ್ಯವನ್ನು ಶ್ರೀವಿಶ್ವಾರಾಧ್ಯಮಹಾಸಂಸ್ಥಾನದಿಂದ ಲೂ ಉಳಿದುದನ್ನು ಸಮಾಜಜಸ್ರಮುಖರಿಂದಲೂ ಸಂಗ್ರಹಿಸಬೇಕೆಂದು ಜಗದ್ಗುರುಗಳವರು ಸಂಕಲ್ಪಿಸಿದ್ದರು ಪವಿತ್ರವಾದ ಸಂಕಲ್ಪವು ಪೂರೈಸಿದ್ದಲ್ಲಿ ವೀರಶೈವರ ಭಾಗ್ಯಕ್ಕೆ ಎಣೆಯೇ ಇರಲಿಲ್ಲ

ಈ ಸಂಕಲ್ಪವು ಸಂಕಲ್ಪವೇ ಆಗಿ ಉಳಿದರೂ ನಮ್ಮ ಜಗದ್ಗುರುಗಳು ತಮ್ಮ ಜೀವನದಲ್ಲಿ ಅನನ್ಯಸಾಧಾರಣ ಗೆಳಾದ ಅವೆಷ್ಟೋ ಕಾರ್ಯಗಳನ್ನು ನೆರವೇರಿಸಿ ಹೋಗಿ ರುವುದು ಸಮಸ್ತರಿಗೂ ತಿಳಿದ ವಿಷಯವಾಗಿದೆ. ಜಗ ದ್ಗುರುಗಳ ಮಹಾವ್ಯಕ್ತಿತ್ವವನ್ನು ನೆನೆದಾಗಿಮ್ಮೆ,

"ವದನಂ ಪ್ರಸಾದಸದನಂ ಸದಯಂ ಹೃದಯಂ ಸುಧಾಮುಚೋ ವಾಚಃ ! ಕರಣಂ ಪರೋಪಕರಣಂ ಏಷಾಂ ಕೇಷಾಂ ನ ತೇ ವಂದ್ಯಾಃ ॥"

ಎಂಬ ಸುಡಿಯು ಚಿತ್ರಭಿತ್ತಿಯಲ್ಲಿ ಮೂಡಿಹೋಗು ತ್ತಿದೆ ಈ ಮಾತು ಪ್ರಸನ್ನವದನರೂ, ಸದಯಾಂತಃ ಕರಣರೂ ಮಧುರತಮಂಜುಳ ವಾಗ್ವರಿಯನ್ನು ಹರಿಸಿ ಬಲ್ಲವರೂ ಧರ್ಮ, ನಾಡು, ನುಡಿಗಳಿಗಾಗಿ ತನ್ನು, ನ ನ್ನ ಧನಗಳನ್ನು ತ್ಯಕ್ತಗಳಂ ಆದ ನಮ್ಮ ಮಹಾಸ್ವಾಮಿ ಗಳಂಥವರನ್ನೇ ಉದ್ದೇಶಿಸಿ ಹೇಳಿದುದಾಗಿದೆ ಎಂದರೆ ಅತಿಶಯೋಕ್ತಿ ಯೆಲ್ಲ

ಸಾಮಾನ್ಯವಾಗಿ ಮಹಾಪುರುಷರಜೀವನವು ವೀರ್ಘ ಕಾಲಿಕವಲ್ಲವೆಂದು ಹೇಳಬಹುದು. ಆದರೂ ಅವರ ಜೀವನವು ಉದ್ದೀಪಕವಾಗಿರುತ್ತದೆ ಹೃತ್ಪಲ್ಲಿಕೆಗಳಲ್ಲಿಯೂ ನಿರಕ್ಷರಿಕ್ಷನವನ್ನು ಹೊಡೆದೋಡಿಸಬೇಕೆಂದು ಅಂದೋಲನವೆದ್ದಿರುವ ಈ ಸಮಯದಲ್ಲಿ ಶ್ರೀಕ್ಷೈವ ಜಗದ್ಗುರುಗಳ ಜೀವನವು ಸುತರಾಂ ಉದ್ಬೋಧಕ ವಾಗಿದೆ ಆತ್ಮಶಕ್ತಿಯಿಂದ ಮೇಲಲೇ ತನ್ನ ಅವಸಾನ ವನ್ನು ಅಂತ ಮಹಾಸ್ವಾಮಿಗಳವರು ಆ ಆಸ್ಪಾಸ್ಪದ ಅವಸ್ಥೆಯಲ್ಲಿಯೂ ಬರೆಯುವಂತಿನ್ನು ನಿಲ್ಲಿಸಲಿಲ್ಲ

ಶಿಷ್ಟಿಕ್ಕರಾಗುವ ಎಂದು ಳೆಂಟುಮ ಪೂರ್ವದಲ್ಲಿ, " ಪಾಲ್ಕುರಿಕೆ ಸೋಮನಾಥಚರಿತ್ರೆಯು" ಎಂಬ ಪ್ರಕಾಶವಾಗಲಿರುವ ಒಂದು ತೆಲುಗುಗ್ರಂಥಕ್ಕೆ ಸೂಚ್ಯಂಶ ಪುಟಗಳ ಉಪೋದ್ಘಾತವನ್ನು ಒಡೆದು ಮುಗಿಸಿ ಕೊನೆ ಯಲ್ಲಿ " ಮೇಮು ತಿವೆಳೀಕಯಾತ್ರಕು ಸಿದ್ಧಮು " ಎಂದು ಬರೆದು ತಮ್ಮ ಜೀವನಯಾತ್ರೆ ಮುಗಿಸಿರುವದನ್ನು ನೆನೆದರೆ ಅವರ ತಪೋಮಯಜೀವನದ ಸಹಜ ವಾದ ಕಲ್ಪನೆಯು ಯಾರಿಗಾದರೂ ಹುಟ್ಟಬಹುದಾಗಿದೆ. ಶ್ರೀಜಗದ್ಗುರುಗಳವರ ಶಿಷ್ಟಿಕ್ಕವ್ಯಾರ್ತೆಯಿಂದ ವೀರಶೈವರು ಕೇವಲ ದುಃಖೋದ್ಗಾರ ತೆಗೆಯುವದನ್ನೇ ತಮ್ಮ ಕರ್ತವ್ಯವನ್ನಾಗಿ ಭಾವಿಸದೆ ಅವರು ಉಪದೇಶಿಸಿದ ಮಾರ್ಗದಲ್ಲಿ ನಡೆದು ಧನ್ಯರಾಗಬೇಕೆಂದು ಕೋರಿಕೆ

ಸಿದ್ಧರಾಮತಿವಾಚಾರ್ಯ ರೌಡಕುಂದಿ ಹಿರೇಮಠ,
ಶ್ರೀಜಗದ್ಗುರು ವಿಶ್ವಾರಾಧ್ಯಗುರುಳು,
ಕಾಶೀ.

ಭಾಷ್ಪಾಂಜಲಿ

೨೫ ಗಳನೆಯ ದಿನ ಆದರಲ್ಲೂ ಹಿಂದಿನ ವಾರವು ವೀರಶೈವರ ಮತ್ತು ಅಖಂಡ ಭಾರತದ ಜಾಜ್ವಲ್ಯ ಕೀರ್ತಿಸ್ತಂಭದ ದೀಪಗಳು ನಂದಿದ ಕಾಲ! ಜ್ಞಾನ ಸಿಂಹಾಸನದ ಸುಜ್ಞಾನಭಾಸ್ಕರನು ಅಸ್ತಂಗತನಾದ ಕಾಲ! ವೀರಶೈವರ ಸೌಭಾಗ್ಯರವಿಯ ಪ್ರಾಣಪಕ್ಷಿಯನ್ನು ಕಾಲನು ಶಿಕ್ಷೆದೊಯ್ದ ಕಾಲ! ಕಾಲಕಾಲನ ಲೀಲೆಯು ತಿಳಿಯಲಸದಳವಾದುದು! ಮೂರು ವರ್ಷಗಳಂದ ತುತ್ತತುದಿಗೇರಿದ ಜ್ಞಾನಸಿಂಹಾಸನದ ಹೊಂಬೆಳಗಿನ ಗಿರಿಯು ಕಾಲಕಿರಾತನ ಬಲಿಗೆ ಬೆಕ್ಕಾಯಿತು. ಕಾಶಿಯು ಮೊವಲೇ ಜ್ಞಾನದ ತವರುಮನೆ! ಅದರಲ್ಲೂ ಜ್ಞಾನ ಪೀಠ! ಅದಕ್ಕೆ ಚಿನ್ನಕ್ಕೆ ಸುವಾಸನೆಯು ದೊರೆತಂತೆ ವಿದ್ಯಾನಿಧಿ ಸಕಲೇತಿಹಾಸಕೋವಿದೆ ಮಿಮರ್ಶನವಿಚಕ್ಷಣ ಅಲ್ಲದೆ ಮೇಲಾದ ಎದಿಗಾರರೆನಿಸಿದ ಶ್ರೀ ಜಗದ್ಗುರು ವೀರಭದ್ರವಿಶಾಖಾರ್ಯಮಹಾಸ್ವಾಮಿಗಳವರು ದೊರೆ ತಿದ್ದುದು ಸಮಸ್ತಜಗತ್ತಿಗೂ ನಿರ್ಜರವಡಿಂಭಕ್ಕೆ ಪ್ರಾಣ ಪ್ರತಿಷ್ಠೆ ಆದಂತಾಯಿತ್ತು ಆವೆ ವಿಧಿವಿಲಾಸವು ಜೇಠ ಯಾಯಿತು ಭರತಖಂಡದ ಜ್ಞಾನಜ್ಯೋತ್ಸಿಗಳಲ್ಲಿ ಒಂದಾದ ಜ್ಞಾನಮೂರ್ತಿಯು ಭಾರತಾಂಬೆಯ ದುರ್ವ್ಯವದಿಂದ ಕಣ್ಮರೆಯಾದುಬು ಶ್ರೀ ಜಗದ್ಗುರು ಗಳವರು ತಮ್ಮ ಮೂರುವರ್ಷಗಳ ಅಧಿಕಾರದ ಅಲ್ಪಾ ವಧಿಯಲ್ಲಿ ಅಮಿತ ಸಾಹಸವನ್ನು ಮಾಡಿದರು ಸಾಧಿತ ಶೂಲೆಯಿಂದ ಪೀಠವನ್ನು ಪಾರುಮಾಡಿದರು ಜ್ಞಾನ ಪ್ರದೀಪಿಕೆಯಂತಿರುವ ವೀರಶೈವ ವಿಜ್ಞಾನವೆಂಬ ಉತ್ತುಂಗಗ್ರಂಥವು ಹೊರಹೊಮ್ಮುವಬೇಕಿತ್ತು. ಅದು ಆಚ್ಛಿನ ಮನೆಯನ್ನು ಕಾಣ ನ ಸುಯೋಗವನ್ನು ಸಮಾಜವು ಕಾಣಲಿಲ್ಲ ಅವರ ಶರೀರದಲ್ಲಿ ಜೀವನಾಡಿ ಗಳು ಮಿಡಿಯುವವರೆಗೂ ಅವರು ಗ್ರಂಥರಚನೆಯಮ್ಮು ಬಿಡಲಿಲ್ಲ ಅವರು ಶಾಸ್ತ್ರಗಳಲ್ಲಾದ್ಯಾಗಿ ಕಾರ್ಯಕ್ಷೇತ್ರವು ತುಂಬ ವಿಶಾಲವಾದುದು, ಅಮೋಘವಾದುದು, ಸಾಹಸ ಪ್ರತೀಕವಾದುದು, ಪ್ರಗತಿಪರಶಾಂತಿಪ್ರತಿಪಾದಕವಾ ದುದು. ಅವರ ನೇತೃತ್ವದಲ್ಲಿ ಹೊರಡುತ್ತಿರಿದ್ದ ವಿಧೂ ತಿಯು ಶ್ರೀಕ್ಷವರ್ಗದ ಮಾಸಪತ್ರಿಕೆಯಾಗಿದ್ದಿತು ಅಷ್ಟೆ ಅಖಂಡ ಪಾಂಡಿತ್ಯ ಪ್ರಚಂಡಮೂರ್ತಿಯು ಮೂರು ವರ್ಷಗಳಲ್ಲಿ ತಿಪ್ಪೆಕ್ಕವಾದುದು ಎಂದೆಂದೂ ತುಂಬಿ

ಒರಲಾರದ ಹಾಸಿಯೆಂದೇ ಹೇಳಬೇಕಾಯಿತೆ ಗುರುಪೀಠಕ್ಕೆ ಬರುವ ಮುಂಡುವರೆಯಬೇಕಾದರೆ ಅದಕ್ಕೆ ತಕ್ಕ ವ್ಯಕ್ತಿಗಳು ಸಿಕ್ಕಬೇಕು ಇಲ್ಲವಾದರೆ ಗುರುಪರಂಪರೆಯು ತನ್ನ ವ್ಯಕ್ತಿತ್ವವನ್ನು ಳೆದುಕೊಳ್ಳಬೇಕಾಗುವದು ಈ ವಿಷಯವನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ನವಸ್ಥಾರ್ತಿಯಾಬಹುದಾದರಲ್ಲಿ ಎಳ್ಳಿನಷ್ಟು ಸಂದೇಹವಿಲ್ಲ ಈ ವಿಷಯವನ್ನು ತಿಳಿಗೊಂಡು ಕೆ|| ಜಗದ್ಗುರು ಸಂಚಾಸ್ಥರ ತಿವಾಚಾರ್ಯಮಹಾಸ್ವಾಮಿಗಳವರು ಇವರನ್ನು ಉತ್ತರಾಧಿಕಾರಿಗಳನ್ನಾಗಿ ನೇಮಿಸಿದರು ಆದರೆ ಕೈಗೆಂದತ್ತುತ್ತು ಬಾಯಿಗೆ ಬರಲಿಲ್ಲ ಶೋಕಾಧ್ವವಾದ ಭಕ್ತಕದಂಬವು ಆ ಮಹಾತ್ಮನಿಗೆ ಬಾಷ್ಪಾಂಜಲಿಯನ್ನರ್ಪಿಸಿತು ವಿಶ್ವದ ವಿದ್ಯಾನಿಧಿಯು ನಿಶ್ಚೈತನ್ಯದಲ್ಲಿ ಲೀನವಾಯಿತು

ಸಿದ್ಧಲಿಂಗತಿವಾಚಾರ್ಯರು ಹೊಳಗುಂದಿ

ಶೋಕಸಭೆ ಹಿರೇಹರಕುಣಿ

ಧಾರ್ವಾಡ ಡಿ|| ಹಿರೇಹರಕುಣಿಗ್ರಾಮದಲ್ಲಿ ಈ ತಿಂಗಳು ೨ ನೇ ತಾರೀಖಿನ ದಿವಸ ಕಾಮನ ಹೈಲಿನಲ್ಲಿ ಕುಂದಗೋಳ ಹಿರೇಮಠದ ಉತ್ತರಾಧಿಕಾರಿಗಳಾದ ಶ್ರೀ ಸಿದ್ಧಲಿಂಗದೇವರ ಅಧ್ಯಕ್ಷತೆಯಲ್ಲಿ ಕಾಶೀ ಜಗದ್ಗುರುಗಳ ವಿಯೋಗದ ಬಗ್ಗೆ ಶೋಕಸಭೆಯು ನೆರವೇರಿತು ಸಭೆಗೆ ೪ ೫ ನೂರು ಜನರು ಆಗಮಿಸಿದ್ದರು ಪ್ರಾರಂಭದಲ್ಲಿ ಹಿರೇಗೌಡ ಕಲ್ಲನ ಗೌಡರ ಮತ್ತು ಸಿದ್ಧನಗೌಡ ಕಲ್ಲನ ಗೌಡರ ಇವರು ಜಗದ್ಗುರುಗಳ ಬಗ್ಗೆ ಭಾಷಣ ಮಾಡಿದರು ಆಮೇಲೆ ಅಧ್ಯಕ್ಷರು ಜಗದ್ಗುರುಗಳ ಆಸಾಧಾರಣ ಪಾಂಡಿತ್ಯದ ವಿಷಯದಲ್ಲಿಯೂ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಕೈಗೊಂಡಿರುವ ವೀರಶೈವ ಸಮಾಜದ ಉದ್ಧಾರಕಾರ್ಯವನ್ನು ಪೂರ್ತಿಗೊಳಿಸ ಜೇಕೆಂದು ಆವರಿಗಿದ್ದ ಉತ್ಕಟೇಚ್ಛೆಯ ವಿಷಯದಲ್ಲಿಯೂ ಒಳ್ಳೇ ಹರಣಾಮಕಾರಕವಾಗಿ ಭಾಷಣ ಮಾಡಿದರು ಆಮೇಲೆ ಎಲ್ಲರೂ ೨ ನಿಮಿಷಗಳವರೆಗೆ ನೌನ ದಿಂದ ಎದ್ದು ನಿಂತು ಜಗದ್ಗುರುಗಳ ಪವಿತ್ರಾತ್ಮಕ್ಕೆ ಶಾಂತಿಯನ್ನು ಕೋರಿದರು

ಶಿವನಗೌಡ, ವಂಕಾರಿಗೌಡರು

ಕಣ್ಣೀರು

'ಕರುಣಾಕರನೆ ಮಹಾತ್ಮನೆ
ತರುಳರ ಮನೆವೆಮ್ಮನೀಗ ನೋಪುದು ತರವೇ ? ।
ಧರೆಯೊಳು ಬಾಳಿಕೆಯಾಗವು
ತರಪುರಪತಿ ವೀರಭದ್ರ ಜಗದಾಚಾರ್ಯಾ ॥೧॥

ಒತ್ತಿತು ವಿದ್ಯಾನಿಧಿ ತಾಂ
ಕತ್ತೆತ್ತಿತು ಕುಮತಿವಿಗಮ ಜ್ಞಾನತಮಂ ।
ಮೆತ್ತಿತು ಜ್ಞಾನಾರ್ಕನೆ ನೀ
ನೊತ್ತರಿಸಿತು ದುಃಖಧರೆ ಹರನಲಿ ಬೆರೆಯಲ್ ॥೨॥

ನೀ ಮಾಡಿದನಮಯಕಾರ್ಯ
ಸ್ತೋನುವ ನೆನಿಸಿದರೆ ಸಾಕು ಮೈನವಿರೇಳ್ಗುಂ ।
ಶ್ರೀಮದ್ಗುರುವರ ಹಾ ಹಾ
ಕಾಮಿತಕಲ್ಪಾಗಮನಲಗುಣಮಣಿ ಹಾ ಹಾ ॥೩॥

ಶೋಕಾರ್ತ
ಗಂಗಾಧರಶಿವಾಚಾರ್ಯ ಜಡೆಮರ ಮೊರಬ

ಶ್ರೀಲಾಸಗಣಾರಾಧನೆ ಕಾಶೀಕ್ಷೇತ್ರ

ಪುಷ್ಯ ಬ|| ೧೦ ಬುಧವಾರ ಕಾಶೀ ಶ್ರೀ ಜಗದ್ಗುರು ನಿತ್ಯಾರಾಧ್ಯ ಜ್ಞಾನಸಿಂಹಾಸನ ಮಹಾಮಹೆದಲ್ಲಿ ಶ್ರೀಮಜ್ಜಗದ್ಗುರು ವೀರಭದ್ರಶಿವಾಚಾರ್ಯಮಹಾ ಸ್ವಾಮಿಗಳವರ ಶ್ರೀಲಾಸಗಣಾರಾಧನೆಯು ಜರುಗು

ಭಾವೀ ಜಗದ್ಗುರುಗಳಾದ ಶ್ರೀ ವಿಶ್ವೇಶ್ವರಶಿವಾಚಾರ್ಯಸ್ವಾಮಿಗಳವರ ಆಮೃತಹಸ್ತದಿಂದ ಪ್ರಾತಃಕಾಲ ಸಮಾಧಿಗೆ ವಿಧ್ಯುಕ್ತವಾಗಿ ರುದ್ರಾಭಿಷೇಕ ಸಹಿತ ಬಿಲ್ವಾರ್ಚನ ಮಹಾಪೂಜಾದಿಗಳು ವೈಭವದಿಂದ ನೆರವೇರಿದವು ಮಧ್ಯಾಹ್ನ ೧೨ ಗಂಟೆಗೆ ಗಣಾರಾಧ ನೆಯು ತೃಪ್ತಿಕರವಾಗಿ ನಡೆಯಿತು ಕಾಶಿಯಲ್ಲಿರುವ ಎಲ್ಲ ವೀರಶೈವ ವಿದ್ಯಾರ್ಥಿಗಳೂ ವಿಶ್ವವಿದ್ಯಾಲಯದ ಕರ್ನಾಟಕ ಸಂಘದ ಸದಸ್ಯರೂ ಆಗಮಿಸಿದ್ದರು ಸ್ಥಳೀಯ ಹಿಂದೀಯರಿಗಾಗಿ ಪ್ರತ್ಯೇಕವಾಗಿ ಭೋಜನದ ವ್ಯವಸ್ಥೆಯನ್ನು ವಿದ್ಯಾರ್ಥಿಸಲಾಗಿತ್ತು

ಸವಸಾಧಿಸ್ಥಳದ ಮಂಟಪದಲ್ಲಿ ಸಂಜೆಗೆ ಸಭೆಸೇರಿ ರಾತ್ರಿ ೧೧ ಗಂಟೆಯವರೆಗೆ ಹಠಗುರುಭಜನೆ ಗಾಧಗಳೂ ಶಿವೈಕ್ಯ ಜಗದ್ಗುರುಗಳರ ಉಜ್ವಲ ಜೀವನವನ್ನು ದ್ದೇ ಶಿಸಿ ನಂಡಿಕರ ಭಾಷಣ ಕೀರ್ತನೆಗಳೂ ನೆರವೇರಿದವು ಬಳಿಕ ನಂಗಳಾರತಿಯಾಗಿ ಕಾರ್ಯಕ್ರಮವು ಸಮಾಪ್ತಿ ಗೊಂಡಿತು ಪ್ರತ್ಯಕ್ಷದರ್ಶಿ

ಸನಾತನಧರ್ಮೋದ್ಧಕರ ೪.ಭಾಗವನ್ನ, ನರಸಾಪುರ

ಭವದುಃಖಾಗ್ನಿಯಿಂದ ಬಂದು ಬೆಂಡಾದ ಆತ್ಮಕ್ಕೆ ಶಾಂತಿಯನ್ನಿಯುವ ಶ್ರೀಮುಕ್ತಿಮಂದಿರ ಸುಪ್ರಾಕ್ಷೇತ್ರದಲ್ಲಿ ಇದೇ ಮಾಘ ಶುದ್ಧ ೧೩ ಶನಿವಾರ ಮೊದಲು ಮಾಡಿಕೊಂಡು ೩ ದಿವಸ ಪರ್ಯಂತ ಶ್ರೀರಂಭಾಪುರೀ ಜಗದ್ಗುರುಗಳವರ ಆಜ್ಞೆಯಂತೆ ಮೇರೆಗೆ ಯಾತ್ರಾ ಮಹೋತ್ಸವವು ಮಹಾವೈಭವದೊಡನೆ ನೆರವೇರಿತು

ಮಾಘ ಶು॥ ೧೩ ಶನಿವಾರ (ತಾ॥ ೨೧-೨-೪೮) ನೇ ದಿವಸ ಮಡಿಯಿಂದ ಆಗ್ರೋದಕ ತಂದು ಶ್ರೀಜಗದ್ಗುರು ರೇಣುಕಾಚಾರ್ಯ ಲಿಂಗೈಕ್ಯಮೂರ್ತಿಗೆ ವಿಶಾದಶವಾರ ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆ, ರಥ ಶುದ್ಧಿ, ರಥಪ್ರಾಣಾಗಳು ನೆರವೇರಿ ಅನ್ನ ಸಂತರ್ಪಣೆಯಾಯಿತು ಮಧ್ಯಾಹ್ನ ೪ ಘಂಟೆಗೆ ಶ್ರೀಜಗದ್ಗುರು ರೇಣುಕಮೂರ್ತಿಯ ರಥೋತ್ಸವವು ಜಗದಾಚಾರ್ಯರ ಜಯಕಾರಗಳಿಂದ ಬಹು ವೈಭವದೊಡನೆ ನೆರವೇರಿತು ರಾತ್ರಿ ೭ ಘಂಟೆಗೆ ಸಭಾಕಾರ್ಯ ಪ್ರಾರಂಭವಾಯಿತು ಪ್ರಥಮದಲ್ಲಿ ಕಾಶೀಜಗದ್ಗುರುಗಳ ಮತ್ತು ಗಾಂಧೀಜಿಯವರ ವಿರ್ಯೋಗಕ್ಕಾಗಿ ಸಭೆಯು ತಮ್ಮ ದುಖವನ್ನು ವ್ಯಕ್ತ ಮಾಡಿದರು ಈ ಒಗ್ಗೆ ಪಂ॥ ಹರೀಶ್ವರಶಾಸ್ತ್ರಿಗಳು, ಶಲ್ಯ ತಿಪ್ಪಣ್ಣಶಾಸ್ತ್ರಿಗಳು, ನಲವಡಿ ಶ್ರೀಕಂಠಶಾಸ್ತ್ರಿಗಳು, ಮೇರವದ ಸ್ವಾಮಿಗಳು ಇವರೇ ಮೊದಲಾದವರು ಭಾಷಣಮಾಡಿದರು ಬಳಿಕ ಸಭೆಯು ಸಮಾಪ್ತಿಗೊಂಡಿತು ಅನೇಲೆ ರಾತ್ರಿ ೧೦॥ ಘಂಟೆಗೆ ಶ್ರೀಜಗದ್ಗುರು ಪಂಡಿತಾರಾಧ್ಯ ತ್ರಾಸಾದಿಕ ಸಂಗೀತನಾಟಕ ಮಂಡಳಿ ಧೋತ್ರಿ ಇವರು 'ಭಕ್ತಿಬೋಧ' ಅಥವಾ ಮಂತ್ರಜಾತ" ವೆಂಬ ನಾಟಕವನ್ನು ಅಭಿನಯಿಸಿದರು

ಮಾಘ ಶು॥ ೧೩ ಭಾನುವಾರ (೨೨-೨-೪೮) ನೇ ದಿನ ಪ್ರಾತಃಕಾಲ ಯಾಗಪ್ರಕಾರ ರುದ್ರಾಭಿಷೇಕ, ಅನ್ನ ಸಂತರ್ಪಣೆ ಮೊದಲಾದ ಕಾರ್ಯಗಳು ಜರುಗಿದ ನಂತರ ಮಧ್ಯಾಹ್ನ ೪ ಘಂಟೆಗೆ ಲಕ್ಷ್ಮೀಶ್ವರದ ತಾಯಿ ಸಾವಿತ್ರಿ ಮಕ್ಕಳ ಬಳಗದವರು ಜಗಜ್ಜನನಿಯಾದ ಸಾವಿತ್ರೀ ದೇವಿಯ ಫೋಟೋವನ್ನು ಉತ್ಸವಪೂರ್ವಕ ಸಭಾ ಮಂಟಪಕ್ಕೆ ತಂದರು ಅಮೇಲೆ ಸಭೆಯು ನಡೆಯಿತು ಬಳಗದ ಬಾಲಿಕೆಯರಿಂದ "ಸತ್ಯವಾನ್ ಸಾವಿತ್ರಿ" ಎಂಬ ನಾಟಕ ಸಂವಾದವು ನಡೆಯಿತು ಆಗ್ಗೆ ಹರೀಗುಂಜಳದ ಅಕ್ಕನ ಬಳಗದವರು ತಾಯಿ ಪಾರ್ವತಿ ಮಕ್ಕಳ ಬಳಗಕ್ಕೆ ೧೦೧ ಗಳನ್ನು ಕೊಟ್ಟರು ರಾತ್ರಿ ಸಿದ್ಧರಾಮೇಶ್ವರ ನಾಟಕವು ಅಭಿನಯಿಸಲ್ಪಟ್ಟಿತು

ಮಾಘ ಶು॥ ೧೪ ಸೋಮವಾರ (ತಾ॥ ೨೩ ೨ ೪೮) ನೇ ದಿನ ರಾತ್ರಿ "ರೇವಣಸಿದ್ಧೇಶ್ವರ ನಾಟಕವು ಅಭಿನಯ ಸಲ್ಪಟ್ಟಿತು

ಈ ಮಹೋತ್ಸವಕ್ಕೆ ೧೦ ಸಾವಿರದವರೆಗೆ ಜನರು ಸೇರಿದ್ದರು ಸುಲಿದ ಸರ್ಕಾರದವರು ಪೋಲೀಸ್ ಉಸ್ತುವಾರಿಯನ್ನು ಕೊಟ್ಟಿದ್ದರು ಮುಕ್ತಿಮಂದಿರದ ವ್ಯವಸ್ಥಾಪಕರು ೩ ಕಡೆ ದಾಸೋಹದ ವ್ಯವಸ್ಥೆಯನ್ನು ಇಟ್ಟಿದ್ದರಲ್ಲದೆ ಉತ್ಸವಕ್ಕೆ ಬಂದ ಕೆಲವು ಮಹಾಶಯರೂ ದಾಸೋಹದ ವ್ಯವಸ್ಥೆಯನ್ನು ಮಾಡಿದ್ದರು ಈ ಮಹೋತ್ಸವದಲ್ಲಿ ಅತ್ಯಂತ ಭಕ್ತಿಶ್ರದ್ಧೆಯಿಂದ ಕಾರ್ಯವನ್ನು ನೆರವೇರಿಸಿದ ಮಹಾಶಯರಿಗೆಲ್ಲಾ ಶ್ರೀಜಗದಾಚಾರ್ಯರು ಸಕಲ ಸಂಪತ್ಸಮೃದ್ಧಿಯನ್ನೀಯಲಿ

ಒರ್ವ ಉತ್ಸವಭಾಗಿ

ಸ್ವೀಕಾರ

ಸಾಗರ ತಾ॥ ತಡಗಳಲೆ ಗ್ರಾಮದಲ್ಲಿರುವ ಮ॥ ರಾ॥ ಬಿ ಚನ್ನಬಸಪ್ಪನವರು ಮಹಾಶಿವರಾತ್ರಿ ಪೂಜಾರ್ಥವಾಗಿ **10** ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಡಿ॥ ನೆಲಲಗುಂದ ತಾ॥ ಸೂರಕೋಡ ಹಿರಿಯನೆ-ಕಿರಿಯ ಪಟ್ಟುಗಿಕಾರವು ಹುಬ್ಬಳ್ಳಿ ಹನ್ನೆರಡು ಮಠದ ಶ್ರೀ ಚರಮೂರ್ತಿಸ್ವಾಮಿಗಳವರ ನೇತೃತ್ವದಲ್ಲಿ ನೆರವೇರಿದ ಸಮುಯದಲ್ಲಿ ಪ್ರಭಾಪ್ರಣಣಜ್ಯೋತ್ಸರ **4** ರೂ ಗಳನ್ನು ಕಮರ್ಪಿಸಿ ಕಳುಹಿಸಿರುತ್ತಾರೆ

ಕೋಲಾರ ಡಿ॥ ಬೆಂಗಾವೆಲ್ಲಿರುವ ಮ॥ರಾ॥ ಬಿ ಎನ್ ಶ್ರೀಕಂಠಪ್ಪನವರ ತೃತೀಯ ಪುತ್ರಿ ಚಿ॥ ಸೌ॥ ಕಲ್ಯಾಣಮ್ಮನನ್ನು ಬೈರೆಡ್ಡಿಹಳ್ಳಿ ರಾಮಾಪುರದ ಮುದ್ದು ವೀರಪ್ಪನವರ ದ್ವಿತೀಯ ಪುತ್ರ ಚಿ॥ ಆರ್ ನಂಜುಂಡಪ್ಪನಿಗೆ ಕೊಟ್ಟು 'ನೆರವೇರಿಸಿದ ವಿವಾಹಸಮಯದಲ್ಲಿ ಮ॥ ರಾ॥ ವೀರಭದ್ರಪ್ಪನವರ ಮೂಲಕ ಒಂದ **2** ರೂ ಗಳು ಮತ್ತು ಸದರಿ ಶ್ರೀಕಂಠಪ್ಪನವರ ಅಣ್ಣಂದಿರಾದ ಲೇಟ್ ಬಿ ಎನ್ ದೊಡ್ಡನಂಜಪ್ಪನವರ ದ್ವಿತೀಯ ಪುತ್ರ ಚಿ॥ ಬಿ ಎನ್ ನಂಜುಂಡಪ್ಪನಿಗೆ ಮೇಲ್ಕಂಡ ಮುದ್ದೀರಪ್ಪನವರ ದ್ವಿತೀಯ ಪುತ್ರಿ ಚಿ॥ ಸೌ॥ ಮಲ್ಲಿಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಮ॥ ರಾ॥ ಗಂಗಾಧರಪ್ಪನವರ ಮೂಲಕ ಒಂದ **2** ರೂ ಗಳು ಒಟ್ಟು **4** ರೂ ಗಳು ಮ॥ ರಾ॥ ಡಿ ಎಂ ಮುಪಿರುದ್ರಪ್ಪ, ಕ್ಲಾರ್ಕ್ ಸ್ಟಾಲ್‌ಆಫ್ ಕೋರ್ಟ್ ಬೆಂಗಳೂರು ಸಿಟಿ ಇವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಭಿಕ್ಷಮಂಗಲವನ್ನೀಯಲೆಂದು ಹಾರೈಸುತ್ತೇನೆ

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

ಫಾಲ್ಗುನ ಶುದ್ಧ ತ್ರಯೋದಶಿ (23-3-48) ಮಂಗಳವಾರ

ಶ್ರೀಕುಲ್ಪಪಾಕಕ್ಷೇತ್ರದ ಸೋಮನಾಥಲಿಂಗದಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಅವತಾರ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ತ್ರಯೋದಶಿ ಮಂಗಳವಾರ (೨೩-೩-೪೮) ದಿವಸ ಭರತ ಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷ ದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಸ್ರಸಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು ಕಾಂಚೀಕ್ಷೇತ್ರದಲ್ಲಿರುವ ವಿಷ್ಣು ಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇನೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಸ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ವರ್ತಮಾನಸಂಗ್ರಹ

ನೆಹರೂವರ ಕಾರನ್ನು ನಿಲ್ಲಿಸಿದ್ದಕ್ಕಾಗಿ ದಸ್ತಗಿರಿ

ಇಂದೂರಿನ ಯುವಕನೊಬ್ಬನು ಭಾರತದ ಪ್ರಧಾನಿ ಪಂಡಿತ ನೆಹರೂವರ ಕಾರನ್ನು ನಿಲ್ಲಿಸಿದ್ದರಿಂದ ಪೋಲೀಸರು ಅವನನ್ನು ದಸ್ತಗಿರಿ ಮಾಡಿದ್ದಾರೆ ಕಾರಣ ತಿಳಿದು ಬಂದಿಲ್ಲ

ಶ್ರೀ ಬಿ. ಜಿ. ಖೇರರ ರಾಜೀನಾಮೆಯೇ ?

ಬೊಂಬಾಯಿಯ ಮಹಾಪ್ರಧಾನಿ ಶ್ರೀ ಬಿ ಜಿ ಖೇರರು ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಬೊಂಬಾಯಿ ಮಂತ್ರಿಮಂಡಲದಮೇಲೆ ಟೀಕೆ ಮಾಡಿದುದಕ್ಕೆ ಉತ್ತರ ಕೊಡುತ್ತಾ —ಮಹಾರಾಷ್ಟ್ರದಲ್ಲಿ ಮಂತ್ರಿ ಮಂಡಲದ ಬಗ್ಗೆ ಜನಾಭಿಪ್ರಾಯವು ವಿರುದ್ಧ ವಿದ್ದರೆ ತಾವು ರಾಜೀನಾಮೆ ಕೊಡಲು ಸಿದ್ಧರಿರುವುದಾಗಿ ಹೇಳಿದರು

ಡಾಕ್ಟರ್ ಮೂಂಜೆಯನರ ನಿಧನ

ಇದೇ ತಿಂಗಳು ೩ನೆಯ ತಾರೀಖಿನ ದಿವಸ ಡಾಕ್ಟರ್ ಬಿ ಎಸ್ ಮೂಂಜೆಯವರು ನಾಸಿಕ್ ನಗರದಲ್ಲಿ ನಿಧನರಾದರು ಅವರಿಗೆ ೭೭ ವರುಷ ವಯಸ್ಸಾಗಿತ್ತು ಶ್ರೀಯುತರು ಅಖಿಲ ಭಾರತ ಹಿಂದೂಮಹಾಸಭೆಯ ಮೊದಲನೆಯ ಅಧ್ಯಕ್ಷರಾಗಿದ್ದರು ಅಲ್ಲದೆ ನಾಸಿಕದಲ್ಲಿರುವ ಶಿವಾಜಿ ಭೋಸಲೆ ಸೈನಿಕ ಶಿಕ್ಷಣ ಶಾಲೆಯನ್ನು ಅವರು ಸ್ಥಾಪಿಸಿದರು

ಕಾಶ್ಮೀರದಲ್ಲಿ ತಾತ್ಕಾಲಿಕ ಸರಕಾರದ ಸ್ಥಾಪನೆ

ಇದೇ ಮಾರ್ಚ್ ೧೧ನೆಯ ತಾರೀಖಿನಿಂದ ಕಾಶ್ಮೀರದಲ್ಲಿ ತಾತ್ಕಾಲಿಕ ಮಂತ್ರಿಮಂಡಲವು ಆಡಳಿತವನ್ನು ವಹಿಸಿಕೊಂಡಿದೆ ಪ್ರಜೆಗಳ ಒಪ್ಪಿಗೆ ಪಡೆದ ಈ ಮಂತ್ರಿ ಮಂಡಲದಲ್ಲಿ ಶೇಖ್ ಅಬ್ದುಲ್ಲಾರವರೇ ಮುಖ್ಯ ಮಂತ್ರಿಗಳು. ಕಾಶ್ಮೀರದ ಸ್ಥಿತಿಯು ಉತ್ತರೋತ್ತರವಾಗಿ ಪ್ರಜಾಪ್ರಭುತ್ವ ರೀತಿಯಾದ ರಾಜ್ಯಾಂಗವನ್ನು ರಚಿಸಲಾಗುವುದು ಮಂತ್ರಿಮಂಡಲಕ್ಕೆ ದಿವಾನರೆಯಲ್ಬರನ್ನು ರಾಜರು ನೇಮಿಸುತ್ತಾರೆ ಮಂತ್ರಿಮಂಡಲವು ಸಂಯುಕ್ತ ಜವಾಬ್ದಾರಿಯಿಂದ ಕೆಲಸಮಾಡುವುದು ಈ ಬಗ್ಗೆ ಕಾಶ್ಮೀರದ ರಾಜರು ಹೊಡಿಸಿದ ಘೋಷಣೆಯನ್ನು ಪಂಡಿತ ಜವಹರಲಾಲ್ ನೆಹರು ಅವರು ಹೊಮಿನಿಯನ್ ಪಾರ್ಲಿಮೆಂಟ್ ಸಭೆಯಲ್ಲಿ ಓದಿ ಹೇಳಿದರು

ಪುದುಕೋಟೆ ಮದರಾಸಿಗೆ ಸೇರಿತು

ಪುದುಕೋಟೆ ಸಂಸ್ಥಾನವು ಇದೇ ಮಾರ್ಚ್ ೩ನೆಯ ತಾರೀಖಿನಿಂದ ಮದರಾಸಿನ ಆಡಳಿತಕ್ಕೆ ಸೇರಿತು ಈ ಸಂಸ್ಥಾನದ ವಿಸ್ತೀರ್ಣ ೧೦೦೦ ಚದರ ಮೈಲಿಗಳು ಒಟ್ಟು ಸುಮಾರು ೫ ಲಕ್ಷ ಜನ ವಾಸವಾಗಿದ್ದಾರೆ ವರುಷಕ್ಕೆ ೪೦ ಲಕ್ಷ ರೂಪಾಯಿ ಆದಾಯ ಬರುತ್ತದೆ

ನಿಜಾಂ ಸರ್ಕಾರದ ಪ್ರತಿಭಟನೆ

ಬೆಂಗಳೂರು, ಹೈದರಾಬಾದ್ ಮಾರ್ಗವಾಗಿ ಮದರಾಸಿನಿಂದ ನಾಗಪುರಕ್ಕೆ ಇತ್ತೀಚೆಗೆ ಆರಂಭವಾದ ವಿಮಾನ ಸಂಚಾರದ ಬಗ್ಗೆ ಹೈದರಾಬಾದ್ ಸರ್ಕಾರದ ಅಧಿಪತ್ಯವನ್ನು ಕೇಳಲಿಲ್ಲವೆಂದು ನಿಜಾಂ ಸರಕಾರವು ಇಂಡಿಯ್ಯಾ ಸರ್ಕಾರಕ್ಕೆ ಪ್ರತಿಭಟನಾ ಪತ್ರವನ್ನು ಕಳಿಸಿದೆ ಈ ಸಂಬಂಧವಾಗಿ ಇಂಡಿಯನ್ ಓವರ್‌ಸೀಸ್ ಏರ್ ವೇಸ್ ಕಂಪೆನಿ ವಿಮಾನಗಳು ನಿಜಾಂ ಸರ್ಕಾರದ ಅಪ್ಪಣೆ ಪಡೆಯುವವರೆಗೆ ವಿಮಾನ ಸಂಚಾರವನ್ನು ನಿಲ್ಲಿಸಬೇಕೆಂದು ಭಾರತ ಸರ್ಕಾರವನ್ನು ಪ್ರಾರ್ಥಿಸಿದೆ.

ಇತ್ತಿಹಾದ್ ಸ್ವಯಂಸೇವಕರ ದಾಂಧಲೆ

ಹೈದರಾಬಾದಿನ ಇತ್ತಿಹಾದ್ ಸ್ವೆಯಂಸೇವಕರು ಮಿಲಿಟರಿ ಸಮವಸ್ತ್ರಧಾರಿಗಳಾಗಿ ಬಂದೂಕುಗಳನ್ನು ಧರಿಸಿ ಲಾರಿಗಳಲ್ಲೂ ಜೀಪ್‌ಗಳಲ್ಲೂ ಮಧ್ಯರಾತ್ರಿಯಿಂದ ಬೆಳಗಾಗುವವರೆಗೆ ಮೂರು ದಿನಗಳ ಕಾಲ ಔರಂಗಾಬಾದಿನಲ್ಲೂ ಸುತ್ತಮುತ್ತ ಹಳ್ಳಿಗಳಲ್ಲೂ ನುಗ್ಗಿ "ಭಾರತ ಯೂನಿಯನ್ ಮುರ್ದಾಬಾದ್" ಇತ್ಯಾದಿ ಘೋಷಣೆಗಳನ್ನು ಮಾಡುತ್ತಾ, ಅಂತಿರಿಕ್ಷದಲ್ಲಿ ಗುಂಡುಹಾರಿಸುತ್ತಾ ದಾಂಧಲೆ ನಡೆಸಿದರೆಂದೂ, ಈ ಸಂಸ್ಥೆಯವರು ಔರಂಗಾಬಾದಿಗೆ ೫ ಮೈಲು ದೂರದಲ್ಲಿ ೮ ಸಾವಿರ ಪೌಂಡ್ ಗೆಣಸುಗಳನ್ನು ಹಾಕಿಕೊಂಡು ಶಸ್ತ್ರಸಜ್ಜಿತರಾಗಿರುವವರಿಂದ ಜನರು ಒಪಲ ಭಯಗೊಂಡಿದ್ದಾರೆಂದೂ ಪ್ರತಿಪಾದಿಸಿದರು

ಹೈದರಾಬಾದಿನ ಬಗ್ಗೆ ಪಂಡಿತ ನೆಹರೂವರ ಹೇಳಿಕೆ

ಹೈದರಾಬಾದಿನವರು ನೆರೆಯ ಪ್ರಾಂತಗಳ ಮೇಲೆ ಹಲವುಸಾರೆ ದಾಳಿ ನಡೆಸಿದ್ದಾರೆ ಎಷ್ಟುಸಾರೆ ದಾಳಿ ನಡೆದಿವೆ, ಎಷ್ಟು ಮಂದಿ ಸತ್ತಿದ್ದಾರೆ, ಆಸ್ತಿಯ ನಷ್ಟ ವೇನು ? ಈ ವಿವರಗಳು ಗೊತ್ತಿಲ್ಲ ಈ ಅಂಶಗಳನ್ನು ತಿಳಿಸುವಂತೆ ಪ್ರಾಂತೀಯ ಸರ್ಕಾರಗಳಿಗೆ ತಿಳಿಸಲಾಗಿದೆ. ಈ ಸಂಬಂಧದಲ್ಲಿ ಯಾರಾದರೂ ಬಂಧಿಸಲ್ಪಟ್ಟಿದ್ದಾರೆಯೇ ? ಎಂಬುದು ತಿಳಿಯದು ಗಡಿ ಸಂರಕ್ಷಣೆಯ ವಿಚಾರವಾಗಿ ಹೈದರಾಬಾದಿನೊಡನೆ ಸಂಧಾನ ನಡೆಸುತ್ತಿರಲಾಗಿದೆ ಹೊಲ ಸಂಬಂಧಗಳಲ್ಲಿ ನಿಜಾಮ ಸರ್ಕಾರದಿಂದ ಪರಿಹಾರ ಕೇಳಲಾಗಿದೆ ಎಂಬುದಾಗಿ ಪಂಡಿತ ಜವಹರಲಾಲರು ಡೊಮಿನಿಯನ್ ಶಾಸನ ಸಭೆಯಲ್ಲಿ ತಿಳಿಸಿದರು

ಪ್ರೊ॥ ರಂಗ—ನಮ್ಮ ಜನರ ಆಸ್ತಿಗಳು ಸೂರೆಯಾಗುತ್ತಿವೆ, ಪ್ರಾಣಹಾನಿ ಸಂಭವಿಸುತ್ತಿದೆ ಹೆಂಗಸರ ಮಾನಭಂಗವಾಗುತ್ತಿದೆ ನಮ್ಮ ಜನರ ಮನೆಗಳನ್ನು ಆಪ್ತೇಷ್ಟ ಇಡೀ ಹಳ್ಳಿಗಳನ್ನೇ ಸುಡುತ್ತಿದ್ದಾರೆ ನಮ್ಮನಿಗೆ ಪರಿಹಾರವೇನು ?

ಪಂ॥ ನೆಹರೂ—ಈ ವಿಚಾರಕ್ಕೆ ತೀವ್ರಗಮನವೆ ಕೊಡಲಾಗುತ್ತಿದೆಯೆಂದು ನಾನು ಭರವಸೆ ಕೊಡುವೆನು ಆಸ್ಥಿಲ್ಲಿ ನಡೆಯುವ ಈ ದಾಳಿಗಳನ್ನು ನಿಲ್ಲಿಸುವುದು ಕಷ್ಟ ಆಕ್ರಮ್ಯವು ಹೆಚ್ಚು ವ್ಯಾಸಕವಾದರೆ ಅದನ್ನು ನಿಲ್ಲಿಸುವುದು ಸುಲಭವಲ್ಲ ಉದಾಹರಣೆಗೆ ನಾವು ದೆಹಲಿಯಲ್ಲಿ ಹಿಂಸೆಯ ಉಗ್ರಸ್ವರೂಪವನ್ನು ಕಂಡೆವು ಆಡಿಗೆ ಅದನ್ನು ಆಡಳಿತವ್ಯಾಪ್ತಿಯು ಅದರಂತೆಯೇ ಈ ಗಡಿ ದಾಳಿಗಳನ್ನು ನಿಲ್ಲಿಸುವೆವು

ಸೇಶ್ ಗೋವಿಂದದಾಸ್—ಜುನಾಗಢದಲ್ಲಿ ನಡೆಸಿ ಪಂತೆ ಹೈದರಾಬಾದಿನಲ್ಲಿಯೂ ಜನಾಭಿಪ್ರಾಯ ನಡೆಸುವ ಯೋಚನೆ ಇವೆಯೇ ?

ಪಂ॥ ನೆಹರೂ— ವಾಪಗ್ರಸ್ತವಾದ ಎಲ್ಲ ಅಂಶಗಳಲ್ಲೂ ಜನರೇ ನಿರ್ಧರಿಸಬೇಕು ಅದೇ ನಮ್ಮ ನೀತಿ ಹೈದರಾಬಾದಿನಲ್ಲಿ ಜನಾಭಿಪ್ರಾಯ ಗಣನೆಯನ್ನು ನಡೆಸುವ ಬಗ್ಗೆ ನಿರ್ಧಾರವಾದ ಸಲಹೆಗಳೇನೂ ಬಂದಿಲ್ಲ

" ಹೈದರಾಬಾದಿನ ಪ್ರಶ್ನೆ ನಮಗೆ ವಿಶೇಷ ಕಷ್ಟ ವನ್ನು ಕೊಟ್ಟಿದೆ ಎಲ್ಲ ಸಂಸ್ಥಾನಗಳ ವಿಚಾರದಲ್ಲಿ ನಾವು ಅನುಸರಿಸಿದ ನೀತಿಯನ್ನೇ ಹೈದರಾಬಾದಿನ ವಿಚಾರದಲ್ಲೂ ಅನುಸರಿಸುತ್ತಿದ್ದೇವೆ ನಮ್ಮ ಅಪೇಕ್ಷೆ ವಿಷೆಂದರೆ ಸಾಧ್ಯವಿರುವಮಟ್ಟಿಗೆ ಆ ಸಂಸ್ಥಾನದ ಜನರೇ ಅಲ್ಲಿಯ ವಿಚಾರವನ್ನು ನಿರ್ಧರಿಸಬೇಕು" ಎಂದು ಹೇಳಿದರು

ಮುಸ್ಲಿಂ ಲೀಗ್ ಅಧಿವೇಶನ

ಮೈಸೂರು ಸಂಸ್ಥಾನದ ಮುಸ್ಲಿಂ ಲೀಗ್ ಅಧಿವೇಶನವು ಇದೇ ತಿಂಗಳು ೨೩ನೆಯ ತಾರೀಖು ಮಂಗಳವಾರ ಮೈಸೂರಿನಲ್ಲಿ ನಡೆಯುತ್ತದೆ. ಸಂಸ್ಥಾನದಲ್ಲಿ ಮುಸ್ಲಿಂ ಲೀಗ್ ಇರಬೇಕೇ ಬೇಡವೇ ಎಂಬುದನ್ನು ಆ ಸಭೆಯು ತೀರ್ಮಾನಿಸುತ್ತದೆ

ಸಂಸ್ಥಾನದ ಐ.ಎನ್.ಎ. ಸೈನಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವ ವಿಚಾರ

ಮೈಸೂರು ಇನ್‌ಫೆಂಟ್ರಿಯ ಮೊದಲನೇ ಬೆಟಾಲಿಯನ್ನಿಗೆ ಸೇರಿದ ಐ ಎನ್ ಏ ಯೋಧರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವ ವಿಚಾರ ಸರಕಾರದ ಪರಿಶೀಲನೆಯಲ್ಲಿದೆ ಇವರ ವಿಚಾರಗಳನ್ನು ಪರೀಕ್ಷಿಸಿ ಸರಕಾರದವರು ಈ ಗುಂಪಿಗೆ ಸೇರಿದ ೪೫ ಜನರಲ್ಲಿ ೩೦ ಜನರನ್ನು ಮೊದಲನೆಯದಾಗಿ ಕೆಲಸಕ್ಕೆ ಪುನಃ ಸೇರಿಸಿಕೊಳ್ಳಲು ಅಜ್ಞೆಮಾಡಿದೆಯರು ಉಳಿದವರ ವಿಚಾರವನ್ನು ಕ್ರಮೇಣ ಪೈದ್ಯರ ವರದಿ ಬಂದಮೇಲೆ ಪರಿಶೀಲಿಸಲಾಗುವುದು

ಮೈಸೂರು ಸಂಸ್ಥಾನದ ವೆಚ್ಚವನ್ನು ಕಡಿಮೆಮಾಡುವದಕ್ಕಾಗಿ ವಿಶೇಷ ಅಧಿಕಾರಿಗಳ ನೇಮಕ

ಆಡಳಿತದ ಖರ್ಚನ್ನು ಯಾವ ರೀತಿಯಲ್ಲಾಬಾಗಲ್ಲಿ ಎಷ್ಟರಮಟ್ಟಿಗೆ ಕಡಿಮೆ ಮಾಡಬಹುದೆಂಬುದನ್ನು ಪರಿಶೀಲಿಸಲು " ಎಕಾನಮಿ ಆಫೀಸರ್ " ಎಂಬ ಹೆಸರಿನಿಂದ, ಆರ್ಥಿಕಾಭಿವೃದ್ಧಿ ಮತ್ತು ಸ್ಟಾಫಿಂಗ್ ಕಮಿಟಿಯವರಾದ ಶ್ರೀ ಬಿ ಎಸ್ ರಾಘವೇಂದ್ರರಾಯರನ್ನು ನೇಮಕಮಾಡಿದ್ದಾರೆ ಸರ್ಕಾರದ ನಾನಾ ಇಲಾಖೆಗಳಲ್ಲಿ ಒಚಿಗನ ಖರ್ಚಾ ಮತ್ತು ರಿಪ್ಲೇಜ್‌ಮೆಂಟ್, ಇವುಗಳಿಗೆ ಸಂಬಂಧಪಟ್ಟ ಎಲ್ಲ ವಿಚಾರಗಳನ್ನು ಪರಿಶೀಲಿಸುವಿರುವುದು ಮತ್ತು ಸಂಬಂಧಪಟ್ಟ ಆಡಳಿತದ ಸ್ಥಿತಿಯ ಬಗ್ಗೆ ಉತ್ತಮವಾದ ಮಾರ್ಗಗಳನ್ನು ತೋರಿಸುವುದು, ಹೊಸ ತೆರಿಗೆಗಳನ್ನು ಹಾಕುವುದೇ ಅಥವಾ ಈಗಿರುವ ತೆರಿಗೆಗಳ ದರಗಳನ್ನೇ ಹೆಚ್ಚುಮಾಡುವುದೇ ಅಥವಾ ಮತ್ತಾವುದಾದರೂ ಮಾರ್ಗವುಂಟೇ, ಇತ್ಯಾದಿ ವಿಚಾರಗಳ ಬಗ್ಗೆ ಸಲಹೆ ಮಾಡುವುದು, ಇವು ಎಕಾನಮಿ ಅಧಿಕಾರಿಗಳ ಮುಖ್ಯ ಗುರಿಯಾಗಿರಬೇಕೆಂದು ಸರ್ಕಾರದ ಆಜ್ಞೆಯಲ್ಲಿ ಸೂಚಿಸಲಾಗಿದೆ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಪಟ್ಟಾಭಿಷಾರಮಹೋತ್ಸವ, ಸೂರಕೋಡ

ಧಾರವಾಡ ಡಿ॥ ಸೂರಕೋಡ ಹಿರಿಯಮಠದ ಶ್ರೀ॥ ಶಿವರುದ್ರಶಿವಾಚಾರ್ಯರ ಮೊಮ್ಮಗನಾದ ಗುರುಪಾದಾರ್ಯನೆಂಬ ಮಹಾವಿಗೆ ಪುತ್ರವರ್ಗಸಂಪ್ರದಾಯಾನುಸಾರ ವಾಗಿ ಸ್ಥಿರಚರಪಟ್ಟಾಧಿಕಾರವು ಶಾ॥ ೧೫೨—೨—೪೮ನೇ ಆದಿತ್ಯವಾರ ಪ್ರಾತಃಕಾಲ ೯ ಘಂಟೆಗೆ ಶ್ರೀ॥ ಷ॥ ಬ್ರ॥ ವೀರತಪಸ್ವಿ ಚರಮೂರ್ತಿಸ್ವಾಮಿಗಳು ಹನ್ನೆರಡುಮಜ್ಜಿಹುಬ್ಬಳ್ಳಿ ಇವರ ನೇತೃತ್ವದಲ್ಲಿ ವಿಧ್ಯುಕ್ತವಾಗಿ ನೆರವೇರಿತು ನೂತನ ಪಟ್ಟಾಧಿಕಾರಿಗಳಿಗೆ ಶಿಷ್ಯವೃಂದದಿಂದ ಕಾಣಿಕೆ ಆರ್ಪಿಸಲ್ಪಟ್ಟಿತು. ಶ್ರೀಪಂಚಾಕ್ಷರ ಗವಾಯಿಗಳ ಶಿಷ್ಯರಾದ ಪಂಚಾಕ್ಷರಿ ಗವಾಯಿ, ತಬಲಾಜೀ ಚನ್ನಪ್ಪ ಬಸವಾರ್ಯ ಕೆರೇಸೂರ, ವಾದಸಪಟು ಕೊಟ್ರಯ್ಯ ಮತ್ತು ಪ್ರಭಯ್ಯ ಇವರ ಸಮ್ಮೇಳನದಿಂದ ಗಾಯನವು ಸುಮಾರು ವ್ಯವಾಗಿ ನಡೆಯಿತು. ಶ್ರೀ॥ ಷ॥ ಬ್ರ॥ ಹನ್ನೆರಡುಮಜ್ಜಿಹುಬ್ಬಳ್ಳಿ ಶ್ರೀಗಳವರು ಪಂಚಾಚಾರ್ಯರ ಹಿರಿತನ ಮತ್ತು ಪಟ್ಟಾಧಿಕಾರದ ಬಗ್ಗೆಯೂ, ಸತ್ಪಿಗೇರಿ ಶ್ರೀಗಳವರು ಗುರುಮಾಹಾತ್ಮ್ಯದ ಬಗ್ಗೆಯೂ, ರಾಮದುರ್ಗ ಶ್ರೀಗಳವರು ಸರ್ವಕಾರ್ಯಕ್ಕೆ ಗುರುವೇ ಮೂಲಕಾರಣನೆಂಬ ಬಗ್ಗೆಯೂ, ಹೂಲಿ ಶ್ರೀಗಳವರು ಪಟ್ಟಾಧಿಕಾರಗಳಂದರೇ ದೇಹೋದ್ಭಾರ ಶಿಷ್ಯೋದ್ಧಾರ ವೆಂಬ ಬಗ್ಗೆಯೂ, ತೆರಗುಂದ ಶ್ರೀಗಳವರು ಪಿಂಡಮೆಣ್ಣ ಎಂಬ ಬಗ್ಗೆಯೂ ಭಾಷಣಮಾಡಿದರು ಪ್ರಸಿದ್ಧ ಕೀರ್ತನಕಾರರಾದ ದೋಣಿ ಬಸವರಾಜ ಎಂಬವರು ಕೀರ್ತನೆಯನ್ನು ಮಾಡಿದರು ಹಾ॥ ಒಸರಲಾಜ ಹಳ್ಳರು ಇವರಿಂದ ನೀತಿಪರ ಭಾಷಣವಾದ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು ಆಮೇಲೆ ಅನ್ನ ಸಂತರ್ಪಣೆಯಾಯಿತು. ರಾತ್ರಿ ೮ ಘಂಟೆಗೆ ಹಿರಿಯಮಠದಿಂದ ಅಂಬೋಲಿಕಾಮಹೋತ್ಸವವು ಮುಮ್ಮುಬೀದಿಗಳಲ್ಲಿ ಹಾಯ್ದು ಹಿರಿಯಮಠಕ್ಕೆ ಬಂದು ತಲ್ಪಿತು ಈ ಮಹೋತ್ಸವಕ್ಕೆ ರಾಮದುರ್ಗ, ಸತ್ತಿ

ಗೇರಿ, ಹೂಲಿ, ಕಡಕೊಳ್ಳ, ನರಗುಂದ ಮುಂತಾದ ಪಟ್ಟಾಧಿಕಾರಿಗಳು ಆಗಮಿಸಿದ್ದರಲ್ಲದೆ ಯಾವಗಲ್ ತಡಹಾಳ ಕೊಂಗವಾಡ, ಆರಬೈ ಕುರ್ಲಗೇರಿ ಕೌಜಗೇರಿ ವಂತಾದ ಗ್ರಾಮದ ಪಟ್ಟಮಾಹೇಶ್ವರರು ಆಗಮಿಸಿದ್ದರು ಈ ಸಮಾರಂಭದಲ್ಲಿ ಸುಮಾರಾಡದ ಸಮಸ್ತ ಧೃವದ ವರು ತಮ್ಮಮನಸಿನಿಂದ ಬಹಿರಂಗ ಪಾಣೆಯನ್ನು ಸಲ್ಲಿಸಿ ಗುರುವಿನ ಉಸ್ತುರ್ಹದೆ ಪಾತ್ರರಾದರು ಶ್ರೀಜಗಾಚಾರ್ಯರು ಇವರಿಗೆ ಸದಾ ಸತ್ಕೀರ್ತಿಗಳವಸ್ಥಿಯಲೆಂದು ಪ್ರಾರ್ಥಿಸುತ್ತೇನೆ

ಓಂ ಗುರುಬಕ್ತ

ಜಾಜ್ವಲ್ಯಜ್ಯೋತಿಯು ನಂದಿತು

ಕಾಶೀ ಜ್ಞಾನಸಿಂಹಾಸನಾಧೀಶ್ವರ ಜ್ಞಾನನಿಧಿ ಶ್ರೀ ೧೦೮ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಧಿಯವರು ತಾ॥ ೩೫ ೧೦ ೪೮ನೆಯ ದಿನ ತಮ್ಮ ಭೌತಿಕದೇಹವನ್ನು ತ್ಯಜಿಸಿದಿಮು ನುಂದಾದು ಖಿದಾಯಕ ವಾಗಿದೆ ಜಗದ್ವಂದ್ಯ ಜಾಜ್ವಲ್ಯಜ್ಯೋತಿಯು ವಿಯೋಗವು ನಮ್ಮೀ ವೀರಶೈವಸಮಾಜದ ದೌರ್ಭಾಗ್ಯ! ಶ್ರೀಜಗದ್ಗುರುಗಳ ತೇಜಸ್ವಿಜೀವನವು ಅಖಿಲ ಭಾರತೀಯ ಜನಾಂಗಕ್ಕೆ ಮಾರ್ಗದರ್ಶಕವಾಗಿತ್ತು ಈ ಮಹಾತ್ಮರ ಶಿಷ್ಯೆಕೃದಿಂದ ವೀರಶೈವ ಸಮಾಜವು ಅನಾಥವಾಯಿತು ತಮ್ಮ ಮೂರು ವರ್ಷಗಳ ಅಧಿಕಾರದಲ್ಲಿ ಅನೇಕ ಆತ್ಯದ್ಭುತ ಕಾರ್ಯಗಳನ್ನು ಮಾಡಿದರು ಈ ಮಹಪ್ರೀಯರ ಕಾರ್ಯಕಲಾಪಗಳು ಚಿರಸ್ಮರಣೀಯಿಗಳಾಗಿರುವವು

ಒಗದ್ಗುರುಗಳು ಆಂಧ್ರ, ಕರ್ನಾಟಕ ಮಹಾಪ್ರಾಣಿಗಳಲ್ಲಿ ಧಾರ್ಮಿಕ ಗ್ರಂಥಗಳ ಮತ್ತು ಧಾರ್ಮಿಕ ಪತ್ರಿಕೆಗಳ ಪ್ರಚಾರ ಧರ್ಮಬೋಧಕರ ಪ್ರಚಾರ್ಯ ಮುದ್ರಣಾಲಯ ಸ್ಥಾಪನ ಮೊದಲಾದವುಗಳನ್ನು ಮಾಡಬೇಕೆಂದು ಒಂಗರೆಸ್ ಸಂಸ್ಕೃತ ಕ್ಕೆಸ್ಸ್ ಕಾಲೇಜಿನಲ್ಲಿ ಸ್ಥಾಪಕ, ವೃಷ್ಣವ ಪ್ಲೇನ ಮುಂತಾದ ಸಮಸ್ತ ಮತೀಯರ ಗದ ಗುರುಗಳಂತೆ ನಮ್ಮಾ ವೀರಶೈವರ ಗದ್ದುಗೆಯಿರುವದು ಉತ್ಕಂತ ಅವಶ್ಯಕವೆಂದು ಗವರ್ನರ್ ಎಂಟ್ ಸಂಸ್ಥತ ಕಾಲೇಜಿನಲ್ಲಿ ಎಲ್ಲ ಮತೀಯರ ಧಾರ್ಮಿಕ ಗ್ರಂಥಗಳು ಪರ್ಶ ಪುಸ್ತಕಗಳಿಂಗಿರುವ ವೀರಶೈವ ಮುಖ್ಯ ಧಾರ್ಮಿಕ್ಕಗ್ರಂಥಗಳನ್ನು ಕೂಡ ಪಠ್ಯಪುಸ್ತಕಗಳನ್ನಾಗಿ ಡಬೇಕೆಂದೂ ಆಗ್ಗೆ ಅಪ್ಪಣೆಕೊಡಿಸುತ್ತಿದ್ದರು ಆದರೆ ಈ ಮಹಾಕಾರ್ಯ ವು ನೆರವೇರಲಿಲ್ಲ

ಜ್ಯೋತಿಯು ನಂದಿತೆಂದು ಇಂತಿಸದೆ ಆ ಮಹಾತ್ಮರ ಸತ್ಕಸಂಕಲ್ಪಗಳನ್ನು ನೆರವೇರಿಸುವದೂ ಅವರು ಉಪದೇಶಿಸಿದ ಮಾರ್ಗದಂತೆ ನಡೆಯುವದೂ ಸರ್ವರ ಕರ್ತವ್ಯ ವಾಗಿದ ಜ ದ್ಭಂಧ್ಯ ಜಾಜ್ವಲ್ಯಜ್ಯೋತಿಯ ಪವಿತ್ರಾತ್ಮಕ್ಕೆ ಶಾಂತಿಯನ್ನಾಯಿಲೆಂದು ಪರಂಜ್ಯೋತಿ ಪರಮಾತ್ಮನನ್ನ ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನ

ಶಂಪಲಿಂಗಶಿವಾಚಾರ್ಯ
ಸಂಸ್ಥಾನಕೆ ದಾರನಾದ

ಗದಗಿನಲ್ಲಿ ದು ಖೋದ್ಗಾರ ಸಭ

ಶ್ರೀಶಾಂಭವಜಗದ್ಗುರು ನಿಶ್ಚಾರಾದ್ಯ ಜ್ಞಾನಸಿಂಹಾಸನಾಧೀಶ್ವರ ಅಭಿನವ ವಿಶ್ವಾರಾಧ್ಯ ಶ್ರೀವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ತಾ॥ ೨೫ ೧೦ ೪೮ ರವಿವಾರ ದಿವಸ ಲಿಂಗೈಕ್ಯರಾದ ವರ್ತಮಾಯು ಟೆಲಿಗ್ರಾಂ ಮೂಲಕ ಗದಗಿನ ವೀರ ದಿವಸ ಶ್ರೀಜಗದ್ಗುರು ಪಂಚಾಚಾರ್ಯ ಸೇವಾಸಂಘದ ಪ್ರೆಸಿಡೆಂಟರಾದ ವೇ॥ ತೋಟಪ್ಪಯ್ಯಶಾಸ್ತ್ರಿಗಳವರಿಗೆ ತಲ್ಲಿಯೊಡನೆ ಸರ್ವರಿಗೂ ಬಹಳ ದುಃಖವಾಯಿತು ಶ್ರೀರಂಭಾಪುರೀ ಜಗದ್ಗುರು ಅಭಿನವ ರೇಣುಕ ಶ್ರೀಶಿವಾನಂದರಾಜೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು ನವ್ಯನ್ನಗಲಿದ ತಾಪದಲ್ಲಿ ಸರ್ವ ಗುರು ಭಕ್ತರೂ ಬಳಲುತ್ತಿದ್ದಾರೆ ೧೭ ತಿಂಗಳೋಗೆ ಪಟ್ಟ ಇಂದ ಅಂಧ ಅನ್ಯಾಯ ಘಟನೆಯು ನಡೆದಿದ್ದು ಸಮಾಜಕ್ಕೆ ಒಪಲ ಹಾಪಿಕರ ಹೀಗೆ ನೋಲಿಂದ ಮೇಲೆ ಪೆಟ್ಟುಗಳು ಸಮಾಜದ ಮೇಲೆ ಬಿದ್ದರೆ ಸಮಾಜವು ಉದ್ಧಾರವಾಗುವ ಬಗೆ ಜೀಗೆಂದು ಸರ್ವರೂ ಚಿಂತಿಸುತ್ತಿರುವರು ತಾ॥ ೩೦ ೧೦ ೪೮ ನೇ ದಿವಸ ವೇ॥ ಗುಡ್ಡಿ ಮಠದ ಸಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದುಃಖಪ್ರದರ್ಶನವು ಮಾಡಲ್ಪಟ್ಟಿತು

ಕಾರ್ಯದರ್ಶಿ
ಶ್ರೀಜಗದ್ಗುರು ಪಂಚಾಚಾರ್ಯ ಸೇವಾ ಸಂಘ
ಗದಗ

ಪೆರಿಯಾಪಟ್ಟಣದ ಹತ್ತಿರ ಬೆಂಕಿಯ ಅನಾಹುತ

ಸುಮಾರು ಒಂದು ಲಕ್ಷ ರೂಪಾಯಿ ನಷ್ಟ

ಪೆರಿಯಾಪಟ್ಟಣ ತಾಲ್ಲೂಕಿನ ಅಲಪಹಳ್ಳಿಯಲ್ಲಿ ಈ ತಿಂಗಳು ೨೫ನೆಯ ತಾರೀಖಿನ ರಾತ್ರಿ ಇದ್ದಕ್ಕಿದ್ದಂತೆ ಬೆಂಕಿ ಹರಡಿಕೊಂಡಿತು ಅನೇಕ ಗುಡಿಸಲುಗಳು ಸುಟ್ಟುಹೋದವು ಆಸ್ತಿಪಾಸ್ತಿ ದನಕರುಗಳು ನಷ್ಟವಾದವು ಒಟ್ಟು ಸುಮಾರು ೧ ಲಕ್ಷ ರೂಪಾಯಿ ನಷ್ಟವಾಗಿರಬಹುದೆಂದು ಊಹಿಸಲಾಗಿದೆ

ಸಪ್ರೋತ್ಪತ್ತಿಯಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಪೀಠಪತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೩ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೩ ಆಣೆ
ಭಸವಾದಿಸಿದ್ಧಾಂತದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶತ್ಕವಿಲಾಸ	೩ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೩ ಆಣೆ
ಬಿಲ್ವನಾಮಾಷ್ಟಕ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ ...	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ...	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕನಾಮ್ನಾಯಸಹಿತ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂಶ್ಯೇಷ್ಟಿ-ಶ್ರಾದ್ಧವಿಧಿ ...	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಪಾತ್ರ ಬಳ್ಳಸ್ಕೃಷ್ಟ) ...	೮ ಆಣೆ
ಶಿವಾದ್ವೈತಸರಭಾಷಾ (ಸಂಸ್ಕೃತ) ...	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ಯಾಂತರಿವಾಕರ (೩ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತ್ರೀಯ ಕೃಪ ಮಂತ್ರ ೨ನೆಯ ಆವೃತ್ತಿ)	೧। ರೂ
ಶ್ರೀಕರಭಾಷ್ಯಂ (ಪ್ರಥಮಾಧ್ಯಾಯ)	೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ ಇದು ಸುಮಾರು ಪುಟ ಪ್ರೋಗಳಿಂದ ಕೂಡಿದೆ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಪದ್ಯಗಳಲ್ಲಿದೆ)	೨ ರೂ
ಸಿದ್ಧಾಂತಶಿಖಾಮಣಿ (ಸಟೀಕ ವ್ಯಾಖ್ಯಾನಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮಾಕಾರಣಾಗಮಮಕುಟ ವಾತಾಗಮ-ಸೂಕ್ಷ್ಮಾಗಮಗಳಿಂದ ಉದ್ಧರಿತ ಪುನು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೫೦೪ ಪುಟ)	೬ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ
ವೀರಶೈವರತ್ನ (ಮರಾಠಿ)	೧ ರೂ
ಪಂಚಾಚಾರ್ಯಪೂಜಾವಿಧಿ (ತೆಲುಗಿನಲ್ಲಿ ಸಂಸ್ಕೃತ)	೧ ರೂ
ಸಂಧಿಕೌಮುದೀಕಾರಿಕಾ (ಸಂಸ್ಕೃತ)	೨ ಆಣೆ

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಸೈಯಾಜಿರಾವ್ ರಸ್ತೆ, ಮೈಸೂರು.

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜಪಿತರ್ ಪಂಚಾಸ್ಯಶೀಲಾಧಿಪರ್ । ಪಂಚಕ್ಷೇತ್ರವಿಜಾಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರಪ್ರಾಲಿಪ್ಪುದೀರೇಳಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೫೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಮಾರ್ಚಿ ೧೯೪೪ [ಸಂಚಿಕೆ ೪೮

ಶ್ರೀಜಗದ್ಗುರು
ಪಂಚಾಚಾರ್ಯರ ಪ್ರಾಚೀನತ್ವ

ಶ್ರೀಮದ್ವೀರಶೈವಮಹಾಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ವಿಷಯವು ಕ್ರಿ ಶ ೧೯ ನಯ ಶತಮಾನಕ್ಕಿಂತ ಪೂರ್ವದ ಶಾಸನಗಳಲ್ಲಿ ಎಲ್ಲಿಯೂ ಕಂಡುಬರದಿಲ್ಲವೆಂದು ಕೆಲಜನ ಮಹಾಶಯರು ಸರ್ವಜ್ಞ ಮೂರ್ತಿಗಳಂತೆ ಸಾರುತ್ತಿರುವುದು ಎಲ್ಲರಿಗೂ ತಿಳಿದ ಇದೆ ಇವರ ಈ ವಿದನ ದ ವಾದವು ಕೇವಲ ಭ್ರಮಾತ್ಮಕವಾದುದೆಂದು ನಿರ್ಣಯಿಸಿ, ಪ್ರಾಚೀನಶಾಸನಾದಿ ಪ್ರಮಾಣಗಳ ದ್ವಾರಾ ಶ್ರೀವೆ ಪ್ಪಚಾರ್ಯರ ಪ್ರಾಚೀನತ್ವದ ಒಗ್ಗೆ ಒಂದು ಗ್ರಂಥವನ್ನು ಒರೆದು ಪ್ರಕಟಿಸಬೇಕೆಂದು ಅನೇಕಜನ ಗುರುಭಕ್ತರು ಪ್ರಾರ್ಥಿಸಿಕೊಂಡ ಮೇರೆಗೆ, ಪಂಡಿತ ಶ್ರೀಆರಾಧ್ಯಶಾಸ್ತ್ರಿಗಳವರು ಅವಗೂಲ್ಯವಾದ ಈ ಗ್ರಂಥರತ್ನವನ್ನು ರಚಿಸಿದ್ದಾರೆ ಈ ಗ್ರಂಥದ ಯೋಗ್ಯತೆಯು ಎಷ್ಟು ಮಹತ್ವವಾಗಿರುವುದೆಂಬುದು ಇದನ್ನು ಓದಿನೋಡಿದಮೇಲೆ ವಾಚಕರಿಗೆ ನೇರ್ಪ್ಪವಾಗುವದು ವೀರಶೈವಮತದ ಪ್ರಾಚೀನೇತಿಹಾಸವನ್ನು ಸಂಶೋಧಿಸುವುದಕ್ಕಾಗಿ ಪಂಡಿತರು ಈ ವರೆಗೆ ಸುಮಾರು ೧೨ ಸಾವಿರ ಶಿಲಾಶಾಸನಗಳನ್ನು ಪರಿಶೀಲಿಸಿರುವರು ಅನೇಕ ಶಾಸನಗಳಲ್ಲಿ ವೀರಶೈವಮತದ ಒಗ್ಗೆ ನ ಹತ್ತ್ವದ ಸಂಗತಿಗಳು ದೊರೆತಿರುವವು ಪಂಡಿತರು ಆ ಬಗ್ಗೆ ಮುಂದ ಒಂದು ಸ್ವತಂತ್ರಗ್ರಂಥವನ್ನೇ ಒರೆಯತಕ್ಕವರಾಗಿದ್ದಾರೆ ಆಸ್ತು !

ಈ ಗ್ರಂಥದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವವೂ, ಆ ಮಹಾಚಾರ್ಯರಿಂದ ಸ್ಥಾಪಿತವಾದ ಲಿಂಗಧಾರಣದ ಪ್ರಾಚೀನತ್ವವೂ, ಪರಮಪೂಜ್ಯರಾದ ಜಂಗಮರ ಪ್ರಾಚೀನತ್ವವೂ ಅನೇಕ ಪುರಾತನ ಶಾಸನ ಪ್ರಮಾಣಗಳಿಂದ ಪ್ರತಿಪಾದಿಸಲ್ಪಟ್ಟಿರುವುದು ಈ ಒಗ್ಗೆ ಕನ್ನಡ ದೇಶದಲ್ಲಿರುವ ಚಿತ್ರದುರ್ಗ ತಾ॥ ಬೇವಿನಹಳ್ಳಿ, ಶಿಕಾರಿಪುರ ತಾ॥ ಬೆಳಗಾಂವಿ, ಹರಪನಹಳ್ಳಿ ತಾ॥ ಬಾಗಳಿ, ಹೊವಿನ ಹಡಗಲಿ ತಾ॥ ಸೋಗಿ ಬಳ್ಳಾರಿ ಡಿ॥ ಆಲೂರು ತಾ॥ ರಾಮದುರ್ಗ, ತೆಲಗು ದೇಶದಲ್ಲಿರುವ ಕಡಪಾ ಡಿ॥ ಪೊಂಗಲಸಾನಿ, ಆನಂತಪುರ ಡಿ॥ ತಾಡಪತ್ರಿ, ಕರ್ನೂಲ್ ಡಿ॥ ಪಾಣ್ಯಂ ಬಿಜವಾಡ, ಬಿಜನಾಡ ಡಿ॥ ಜೆಡ್ಚರ್ಲ, ತಮಿಳು ದೇಶದಲ್ಲಿರುವ ನೂಮಲ್ಲಪುರಂ, ಸಾಲವಂಕುಪ್ಪಂ, ತ್ರಿಚಿನಾಪಳ್ಳಿ, ಕಾಂಚಿ, ವಾಯಲೂರು ಮೊದಲಾದ ಗ್ರಾಮಗಳಲ್ಲಿರುವ ಪ್ರಾಚೀನ ಶಿಲಾಶಾಸನಗಳು ಉದಾಹರಿಸಲ್ಪಟ್ಟಿರುವವು ಅಲ್ಲದೆ ಪಂಡಿತೀಕರ ಪ್ರಾಚೀನತ್ವದ ಬಗ್ಗೆ ಬನಾರಸ್ ಜಡ್ಜ್‌ಕೋರ್ಟು, ಅಲಹಾಬಾದ್ ಹೈಕೋರ್ಟು ಮತ್ತು ಮದ್ರಾಸ್ ಹೈಕೋರ್ಟುಗಳ ತೀರ್ಮಾನಗಳೂ, ಪರಮತೀಯರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿರುವ ಮಹಾಭಾರತ, ಸೌರಪುರಾಣ, ಕಾಶೀಖಂಡ, ಕೇದಾರಖಂಡ ಮೊದಲಾದ ಪ್ರಾಚೀನಗ್ರಂಥಗಳ ಪ್ರಮಾಣಗಳೂ, ಮಿ॥ ಸಿ ಪಿ ಬ್ರೌನ್, ಮಿ॥ ಇ ಥರ್ಸ್‌ಟನ್, ಮಿ॥ ಜೆ. ಎಸ್. ಫಾತ್ಯೆಹಾರ್ ಮೊದಲಾದ ಸುಪ್ರಸಿದ್ಧ ಯೂರೋಪಿಯನ್ನರ ಗ್ರಂಥಪ್ರಮಾಣಗಳೂ, ಡಾ॥ ಆರ್. ಜಿ. ಭಾಂಡಾರಕರ್ ಇವರೇ ಮೊದಲಾದ ಅನೇಕಜನ ಸುಪ್ರಸಿದ್ಧಭಾರತೀಯರು ಒರೆದಿರುವ ಗ್ರಂಥಪ್ರಮಾಣಗಳೂ ಉದಾಹರಿಸಲ್ಪಟ್ಟಿರುವವು ಪಂಡಿತಾರ್ಯರ ಸರ್ವಸ್ವವೇ ಈ ಗ್ರಂಥದಲ್ಲಿ ಅಡಕವಾಗಿರುವದು ಪೀಠಾಭಿಮಾನಿಗಳಿಗಂತೂ ಈ ಗ್ರಂಥವು ಪ್ರಾಣಾತ್ಮರೂಪವಾಗಿರುವದು ಸಂದರ್ಭಾನುಸಾರವಾಗಿ ಅಲ್ಲಲ್ಲಿ ಪ್ರಾಚೀನತಾಸಾದಿಗಳ ೧೪ ಫೋಟೋಗಳು ಮುದ್ರಿಸಲ್ಪಟ್ಟಿರುವವು

ಪಂಚಪೀಠಗಳ ಬಗ್ಗೆ ಅನೇಕ ಮಹತ್ವ ವಿಷಯಗಳಿಂದೊರಗೂಡಿ ಸಚಿತ್ರವಾಗಿಯೂ ಸರ್ವಾಂಗಸುಂದರವಾಗಿಯೂ ಮುದ್ರಿತವಾಗಿರುವ ಈ ಗ್ರಂಥರತ್ನವನ್ನು ಸರ್ವರೂ ಕಲಿತಿಕೊಂಡು, ಎಂದೂ ಕೇಳದ ಮತ್ತು ನೋಡದ ಅಮೂಲ್ಯವಿಷಯಗಳನ್ನು ತಿಳುಕೊಂಡು ಧನ್ಯರಾಗಬೇಕೆಂದಾಶಿಸುತ್ತೇವೆ ಬೆಲೆ ೧ ರೂ.

ಮ್ಯಾನೇಜರ
ಶ್ರೀಪಂಚಾಚಾರ್ಯ ಎಲೆಕ್ಟ್ರಿಲ್ ಪ್ರೆಸ್,
ಮೈಸೂರು.

ಪ್ರೆಸಿಡೆಂಟ್ ಟ್ರೂಮನ್ನರ ಮಹತ್ವಪೂರಿತ ಭಾಷಣ

ಯೂರೋಪಿನಲ್ಲಿ ಪ್ರಜ ಪ್ರಭುತ್ವಕ್ಕೆ ಕಾಪಿ ತಂದೊಡ್ಡಿರುವ ಕಮ್ಯೂನಿಸ್ಟ್ ಪ್ರಾಬಲ್ಯವನ್ನು ತುಳಿದುಲು ಸಂಯುಕ್ತ ಸಂಸ್ಥಾನಗಳಲ್ಲಿಲ್ಲಾ ಸಾರ್ವತ್ರಿಕ ಮಿಲಿಟರಿ ಶಿಸ್ತಣ ನಿರ್ಬಂಧ ಮಿಲಿಟರಿ ಸಚಿವ ಮತ್ತು ಯೂರೋಪಿನ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಸಹಾಯ— ಈ ಮೂರು ಮಹತ್ವದ ಸಲಹೆಗಳನ್ನು ಕೂಡಲೆ ಆಚರಣೆಗೆ ತರ ಬೇಕು—ಎಂಬುದಾಗಿ ಪ್ರೆಸಿಡೆಂಟ್ ಟ್ರೂಮನ್ನರು ಕಾಂಗ್ರೆಸ್ಸಿನ ಜಂಟಿ ಅಧಿವೇಶನದಲ್ಲಿ ಭಾಷಣಮಾಡಿದರು

ಯೂರೋಪಿಖಂಡದಲ್ಲಿ ತಲೆದೋರಿರುವ ಉತ್ಕಟ ಪರಿಸ್ಥಿತಿಯನ್ನು ವಿವರಿಸುತ್ತಾ ಅದಕ್ಕೆ ರಷ್ಯದ ಅಸಹಕಾರ ಧೋರಣೆಯೇ ಕಾರಣವೆಂದು ಮಿ॥ ಟ್ರೂಮನ್ನರು ಸ್ಪಷ್ಟವಾಗಿ ತಿಳಿಸಿದರು

ಎರಡನೆಯ ಮಹಾ ಯುದ್ಧವು ಮುಗಿದಮೇಲೆ ರಷ್ಯವು ಮಧ್ಯ ಮತ್ತು ಪೂರ್ವ ಯೂರೋಪಿನ ರಾಷ್ಟ್ರಗಳ ಪ್ರಜಾಸ್ವಭುತ್ವವನ್ನು ನಾಶಗೊಳಿಸಿದೆ ಮತ್ತು ಯೂರೋಪಿನ ಉಳದ ರಾಷ್ಟ್ರಗಳ ಮೇಲೂ ಸಹ ತನ್ನ ಪ್ರಭಾವವನ್ನು ಬೀರಲು ಹವಣಿಸುತ್ತಿದೆ ಈ ಧೋರಣೆಯೇ ಇಂದಿನ ವಿಷಮ ಪರಿಸ್ಥಿತಿಗೆ ಕಾರಣ —ಎಂಬುದಾಗಿ ಮಿ॥ ಟ್ರೂಮನ್ನರು ರಷ್ಯದ ಧೋರಣೆಯನ್ನು ಖಂಡಿಸಿದರು

ಕಮ್ಯೂನಿಸ್ಟ್ ಪ್ರಾಬಲ್ಯದಿಂದ ಪ್ರಜಾಪ್ರಭುತ್ವಕ್ಕೆ ಚ್ಯುತಿಬಂದಿರೆ ಕಮ್ಯೂನಿಸ್ಟ್ ಭಯಭೀತಿಗಳಿಗೆ ಒಳಗಾಗಿರುವ ಯೂರೋಪಿನ ರಾಷ್ಟ್ರಗಳಿಗೆ ನೆರವು ನೀಡಲು ಸಂಯುಕ್ತ ಸಂಸ್ಥಾನಗಳು ಬಲಯುತವಾದ ರಾಷ್ಟ್ರವಾಗಬೇಕು ಪರಿಸ್ಥಿತಿಯು ದಿನದಿನಕ್ಕೂ ವಿಷಮಿಸುತ್ತಿದೆ. ಈಗ ಸುಮ್ಮನೆ ಕೂಡುವುದು ವಿವೇಕವಲ್ಲ ಎಂದು ಅಧ್ಯಕ್ಷರು ತಿಳಿಸಿ ಪಶ್ಚಿಮ ಯೂರೋಪಿನ ಸಹಕಾರ ಒಪ್ಪಂದಕ್ಕೆ ತಮ್ಮ ಪೂರ್ಣ ಬೆಂಬಲವಿತ್ತರು

ಕೊನೆಯಲ್ಲಿ ಮಿ॥ ಟ್ರೂಮನ್ನರು ಕಾಂ ಸ್ಥಾಪನಾ ಕಾರ್ಯದಲ್ಲಿ ರಷ್ಯವು ಸಹಕರಿಸಿ ವಿಶ್ವಶಾಂತಿಗೆ ಭಂಗಬರದಿರುವಂತೆ ಮಾಡಬೇಕೆಂದು ಮನವಿ ಮಾಡಿಕೊಂಡರು.

ಆಂಧ್ರ ವಿಶ್ವವಿದ್ಯಾನಿಲಯಕ್ಕೆ ನಿಜಾಮರಿಂದ ೨ ಲಕ್ಷ ರೂ ಸಹಾಯ

ಆಂಧ್ರವಿಶ್ವವಿದ್ಯಾನಿಲಯದ ಕಾಸ್ಮೋಪೊಲಿಟನ್ ಸಭಾಂಗಣದ ನಿರ್ಮಾಣಕ್ಕಾಗಿ ೨ ಲಕ್ಷ ರೂ. ಗಳ ಸಹಾಯ ಧ್ರವ್ಯವನ್ನು ನಿಜಾಮರು ನೀಡಿದ್ದಾರೆ.

ಭಾರತದಲ್ಲಿ ೨೯೯೦ ಮಂದಿ ಲಕ್ಷಾಧೀಶರಿದ್ದಾರೆ

ಭಾರತದಲ್ಲಿ ೨೯೯೦ ಮಂದಿ ಲಕ್ಷಾಧೀಶರಿದ್ದಾರೆಂದು ಭಾರತ ಪೊಲೀಸಾಧಿ ಸಚಿವರಾದ ಶ್ರೀ ಆರ್. ಕೆ. ಪಟ್ಟಾಗಂಶೆಟ್ಟಿಯವರು ತಿಳಿಸಿದ್ದಾರೆ.

॥ ಶ್ರೀಜಗದ್ಗುರು ಪಾರಿಜಾತಾಯ್ಯಾಯ ನಮಃ ।

ಧರ್ಮಪ್ರವರ್ತಕರ ಕರ್ತವ್ಯಪ್ರಜ್ಞತೆ

— —

ಲೇ॥ ಮಲ್ಲಿಕಾರ್ಜುನಾಶಾಸ್ತ್ರಿ ಶಾಸ್ತ್ರೀಜ್ಯೋಸ್ಯರು ಮಳೆವಾರ, ಸುಬ್ರಹ್ಮಣ್ಯ

ಧರ್ಮಪ್ರವರ್ತಕರೆಂದರೆ ಧಾರ್ಮಿಕರೆಂದೂ, ಧರ್ಮಪ್ರಸಾರಕರೆಂದೂ ಹೇಳಬಹುದು ಕಲ್ಪನಪ್ಪಸ್ಸಗಳೂ ಕಾಲಾಧೀನಗಳಾಗಿರುವ ಪವಿತ್ರಸ್ಥಲಗಳಾಶ್ರಯಿಸಿರುವಂತೆ ಈ ಮಹಾಪುರುಷರ ಉದಯವು ಸದ್ಭಂಪವಿತ್ರಾಶ್ರಯಿಸಿರುವುದು ಗಡಿಯಾರವು ಅಕ್ಕಪಕ್ಕಾಗಿ ನಡೆಯುತ್ತಿರುವುದೆಂದು ತೋರಿದಾಗ ಗಡಿಯಾರದವನು ಅದನ್ನು ಸರಿಪಡಿಸುವಂತೆ ಜಗತ್ತಿನಲ್ಲಿ ಧರ್ಮದ ಆವನತಿಯೂ ಅಧರ್ಮದ ಉನ್ನತಿಯೂ ಆದ ಕಾಲದಲ್ಲಿ ಸಾಧುಸಂತರ ಶಾಂತಿಗೆ ಭಂಗವನ್ನುಂಟುಮಾಡುವಂತಹ ಪ್ರಬಲವಾದ ಪ್ರಸಂಗಗಳೇನಾದರೂ ಪ್ರಾಪ್ತವಾದರೆ ಆಗ್ಗ ಪರಮಾತ್ಮನು ಧಾರ್ಮಿಕಪುರುಷರ ಮೂಲಕ ಪ್ರಕಟವಾಗಿ ಅಂದರೆ ಅವರಿಗೆ ಪ್ರೇರಿಸಿ ಧರ್ಮವ್ಯವಸ್ಥೆಯನ್ನು ಸರಿಪಡಿಸಿ ಧರ್ಮಸಂಸ್ಥಾಪನೆಯನ್ನು ಮಾಡುತ್ತಾನೆ ಈ ಅಭಿಪ್ರಾಯವನ್ನು ಕುರಿತು ಭಗವದ್ಗೀತೆಯು—

ಯದಾಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಎಂಬಿವಾಗಿ ಬೋಧಿಸಿ ಶ್ರೀರುವದ ಪ್ರಪ ಚದಲ್ಲಿ ಆಸಂಸ್ಥಾಗಿರಾದ ಲೆಬವರು ಧನ ದ ಮೇರೆಗಳನ್ನು ಮೀರಿ ನಡೆಯುತ್ತಾರೆ ಎಲ್ಲೆ ಇರವರಿಗೆ ದೀಸವು ಉರಿಯವಂತೆ ಪುಣ್ಯ ದ ಸೃಣ್ಯ ಇರುವವರಿಗೆ ಯಾರು ಏನು ಮಾಡಿದರೂ ನಡೆದೇಹೋಗುತ್ತದೆ ಆದರೆ 'ಆತ್ಮತ್ಪೈಃ ಪುಣ್ಯಾಪೈರ್ಯವ ಸ್ಥಲನ ಶ್ಚ ತೇ' ಎಂಬ ಗೀತೋಕ್ತಿಯಂತೆ ಪಾಪಸಗ್ಗಿಯು ಹೆಚ್ಚಾದೊಡನೆ ಸೇ ಪಮಾತ್ಮನು ಒಂದಿಲ್ಲೊಂದು ದಿನ ಖಂಡಿತವಾಗಿಯೂ ತಕ್ಕ ಶಾಸನವನ್ನು ಮಾಡುವನು ಆದಕಾರಣ ಮನುಷ್ಯನ ಧ್ಯೇಯವು ಪ್ರವಾಹವು ಮುಂದುಮುಂದಕ್ಕೆ ಪ್ರವಹಿಸಿ ಪಂಠಿಯ ಜ್ವಾಲೆಯು ಮೇಲುಕ್ಕೆ ಚಾಚಿ ವ ತೆಯಂ ಮುಂದಕ್ಕೇ ಇರಬೇಕು ಹಾಗಲ್ಲದ ಸದ್ಧರ್ಮ ಕ್ರಿಯೆಯು ನೆಲವಿಗೆ ಬಿದ್ದು ಸ್ವೇಚ್ಛೆಯಾಗಿ ವರ್ತಿಸುವಂತೆ ಪಿಶೇಷಾಲಿಗಳ ಲಕ್ಷಣವಲ್ಲ ಧರ್ಮೇಣ ಹೀನಾ: ಪಶುಭಿಸ್ತುಲ್ಯಾ:" ಎಂಬ ನೀತಿವಾಕ್ಯದಂತೆ ಧರ್ಮಹೀನನು ಪಶುವಿನಿಸಾನವು

"ಧರ್ಮೋ ವಿಶ್ವಸ್ಯ ಜಗತಃ ಪ್ರಭವಾ ಎಂಬ ಶ್ರುತಿವಾಕ್ಯದಂತೆ ಧರ್ಮವು ಜಗತ್ತಿಗೆ ಆಧಾರವಾಗಿರುವುದು ಧರ್ಮವಿಲ್ಲದಿದ್ದರೆ ಜಗತ್ತಿನ ನೆ ನವಾರವು ಸಂಗಮವಾಗಿ ನಡೆಯುವುದೇ ಇಲ್ಲ ಧರ್ಮ ಏನ ಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ" ಧರ್ಮವನ್ನು ಯಾರು ನಾಶ ಮಾಡುವರೋ ಅವರನ್ನು ಧರ್ಮವು ನಾಶಮಾಡುವ ದೆಂದೂ, ಧರ್ಮವನ್ನು ಯಾರು ರಕ್ಷಿಸುವರೋ ಅವರನ್ನು ಧರ್ಮವು ರಕ್ಷಿಸುವದೆಂದೂ ಮನುಸ್ಮೃತಿಯು ಸಾರುತ್ತಿರುವುದು ಧರ್ಮಾನುಷ್ಠಾನದಿಂದ ಜೀವನಿಗೆ ಉನ್ನತಿಯೂ ಧರ್ಮದ ಪಾಪ್ತಿಯಿಂದ ಜೀವನಿಗೆ ಅವನತಿಯೂ ಉಂಟಾಗುವವು ಆದುದರಿಂದಲೇ ಶ್ರುತಿಯು— "ಸತ್ಯಂ ವದ- ಧರ್ಮಂಚರ" ಎಂದು ಬೋಧಿಸುತ್ತಿರುವದು ಆದಕ್ಕಾಯುಕ್ತ ಮೋಕ್ಷದ್ವಾರಕ್ಕೆ ಸೋಪಾನದಂತಿರುವ ಧರ್ಮವೇ ನಮ್ಮ ಜೀವನದ ಸರ್ವಸ್ವವು, ಧರ್ಮ್ಯಾಗಿಯೇ ನಮ್ಮ ಜೀವನವು, ಧರ್ಮ್ಯಾಗಿಯೇ ನಮ್ಮ ಶರೀರವು, ಧರ್ಮ್ಯಾಗಿಯೇ ನಮ್ಮ ಆಶವ-ವಸನ ವನಗಿಗಳು, ಧರ್ಮ್ಯನುಕೂಲವಾದುದೇ ಪುಣ್ಯವು, ಧರ್ಮ್ಯಕ್ಕೆ ಪ್ರತಿಕೂಲವಾದುದೇ ಪಾಪವು ಎಂದು ತಿಳಿಯಬೇಕು.

ಇನ್ನು ಧರ್ಮಪ್ರವರ್ತಕನ ಕರ್ತವ್ಯದಕ್ಷತೆಯನ್ನು ಕುರಿತು ವಿಚಾರಿಸೋಣ! ಧರ್ಮಸಮ್ಮತವಾದ ಕಾರ್ಯವೇ ಮುಖ್ಯವೆಂದು ತಿಳಿದ ಸನಾತನಾರ್ಯನು— ಒಂದು ಸಮಯದಲ್ಲಿ ಕದನ್ನವನ್ನು ತಿನ್ನುತ್ತಿರಲಿ, ಮತ್ತೊಂದು ಸಮಯದಲ್ಲಿ ಮಿಷ್ಟಾನ್ನವನ್ನು ಭುಂಜಿಸುತ್ತಿರಲಿ, ಒಂದೆಡೆಯಲ್ಲಿ ಸಹಸ್ರಾರು ಜನರು ಪುರಸ್ಕರಿಸುತ್ತಿರಲಿ, ಮತ್ತೊಂದೆಡೆಯಲ್ಲಿ ಲಕ್ಷಾಂತರ ಜನರು ತಿರಸ್ಕರಿಸುತ್ತಿರಲಿ, ಸಂಪತ್ತು ಬಂದರೂ ಬರಲಿ, ಇಲ್ಲವೆ ಹೋದರೂ ಹೋಗಲಿ, ನುರಣ್ಯವು ಇಂದೇ ಬರಲಿ, ಇಲ್ಲವೆ ಮುಂದೆ ಎಂದಾದರೂ ಬರಲಿ ಧರ್ಮ-ನಿಷ್ಠೆಯಿಂದ ಕಿಂಚಿತ್ತಾತ್ರವೂ ಚಲಿಸುವವಿಲ್ಲ ದೇವತೆಗಳು ಕ್ಷೀರ ಸಾಗರವನ್ನು ಮಥನಮಾಡುವ ಕಾಲದಲ್ಲಿ ಭಯಂಕರವಾದ ಹಾಲಾಹಲವು ಹುಟ್ಟಿದಾಗ್ಯೂ ಭಯಪಟ್ಟು ವಿಶ್ರಾಂತರಾಗದೆ ತಮ್ಮಪ್ರಾರ್ಥನವಾದ ಅಮೃತವನ್ನು ಪಡೆದಂತೆ ಧರ್ಮಪ್ರವರ್ತಕರು ತಾವು ಆರಂಭಿಸಿದ ಕಾರ್ಯದಲ್ಲಿ ತಮ್ಮ ಉದ್ದೇಶ್ಯವನ್ನು ಸಾಧಿಸಿದ ಹೊರತು ನಿರಮಿಸುವದಿಲ್ಲ ಎಂಹಿ ವಿಪತ್ತೇ ಬರಲಿ, ನಿಜತತ್ವವನ್ನು ಘೋಷಾಘೋಷಣಾ ಜಗತ್ತಿಗೆ ಬೋಧಿಸಲು ಹಿಂಜರಿಯುವದಿಲ್ಲ ಒಂದು ಸಣ್ಣ ಮತ್ಸ್ಯವು ಹೊರ ಳಾಡಿದ ಮಾತ್ರದಿಂದ ಮಹಾಸಮೋವರವು ಬಗ್ಗದಿರಾಗಲಿ ದಂತೆ ಕುಶ್ಚಿತರ ದೂಷಣ ಭೂಷಣ, ಪುರಸ್ಕಾರ-ತಿರಸ್ಕಾರಗಳಿಂದ ಮಹಾತ್ಮರ ಕಾರ್ಯವು ಕುಂಠಿತವಾಗುವದಿಲ್ಲ ಇಂತಹ ಮಹಾಪುರುಷರೆಂದರೆ ನಮ್ಮ ವೀರಶೈವ ಗುರು ವರ್ಗದಲ್ಲಿ ಅವತರಿಸಿರುವ ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳಿಯವರೆಂದು ಹೇಳದರೆ ಆತಿಶಯೋಕ್ತಿಯೆನಿಸದು ಜಗದಾಚಾರ್ಯರ ಕೃಪೆಯಿಂದ ಈ ಮಹೋದಯರಿಗೆ ಆಯುರಾರೋಗ್ಯಭಾಗ್ಯವು ವೃದ್ಧಿಯಾಗಲೆಂದು ಜಗದೀಶ್ವರನನ್ನು ಸ್ವಾರ್ಥಿಸುತ್ತೇನೆ.

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವಗಳು

— —

ಕುಂದಗೋಳ

ಪ್ರಸಿದ್ಧವರ್ಷದ್ವಿತಿಯಂತೆ ಮಹಾತಿವರಾತ್ರಿಯ ದಿವಸ ಆಚಾರ್ಯರ ಜಯಂತಿಯು ಪಂಚಗೃಹ ಹಿರೇಮಳದಲ್ಲಿ ಶ್ರೀ ।। ಬ್ರ ಗುರಿಸಾದಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಒಳ್ಳೇ ವಿಜೃಂಭಣೆಯಿಂದ ಜರುಗಿತು ಮೊದಲು ಶ್ರೀ ವಿಶ್ವಾರಾಧ್ಯಮೂರ್ತಿಗೂ ಮರದ ಮೂಲಕರ್ಕ್ಕ ಗದ್ದು ಗೆಯೂ ರುದ್ರಾಭಿಷೇಕ, ಬಿಲ್ವಾರ್ಚನಾದಿಗಳು ನೆರವೇರಿದವು ಆಮೇಲೆ ಸಂಗೀತರತ್ನ ಪ್ರಲ್ಹಾದ ಗುರುನಾಥ ಜೋಳಿಸ್ ಇವರ ಮಧುರ ಗಾಯನವು ೨ ತಾಸಿನವರೆಗೆ ಒಳ್ಳೆ ಆನಂದದಿಂದ ನಡೆಯಿತು ಆ ಕಾಲಕ್ಕೆ ಶ್ರೀಮಂತ ಪದ್ಮಪ್ಪನವರು ದೇಸಾಯಿ, ಬಾಳಪ್ಪನವರ ರಾಮಪ್ಪನವರು, ಬಿ ಪ್ಪ ಕುಲಕರ್ಣಿ ನಾಸ್ತಾರರು, ನಡಕಣ್ಣನವರ ಭರಮಪ್ಪನವರು, ಸೊರಟೂರ ವೀರಬದ್ರಪ್ಪನವರು ಮೊದಲಾದವರು ಬಂದಿದ್ದರು ಸಂಗೀತವು ಮುಗಿದ ಮೇಲೆ ಆಚಾರ್ಯರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ವಿನ್ಯಾಸಮಾಡಿ ವಾದ್ಯಬೈಭವದಿಂದ ಉತ್ಸವವು ಮರದಿಂದ ಹೊರಟಿತು ಅಲ್ಲಲ್ಲಿ ಜನರು ಭಕ್ತಿಯಿಂದ ಆಚಾರ್ಯರ ಮೂರ್ತಿಗೆ ಫಲಪುಷ್ಪಗಳನ್ನು ಸಮರ್ಪಿಸುತ್ತ ಆರತ್ಯಾದಿವನ್ನು ಪಡೆಯುತ್ತಿದ್ದರು ಉತ್ಸವವು ಮರಕ್ಕೆ ಕಟ್ಟಿದ ಮೇಲೆ ಮಂಗಲವು ನೆರವೇರಿ ಕಾರ್ಯವು ಸಮಾಪ್ತಿಗೊಂಡಿತು

ಓರ್ವ ಉತ್ಸವಭಾಗಿ

ಹಾರನಹಳ್ಳಿ

— —

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ವೀ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಗ್ಮಹಿಮೆಯಲ್ಲಿ, ಮಹಾಶಿವರಾತ್ರಿ ಪುಣ್ಯದಿನದಲ್ಲಿ ಶ್ರೀ ಜಗದ್ಗುರು ಸಂತಿತಾರಾಧ್ಯ ವಿಶ್ವಾರಾಧ್ಯರ ಭಾವಚಿತ್ರಗಳನ್ನು ಮಹೋತ್ಸವನಾದ ಮಂಟಪದಲ್ಲಿ ಸುರ್ತಿಗೊಳಿಸಿ, ಅಪ್ಪವಿಧಾರ್ಚನೆಗಳಿಂದ ಪೂಜಿಸಿ, ವಂದಿಸಿ, ಸ್ತುತಿಸಿ, ಉಭಯ ಮಹಾಜಾರ್ಯರ ಅಷ್ಟೋತ್ತರಶತನಾಮಾವಲಿಯನ್ನು ಪಠಿಸಿ ಮಂಗಲವನ್ನು ಪಾಡಿ ಪ್ರಸಾದವನ್ನು ವಿನಿಯೋಗಿಸಿದ ಬಳಿಕ "ಗುರುವಿನ ಆವಶ್ಯಕತೆ" ಎಂಬ ವಿಷಯಕವಾಗಿ ಅನೇಕೋದ್ಗಾರಗಳಿಗೊಡನೆ ಭಾಷಣಮಾಡಿ ಶ್ರೋತೃಗಳನ್ನು ಸಂತೋಷಗೊಳಿಸಿದರು

ಓರ್ವ ಗುರುಚರಣಸೇವಕ

ಗರಗ

— —

ಧಾರವಾಡ ಡಿ॥ ಗರಗ ಗ್ರಾಮದಲ್ಲಿರುವ ಮೆ॥ ರಾ॥ ವೀರಪ್ಪಾ ಬಳೆಗಾರ ಇವರು ತಮ್ಮ ಗೃಹದಲ್ಲಿ ಮಹಾಶಿವರಾತ್ರಿಯ ದಿವಸ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ತಮ್ಮ ಕುಟುಂಬ ಸಮೇತರಾಗಿ ಮಹಾ ಸಂಭ್ರಮ ದಿಂದ ನೆರವೇರಿಸಿದರು. ಶ್ರೀ ಚನ್ನಮಲ್ಲಯ್ಯ ಸ್ವಾಮಿಗಳು ಹಿರೇಮಳ ಇವರು ಪೂಜಾವಿಧಾನ ಪೂಜೆಯನ್ನು ಮಾಡಿದರು. ಬಳಿಕ ಮಹಾಮಂಗಳಾರತಿಯಾಗಿ ಮಹಾಶಿವರಾತ್ರಿ ವ್ರತವು ಸಮಾಪ್ತಿಗೊಳ್ಳಿಲ್ಲುಟ್ಟಿತು ಪ್ರತ್ಯಕ್ಷದರ್ಶಿ

ಮುಧೋಳ

— —

ಸಂಸ್ಥಾನ ಮುಧೋಳ ನಗರದಲ್ಲಿರುವ ಸರ್ವಧಿಜಿಸ್ಟ್ರಿಯ ಗುರುಬಸವಯ್ಯನವರು ಗೋವಿಂದಪುರ ಹಿರೇಮಠ, ಮೆ॥ ರಾ॥ ಬಸಪ್ಪನವರು ಕರನಿ ಇವರೇ ಮೊದಲಾದವರು ಮಹಾಶಿವರಾತ್ರಿಯ ದಿವಸ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿ ಶ್ರೀ ಜೈನಾಪುರ ಜಿರಮುರ್ತಿಸ್ವಾಮಿಗಳವರ ನೇತೃತ್ವದಲ್ಲಿ ಶ್ರೀಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀ ಮಹೋತ್ಸವವನ್ನು ಮಹಾ ಸಂಭ್ರಮದಿಂದ ನೆರವೇರಿಸಿದರು ಆ ಸಮಯದಲ್ಲಿ ಜೈನಾಪುರ ಶ್ರೀಗಳವರು ಮತ್ತು ಸರ್ವಧಿಜಿಸ್ಟ್ರಾರವರು ಕಾಶಿ-ಮತ್ತು ಶ್ರೀಶೈಲ ಪೀಠಗಳ ಮೂಲಾಚಾರ್ಯರ ಚರಿತ್ರವನ್ನು ಭಾಷಣ ರೂಪದಿಂದ ಹೇಳಿ ಸರ್ವರನ್ನೂ ಸಂತೋಷಪಡಿಸಿದರು. ಬಳಿಕ ಗುರುಪಾದಯ್ಯ ಮಳೆಪತ್ರಿ ಇವರು ಮನೋಹರವಾಗಿ ಗಾಯನವನ್ನು ಮಾಡಿದರು ಮೆ॥ ರಾ॥ ಮಲಿಕಾಜಪ್ಪ ಉರಿಂದವಾಡ ಇವರು ಭೃಂಗಿ ಸಾಮ್ಯವನ್ನು ತೋರಿಸಿ ಸರ್ವರನ್ನೂ ಸಂತೋಷಪಡಿಸಿದರು

ಪ್ರತ್ಯಕ್ಷದರ್ಶಿ

ಪಾಜಿಪುರ

ಪಾಜಿಪುರದ ಪ್ರಮುಖರಾದ ಪಾಟೀಲ ಮಲೆತಕಂಠಿರೆಡ್ಡಿ ಮತ್ತು ವೆಂಕಟರೆಡ್ಡಿಯವರು ಮಹಾತಿವರಾತ್ರಿ ನಿಮಿತ್ತವಾಗಿ ರೌದಕುಂದಿ ಹಿರೇಮಳದ ವೀ॥ ಪಂಚಾಕ್ಷರ ಶರ್ಮರನ್ನು ಬರಮಾಡಿಕೊಂಡು ೪ ದಿನಸ ತಮ್ಮ ಮನೆಯಲ್ಲಿ ಸರ್ವರೂ ತಮ್ಮ ಇಷ್ಟಲಿಂಗಕ್ಕೆ ಸದರಿಯವರಿಂದ ರುದ್ರಾಭಿಷೇಕ ಮತ್ತು ಅಷ್ಟೋತ್ತರಬಿಲ್ವಾರ್ಚನಾದಿಗಳನ್ನು ಮಾಡಿಸಿದರು ಆಮೇಲೆ ಈಶ್ವರ ದೇವಾಲಯಕ್ಕೆ ಹೋಗಿ ಅಲ್ಲಿ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಾದಿಗಳನ್ನು ನೆರವೇರಿಸಿದರು. ಆಮೇಲೆ ಶ್ರೀ ಜಗದಾಚಾರ್ಯರ ಭಾವಚಿತ್ರಕ್ಕೆ ಪೋಡಷೋಪಚಾರ ಪೂಜೆಯನ್ನು ಮಾಡಿದರು. ಬಳಿಕ ಸಭೆಯು ಕೂಡಿತು. ಸಭೆಗೆ ಗ್ರಾಮದ ಪ್ರಮುಖರು ಮಲೆತಕಂಠಿ ರೆಡ್ಡಿ, ವೆಂಕಟರೆಡ್ಡಿ, ಗೌಡ್ಸರೆಡ್ಡಿ, ಸಿಂಧಗೇರಿ ವೀರಣ್ಣ ಇನೇರೇ ಮೊದಲಾದವರು ಸಿಂದಿದ್ದರು ಆಗ್ಗೆ ಪಂಚಾಕ್ಷರ ಶರ್ಮರು ವಿಶ್ವಾರಾಧ್ಯರ ಮತ್ತಾಪ್ಪಕರ ಬಗ್ಗೆಯೂ ಜಯಂತಿಯ ಬಗ್ಗೆಯೂ ಮನೋಹರವಾದ ಭಾಷಣ ಮಾತಿದರು ಭಜನೆಯು ಸೂರ್ಯೋದಯವಾಗುವವರೆಗೂ ನಡೆಯಿತು. ಈ ಕಾರ್ಯದಲ್ಲಿ ಭಾಗವಹಿಸಿದ ಪ್ರತಿ ಭಕ್ತರಿಗೂ ಜಗದಾಚಾರ್ಯರು ಮಂಗಲವಸ್ತ್ರಿಯಲೆಂದು ಬೇಡುತ್ತೇನೆ ಇವೇ ಸಮಯದಲ್ಲಿ ಪ್ರಭಾಪೋಷಣ ಕ್ಯೋಸ್ಯರ ಮಲೆತಕಂಠರೆಡ್ಡಿಯವರು ೨ ರೂ. ಗಳನ್ನು ಸಮರ್ಪಿಸಿದರು

ಗೌಡಪ್ಪರೆಡ್ಡಿ.

ಕುಲುಮರ ಕಲ್ಲುಹಳ್ಳಿಯಲ್ಲಿ ನೆರವೇರಿದ ಕಾರ್ಯಕ್ರಮಗಳು

— —

ಬಳ್ಳಾರಿ ಡಿ॥ ಹರಪನಹಳ್ಳಿ ತಾ॥ ಕುಲುಮರ ಕಲ್ಲು ಹಳ್ಳಿಯಲ್ಲಿರುವ ಗ್ರಾಮಸುಧಾರಳ ಸಂಘದವರು ತಮ್ಮ ಗ್ರಾಮದೇವತೆಯ ದೇವಾಲಯದ ಮುಂದೆ ಬಹುಕಾಲದಿಂದ ನಡೆಯುತ್ತಿದ್ದ ಪ್ರಾಣಿವಧೆಯನ್ನು ಈ ವರ್ಷ

ಸಂಪೂರ್ಣವಾಗಿ ನಿಲ್ಲಿಸಿದರು ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಬೋಧಿಸಿ ಅಲ್ಲಿಯೂ ಸಹ ಪ್ರಾಣಿವಧೆಯನ್ನು ನಿಲ್ಲುವಂತೆ ಮಾಡಿದರು ಮಹಾ ಶಿವರಾತ್ರಿಯ ದಿನದ ಆ ಗ್ರಾಮದ ಮಹಾಧ್ಯಕ್ಷರಾದ ವೇ॥ ಕೊಟ್ಟ ಪ್ರಭುಶಾಸ್ತ್ರಿಗಳವರಿಂದ ೧೦೧ ಪೂಜೆಯನ್ನು ಮಾಡಿಸಿ ಶಾಸ್ತ್ರಿ ಈಶ್ವರ ದೇವಾಲಯದಲ್ಲಿ ಸರ್ವರೂ ಕೂಡಿ ಮಹಾಶಿವರಾತ್ರಿ ವ್ರತವನ್ನು ಮಹಾ ಭಕ್ತಿಯೊಡನೆ ಆಚರಿಸಿದರು. ಸರ್ವರೊಳಿಯಂತೆ ಅಂದು ಭಕ್ತ ಸೌರ್ಹಂಡೇಯನ ಸಾಟಿಕವು ಅಭಿನಯಿಸಲ್ಪಟ್ಟಿತು ಬುಧವಾರ ಬೆಳಿಗ್ಗೆ ಶ್ರೀಜಗದ್ಗುರು ಪಂಡಿತಾರಾಧ್ಯರು ಮತ್ತು ವಿಶ್ವಾರಾಧ್ಯರ ಭಾವಚಿತ್ರದ ಅದ್ಧೂರಿಯಲ್ಲಿ ಮಹೋತ್ಸವವು ನಾನಾ ವಿಧವಾದ್ಯವೈಭವದೊಡನೆ ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಬಳಿಕ ಜಗನ್ಮಾನ್ಯ ಗಾಂಧೀಜಿಯವರ ಅತ್ಯಕಾಂತಿಗಾಗಿ ೩೦೦೦ ಜನರಿಗೆ ಅನ್ನದಾನವು ಮಾಡಲ್ಪಟ್ಟಿತು. ಈ ಶುಭ ಸಮಯದಲ್ಲಿ ಶ್ರೀಪಾದೋಣಾಕ್ಷೇತ್ರಸ್ಥರ ಗ್ರಾಮದವರಿಂದ ೫ ರೂ. ಗಳು ಸಮರ್ಪಿಸಲ್ಪಟ್ಟವು ಶ್ರೀಜಗದ್ಗುರು ಪಂಚಾಚಾರ್ಯರು ಈ ಗ್ರಾಮದ ಸಮಸ್ತ ದೈವದವರಿಗೆ ಸಕಲ ಸತ್ಕಂಗಲಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಕಾರ್ಯದರ್ಶಿ
ಗ್ರಾಮಸುಧಾರಕ ಸಂಘ ಕುಲುಮರ ಕಲ್ಲಹಳ್ಳಿ

ನೂತನ ಗೃಹಪ್ರವೇಶೋತ್ಸವ

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ಮಿ॥ ರಾ॥ ಬಿಂಬಿಗ್ ಮರ್ಚಂಟ್ ಏ ಮಹಮ್ಮದ್ ಹುಸೇನ್ ಸಾಹೇಬರವರು ಶಿವಮೊಗ್ಗಾ ಟವನ್ ಕೃಷ್ಣರಾಜಪೇಟೆಯಲ್ಲಿ ಕಟ್ಟಿಸಿರುವ ಗಾಂಧೀಜಿ ಬಿಲ್ಡಿಂಗ್ ನಾಮಕರಿಂದ ಶೋಭಿತವಾದ ನೂತನ ಗೃಹಪ್ರವೇಶ ಮಹೋತ್ಸವ ಕಾರ್ಯವನ್ನು ತಾ॥ ೨೪-೨-೧೯೪೮ ಮಂಗಳವಾರ ಪೂರ್ವವಾದಿಂದ ನೆರವೇರಿಸಿದರು ತತ್ಸಂಬಂಧವಾಗಿ ಅದೇ ದಿವಸ ಸಾಯಂಕಾಲ ೫॥ ಸೆಂಟೆಯಿಂದ ಕೀರ್ತನಕೇಸರಿ ವೇ॥ ಗುಬ್ಬಿ ಶಿವರುದ್ರಶಾಸ್ತ್ರಿಗಳವರಿಂದ "ಮಾನವ ಧರ್ಮ" ಎಂಬ ವಿಷಯಕ್ಕೆಮಾಗಿ ಭಾಷಣವೂ ಹಾಗೂ "ಭಗವದ್ಗೀತಾನುಗ್ರಹ" ಎಂಬ ಕೀರ್ತನವೂ ಸರಪಾಗಿ ನಡೆದವು ಸಭಿಕರೆಲ್ಲರೂ ಆನಂದಭರಿತರಾದರು ಈ ಸಮಾರಂಭಕ್ಕೆ ಹಿಂದೂ ಮಹಮ್ಮದೀಯ ಮಹಾಜನರೂ ರಾಜಕೀಯ ಧುರೀಣರೂ ವಿಶೇಷವಾಗಿ ಆಗಮಿಸಿದ್ದರು ಕಾರ್ಯಕರ್ತೃಗಳು ಸರ್ವರನ್ನೂ ಗಂಧ ಪುಷ್ಪ ಫಲ ತಾಂಬೂಲಾದಿಗಳಿಂದ ಸತ್ಕರಿಸಿದರು

ಪ್ರತ್ಯಕ್ಷವರ್ಚಿ

ವಿವಾಹಮಹೋತ್ಸವ

ತಾ॥ ೭-೩-೪೮ನೇ ಭಾನುವಾರ ಶಿವಮೊಗ್ಗಾ ವಲ್ಲಿರುವ ಶ್ರೀಯುತ ಹರಿಹರದ ನಂಜಪ್ಪನವರ ಗೃಹದಲ್ಲಿ ನಂಜಪ್ಪನವರ ದ್ವಿತೀಯ ಪುತ್ರ ಚಿ॥ ಸೌ॥ ಚಂದ್ರಕಲಾ ಎಂಬ ವಧುವಿಗೂ ಬಿಡದಿ ಶ್ರೀಯುತ ರೇವಣ್ಣಶಾಸ್ತ್ರಿಗಳವರ ಪ್ರಥಮ ಪುತ್ರ ಚಿ॥ ಬಿ ಆರ್ ಪರಮಶಿವಯ್ಯ ನೆಂಬ ವರನಿಗೂ ಮತ್ತು ನಂಜಪ್ಪನವರ ತೃತೀಯ ಪುತ್ರ ಚಿ॥ ಚೆಪ್ಪ ಬಸಪ್ಪನೆಂಬ ವರನಿಗೂ ಹಾರ್ಲಹಳ್ಳಿ ಮುರಿಗಪ್ಪನವರ ಪುತ್ರಿ ಚಿ॥ ಸೌ॥ ಹಾಲಮ್ಮನೆಂಬ ವಧುವಿಗೂ ವಿವಾಹಮಹೋತ್ಸವವು ಶಿವಮೊಗ್ಗೆಯಲ್ಲಿ ವಿಜೃಂಭಣೆಯಿಂದ ಪ್ರಥಮಿಯತೆ ಈ ವಿವಾಹಮಹೋತ್ಸವನಕ್ಕೆ ಶ್ರೀಮದ್ವರಾಪುರೀ ಜಗದ್ಗುರುಗಳವರಿಂದ ಆಶೀರ್ವಾದ ಪತ್ರವು ಫಲಮಂತ್ರಾಕ್ಷತೆಗಳೊಡನೆ ದಯ ಪಾಲಿಸಲ್ಪಟ್ಟಿದ್ದಿತು. ಸ್ಥಳಪರಸ್ಥಳದ ಅನೇಕ ಜನರು ಆಗಮಿಸಿದ್ದರು. ತಾ॥ ೧೩-೩-೪೮ನೇ ಸೋಮವಾರ "ಅಚಾರ್ಯಕತ್ವಪ್ರಕಾಶಕ" ರೇವಣ್ಣಶಾಸ್ತ್ರಿಗಳವರು ಬಿಡದಿ ಗ್ರಾಮದಲ್ಲಿರುವ ತಮ್ಮ "ಶ್ರೀ ರೇಣುಕ ಭವನ" ದಲ್ಲಿ ಚಿ॥ ಸೌ॥ ಚಂದ್ರಕಲಾ ಚಿ॥ ಬಿ ಆರ್ ಪರಮಶಿವಯ್ಯ ಈ ನೂತನ ದಂಪತಿಗಳಿಗೆ ಅರಶ್ಯಕತೆಯನ್ನು ವಿಶೇಷ ವೈಭವದಿಂದ ನೆರವೇರಿಸಿದರು. ಈ ಶುಭ ಕಾರ್ಯಕ್ಕೆ ಶಿವಮೊಗ್ಗಾ, ಬೆಂಗಳೂರು, ಮೈಸೂರು ಇತ್ಯಾದಿ ಸ್ಥಳಗಳಿಂದ ಅನೇಕರು ಆಗಮಿಸಿ ಸಭೆಯನ್ನು ಅಲಂಕರಿಸಿದರು. ಈ ಸಂತೋಷ ಸಮಾರಂಭದಲ್ಲಿ ಪಂಚಾಚಾರ್ಯ ಪ್ರಭಾ ಪೋಷಣಕ್ಕೋಸ್ಕರ ಬಿಡದಿ ರೇವಣ್ಣಶಾಸ್ತ್ರಿಗಳಿಂದಲೂ ಪರಿಹರದ ನಂಜಪ್ಪನವರಿಂದಲೂ ೪ ರೂಪಾಯಿಗಳು ಸಮರ್ಪಿಸಲ್ಪಟ್ಟವು

ಸ್ವೀಕಾರ

ಹರಪನಹಳ್ಳಿ ತಾ॥ ಕುಲ-ಮರ ಕಲ್ಲಹಳ್ಳಿ ಗ್ರಾಮ ಸುಧಾರಕ ಸಂಘದವರು ತಮ್ಮ ಗ್ರಾಮದಲ್ಲಿ ಶ್ರೀ ಜಗದ್ಗುರಾಚಾರ್ಯರ ಜಯಂತಿಯನ್ನು ಮಹಾ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ 5 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಬೆಂಗಳೂರು ಡಿ॥ ಬಿಡದಿ ಗ್ರಾಮದಲ್ಲಿರುವ ಶ್ರೀಯುತ ಬಿ ಸಿ ರೇವಣ್ಣಶಾಸ್ತ್ರಿಗಳ ಪ್ರಥಮ ಪುತ್ರ ಚಿ॥ ಬಿ ಆರ್ ಪರಮಶಿವಯ್ಯನಿಗೂ, ಶಿವಮೊಗ್ಗಾದಲ್ಲಿರುವ ಮಿ॥ ರಾ॥ ಹಿಹರದ ನಂಜಪ್ಪನವರ ಪುತ್ರಿ ಚಿ॥ ಸೌ॥ ಚಂದ್ರಕಲಾ ಎಂಬ ವಧುವಿಗೂ, ಮತ್ತು ಸದರಿ ನಂಜಪ್ಪನವರ ತೃತೀಯ ಪುತ್ರ ಚಿ॥ ಚೆನ್ನಬಸವಪ್ಪನಿಗೂ ಮಿ॥ ರಾ॥ ಹಾರನಹಳ್ಳಿ ಮುರಿಗಪ್ಪನವರ ಪುತ್ರಿ ಚಿ॥ ಸೌ॥ ಹಾಲಮ್ಮನಿಗೂ ಶಿವಮೊಗ್ಗಾದಲ್ಲಿರುವ ಮಿ॥ ರಾ॥ ನಂಜಪ್ಪನವರ ಗೃಹದಲ್ಲಿ ವಿವಾಹಮಹೋತ್ಸವವು ನೆರವೇರಿದ ಸಮಯದಲ್ಲಿ ವರೂವರರಿಂದ ಶ್ರೀಪಾದೋಣಾಕ್ಷೇತ್ರಸ್ಥರ ಸಮರ್ಪಿಸಲ್ಪಟ್ಟ 4 ರೂಪಾಯಿಗಳು ಶ್ರೀಮಾನ್ ಬಿ ಸಿ ರೇವಣ್ಣಶಾಸ್ತ್ರಿಗಳ ದ್ವಾರಾ ತಲಪಿಸುತ್ತವೆ

ಮಾಜಿಸ್ತರ ಗ್ರಾಮದಲ್ಲಿರುವ ಪಾಟೀಲ್ ಮಲೆತಕಂರಿ ರೆಡ್ಡಿಯವರ ಗೃಹದಲ್ಲಿ ಮಹಾತಿವರಾತ್ರಿಯ ದಿನದ ಶ್ರೀ ಜಗದ್ಗಾಚಾರ್ಯರ ಜಯಂತಿಯು ನೆರವೇರಿದ ಸಮಯ ದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ವೇ॥ ಪಂಚಾಕ್ಷರಶರ್ಮ ರೆಡ್ಡಿಕುಂದಿ ಹಿರೇಮಠ ಇವರ ದ್ವಾರಾ ತಲಪಿರುತ್ತವೆ

ಧಾರವಾಡ ಡಿ॥ ಗರಗ ಗ್ರಾಮದಲ್ಲಿರುವ ಮಿ॥ ರಾ॥ ಬಳಿಗಾರ ವೀರಪ್ಪನವರು ಮಹಾಶಿವರಾತ್ರಿಯ ದಿವಸ ತಮ್ಮ ಗೃಹದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀಮಹೋತ್ಸವನನ್ನು ಮತಾ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಶಿವಮೊಗ್ಗಾ ಡಿ॥ ಹಾರನಹಳ್ಳಿ ಯಲ್ಲಿರುವ ಬಿಂಬರ್ ಮರ್ಚಿಂಟ್ ಏ ಮಹಮ್ಮದ್ ಹುಸೇನ್ ಸಾಹೇಬರು ಶಿವಮೊಗ್ಗಾ ಟೌನಿನಲ್ಲಿ ತಾವು ಕಟ್ಟಿಸಿರುವ ನೂತನ ಗೃಹಪ್ರವೇಶ ಮಹೋತ್ಸವ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯ ವೇ॥ ಶಿತಕ್ಷಾಪಾಡಿತ ಗುಬ್ಬಿ ಶಿವರುದ್ರಶಾಸ್ತ್ರಿಗಳ ದ್ವಾರಾ ತಲಪಿಸುತ್ತದ

ಬಿಜಾಪುರವಲ್ಲಿರುವ ಮಿ॥ ರಾ॥ ರುದ್ರಪ್ಪ ಹೇರಲಗಿ ಇವರ ಪುತ್ರಿ ಚಿ॥ ಸೌ॥ ಚಂದ್ರಭಾಗಾ ಎಂಬ ಕನ್ಯೆಯನ್ನು ಮಿ॥ ರಾ॥ ಶಿವಬುಳಪ್ಪ ಶಿರಾಂಬರ್ ನಿಶ್ಚಾಣಿ ಇವರ ಬುಧ್ರ ಚಿ॥ ಶಂಕರಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಜೈನಾಪುರ ಶ್ರೀ ಚೆರಮೊಕರ್ತಿ ಸ್ವಾಮಿಗಳವರು ಶ್ರಭಾಪೋಷಣಕ್ಕೋಸ್ಕರ 1 ರೂ ಯನ್ನು ತೆಗೆಯಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾತಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ

ಸೊಂಡೂರು ಸಂಸ್ಥಾನವು ಸ್ವತಂತ್ರವಾಗಿರುವದು.

ಸೊಂಡೂರು ಸಂಸ್ಥಾನವು ಮೈಸೂರು ಅಥವಾ ಮದರಾಸು ಪ್ರಾಂತದಲ್ಲಿ ವಿಲೀನಗಾಲು ಅಲ್ಲಿಯ ಸರ್ಕಾರ ವಾಗಲೀ, ಜವರಾಗಲೀ ಒಪ್ಪುವುದಿಲ್ಲವೆಂದು ಸೊಂಡೂರು ಮಂತ್ರಿಗಳು ಒಂದು ಹೇಳಿಕೆ ಹೊರಡಿಸಿದ್ದಾರೆ

ವರ್ತಮಾನಸಂಗ್ರಹ

ದೇಹದಲ್ಲಿ ಒಂದು ರಕ್ತ ಬಿಂದುವಿರು ವನರೆಗೂ ಹೋರಾಡುವೆವು

ಷೇಕ್ ಅಬ್ದುಲ್ಲಾರವರ ವೀರವಾಣಿ

"ಕಾಶ್ಮೀರದ ೪೦ ಲಕ್ಷ ಪ್ರಜೆಗಳು ತಮ್ಮ ದೇಹದಲ್ಲಿ ಒಂದು ರಕ್ತ ಬಿಂದು ಉಳಿದಿರುವವರೆಗೂ ಹೋರಾಡು ವರು. ಪಾಕೀಸ್ತಾನವನ್ನು ಸೇರುವುದಕ್ಕಿಂತಲೂ ಸಾವೆ ನ್ನಪ್ಪುವುದೇ ಕಾಶ್ಮೀರದ ಪ್ರಜೆಗಳಿಗೆ ಗೌರವಯುತ ವಾದ ಮಾರ್ಗ ನಮ್ಮ ಅಳ್ಳ ತುಂಡುಭೂಮಿಯ ಪಾಕೀಸ್ತಾ ನದ ಬೀದಿ ಬೀದಿಗಳಲ್ಲಿ ಮಾರುತ್ತಿದ್ದಾರೆ ಅಂತಹವ ರೊಡನೆ ಸ್ನೇಹ ಬೆಳೆಸುವುದು ಹೇಗೆ ಸಾಧ್ಯ?" ಎಂದು ಷೇಕ್ ಅಬ್ದುಲ್ಲಾರವರು ಜಮ್ಮುವಿನ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು

ನಿಜಾಂ ಪೋಲೀಸಿನವರೊಂದಿಗೆ ಘರ್ಷಣೆ

ಹಾಳೆರೆ ಎಂಬಲ್ಲಿ ನಿಜಾಮರ ಪೋಲೀಸರಿಗೂ ಬೊಂಬಾಯಿ ಪ್ರಾಂತ್ಯದ ಪೋಲೀಸರಿಗೂ ಘರ್ಷಣೆ ಯಾಗಿ, ಬೊಂಬಾಯಿ ಪ್ರಾಂತ್ಯದ ಪೋಲೀಸರಲ್ಲಿ ಇಬ್ಬರು ಮಡಿದರು ಎಂಬುದಾಗಿ ಶಾಸನ ಸಭೆಯಲ್ಲಿ ಸರ್ಕಾರದವರು ತಿಳಿಸಿದರು

ಹೈದರಾಬಾದಿನ ಬಗ್ಗೆ ಶ್ರೀಗಾಡ್ಗಿಳ್ಳರ ಅಭಿಪ್ರಾಯ

"ಹೈದರಾಬಾದಿನ ಒಳ ಆಡಳಿತ ಪ್ರಶ್ನೆಯನ್ನು ಮತ್ತು ಅದು ಯಾನ ದೊಮಿನಿಯನ್ಸಿನಲ್ಲಿ ಸೇರಲೇಕೇಕೆಂಬು ದನ್ನು ಆ ಸಂಸ್ಥಾನದ ಪ್ರಜೆಗಳೇ ನಿರ್ಧರಿಸಲು ಬಿಡುವು ದಾದರೆ, ಹೈದರಾಬಾದಿನ ಮತ್ತು ಭಾರತದ ಸಂಬಂಧವು ಕಟ್ಟಕಡೆಯದಾಗಿ ಬಗೆಹರಿಯುವುದು."—ಎಂಬುದಾಗಿ ಭಾರತ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗಳಿಗೆ ಶ್ರೀಗಾಡ್ಗಿ ಳ ರವರು ಉತ್ತರ ಕೊಡುತ್ತಾ ತಿಳಿಯಪಡಿಸಿದರು. ಸರದಾರ್ ಪಟೇಲರು ಆನಾರೋಗ್ಯದಿಂದ ಸಭೆಗೆ ಬಂದಿರ ಲಿಲ್ಲ ಆದರ ಪರವಾಗಿ ಶ್ರೀಗಾಡ್ಗಿಳ್ಳರು ಉತ್ತರವಿತ್ತರು

ಕಾಂತಿ, ಸೌಹಾರ್ದದ ಮಾರ್ಗ ಹಿಡಿಯಲಿ

"ಈಗಲಾದರೂ ಕೋಮುವಾದ ಹುಚ್ಚು ವರ್ತನೆಗೆ ಬದಲು ವಿವೇಕ ಮತ್ತು ರಾಜಕೀಯ ಸ್ಥೈರ್ಯವನ್ನೂ, ದ್ವೇಷ ಮತ್ತು ಅನ್ಯವನ್ನೆಗೆ ಬದಲು ಶಾಂತಿ ಮತ್ತು ಸೌಹಾರ್ದಭಾವನೆಯೂ ಮೂಡುವುದೆಂದು ನಾವು ನಂಬಿದ್ದೇನೆ. ಇದರಲ್ಲಿ ಯಾವುಗನ್ನು ಆರಿಸಿಕೊಳ್ಳಬೇ ಕೆಂಬುದು ನಿಜಾಮರಿಗೆ ಸೇರಿದ್ದು ಅವರು ವಿವೇಕಯುತ ನಾಮದನ್ನೇ ಆರಿಸುವೆರೆಂದು ನಾವು ನಂಬೋಣ" ಎಂದರು.

ಈಗಿದೆ ನವೆಂಬರಿನಲ್ಲಿ ಸರ್ದಾರ್ ವಲ್ಲಭಾಯಿ ಪಟೇಲರು ಕೆಟ್ಟ ಹೇಳಿಕೆಯ ಕಡೆಗೆ ಗಮನಸೆಳೆದ ಯುತ್ತ, "ಹೈದರಾಬಾದಿಗೂ ಭಾರತ ಯೂನಿಯನ್ನಿಗೂ ನಿಕಟ ಸಂಬಂಧವಿರುವುದರಿಂದ ವಿದೇಶ ವ್ಯವಹಾರ, ರಕ್ಷಣೆ ಮತ್ತು ಮಾರ್ಗ ಸೌಕರ್ಯ ಈ ವಿಷಾರಗಳಲ್ಲಿ ವಿಶೇಷ ಭಿನಿ ವರ್ತಿಸುವುದರಿಂದ ಅನೆರಡಕ್ಕೂ ಚಿರವಾದ ಲಾಭ ಉಂಟಾಗುವುದೆಂಬ ಖಚಿತವಾದ ಅಭಿಪ್ರಾಯವನ್ನು ಭಾರತ ಸರ್ಕಾರ ಮೊದಲಿನಿಂದಲೂ ವ್ಯಕ್ತಪಡಿಸುತ್ತಿದೆ. ಈ ವಿಷಾರದಲ್ಲಿ ಭಾರತ ಸರ್ಕಾರದ ವರ್ತನೆಯು ಸ್ವಲ್ಪವೂ ಮಾರ್ಪಟ್ಟಿಲ್ಲ ಅದರೂ, ಹೈದರಾಬಾದಿಗೆ ಸಮುದ್ರ ಹಲವು ಕಾರಣಗಳಿಂದ ಬಹಳ ತೊಡಕಿನದಾಗಿ ವರಿಣಮಿಸಿದೆ ಅದ್ದರಿಂದ ಹಿಂದೆ ಸಮ್ಮತಿದ ಪ್ರತಿಫಲಿ ಗಳಿಗೂ ಹೈದರಾಬಾದಿಗೂ ಇದ್ದಂತಹ ಸಂಬಂಧವನ್ನೇ (ಸದನು ಪ್ರಭುತ್ವಾಧಿಕಾರವೊಂದು ಹೊರತು) ಮುಂದು ವರಿಸಿಕೊಂಡು ಬರುವುದರಿಂದ 'ಸ್ಟಾಂಡ್‌ಸ್ಟಿಲ್' ಒಪ್ಪಂದವನ್ನು ಮಾತುಕತೆಗಳಾಯಿತು. ಈ ಒಪ್ಪಂದವು ಫಲಕಾರಿಯಾಗುವಂತೆ ಮಾಡಲು ಭಾರತ ಸರ್ಕಾರವು ಸರ್ವ ಪ್ರಯತ್ನ ವನ್ನು ಮಾಡುತ್ತಿರಲು, ಹೈದರಾಬಾದು ಆದಕ್ಕೆ ವಿರುದ್ಧವಾಗಿ ವರ್ತಿಸಿದುದು ಅಕಾಳಂಗನೆನ್ನಲು ಎಟು

ಮಾಡಿತು ಸಂಧಾನ ನಡೆಯುತಿರುವಾಗಲೇ ಒಪ್ಪಂದವ ಅತಿಕ್ರಮಣ ನಡೆದು ಹೋಯಿತು ಎಂದರು

ಈ ತಿಂಗಳ ಅಂತ್ಯದಲ್ಲಿ ಹೈದರಾಬಾದ್‌ನಲ್ಲಿ ಭಾರತಕ್ಕೂ ಸಂಧಾನ ಮುಂದುವರಿದಾಗ ಈ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಲು ಭಾರತ ಸರ್ಕಾರವು ಸರ್ವ ಪ್ರಯತ್ನವನ್ನು ಮಾಡುವುದ ಎಂದು ಬರವಸೆ ಇತ್ತರು

ಗಡಿ ಘಟನೆಗಳ ವಿಚಾರವಿತ್ತಿ ಸ್ವಾಂಡ್‌ಸ್ಟಿಲ್ ಒಪ್ಪಂದದ ಪ್ರಕಾರ ಈ ಗಡಿ ಘಟನೆಗಳು ನಿಲ್ಲುವುವೆಂದು ಹೇಂಬಲಾಗಿತ್ತು ಆದರೆ, ಘಟನೆಗಳು ಬಲಬರುತ್ತ ಹೆಚ್ಚಿದವು ಇತ್ತೀಚೆಗಂತೂ ಒಳಳ ಉಗ್ರವಾಗಿವೆ ಈ ಘಟನೆಗಳ ಒಗ್ಗೆ ಭಾರತ ಸರ್ಕಾರವು ತುಂಬಾ ಕಳವಳಗೊಂಡಿದೆ ಯಾಕೆಂದರೆ, ಅವುಗಳಂದ ದ್ವಪಾಣ, ಕೇಂದ್ರ ಮತ್ತು ಪಶ್ಚಿಮ ಭಾಗಕದ ಕಾಂಂಗ ಚ್ಯುತಿ ಬಂದಿದ ಕಷ್ಟು ನಿಟ್ಟಾಗಿ ವರ್ತಿಸಿ ಪರಿಸ್ಥಿತಿಯನ್ನು ಹತೋಟಿಗೆ ತರುವುದಾಗಿ ಹೈದರಾಬಾದು ತಿಳಿಸುವಂತೆ— ಎಂದು ಭಾರತ ಸರಕಾರ ಎದುರು ನೋಡುತ್ತಿದೆ ಆದೆಶತ ಸ್ಥೇತ್ರದಲ್ಲಿ ಸುಧಾರಣೆ ಆಗಬೇಕು ಇತ್ತೀಹಾದ್ ಉಲ್ ಮುಸ್ಲಿಮೀನ್ ಮತ್ತು ರಜಾಕರ್ಸ್ ಸ್ವಯಂಸೇವಕ ಸಂಸ್ಥೆಗಳ ಹಾನಿಕರವಾದ ಚಟುವಟಿಕೆಗಳನ್ನು ತಡೆಯಬೇಕು ಸಂಸ್ಥಾನದಲ್ಲಿ ನ್ಯಾಯ ಮತ್ತು ಶಿಸ್ತಿಗೆ ಲೋಪ ತಂದಿರುವ ವ್ಯಕ್ತಿಗಳನ್ನು ವಜಾಟ್ಟಿಪಾಕಿ ಕಾಂತಿಯನ್ನು ನೆಲಗೊಳಿಸಬೇಕು ಚರವಾದ ಒಪ್ಪಂದದ ಆಧಾರದ ಮೇಲೆ ನಾತ್ರಸೇನೆ ದೀರ್ಘಕಾಲ ಉಳಯವಂತಹ ಶಾಶ್ವತವನ್ನು ನೆಲೆಗೊಳಿಸಲು ಸಾಧ್ಯ ಎಂದರು

ಪ್ರಜೆಗಳ ನಂಬಿಕೆಗೆ ಪಾತ್ರವಾದ ಸರ್ಕಾರ ಹೈದರಾಬಾದಿನಲ್ಲಿ ಸ್ಥಾಪಿತವಾಗಬೇಕ ದುರ್ಬಲವರ್ಗಗಳನ್ನು ವಂಚಿಸಿರುವ ಭೂಕಂದ ಒಳ್ಳೆಯ ನಿರೆಯವರಂತೆ ಹೆದರಾಬಾದಿನ ಮತ್ತು ಭಾರತದ ಪ್ರಜೆಗಳು ವರ್ತಿಸುವಂತೆ ಉದ. ಅವರು ಒಯಸಿದರು

ಭಾರತದಲ್ಲಿ ಜಲಸೌಕರ್ಯಗಳ ಅಭಿವೃದ್ಧಿ

ಭಾರತದ ಜಲ ಸೌಕರ್ಯಗಳ ಅಭಿವೃದ್ಧಿಯ ವಿಚಾರವಾಗಿ ಕೇಂದ್ರ ಸರಕಾರವು ನಾನಾ ಯೋಜನೆಗಳನ್ನು ಪರಿಶೀಲಿಸುತ್ತಿದೆ

ಈ ಸಂಬಂಧವಾಗಿ ಭಾರತ ಸರಕಾರದ ಸಂಚಾರ ಶಾಖಾ ಸಚವರು ಡೊಮಿನಿಯರ್ ಪಾರ್ಲಿಮೆಂಟಿನಲ್ಲಿ ಆಸ್ಸಾಂ ಒರಿಸ್ಸಾ ಕೊಡಗು ಬೊಂಬಾಯಿ ಸ್ಟಾಂತಗಳು ಅಲ್ಲದೆ ಒರೋಡ ಮತ್ತು ಬಸ್ಟಾರ್ ಸಂಸ್ಥಾನಗಳಲ್ಲಿ ಜಲಸೌಕರ್ಯಗಳ ಅಭಿವೃದ್ಧಿಗಾಗಿ ಪರಿಶೀಲನೆಯಾಗಿದೆ ಸರಕಾರದವರು ಈ ಸಂಬಂಧವಾಗಿ ಹಲವು ಯೋಜನೆಗಳನ್ನು ಪರಿಶೀಲಿಸುತ್ತಿರುವರು ಎಂದು ನುಡಿದರು

ಈ ಯೋಜನೆಗಳಲ್ಲಿ ತುಂಗಭದ್ರಾ ಯೋಜನೆಯ ಒಗ್ಗೂ ಮೈಸೂರು, ಮದರಾಸು ಮತ್ತು ಹೈದರಾಬಾದ್ ಸರಕಾರಗಳಿಗೆ ಕೆಲ ವರ್ಷಗಳಿಂದ ನಡೆಯುತ್ತಿದ್ದ ವ್ಯವಹಾರವು ಕೇಂದ್ರ ಸರಕಾರದ ನೀರಾವರಿ ಮತ್ತು ಜಲ ಸಂಚಾರ ನಿರ್ದೇಗದ ಪ್ರಯತ್ನದಿಂದ ಈಗ ಪರಿಹಾರವಾಗಿದ ಇದರಂತೆಯೇ ರಾಮಪಾದಸಾಗರ ಯೋಜನೆ ಒಗ್ಗೆ ಮದರಾಸು ಮತ್ತು ಹೈದರಾಬಾದ್ ಸರಕಾರಗಳಿಗೂ ಲಬ್ಧಪ್ರತಿಷ್ಠ ತೀರ್ಥದ ಒಗ್ಗೆ ಮೈಸೂರು ಮತ್ತು ಹೊಡಗು ಸರಕಾರಗಳಿಗೂ, ಸಬರಮತಿ ಯೋಜನೆಯ ಒಗ್ಗೆ ಬೊಂಬಾಯಿ ಮತ್ತು ಬರೋಡಾ ಸರಕಾರಗಳಿಗೂ, ಚೆಂಬಲ್ ನದಿ ಅಭಿವೃದ್ಧಿಯ ವಿಚಾರವಾಗಿ ರಾಜಪುಟಾಣ ಸಂಸ್ಥಾನಗಳಿಗೂ ನಡೆಯುತ್ತಿರುವ ವ್ಯವಹಾರಗಳನ್ನು ಈ ನಿರ್ಣಿಗ ಪರಿಶೀಲನ ಸ್ಥಿತಿಯ ಇನ್ನೆಲ್ಲವೂ ಇತ್ಯರ್ಥವಾಗುತ್ತಲಿವೆ ಎಂಬಾಗಿ ಸಂಚಾರ ಒಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು

ಶ್ರೀ ಕಾಶೀ ಜಗದ್ಗುರುಗಳ ವಿಯೋಗದ ಬಗ್ಗೆ ಬಾಷ್ಪಾರ್ಚನೆ

ಶ್ರೀಕಾಶೀಪೀಠಪತಿ ವಿ ।
ಶೇಷವಿಧಿ ಸುರಗುರುಸಮಮು ಕಾಸ್ತಾರ್ಥದೊಳು ॥
ಲೋಷದಿ ಮಾನ್ಯತೆ ಪಡೆದಿಹ ।
ನೀಕರೊಳ್ ವೀರಭದ್ರಗುರುವಿಗೆ ಸಮರಾರ್ ॥೧॥

ಗತಿಸಿದ ಜಗದ್ಗುರ್ಯಾರ ।
ನುತಿಯನು ಪರಿಗೆಯ್ಯಲೆಸಗೆ ಸಾಧ್ಯಮೆ ಎಂದುಂ ॥
ಕ್ಷಿತಿಯೊಳ್ ಮಹರಕ್ಷಕರೆಂ ।
ದತಿಕಯದಿಂ ಪೊಗಳಿಪರೆ ಬಲ್ಲ ಕವೀಂದ್ರರ್ ॥೨॥

ಮರೆಯದ ಜಗದ್ಗುರುಗಳಂ ।
ನುರೆದಿರುತಿರ್ಪರದೆಂತೊ ತಿಳಯದು ಜನಗಳ್ ॥
ಪರಮಾತ್ಮನೇಕೆ ತನ್ನಯ ।
ಪುರಿಗಳ ಕರೆದೊಯ್ವನೆಂಬವಾರಿಗೆ ವೇದ್ಯಂ ? ॥೩॥

ಪರಶಿವನ ಚಿಂತೆಯೊಳಗಿರು ।
ತಿರುವವರಂ ಧರಣಿಯಲ್ಲಿ ಬಿಡಲಾಗದು ಎಂ ॥
ದರಿದು ಶಂಕರನೆ ತಾ ಮುದ ।
ದೆರೆಸುತೆ ಸನ್ನಿಧಿಗೆ ಬರಿಸಿಕೊಂಡನೊ ತಿಳಿದು ॥೪॥

ಪರವಾದಿಗಳಂ ಜಯಿಸುವ ।
ಪರಶಿವಮತನ್ಯಸ್ಥಿಗೊಳಿಪುವಾಚಾರ್ಯರನಂ ॥
ನೆರೆ ಕಾಶೀಪೀಠಕೊಪ್ಪುವ ।
ಗುರುವರನಂ ಶಿವನು ಮರಳಿ ಕಳಿಸಲಿ ಬೇಗ ॥೫॥

ಗುರುಸುಣಿಗೆ ಹೊಸಮರದ ಕವಿ ।
ಶರಣನು ದು ಖಾಬ್ಧಿಯಲ್ಲಿ ಮುಳುಗಿಳಲತ್ತಂ ॥
ಬರೆದಿಹನೀ ಪದ್ಯಂಗಳ ।
ವರಕಾಶೀಪೀಠಕಿತ್ತ ಭಕ್ತ್ಯಾಶಯದಿಂ ॥೬॥

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)		೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)		೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)		೧ ಆಣೆ
ಸಂಪ್ರಶ್ನ ಶಿವಪೂಜಾವಿಧಿ (೬ನೆಯ ಆವೃತ್ತಿ)		೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)		೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)		೨ ಆಣೆ
ಬಸವಾದಿಶಿಜತತ್ವದರ್ಪಣ (೪ನೆಯ ಆವೃತ್ತಿ)		೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)		೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)		೨ ಆಣೆ
ಶ್ರೀರುದ್ರಮುಸಿಶಿವಾಚಾರ್ಯಶತಕ		೩ ಆಣೆ
ಶಿವಶಕ್ತಿವಿಲಾಸ	...	೩ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ		೨ ಆಣೆ
ಬಲ್ವಮಾಹಾತ್ಮ್ಯ (೩ನೆಯ ಆವೃತ್ತಿ)		೨ ಆಣೆ
ಪಂಚಾಚಾರ್ಯಪ್ರಕಾಶ	....	೩ ಆಣೆ
ಪಂಚಾಚಾರ ಪ್ರಕಾಶಿಕಾ	....	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	..	೪ ಆಣೆ
ಲಿಂಗಧಾರಣವಿಧಿ	..	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	...	೪ ಆಣೆ
ಶ್ರೀಜನಿಪಂಡಿತಾರಾಧ್ಯರ ಕಾಲನಿರ್ಣಯ	...	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	..	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	....	೪ ಆಣೆ
ವೈದಿಕವಾಙ್ಮಯರಹಸ್ಯ	...	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	....	೬ ಆಣೆ
ವೀರಶೈವಾಂಕ್ಷಿಪ್ತ-ಶ್ರಾದ್ಧವಿಧಿ	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಸೂತ್ರ- ಭಕ್ತಸ್ಥಲ)	....	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	....	೮ ಆಣೆ
ವೀರಶೈವಮತಾತ್ಪರ್ಯ		೮ ಆಣೆ
ಬಸವಪ್ರಾಂತದಿವಾಕರ (೨ನೆಯ ಆವೃತ್ತಿ)	...	೮ ಆಣೆ
ಆಗಮಪರಿಜ್ಞಾನ		೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲಗು)		೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)		೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ		೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ		೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ		೧ ರೂ
ವೈದಿಕಶಿವಪೂಜಾವಿಧಿ (ಗೈದಿಸ್ವರಯ ಕೃಷ್ಣಾಜಿ ಯ ಆವೃತ್ತಿ)		೧। ರೂ
ಶ್ರೀಕರಭಾಷ್ಯಂ (ಆಪಸ್ತಂಬ ಶ್ರೌ)		೧॥ ರೂ
ವೀರಶೈವರತ್ನ (೨ನೆಯ ಆವೃತ್ತಿ, ೫೦ ಪದ್ಯಾತ್ಮಕ ಪ್ರೋತ್ಸಾಹಕರುವುದು)		೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪ್ಪದ)		೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ)	...	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)		೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩ಳಳ ಪುಟ)		೮ ರೂ
A brief life-sketch of Pandit Sri Kashinatha Shastriji (*English*)		**4 As**
The Philosophical Aspect of Viraasaivism (*English*)		**8 As**
Speeches by Pandit Shri Kashinatha Shastriji (*English*)		**12 As**
ಶಿವಾಚಾರಚಂದ್ರಿಕಾ (ಉಕ್ತಕ)		೩ ಕ
ವೀರಶೈವರತ್ನ (ಅರಬಿ)		೧ ಕ
ಸಹಾಚಾರ್ಯಚಂದ್ರಿಕೆ (ವೀರಶೈವಭಾಷ-ಉಕ್ತಕ)		೧ ಕ
ಶಿವಶಿಷ್ಟಾಚಾರಕಾರಿಕಾ (ಉಕ್ತಕ)	...	೨ ಆಣೆ

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by *Pandit Kashinatha Shastri* at Shri Panchacharya Electric Press, Sayaji Rao Road, Mysore

REGISTERED No M. 2266 « ಶ್ರೀಜಗದ್ಗುರು ಪಂಚಾಚಾರ್ಯಾ: ಪ್ರಸೀದಂತು » REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಸನಕಂಠಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರಪಥಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ | ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀತೋಮಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಮಾರ್ಚಿ ೧೯೪೪ [ಸಂಚಿಕೆ ೪೪

॥ ಶ್ರೀಜಗದ್ಗುರು ವಾರಣಾಚಾರ್ಯಾಯ ನಮಃ ।

ಸಂಸಾರದೆ ಬಂದುಗಳು

ಲೇ॥ ಮಲ್ಲಿಕಾರ್ಜುನಾರಾಧ್ಯ ರಾಣೆವೆನ್ನ ಪುಲಿಮಠ
ಸು ಜೇರುದು

ಸಂಸಾರವೆಂದರೆ–ಹುಟ್ಟುವದು ದೆ ಪನಪ ಪಡುವದು ಪುನ ಹುಟ್ಟುವದೆ ದೈವನಿಯಮಿತಾದ ಈ ಕಟ್ಟಳೆಯು ಒಂದು ಕ್ರಮವನ್ನು ಅನುರಿಯಿ ಇರುವದು ನಮ್ಮ ನಮ್ಮ ಕರ್ಮಾನುಸಾರವಾಗಿ ನಾವು ಪ್ರಪಂಚದಲ್ಲಿ ಜನ್ಮನೆತ್ತಿ, ಆ ಜನ್ಮಗೆಳ್ಳಲ್ಲಿ ಸಿಕ್ಕುವ ಬಗೆಗಳನ್ನು ನೆಭವಿಸಿ ಜನ್ಮಸಾಧನೆಯನ್ನೊ ಲಭಿಸಿ ಆ ಸಂಸಾರಗತಿಗಳನ್ನು ಪರಿಶೀಲಿಸುತ್ತೇನೆ ಅನಂತರ ಆ ನಮ್ಮ ಜನ್ಮ ಅಭೋಗತಿಗಳನ್ನು ಗುಣವಾಗಿ ಯಥೋಚಿತವಾದ ಪುನರ್ಜನ್ಮವನ್ನು ಪಡೆಯುತ್ತೇವೆ ಹೀಗೆ ಸಂಸಾರವು ಚಕ್ರಾಕಾರವಾಗಿ ಸುತ್ತುತ್ತಿದೆ ನಾವೆಲ್ಲರೂ ಆ ಚಕ್ರದ ಮಧ್ಯದಲ್ಲಿ ಕತ್ತರಿಯಲ್ಲಿ ಸಿಕ್ಕ ಇಲಿಯಂತೆ ನರಳುತ್ತಿದ್ದೇವೆ ಸಂಪತ್ತು, ಪುತ್ರ, ಮಿತ್ರ, ಕಳತ್ರರೂ ನಮ್ಮ ನಮ್ಮ ಪ್ರಾಪ್ತಿಯಂತೆಯೇ (ಪೂರ್ವಾರ್ಜಿತವಾದ ಕರ್ಮಫಲದಂತೆ) ನಮಗೆ ದೊರೆಯುತ್ತಾರೆ ಆ ಜನ್ಮದ ಅವಧಿಯು ಕಳೆದೊಡನೆಯೇ ಅವರು ನಮ್ಮನ್ನು ಬಿಡುತ್ತಾರೆ

ಹರಿಯುವ ಪ್ರವಾಹಕ್ಕೆ ಹಳ್ಳಗಳಂತೆ ತಂದೆ ತಾಯಿ ಹೆಂಡತಿ-ಮಕ್ಕಳು ಇತ್ಯಾದಿ ಎಷ್ಟೋ ಬಂಧುಗಳು ಇದುವರೆಗೆ ನಮಗೆ ಸಂಭವಿಸಿರುವರು, ಮುಂದೆಯೂ ಸಂಭವಿಸುವರು. ಕಾಡುಮರಕ್ಕೆ ಎಲೆಗಳಂತೆ ಸಂಸಾರಿ ಬಂಧುಗಳು ಎಲ್ಲೆಲ್ಲಿಯೂ ಸಿದ್ಧರಾಗಿರುವರು ಮರಬಳ್ಳಿಗಳಿಗೆ ಪತ್ರಪುಷ್ಪಫಲಗಳಂತೆ ಅವರಿಗೂ ನಮ್ಮಂತಹ ಒಂಥಗುಳು ಎಣಿಕೆಯಿಲ್ಲದೆ ಆಗಿರುವರು ಮರಗಳಿಗೆ ಪ್ರತಿ ವರ್ಷದಲ್ಲಿಯೂ ಫಲಗಳಾಗುವಂತೆ ಪ್ರಾಣಿಗಳಿಗೆ ಪ್ರತಿ ಜನ್ಮದಲ್ಲಿಯೂ ಹೊಸ ಹೊಸದಾಗಿ ಬಂಧುಗಳು ಸಂಭವಿಸುವರು ಸಂಸಾರಮಾರ್ಗದಲ್ಲಿ ಜನ್ಮಗಳಿಗೂ ಸಮುದ್ರದಲ್ಲಿ ತೆರೆಗಳಿಗೂ ಎಂದಿಗೂ ಎಣಿಕೆಯಾಗಲಾರದು ಇಷ್ಟು ಪರಮಾರ್ಥವಾಗಿ ವಿಚಾರಿಸಲು ಈ ಪ್ರಪಂಚವು ವಿಸಿಲ್ಬುದುರೆಯಂತೆ ಭ್ರಾಂತಿಸಿದ್ಧವೆನಿಸುವ ದಾದ್ದರಿಂದ ಮಿತ್ರರೂ ಬಂಧುಗಳೂ ಯಾರೂ ಇಲ್ಲವೆಂತಲೂ ತಿಳಿಯತಕ್ಕದ್ದು ಮತ್ತು ಮರುಭೂಮಿಯಲ್ಲಿ ಜಲಕಣಗಳಂತೆ ಇವರು ಭ್ರಾಂತಿಮಿಂದ ಧನ್ಯರಾಗುವರಾದ್ದರಿಂದ ಇವರಿಗಾಗಿ ದುಃಖಪಡುವುದಕ್ಕೆ ಕಾರಣವಿಲ್ಲ ಪುತ್ರಮಿತ್ರಬಂಧುಸ್ತ್ರೀಧಾತ್ಯಕುಟುಂಬ ಮೋಹದಿಂದುಂಟಾದ ಈ ಪ್ರಪಂಚದಲ್ಲಿ ತಂದೆತಾಯಿಗಳು ಬಂಧುಗಳು ಯಾರೆಂದು ತಿಳಿಯಬೇಕು ಬಗೆಬಗೆಯಾದ ಸಂಸಾರಿಗಳೂ ಪರಿಪರಿಯಾದ ವ್ಯಾಪಾರಗಳೂ ಸಹ ಅಷ್ಟಾನೆದ ವಿಲಾಸವಲ್ಲದೆ ಮತ್ತೊಂದಲ್ಲ ಹೀಗಿರುವಲ್ಲಿ ಯಾವ ಜನ್ಮದ ಬಂಧುಗಳನ್ನು ನೆನೆಸಿಕೊಂಡು ಅಳಬೇಕು? ಮುಖ್ಯವಾಗಿ ಬಂಧ-ಬಾಂಧವರೆಲ್ಲರೂ ಸಂತೆಯ ಜನರಿಂತೆ ತಿಳಿಯಕೊಂಡು ನುಡಿದುಹೋದವರಿಗಾಗಿ ಕಣ್ಣೀರು ಸುರಿಸುವುದರಲ್ಲಿ ಒಂದು ಕುರುಡು ಕವಡೆಯಷ್ಟೂ ಸಲುವಿಲ್ಲವು ಮತ್ತು ನಿತ್ಯಜನನ ನಿತ್ಯಮರಣ ಸಿದ್ಧವಾದ ಈ ಸಂಸಾರಸಂಬ್ರಮದಲ್ಲಿ ಹರ್ಷೋಕಗಳೆಂದರೆ ಉಪಯೋಗವೇನು?

ವಾಚಕರೆ ಈ ಭವದ ಸಕಲ ಪ್ರಪಂಚವೂ ಪಂಚಭೂತಗಳಿಂದ ಪಂಚೀಕರಣ ಸಿದ್ಧಾಂತಕ್ರಮದಿಂದ ಸಿದ್ಧವಾಗಿರುವದು ಇದರಲ್ಲಿ ಪಂಚಭೂತಗಳಿಂದ ಪಂಚೀಕರಣ ಸಿದ್ಧಾಂತಕ್ರಮದಿಂದ ಸಿದ್ಧವಾಗಿರುವ ಜೀವಜಂತುಗಳಲ್ಲಿ ಮನುಷ್ಯ ಜನ್ಮವು ಬಹಳ ಶ್ರೇಷ್ಠವಾದದ್ದು ಈ ಜನ್ಮದಲ್ಲಿ ಸಾಧಿಸಲಾಗದ ಕಾರ್ಯವು ಯಾವುದೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು ಇಂಥ ಶ್ರೇಷ್ಠವಾದ ಮನುಷ್ಯ ಜನ್ಮವನ್ನು ಪಡೆ

ಪಂಚಾಚಾರ್ಯವ್ರಭಾ

೧೯೪೪ ನೆಯ ಮಾರ್ಚಿ ತಾ। ೨೯ ನೆಯ ಸೋಮವಾರ

ಚಿದಚಿದ್ವಿಶಿಷ್ಟಾದ್ವೈತ ಶಕ್ತಿವಿಶಿಷ್ಟಾದ್ವೈತಗಳಿಗಿರುವ ತಾರತಮ್ಯ

ಚಿದಚಿದ್ವಿಶಿಷ್ಟಾದ್ವೈತ ಮತ್ತು ಶಕ್ತಿವಿಶಿಷ್ಟಾದ್ವೈತ ಈ ಎರಡು ಸಿದ್ಧಾಂತಗಳಿಗೆ ಯಾವ ಯಾವ ಅಂಶಗಳಲ್ಲಿ ಸಾರೂಪ್ಯವುಂಟೆಂಬುದನ್ನೂ, ಯಾವ ಯಾವ ಅಂಶಗಳಲ್ಲಿ ವೈರೂಪ್ಯವುಂಟೆಂಬುದನ್ನೂ ಸದ್ಯಃ ಸಂಕ್ಷೇಪವಾಗಿ ವಿಮರ್ಶಿಸುವೆವು

'ವಿಶಿಷ್ಟಾದ್ವೈತ' ಎಂಬ ಹೆಸರು ಈ ಎರಡು ಮತಗಳಿಗೂ ವಿಶೇಷವಾಗಿ ನ್ಯಾಯಾಧಾರದಲ್ಲಿ ಬಂದಿರುವುದರಿಂದ ಈ ನಾಮಸಾಮ್ಯವೇ ಅನೇಕವಿಷಯಗಳಲ್ಲಿ ಈ ಮತಗಳಿಗೆ ಪರಸ್ಪರ ಹೋಲಿಕೆಯುಂಟೆಂಬುದನ್ನು ತೋರಿಸುತ್ತಿರುವುದು ಆದರೆ ಸೂಕ್ಷಂಶದಲ್ಲಿಯೂ ಆತ್ಯಂತಿಕಸಾಮ್ಯವೈಷಮ್ಯಗಳು ಸಿರ್ಪಡುವುದಾದರೆ ಆಗ ಸಿಂದೇ ಮತತಾಗಿಬಿಡುವುದರಿಂದ ಮತಭೇದಕ್ಕೆ ಹೇತುವಾದ ವೈಲಕ್ಷಣ್ಯಗಳನ್ನು ತೋರಿಸುವುದಕ್ಕಾಗಿ ಒಂದರಲ್ಲಿ ಚಿದಚಿತ್ವವೆರಡೂ ಮತ್ತೊಂದರಲ್ಲಿ ಶಕ್ತಿತ್ರಪವೂ ಸೇರಿಸಲ್ಪಟ್ಟಿರುವುದು

ಚಿದಚಿತ್ತುಗಳೆಂದರೆ ಜೀವನಾಚೇತನಗಳು ಶಕ್ತಿಯೆಂದರೆ ಕಾರ್ಯನಿಮಾ ಣೀ ೨ಪಯೋಗಿಯಾಗಿ ಕಾರಣವಸ್ತುವಿನಲ್ಲಿ ಅವ್ಯಕ್ತಸ್ಥಿತಿಯಲ್ಲಿರುವ ವಿಶೇಷಣ ಯಾವ ಕಾರಣವಸ್ತುವೇ ಆಗಲಿ ಕಾರ್ಯನಿರ್ಮಾಣಕ್ಕೆ ಅನುಕೂಲವಾದ ಶಕ್ತಿವಿಶೇಷವನ್ನು ಪಡೆಯುವುದಿದ್ದರೆ ಅದು ತನ್ನ ಕಾರಣತ್ವಧರ್ಮವನ್ನೇ ಕಳೆದುಕೊಳ್ಳುವುದಾದ ಪ್ರಯುಕ್ತ ಕಾರಣವಸ್ತುವಿನ ಕಾರಣತ್ವನಿರ್ವಾಹಕ್ಕೆ ಶಕ್ತಿವಿಶೇಷಸಂಬಂಧವು ಅತ್ಯಾವಶ್ಯಕವಾಗಿರುವುದು

ಬ್ರಹ್ಮಶಬ್ದವಾಚ್ಯವಾದ ಪರಮಾತ್ಮವಸ್ತುವೇ ಸನುಸ್ಯೂತವಾಗಿರುವುದರಿಂದ ಶಕ್ತಿವಿಶೇಷದ ಸಂಬಂಧವನ್ನು ಪಡೆದೇ ಇರಬೇಕು ಆದುದರಿಂದ ಬ್ರಹ್ಮವು ಅನಂತಶಕ್ತಿವಿಶಿಷ್ಟವಾಗಿರುವುದೆಂಬ ಅಂಶವನ್ನು ಈ ಉಭಯವಿಸಿದ್ಧಾಂತಗಳು ಪ್ರತಿಪಾದಿಸುವವು

ಶಕ್ತಿಯೆಂಬುದು ಕಾರಣವಸ್ತುವಿನಿತ್ಯವಾದ ಅವ್ಯಕ್ತಸ್ಥಿತ್ಯಧ್ಯಾಯವಿಶೇಷಣಸ್ವರೂಪವಾದುದರಿಂದಲೂ, ಜಗತ್ಕಾರಣ ಭೂತಬ್ರಹ್ಮವಸ್ತುವೇ ಆಗಿರುವುದರಿಂದಲೂ ಚಿದಚಿದ್ವಸ್ತುಗಳೂ ಅಂಥ ವಿಶೇಷಣಗಳೇ ಆಗಿರುವುದರಿಂದಲೂ ಶಕ್ತಿಪದವೂ ಚಿದ ಚಿತ್ಪದವೂ ಸಮಾನಾರ್ಥಕವಾಗಿರುವುವು

ಸುಖಾಂತರದಲ್ಲಿ ಅಂಗೀಕೃತವಾಗಿರುವ ಪ್ರಪಂಚ ಮಿಥ್ಯಾತ್ವವನ್ನು ದೂರೀಕರಿಸಿ ಸಮಸ್ತಪ್ರಪಂಚಕ್ಕೂ ಸತ್ಯತ್ವವನ್ನು ಸ್ಥಾಪಿಸುವ ಅಂದಲ್ಲಿ ಈ ಉಭಯ ಸಿದ್ಧಾಂತಗಳು ವಿಕಲಾಕ್ಷತೆಯನ್ನು ಪಡೆದಿರುವುವು ಏಕೆಂದರೆ ಕಾರಣವಸ್ತುವಿನ ಕಾರಣತ್ವನಿರ್ವಾಹಕ್ಕೆ ಆವಶ್ಯಕವಾದ ಶಕ್ತಿವಿಶೇಷವಾಗಲಿ, ಚಿದಚಿದ್ವಸ್ತುಗಳಾಗಲಿ ಮಿಥ್ಯಾವಸ್ತುಗಳಲ್ಲ, ಪಾರಮಾರ್ಥಿಕವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಸತ್ಯವಸ್ತುಗಳೇ ಆಗಿರುವುವು ಸತ್ಯವಾದ ಇಂಥ ವಿಶೇಷಣಗಳಿಂದ ಕೂಡಿದ ಬ್ರಹ್ಮವೂ ಸತ್ಯವಸ್ತುವೇ ಆಗಿರುವುದಲ್ಲದೆ ಮಾಧ್ಯಮಿಕರ ಕೂಸ್ಯನ್ಯವಾದದಲ್ಲಿ ಹೇಳಿದಂತೆ ಮಿಥ್ಯಾವಸ್ತುವಲ್ಲ ಅದಕಾರಣ ಸತ್ಯವಿಶೇಷಣ ವಿಶಿಷ್ಟವಾದ ಸತ್ಯಬ್ರಹ್ಮವನ್ನೇ ಕಾರಣವಾಗಿ ಪಡೆದಿರುವ ಪ್ರಪಂಚವೂ ಸತ್ಯವೇ ಆಗಿರಬೇಕಲ್ಲದೆ ಮಿಥ್ಯೆಯಾಗಲು ಅವಕಾಶವಿಲ್ಲ

ಪುನಃ ಚಿದಚಿತ್ ಮಿಥ್ಯಾತ್ವಕ್ಕಾಗಿ ಹೆಂಬಲಿಸುತ್ತಿರುವ ಬೌದ್ಧಾದಿಗಳು, ಕಾರಣವಸ್ತುವಿಗೆ ಸತ್ಯತ್ವವನ್ನು ಒಪ್ಪುವುದಾದರೆ ಕಾರ್ಯತ್ರಪಂಚದ ಮಿಥ್ಯಾತ್ವಸಮರ್ಥನೆಗಳು ಸಿದ್ಧಿಸುವುದಿಲ್ಲವೆಂಬ ಹೆದರಿಕೆಯಿಂದ ಸತ್ಯಬ್ರಹ್ಮಜೀವತತ್ವ ಸ್ವತೂಪಕ್ಕೆ ಕಾರಣತ್ವವನ್ನೇ ಒಪ್ಪದೆ ಕಾರಣವಸ್ತುವಿಗೂ ಮಿಥ್ಯಾತ್ವವನ್ನು ಸಿದ್ಧಪಡಿಸುವುದಕ್ಕಾಗಿ ಮಿಥ್ಯಾಭೂತಾವಿದ್ಯಾವಿಶಿಷ್ಟಜೀವತತ್ವವೇ ಜಗತ್ಕಾರಣವಾಗಿರುವು ದೆಂದು ವಾದಿಸುತ್ತ ವಿಶೇಷಸ್ಪಷ್ಟನವನ್ನು ವಹಿಸಿರುವರು ಬೌದ್ಧಾದಿಗಳಿಗೆ ಅಭಿಮತವಾಗಿಯೂ ಸಂವೃತಿ ಶಬ್ದವಾಚ್ಯವಾಗಿಯೂ ಇರುವ ಅವಿದ್ಯೆಯು ನಿರಾಕರಣ ವಿಷಯದಲ್ಲಿ ಈ ಎರಡು ಸಿದ್ಧಾಂತಗಳೂ ಪರಸ್ಪರ ಸಹಾನುಭೂತಿಯನ್ನು ವಹಿಸುತ್ತಿರುವುವು

ವಿವರ್ತವಾದ ನಿರಾಕರಣಪೂರ್ವಕ ಪರಿಣಾಮವಾದವನ್ನು ಸ್ಥಾಪಿಸುವ ವಿಷಯದಲ್ಲಿ ಈ ಎರಡು ಮತಗಳೂ ವಕಕಂಠ್ಯವನ್ನು ವಹಿಸಿರುವುವು

ಇತರ ಮತಗಳಲ್ಲಿ ಒಪ್ಪುವಂತೆ ಜೀವನಾಶಸಿಷ್ಟವಾದ ಕೇವಲಾಭೇದವನ್ನಾಗಲಿ, ಅಭೇದಾಸಹಿಷ್ಣುವಾದ ಕೇವಲ ಭೇದವನ್ನಾಗಲಿ ಈ ಗಿ ಕರಿಸದೆ ಜಗದ್ವ್ಯವಹಾರಗಳಿಗೆ ಒಂದು ರೀತಿಯಿಂದ ಭೇದವನ್ನೂ ಮತ್ತೊಂದು ರೀತಿಯಿಂದ ಅಭೇದವನ್ನೂ ಅಂಗೀಕರಿಸಿ ಜೀವಾಭೇದ ಶ್ರು ತಿಸೆರ್ದಕ್ಕೂ ಪ್ರಾಮಾಣ್ಯವನ್ನು ಸ್ಥಾಪಿಸುವ ವಿಷಯದಲ್ಲಿ ಈ ಎರಡು ಮತಗಳೂ ಏಕವಾಕ್ಯತೆಯನ್ನು ವಹಿಸಿರುವುವು

ಪರಮಾತ್ಮನ ಅಪಾದಾರಣ ಜಿಜ್ಞಾಸೆಗಳನ್ನು ತನ್ನ ಶರೀರದಲ್ಲಿ ಧರಿಸುತ್ತ ಗ ರಾಶರೀರತಿಂದ ಪರಮಾತ್ಮ ಧೀಕ್ಷಾನಿಷ್ಠನಾಗಿ ಸನಮಾತ ನನ್ನು ಮರೆತೊಕ್ಕರೇನೇ ಸಾಯುಜ್ಯ ಮೋಕ್ಷವು ಸಿದ್ಧಿಸವುದಂಬ ವಿಷಯದಲ್ಲಿ ಈ ಎರಡು ಮತಗಳೂ ಏಕವಾಕ್ಯತೆಯನ್ನು ವಹಿಸಿರುವುವು

ಸ್ವಯಂಭೆಗತ ತ್ವನಿಷ್ಠೆಕೆ ಸವರ್ಣಾಗ್ರ ತಿಗೀ ಕಾರವು ಆವಶ್ಯಕನೆಂದು ನಿರೂ ಸುತ್ತಿರು ವ ವಿಶಿಷ್ಟಾದ್ವೈತಿಕ ರಲ್ಲಿ ಕೆಲವರು ತನ ಗೃತ್ವಾಗ ಸನ್ಯಾ ಕೆಗೆಂಬಿ ದ್ದರೂ ಗೃಹ ನ್ಯವನ್ನ ಸ ರ್ಮ ಎಂಬ ಈ ಮೂರು ಪ್ರಮಾಣಗಳ ಸಾರಪ್ರತ್ಯೇಪಗಳ ಅಸಿತ್ವಸಾಧನೆಗೆ ಸಾಕಾಗಿರುವುದೆಂದು ನಿರೂಪಿ ತೋರಿಸುವ ವಿಷಯದಲ್ಲಿ ಈ ಎರಡು ಮತಗಳೂ ಏಕವಾಕ್ಯತೆಯನ್ನು ವಹಿಸಿರುವುವು

ಅನಂತಜ್ಞಾನಾದಿಗಳಿಗೆ ಕಾರಣಭೂತನಾಗಿರುವ ಪರಮಾತ್ಮನು ಕಾರಣತ್ವೋಪಯೋಗಿಯಾದ ಇಚ್ಛಾಶಕ್ತಿ, ಜ್ಞಾನಶಕ್ತಿ ಕ್ರಿಯಾಶಕ್ತಿ ಇವೇ ಮೊದಲಾದ ಸ್ವಾಭಾವಿಕಾನಂತಕಲ್ಯಾಣಗುಣಗಳಿಗೆ ಸಾಗರವಾಗಿದ್ದು ಸಮಸ್ತಪ್ರಪಂಚಿತ್ಕಿಂತಲೂ ಅತ್ಯಂತವಿಲಕ್ಷಣನಾಗಿರುವ ನೆಂಬ ವೇದಾಂತಕರಣಕ್ಕೆ ಸ್ಥಾಪಿಸುವ ವಿಷಯದಲ್ಲಿ ಈ ಎರಡು ಮತಗಳೂ ಏಕಕಂಠ್ಯವನು ವಹಿಸಿರುವವು

ಇದೇ ರೀತಿಯಾಗಿ ಇನ್ನೂ ಅನೇಕವಿಷಯಗಳಲ್ಲಿ ಈ ಎರಡು ಮತಗಳಿಗೂ ಸಾಮ್ಯವುಂಟು

ಇನ್ನು ವೈಲಕ್ಷಣ್ಯವು ಯಾವ ವಿಷಯಗಳಲ್ಲಿ ಇರುವು ದೆಂದರೆ—ಮೋಕ್ಷಾವಸ್ಥೆಯಲ್ಲಿ ಪರಮಾತ್ಮ ಜೀವಾತ್ಮರಿಗೆ ನೇವ್ಯಸೇವಕಭಾವವನ್ನು ಅಂಗೀಕರಿಸುವುದರ ಮೂಲಕ ಭೇದವನ್ನು ಶ್ರೀವೈಷ್ಣವಮತವೆವ್ವಲ್ಲುಯೂ—ಶಿವಸಾಯುಜ್ಯವನ್ನು ಅಂಗೀಕರಿಸುವುದರ ಮೂಲಕ ಅವಿಭಾಗಾವಸ್ಥೆತಿರೂಪವಾದ ಅಭೇದವನ್ನು ವೀರಶೈವ ಮತದಲ್ಲಿಯೂ ಅಂಗೀಕರಿಸಿರುವುದು ಮುಖ್ಯವಾದ ವೈಲಕ್ಷಣ್ಯ ವಿಷಯಗಳಾಗಿರುವುವು ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ೩೫ ತತ್ವಗಳೂ, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ೩೬ ತತ್ವಗಳೂ ಅಂಗೀಕರಿಸಲ್ಪಟ್ಟಿರುವುದರಿಂದ ತತ್ವಗಳಲ್ಲಿ ವೈಲಕ್ಷಣ್ಯವಿರುವುದು

ಹೀಗೆ ಉಕ್ತರೀತಿಯಲ್ಲಿ ಅನಂತಶಕ್ತಿವಿಶಿಷ್ಟವಾದ ವಸ್ತುವೇ ಜಗತ್ಕಾರಣವಾಗಿರುವುದೆಂಬ ಅಂಶದಲ್ಲಿಯೂ, ಚಿದಚಿತ್ತುವೂ ಶಕ್ತಿಪದವೂ ಸಮಾನಾರ್ಥಕವೆಂಬ ಅಂಶದಲ್ಲಿಯೂ, ಕಾರಣಸತ್ಯತ್ವದಿಂದ ಕಾರ್ಯವೂ ಸತ್ಯವಾಗಿರುವುದೆಂಬ ಅಂಶದಲ್ಲಿಯೂ, ಅವಿದ್ಯಾಂಗೀಕಾರವಿಲ್ಲದೆ ಅಯುಕ್ತವೆಂಬ ವಿಷಯದಲ್ಲಿಯೂ. ಕೇವಲಾಭೇದನಿರಾಕರಣ ಸಕಲ ಪ್ರಮೇಯಗಳ ಸಿದ್ಧಿಗಾಗಿ ಮೂರು ಪ್ರಮಾಣಗಳ ಅಂಗೀಕಾರವೇ ಸಾಕಾಗಿರುವುದೆಂಬ ವಿಷಯದಲ್ಲಿಯೂ, ಈ ಎರಡು ಮತಗಳೂ ಸಾಲಕ್ಷಣ್ಯವನ್ನೂ, ಮೋಕ್ಷದಶೆಯಲ್ಲಿ ಭೇದಸ್ಥಿತಿ-ಅಭೇದಸ್ಥಿತಿ ಎಂಬ ವಿಷಯದಲ್ಲಿಯೂ, ಪಂಚವಿಧತತ್ವತ್ರಯ ಮತ್ತು ಷಟ್ಪದಾರ್ಥತ್ರಯಗಳ ವಿಷಯದಲ್ಲಿಯೂ ವೈಲಕ್ಷಣ್ಯವನ್ನೂ ವಹಿಸಿರುವವು

ವರ್ತಮಾನಸಂಗ್ರಹ

ಭಾರತದ ಸ್ವಾತಂತ್ರ್ಯವನ್ನು ರಕ್ಷಿಸುವುದು ಸೈನಿಕರ ಜವಾಬ್ದಾರಿ

ದೇಶದ ಶತ್ರು ಸಜ್ಜಿತ ಸೈನ್ಯದ ಮೇಲೆ ಭಾರತ ಸ್ವಾತಂತ್ರ್ಯದ ರಕ್ಷಣೆಯ ಜವಾಬ್ದಾರಿ ಬಿದ್ದಿದೆ ಎಂದು ಗೌರ್ನರ್ ಜನರಲ್ ಲಾರ್ಡ್ ವೆವೆಲ್ ಭೇಟಿನೀಡಿರುವ ತಿರುವಾಂಕೂರಿನ ಸೈನಿಕರ ಪೆರೇಡಿನಲ್ಲಿ ಸೆಲ್ಯೂಟ್ ಸ್ವೀಕರಿಸುತ್ತಾ ತಿಳಿಸಿದರು

ಸ್ಯಾಲೆಸ್ಬೈನ್ ಬಗ್ಗೆ ಅನೇಕರಿಗೆ ಸಿಡಿಲು ಬಡಿದಂತಾಗಿದೆ

ಸ್ಯಾಲೆಸ್ಬೈನ್ ವಿಭಜನೆಯ ಯೋಜನೆಗೆ ಅಮೇರಿಕವು ತನ್ನ ಬೆಂಬಲವನ್ನು ಹಿಂತೆಗೆದುಕೊಂಡುದನ್ನು ನೋಡಿ, ಸಂಯುಕ್ತ ಜನತಾಂಗಗಳಲ್ಲಿ ನಂಬಿಕೆ ಇದ್ದವರಿಗೆಲ್ಲ ಸಿಡಿಲು ಬಡಿದಂತಾಗಿದೆ ಸಂಯುಕ್ತ ಜನತಾಂಗಗಳ ಬಹುಮತದ ತೀರ್ಮಾನವನ್ನು ಶಾಸನವೆಂದು ಪರಿಗಣಿಸಿ ಆಚರಣೆಗೆ ತರಬೇಕಾದದ್ದು ಕರ್ತವ್ಯವಾಗಿರುವಾಗ, ಜಗತ್ತಿನಲ್ಲೆಲ್ಲ ಬಲಯುತ ದೇಶವಾಗಿರುವ ಅಮೇರಿಕವು ಹಿಂದೇಟು ಹಾಕಿದ್ದು ಆನೇಕರಿಗೆ ಬೇಡವನ್ನುಂಟುಮಾಡಿದೆ.

ಹೈದರಾಬಾದ್ ಪರಿಸ್ಥಿತಿಯ ಬಗ್ಗೆ ಸರ್ದಾರ್ ಪಟೇಲರೊಡನೆ ಚರ್ಚೆ

ಹೈದರಾಬಾದಿನಲ್ಲಿ ಇಂಡಿಯ ಸರ್ಕಾರದ ಏಜೆಂಟ್ ಜನರಲ್‌ರವರಾಗಿರುವ ಶ್ರೀಯುತ ಕೆ ಎಂ ಮುನ್ಷಿಯವರು ಸರ್ದಾರ್ ವಲ್ಲಭಾಯಿ ಪಟೇಲರನ್ನು ಭೇಟಿ ಮಾಡಿ ದಿನವಿನಕ್ಕೂ ನಿಜಾಮಸ್ತಿರ ವ ಹೈದರಾಬಾದಿನ ಪರಿಸ್ಥಿತಿಯನ್ನು ಚರ್ಚಿಸಿದರು

ಹೈದರಾಬಾದಿನ ಬಗ್ಗೆ ಜಬ್ಬಲ್‌ಪುರ್ ಕಮ್ಯೂಂಡರ ಎಚ್ಚರಿಕೆ

ಬಿರಾರ್ ಗಡಿಯ ಬಳ ನಡೆಯುತ್ತಿರುವ ಘಟನೆಗಳು ನಮಗೆ ಜೆನ್ನಾಗಿ ಗೊತ್ತಿಜೆ ಪರಾಕ್ರಮ, ಸಮರ ಕುಶಲತೆ ಬುದ್ಧಿಬಲದಲ್ಲಿ ನಿಜಾಮರ ಯೋಧರಿಂಂತಲೂ ಭಾರತದ ಯೋಧರು ನಿಪುಣರಾಗಿದ್ದಾರೆ ನಾವು ಎಂತಹ ಪರಿಸ್ಥಿತಿಯನ್ನಾದರೂ ಎದುರಿಸಲು ಸಿದ್ಧ !"

——ಎಂಬುದಾಗಿ ಜಬ್ಬಲ್‌ಪುರ್ ಸಬ್ ಏರಿಯ ಕಮ್ಯಾಂಡರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು

ನಿಜಾಂ ರಾಜ್ಯದಲ್ಲಿ ರಜಕಾರರ ಹಾವಳಿ

ಹೈದರಾಬಾದಿನಲ್ಲಿ ರಜಕಾರರ ಪುಂಡತನ ಬಹಳ ಜೋರಾಗಿದ ಇದರಿಂದ ಜನರಲ್ಲಿ ಬಹಳ ಕಳವಳವುಂಟಾಗಿವೆ ರಜಕಾರರ ಹಾವಳಿಯ ಬಗ್ಗೆ ಪ್ರತಿಭಟನೆ ಸೂಚಿಸಿ ಹೈದರಾಬಾದಿನ ವಾಣಿಜ್ಯ ಪ್ರಮುಖರು ನಿಜಾಮರಿಗೆ ಮೊರೆಯಿಟ್ಟಿದ್ದಾರೆ

ರಜಕಾರರ ಸ್ವೇಚ್ಛಾಪ್ರವೃತ್ತಿಯಿಂದ ದಕ್ಷಿಣ ಭಾರತದ ಶಾಂತಿಗೆ ಹಾನಿಯೆದಗುವ ಸಂಭವವಿದೆಯೆಂದು ಅಭಿಪ್ರಾಯಪಡಲಾಗಿದೆ

ಹೈದರಾಬಾದಿನಲ್ಲಿ ಮದ್ದು ಗುಂಡುಗಳ ತಯಾರಿಕೆ

ಹೈದ್ರಾಬಾದ್ ಘಟನೆಗಳ ಸಂಬಂಧದ ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ ಪಂಡಿತ ನೆಹರೂರವರು, ಹೈದ್ರಾಬಾದಿನ ಕೆಲವು ಕಾರ್ಖಾನೆಗಳು ನೈಜಾಂ ಸರ್ಕಾರದ ಸಹಾಯದಿಂದ ರೈಫಲ್ಲುಗಳನ್ನೂ, ಮತ್ತು ಮದ್ದು ಗುಂಡುಗಳನ್ನೂ ತಯಾರಿಸುತ್ತಿವೆಯೆಂದು ವರದಿಗಳು ಸರ್ಕಾರಕ್ಕೆ ಬಂದಿವೆ ಇದರ ಬಗ್ಗೆ ತನಿಖೆ ನಡೆಸಿ ತಕ್ಷಣ ವರದಿ ಮಾಡುವಂತೆ ಭಾರತದ ಏಜೆಂಟ್ ಜನರಲ್ಲರಿಗೆ ತಿಳಿಸಲಾಗಿದೆಯೆಂದು ತಿಳಿಸಿದರು

ಹೈದರಾಬಾದ ಸರ್ಕಾರದ ಪ್ರತಿಭಟನೆ

ಮದರಾಸು ಪ್ರಾಂತ್ಯದ ಗಡಿಯಲ್ಲಿ ರಾಯಚೂರು ಮತ್ತು ಓಂಗಲ್ ಬಳಿ ಭಾರತ ಡೊಮಿನಿಯನ್ನಿನವರು ಹೈದರಾಬಾದ ಸಂಸ್ಥಾನದೊಳಗೆ ಆತ್ಯಮ ಪ್ರವೇಶ ಮಾಡಿದರೆಂದು ಹೈದರಾಬಾದ ಸರ್ಕಾರವು ಭಾರತ ಸರ್ಕಾರಕ್ಕೆ ಪ್ರತಿಭಟನೆಯನ್ನು ಕಳುಹಿಸಿದೆ "ಗಡಿಯಲ್ಲಿ ನಡೆದ ಎಲ್ಲ ಘಟನೆಗಳಲ್ಲೂ ಮೇಲು ಬಿದ್ದು ಅಕೃತ್ಯ ನಡೆಸಿದವರು ಭಾರತದ ಪ್ರಜೆಗಳೇ ಆಗಿದ್ದರೂ, ಈ ಗಡಿ ಘಟನೆಗಳಿಗೆ ಹೈದರಾಬಾದು ಕಾರಣವೆಂದು ಆಪಾದಿಸುತ್ತಿರಲಾಗಿದೆ" ಎಂದು ಸರ್ಕಾರಿ ಅಧಿಕಾರಿಗಳೊಬ್ಬರು ತಿಳಿಸಿರುವರು ಹೈದರಾಬಾದಿಗೆ ಅತ್ಯಗತ್ಯವಾಗಿ ಬೇಕಾಗಿರುವ ಔಷಧೋಪಚಾರ ವಸ್ತುಗಳನ್ನು ತಡೆಹಿಡಿಯಲು ತಕ್ಕ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿ ಹೈದರಾಬಾದು ಸಂಸ್ಥಾನದ ಪ್ರಧಾನಿಯವರು ಭಾರತ ಸರ್ಕಾರಕ್ಕೆ ಪ್ರತಿಭಟನೆ ಕಳುಹಿಸಿದ್ದಾರೆ

ಉರ್ದು ಮತ್ತು ಬಂಗಾಳಿ ಭಾಷಾ ಸಮಸ್ಯೆ

ಬಂಗಾಳಿಭಾಷೆಯು ವಿಶಿಷ್ಟಾಧಿಪತ್ಯದ ರಾಷ್ಟ್ರಭಾಷೆಗಳಲ್ಲಿ ಒಂದಾಗಿರಬೇಕೆಂದು ಸ್ಪಾರ್ಟಿಸಿ ಗವರ್ನರ್ ಜನರಲ್ ಮಿ॥ ಜಿನ್ನಾರವರಿಗೆ ರಾಷ್ಟ್ರಭಾಷಾ ಉಪಸಮಿತಿಯ ಪರವಾಗಿ ಬಿಷ್ಣ ವತ್ತಳೆಯೊಂದನ್ನು ಅರ್ಪಿಸಲಾಗಿದೆ

೧ ಪಾಕಿಸ್ತಾನದ ಜನಸಂಖ್ಯೆಯಲ್ಲಿ ಎರಡು ಮೂರು ಭಾಗದಷ್ಟಿರುವ ಪೂರ್ವಬಂಗಾಳದ ಪ್ರಜೆಗಳಿಗೆ ಇಲ್ಲಿ ಒಮ್ಮತದಿಂದ ಗುರುತಿಸಲ್ಪಡುವ ಸಹ ಅರ್ಹವಾಗಿ ಜೊತೆಗೆ ರಾಷ್ಟ್ರ ಭಾಷೆಯಾಗಿರಬೇಕೆಂದು ಇಚ್ಛಿಸುತ್ತಾರೆ

೨ ಎರಡು ರಾಷ್ಟ್ರಭಾಷೆಗಳಿರುವುದರಿಂದ ಆಡಳಿತದಲ್ಲಿ ತೊಂದರೆಯೇನೂ ಸಂಭವಿಸುವುದಿಲ್ಲ ಎರಡು ನೂರು ರಾಷ್ಟ್ರಭಾಷೆಗಳು ಇರುವ ನಿವಿಶ ನಗು ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಕಂಡು ಬರುತ್ತವೆ

೩ ಸಾಮಾನ್ಯವಾಗಿ ಪ್ರಪಂಚದ ಅನೇಕ ದೇಶಗಳಲ್ಲಿ ಬಹುಸಂಖ್ಯಾತರು ಬಳಸುವ ಭಾಷೆಯೇ ರಾಷ್ಟ್ರಭಾಷೆಯಾಗಿದೆ

೪ ಅನ್ಯದೇಶದ ಪ್ರೇರಣೆಯಿಂದ ನಾವು ಈ ಬೇಡಿಕೆಯನ್ನು ಮುಂದಿಡುತ್ತಿಲ್ಲ, ಇದು ಬಂಗಾಳ ಪ್ರಜೆಗಳ ಆಶಯವಾಗಿದೆ—ಎಂದು ಬಿನ್ನವತ್ತಳೆಯಲ್ಲಿ ನಮೂದಿಸಲಾಗಿದೆ

ಸಿಂಧ್‌ನಲ್ಲಿ ಹಿಂದುಗಳಿಗೆ ಆದ ಕಷ್ಟನಷ್ಟ

ಶ್ರೀ ಪುನ್ನಯ್ಯನವರ ವಿವರಣೆ

ಕರಾಚಿಯ ಸಿಂಧ್ ಅಬ್ಸರ್ವರ್ ಪತ್ರಿಕೆಯ ಮಾಜಿ ಸಂಪಾದಕರಾದ ಶ್ರೀ ಕೆ ಪುನ್ನಯ್ಯನವರು ಬೆಂಗಳೂರು ಪತ್ರಿಕೋದ್ಯೋಗಿಗಳ ಸಂಘದಲ್ಲಿ ವಿಷದಿಸಿದ್ದ ಸತ್ಯಾಗ್ರಹ ಕೂಟದಲ್ಲಿ ಭಾಷಣಮಾಡುತ್ತಾ ಮೈಸೂರು ಪ್ರಜೆಗಳೂ ಮತ್ತು ಸರ್ಕಾರದವರೂ ಸಿಂಧ್ ಸ್ಯಾಂತ್ಯದಿಂದ ಇಲ್ಲಿಗೆ ಬಂದಲೆ ಆಪತ್ತಾದ ನಿರಾಶ್ರಿತರಿಗೆ ಸೂಕ್ತವಾದ ಸಹಾಯ ನೀಡಬೇಕೆಂದು ಪ್ರಾರ್ಥಿಸಿದರು

ಶ್ರೀಪುನ್ನಯ್ಯನವರು ಭಾಷಣಮಾಡುತ್ತಾ ಸಿಂಧ್ ಪ್ರಾಂತ್ಯದಲ್ಲಿ ತಲೆಕೆಳಾಂತರದಿಂದ ನೆಲೆಸಿದ್ದ ಸುಮಾರು ೧೩ ಲಕ್ಷ ಹಿಂದೂಗಳ ಇಂದಿನ ಕರುಣಾಜನಕವಾದ ಸ್ಥಿತಿಯನ್ನು ಬಣ್ಣಿಸಿದರು.

ಸಿಂಧಿ ಹಿಂದೂಗಳು ಆ ಪ್ರಾಂತ್ಯದ ಆರ್ಥಿಕ ಮತ್ತು ವಿದ್ಯಾಭಿವೃದ್ಧಿಗೆ ಹೇಗೆ ಕಾರಣರಾಗಿದ್ದರು ಎಂಬುದನ್ನು ಶ್ರೀಯುತರು ವಿವರಿಸಿದರು ಸಿಂಧ್ ಸರ್ಕಾರದಲ್ಲಿ ಶೇ ೬೦ ರಷ್ಟು ಹಿಂದುಗಳಿದ್ದರೆಂದೂ, ಶೇ ೪೦ ರಷ್ಟು ಹಿಂದುವಲ್ಲದ ಜನಾಂಶ ಅವರಿಗೆ ಸೇರಿದ್ದಿತೆಂದೂ ತಿಳಿಸಿದರು ಈಗ ಪಾಕಿಸ್ತಾನದ ಕೋಮುವಾರು ವಿಷಪೂರಿತವಾದ ಆಡಳಿತ ನೀತಿಯ ಪರಿಣಾಮವಾಗಿ ಸಿಂಧ್ ಹಿಂದುಗಳು ಸುಮಾರು ೫೦೦ ಕೋಟಿ ರೂ ಗಳ ಆಸ್ತಿಪಾಸ್ತಿಗಳನ್ನು ಕೈಬಿಟ್ಟು ಪ್ರಾಣವಾದರೂ ಉಳಿದರೆ ಸಾಕು ಎಂದು ಭಾರತಕ್ಕೆ ಬರುತ್ತಿದ್ದಾರೆ ಎಂದು ತಿಳಿಸಿದರು

ಇಂದು ಸಿಂಧ್ ಪ್ರಾಂತ್ಯದಲ್ಲಿ ಯಾವೊಬ್ಬ ಹಿಂದುವೂ ಆತ್ಮಗೌರವದಿಂದ ಬದುಕುವ ಹಾಗೇ ಇಲ್ಲವೆಂದೂ ಪಾಕಿಸ್ತಾನ ಸರ್ಕಾರದ ದಬ್ಬಾಳಿಕೆಯನ್ನು ಸಹಿಸಲಾರದೆ ತಾವೆ ತಮ್ಮ ವೃತ್ತಿಗೆ ರಾಜೀನಾಮೆಯಿತ್ತು ತಮ್ಮ ನಾಡನ್ನು ತ್ಯಜಿಸಿ ಬರಬೇಕಾಯಿತೆಂದೂ ವಿವಾದಿಸಿದರು

ಸಿಂಧ್ ಪ್ರಾಂತ್ಯದಲ್ಲಿ ಇಂದು ಜರುಗುತ್ತಿರುವ ಕೋಮುವಾರು ಮರಣ ಘಟನೆಗಳಿಗೆ ಪಾಕಿಸ್ತಾನ ಸರ್ಕಾರವೇ ಮುಖ್ಯ ಕಾರಣ ' ಅದರ ಬೆಂಬಲ ಪಡೆದು ಹೊರಗಿನ ಸಶಸ್ತ್ರ ಸಂಜಾಬನ ಮುಸಲ್ಮಾನರು ಸಿಂಧ್ ಪ್ರಾಂತ್ಯದಲ್ಲಿ ಎಲ್ಲಾ ಬಗೆಯ ದೌರ್ಜನ್ಯ ಕೃತ್ಯಗಳನ್ನು ನಡೆಸುತ್ತಿದ್ದಾರೆ ಹಿಂದೂಗಳ ಪ್ರಾಣ ಮಾನ ಧನಗಳಿಗೇ ಸಂಚಕಾರ ತಂದಿದ್ದಾರೆ ಎಂದು ಹೇಳಿದರು

ದೇಶ ರಕ್ಷಣೆಯೇ ನಮ್ಮ ಪವಿತ್ರ ಕರ್ತವ್ಯ

ಹಂ॥ ಜವಡೆಕರ್ ಭಾಷಣ

ಜಗತ್ಪ್ರಸಿದ್ಧ ಪ್ರಿಪ್ರದಲ್ಲಿಯೇ ಮತ್ತೊಂದು ಮಹಾಯುದ್ಧವು ಸಂಭವಿಸಲಾರದೆಂದು ನಾವು ದೃಢವಾಗಿ ನಂಬಿದ್ದೇವೆ ಪಾಂ ಸೌಹಾದ ಗಳೇ ನಮ್ಮ ಮುಖ್ಯ ಧ್ಯೇಯ! ಶಾಂತಿಪಾಲನೆಗಾಗಿ ನಾವು ನಮ್ಮ ಕೈಲಾದ ಪ್ರಯತ್ನವನ್ನೆಲ್ಲಾ ಮಾಡುವೆವು ಸರಕಾಕ್ಕಾದ ಸ್ವಾತಂತ್ರ್ಯವನ್ನು ರಕ್ಷಿಸಲು ದೃಢಸಂಕಲ್ಪವನ್ನೂಡಾಡಿದ್ದೇವೆ ಅವಾರ ಖ್ಯಾತಿಂದ ಗಳಿಸಿರುವ ಸ್ವಾತಂತ್ರ್ಯವನ್ನು ಕಾಪಾಡುವ ಭಾರ ಸೈನಿಕರ ಮೇಲೆ ಹೆಚ್ಚಾಗಿ ಬಿದ್ದಿದೆ '

ನಮ್ಮ ಸೈನ್ಯವು ಸ್ವತಂತ್ರ ಭಾರತದ ರಾಯಭಾರಿ ಅದರ ಕರ್ತವ್ಯವು ಮಾಕತ್ತರನಾಗಿದೆ ಸುಕುಚಿತ ಮನೋಭಾವನೆಯನ್ನು ತ್ಯಜಿಸಿ, ಇಡೀ ದೇಶದ ಕಲ್ಯಾಣಕ್ಕಾಗಿ ಭಾರತಸೈನ್ಯ ದುಡಿಯಬೇಕು ಸೈನ್ಯದಲ್ಲಿ ಸೇವೆ ಯೇ ತಮ್ಮ ಸ್ಪ್ರಫಾನ ಧ್ಯೇಯವೆಂದು ಸೈನಿಕರು ಬಾವಿಸಬೇಕು

೨೫ ಕೋಟಿ ಪ್ರಜೆಗಳುಳ್ಳ ಹೊಸ್ಥ ನಾಡನ್ನು ಪ್ರಗತಿಯ ಪಾಥವಿಯಲ್ಲಿ ಒಯ್ಯುವುದು ಸುಲಭವಾದುದಲ್ಲ ದೇಶದ ಅಭ್ಯುದಯಕ್ಕಾಗಿ ಪ್ರತಿ ಪ್ರಜೆಯೂ ತ್ಯಾಗ ಮಾಡಬೇಕು ಸತತವಾಗಿ ದುಡಿಯಬೇಕು

ಸೈನಿಕರು ದೇಶದ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡಲು ಸಹ ಹಿಂಜರಿಯಬಾರದು ಎಂದು ಪಂ॥ ನೆಹರೂ ಅವರು ದಿಲ್ಲಿಯಲ್ಲಿ ಸೈನಿಕರ ಸೆಲ್ಯೂಟ್‌ಸ್ವೀಕರಿಸುತ್ತಾ ಭಾಷಣ ಮಾಡಿದರು

ನೂರನೆಯ ನುಹಾಯುದ್ಧ ಬಹಳ ದೂರವಿಲ್ಲ

ನೂರನೆಯ ಮಹಾಯುದ್ಧವು ನಡೆಯುವ ಸಂಭವ ಬಹಳ ಮಟ್ಟಿಗಿದೆಯೆಂದೂ ಅದು ಬಹಳ ದೂರವಿಲ್ಲ ನೆಂದೂ ಅಮೆರಿಕದ ವಿದೇಶಾಂಗ ವ್ಯವಹಾರ ಸಮಿತಿ ಪ್ರತಿನಿಧಿ ಸಭೆಯ ಅಧ್ಯಕ್ಷರಾದ ವಿ॥ ಈಟಾನರು ತಿಳಿಸಿದ್ದಾರೆ ಪಶ್ಚಿಮ ಯೂರೋಪು ಚೀನಾ, ಗ್ರೀಸ್ ಮತ್ತು ಟರ್ಕಿಗಳಿಗೆ ಸಹಾಯ ಮಾಡುವ ಬಗ್ಗೆ ತನ್ನ ನಿರ್ಧಾರ ನನ್ನು ಜೇಗ ಪ್ರತಿನಿಧಿ ಸಭೆಗೆ ಕಳಸಬೇಕೆಂದು ಹೌಸ್ ರೂಲ್ ಕಮಿಟಿಯನ್ನು ಈಟಾನರು ಕೇಳಿದ್ದಾರೆ

ಕಾಫಿ ಮತ್ತು ಟೀ ಮೇಲೆ ಸುಂಕನನ್ನು ಕಡಿಮೆ ಮಾಡಲಾಗಿದೆ.

ಸೆಲೆಕ್ಟ್ ಕಮಿಟಿಯ ನರದಿ

ಕೇಂದ್ರ ಸರಕಾರದ ಆಯವ್ಯಯದಲ್ಲಿ ಸರಕಾರ ವಿಧಿಸಬೇಕೆಂದಿನ ಹಲವು ತೆರಿಗೆಗಳಲ್ಲಿ ಸೆಲೆಕ್ಟ್ ಕಮಿಟಿಯು ಹಲವು ಒಡಲಾಪತೆಗಳನ್ನು ಸೂಚಿಸಿದೆ ಇವುಗಳಲ್ಲಿ ಮುಖ್ಯವಾದುವು

೧ ಕಾಫಿ ಮತ್ತು ಟೀ ಮೇಲಿನ ಸುಂಕವನ್ನು ಈಗಿರುವುದಕ್ಕಿಂತ ಎರಡರಷ್ಟು ಹೆಚ್ಚಿಸುವ ಬದಲು, ಸೇಕಡಾ ೫೦ ರಷ್ಟು ಮಾತ್ರ ಹೆಚ್ಚಿಸಬೇಕು

೨ ವರ್ಷಪತಿಯ ಮೇಲಿನ ಸುಂಕವನ್ನು ಒಂದು ಹಂಡ್ರೆಡ್‌ವೇಟಿಗೆ ರೂ ೭–೮–೦ ಗೆ ಬದಲು ರೂ ೭ಕ್ಕೆ ಬದಲಾಯಿಸಬೇಕು

೩. ಈ ವರ್ಷಪತಿಯ ರಫ್ತಿಗೆ ಉತ್ತೇಜನ ಕೊಡಲು ಇದರ ಮೇಲೆ ಹೆಚ್ಚಿಗೆ ತೆರಿಗೆಯನ್ನು ಒಂದು ಟನ್ನಿಗೆ ರೂ. ೩೦೦ ರ ಬದಲು ರೂ ೨೬೦ಕ್ಕೆ ತಗ್ಗಿಸಬೇಕು.

೪. ಮ್ಯಾಂಗನೀಸಿನ ರಫ್ತಿನಲ್ಲಿ ಶೇಕಡಾ ೨೫ ರಷ್ಟು ಆಡಳೆರೋರೂ ತೆರಿಗೆಯನ್ನು ಹಾಕಬೇಕೆಂದು ಸೂಚಿಸಲಾಗಿದೆ

೫ ವರಮಾನ ತೆರಿಗೆಯನ್ನು ವಿಧಿಸುವ ಕನಿಷ್ಠ ಪರಿಮಾಣವನ್ನು ವ್ಯಕ್ತಿಗೂ, ಅವಿಭಕ್ತ ಹಿಂದೂ ಕುಟುಂಬಗಳಿಗೂ ಮತ್ತು ರಿಜಿಸ್ಟರಾಗದ ಸಂಸ್ಥೆಗಳ ವಿಚಾರದಲ್ಲಿ ರೂ ೨೫೦೦ ರಿಂದ ರೂ ೩೦೦೦ಕ್ಕೆ ಹೆಚ್ಚಿಸಬೇಕೆಂದೂ ಸಲಹೆಯಾಗಿದೆ

೮ ಸಣ್ಣ ಕಂಪೆನಿಗಳ ವಿಚಾರದಲ್ಲಿ ವರಮಾನ ತೆರಿಗೆಯನ್ನು ತಗ್ಗಿಸಬೇಕೆಂದೂ, ಸೂಕ್ಷ್ಮಬೀಜ ಕೊಡಬೇಕೆಂದೂ ಸಲಹೆಮಾಡಲಾಗಿದೆ

೧೧ ಜತೆ ಎತ್ತುಗಳಿಂದ ೨೦೦ ಅಡಿ ಆಳದಿಂದ ನೀರೆತ್ತುವ ಪಂಪು!

ಒಂದು ಜತೆ ಎತ್ತುಗಳ ಸಹಾಯದಿಂದ ೧೧ ನಿಮಿಷಕ್ಕೆ ೨೦೦ ಅಡಿ ಆಳದಿಂದ ನೀರೆತ್ತುವ ಪಂಪು ಒಂದನ್ನು ಕರಾಚಿಯ ಕೆನಡಿಯನ್ ಕ್ರೈಸ್ತ ಶಾಲೆ ಡಾ॥ ಎಫ್. ಎ ಪೀಟರ್‌ರವರು ಕಂಡುಹಿಡಿದ್ದಾರೆ ಇದು ಉಪಯೋಗಕ್ಕೆ ಬಂದರೆ ಭಾರತಸ್ಥಾನದ ಸ್ವಜನಾಯ ಕ್ರಮವು ಬಹಳವಾಗಿ ಮಾರ್ಪಾಡುವುದೆಂದು ಹೇಳಲಾಗಿದೆ

ಗೈಹಾಪಲ್ಲಿ ಭಾರಿ ಆಸ್ಫೋಟನ!

ಹೈಹಾದಲ್ಲಿ ಭಾರಿ ಆಸ್ಫೋಟನ ಸಂಭವಿಸಿತು. ಸಿಡಿಮದ್ದುಗಳಿಂದ ತುಂಬಲ್ಪಟ್ಟಿದ್ದ ಲಾರಿಯೊಂದು ಸಿಡಿದು ಅರಬ್ ಪ್ರದೇಶದಲ್ಲಿ ವಿಪರೀತ ನಷ್ಟವನ್ನುಂಟು ಮಾಡಿದೆ

ಸ್ವೀಕಾರ

ಧಾರವಾಡ ಡಿ॥ ಹುಬ್ಬಳ್ಳಿ ಟ್ರಾನ್ಸ್‌ಪರ್ಟಿನವರಿಂದ ವೇ॥ ತೀಗೂರು ಮರದ ನಿಜಗುಣಯ್ಯನವರ ಪುತ್ರ ಚಿ॥ ಸೌ॥ ವಾಕ್ಸಾಯಣೀದೇವಿಯಮ್ಮನ ಗವಿಗಳಲ್ಲಿರುವ ವೇ॥ ತಿಪ್ಪಿನೂರದ ಸೋಮಯ್ಯನವರ ಪುತ್ರ ಚಿ॥ ಆಡವಯ್ಯನವರಿಗೆ ಕೊಟ್ಟು ತಾ॥ 16 3 48ನೆಯ ದಿವಸ ನಿಶ್ಚಯಾರ್ಥವನ್ನು ನೆರವೇರಿಸಿದ ಸಮಯದಲ್ಲಿ ವೇ॥ ಹುಬ್ಬಳ್ಳಿ ಹಿರಿಯ ನೂರದ ಸೋಮನಾಥಯ್ಯನವರ ಅಭಿಪ್ರಾಯದ ಮೇರೆಗೆ ಪ್ರಭಾಪೂರಣಕ್ಕೈಶ್ವರ ನರನ ಕಡೆಯಿಂದ ಸನುರ್ಪಸಿದ 2—4—0 ರೂ ವಧುವಿನ ಕಡೆಯಿಂದ ಸನುರ್ಪಸಿದ 1—8—0 ಒಟ್ಟು 3—12—0 ರೂ ಗಳು ವೇ॥ ಹೊಸಮಠದ ವೀರ ಚಿದ್ರಯ್ಯನವರ ದ್ವಾರಾ ತಲಪಿರುತ್ತವೆ

ತಿಪಟೂರು ಟ್ರಾನ್ಸ್‌ಪರ್ಟಿನಿಂದ ನೀರಜೈವಮಂಡಲಿಯ ನರು ತಾ॥ 23 3 48 ನೆಯ ದಿವಸ ಶ್ರೀ ನಂದೀಶ್ವರ ದೇವಾಲಯದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೂರಣಕ್ಕೈಶ್ವರ ಸನುರ್ಪಸಿದ 2 ರೂ. ಗಳು ವೇ॥ ಆರ್ ಎಂ ಮಲ್ಲಿಕಾರ್ಜುನಯ್ಯನವರ ದ್ವಾರಾ ತಲಪಿರುತ್ತವೆ

ಹೂವಿನ ಹಡಗಲಿ ತಾ॥ ಹೊಳಗುಂದಿ ಗ್ರಾಮದ ಉಜ್ಜಯಿನಿ ಒಡೆಯರ ಮಹಿಮ ಶ್ರೀ ಸದ್ಗುರುಸಿದ್ಧತಾತಾ ಚಾರ್ಯಸ್ವಾಮಿಗಳವರು ಶಿಂಗಟಾಲೂರು ಕ್ಷೇತ್ರದಲ್ಲಿ ಅಮೃತ್ಯಾನವನ್ನು ನೆರವೇರಿಸಿ ಸನುರ್ಪಸಿಗೊಳಿಸಿದ ಸಮಯದಲ್ಲಿ ಪ್ರಭಾಪೂರಣಕ್ಕೈಶ್ವರ ಸನುರ್ಪಸಿದ 1 ರೂ ಯು ವೇ॥ ಎಚ್ ಎಂ ವಾಮದೇವಯ್ಯನವರ ದ್ವಾರಾ ತಲಪಿರುತ್ತದೆ

ಕಾಕಕಾವಹಳ್ಳಿ ತಾ॥ ದೊಡ್ಡ ಮುದವಾಡಿಗ್ರಾಮದಲ್ಲಿರುವ, ಪಟೇಲ್ ಚನ್ನಬಸವನವರು ತಿವಿಲೇಖಾಕ್ಷರ ಮೆಳ್ಳೆ 600 ರೂ. ಬೆಲೆ ಬಾಳುವ ಭೂಮಿಯನ್ನು ದಾನ ಮಾಡಿದ ಸಮಯದಲ್ಲಿ ಪ್ರಭಾಪೂರಣತಾಕ್ಕೈಶ್ವರ ಸನುರ್ಪಸಿದ 1 ರೂ ಯು ಮಃ॥ ರಾಗಿ ದೊಡ್ಡಬ್ಬೆ ಸಿ ಎಂ. ಮಹಾದೇವ ಇವರ ದ್ವಾರಾ ತಲಪಿರುತ್ತದೆ.

ಈ ಮೇಲ್ಕಂಡ ಮಹಾಕಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಶಿಕ್ಷಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತ ಶಿಖಾಮಣಿ

ವೀರಶೈವರ ಮಧ್ಯೆ ಪ್ರಧಾನವಾಗಿರುವ ಪ್ರತಿಯೊಬ್ಬ ನಿಗೂ ಸಿದ್ಧಾಂತವು ಬಹಳ ಪ್ರಾಮಾಣಿಕವಾದ ಪುಸ್ತಕ ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುಗಳಾಕಾಶ ರ್ಯರು ಜಗದ್ವಿಖ್ಯಾತರಾದ ಆರ್ಷೇಯರು ಉಣಿಸಿದಂತೆ ವೀರಶೈವಮತಕ್ಕೆ ಮೂಲಸ್ತಂಭವಾದ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಈ ಗ್ರಂಥವು ಈಗ ಸುಮಾರು ೩೫ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರಿಂ** ಆರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢ ಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯುತ್ತಿಲ್ಲಿಲ್ಲ ಇದಕ್ಕೆ ಕೊರತೆಯನ್ನು ದೂರಮಾಡುವ್ದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿದೋಡನೆಯೇ ಗೂಢವಾದ ಸಂಸ್ಕೃತದ ಮಂತ್ರತಂತ್ರಗಳ ಬಗೆಗೆ ಇದ್ದ ಭಯವು ಪರಿಹಾರವಾಗಿ ಅನುಷ್ಠಾನಕ್ಕಾಗಿ ಒಂದು ಶ್ರದ್ಧಾಮಿಶ್ರಿತವಾದ ವಿಶ್ವಾಸವೂ ಹುಟ್ಟುವುದೆಂಬುದರಲ್ಲಿ ಸಂಶಯವಿಲ್ಲ. ಈ ಗ್ರಂಥವು ಬಿಡುಗಡೆಯಾಗಿ ಕೆಲವೇ ದಿನಗಳಲ್ಲಿ ಸರ್ವರಿಂದಲೂ ಮಹಾಶ್ಲಾಘನೆಗೆ ಪಾತ್ರವಾಗಿ ಬಿಟ್ಟಿದೆ ಈ ಗ್ರಂಥದಲ್ಲಿ ಸಿದ್ಧಾಂತವನ್ನು ಸಾರವಾಗಿ ವಿವರಿಸಿ ಅನೇಕ ಚಿತ್ರಗಳನ್ನೂ ಕೊಟ್ಟಿರುವುದು ಈ ಗ್ರಂಥವು ಸುಮಾರು ೩೫೦ ಪುಟಗಳಷ್ಟಿದ್ದು ಸುಂದರವಾದ ಕಾಗದ ಮತ್ತು ಅಚ್ಚಿನಿಂದ ಕೂಡಿದೆ. ಬೆಲೆ ೨ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀವೀರ ಕಾಚಾರ್ಯರ ಲಿಂಗಾವತಿ ವರ ಫೋಟೋ (ನಾನಾವಿಧವಾದ ಗಳಿಂದ ಮುದ್ರಿತವಾಗಿದೆ) ಸೈಜು ೧೪ × ೧೦ ಬೆಲೆ ೦—೬—೦

ಶ್ರೀಜಗದ್ಗುರು ರಾಜ ಯರು ಪಂಚಮಸಾಲಿಗಳಿಗೆ ಶಿವಜ್ಞಾನವನ್ನು ಉಪದೇಶಿಸಿದ ಫೋಟೋ ೦—೪—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಿವರ ಫೋಟೋ ಸೈಜು ೧೪ × ೧೦ ಬೆಲೆ ೧೯೪ ೦—೪—೦

" " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನಿಸ್ವಾಮಿಗಳವರಿಗೆ ಶಿವಾಚಾರ್ಯರು ಓಂಗರ್ಭದಿಂದ ಆವತಾರವಿರುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವ ಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಪಂಡಿತಾಚಾರ್ಯರಿಗೆ ಚಂದ್ರಸೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಎಳೇವಯಸಿನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧವಣ್ಣದ್ದು) ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀವಿಂಧ್ಯ ಶ್ರೀ ಜಗದ್ಗುರುಗಳು ಕರುಣಿಧರ್ಮದಾನಮಾಡುವ ಫೋಟೋ ೦—೧—೬

ಶ್ರೀಮದುಜ್ಜಯಿನಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ಕ್ಕೆ ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪ಕ್ಕೆ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾರೂಢ ಅತ್ಯಂತ ಸುಂದರವಾದ ಫೋಟೋ ೧೪ಕ್ಕೆ ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಸಿಂಹಾಸನಾರೂಢ ಅತ್ಯಂತ ಪ್ರಾಚೀನ ಸುಂದರ ಫೋಟೋ ೧೪ಕ್ಕೆ ೦—೧—೬

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀವಿಶ್ವಾರಾಧ್ಯರವರು ವಿರಾಜಿಸುತ್ತಿರುವ ಫೋಟೋ ೦—೧—೬

ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆ ವೇರಿದ ರಂಭಾಪುರೀ ಜಗದ್ಗುರುಗಳ ಅದ್ದೂರಿಯ ಮೆರವಣಿಗೆಯ ಫೋಟೋ ೦—೧—೬

ಶ್ರೀಜಗದ್ಗುರು ರಂಭಾಪುರೀ ಜಗದ್ಗುರು ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೩—೦

ಸಮರ್ಪಕವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ
ಬಸವದಿನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ..	೩ ಆಣೆ
ಶಿವಕಥಾವಿಲಾಸ	೩ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೩ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ ...	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ .	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪಟಪಂಡಿತಾರಾಧ್ಯರ ಕಾಲನಿರ್ಣಯ ...	೪ ಆಣೆ
ವೈಷೋಪನಿಷತ್ಸಂಗ್ರಹ (ಸಂಸ್ಕೃತ) ..	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ಯಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ ..	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಚನಶಿವಾಚಾರ್ಯಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ ..	೧೭ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ವ್ಯಾಪ್ತಿನತ್ವ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತಸಾಮಪಾ ೩ನೆಯ ಆವೃತ್ತಿ)	೧।। ರೂ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧।। ರೂ
ವೀರಶೈವರತ್ನ (ಇನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪದ್ಯದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ) ...	೨ ರೂ
ಶಿವಾಗಮಸಂಗ್ರಹ (ಚಂಪಕ್ಕಾನಾಗಮ-ಕಾಮಿಕಾಗಮ-ಮುಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡ ಪದ್ಯವ್ಯಾಖ್ಯಾನ ೧೩೪೪ ಪುಟ) ...	೮ ರೂ
A brief life-sketch of Pandit Sri Kashinatha Shastriyi (*English*)	4 As
The Philosophical Aspect of Viraasaivism (*English*)	8 As
Speeches by Pandit Shri Kashinatha Shastriyi (*English*)	12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಆ
ವೀರಶೈವರತ್ನ (ಮರಾಠಿ)	೧ ರೂ.
ಸಚ್ಚಾರಾಯಣೋಪನಿಷತ್ (ವೀರಶೈವಾಚ್ಯ-ಸಂಸ್ಕೃತ)	೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) ..	೩ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಾಕ್ಷರಜಪಕರ್ತಾರ ಪಂಚಾಸ್ಯಪೀಠಾಧಿಪರ । ಪಂಚಕ್ಲೇಶವಿನಾಶಕರ ಪರಶಕ್ತ್ಯೀಪಂಚಲಿಂಗೋದ್ಭವರ ॥
ಪಂಚಾಚಾರನಿಯಾಮಕರ ಪರಿಪಸ್ಪಂಚಾಕ್ಷರೀಬೋಧಕರ । ಪಂಚಾಚಾರ್ಯಜಗದ್ಗುರೂತ್ತಮರವರ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ಏ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಏಪ್ರಿಲ್ ೧೯೪೮ [ಸಂಚಿಕೆ ೫೦

ಶ್ರೀ ಜಗದಾಚಾರ್ಯರ ಜಯಂತೀಮಹೋತ್ಸವಗಳು

ಶ್ರೀ ಕಾಶೀಕ್ಷೇತ್ರ

ಕಾಶೀ ಶ್ರೀ ಜ್ಞಾನಸಿಂಹಾಸನ ಮಹಾಮಠದಲ್ಲಿ ಪದ್ಧತಿಯಂತೆ ಮಹಾಶಿವರಾತ್ರಿಯ ಮಹೋತ್ಸವವೂ ಶ್ರೀಜಗದ್ಗುರು ವಿಶ್ವಾರಾಧ್ಯ ಜಯಂತೀಮಹೋತ್ಸವವೂ ಅತ್ಯಂತ ವಿಜೃಂಭಣೆಯಿಂದ ನೆರವೇರಿದವು. ಅದಿನ ಬ್ರಾಹ್ಮಮುಹೂರ್ತದಲ್ಲಿ ಎಲ್ಲಿ ಜಗದ್ಗುರು ಶ್ರೀ॥ ಷ॥ ಬ್ರ॥ ವಿಶ್ವೇಶ್ವರಶಿವಾಚಾರ್ಯಸ್ವಾಮಿಗಳವರು ಪ್ರಾತಃಕಾಲ ಪದ್ಧತಿಯಂತೆ ಗಂಗಾಸ್ನಾನ ವಿಶ್ವನಾಥ ದರ್ಶನಾದಿಗಳನ್ನು ವಿಧ್ಯುಕ್ತವಾಗಿ ನೆರವೇರಿಸಿದರು. ಪ್ರಾತಃಕಾಲ ೬ ಗಂಟೆಗೆ ಶ್ರೀ ವಿಶ್ವಾರಾಧ್ಯರ ಉತ್ಸವ ಮೂರ್ತಿಗೆ ರುದ್ರಾಭಿಷೇಕವೂ ಸಪ್ತಸ್ತುತಿಲಕ್ಷಾರ್ಚನೆಯೂ ನಡೆದವು. ೧೧ ಗಂಟೆಗೆ ವಿಶ್ವಾರಾಧ್ಯ ಮೂರ್ತಿಯ ರಜತ ರಥೋತ್ಸವವು ಮಹಾ ವೈಭವದಿಂದ ಆರಂಭವಾಯಿತು ಈ ಸಾರಿ ಗೌರೀಶಂಕರ ಮತ್ತು ಶಿವಾನಂದ ಯಾತ್ರಾ ಕಂಪನಿಯವರು ಬಂದುದರಿಂದ ಜನಸಮುದಾಯವು ವಿಶೇಷವಾಗಿತ್ತು ಆನೆ ಕುಮರೆಗಳಿಂದಲೂ, ದೇಶವಿದೇಶೀಯ ವಾದ್ಯಗಳಿಂದಲೂ, ಸುಮಂಗಲೆಯರ ಮಂಗಳಾನಂದಿಂದಲೂ, ಪಂಚಾಚಾರ್ಯ ರ ಜಯ ಜಯಕಾರ, ಶಿವಭಜನೆ, ವೇದಘೋಷಾದಿಗಳಿಂದಲೂ ಮಹೋತ್ಸವವು ರಾಜಬೀದಿಗಳಲ್ಲಿ ಹೊರಟು ನೋಡುವವರ ಕಣ್ಮನಗಳನ್ನು ತಣಿಸಿ ೪ ಗಂಟೆಗೆ ಮಹಾ ನೈವೇದ್ಯ ತಲ್ಪಿತು.

ಆಮೇಲೆ ಸಮಸ್ತ ಯಾತ್ರಿಕರ ಶಿವಪೂಜಾದಿಗಳು ನೆರವೇರಿದವು ೭ ಗಂಟೆಗೆ ಭವ್ಯವಾದ ಜ್ಞಾನಮಂದಿರದಲ್ಲಿ ಸಭೆ ಜರುಗಿತು ಶಿವಯೋಗ, ಶಿವಭಕ್ತಿ, ಧರ್ಮ, ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಮಹಿಮೆ ಮುಂತಾದ ವಿಷಯಗಳನ್ನು ಕುರಿತು ವೇ॥ ಸೋಮಶೇಖರಶರ್ಮರು ಬೀದರು, ವೇ॥ ಗಂಗಾಧರಶಾಸ್ತ್ರಿಗಳು ಆನುಗೊಂಡ, ಶ್ರೀ॥ ಷ॥ ಬ್ರ॥ ಪಂಚಾಕ್ಷರಶಿವಾಚಾರ್ಯರು ವೈರಾಗಕರ, ಶ್ರೀ॥ ಷ॥ ಬ್ರ॥ ಸಿದ್ಧರಾಮ ಶಿವಾಚಾರ್ಯರು ರೌದ್ಧಕುಂದಿ ಮೊದಲಾದವರ ಭಾಷಣಗಳಾದವು ಆಮೇಲೆ ಭಾವಿ ಜಗದ್ಗುರುಗಳವರ ಮನೋಹರವಾದ ಉಪದೇಶವಾಣಿ ಸಭೆಯು ಸಮಾಪ್ತಿಗೊಂಡಿತು ಅಂದು ಶಿವರಾತ್ರಿ ನಿಮಿತ್ತವಾಗಿ ಸರ್ವರೂ ಜಾಗರಣವನ್ನು ಹೊಂದಿ ಕೈಲಾಸಸಮಂಟಪದಲ್ಲಿ ಆನಂದಾತಿರೇಕದಿಂದ ಶಿವಭಜನೆಗಳನ್ನು ನಡಿಸುತ್ತಿದ್ದರು

ಮರುದಿನ ಮಹಾ ಗಣಸಂತರ್ಪಣವು ನೆರವೇರಿತು ಆಮೇಲೆ ತಿನ್ನೆಳ್ಳ ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯ-ವಿಶ್ವಾಸ್ವಾಮಿಗಳವರ ಕಾರ್ಯಕಲಾಪ ಮತ್ತು ಸಾಮಾಜಿಕ ವಿಷಯಗಳನ್ನು ದ್ವೈತಿಸಿ ಸಭೆಯು ಉತ್ಸಾಹದಿಂದ ಪ್ರಾರಂಭವಾಯಿತು. ಮೊದಲು ವೇ॥ ಕೊಟ್ರಯ್ಯಸ್ವಾಮಿಯವರು ಕೂರಮಠ, ವೇ॥ ವಿರೂಪಾಕ್ಷಯ್ಯ ನವರು ಶಿರೂರು ಶ್ರೀಮತಿ ಲಿಂಬಾಬಾಯಿ ಮುಂತಾದವರ ಕೇತರನ ಭಾಷಣಗಳಾದವು ಒಳಕ ಸಾಹಿತ್ಯ ಶಿರೋಮಣಿ ವೇ॥ ಹಂ॥ ಸೋಮಶೇಖರಶರ್ಮರು ರಾಯಚೂರ ಇವರು " ವಿಶ್ವಾರಾಧ್ಯ ಸಂಸ್ಥಾನ ಮಠದ ಇತಿಹಾಸ ಎಂಬ ವಿಷಯದ ಮೇಲೆ ಭಾಷಣ ಮಾಡುತ್ತ ಕ್ರಿ॥ ಮಹಾನುಭಾವರ ಜೀವನದ ಕೆಲವು ಮುಖ್ಯ ಮಧುರ ಸನ್ನಿವೇಶಗಳನ್ನು ಒಣ್ಣಿಸಿದರು ಆಮೇಲೆ ಭಾವೀ ಜಗದ್ಗುರುಗಳವರು ಗಂಭೀರ ವಾಗಿಯೂ ವಿದ್ವತ್ಪೂರ್ಣ ವಾಗಿಯೂ ಉಪದೇಶಿಸುತ್ತ ತಾವು ಮುಂದೆ ಕೈಕೊಳ್ಳಲಿರುವ ಕಾರ್ಯಕ್ರಮಗಳನ್ನು ವಿವರಿಸಿ ಹಾಗೆ ಅನಸಮೂಹವು ಕರತಾಡನೆ ಜಯ ಜಯಕಾರಗಳಿಂದ ಆನಂದವನ್ನು ವ್ಯಕ್ತಗೊಳಿಸಿತು ಇದೇ ರೀತಿ ನಾಲ್ಕೈದು ದಿವಸಗಳ ವರೆಗೆ ಗಣಸಂತರ್ಪಣ, ಭಜನೆ, ಗಾನ ಕೇರ್ತನ ಭಾಷಣ, ಉಪದೇಶ, ಗೌರೀಶಂಕರ ಯಾತ್ರಾಕಂಪನಿಯ ಮ್ಯಾನೇಜರರಾದ ಶಿರೂರ ಮಾಪ್ತರರ ಚಿತ್ರಪ್ರದರ್ಶನ ಮೊದಲಾದ ಉತ್ಸವದ ಎಲ್ಲ ಕಾಯ ಕ್ರಮಗಳು ಸಾಂಗವಾಗಿ ನೆರವೇರಿದವು ಇದಲ್ಲೆಲ್ಲ ಬಾವೀ ಜಗದ್ಗುರುಗಳವರ ಕರ್ತವ್ಯದಕ್ಷತೆಯೇ ಮೂಲ ಕಾರಣವೆಂದು ಹೇಳ ಬೇಕಾಗಿದೆ

ಶಿವರಾತ್ರಿಯ ದಿನ ಪ್ರಸಾದವಿನಿಯೋಗದ ವ್ಯಯವನ್ನು ಶ್ರೀಮಂತ ನೀರಭಗವಂತರಾವ ಪಾಟೀಲ, ಚಾಕಸಿರ ಇವರು ಪೂರೈಸಿಕೊಂಡು ಅಕ್ಷಂತ ಕೃಪಿಕರವಾಗಿ ಜಯನಿಸಿದರು ಈ ಮಹೋತ್ಸವದಲ್ಲಿ ಶ್ರೀಮಂತ ಸಿದ್ಧರಾಮಪ್ಪನವರು ಬಿಜ್ಜರಗಿ ಸೂಲಾಪುರಕರ, ಶ್ರೀಮಂತ ಶಿವಲಿಂಗಪ್ಪನವರು ಹರಿಹರ, ಶ್ರೀ ಶಿವಾನಂದ ಯಾತ್ರಾ ಕಂಪನಿ ಮತ್ತು ಗೌರೀಶಂಕರ ಯಾತ್ರಾ ಕಂಪನಿಯ ಯಾತ್ರಿಕರು, ಮ್ಯಾನೇಜರರು ಮುಂತಾದವರು ವಿಶೇಷವಾಗಿ ಸೇವೆಯನ್ನು ಸಲ್ಲಿಸಿದರು ಇವರಿಗೆಲ್ಲ ಶ್ರೀ ಜಗದ್ಗುರು ವಿಶ್ವಾರಾಧ್ಯರು ನಿತ್ಯಮಂಗಲವಾಗಲಿ ಎಂದು ಹಾರೈಸುತ್ತೇನೆ

ಪ್ರತ್ಯಕ್ಷದರ್ಶಿ

ತುಮಕೂರು

ತುಮಕೂರು ವೀರಶೈವ ಮಂಡಲಿಯವರು ತರಳೇ ಪೇಟೆ ಶ್ರೀ ವೈಷಷ್ಟೇಶ್ವರ ದೇವಾಲಯದಲ್ಲಿ ತಾ॥ ೩೩ ೩ ೪೮ (ಮಂಗಳವಾರ) ಪ್ರಾತಃಕಾಲ ಶ್ರೀ ರೇಣುಕಾಚಾರ್ಯರ ಮೂರ್ತಿಗೆ ರುದ್ರಾಭಿಷೇಕಪೂರ್ವಕ ಅರ್ಚನಾದಿಗಳನ್ನು ವಿಧಿವತ್ತಾಗಿ ನಾಡಿಸಿದರು ಅದಿನ ಸಾಯಂಕಾಲ ವಿದ್ಯುದ್ದೀಪಗಳಿಂದ ವಿಶೇಷ ಶೋಭಾಯಮಾನವಾದ ಮಂಟಪದಲ್ಲಿ ಶ್ರೀ ರೇಣುಕರ ಮಂಗಲ ಮೂರ್ತಿಯನ್ನು ಮಂಡಿಸಿ ನಂದಿಧ್ವಜ ಸಹಿತವಾಗಿ ಬಾಣ, ಬಿರುದು ಮುಂತಾದ ವಿನೋದ ಪ್ರದರ್ಶನ ದೊಡನೆ ಮುಖ್ಯ ಮುಖ್ಯ ಪೇಟೆಗಳಲ್ಲಿ ಮಹೋತ್ಸವ ವೆಸ್ಸಿ ಅತ್ಯಂತ ವಿಜೃಂಭಣೆಯಿಂದ ಜರುಗಿಸಿದರು. ಭಕ್ತರು ತಮ್ಮ ತಮ್ಮ ಮನೆಗಳ ಮುಂದೆ ಜಗದಾಚಾರ್ಯ ತುರ್ತಿಗೆ ಫಲ ಪುಷ್ಪ ಹಾರಾದಿಗಳನ್ನು ಭಕ್ತಿಪೂರ್ವಕ ಸಮರ್ಪಿಸಿ ಕೃತಾರ್ಥರಾದರು ಉತ್ಸವದಲ್ಲಿ ಸಾವಿರಾರು ಜನರು ನೆರೆದು ಇಂದು ಕಣ್ಣಿನ ಹಬ್ಬವಾಯಿತೆಂದು ಜಯಘೋಷ ಮಾಡುತ್ತಿದ್ದರು ಜಯಂತಿ ಸಲವಾಗಿ ತಾ॥ ೩೭ ಶುಕ್ರವಾರ ೩೮ ಶನಿವಾರ ೩೯ ಭಾನುವಾರ ಈ ಮೂರು ದಿನಗಳು ಪ್ರತಿದಿನ ಸಾಯಂಕಾಲ ಕೋಟೆ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಕೇರ್ತನ ಕಂಠೀರವ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ಶಿವಕವಿ ಪಂಡಿತ ದೊಡ್ಡಬಳ್ಳಾಪುರದ ವೇ॥ ಶಿವದೇವ ಶಾಸ್ತ್ರಿಗಳವರಿಂದ ಏಬಿರಂಕರವಿಲಾಸ ವೈತ್ಯಪರೀಕ್ಷೆ, ರೇಣುಕವಿಜಯ ಚರಿತ್ರೆಗಳನ್ನು ಪಿಟೀಲು, ಕೊಳಲು, ತಬಲಾ ಮಂಜುಲವಾದ್ಯಗಳೊಡನೆ ಮಾಡಿಸಿದರು ಶಾಸ್ತ್ರಿಗಳು ತಮ್ಮ ಸರಸ ಕೇರ್ತನಗಳಿಂದ ಶ್ರೋತೃ ವೃಂದವನ್ನು ಆನಂದಗೊಳಿಸಿ ಯುಕ್ತಸಮ್ಮಾನವನ್ನು ಪಡೆದರು ಕೇರ್ತನಾಂತ್ಯದಲ್ಲಿ ಸ್ರಸಾದ ವಿನಿಯೋಗವಾಗಿ ಮಹಾಪ್ರಭುಗಳವರ ಶ್ರೇಯಃಪ್ರಾರ್ಥನೆಯೊಡನೆ ಜಯಂತೀ ಕಾರ್ಯವು ಪರಿಸಮಾಪ್ತಿಗೊಂಡಿತು

ಪ್ರತ್ಯಕ್ಷದರ್ಶಿ
ಎಸ್ ನಂಜುಂಡಯ್ಯ

ಜಮಖಂಡಿ

ಪ್ರತಿವರ್ಷ ಪದ್ಧತಿ ಪ್ರಕಾರ ಇಲ್ಲಿಯ ಮುತ್ತಿನ ಕಂಚೆ ಹಿರೇಮಠದಲ್ಲಿ ಇದೇ ಫಾಲ್ಗುನ ಶು॥ ೧೩ ಮಂಗಳವಾರ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಬಹು ವಿಜೃಂಭಣೆಯಿಂದ ನೆರವೇರಿತು ಪ್ರಾತಃಕಾಲ ಶ್ರೀ ರೇಣುಕರ ಮೂರ್ತಿಗೆ ಅಭಿಷೇಕ ಪೂಜಾ ಸಹಸ್ರಬಿಲ್ವಾರ್ಚನೆ ನಡೆಯಿತು ಪುನ: ಸಂಜೆ ೪ ಘಂಟೆಗೆ ಸಭೆ ಸೇರಿತು ಪ್ರಥಮದಲ್ಲಿ ಬಾಲಕಿಯರಿಂದ ಶ್ರೀ ರೇಣುಕರ ಮಂಗಲಗೀತೆಗಳು ಹಾಡಲ್ಪಟ್ಟವು ಬಳಕ ಮಹಾಧ್ಯಕ್ಷರಾದ ಶ್ರೀ। ಷ॥ ಬ್ರ॥ ಚರಮೂರ್ತಿಸ್ವಾಮಿಗಳು ಶ್ರೀ ರೇಣುಕರ ಆವ ತಾರ, ಅಗಸ್ತ್ಯಮುನಿಗಳಿಗೆ ಬೋಧಿಸಿದ ಷಟ್‌ಸ್ಥಲ ಸಿದ್ಧಾಂತ, ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೇ ಶ್ವರ ಲಿಂಗಪ್ರದಾನ, ಸೇರಕ್ಷಗರ್ವಹರಣ, ರುದ್ರಮಾರೀ ಶ್ವರ ಉಕ್ತಿಕ್ತಿ, ಶ್ರೀ ರೇಣುಕರ ಸೋಮವಾಳಲಿಂಗೈಕ್ಯ ಮೊದಲಾದ ವಿಷಯಗಳನ್ನು ಪರಸವಾಗಿ ಬೋಧಿಸಿದರು ಅನಂತರ ಶ್ರೀ ಚರಂತೆಯ್ಯಸ್ವಾಮಿ ಹಂಚಿನಾಳ ಇವರು, " ಮುಕ್ತಿಗೆ ಗುರುನಾಮವೇ ಅನಿವ್ಯನಾಮವು " ಎಂಬ ಬಗ್ಗೆ ಮನೋಹರವಾದ ವ್ಯಾಖ್ಯಾನ ಮಾಡಿದರು. ಆಮೇಲೆ ಮಂಗಲದೊಡನೆ ಸಭೆಯು ಸಮಾಪ್ತಿ ಗೊಂಡಿತು ಈ ಉತ್ಸವಕ್ಕೆ ಜಮಖಂಡಿ, ಕಡಣಿ, ಹಂಚಿನಾಳ ಗ್ರಾಮಗಳ ಭಕ್ತಮಾಹೇಶ್ವರರು ವಿಶೇಷ ವಾಗಿ ಬಂದಿದ್ದರು ಸರ್ವರಿಗೂ ಶ್ರೀ ರೇಣುಕರು ಮಂಗಲವನ್ನುಂಟುಮಾಡಲೆಂದು ಹಾರೈಸುವ,

ಉತ್ಸವಕಾಂಕ್ಷಿ

ಸಂಚಾಚಾರ್ಯಪ್ರಭಾ

೧೯೪೪೪ ನೆಯ ಏಪ್ರಿಲ್ ಶಾ॥ ೫ ನೆಯ ಸೋಮವಾರ

ಸಂಚಾಚಾರ್ಯರೂ ಅಷ್ಟಾವರಣಗಳೂ

ಭಸ್ಮರುದ್ರಾಕ್ಷಲಿಂಗಾ ಗುರ್ಜಂಗಸ್ಪರ್ಶಜಾತಃ
ಪಾದೋದಕಂ ಪ್ರಸಾದಶ್ಚ ಶಿವಾಷ್ಟಾವರಣಾನಿ ಹಿ।

ಎಂಬೀ ಶಿವಾಗಮೋಕ್ತಿಗನುಸಾರವಾಗಿ ಬ್ರಹ್ಮವಿದ್ಯಾಕಾಂಕ್ಷಿಗಳಾದ ವೀರಶೈವರಿಗೆ ಭಸ್ಮ, ರುದ್ರಾಕ್ಷ ಲಿಂಗ, ಗುರು ಮಂತ್ರ, ಜಂಗಮ, ಪಾದೋದಕ ಪ್ರಸಾದಗಳೆಂಬ ಎಂಟು ವಸ್ತುಗಳು ಮುಖ್ಯ ಸಾಧನಗಳಾಗಿರುವದರಿಂದ ಈ ಎಸ್ಟುಗಳು ಪ್ರತಿಯೊಬ್ಬ ವೀರಶೈವನೂ ಮುಕ್ತಿಯೆಂಬ ರಾಜಧಾನಿಯನ್ನು ಪ್ರವೇಶಿಸಲು ರಾಜಮಾರ್ಗಗಳಂತಿರುವುವು. ಈ ಎಂಟು ವಸ್ತುಗಳನ್ನು ಬಿಟ್ಟು ಯಾರು ಮೋಕ್ಷವನ್ನು ಬಯಸುವರೋ ಅವರ ಒಯ್ಯ ಕೆಯು ತಿರುಕನ ಒಯ್ಯಕೆಯಂತಾಗುವುದು. ಈ ಅಷ್ಟಾವರಣಗಳು ಬ್ರಹ್ಮವಿದ್ಯೆಗೆ ಅಂಗಭೂತಗಳೆಂದು ವೀರಶೈವ ಸಿದ್ಧಾಂತದಲ್ಲಿ ಸಂಪಟಸ್ಫೋಟನವಾಗಿ ಸಾರ್ವಜ್ಞಿಕರುವುದು. ಯಾರು ವರ್ಣಾಶ್ರಮಧರ್ಮಾಚರಣಾರಾಗಿರುವರೋ ಅವರಲ್ಲಿ ಈ ತಿಳಿವಳಿಕೆಯು ಸಂಭವಿಸುವದಿಲ್ಲ. ಏಕೆಂದರೆ ಅಷ್ಟಾವರಣಗಳು ವೈದಿಕರಲ್ಲಾದಿಯಾಗಿ ಇವು ವರ್ಣಾಶ್ರಮೋಚಿತಕಾರ್ಯಕ್ಕೆ ಸಂಬಂಧಪಟ್ಟ ಸಾಧನಸಿದ್ಧತೆಯ ಗಳಲ್ಲದೆ ವರ್ಣಾಶ್ರಮಧರ್ಮಾತೀತವಾದ ಬ್ರಹ್ಮವಿದ್ಯೆಯ ಪ್ರಾಪ್ತಿಗಲ್ಲ. ಆದುದರಿಂದ ವರ್ಣಾಶ್ರಮಧರ್ಮಗಳಲ್ಲಿ ಆಸಕ್ತಿಯುಳ್ಳವರಿಗೆ ಅಷ್ಟಾವರಣಗಳು ಅಪೇಕ್ಷಿತಫಲವನ್ನು ಕೊಡಲಾರವು. ಆದುದರಿಂದ ವೈದಿಕಾಷ್ಟಾವರಣಗಳಿಗಿಂತ ಲಿಂಗಾಯತರಲ್ಲಿ ಪ್ರಚಾರದಲ್ಲಿರುವ

ದಾವಣಗೆರೆ

ಇದೇ ಫಾಲ್ಗುಣ ಶು|| ೧೩ ಮಂಗಳವಾರ ೫೩ ೩ ಳಿ) ಪದ್ಮತಿಯ ಪ್ರಕಾರ ದಾವಣಗೆರೆಯ ಲ್ಲಿರುವ ಶ್ರೀಮದಭಿನವರೇಣುಕ ಮಂದಿರದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಅತ್ಯಂತ ಎಜ್ಜಭಣಿಕೆಯಿಂದ ನೆರವೇರಿಸಲ್ಪಟ್ಟಿತು. ಖ್ಯಾತಕಾಲ ಶ್ರೀ ರೇಣುಕರ ಲಿಂಗೋದ್ಭವಮೂರ್ತಿಗೆ ಪೋಡಶೋಪ ಚಾರಗಳಿಂದ ಪೂಜಾದಿಗಳು ನೆರವೇರಿದವು. ಒಳಕ ಗಂಜಕಲಶಯುಕ್ತವಾದ ಪಲ್ಲಕ್ತಿಯಲ್ಲಿ ಶ್ರೀ ಜಗದ್ಗುರು ರೇಣುಕರ ಲಿಂಗೋದ್ಭವಮೂರ್ತಿಯನ್ನು ಮೆರವ ಣಿಗೆಯಿಂದ ಮುಖ್ಯ ಬೀದಿಗಳ್ಲಲ ಮಂಗಳವಾದ್ಯ ವೈಭವದೊಡನೆ ಮೆರವಣಿಗೆಯು ನೆರವೇರಿತು. ಮಧ್ಯಾಹ್ನ ಆಚಾರ್ಯ ಮೂರ್ತಿಗೆ ರುದ್ರಾಭಿಷೇಕವು ವೇ|| ಜೆಜ್ ಎಂ ಶಿವಾನಂದಸ್ವಾಮಿಶಾಸ್ತ್ರಿಗಳಿಂದ ನೆರವೇರಿಸಲ್ಪಟ್ಟಿತು. ಸಾಯಂಕಾಲ ೬ ಳಿ ಟಿಗೆ ಶ್ರೀಮಾನ್ ಎಂ ಬಿ ರಾಜಪ್ಪ ಬಿ ಇ ಅಸಿಸ್ಟಂಟ್ ಇಂಜಿನಿಯರ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶ್ರೀಮಾನ್ ಎಂ ಅಂದಪ್ಪನವರ್ ಎಲ್ ಎಲ್ ಬಿ ಇವರು ಗುರುತ್ರಿಯನ್ನು ತಮ್ಮ ಮಂಜುಳವಾದ ಕಂಠದಿಂದ ಹಾಡಿ ಸಭಿಕರನ್ನು ಆನಂದಗೊಳಿಸಿದರು. ಬಳಕ ವೇ|| ಎಸಾನಿಮೆದ ಶಾಂತವೀರಾರ್ಯರು ಶ್ರೀ ಜಗದ್ಗುರು ಸಂಚಾಚಾರ್ಯರ ಮಹಿಮೆಯನ್ನು ಕುರಿತು ಭಾಷಣ ಮಾಡಿದರು. ಅನಂತರ ಸ್ಕೂಲ್ ರೀಂಜ್ ಇನ್‌ಸ್ಪೆಕ್ಟರ್ ವೇ|| ರುದ್ರಯ್ಯನವರು ಬಿ ಎ ಇವರು ವೀರಶೈವ ಧರ್ಮದ ಪ್ರಾಚೀನತೆ ಶ್ರೇಷ್ಠತೆ ಮೊದಲಾದವುಗಳನ್ನು ವಿವರಿಸುತ್ತ ವೀರಶೈವರಲ್ಲಿಯೂ ವೀರಭವಿ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಭಕ್ತಿಯನ್ನಿಟ್ಟು ಸಮಾಜ ವನ್ನು ಅಭಿವೃದ್ಧಿಮಾಡಬೇಕೆಂದು ಸಹಕ್ಕಪೂರ್ಣ ಬುಣವನ್ನು ನೂಡಿದರು. ಮೂಗೂಡುಮರದ ಸವಾಶಿವಯ್ಯನವರ ಮತ್ತು ಇವರ ಸಂಗಿತ ಮಂಡಳಿಯವರ ಇಂಪಾದ ಸಂಗೀತ ಮತ್ತು ಶಿವಭಜನೆಯಾದ ನೋಲೆ ಅಧ್ಯಕ್ಷರು ಜಗದಾಚಾರ್ಯರ ಜಯಂತಿ ಮಹೋತ್ಸವಗಳನ್ನಾಚರಿಸಿ ವೀರಶೈವ ತತ್ವ ಪ್ರಸಾರ ಮಾಡಿ ಧರ್ಮಜಾಗೃತಿಯನ್ನುಂಟುಮಾಡುವುದು ಈ ನ್ನಾತ್ಯಕ ಕಾಲದಲ್ಲಿ ಅತ್ಯಾವಶ್ಯಕವೆಂದೂ ಏಕಮತ್ಯ ವನ್ನು ವೃದ್ಧಿಗೊಳಿಸಬೇಕೆಂದೂ ಭಾಷಣಗಳನ್ನಾಡಿದರು. ಬಳಕ ಮಹಾಮಂಗಳಾರತಿಯಾಗಿ ಶ್ರೀಮನ್ ಮಹಾರಾಜರವರ ಶ್ರೇಯಾ ಪ್ರಾರ್ಥನೆಯೊಡನೆ ಸಭೆಯು ನಿಸರ್ಜಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಸಂತೇಶಿವರ

ಶ್ರೀಮದ್ರಂಭಾಪುರೀಜಗದ್ಗುರುಗಳವರು ಚನ್ನರಾಯ ಪಟ್ಟಣ ತಾಲೂಕು ಸಂತೇಶಿವರ ಗ್ರಾಮಕ್ಕೆ ತಾ|| ೧೪ ೩ ಳಿ ೪೫ ಭಾನುವಾರ ದಯಮಾಡಿಸಿದರು

ಈ ಗ್ರಾಮದ ಗರುಭಕ್ತರು ಶ್ರೀ ಸನ್ನಿಧಿಯವರನ್ನು ತಮ್ಮ ತಮ್ಮ ಮನೆಗೆ ದಯಮಾಡಿಸಿಕೊಂಡು ಪಾದಪೂಜೆಮಾಡಿ ಯಥಾಶಕ್ತಿ ಕಾಣಿಕೆಯನ್ನು ಸಲ್ಲಿಸಿ ಧನ್ಯರಾಗುತ್ತಿರುವರು. ಈ ಸಮಯದಲ್ಲಿ ಶ್ರೀಮಜ್ಜಗದ್ಗುರು ರೇಣುಕರ ಜಯಂತ್ಯುತ್ಸವವನ್ನು ಗ್ರಾಮದ ಭಕ್ತಾದಿಗಳು ಮಹಾ ಭಕ್ತಿಯಿಂದ ನೆರವೇರಿಸಿದರು. ತಾ|| ೫ ೩ ಳಿ ನೇ ಮಂಗಳವಾರ ದಿವಸ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕರ ಲಿಂಗೋದ್ಭವ ಮೂರ್ತಿಗೆ ಮಹಾರುದ್ರಾಭಿಷೇಕವು ರಾಜೋಪಚಾರ ದೊಡನೆ ನೆರವೇರಿ, ಭಕ್ತಮಾಹೇಶ್ವರರಿಗೆ ಅನ್ನಸಂತರ್ಪಣೆಯಾಯಿತು ಸಾಯಂಕಾಲ ಶೃಂಗಸಿದ ಪುಷ್ಪ ರಥದಲ್ಲಿ ಶ್ರೀ ಜಗದಾಚಾರ್ಯರ ಭಾವಪಟವನ್ನು ಇಟ್ಟು ಸಕಲ ಬಿರುದಾವಳಿಗಳಿಂದಲೆ ಅತ್ಯಂತ ವೈಭವ ದಿಂದ ಮಹೋತ್ಸವವು ನೆರವೇರಿಸಲ್ಪಟ್ಟಿತು

ಅನಂತರ ಶ್ರೀ ಜಗದ್ಗುರುಗಳವರ ಸನ್ನಿಧಾನದಲ್ಲಿ ಸಭೆ ಸೇರಿತು. ಸಂಸ್ಥಾನದ ವಿಜಂಟರಾದ ವೇ|| ಪಂ|| ಶಿಂಧಿಶ್ವರಶಾಸ್ತ್ರಿಗಳು ವೀರಶೈವ ಮತದ ಪ್ರಾಚೀನತ್ವ, ವೀರಶೈವ ಮತಸ್ಥಾಪಕರು ಇತ್ಯಾದಿ ವಿಷಯಗಳಮೇಲೆ ಭಾಷಣಮಾಡಿದರು ಬಳಕ ಶ್ರೀ ಜಗದ್ಗುರುಗಳವರು ಶ್ರೀಶಾಚಾರ್ಯರ ಸಂಚಾರ, ಅವರ ಕರ್ತವ್ಯ, ಶ್ರೀ ಜಗದ್ಗುರು ರೇಣುಕಾಚಾರ್ಯರ ಲೀಲೆ ಇತ್ಯಾದಿ ವಿಷಯ ಗಳ ಮೇಲೆ ಅಪ್ಪಣೆಕೊಡಿಸಿ ಸವರನ್ನೂ ಸಂತೋಷ ಪಡಿಸಿದರು ಆಮೇಲೆ ಶ್ರೀ ಜಗದ್ಗುರು ರೇಣುಕಾ ಚಾರ್ಯ ರ ಜಯಘೋಷದೊಡನೆ ಸಭೆಯು ಮುಕ್ತಾಯ ವಾಯಿತು ಜಯಂತಿಯ ದಿನದಲ್ಲಿ ಆದ ಸಂತರ್ಪ ಣೆಯ ಖರ್ಚು ಉಳ್ಳವರು ಖುಷಿಗನ್ನು ಶ್ರೀ ಹರಗುರು ಸೇವಾನಿರತರೂ ಪ್ರಸಿದ್ಧ ಸುನೆತಿನವರೂ ಹುಟ್ಟಿದವರೂ ಆದ ಶ್ರೀಮಾನ್ ಸಂಜೇಗೌಡರ ಮಕ್ಕಳು ಸಿದ್ಧೇ ಗೌಡರು ವಹಿಸಿಕೊಂಡು ಜಗದಾಚಾರ್ಯ ರ ಕೃಪಾಶೀ ರ್ವಾದಕ್ಕೆ ಪಾತ್ರರಾದರು

ಓರ್ವ ಗುರುಭಕ್ತ

ಬಿಡದಿ

ತಾ|| ೩೦ ೩ ಳಿ ೪೫ ಮಂಗಳವಾರ ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಬಿಡದಿ ಗ್ರಾಮದಲ್ಲಿರುವ ಆಚಾರ್ಯತತ್ವಪ್ರಕಾಶಕ" ರೇಣುಜ್ಞಾನಶಾಸ್ತ್ರಿಗಳವರು ತಮ್ಮ ಶ್ರೀ ಶಿವಾನಂದಶಾಲೆ ನಲ್ಲಿ ವೈಭವದಿಂದ ನೆರವೇರಿಸಿದರು ಅದಿನ ಪ್ರಾತಃಕಾಲ ಶ್ರೀ ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿ ಯನ್ನು ನೇತ್ರಾನಂದಕರವಾಗಿ ತೃಂಗಸಿಲ್ಪಟ್ಟ ಮಂಟಾ ಪದಲ್ಲಿ ಮೂರ್ತಗೊಳಿಸಿ ಪೋಡಶೋಪಚಾರಗಳಿಂದ ಅಚಿ ಸಿದನಂತರ ಮಧ್ಯಾಹ್ನ ಸ್ವಾಮಿಯ ದರ್ಶನಾರ್ಥ ವಾಗಿ ಆಗಮಿಸಿದ ಸರ್ವರನ್ನು ಮಧುರ ಪಾಕೀಯದಿಂದ ತೃಪ್ತಗೊಳಿಸಲಾಯಿತು ಸಾಯಂಕಾಲ ೬ ಗಂಟೆಯ ಸುಮಿಗೆ ಶ್ರೀ ಜಗದಾಚಾರ್ಯಮೂರ್ತಿ ಯ ಸಮ್ಮುಖ ದಲ್ಲಿ ನೆರೆದ ಸಭೆಯಲ್ಲಿ ಶ್ರೀ ಜಗದ್ಗುರು ಗಳ ಚರಿತ್ರೆ ಲೀಲೆಗಳನ್ನು ಕುರಿತು ತಾಚಾರ್ಯತತ್ವ ಪ್ರಕಾಶರು ಭಾಷಣಮಾಡಿದರು ಆಮೇಲೆ ಜಗದಾಚಾರ್ಯರ ಜಯಜಯಕಾರದೊಡನೆ ಜಯಂತಿಯ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಹಾರನಹಳ್ಳಿ

ಶಿವಮೊಗ್ಗ ಜಿಲ್ಲೆ ಹಾರನಹಳ್ಳಿಯಲ್ಲಿರುವ ವೇ|| ಗುಬ್ಬೀ ಶಿವರುದ್ರಶಾಸ್ತ್ರಿಗಳವರು ತಮ್ಮ ಗೃಹದಲ್ಲಿ ಇದೇ ಫಾಲ್ಗುಣ ಶುದ್ಧ ೧೩ (೨೩ ೩ ೪೪) ಮಂಗಳವಾರ ಪ್ರಾತಃಕಾಲ ಶ್ರೀಜಗದ್ಗುರು ರೇಣುಕಾಚಾರ್ಯ ಭಗವ ತ್ಪಾದರವರ ಜಾವಚಿತ್ರವನ್ನು ತಂರುತಿ-ರತ್ನಾದಿಗಳಿಂದ ಲಂಕೃತಮಾವ ಭವ್ಯಮಂಟಪದಲ್ಲಿ ಮೂರ್ತಗೊಳಿಸಿ ವಿಧುಕ್ತರಾಗಿ ಪೂಜಿಸಿ ವಂದಿಸಿ, ನುಸಿಸಿ ನಂತ ರ ಜಾರ್ಯರ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸಿ, ಮಂಗಲವನ್ನು ಪಾಡಿ ಪ್ರಸಾದವನ್ನು ವಿನಿಯೋಗಿಸಿ ಮಧ್ಯಾಹ್ನ ಗಣವರ್ಗರನ್ನು ವೃಷ್ಟಾನ್ನಭೋಜನದಿಂದ ಸಂತೃಪ್ತಿಗೊಳಿಸಿ ಸಾಯಂ ಕಾಲ ಧರ್ಮಸಂಸ್ಥಾಪನಾ ಚಾರ್ಯರ ಜಯಂತಿಯ ಮಹೋದ್ದೇಶ ಎಂಬ ವಿಷಯ ದಲ್ಲಿ ಆರ್ಮಿಳವಾದ ಭಾಷಣವನ್ನು ಮಾಡಿ ಶ್ರೋತೃ ಗಳನ್ನು ಧನ್ಯರನ್ನಾಗಿ ಮಾಡಿದರು

ಗುರುಶಿಂಕರ

ಶಿಂಧನೂರು

ರಾಯಚೂರು ಡಿ|| ಶಿಂಧನೂರು ನಗರವಾಸಿಗಳಾದ ವೇ|| ಗುರುಸಿದ್ಧಯ್ಯನವರು ತಮ್ಮ ಮಕ್ಕಳಿಗಾ ಗಿ ೯ ಳಿ ೨೯ ನೇ ಮಾಹಾವಾರಾಶ್ಯ ದಿವಸ ಜಗದಾ ಚಾರ್ಯರ ಜಯಂತೀ ಮಹೋತ್ಸವವನ್ನು ಮಹಾ ವೈಭವದಿಂದ ನೆರವೇರಿಸಿದರು ಈ ಕಾರ್ಯಕ್ಕಾಗಿ ಗುರು ಸಿದ್ಧಯ್ಯನವರು ತಮ್ಮ ಗುರುಗಳಾದ ರೌಡಕುಂದಿ ಹಿರೇಮಠದ ಶ್ರೀ ಶ್ರೀ ಬ್ರಹ್ಮ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳವರನ್ನು ದಯಮಾಡಿಸಿಕೊಂಡಿದ್ದರು ಮಹಾ ಶಿವರಾತ್ರಿಯ ದಿವಸ ಜಗದಾಚಾರ್ಯ ಮೂರ್ತಿಗಳಿಗೆ ರುದ್ರಾಭಿಷೇಕ ಸಹಸ್ರಬಿಲ್ವಾರ್ಚನೆಗಳು ನೆರವೇರಿದವು ಅನಂತರ ಶ್ರೀಗಳನರ ಅಶೃತೆಯಲ್ಲಿ ಸಂಗೀತರತ್ನ ಪಂ|| ಗವಾಯಿ ಸಂಗಯ್ಯನವರು ಹಂಗಣಕಲ್ಲು, ಇವರು "ಶ್ರೀಯಾಳಸತ್ಪಪರಿಪ್ಸೆ" ಎಂಬ ಶಿವಕೀರ್ತನೆಯನ್ನು ಮಾಡಿ ಸರ್ವರನ್ನು ಆನಂದಗೊಳಿಸಿದರು ಶ್ರೀಗಳವರು "ಶಿವಾದ್ವೈತ" ಎಂಬ ವಿಷಯವಾಗಿ ಮನೋಹರವಾದ ಭಾಷಣಮಾಡಿದರು ಜಗದಾಚಾರ್ಯರ ಮಂಗಳ ಗೀತಾಶ್ರಾರ್ಥನಾ ನೆವದಲಾವುಗಳು ಜರುಗಿ ಪ್ರಸಾದ ವಿನಿಯೋಗಾನಂತರ ಸಭೆಯು ಸಮಾಪ್ತಿಗೊಂಡಿತು

ಪಂಪನಗೌಡ ಪೋಲೀಸ್ ಪಾಟೀಲ್, ರೌಡಕುಂದಿ

ಗರಗ

ಇದೇ ಫಾಲ್ಗುಣ ಶುದ್ಧ ೧೩ ತಾ|| ೩೩ ೩ ಳಿ ೪೫ ನೆಯ ದಿವಸ ಗರಗ ಗ್ರಾಮದಲ್ಲಿರುವ ಮಿ|| ರಾ|| ಒಳಿಗಾರ ವೀರಪ್ಪನವರು ತಮ್ಮ ಗೃಹದಲ್ಲಿ ಶ್ರೀರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಮಹಾವೈಭವದಿಂದ ನೆರವೇರಿಸಿದರು ವೇ|| ಚನ್ನಮಲ್ಲಯ್ಯಸ್ವಾಮಿ ಹಿರೇಮಠ ಇವರು ಜಗದಾಚಾರ್ಯರ ಭಾವಚಿತ್ರಕ್ಕೆ ರುದ್ರಾಭಿಷೇಕ ಪೋಡಶೋಪಚಾರ ಪೂಜಾದಿಗಳನ್ನು ನೆರವೇರಿಸಿದ ನಂತರ ಮಧ್ಯಾಹ್ನ ಸ್ವಾಮಿಯ ದರ್ಶನಾರ್ಥವಾಗಿ ಆಗಮಿಸಿದ ಸರ್ವರನ್ನು ಮಧುರ ಪಾಕೀಯದಿಂದ ತೃಪ್ತಗೊಳಿಸಲಾಯಿತು ಸಾಯಂಕಾಲ ೬ ಗಂಟೆಯ ಸುಮಿಗೆ ಶ್ರೀ ಜಗದಾಚಾರ್ಯಮೂರ್ತಿಯ ಸಮ್ಮುಖದಲ್ಲಿ ನೆರೆದ ಸಭೆಯಲ್ಲಿ ಶ್ರೀ ಜಗದ್ಗುರು ಗಳ ಚರಿತ್ರೆ ಲೀಲೆಗಳನ್ನು ಕುರಿತು ತಾಚಾರ್ಯತತ್ವ ಪ್ರಕಾಶರು ಭಾಷಣಮಾಡಿದರು ಆಮೇಲೆ ಜಗದಾಚಾರ್ಯರ ಜಯಜಯಕಾರದೊಡನೆ ಜಯಂತಿಯ ಕಾರ್ಯವು ಸಮಾಪ್ತಿಗೊಳಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ಸ್ವೀಕಾರ

ಧಾರವಾಡ ಡಿ|| ಗರಗಗ್ರಾಮದಲ್ಲಿರ ವ ಮಿ|| ರಾ|| ಬಳಿಗಾರ ವೀರಪ್ಪನವರು ಫಾಲ್ಗುಣ ಶುದ್ಧ ೧೩ ದಿವಸ ತಮ್ಮ ಗೃಹದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಮಹಾ ವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿ ಗೆಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಮುಧೋಳ ಸಂಸ್ಥಾನಕ್ಕೆ ಸೇರಿದ ಎಡಹಳ್ಳಿ ಹಿರೇಮಠದಲ್ಲಿ ತಾ|| ೨೫ ೩ಳಿ ೪೫ ಮಂಗಳವಾರ ದಿವಸ ಮುಧೋಳಸ್ಥಾಮದ ಚಿ|| ಪಟ್ಟದಯ್ಯ ಉದಾಸಮಠ ಈ ವಟುವಿಗೆ ನೆಟ್ಟಿಗುಡ್ಡದ ಶ್ರೀಪಟ್ಟದಸ್ವಾಮಿಗಳವರ ಗುರುತ್ವದಲ್ಲಿ ಮಾಹೇಶ್ವರ ದೀಕ್ಷಾಸಮಾರಂಭವು ನೆರವೇರಿದ ಸಮಯದಲ್ಲಿ ವಟುವಿನ ಕಾಕ್ಯಂದಿರಾದ ವೇ|| ಬಸವಲಿಂಗಯ್ಯನವರು ಹಿರೇಮಠ ಕಾಶಾ ಮಾಸ್ಟರ್, ಮುಧೋಳ ಇವರು ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಮಿ|| ರಾ|| ಒಸಪ್ಪ ನವರು ಕರಣೆ ಇವರ ದ್ವಾರಾ ತಲುಪಿರುತ್ತವೆ

ರಾಯಚೂರ ಡಿ|| ಸಿಂಧನೂರು ತಾ|| ಹೂಡೇವು ಗ್ರಾಮದಲ್ಲಿರುವ ಮುಕ್ಕಂಡಿ ಹಿರೇಮಠದ ವೇ|| ಶಿವ ಲಿಂಗಯ್ಯನವರಿಗೆ ಶಿವಮೊಗ್ಗ ಜಿಲ್ಲೆ ತೋಗರವಳ್ಳಿ ಮಠದ ಕೈ|| ವಿರೂಪಾಕ್ಷಯ್ಯನವರ ಪುತ್ರಿ ಚಿ|| ಸೌ|| ಸರ್ವಮಂಗಳಾದೇವಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ರೌಡಕುಂದಿ ಹಿರೇಮಠ ಪಟ್ಟಾಧ್ಯಕ್ಷ ಶ್ರೀಶಿವಯೋಗಿ ಶಿವಾಚಾರ್ಯರ ದ್ವಾರಾ ತಲುಪಿರುತ್ತವೆ

ಕಿತಲೂರು ತಾ|| ಗುರುಗದ ಹೆಲ್ಲಿ ವೀರಶೈವ ಬಾಲಿಕೆಯರು ವೇ|| ಯಜಮಾನ ದೊಡ್ಡಸಿದ್ಧಪ್ಪಯ್ಯನವರ ಗೃಹದಲ್ಲಿ ಶ್ರೀಜಗದ್ಗುರು ರೇಣುಕ ಜಯಂತಿಯನ್ನು ನೆರವೇರಿಸಿದ ಸಮುಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ವೇ|| ಆರ್ ಯಂ ಮಲ್ಲಿಕಾರ್ಜುನಾರಾಧ್ಯರ ಪುತ್ರಿ ಕುಂ|| ಸೌ|| ಶಾಂಭವೀ ದೇವಿಯ ದ್ವಾರಾ ತಲ್ಪಿರುತ್ತವೆ

ಪಾವಣಗೆಯಲ್ಲಿರುವ ಶ್ರೀಮದಭಿನವ ರೇಣುಕ ಮಂದಿರದಲ್ಲಿ ನೆರವೇರಿದ ಶ್ರೀಜಗದ್ಗುರು ರೇಣುಕಾ ಚಾರ್ಯ ಜಯಂತೀ ಮಹೋತ್ಸವ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ಮಿ|| ರಾ|| ಮಾಗಾಣಹಳ್ಳಿ ನಂಜುಂಡಪ್ಪನವರ ದ್ವಾರಾ ತಲುಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನಿತ್ತಿಯೆಂದು ಹಾರೈಸುತ್ತೀನೆ

ಧರ್ಮಪತ್ನಿಯವರು ಸಹಸ್ರಬಿಲ್ವಾರ್ಚನೆಯನ್ನು ಮಾಡಿದರು ಈ ಸಮಯದಲ್ಲಿ ಪ್ರಭೂಪ್ಪೇಷಕ್ಕೆಯ್ಕರ ತರಗಳು ಸಮರ್ಪಿಸಲ್ಪಟ್ಟವು ಜಗದಾಚಾರ್ಯರು ಮಹಾಭಕ್ತಿಸಂಪನ್ನರಿಂದ ಈ ದಂಪತಿಗಳಿಗೆ ಸಕಲ ಸನ್ಮಂಗಲಗಳನ್ನೀಯಲೆಂದು ಎ್ರರ್ಥಿಸುವ

ಓರ್ವ ಗುರುಭಕ್ತ

ಶಿಗ್ಗಾಂವಿ

ಧಾರವಾಡ ಡಿ|| ಶಿಗ್ಗಾವಿ ಹಿರೇಮಠದಲ್ಲಿ ಫಾಲ್ಗುಣ ಶುದ್ಧ ತ್ರಯೋದಶಿ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ಈ ಗ್ರಾಮದ ಭಕ್ತಮಂಡಲಿಯವರು ಮಹಾಭಕ್ತಿಯಿಂದ ಆಚರಿಸಿದರು ಆ ದಿವಸ ಸಾಯಂಕಾಲ ವೇ|| ಇಂಗಳಿಗಿ ಹಿರೇಮಠದ ವಿರೂಪಾಕ್ಷಶಾಸ್ತ್ರಿಗಳಿಂದ ಗುರುಕೀರ್ತನೆಯು ಮಾಡಲ್ಪಟ್ಟಿತು ಮರನ ಸಾಯಂಕಾಲ ಇಲ್ಲಿಯ ಕೆ ಸಿ ಸಿ ಬ್ಯಾಂಕಿನ ಮ್ಯಾನೇಜರಾದ ಎಸ್ ಪಿ ಕಾಲೇಗಾವಿ ವರ ಬಿ ಎ ಎಲ್ ಎಲ್ ಬಿ ಇವರು ಧಾರ್ಮಿಕ ವಿಷಯದ ಮೇಲೆ ಪರಿಣಾಮಕಾರಕವಾದ ಭಾಷಣವನ್ನು ಮಾಡಿದರು ಆ ಮೇಲೆ ತೀಲವಂಚ ಉಲದ ಕಟ್ಟಿಗ್ರಾಮದ ಮ|| ರಾ|| ಸಂಗನಿಶೆಟ್ಟರು ಶಿವಕೀರ್ತನೆಯನ್ನು ಮಾಡಿದರು

ಕಾರ್ಯದರ್ಶಿ ಶಂಕರ ಿಂಡ ಪಾಟೀಲ್

ಪ್ರಾಣೇಶ್ವರದೀಕ್ಷಾ ಪುನ್ಕು ವಿವಾಹಸಂಸ್ಕಾರಂಭ, ಕೂಡೇವು

ರಂಗ್ ಜೂರು ಡಿ|| ಶಿದ್ದಪೂರು ತಾ|| ಹೂಡೇವು ಗ್ರಾಮದಲ್ಲಿರ ವ ಶ್ರೀದಿ ಹಿರೇಮಠದ ವೇ|| ಶಿವಲಿಂಗಯ್ಯನವರು ತಮ್ಮ ಮಠದಲ್ಲಿ ಇ ೯೬೯ನೇ ದಿವಸ ರೊಡಕುಂದಿ ಹಿರೇಮಠದ ಚರಪಟ್ಟಾಧ್ಯಕ್ಷರಾದ ಶ್ರೀಶಿವಯೋಗಿ ಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ತಪ್ಪ ಬಿ|| ಅಮರನಾಥರರ್ಮ, ತಮ್ಮ ಬಂಧುಗಳಾದ ಶಿವಮ್ಮಾಪುರ ತೋರಣದಿನ್ನಿ ಮರದ ಶ್ರೀ ವಿರೂಪಾಕ್ಷಪ್ಪನವರ ಸುಪುತ್ರಿ ಚಿ|| ಸರ್ವಮಂಗಳಾದೇವಿ, ಚಿ|| ಒ೯ರಾಜಶರ್ಮ ಇವರೀ ಮೊದಲಾದವರಿಗೆ ದೀಕ್ಷಾಸಮಾರಂಭವನ್ನು ವಿಶೇಷ ವೈಭವದೊಡನೆ ನೆರವೇರಿಸಿದರು ಇದೇ ಶುಭಮುಹೂರ್ತದಲ್ಲಿ ಚಿ||ಸೌ|| ಸರ್ವಮಂಗಳಾದೇವಿಗೂ, ವೇ|| ಶಿವಲಿಂಗಯ್ಯನವರಿಗೂ ದ್ವಿತೀಯ ವಿವಾಹ ಸಮಾರಂಭವು ವೈಭವದಿಂದ ನೆರವೇರಿತು ಮಧ್ಯಾಹ್ನ ೪ ಘಂಟೆಗೆ ಈಶ್ವರದೇವಸ್ಥಾನದಲ್ಲಿ ಸಭೆಯು ಕೂಡಿತು ಸಭಾಧ್ಯಕ್ಷತೆಯನ್ನು ಸ್ವಾಮಿಗಳವರು ವಹಿಸಿದ್ದರು ಪ್ರಾರಂಭದಲ್ಲಿ ಕಿಮ್ಮಾಪುರ ಗ್ರಾಮದ ವೇ|| ಎಂ ಮಡಿವಾಳಯ್ಯನವರು "ಸತ್ಸಹವಾಸ ಎಂಬ ವಿಷಯದ ಮೇಲೆ ಭಾಷಣ ಮಾಡಿದರು ಒಳಿಕ ವೇ|| ಬಿ ಎಂ ವೀರೇಶ್ವರಶಾಸ್ತ್ರಿಗಳು ಹೊಳಲಗುಂದಿ ಇವರು 'ಧರ್ಮ ಮತ್ತು ವಿವಾಹಸಂಸ್ಕಾರ" ಎಂಬ ಬಗ್ಗೆ ಒಂಭಾಷಣಮಾಡಿದರು ಅನಂತರ ಶ್ರೀಸ್ವಾಮಿಗಳವರು ಶಿವದೀಕ್ಷಾ ಮತ್ತು ಲಿಂಗಾಂಗ ಸಾಮರಸ್ಯ" ವಿಷಯದ ಬಗ್ಗೆ ಸಮಸ್ತರಿಗೂ ತಿಳಿಯುವಂತೆ ಸುಗುಮವಾಗಿ ಬೋಧಿಸಿದರು ಈ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸಿದ ಸಿದ್ದಗಿರಿ ವೇ|| ಪಿ ಎಂ ಮಲ್ಲಿಕಾರ್ಜುನಯ್ಯನವರಿಗೂ, ಗ್ರಾಮದ ಸಮಸ್ತ ಭಕ್ತಮಂಡಲಿಯವರಿಗೂ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯ ಮಂಗಲವನ್ನಿತ್ತು ಕಾಪಾಡಲೆಂದು ಪ್ರಾರ್ಥನೆ

ಉತ್ಸವಭಾಗಿ

ಗೋಕರ್ಣಕ್ಷೇತ್ರದಲ್ಲಿ ವೀರಶೈವರ ಆನಂದಸ್ಥಾನ

ಹುಬ್ಬಳ್ಳಿಯಲ್ಲಿರುವ ಹನ್ನೆರಡು ಮಠದ ಪರಮ ಪೂಜ್ಯ ಸ್ವಾಮಿ ಜಗದ್ಗುರು ಶಿವಾಚಾರ್ಯಸ್ವಾಮಿಗಳವರು ವೀರಶೈವ ಧರ್ಮಾಭಿಮಾನಿಗಳಿಗಾಗಿ ಗೋಕರ್ಣಕ್ಷೇತ್ರದಲ್ಲಿ ಒಂದು ಮಠವನ್ನು ಕಟ್ಟಿಸಿ ಮಹೋಪಕಾರವನ್ನು ಮಾಡಿರುವರು ಮಠದಲ್ಲಿ ಒಂದು ಭಾವಿಯನ್ನು ತೆಗೆಯಿಸಿ ಅದಕ್ಕೆ 'ರೇಣುಕತೀರ್ಥ" ಎಂಬ ಪವಿತ್ರನಾಮವನ್ನಿಟ್ಟಿರುವರು ಆ ತೀರ್ಥದ ಜಲವು ಅಮೃತಕ್ಕೆ ಸಮಾನವಾಗಿರುವುದು ಈ ವರ್ಷ ಮಹಾಶಿವರಾತ್ರಿ ದಿವಸ ಅನೇಕ ಜನ ಪಟ್ಟಣಾಧಿಕಾರಿಗಳು ಮತ್ತು ಭಕ್ತಮಾಹೇಶ್ವರರು ಗೋಕರ್ಣಕ್ಷೇತ್ರಕ್ಕೆ ಆಗಮಿಸಿ ನೂತನ ಮಠದಲ್ಲಿ ವಾಸವಾಗಿದ್ದರು. ಮಹಾಶಿವರಾತ್ರಿಯ ದಿವಸ ಸರ್ವರೂ ಆನಂದದಿಂದ ಪೂಜೆಯನ್ನು ನೆರವೇರಿಸಿದರು ಮರುದಿವಸ ಕೀರ್ತನಸಹಿತ ಹರಕುಣಿ ಹಿರೇಮಠದ ಶ್ರೀಸಿದ್ಧಲಿಂಗದೇವರು ಮನೋಹರವಾಗಿ ಕೀರ್ತನೆಯನ್ನು ಮಾಡಿದರು ಮಧ್ಯಮದ್ಯದಲ್ಲಿ ಕೊಟ್ಟೂರು ಕೆಲಭಾವಿ ಮಠದ ಸಂಗೀತ ವಿದ್ವಾನ್ ವೇ|| ಚನ್ನಬಸವಶಾಸ್ತ್ರಿಗಳು ಸಾಕ್ಷಾತ್ ಶಿವಸ್ವರೂಪಿಗಳಾದ ಉಜ್ಜಯಿನೀ ಜಗದ್ಗುರು ಶ್ರೀಪಂಡಿತಾರಾಧ್ಯ ಮಹಾಸ್ವಾಮಿಗಳವರ ಮತ್ತು ವೀರಶೈವಮತದ ನಿಜತತ್ವವನ್ನು ಜಗತ್ತಿನಲ್ಲಿ ತೋರಿಸಿ ಅಜ್ಞಾನಾಂಧಕಾರವನ್ನು ದೂರಮಾಡಿ ಜಗದ್ವಿಖ್ಯಾತರಾಗಿರುವ ಹಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಮೇಲೆ ಮಾಡಿರುವ ಮನೋಹರವಾದ ಪದಗಳನ್ನು ಪಿಟೀಲು ವಾದ್ಯದೊಡನೆ ಹಾಡಿ ಸರ್ವರಿಗೂ ಪರಮಾನಂದವನ್ನುಂಟುಮಾಡಿದರು ಆಮೇಲೆ ಗದಗ ಸಿಟಿಯಲ್ಲಿರುವ ದಾನಶೂರರೆಂಬ ಬಿರುದಾಂಕಿತರಾದ ಮ|| ರಾ|| ವೀರಪ್ಪನವರು ಆನಂದಭರಿತರಾಗಿ ಈ ಮಠಕ್ಕೆ ಮಹಾದ್ವಾರವನ್ನು ಕಟ್ಟಿಸಿಕೊಡುವೆನೆಂದು ವಾಗ್ದಾನವನ್ನು ಮಾಡಿದರು ಅದೇ ರೀತಿ ಕೆಲವರು ಕೊಠಡಿಗಳನ್ನು ಕಟ್ಟಿಸುವುವೆಂದು ವಾಗ್ದಾನ ಮಾಡಿದರು ಕೆಲವರು ತಮ್ಮ ಶಕ್ತ್ಯನುಸಾರ ಹಣವನ್ನು ಸಮರ್ಪಿಸಿದರು ಸರ್ವರಿಗೂ ಶ್ರೀಜಗದ್ಗುರು ಪಂಚಾಚಾರ್ಯರು ಮಂಗಲಪರಂಪರೆಯನ್ನೀಯಲೆಂದು ಪ್ರಾರ್ಥಿಸುತ್ತೇನೆ

ಓರ್ವ ಗುರುಭಕ್ತ, ಕೊಟ್ಟೂರು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) ೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ) ೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) ೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ) ೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ) ೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ) ೨ ಆಣೆ
ಬಸವಾದಿಶಿವಜಿತಕ್ಷ ದರ್ಪಣ (೬ನೆಯ ಆವೃತ್ತಿ) ೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ) ೨ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) ೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ೨ ಆಣೆ
ಶಿವಶಕ್ತಿವಿಲಾಸ ... ... ೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ) ೩ ಆಣೆ
ಪಂಚಾಚಾರ್ಯಪ್ರಕಾಶ ೩ ಆಣೆ
ಪಂಚಾಚಾರ ಪ್ರಕಾಶಿಕಾ ೩ ಆಣೆ
ವೀರಶೈವಾಚಾರವಿಧಿ (೬ನೆಯ ಆವೃತ್ತಿ) ೪ ಆಣೆ
ಲಿಂಗಧಾರಣವಿಧಿ .. .. ೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) ೪ ಆಣೆ
ಶ್ರೀಪಕಿಪಂಡಿತಾರಾಧ್ಯರ ಕಾಲನಿರ್ಣಯ ೪ ಆಣೆ
ಶೈವೋಪಸತ್ಸಂಗ್ರಹ (ಸಂಸ್ಕೃತ) .. ... ೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ... ೪ ಆಣೆ
ವೈದಿಕವಾಙ್ಮಯರಹಸ್ಯ ... ೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ... ೬ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ .... ೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿತ್ರಸಹಿತ) .. ೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) .... ೮ ಆಣೆ

ವೀರಶೈವಮಹಾತ್ಮರು ..... ೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ) ..... ೮ ಆಣೆ
ಆಗಮಪರಿಜ್ಞಾನ ... ೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು) ೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ) ೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ೧೩ ಆಣೆ
ಶಿವಾಗಸತತ್ತ್ವಸಿದ್ಧಾಂತದರ್ಶನ ... ೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ... ೧ ರೂ.
ವೈದಿಕಶಿವಪೂಜಾವಿಧಿ (ವೈದಿಕಸ್ತೋತ್ರಯುಕ್ತವಾದದ್ದು ೩ನೆಯ ಆವೃತ್ತಿ) ೧೫ ರೂ
ಶ್ರೀಕರಭಾಷ್ಯಂ (ಜಾಸ್ಕೂಮ್ರಿಗ) ೧೫ ರೂ
ವೀರಶೈವರಕ್ಷ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿರುವುದು) ೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ... ೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ವೀಕಾಸಹಿತ) ೨ ರೂ
ಶಿವಾಗಮಸಂಗ್ರಹ (ಜಂಗಮಸ್ಥಾನಾಚಾರಕಾಗಮಾದಿ ಸೂಕ್ಷ್ಮಾಗಮಗಳಿಂದ ಕೂಡಿರುವುದು) ೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪ಳ ಪುಟ) ... ೮ ರೂ
A brief life-sketch of Pandit Sri Kashinatha Shastriji (*English*) 4 As
The Philosophical Aspect of Viraseivism (*English*) .. 8 As
Speeches by Pandit Shri Kashinatha Shastriji (*English*) 12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ) ೩ ಕ
ವೀರಶೈವರತ್ನ (ಮರಾಠಿ) ೧ ರೂ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಹಿತ) ೧ ರೂ.
ಸಂಧಿಕೌಮುದಕಾರಿಕಾ (ಸಂಸ್ಕೃತ) ೨ ಆಣೆ

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No. M. 2266 ‡ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಃ ಪ್ರಸೀದಂತು ‡ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನವಪಂಕಜಾತಭವಧಿಕರ್ ಪಂಚಾಸ್ಯಶೀಲಾಧಿಪರ್ ಪಂಚಕ್ಲೇಶವಿನಾಶಕರ್ ಪರಶಕ್ತ್ಯಾಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಮೋದಧರ್ ! ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸ್ವಕ್ಷದವರಿಗೆ ೩ ರೂ. ೪ ಆಣೆ. ಪರಕ್ಷದವರಿಗೆ ೩ ರೂ ೮ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೫೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೨ನೇ ಏಪ್ರೆಲ್ ೧೯೪೮ [ಸಂಚಿಕೆ ೫೧

ಶ್ರೀ ಜಗದ್ಗುರು
ಪಂಚಾಚಾರ್ಯರ ಪ್ರಾಚೀನತ್ವ

ಶ್ರೀಮದ್ವೀರಶೈವಮಹಾಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ವಿಷಯವು ಕ್ರಿ ಶ ೧೫ನೆಯ ಶತಮಾನಕ್ಕಿಂತ ಪೂರ್ವದ ಶಾಸನಗಳಲ್ಲಿ ಎಲ್ಲಿಯೂ ಕಂಡುಬರುವುದಿಲ್ಲವೆಂದು ಕೆಲಜನ ಮಹಾಶಯರು ಸರ್ವಜ್ಞ ಮೂರ್ತಿಗಳಂತೆ ಸಾರುತ್ತಿರುವುದು ಎಲ್ಲರಿಗೂ ತಿಳಿದೇ ಇದೆ ಇವರ ಈ ವಿವಾದವಾದ ವಾದವು ಕೇವಲ ಭ್ರಮಾತ್ಮಕವಾದುದೆಂದು ನಿರ್ಣಯಿಸಿ, ಪ್ರಾಚೀನಶಾಸನಾದಿ ಪ್ರಮಾಣಗಳ ದ್ವಾರಾ ಶ್ರೀಪಂಚಾಚಾರ್ಯರ ಪ್ರಾಚೀನತ್ವದ ಬಗ್ಗೆ ಒಂದು ಗ್ರಂಥವನ್ನು ಬರೆದು ಪ್ರಕಟಿಸಬೇಕೆಂದು ಅನೇಕಜನ ಗುರುಭಕ್ತರು ಪ್ರಾರ್ಥಿಸಿಕೊಂಡ ಮೇರೆಗೆ, **ಪಂಡಿತ ಶ್ರೀಕಾಶೀನಾಥಶಾಸ್ತ್ರಿ**ಗಳವರು ಒಮೂಲ್ಯವಾದ ಈ ಗ್ರಂಥರತ್ನವನ್ನು ರಚಿಸಿದ್ದಾರೆ ಈ ಗ್ರಂಥದ ಯೋಗ್ಯತೆಯು ಎಷ್ಟು ಮಹತ್ತರವಾಗಿರುವುದೆಂಬುದು ಇವನ್ನು ಓದಿನೋಡಿದಮೇಲೆ ವಾಚಕರಿಗೆ ನೇರ್ಪ್ಯವಾಗುವದು ವೀರಶೈವಮತದ ಪ್ರಾಚೀನೇತಿಹಾಸವನ್ನು ಸಂಶೋಧಿಸುವುದಕ್ಕಾಗಿ ಪಂಡಿತರು ಈ ವರೆಗೆ ಸುಮಾರು ೧೨ ಸಾವಿರ ಶಿಲಾಶಾಸನಗಳನ್ನು ಪರಿಶೀಲಿಸಿರುವರು ಅನೇಕ ಶಾಸನಗಳಲ್ಲಿ ವೀರಶೈವಮತದ ಒಗ್ಗೆ ಮಹತ್ತ್ವದ ಸಂಗತಿಗಳು ದೊರೆತಿರುವವು ಪಂಡಿತರು ಆ ಒಗ್ಗೆ ನುಂದೆ ಒಂದು ಸ್ವತಂತ್ರಗ್ರಂಥವನ್ನೇ ಒರೆಯತಕ್ಕವರಾಗಿದ್ದಾರೆ ಆಸ್ತು !

ಈ ಗ್ರಂಥದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವವೂ, ಆ ಮಹಾಚಾರ್ಯರಿಂದ ಸ್ಥಾಪಿತವಾದ ಲಿಂಗಧಾರಣದ ಪ್ರಾಚೀನತ್ವವೂ, ಪರಮಪೂಜ್ಯರಾದ ಜಂಗಮರ ಪ್ರಾಚೀನತ್ವವೂ ಅನೇಕ ಪುರಾತನ ಶಾಸನ ಪ್ರಮಾಣಗಳಿಂದ ಪ್ರತಿಪಾದಿಸಲ್ಪಟ್ಟಿರುವುದು ಈ ಒಗ್ಗೆ **ಕನ್ನಡ ದೇಶದಲ್ಲಿರುವ** ಚಿತ್ರದುರ್ಗ ತಾ॥ ಬೇವಿನಹಳ್ಳಿ, ಶಿಕಾರಿಪುರ ತಾ॥ ಬೆಳಗಾಂವಿ, ಹರಪನಹಳ್ಳಿ ತಾ॥ ಬಾಗಳಿ, ಹೂವಿನ ಹಡಗಲಿ ತಾ॥ ಸೋಗಿ, ಬಳ್ಳಾರಿ ಡಿ॥ ಅಲೂರು ತಾ॥ ರಾಮದುರ್ಗ, **ತೆಲುಗು ದೇಶದಲ್ಲಿರುವ** ಕಡಪಾ ಡಿ॥ ದೊಂಗಲಸಾನಿ, ಅನಂತಪುರ ಡಿ॥ ತಾಡಪತ್ರಿ, **ಕರ್ನೂಲ್** ಡಿ॥ ಪಾಣ್ಯಂ, ಬಿಜವಾಡ, ಬಿಜವಾಡ ಡಿ॥ ಜೆಮ್ಮೋಲ್, **ತಮಿಳು ದೇಶದಲ್ಲಿರುವ** ಮಾಮಲ್ಲಪುರಂ, ಸಾಲವಂಕುಪ್ಪಂ, ತ್ರಿಚಿನಾಪಳ್ಳಿ, ಕಾಂಚಿ, ವಾಯಲೂರು ಮೊದಲಾದ ಗ್ರಾಮಗಳಲ್ಲಿರುವ ಪ್ರಾಚೀನ ಶಿಲಾಶಾಸನಗಳು ಉದಾಹರಿಸಲ್ಪಟ್ಟಿರುವವು ಅಲ್ಲದೆ ಪಂಚಪೀಠಗಳ ಒಗ್ಗೆ ಬನಾರಸ್ ಜಡ್ಜ್‌ಕೋರ್ಟು, **ಅಲಹಾಬಾದ್ ಹೈಕೋರ್ಟು** ಮತ್ತು ಮದ್ರಾಸ್ ಹೈಕೋರ್ಟುಗಳ ತೀರ್ಮಾನಗಳೂ, ಪರಮತೀಯರಿಂದ ಮುದ್ರಿಸಲ್ಪಟ್ಟಿರುವ **ಮಹಾಭಾರತ, ಸ್ಕಾರಪುರಾಣ, ಕಾಶೀಖಂಡ, ಕೇದಾರಖಂಡ** ಮೊದಲಾದ ಪ್ರಾಚೀನಗ್ರಂಥಗಳ ಪ್ರಮಾಣಗಳೂ, ಮಿ॥ ಸಿ ಪಿ. ಬ್ರೌನ್, ಮಿ॥ ಇ. ಥರ್ಸ್‌ಟನ್, ಮಿ॥ ಜೆ. ಎನ್. ಫಾರ್ಕ್ಯುಹಾರ್ ಮೊದಲಾದ ಸುಪ್ರಸಿದ್ಧ ಯೂರೋಪಿಯನ್ನರ ಗ್ರಂಥಪ್ರಮಾಣಗಳೂ, ಡಾ॥ ಆರ್. ಜಿ. ಭಾಂಡಾರ್‌ಕರ್ ಇವರೇ ಮೊದಲಾದ ಅನೇಕಜನ ಸುಪ್ರಸಿದ್ಧಭಾರತೀಯರು ಬರೆದಿರುವ ಗ್ರಂಥಪ್ರಮಾಣಗಳೂ ಉದಾಹರಿಸಲ್ಪಟ್ಟಿರುವವು ಪಂಚಾಚಾರ್ಯರ ಸರ್ವಸ್ವವೇ ಈ ಗ್ರಂಥದಲ್ಲಿ ಅಡಕವಾಗಿರುವದು ವೀರಾಶಾಸನಾದಿಗಳಿಗೆ ಉದಾಹರಿಸಲ್ಪಟ್ಟಿರುವವು ಪಂಚಾಚಾರ್ಯರ ಸರ್ವಸ್ವವೇ ಈ ಗ್ರಂಥದಲ್ಲಿ ಅಡಕವಾಗಿರುವದು ವೀರಾಶಾಸನಾದಿಗಳ ಪ್ರತಿಗಳೂ ಈ ಗ್ರಂಥದಲ್ಲಿ ಅಡಕವಾಗಿರುವದು ಸಂದರ್ಭಾನುಸಾರವಾಗಿ ಅಲ್ಲಲ್ಲಿ ಪ್ರಾಚೀನಶಾಸನಾದಿಗಳ ೧೪ ಫೋಟೋಗಳು ಮುದ್ರಿಸಲ್ಪಟ್ಟಿರುವವು

ಪಂಚಪೀಠಗಳ ಬಗ್ಗೆ ಅನೇಕ ಸುಹೃದ್ವಿಷಯಗಳಿಂದಿಡಗೂಡಿ ಸಚಿತ್ರವಾಗಿಯೂ ಸರ್ವಾಂಗಸುಂದರವಾಗಿಯೂ ಮುದ್ರಿತವಾಗಿರುವ ಈ ಗ್ರಂಥರತ್ನವನ್ನು ಸರ್ವರೂ ತರಿಸಿಕೊಂಡು, ಎಂದೂ ಕೇಳದ ಮತ್ತು ನೋಡದ ಅಮೂಲ್ಯವಿಷಯಗಳನ್ನು ತಿಳಿದುಕೊಂಡು ಧನ್ಯರಾಗಬೇಕೆಂದಾಶಿಸುತ್ತೇನೆ **ಬೆಲೆ ೧ ರೂ.**

ಮ್ಯಾನೇಜರ್
ಶ್ರೀಪಂಚಾಚಾರ್ಯ ಎಕೆಕ್ಟ್ರಿಕ್ ಪ್ರೆಸ್,
ಮೈಸೂರು.

ಸ್ವೀಕಾರ

ಬಳ್ಳಾರಿ ಡಿ॥ ಹಡಗಲಿ ತಾ॥ ಹೊಳಲು ಗ್ರಾಮದ ಲ್ಲಿರುವ ಹಿರೇಮಠದ ವೇ॥ ಚನ್ನವೀರಯ್ಯನವರ ಪತ್ನ್ಯಂದಿರಾದ ಶಾಂತಿಸಮಾರಂಭದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ **2** ರೂ ಗಳು ಹೂವಿನ ಹಡಗಲಿಯಲ್ಲಿರುವ ಮಾ॥ ರಾ॥ ಗುರು ಹುಚ್ಚಪ್ಪನವರ ದ್ವಾರಾ ತಲಪಿರುತ್ತದೆ

ಗುಡಗೇರಿ ತಾ॥ ಮುಕ್ತಿಮಂದಿರದಲ್ಲಿ ನೆರವೇರಿದ ಮೌಹೇಶ್ವರೀದೀಕ್ಷಾಸಮಾರಂಭದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ **1** ರೂ ಯು ವೇ॥ ಬಸವ ಣ್ಣಿಯ್ಯ ಕಪ್ಪೂರು ಹಿರೇಮಠ ಇವರ ದ್ವಾರಾ ತಲಪಿರು ತ್ತದೆ

ಗದಗ್ ಟೌನ್ಸಿನಲ್ಲಿರುವ ವೀರಶೈವ ಮಂಡಲಿ ಯವರು ಶ್ರೀ ರಾಮೋಟೆ ವೀರಭದ್ರ ದೇವಸ್ಥಾನದಲ್ಲಿ ಶ್ರೀ ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ಮತ್ತು ವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಸದರಿ ದೇವಸ್ಥಾನದ ಪಂಚಕಮಿಟಿಯವರು ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂ ಯು ಕಮಿಟಿಯ ಅಧ್ಯಕ್ಷರಾದ ವೇ॥ ಗುಡ್ಡಿಮಠದ ಸಂಗಯ್ಯ ನವರ ದ್ವಾರಾ ತಲಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಸುಪ್ಪತ್ತಿಪ್ಪತ್ತಿ ಶಾಂತಿಸಮಾರಂಭ

ಬಳ್ಳಾರಿ ಡಿ॥ ಹಡಗಲಿ ತಾ॥ ಹೊಳಲು ಗ್ರಾಮದ ಲ್ಲಿರುವ ವೇ॥ ಹಿರೇಮಠದ ಚೆನ್ನವೀರಯ್ಯನವರಿಗೆ ಇದೇ ಫಾಲ್ಗುನ ಬಹುಳ ೫ ಸೋಮವಾರಕ್ಕೆ ೬೦ ವರ್ಷಗಳು ತುಂಬಿದುದರಿಂದ ತತ್ಸಂಬಂಧವಾದ ಶಾಂತಿ ಕರ್ಮವನ್ನು ಸಂಭ್ರಮದೊಡನೆ ನೆರವೇರಿಸಿದರು ಈ ಕಾರ್ಯಕ್ಕಾಗಿ ಕಂದಗಲ್ಲುಪುರ, ಕುರವತ್ತಿ, ನೆಗಳೂರು, ದಿನ್ನಾವಿ ಮೊದ ಲಾದ ಗ್ರಾಮಗಳಿಂದ ಪಟ್ಟದ ಸ್ವಾಮಿಗಳವರು ಆಗಮಿ ಸಿದ್ದರು ೩ ದಿವಸಗಳ ವರೆಗೆ ಸಕಲ ಕಾರ್ಯಕ್ರಮಗಳು ವೈದಿಕರಿಂದ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು ಕುರ ವತ್ತಿ ಬೃಹನ್ಮಠದ ಶ್ರೀ ಪಟ್ಟದಸ್ವಾಮಿಗಳವರ ಆಜ್ಞೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ೨ ರೂ ಗಳು ಸಮರ್ಪಿಸಲ್ಪಟ್ಟವು ಈ ಮಹಾಕಾರ್ಯವನ್ನು ಆಸಾ ಧಾರಣ ಭಕ್ತಿಯಿಂದ ನೆರವೇರಿಸಿದ ಈ ಗ್ರಾಮದ ಭಕ್ತಮಂಡಲಿಯವರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ಮಂಗಲಪರಂಪರೆಯನ್ನೀಯಲೆಂದು ಪ್ರಾರ್ಥಿಸುವ

ಸ್ವಕ್ಷಪ್ರದರ್ಶಿ.

ಮೈಸೂರಿನ ರಾಜ್ಯಾಂಗ ಸಭೆಗೆ ಶ್ರೀಮನ್ಮಹಾರಾಜರವರ ಸಂದೇಶ

ಮೈಸೂರಿನ ನೂತನ ರಾಜ್ಯಾಂಗ ವ್ಯವಸ್ಥೆಯನ್ನು ಸಿದ್ಧಗೊಳಿಸಲು ಸ್ಥಾಪಿಸಲ್ಪಟ್ಟಿರುವ ರಾಜ್ಯಾಂಗ ಸಭೆಯ ಮೊಟ್ಟಮೊದಲನಯ ಅಧಿವೇಶವು ಈ ತಿಂಗಳು ೨ನೆಯ ತಾರೀಖು ಬ ಧವಾರ ದಿವಸ ಬೆಂಗಳೂರು ನಗರ ಭವನದಲ್ಲಿ ಸೇರಿತು ಭವನವನ್ನು ಪ್ರೇಕ್ಷಕರಿಂದ ತುಂಬಿಹೋಗಿತ್ತು

ಮುಖ್ಯಮಂತ್ರಿಗಳಾದ ಶ್ರೀ ಕೆ ಸಿ ರೆಡ್ಡಿಯವರನ್ನು ರಾಜ್ಯಾಂಗ ಸಭೆಯ ತಾತ್ಕಾಲಿಕ ಅಧ್ಯಕ್ಷರೆನ್ನುವುದಾಗಿ ನೇಮಿಸಿರುವ ಬಗ್ಗೆ ಶ್ರೀಯುನ್ಮಹಾ ಜರವು ನಿರೂಪಣವನ್ನು ಸಭೆಯ ಕಾರ್ಯಾರಂಭಗಳಾದ ಶ್ರೀ ಕೆ ಗುರುದೇವರನು ಮೊದಲು ಓದಿದರ ಅನಂತರ ಶ್ರೀ ಕೆ ಸಿ ರೆಡ್ಡಿಯವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದರು ಬಳಿಕ ಅಧ್ಯಕ್ಷರು ಮತ್ತಾ ಪ್ರಭುಗಳ ಸಂದೇಶವನ್ನು ಓದಿದರು

ಮಹಾಪ್ರಭುಗಳವರ ಸಂದೇಶ

' ಮೈಸೂರಿನ ರಾಜ್ಯಾಂಗ ಸಭೆಯ ಪ್ರಥಮ ಅಧಿವೇಶನವು ನೇರುವ ಈ ಶುಭ ಸಮಯದಲ್ಲಿ ನಾವು ಸದಸ್ಯರಿಗೆ ನಮ್ಮ ಶುಭಾಶಯಗಳನ್ನು ತಿಳುಹಿಸಲು ಹರ್ಷಿತರಾಗಿದ್ದೇವ

' ಪ್ರಜಾಪ್ರತಿನಿಧಿಗಳೂ ಸರ್ಕಾರಕ್ಕೂ ದೆಜ್ಞನ ಸಂಬಂಧವೊಂದು ಮಾಡುವುದೇ ಸ್ವರಾಜ್ಯ ಈಗ ೬೦ ವರ್ಷಗಳಿಂದ ಆಜನೆಗೆ ಇದಿ ಪ ರಜ್ಞೆಯು ಸುಧಾರಣೆಗಳ ಗುರಿಯಾಗಿ ನಮ್ಮ ತಿಜ್ಞಾಪತ್ರದ ಕೇ ಕೇ ಶ್ರೀ ಜಾವ ರಾಜೇ ದ್ರ ಒಡೆಯರ್ ಒಪ ದ್ದೂರ್‌ರವರು ೧೮೮೯ ರಲ್ಲಿ ಪ್ರಥಮತ ಸ್ವಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು ನವ ದಿ೦ತ್ಪನ್ನವಾದ ಕೇ! ಕೇ!! ಶ್ರೀ ಕೃಷ್ಣರಾಜ ಒಡೆಯರ್ ಒಪ ದ್ದೂರ್‌ರವರು ೧೯೨೬ರಲ್ಲಿ ನ್ಯಾಯ ಜಾಯ ಸಭೆಯನ್ನು ಸ್ಥಾಪಿಸಿದರು ಆ ನಂತರ ಅಭಿವೃದ್ಧಿಕಾರ್ಯಕ್ಷೇತ್ರವು ವಿಸ್ತಾರಗೊಂಡ ಶ್ರೀಮಂತ ಸರ್ವಾದೇಶ್ಯ ಬಾಂಧವ್ಯ ಏರ್ಪಡುವಂತಾಗಿದ

ಇತ್ತೀಚೆಗೆ ಭಾರತದಲ್ಲಿ ಒಳಿತ ಪ್ರಮುಖ ಸಂವಿಧಾನಾತ್ಮಕ ಬದಲಾವಣೆಗಳು ನಡೆದಿವೆ ಭರತ ಖಂಡವು ಸ್ವಾತಂತ್ರ್ಯವನ್ನು ಪಡೆದ ಜನಾಂಗಗಳ ಸಡಿವೆ ತನ್ನ ನಿರ್ದಿಷ್ಟಯುತತಾದ ಸ್ಥಾನವನ್ನು ಆಕ್ರಮಿಸಿ ಪಂಚಪವ್ಯಾಪ್ತಿಪ್ರಾದ ಪಟ್ಟಿನ್ನು ನೋಡುವ ಸೌಭಾಗ್ಯ ನಗರಿಗೆ ಲಭಿಸಿದ ಈ ಘಟನೆಯ ಮಹತ್ವ ಮೈಸೂರಿಗೂ ಅನ್ವಯಿಸುವುದಾಗಿದೆ ಸ್ವಿಸರಿನಲ್ಲ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ನಾವು ಮಾಡಿದ ಮೊದಾ ಸಂಕಲ್ಪವನ್ನೂ ಕಾರ್ಯರೂಪಕ್ಕೆ ತರುವ ತಕ್ಕ ಸಲಹೆಗಳನ್ನು ರೂಪುಗೊಳಿಸಲು ಈ ಸಭೆಯು ಸೇರಿದೆ

ಅಖಿಲಭಾರತದಲ್ಲಿ ಮೈಸೂರಿನ ರಾಜಕೀಯ ಸ್ಥಾನಮಾನಕ್ಕೆ ಉಚಿತವೆನಿಸಿದ ರಾಜ್ಯಾಂಗವನ್ನು ನಿರ್ಮಾಣ ಮಾಡಿ ಪ್ರಜೆಗಳ ಅವಶ್ಯಕತೆ, ಸ್ಥಿತಿಗತಿ ಮತ್ತು ಶಿಕ್ಷಣತತೆಗೆ ಉಚಿತವೆನಿಸಿದ ರಾಜ್ಯಾಂಗವನ್ನು ಈ ಸಭೆಯ ಸದಸ್ಯರು ಸಿದ್ಧ ಮಾಡುವರೆಂಬ ನಂಬಿಕೆ ನಮಗಿದೆ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯಲು ತಕ್ಕ ಅವಕಾಶಮಾಡುವರೆಂದೂ ನಮ್ಮ ಎಲ್ಲ ಗುಂಪಿನ ಪ್ರಜೆಗಳ ಸುಖ ಸಂತೋಷ ಮತ್ತು ಅಭಿವೃದ್ಧಿಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಕೆಲಸ ಮಾಡುವರೆಂದೂ ನಾವು ನಂಬಿದ್ದೇವೆ

ಈ ಸಭೆಯ ಕಾರ್ಯಕಲಾಪಗಳ ಫಲವಾಗಿ ಮೈಸೂರಿಗೆ ಭರತ ಖಂಡದಲ್ಲಿ ಗೌರವಯುತವಾದ ಸ್ಥಾನ ದೊರೆತು ಭಾರತೀಯರ ಸುಖ ಸಂತೋಷಗಳನ್ನು ಹೆಚ್ಚಿಸುವುದರಲ್ಲಿ ಅದು ಪ್ರಮುಖ ಪಾತ್ರ ವಹಿಸುವಂತಾಗುವುದೆಂದೂ, ಮಾನವ ಸೋದರತ್ವವನ್ನೂ ಜಗತ್ಪಿತೃವಲ್ಲಿ ಶಾಂತಿಯನ್ನೂ ಬಲಪಡಿಸಲು ಕಾರಣವಾಗುವುದೆಂದೂ ನಾವು ಹಾರೈಸುವೆವು

ಮೈಸೂರು ರಾಜ್ಯಾಂಗ ಸಭೆಯು ಆರಂಭಿಸಿರುವ ಇತಿಹಾಸ ಪ್ರಸಿದ್ಧವಾದ ಕಾರ್ಯವು ಯಶಸ್ವಿಯಾಗಲೆಂದು ನಾವು ಹಾರೈಸುವೆವು. ಈ ಸಭೆಯ ಸದಸ್ಯರಿಗೆ ತಕ್ಕ ವಿವೇಕವನ್ನೂ ಶಕ್ತಿಯನ್ನೂ ಕೊಡಲೆಂದು ದೇವರನ್ನು ಪ್ರಾರ್ಥಿಸ ತ್ತೇವೆ

ಅನಂತರ ಅಧ್ಯಕ್ಷರು ಭಾರತದ ಗೌರ್ನರ್ ಜನರಲ್ ಆದ ಲಾರ್ಡ್ ವೆೌಂಟ್‌ಬೇಟ್, ಸರದಾರ್ ಪಟೇಲ್ ಮುಂತಾದವರ ಸಂದೇಶಗಳನ್ನು ಪಠಿಸಿದರು

ಮೌಂಟ್ ಬೇಟನ್‌ರವರ ಸಂದೇಶ

' ಇಂದಿನ ಚರಿತ್ರಾರ್ಹವಾದ ಮಹೋತ್ಸವವು ಶ್ರೀ ಮನ್ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯ ಧ್ಯೇಯವು ಪೂರ್ಣವಾಗಿ ಫಲಪ್ರದವಾದುದರ ಸಂಕೇತವಾಗಿದ ಈ ಯಶಸ್ಸಿಗೆ ಪ್ರಜೆಗಳ ಇಂಗಿತವನ್ನು ಅರಿತು ಅವರ ಆಕೋತ್ಪರೆಗಳನ್ನು ಈಡೇರಿಸಿಕೊಟ್ಟ ಮೈಸೂರಿನ ಪ್ರಭುಗಳೂ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಶ್ರಮಿಸಿದ ಮೈಸೂರಿನ ಪ್ರಜೆಗಳೂ ಭಾಗಿಗಳಾಗಿದ್ದಾರೆ ನೂತನ ರಾಜ್ಯಾಂಗವನ್ನು ರಚಿಸುವ ವ ಸಾಕಾರ್ಯದಲ್ಲಿ ಮೈಸೂರಿನ ಪ್ರಜಾಪ್ರತಿನಿಧಿಗಳಿಗೆ ಯಶಸ್ಸು ಲಬಿಸಲೆಂದು ಹಾರೈಸುತ್ತೇನೆ ಅವರು ಇತರರಿಗೆ ಆದರ್ಶಪ್ರಾಯವಾದ ಶ್ರೇಷ್ಠ ರಾಜ್ಯಾಂಗವನ್ನು ರಚಿಸುವಂತಾಗಲಿ

ಮೌಂಟ್ ಬೇಟನ್
ಬಾರತದ ಗವರ್ನರ್ ಜನರಲ್

ಸರ್ದಾರ್ ಪಟೇಲರ ಸಂದೇಶ

ಮೈಸೂರು ಅರಸರ ಕೀರ್ತಿ ಇಮ್ಮಡಿಯಾಯಿತು

ಜವಾಬ್ದಾರಿ ಸರಕಾರದ ಸ್ಥಾಪನೆಗಾಗಿ ಅವಿಶ್ರಾಂತವಾಗಿ ದುಡಿದ ಸಯಕರ ಕನಸು ಇಂದು ಫಲಿಸಿದೆ ಪ್ರಜೆಗಳ ಬೇಡಿಕೆಗಳನ್ನು ತಪ್ಪದೆ ನೆರವೇರಿಸಿಕೊಟ್ಟರು ಪುದು ಮೈಸೂರಿನ ಅರಸರ ಕೀರ್ತಿಯನ್ನು ಇಮ್ಮಡಿ ಮಾಡಿದ ಸ್ವರ್ಗೀಯ ಮಹಾರಾಜರುಗಳ ಅನುಕೂಲ ವಾತಾವರಣವನ್ನು ಸೇರಿನ ರಾಜ್ಯಾಂಗಸಭೆಯು ಮೈಸೂರಿನ ಪ್ರಜೆಗಳ ಸಕ್ಷಾಪ್ರಜಾಯಗಳಿಗೆ ತಕ್ಕ ರಾಜ್ಯಾಂಗವನ್ನು ರಚಿಸಲಿ ಮೈಸೂರಿನ ರಾಜ್ಯಾಂಗವು ಇತರ ಸಂಸ್ಥಾನಗಳಿಗೆ ಮಾದರಿಯಾಗಲಿ

ಸರ್ದಾರ್ ಪಟೇಲ್.

ಪೊಸ ನೀರಾವರಿ ಯೋಜನೆಗಳು

ಮೈಸೂರು ಮತ್ತು ಮದರಾಸು ಪ್ರಾಂತಗಳೆರಡಕ್ಕೂ ಒಟ್ಟಿಗೆ ಉಪಯೋಗವಾಗನಂತೆ ಕೆಲವು ಹೊಸ ನೀರಾವರಿ ಯೋಜನೆಗಳನ್ನು ಕೈಕೊಳ್ಳಲು ಎರಡು ಸರಕಾರಗಳೂ ಆಲೋಚಿಸಿವೆ ಮದರಾಸಿನ ಮಂತ್ರಿಗಳಾದ ಶ್ರೀ ಭಕ್ತವತ್ಸಲಂ ಅವರು ಈ ಬಗ್ಗೆ ನುಡಾಡಿಲು ಇದೇ ೪೦೧೪ ನಿಯ ತಾರೀಖಿನ ದಿವಸ ಬೆಂಗಳೂರಿಗೆ ಆಗಮಿಸಿದ್ದರು ಸಂಸ್ಥಾನದ ಮುಖ್ಯ ಮಂತ್ರಿಗಳಾದ ಶ್ರೀ ಕೆ ಸಿ ರೆಡ್ಡಿಯವರೊಡನೆಯೂ, ಸಚಿವರಾದ ಶ್ರೀ ಎಚ್ ಸಿ ದಾಸಪ್ಪನವರು ಮತ್ತು ಶ್ರೀ ಕೆ ಟಿ ಭಾಷ್ಯಂ ಅವರೊಡನೆಯೂ ಅವರು ಸಮಾಲೋಚನೆ ನಡೆಸಿದರು ಸಂಸ್ಥಾನದ ಇಂಜಿನಿಯರುಗಳೂ, ಮದರಾಸು ಇಂಜಿನಿಯರುಗಳೂ ಈ ಸಮಾಲೋಚನೆಯಲ್ಲಿ ಭಾಗವಹಿಸಿದ್ದರು ಈ ಮಾತುಕತೆಯ ಫಲವಾಗಿ ಹಲವು ತಾತ್ಕಾಲಿಕ ನಿರ್ಧಾರಗಳಾದುವು

ಯೋಜನೆಗಳು

ಚಳ್ಳಕೆರೆ ತಾಲ್ಲೂಕಿನಲ್ಲಿ ವೇದಾವತಿ ನದಿಗೆ ಅಣೆಕಟ್ಟು ಕಟ್ಟುವುದರಿಂದ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಲ್ಲಿ ೮೦೦೦ ಎಕರೆ ಜಮೀನಾ ಮೈಸೂರು ಸಂಸ್ಥಾನದಲ್ಲಿ ೧೪೦೦ ಎಕರೆ ಜಮೀನಾ ಸಾಗುವಳಿಗೆ ಸಿದ್ಧವಾಗುವುವು

ಕಲ್ಯಾಣದುರ್ಗದ ಬಳಿ ಕಟ್ಟಬೇಕಿರುವ ಅಣೆಕಟ್ಟು ನಿಂದ ಮೈಸೂರು ಸಂಸ್ಥಾನದಲ್ಲಿ ೨೦೦೦ ಎಕರೆ ಜಮೀನೂ, ಮದರಾಸು ಪ್ರಾಂತದಲ್ಲಿ ೧೭೦೦೦ ಎಕರೆ ಜಮೀನೂ ಸಾಗುವಳಿಯಾಗುವುವು

ಅನಂತಪುರ ಜಿಲ್ಲೆಯ ಕುಮುದ್ವತಿ ನದಿಗೂ ಇದೇ ರೀತಿ ಅಣೆಕಟ್ಟು ಕಟ್ಟುವುದರಿಂದ ಎರಡು ಪ್ರಾಂತಗಳಿಗೂ ತುಂಬ ಉಪಕಾರವಾಗುವುದು.

ಹೊಸೂರಿನ ಬಳಿ ಇರುವ ಮೇಕೆದಾಟು ಎಂಬಲ್ಲಿ ವಿದ್ಯುಚ್ಛಕ್ತಿಯನ್ನು ತಯಾರಿಸಿದರೆ, ಮದರಾಸಿನ ಹಲವು ಪ್ರದೇಶಗಳಿಗೂ ಉಪಯೋಗವಾಗುವುದು.

ಹೈದರಾಬಾದ್-ಭಾರತ ಸಮಾಲೋಚನೆ

ಹೈದರಾಬಾದಿನ ಸಮಾಲೋಚನೆಗಳಲ್ಲಿ ಕೊನೆಯ ಘಟ್ಟವು ಆರಂಭವಾಗಲಿದೆ ಸ್ಟಾಂಡ್ ಸ್ಟಿಲ್ ಒಪ್ಪಂದಕ್ಕೆ ವಿರುದ್ಧವಾಗಿ ನಡೆದಿರುವ ಆಂಶಗಳನ್ನು ಮಾತ್ರ ಖಾಸಗೀ ಚರ್ಚೆಗಳಲ್ಲಿ ಪರಿಶೀಲಿಸಲಾಗುವುದೆಂದು ತಿಳಿಯ ಒಂದೆ ಇಂತಹ ಅಂಶಗಳು ಎಂದರೆ :–ಪಾಕಿಸ್ತಾನಕ್ಕೆ ಹೈದರಾಬಾದ್ ಕೊಟ್ಟರುವ ೫೦ ಕೋಟಿ ರೂ ಸಾಲ, ಹೈದರಾಬಾದಿನಲ್ಲಿ ವಿರೋಧಪ್ರಾಯೋಗಗಳನ್ನು ಕಟ್ಟು ನಿಜಾಮರು ಯುದ್ಧಸಿದ್ಧತೆಗಳನ್ನು ಮಾಡುತ್ತಿರುವುದು, ರಜಾಕರ ಪಾವಳಿಯನ್ನು ಅಡಗಿಸದಿರುವುದು, ಸಂಸ್ಥಾನದಲ್ಲಿ ನಿಜಾಮರು ಭಾರತದ ನಾಣ್ಯ ಜಲಾವಣೆಯನ್ನು ತಡೆದಿರುವುದು ಈ ಚರ್ಚೆಗಳ ಎರಡನೇ ಘಟ್ಟದಲ್ಲಿ ಶಾಶ್ವತ ಒಪ್ಪಂದಕ್ಕೆ ಅನ್ವಯಿಸುವ ವಿಚಾರಗಳು ಎಂದರೆ ಭಾರತ ರಾಷ್ಟ್ರಕ್ಕೆ ಸಂಸ್ಥಾನವು ಸೇರುವಿಕೆ ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆ ಮೊದಲಾದ ಅಂಶಗಳನ್ನು ಚರ್ಚಿಸಲಾಗುವುದು

ಅಟಾಮಿಕ್ ಸಂಶೋಧನೆಯ ಬಗ್ಗೆ ಪಂಡಿತ ನೆಹರೂರವರ ಹೇಳಿಕೆ

ಅಟಂ ಶಕ್ತಿಯ ಸಂಶೋಧನೆ ಮತ್ತು ಹತೋಟಿಯ ಮಸೂದೆಗೆ ಭಾರತ ಡೊಮಿನಿಯನ್ ಪಾರ್ಲಿಮೆಂಟಿನ ಒಪ್ಪಿಗೆ ದೊರೆಯುವ ಮಸೂದೆಯ ಉದ್ದೇಶಗಳನ್ನು ವಿವರಿಸುತ್ತ ಪಂಡಿತ ನೆಹರೂರವರು ಅಟಂ ಶಕ್ತಿಯ ವಿಸ್ತಾರಕ ಶಕ್ತಿಯನ್ನು ಮೊಠಸಿ ಅದನ್ನು ಮಾನವನ ಕಲ್ಯಾಣಕ್ಕಾಗಿಯೂ ಕೈಗಾರಿಕೆಗಳ ಅಭಿವೃದ್ಧಿಗಾಗಿಯೂ ಸದ್ವಿನಿಯೋಗಪಡಿಸಲಾಗುವುದೆಂಬ ತಮ್ಮ ಭರವಸೆಯನ್ನು ವ್ಯಕ್ತಪಡಿಸಿದರು

" ಸಮರಸನ್ನಾಪದ ದೃಷ್ಟಿಯಿಂದ ಈ ಮಸೂದೆಯನ್ನು ಸಭೆಯ ಮುಂದೆ ಇಟ್ಟಿಲ್ಲ ಭಾರತದ ಸಂಪದ ಭಿವೃದ್ಧಿಗಾಗಿ, ಭಾರತದ ಪ್ರಜೆಗಳ ಮತ್ತು ಪ್ರಪಂಚದ ಸುಖಸಾಧನೆಗಾಗಿ ಅಟಂ ಶಕ್ತಿಯನ್ನು ಸದ್ವಿನಿಯೋಗ ಪಡಿಸಬೇಕೆಂಬುದೇ ಈ ಮಸೂದೆಯ ಉದ್ದೇಶ್ಯ' ಪ್ರಪಂಚದ ಮಹಾರಾಷ್ಟ್ರಗಳಲ್ಲಿ ಅಟಂ ಸಂಶೋಧನೆ ಬೆರುಸಿನಿಂದ ಸಾಗುತ್ತಿದ ಭಾರತವು ಅಟಂ ಸಂಶೋಧನೆಯಲ್ಲಿ ಆಸಕ್ತಿಯನ್ನು ತೋರಿಸದಿದ್ದರೆ ಹಿಂದೆ ಬೀಳುವುದು ನಿಶ್ಚಯ! ಅಟಂ ಸಂಶೋಧನೆಗೆ ನೆಮ್ಮಲ್ಲಿ ಹೇರಳವಾದ ಸಾಧನಸಂಪತ್ತುಗಳಿವೆ ನೈಪುಣ್ಯವಿಗಳಾದ ವೈಜ್ಞಾನಿಕರಿದ್ದಾರೆ ಅವರಿಗೆ ಸವಲತಾಶ ಕಲ್ಪಿಸಿಕೊಡಬೇಕು —ಎಂದುದಾಗಿ ತಿಳಿಸಿದರು

ಒಂದು ತೆಂಗಿನಕಾಯಿಗೆ ೫ ರೂಪಾಯಿ

ಲಂಡನ್ನಿನಲ್ಲಿ ಈಗ ತೆಂಗಿನಕಾಯಿಯ ಬೆಲೆ ಒಂಭತ್ತು ಏರಿದೆಯಂತೆ! ಒಂದು ತೆಂಗಿನಕಾಯಿಗೆ ೫ ರೂಪಾಯಿ ಕೊಡಬೇಕಂತೆ!

ದೀಕ್ಷಾಸಂಸ್ಕಾರ

ಗುಡಿಗೇರಿ ತಾ|| ಶ್ರೀ ಮುಕ್ತಿಮಂದಿರ ಗುರುಳುಲದಲ್ಲಿ ತಾ|| ೯ ಇ-೪೮ ನೆಯ ದಿನಸ ಶ್ರೀ ಬಟ್ಟೂರು ಪಟ್ಟಾಭ್ಯಧ್ಯಕ್ಷರ ದಕ್ಷಿಣ್ಯತೆಯಲ್ಲಿಯೂ, ಶ್ರೀ|| ಗಂಗಾಧರ ಶಾಸ್ತ್ರಿಗಳ ಮತ್ತು ವಿರೂಪಾಕ್ಷಶಾಸ್ತ್ರಿಗಳ ಪೌರೋಹಿತ್ಯ ದಲ್ಲಿಯೂ ೧೦-೧೨ ಜನ ಮಾಹೇಶ್ವರ ವಟುಗಳಿಗೆ ದೀಕ್ಷಾಸಂಸ್ಕಾರವು ವಿಜೃಂಭಣೆಯಿಂದ ನೆರವೇರಿತು ಈ ಕಾರ್ಯವನ್ನು ಶ್ರೀ|| ವೀರಬಸವಸಯ್ಯನವರು ಹಿರೇಮಠ ಇವರು ಸರ್ವರ ಸಹಾಯವನ್ನು ಪಡೆದು ನೆರವೇರಿಸಿದರು ಈ ಮಜಾಶಯರಿಂದ ಮುಂದೆ ಆಗಲಿರುವ ಎಲ್ಲ ಧರ್ಮಕಾರ್ಯಗಳಿಗೂ ಸರ್ವರೂ ಸಹಾಯ ಮಾಡಬೇಕೆಂದು ಕೋರಿಕೆ

ಬಸವಣ್ಣಯ್ಯ, ಕಲ್ಲೂರು ಹಿರೇಮಠ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಶುಭೋತ್ಸವ

ಪ್ರತಿವರ್ಷದ ಪದ್ಧತಿ ಪ್ರಕಾರ ಶ್ರೀ ವಿಶ್ವಾರಾಧ್ಯ ಮಹಾಗುರುಕುಲಾಶ್ರಮದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಭಗವತ್ಪಾದರವರ ಜಯಂತೀಮಹೋತ್ಸವವು ಇದೇ ಫಾಲ್ಗುಣ ಶು॥ ೧೩ ಮಂಗಳವಾರ ವಿಧ್ಯುಕ್ತವಾಗಿ ನೆರವೇರಿತು. ಅಂದು ಪ್ರಾತಃಕಾಲ ಶ್ರೀ ಲಿಂಗೋದ್ಭವ ಮೂರ್ತಿಗೂ ಶ್ರೀ ಸೋಮನಾಥಸ್ವಾಮಿಗೂ ರುದ್ರಾಭಿಷೇಕವೂ ಮಧ್ಯಾಹ್ನ ಮಾಹೇಶ್ವರ ಸಂತರ್ಪಣೆಯೂ ನಡೆದುವು

ಸಾಯಂಕಾಲ ೮ ಘಂಟೆಗೆ ಜಗದ್ಗುರು ಸೀರೋತ್ತ ರಾಧಿಕಾರಿಗಳಾಗಿರುವ ಶ್ರೀ ವಿಶ್ವೇಶ್ವರಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜ್ಞಾನಸಮಂದಿರದಲ್ಲಿ ಸಭೆಯು ನೆರವೇರಿತು ಸಭೆಗೆ ಕರ್ನಾಟಕ ಮಹಾರಾಷ್ಟ್ರ ಪ್ರಾಂತಗಳ ಯಾತ್ರಿಕರು ಆಗಮಿಸಿದ್ದರು ಪ॥ ಬ್ರ॥ ಶ್ರೀ॥ ಸಿದ್ಧರಾಮಶಿವಾಚಾರ್ಯರು ರೌಡಕುಂದಿ, ಪ॥ ಬ್ರ॥ ಶ್ರೀ॥ ಪಂಚಾಕ್ಷರಶಿವಾಚಾರ್ಯರು ವೈಜಿಗಕರ, ವೇ॥ ಗಂಗಾಧರಶರ್ಮರು ಅನುಗೊಂಡ, ವೇ॥ ಸೋಮಶೇಖರಶರ್ಮಾ ನೀತಿಗೆರೆ, ವೇ॥ ಸಂ ಸೋಮಶೇಖರಶರ್ಮಾ ರಾಯಚೂರು, ವೇ॥ ಕರೂರು ನುದ್ರ ಕೊಟ್ಟಪ್ರಯ್ಯನವರು ಶ್ರೀ ರೇಣುಕರ ಶಿಷಾದ್ಯೆತ ಸ್ವಾಮಿನ ಕರ್ತೃತ್ವ, ಅವರ ತತ್ತ್ವಪ್ರಸಾರ, ಜಯಂತಿಯ ಉದ್ದೇಶ್ಯ, ಆದರ ಮಹತ್ತ್ವ ಮಾನವ ಧರ್ಮ, ನಿಷ್ಕಾಂತಶಿಖಾಮಣಿಯ ಸಾರಾಯಣ ಮತ್ತು ಆದರ ಪ್ರಚಾರ ಇತ್ಯಾದಿ ವಿಷಯಗಳ ಬಗ್ಗೆ ಒತು ಮನೋಹರವಾಗಿ ವ್ಯಾಖ್ಯಾನ ಮಾಡಿದರು ಆನಂತರ ಶ್ರೀ ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳು ಮಾರಾಧ್ಯ ಮತ್ತು ಕನ್ನಡದಲ್ಲಿ ಅಪ್ಪಣೆಕೊಡಿಸಿದಮೇಲೆ ನ ೦ಗಳ ಪುಷ್ಪಾಂಜಲಿಯೊಂದಿಗೆ ಸಭೆಯು ಮುಕ್ತಾಯವಾಯಿತು

M S Somasekhara Shastri
ಕಾರ್ಯದರ್ಶಿ

ಗದಗ

ಗದಗ ಪಟ್ಟಣದಲ್ಲಿರುವ ಶ್ರೀಜಗದ್ಗುರು ಪಂಚಾಚಾರ್ಯಸೇವಾಸಂಘದವರು ಶ್ರೀ॥ ಪ॥ ಬ್ರ॥ ರೇಣುಕಾಚಾರ್ಯ ಶಿವಾಚಾರ್ಯಸ್ವಾಮಿಗಳು ಬೃಹಸ್ಪರ ಚಿಕ್ಕಮಣ್ಣೂರು ಇವರನ್ನು ಬರಮಾಡಿಕೊಂಡು ಅವರ ಅಧ್ಯಕ್ಷತೆಯಲ್ಲಿ ಕಮಟಿಯನ್ನು ಮಾಡಿ ತಾ॥ ೧೯-೩-೪೪ ನೆಯ ದಿವಸ ಪಕ್ಕಲಬೀಡಿ ರಾಜೋಟ ವೀರಭದ್ರದೇವರ ಗುಡಿಯಲ್ಲಿ ಪ್ರವಚಪಪಟು ವೇ॥ ಸಿದ್ಧಲಿಂಗಸ್ವಯಂ ಪಂಚಕ್ಕಗಿರ ಹಿರೇಮಠ ಕುಂದಗೋಳ ಇವರಿಂದ ಶ್ರೀಜಗದ್ಗುರು ರೇಣುಕಾಚಾರ್ಯರ ಪುರಾಣವನ್ನು ಪ್ರಾರಂಭಿಸಿದರು ಸಂದರ್ಭಕ್ಕನುಸಾರವಾಗಿ ಚಿಕ್ಕಮಣ್ಣೂರು ಸ್ವಾಮಿಗಳ ಒಪ್ಪು ಪ್ರಾಸ್ತಾವಿಕ ಭಾಷಣವನ್ನು ಮಾಡುತ್ತಿದ್ದರು ನವುನ್ನ ಧರ್ಮದ ಸ್ಥೀಪುರುಷರು ಒಬ್ಬ ಬಕ್ತಿಯಿಂದ ಜಗದ್ಗುರುಗಳವರ ಮಹಿಮೆಯನ್ನು ಕೇಳಿ ಆನಂದ ಪಡುತ್ತಿದ್ದರು ಲಜ್ಜೇಶ್ವರದೇಣಾಯಿ ಶೀ॥ಸಾ॥ ಶಂಕರಾಚಾರ್ಯ ಇವರು ಮತ್ತು ಇವರ ಧರ್ಮಪತ್ನಿಯವರಾದ ಸೌ॥ ಪಾರ್ವತ್ಯಮ್ಮನವರು ಶ್ರೀಜಗದ್ಗುರು ರೇಣುಕಾಚಾರ್ಯರ ಫೋಟೋ ಆನ್ನು ಪೂರ್ಣಾ ಫೋಟೋಗಳನ್ನು ಹಾಗೂ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಯನ್ನು ಕಳುಹಿಸಿ ಮಹೋತ್ಸವಕಾರ್ಯಕ್ಕೆ ಹೆಚ್ಚಿನ ಕೋಳ್ಳೆಯನ್ನುಂಟುಮಾಡಿದರು ತಾ॥ ೨೩ ೩-೪೬ ನೆಯ ಮಂಗಳವಾರ ಶ್ರೀಜಗದ್ಗುರು ರೇಣುಕಾಚಾರ್ಯರ ಮೂರ್ತಿಗೂ ಹಾಗೂ ಶ್ರೀ ರಾಜೋಟ ವೀರ ಭದ್ರದೇವರ ಮೂರ್ತಿಗೂ ರುದ್ರಾಭಿಷೇಕಾದಿಗಳು ನಡೆದು ಗಣಾರಾಧನೆ ನೆರವೇರಿತು ಗವರ್ನಮೆಂಟಿನ ಆರ್ಡರ್ ಮೇರೆಗೆ ತಾ॥ ೨೭-೩-೪೬ ನೆಯ ದಿವಸ ಹೆಳ ಬಂಡಿಯ ಮೇಲೆ ಕೀರುಳ್ಳಿ ಆದರಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಯನ್ನು ಮೂರ್ತಿಗೊಳಿಸಿ ಮಂಗಳವಾದ್ಯದೊಡನೆ ಉತ್ಸವನವನ್ನು ನೆರವೇರಿಸಲಾಯಿತು ಹಿರೇಕೊಪ್ಪದ ಶ್ರೀಜಗದ್ಗುರು ಪಂಚಾಚಾರ್ಯ ಭಜನಾಸಂಘದವರು ಬಹು ಸಿಸ್ತಿನಿಂದ ಭಜನೆಯನ್ನು ಮಾಡಿದರು. ಬ್ಯಾಂಡು, ಡೊಳ್ಳು, ಭಜಂತ್ರಿ, ಕಹಳೆ ಮೊದಲಾದ ವಾದ್ಯಗಳು ಭೋಗರೆಯುತ್ತಿದ್ದವು ರಥಕ್ಕೆ ೧೦೧ ಎತ್ತುಗಳನ್ನು ಹೂಡಿ ಪಟ್ಟಣದ ಮುಖ್ಯ ಮುಖ್ಯ ಬೀದಿಗಳಲ್ಲಿ ಮಹೋತ್ಸವವು ಮಹಾವೈಭವದಿಂದ ನಡೆಯಿತು ಸಹಸ್ರಾರು ಜನ ಸುಮಂಗಲೆಯರು ಆರತಿಗಳನ್ನು ತೆಗೆದುಕೊಂಡು ಉತ್ಸವದ ದಲ್ಲಿ ಭಾಗಿಗಳಾಗಿದ್ದರು ಲಕ್ಷಾಂತರ ಜನರು ಮಾಡು ತ್ತಿದ್ದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಜಯ ಕಾರವು ನಭೋಮಂಡಲವನ್ನು ವ್ಯಾಪಿಸಿತ್ತು ಇಂತಹ ಪ್ರಚಂಡ ಉತ್ಸವವು ಈ ಪಟ್ಟಣದಲ್ಲಿ ಎಂದೂ ಆಗಿಲ್ಲ ವೆಂದು ಜನರು ಉದ್ಗಾರ ತೆಗೆಯುತ್ತಿದ್ದರು ಇದಕ್ಕೆಲ್ಲಾ ಚಿಕ್ಕಮಣ್ಣೂರು ಸ್ವಾಮಿಗಳವರ ಕಾರ್ಯಪ್ರಜ್ಞತೆಯೇ ಮುಖ್ಯಕಾರಣವೆಂದು. ಹೇಳಲಡೆ ಅತಿಶಯೋಕ್ತಿ ಯಾಗದಾರದು ಉತ್ಸವವು ರಾತ್ರಿ ೧೦ ಘಂಟೆಗೆ ದೇವಸ್ಥಾನಕ್ಕೆ ಬಂದಿತು ಆಗ್ಗೆ ಚಿಕ್ಕಮಣ್ಣೂರು ಸ್ವಾಮಿಗಳವರು ವೀರಶೈವಸಿದ್ಧಾಂತಶಿಖಾಮಣಿ ಸಾರಾಯಣ ಗ್ರಂಥವನ್ನು ಸರ್ವರೂ ಇಷ್ಟೇ ರೀತಿ ಮಾಡಬೇಕೆಂದು ಭಾಷಣಮಾಡಿದರು ಆನೇಲೆ ಹಲ್ಗಾಪುರ ಕೊಪ್ಪಡಗರು ಸಜ್ಜಾ ಯಜ್ಞಪ್ಪನವರು ಮಾನವರ ಕರ್ತವ್ಯದ ಬಗ್ಗೆಯೂ, ವೇ॥ ಪಟವರ್ಯನವರು ಹಿರೇಸೂರ ಬೆದವಪ್ಪ ಮಾಸ್ತರ ಟ್ರೇನಿಂಗ್ ಕಾಲೇಜ ಇವರು ಲಿಂಗಮಯ ಜಗತ್ತು ಎಂಬ ಬಗ್ಗೆಯೂ, ಶ್ರೀ ಸಿದ್ಧಲಿಂಗದೇವರು ಜಯಂತಿ ಬಗ್ಗೆಯೂ ಮನೋಹರವಾದ ಭಾಷಣಮಾಡಿದರು ಒಳಿಕ ಮಂಗಳಮಂಡಿಸಿ ಸಭೆಯು ವಿಸರ್ಜಿಸಲ್ಪಟ್ಟಿತು

ಸೆಕ್ರೆಟರಿ

ಶ್ರೀಜಗದ್ಗುರು ಪಂಚಾಚಾರ್ಯ ಸೇವಾ ಸಂಘ, ಗದಗ

ಕಲಬುರ್ಗಿ

ಸ್ವಸ್ತಿಶ್ರೀವರ್ಷದ ಪದ್ಧತಿಯಂತೆ ಫಾಲ್ಗುನ ಶುದ್ಧ ೧೩ ಮಂಗಳವಾರ ದಿವಸ ಇಲ್ಲಿಯ ಹಿರೇಬುಜಾರಿ ಪರುಷ ಮೆರದ ಪಂಚಾನುಂಡಲಿಯವರು ಶ್ರೀಮಾನ್ ದೊಡ್ಡಪ್ಪ ಅಪ್ಪ ಮಾಲೋದೆಯರ ತತ್ವಜ್ಞತೆಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವನ್ನು ಸಾಟಾ ವೈಭವದಿಂದ ಸಂಪನ್ನೆಸಿದರು ಸಭೆಗೆ ಶ್ರೀ ಷಾರಿಗಿ ಸಭ್ಯದಸ್ಯಾಮಿಗಳಾದ ಸಕ್ಕರಗಿ ವೀಕಮ ಖರಾದ ಶ್ರೀಮಾನ್ ಸಿದ್ಧರಾಮಪ್ಪನವರು, ಸೌ॥ ಗೋಮಾ ಹಂಯಿಯವರು ಇನರೇ ಮೊದಲಾದವರು ಆಗಮಿಸಿದ್ದರು ಮೊದಲು ಆಚಾರ್ಯರ ಭಾವಚಿತ್ರಕ್ಕೆ ಪೂಜೆ ಯಾದಮೇಲೆ ಕುಮಾರಿ ಮಜಾವೇನಮ್ಮ ವಲ್ಲಾಶ್ಯರ ಮರ ಮತ್ತು ಶಾಂತಾಬಾಯಿ ಇವರು ಆಚಾರ್ಯರ ವ ನಗಳಗೀತೆಗಳನ್ನು ಪಾಡಿದರು ಆನಂತರ ವೇ॥ ಬಸವಲಿಂಗಯ್ಯ ಮತ್ತು ಚಂಗಲಯ್ಯ ಇವರು ಆತಾ ರ್ಯರ ಆಗಾಧ ಮಹಿಮೆಯನ್ನು ಮತ್ತು ಇವರ ನಿಷ್ಕಾಂತವನ್ನು ಕುರಿತು ಮನೋಹರವಾಗಿ ಭಾಷಣ ಮಾಡಿದರು ಬಳಿಕ ಶ್ರೀಮಾನ್ ಒಸನಣ್ಣಪ್ಪ ಜವಳಿ ಇವರು ಶ್ರೀಜಗದ್ಗುರು ಸಂಚಾರ್ಯರ ಮಹಿಮೆಯನ್ನು ವರ್ಣಿಸಿ, ಅನ್ನಾವರಣ ಮತ್ತು ಪಂಚಾಚಾರಗಳ ವಿಷಯವನ್ನು ವ್ಯಮಾಣಪುರ್ವಕವಾಗಿ ವಿವರಿಸಿದರು ಆನೇಲೆ ಬಂದವ್ಯ ಮಾರ್ತ್ತ ಇವರು ವೀರಶೈವ ಧರ್ಮದ ಪ್ರಾಚೀನತ್ವವನ್ನು ಅನೇಕ ಪ್ರಮಾಣಗಳ ನೂಲಿಳ ವಿಶದಪಡಿಸಿದರು ತರುವಾಯ ವೇ॥ ಸಡಕ್ಷರಯ್ಯನವರು ಪಲ್ಲಾಪುರಮಠ ಇವರು, ಶೈವವರ್ಧಮ ರಹಸ್ಯವನ್ನು ಇತಿಹಾಸ ದೃಷ್ಟಿಯಿಂದ ವಿವರಿಸುತ್ತ ಶೈವ ಧರ್ಮವು ಪ್ರಪಂಚದಲ್ಲಿರುವ ಎಲ್ಲಾ ಧರ್ಮಗಳಿಗಿಂತಲೂ ಬಹು ಪ್ರಾಚೀನವಾದುದೆಂದೂ, ಮೆಹೆಂಜೊದಾರೋ ಮತ್ತು ಹರಪ್ಪನಲ್ಲಿ ದೊರೆತಿರುವ ಅವಶೇಷಗಳು ಶೈವಧರ್ಮದ ಪ್ರಾಚೀನತ್ವವನ್ನು ಸೃಷ್ಟಿಗೊಳಿಸುವ ವೆಂದೂ, ಒಳ್ಳೇ ಪರಿಣಾಮಕಾರಕವಾಗಿ ಭಾಷಣ ಮಾಡಿದರು ಮಃ॥ ರಾ॥ ಚನ್ನಪ್ಪಮಪ್ಪ ಸಜ್ಜನೂರು, ಸಂಗಪ್ಪ ಗೊಬ್ಬೂರು, ಸಿದ್ಧರಾಮಪ್ಪ ಜಾವಳಗಿ, ಶಿವಶರ ಣಪ್ಪ ಮಾಸ್ತರ್ ಇವರೇ ಮೊದಲಾದ ಗುರುಭಕ್ತರು ಆಚಾರ್ಯರ ಜಯಂತಿಯ ಒಗ್ಗೆ ಹಸ್ತಪತ್ರಿಕೆಗಳನ್ನು ಎಳ್ಳ ಕಡೆಗೂ ಪ್ರಚಾರ ಮಾಡಿ ಸರ್ವರಿಗೂ ತಿಳಿಯು ವಂತೆ ಮಾಡಿದರು ಈ ಕಾರ್ಯದಲ್ಲಿ ಭಾಗವಹಿಸಿದ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ಮಂಗಲವ ಸ್ಥೀಯಲೆಂದು ಪ್ರಾರ್ಥಿಸುವ.

ಒಲೆ ಗುರುಭಕ್ತ.

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

« ದುಃಖಾಂಧಧೀಹಾರ್ತ್ತಂದನೆಂ »

ಶ್ರೀವೀರಭದ್ರನಾಮದಿ ।
ಭೂವಲಯದಿ ಕೀರ್ತಿವೆತ್ತ ಜಗದಾಚಾರ್ಯಾ ॥
ಧೀವರವಾರತಿರೋಮಣಿ ।
ಭಾವಿಸೆ ನಿನ್ನಂಥ ಜಾಣ ಬೆಡಕಿದರುಂಟೇ ? ॥೧॥

ಚದರೆಯ ನುಡದಲಿ ಜನಿಸಿದೆ ।
ಒಧರಿಗೆ ಕಣ್ಣಾದೆ ವೀರಶೈವಾಚಾರ್ಯಾ ॥
ಮೈದಮನುಭುವೈಲಿಯಂ ಸದು ।
ಹೃದಯರ ನೀನಾಗಿಸಿದೆಯೊ ! ನಾಸ್ತಿಕಜನಮಂ ॥೨॥

ಪರಾವದಿವಸರಮಂ ನೀ ।
ನುರುತರಧೀರತೆಯೊಳನಮಶಾಸ್ತ್ರೀಯತೆಯಂ ॥
ಸಂಭವನೆಗೊಳಸುತೆ ಶಿವನುತ ।
ದಿರವಂ ತಿಳುಸಿದೆಯಲ್ತೆ ! ಜಗದಾಚಾರ್ಯಾ ॥೩॥

ಸಾಸದಿ ಭೂತಿಯ ಪೆಸರಿಂ ।
ಮಾಸಿಕಮಂ ಪೊರದಿಸಿತ್ತೆ ತೆನಗಿನ ನುಡಿಯೊಳ್ ॥
ಭಾಸುರಕೀರ್ತಿಯಂ ಪಡೆದಿರೆಯೊ ।
ಸೋಽಸಿಪಿರೆಯೊ ! ಕಲುಷಜಲವ ಜ್ಞಾನಾಂಶುಗಳಿಂ ॥೪॥

ನಿನ್ನಯ ಮಾರ್ಪ್ಪಾಡಿಮೆಯಂ ।
ಸನ್ನುತ್ತೆತ್ತಿಯನು ಶಿರಭಾಸನವನರಿಯು ॥
ತನ್ನತ್ತ ಕಾತಿಪೀಕವು ।
ತನ್ನೆಡೆಗೆಡತ್ತು ಸೂಜಗಜ್ ಸೂಜಯವ್ಮೋಲ್ ॥೫॥

ಶಾರದೆ ಪುರುಷಾಕಾರದಿ ।
ಧಾರುಣಿಗಳಿದಿಗ ಜ್ಞಾನಸಂಹಾಸನಮಂ ॥
ವಿರಿ ಳಳಾಧರಣಂತಿರೆ ।
ರಾರಾಜಿಸಿ ಮೆರೆದು ತೋರಿ ಮರೆಯಾದಳೆ ಜಾ ! ॥೬॥

ಸಮತೆಯ ಖನಿ ನೀನಿದ್ದೆಯೊ ।
ಮಮತೆಯ ಮೂರ್ತಿಸ್ವರೂಪನಾಗಿದ್ದೆಯೊ ! ದಲ್ ॥
ಕುಮತಧ್ವಾಂತವಿವಾಕರ ।
ಸುಮತಸುಧಾಸಿಂಧುಚಂದ್ರ ನೀಂ ಗುರುಚಂತ್ರಾ ॥೭॥

ಭೂರತನವೋದಯದವಲಿ ।
ಧಾರಿಯೆ. ತೋರಿಸುವ ಕಲಿಯೆ ರವಿಯೇ ಹಾ ಹಾ ॥
ನೀರಿನೆ ನಲ್ಲೆ ನಾ ಮೀನಂ ।
ನೀರಜ್ಜಪೊಡೆಂತು ಬದುಕಿ ಬಾಳುವೆವಯ್ಯಾ ॥೮॥

ಅಡೆತಡೆನುಸುರ್ವೆಂ ಮತ್ತೆ ।
ನ್ನಾಡೋಡನಕಟಕಟೆ ತೋಡಿಕೊಳ್ಳುವೆನಯ್ಯೋ ॥
ಆರೇಂ ನೈಯುನತ್ತೆ ಮಾ ।
ರಾಯ ಕೃಪೆಯಿಲ್ಲವಾದುದೆನ್ನುಗಳೊಳು ಪಾರ್ಯೆ ॥೯॥

ಗುರುಕುಲವನಾಥವಾಯತು ।
ವರಲಿಂಗಿಧರ್ಮಲತೆಯದು ಬಾಡಿತು ಕಾಶೀ ॥
ಪುರದ ಪ್ರಭಾಮೂರ್ತಿಯು ।
ಹರವಲಿ ಬೆರೆಯಲು ವಿಕಾಸವೆಳೆಯುತು ಹಾ ಹಾ ॥೧೦॥

ಕನ್ನಡಿಗರ ಭೈಯೊಗಿನ ।
ಕನ್ನಡಿಯೇ ನೀನು ಕನ್ನಡತ್ಯನ ನೊರೆಯುಂ ॥
ಮನ್ನಿಸಿ ಕೇಳದೆ ಬಿಡಿಸದೆ ।
ಬನ್ನೆವೆ ಳಳೆಯದೆಯೆ ಶಿವಪು ಬಾಯೆಂದಸೆ ಹಾ ॥೧೧॥

ಸಂಯಹ ನಮ್ಮಯ ಧಾರ್ಯದ ।
ಪರವೆಯು ಮುಸುಕಿಮದು ತಮವು ಭಾರತದೆಯೊಳ್
ಕರುಣೆಯೆ ಬಾ ಬಾ ಬಾರ್ಯೆ ।
ಮರಳೆ ಮಹೀತಳವ ಬೆಳಗು ಬಾ ಗುರುರಾಜಾ ॥೧೨॥

ಕರುಣಾಧಿಯಾದುವರಿಂ ।
ಕರಣಾಗತವಾಲನೆಂಬ ಬಿರುದಿಹ ಕತಿಂ ॥
ಗಿರಿಜಾಪತಿ ಕಳುಪುತ್ತುಂ ।
ಕರುಣಿಸು ನೀಂ ವೀರಭದ್ರಮಹಿಮನ ಮಗುಳೆ ॥೧೩॥

ಶೋಭಕೃತ್ ಸಂವತ್ಸರ
ಬಾಳ್ಳು ಹಸ್ತಪತ್ರಿ ಗಂಗಾಧರಶಿವಾಚಾರ್ಯ
ಜಡೆಮಳ್ಳ ಮೊರಬ.

ಸಿದ್ಧಾಂತ ಶಿಖಾಮಣಿ

ವೀರಶೈವಮತವಲ್ಲಿ ಜನ್ಮಪ್ರಾರಂಭಮಾಡಿದ ಪ್ರತಿಯೊಬ್ಬ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥವಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಜ್ಞಾಪನಾರ್ಥ ಆಸ್ಮತ್ಪೂರ್ವಜರಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ಏತೇ ಶೈವಮತವಲ್ಲಿ ಸಜ್ಜ್ಞಾ ದೊರೆಯತಕ್ಕ ಗ್ರಂಥಗಳಲ್ಲಿಲ್ಲ ಇದೇ ಬಾಯ ಪುರಾತನಗ್ರಂಥಪಠನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೩ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀತಿವಯೋಗಿಶಿವಾಚಾರ್ಯ**ರೆಂಬ ಆಜಾಯಂರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಕೂಡಲ್ಪಟ್ಟಿರುವದರಿಂದ, ಇದಕ್ಕೆ ಇಂದಿನವರಿಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನವಲ್ಲಿಯಾದರೂ ಗೂಢಾರ್ಥಗರ್ಭಿತವಾದ ತೊಟ್ಟಿಗಳಿಗೆ ಸಂಬಂಧವಲ್ಲದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮುವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದನೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ತೊಣಕುಸ್ವರ ಚಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಪೂರ್ಣಾಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಹಾಗೂ ಇತರ ಶಾಸ್ತ್ರಗ್ರಂಥಗಳು ಬೋಧಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀರೇಣು ಕಾಚಾರ್ಯರ ಲಿಂಗಚರಿತದ ಫೋಟೋ (ನಾನಾವಿಧವರ್ಣಗಳಿಂದ ಮುದ್ರಿತವು ದುಡ್ಡು) ಸೈಜು ೧೪×೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚ ಚಾರ್ಯರು ಗಂಜಿಮಠಗಳಿಗೆ ಶಿವಪಿಡಾಭಿಷಕವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗವಂತ ರವ ಫೋಟೋ ಸೈಜು ೧೪×೧೦ ಬೆಲೆ ೧೪೪	೦—೩—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಿವಲಿಂಗಾಚಾರ್ಯರಿಗೆ ಚಂದ್ರಮೌಳೀಶ್ವರ ವಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಧೇಸಣನ ಪ್ರಾರ್ಥನೆಯಂತೆ ೩ ಕೋ೬ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯ ಹಾಸ್ಯಮಿಗಳವರ ಫೋಟೋ (ನಾನಾವಿಧವರ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭ ಪುರಿ ಜಗದ್ಗುರುಗಳು ಕಂಠಿಕಾಧಾರಣಮಾಡುವ ಫೋಟೋ	೦—೧—೬
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಅಳವಡಿಸಿಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಒಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಗಿಳ್ಳೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಗಿಳ್ಳೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದಾರದ ಅಕ್ಕಂತ ಸುಂದರವಾದ ಫೋಟೋ ಗಿಳ್ಳೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅಕ್ಕಂತ ಪ್ರಾಚೀನ ಕಟ್ಟಿಡದ ಸುಂದರ ಫೋಟೋ ಗಿಳ್ಳೆ	೦—೧—೬
ಶ್ರೀ ಜಗದ್ಗುರು ಕೇದಾರೇಶಿಂಹಾಸನದ ಅಕ್ಕಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾದಾಜರವರು ವಿಣಾಶುಶ್ರುತಿಯ ಫೋಟೋ	೦—೧—೬
ಲಿಂಗಧಾರಣ ಕಂಠಿಮಾಲ್ಯೋಪವೀತ ನಿವೇದಿತ ರಂಭಾಪುರೀ ಜಗದ್ಗುರುಗಳ ಅಷ್ಟಪ್ಪಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರು ರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪುಂಜವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೨ ಆಣೆ
ಚಿಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುಚತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುಖಿವಾಚಾರ್ಯಶತಕ	೨ ಆಣೆ
ಶಿವಶತ್ಕವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) ..	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪುಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ...	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ) .. -	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಕೈವೋಪನಿಸತ್ಸಂಗ್ರಹ (ಸಂಸ್ಕೃತ) ...	೪ ಆಣೆ
ವೀರಶೈವ ಸ್ಯಾಯತ್ತಿತ್ತ ವಿಧಿ	೪ ಆಣೆ
ವೈದಿಕಾಚಾರ್ಯರ ಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂಶೈಷ್ಟಿ—ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಜಗತ್ಸ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ..	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವೇಶ್ವಾಂತದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ ...	೧ ರೂ.
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ...	೧ ರೂ.
ವೈದಿಕಶಿವಪೂಜಾವಿಧಿ (ಸೈವಿಸ್ತರಯುತ್ತವಾದುದು ೨ನೆಯ ಆವೃತ್ತಿ)	೧೫ ರೂ
ಶ್ರೀಕರಭಾಷ್ಯಂ (ಚಿತ್ರಸೂತ್ರ) ...	೧೫ ರೂ
ವೀರಶೈವರತ್ನ (೩ನೆಯ ಆವೃತ್ತಿ, ೭೦ ಮಹತ್ವದ ಫೋಟೋಗಳಿಂದುವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟಿದ್ದು) ..	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ರೂ
ಶಿವಾಗಮಸಂಗ್ರಹ: (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟ ಮಹಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	**೩ ಕ**
ವೀರಶೈವರತ್ನ (ಮರಾಠಿ)	**೧ ರೂ**
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	**೨ ರೂ.**
ಲಿಂಗಧಿಕಾರಕಾರಿಕಾ (ಸಂಸ್ಕೃತ)	**೨ ಆ.**

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Sbri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವದೆಸೆಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ. ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೯ನೇ ಏಪ್ರೆಲ್ ೧೯೪೪ [ಸಂಚಿಕೆ ೫೨

॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ನಮಃ ॥

ಶಿವಭಕ್ತಿಯ ಮಹತ್ತ್ವ

ಶ್ರೀಚಟ್ಟದಸ್ವಾಮಿಗಳು, ಹಿರೇಮಠ ಕೊಣ್ಣೂರು

ಭಕ್ತಿ ಎಂದರೆ ದೇವರಲ್ಲಿಯೂ, ಗುರುವಿನಲ್ಲಿಯೂ ಇಟ್ಟಿರುವ ಪರಮ ಪ್ರೀತಿ ಶಿವಭಕ್ತಿಯ ಮಹತ್ವವೆಂದರೆ ಶಿವನಲ್ಲಿಟ್ಟಿರುವ ಉತ್ಕೃಷ್ಟವಾದ ಪ್ರೇಮದ ಪ್ರಭಾವವೆಂದು ತಿಳಿಯಬೇಕು ಲೋಕದಲ್ಲಿ ಸ್ತ್ರೀಯೊಂದು ಪ್ರಾಣಿಗೆ ಜನನಾದನಂತರ ಮರಣವು; ಮರಣಾನಂತರ ಜನನವೂ ಇದ್ದೇ ಇರುವುದು ಮಾನವರಿಗೆ ತಮ್ಮ ತಮ್ಮ ಪುಣ್ಯ ಪಾಪ ಕರ್ಮಾನುಸಾರವಾಗಿ ಸುಖ ದುಃಖಗಳು ಸಮುದ್ರದ ತೆರೆಯಂತೆ ಮೇಲಿಂದ ಮೇಲೆ ಬರುತ್ತ ಹೋಗುತ್ತಲೇ ಇರುವವು ಆನ್ಯಾಯ, ಅಧರ್ಮ, ಅನೀತಿ, ಅಸತ್ಯ ಇತ್ಯಾದಿ ದುರ್ಗುಣಗಳಿಂದ ಕೂಡಿದ ಭಕ್ತಿರಹಿತ ರಾದ ಮಾನವರು ಅಡಕೊತ್ತಿನಲ್ಲಿ ಸಿಕ್ಕಿ ಅಡಕೆಯಂತೆ ಕಾಲ-ಕರ್ಮ-ಮಾಯೆಗಳ ಒಲೆಯಲ್ಲಿ ಸಿಲುಕಿ, ಅನೇಕ ತೊಂದರೆಗಳಿಗೀಡಾಗಿ ಸೂತ್ರದ ಬೊಂಬೆಯ ತೆ ಅವು ಆಡಿಸಿದಷ್ಟೆ ಕುಣಿದಾಡಿ ಪುನಃಪುನಃ ಸಂಸಾರ ಚಕ್ರದಲ್ಲಿ ತಿರುಗಾಡಬೇಕಾಗುತ್ತದೆ

ಶ್ರವಣಂ ಕೀರ್ತನಂ ಶಂಭೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಂ ॥

ಶ್ರೀ ಗುರು ಪಂಚಾಚಾರ್ಯ ಪಟ್ಟದ ಜಂಗಮರಿಗೆ ಲಿಂಪಿಸಿದ್ದಾಂತವನ್ನು ಅಭಿಷೇಕಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯ ಲಿಂಗಾಂಗ ರಥ ಫೋಟೋ ಸೈಜು ೧೪×೧೦ ಬೆಲೆ ೧೫ ರೂ ೦—೪—೦

,, ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನಿ ಶಿವಾಚಾರ್ಯರು ಭೂಗರ್ಭದಿಂದ ಆವರ್ತಕಿಸುವ ಫೋಟೋ ೦—೩—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ೦—೩—೬

ಶ್ರೀ ರೇಣುಕಾಚಾರ್ಯರು ಶ್ರೀ ಪಂಕಂಡಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೩—೬

ಶ್ರೀ ರೇಣುಕಾಚಾರ್ಯರು ನಿಧೀಪದ್ಮನ ತಾತ್ಪರ್ಯನೆಯಂತೆ ೬ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೩—೬

ಶ್ರೀ ಜಗದ್ಗುರು ಪೀಠಾಧಿಪತಿಯಾದ ಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦

ಶ್ರೀ ಪೀಠ ಜಗದ್ಗುರು ಪೀಠಾಧಿಪತಿಯಾದ ಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ (ಸಾಧಾರಣ ಬಣ್ಣದ್ದು) ೦—೨—೦

ಶ್ರೀ ಪೀಠ ಜಗದ್ಗುರು ಪೀಠಾಧಿಪತಿಯಾದ ಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ಚಿಕ್ಕ ಸೈಜು ೦—೧—೬

ಶ್ರೀ ಪೀಠ ಜಗದ್ಗುರುಗಳ ಪೀಠಾರೋಹಣ ಮಹೋತ್ಸವದ ಫೋಟೋ ೦—೩—೬

ಶ್ರೀಮದ್ವೀರಸಿಂಹಾಸನ ಶ್ರೀಶೈಲ ಜಗದ್ಗುರು ಶಿವಾಚಾರ್ಯರ ಫೋಟೋ ೦—೩—೬

ಶ್ರೀಮದ್ವೀರ ಪೀಠಾಧೀಶ್ವರ ಜಗದ್ಗುರು ಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೩—೬

ಶ್ರೀಮಿರುಘೇಂದ್ರ ಜಗದ್ಗುರುಗಳವರ ಸಕಲಾಧಿಷ್ಠಿತ ಶ್ರೀ ಕಾಶೀಸಾಹಸಾಧ್ಯಸ್ವಾಮಿಗಳವರು ಕುಳಿತುಕೊಂಡಿರುವ ಫೋಟೋ ೦—೩—೬

ಶ್ರೀ ಪೀಠ ಜಗದ್ಗುರು ಶಿವಾಚಾರ್ಯ ಸ್ವಾಮಿಗಳವರ ಫೋಟೋ (ನಾನಾ ವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೦—೨—೦

ಶ್ರೀ ಪೀಠ ಜಗದ್ಗುರು ಶಿವಾಚಾರ್ಯ ಸ್ವಾಮಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೦—೪—೦

ಶ್ರೀ ಪೀಠ ಜಗದ್ಗುರು ಶಿವಾಚಾರ್ಯ ಸ್ವಾಮಿಗಳವರು ಪೀಠದಲ್ಲಿ ಕುಳಿತಿರುವ ಫೋಟೋ ೦—೩—೬

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾನ್ಯಾನಪಂಕಜಾತಪಟಿಕರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಾಯಮಕರ್ ಪರಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವದವರಿಗೆ ೨ ರೂ ೪ ಆಣೆ ಪರಸ್ವದವರಿಗೆ ೩ ರೂ ಏ ಪಿ ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ಮೇ ೧೯೩೪ [ಸಂಚಿಕೆ ೫೪

ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ನಮಃ ।

ಮಿತವ್ಯಯ

ಶ್ರೀಪಟ್ಟದಸ್ವಾಮಿಗಳು ಹಿರೇಮಂ ಕೆಮ್ಮಣ್ಣೂರು

ಪ್ರಕೃತಿಯೊಬ್ಬ ಮನುಷ್ಯನು ತನ್ನ ಆಶ್ರಿತ್ವನ್ನ ಕೃಷುನಾರ ವಾಗಿ ದಿನಂಪ್ರತಿಯಾಲಿ ಪ್ರಸಂಗಾನುಸಾರವಾಗಿ ತಿಂಗಳಿಗೊಮ್ಮೆಯಾಗಲಿ, ವರ್ಷಕ್ಕೆ ಮೈಯಾಗಲಿ ನೆಚ್ಚ ವನ್ನು ಮಿತಿಯಿಂದ ಮಾಡುತ್ತ ಹೋಗಬೇಕು ಮಿತಿ ಯಿಂದ ಮಾಡಿ ನ ವೆಚ್ಚವು ತನ್ನ ಲೌಕಿಕಕಾರ್ಯ ಕ್ಕಾಗಲಿ, ವಾರಮಾರ್ಥಿಕಕ್ಕಾಗಲಿ, ಸಾರ್ವಜನಿಕ ಹಿತ ಕ್ಕಾಗಲಿ ಇರಬೇಕೇ ಹೊರತು ದುನ್ಯಜಟಿಗಳಿಗೆ ಎಷ್ಟೂ ಇರಕೂಡದು ಅಂದರೆ ಅವನ ಯಾವ ಕಾರ್ಯಕ್ಕೂ ಎಂದೂ ಅಡ್ಡಿಬರದೆ ಜೀವಮಾನವಿಡುವವರೆಗೂ ಸುಖವು ಲಭಿಸಿ, ಎಲ್ಲ ವ್ಯವಹಾರವೂ ಸರಳವಾಗಿ ಸಾಗು ವುದಲ್ಲದೆ ಧನವೂ ಸಂಗ್ರಹವಾಗುವುದು ಯಾವ ವ್ಯವ ಹಾರಕ್ಕೇ ಆಗಲಿ, ತಮ್ಮ ಉತ್ಪನ್ನ ಕ್ಕಿಂತಲೂ ಹೆಚ್ಚಾಗಿ ಖರ್ಚುಮಾಡುವವರು ಕೆಲವು ದಿನಸಗಳಲ್ಲಿಯೇ ತಮ್ಮ ಹತ್ತರವಿದ್ದ ಹಣವನ್ನೆಲ್ಲಾ ಕಳೆದುಕೊಂಡು, ಬರಿಗೈ ಬಂಟರಾಗಿ ಸಾಲಮಾಡಿ ತಮ್ಮ ಉಳಿಜೀವನವನ್ನು ಸಾಗಿಸಬೇಕಾಗುತ್ತದೆ. ಮುಂದೆ ಸ್ವಲ್ಪದಿನಗಳಲ್ಲಿಯೇ ಸಾವುಕಾರರ ಉಪದ್ರವವು ಹೆಚ್ಚಾದ ಕೂಡಲೇ ತಮ್ಮ ಆಸ್ತಿಯನ್ನೆಲ್ಲಾ ಮಾರಿ ಸಾಲವನ್ನು ತೀರಿಸಬೇಕಾಗು ತ್ತದೆ ಸಾವುಕಾರರ ಹಣ ಕೊಡದಿದ್ದರೆ ಮುಂದೆ ಯಾರೂ ಒಂದು ದುಡ್ಡು ಸಹ ಕೊಡದಂತಾಗುವುದಲ್ಲದೆ, ಮಾನ ವನ್ನು ಕಳೆದುಕೊಳ್ಳುವ ಪ್ರಸಂಗ ಸಹ ಬರುತ್ತದೆ ಕಡೆಗೆ ಎರಡನೆಯವರಲ್ಲಿ ದುಡಿದು ಶಕ್ತಿಯಿಂದ ತಮ್ಮ ಉಳಿಜೀವನವನ್ನು ಸಾಗಿಸಬೇಕಾಗುತ್ತದೆ

ಮಹಾಶ್ರಯರು ತಮ್ಮ ಬುದ್ಧಿಕುಶಲತೆಯಿಂದ ಯಾವು ದಾದರೊಂದು ನೌಕರಿ, ವ್ಯವಹಾರ್ಯಉದ್ಯೋಗಮಾಡಿ ನ್ಯಾಯಮಾರ್ಗದಿಂದ ಧನ ಹೊಲ-ಮನೆಗಳನ್ನು ಸಂಪಾ ದಿಸಬೇಕು. ಇವರು ಒಂದನೆಯ ತರಗತಿಯ ಮಾನವ ರೆನಿಸಿಕೊಳ್ಳುತ್ತಾರೆ ಸ್ವಂತ ಬುದ್ಧಿಯಿಲ್ಲದಿದ್ದರೂ ತಮ್ಮ ಹಿತಕ್ಕಾಗಿ ಎರಡನೆಯವರು ಹೇಳುವ ಬುದ್ಧಿಮಾತನ್ನು ಕೇಳುತ್ತ, ತಮ್ಮ ಹಿರಿಯರುಗಳಿಸಿದ ಹೊಲ ಮನೆ ಹಣ ವನ್ನು ಕಳೆಯದೆ ಕಾಪಾಡಿಕೊಂಡು ಹೋಗುವವರು ಎರಡನೆಯ ತರಗತಿಯ ಮಾನವರೆನಿಸಿಕೊಳ್ಳುತ್ತಾರೆ ತಮಗೂ ತಿಳಿಯದೆ ತಮ್ಮ ಹಿತಚಿಂತಕರ ಮಾತನ್ನೂ ಕೇಳದೆ ತಾವೂ ಗಳಿಸದೆ ತಮ್ಮ ಹಿರಿಯರು ಸಂಪಾದಿಸಿದ ಆಸ್ತಿಯನ್ನೂ ಉಳಿಸದೆ ಛಿದ್ರಾಪಾತ್ರೆಗೆ ಗುರಿಯಾಗುವವರು ಮೂರನೆಯ ತರಗತಿಯ ಮಾನವರೆನಿಸಿಕೊಳ್ಳುತ್ತಾರೆ

ಆಹಾರವು ಮಾನವನ ಜೀವನಕ್ಕೆ ಮುಖ್ಯವಾಗಿ ಬೇಕಾಗಿದ್ದರೂ ಅಜನ್ನು ಮಿತವಾಗಿ ತೆಗೆದುಕೊಂಡರೆ ನೇ ಅವನ ಶರೀರಕ್ಕೆ ಆರೋಗ್ಯವಾಗಿ ಸುಖದಿಂದ ಬಹಳ ವರ್ಷಗಳವರೆಗೆ ಬಾಳುವನು. ಹಾಗೆ ಮಾಡದೆ ನಾಲಿ ಗೆಯ ರುಚಿಗಾಗಿ ಆಕಡೆ ಬಿದ್ದು ಮಿತಿಮೀರಿ ಭುಂಜಿಸಿ ದ್ದಾದರೆ, ಅವನ ಶರೀರದಲ್ಲಿ ಅನಾರೋಗ್ಯವುಂಟಾಗಿ ಕಷ್ಟ ದಿಂದ ಸ್ವಲ್ಪದಿನಗಳಲ್ಲಿಯೇ ಮೃತ್ಯುವಿನ ಬಾಯಿಗೆ ತುತ್ತಾಗುವನು ಇದರಿಂತೆಯೇ ಮಿತಿಯಿಂದ ಖರ್ಚು ಮಾಡುವವನ ಬಾಳುವೆಯು ಮಿತಿಯಾಗಿ ಆಹಾರಸೇವನೆ ಮಾಡುವನೆಂಂತೆ ಸುಖವಾಗಿಯೂ, ಮಿತಿಮೀರಿ ಮಾಡುವವನ ಬಾಳುವೆಯು ಹೆಚ್ಚಾಗಿ ಆಪಾರ ಭುಂಜಿ ಸಿದವನಂತೆ ಕಷ್ಟವಾಗಿಯೂ ಪರಿಣಮಿಸುವದು

ಮಿತಿಯಿಂ ಮಾಡಿದ ಕಾರ್ಯಂ ।
ಸತಕಂ ಸುಖವನ್ನು ಕೊಡುವುದೆಲೆಲೈ ಮನುಜಾ ॥
ಮಿತಿಯಿಂ ಮೀರಿದ ಕರ್ಮವು
ಅತಿಕಷ್ಟವ ಕೊಪದ ಬಿಡದು ಆರ್ಯಶ್ರೇಷ್ಠಾ ॥

ಈ ನೀತಿಯ ಪದ್ಯವಾದರೂ ಮೇಲಿನ ಅಭಿಪ್ರಾಯ ನೆನ್ನೇ ನೈಸರ್ಗಿಕವಿಸುತ್ತದೆ ಆದ್ದರಿಂದ ಪ್ರತಿಯೊಬ್ಬ ಮಾನವನು ಯಾವದೇ ವ್ಯವಹಾರದಲ್ಲಾದಲಿ ದುಂದು ಗಾರಿಕೆಯನ್ನು ಮಾಡಬಾರದು ದುಂದುಗಾರಿಕೆಯು ಮನುಷ್ಯನನ್ನು ದರಿದ್ರಾವಸ್ಥೆಗೀಡುಮಾಡುವದು ಆದ ಕಾರಣ ೧ ನೆಯ ತರಗತಿಯ ಶಕ್ತಿಯನ್ನು ಪಡೆಯಲಿಕ್ಕೆ ಪ್ರಯತ್ನಮಾಡಬೇಕು ಅದು ಸಾಧ್ಯವಾಗದಿದ್ದರೆ ೨ ನೆಯ ತರಗತಿಯ ಶಕ್ತಿಯನ್ನು ಪಡೆದು ಮಿತಿಯಿಂದ ಧನವ್ಯಯಮಾಡುತ್ತ, ತಮ್ಮ ಜೀವನಾವದವರೆಗೆ ಸೌಖ್ಯದಿಂದ ಕಾಲಕಳೆಯಬೇಕು

ಹರಬಲ

ಪರಹರಿಸಭವಾ ! ಕೈದಯಮಿನಿ ।
ಳರುತಿಪ ನಿಬಿಡಾಗಿ ಮೆತ್ತಿಕೊಂಡಿಹ ತಮಮಂ ।
ಪರಿಹರಿಯಿಂದಂ ಬಳಲು ।
ತ್ತೊರಲುವೆ ಶರಣೆಂದು ಬಂದೆ ನಿನ್ನ ಡಿಗೆ ವಿಭೋ ॥೧॥

ಕರವಿಡಿದೆತ್ತೈ ತಿವ ಹಾ ! ।
ಪರಮಭವಾಬ್ಧಿಯೊಳು ಮುಳುಗಿ ತೇಲುತ್ತಿರುವೆ ।
ಕರುಣಾದೃಷ್ಟಿಯ ಬೀರು ।
ತ್ತುರಗಳಗೆಯ ತಡೆಯದೀಗ ಕರುಣಾವರಣಾ ॥೨॥

ಜೀಯನೇ ! ದಿಗ್ಭ್ರಾಂತನು ನಾ ।
ಕಾಯುವೆನ್ನೆ ! ದಾರು ತೋರಿ ಪ್ರಮಥಾಧೀಶಾ ॥
ಮಾಯೆಯ ಬಲ್ಮತ್ತಿಲೆಯೊಳ್ ।
ಸಾಯುವ ಹೊತ್ತಿನೆಗೆ ಬಂದುದಗಡಾರಮಣಾ ॥೩॥

ನಿನ್ನನು ಬಿಟ್ಟಾರೆನ್ನನು ।
ಮೆಚ್ಚಿ ಸುವರು ನೂಕಿ ನೋಡಿ ನಗುವರು ಹಾ ಹಾ ! ।
ಉನ್ನೈಗಳಿನಿಸುವ ಮಾಪಿಸ ।
ರಿನ್ನಂ ಕೋಟಲೆಯನೆಂದಿ ಕೈ ತಟ್ಟುವೆ ನೈ ॥೪॥

ಸಿರಿಯರಸಗೆ ಸೊಬಗನು ನುಡಿ ।
ಯರಸಗೆ ಹಡುಗಿತಾ ಭೋಗಮಂ ಸುರಪತಿಗಂ ॥
ವರರೂಪವ ಮದನಂಗಂ ।
ವರುಣಗೆ ನಿನ್ನ ತೆಯ ತೀಜವನ್ನಳಲಾಗಂ ॥೫॥

ಕರುಣಿಸಿದ ದೇವ ! ಗಂಗಾ ।
ಧರನೇ ! ಜಗದಾದಿದೇವ ಮಾದೇವ ತಿವಂ ॥
ಕರನೇ ! ಪರಮಾತ್ಮನೆ ಹೇ ।
ಶರಣಾಗತರಕ್ಷಣೈಕಶೀಲನೇ ! ಸಲಜೈ ॥೬॥

ನಿನ್ನ ಲಘಿಕೃಷ್ಣಾಒಲದಿಂ ।
ಬನ್ನವ ಬೇರ್ಪಿರಿಸಿ ನಾತವಾಗುವದಹಪಾ ! ॥
ಪನ್ನ ತಿಕೆಯನೀಯುಜ್ಜೆಲೆ !
ಪನ್ನಗಭೂಷಣನೆ ! ಪಾಲಿಸಯ್ಯ ಗಣೇಶಾ ॥೭॥

ಶಕ್ತಿತಯಸಮನೇತನೆ ನ
ಧೃತ್ಯಾನೀಕವನು ನೈ ಲೆಯದಿರ್ದೊಡೆ ನಿನ್ನಂ ॥
ಭಕ್ತಾಭಿಮಾನಿ ಎಂಬರೆ ?
ರಕ್ತಿಯೋ ಭವಾ ! ನಿಶಾಲಒದ್ಯಿಯ ಕರಣರ್ ॥೮॥

ಬರಡದು ನೈನವಿನೊಲವಿಂ ।
ಭರದಿಂ ಕರಿವೆದು ಮಹೇಶ ! ನೀನೊಲಿವುದರಿಂ ॥
ಕೊರಡಾಗಿದ್ದರು ಕೊನರುವ ।
ದರಿರೆ ! ಗರಂ ಸುಧೆಯೆಂಪ್ಪದಹ ! ಜಗದೀಶಾ ॥೯॥

ಬೇಡಿದೊಡಿ'ವರೆ ? ಮನುಜರು ।
ಕಾಡಿದೊಡೀವರೆ ? ಕುಮತ್ಯಮತಿಗಳ್ ಜಗದೊಳ್ ॥
ಬೇಡೆನು ! ಕಾಡೆನು ! ಪುಳುಗಳ ।
ನಾಡೆಲೊ ! ಸದ್ಭಕ್ತಿಶಕ್ತಿಯುಕ್ತಿಯನೊಡೆಯಾ !॥೧೦॥

ಸರ್ವಜ್ಞನಾದ ಶರ್ವಂ'
ಸರ್ವಾಧಾರಂ ಸಮಸ್ತಸುಮನಸ್ಸೇವ್ಯಂ ॥
ಸರ್ವೋರ್ವೀಜಕರ್ತೃಕೇಯಲಿ ।
ಸರ್ವೋತ್ಕರ್ಷವನು ಸರ್ವಧಾರಿಯೊಳಿದರೊಳ್ ॥೧೧॥

ಜಯ ಜಯ ! ಸಚ್ಚಿದ್ಭಾನಂದೆ !
ಜಯ ಜಯ ! ಭಕ್ತೇಷ್ಟವರದ ನತಜನಸುಖದಾ ॥
ಜಯ ಜಯ ! ಸರ್ವೇಶ್ವರನೆ ವಿ ।
ಜಯ ! ಮೊರಬೀಶಂಗೆ ವರವ ಕರುಣಿಸಿದವನೇ ॥೧೨॥

ಪಂಚಾಚಾರ್ಯರ ಪ್ರಭೆಯಿಂದು ।
ಪಂಚಾಚಾರ್ಯಪ್ರಸಾದ ಕಾತೀಪಾಥ ॥
ಪಂಚಾನನೆಕೈಪೆಯಿಂದ ಪ್ರ ।
ಪಂಚದಿ ಸುಖದಿಂದೆ ಬೆಳಗಿ ಬಾಳಲಿ ಸತತಂ ॥೧೩॥

ಬಾಲಬ್ಯಹಸ್ಪತಿ ಶ್ರೀ ಗಂಗಾಧರಶಿವಾಚಾರ್ಯರು
ಜಡೆಮಠ ಮೊರಬ

ಭಾರತದ ಗೌರ್ನರ್ ಜನರಲ್‌ರಿಗೆ ಪುಷ್ಪಹಾರ ಸಮರ್ಪಣ

ಭಾರತದ ಗವರ್ನರ್ ಜನರಲ್‌ರವರಾದ ಲಾರ್ಡ್ ಲಿಯಿ ಮೌಂಟ್ ಬೇಟನ್‌ರವರು ಮತ್ತು ಶ್ರೀಮತ್ಸ್ವ ಹಾಜಾದರವರು ತಾ॥ ೩೦ ೪ ೪೯ ನೇ ದಿವಸ ಸಾಯಂ ಕಾಲ ಕೃಷ್ಣರಾಜಸಾಗರದ ಬೃಂದಾವನಕ್ಕೆ ದಯಮಾಡಿ ಸಿದ ಕಾಲದಲ್ಲಿ ಅಲ್ಲಿಗೆ ಸಮಾಪದಲ್ಲಿರುವ ಚಿಕ್ಕಾಯರ ಹಳ್ಳಿ ಪಟೇಲ್ ಶ್ರೀಮನ್ ಕಂಭಗೌಡರು ಉಭಯರಿಗೂ ಪುಷ್ಪಹಾರಗಳನ್ನು ಸಮರ್ಪಿಸಿ ತಮ್ಮ ರಾಜಭಕ್ತಿ ಯನ್ನು ಸಲ್ಲಿಸಿದರೆಂದು ತಿಳಿದುಬರುತ್ತದೆ

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಮಂಗಳವಾರ ವೈಶಾಖ ಶು॥ ೫ ಗುರುವಾರ

ಭೂಮಿ ನೀಹಾತ್ರಂ ಪರತಖಂಡದಲ್ಲಿರತಕ್ಷ ಸನುಸ್ಥವಗಳ ಕ್ಷೇತ್ರ ಮುಸ್ತಕಮಂಗೇ ಜೂತಳದಾದ ಶ್ರೀ ವಾಕ್ಯಾರ ಸು ಉದ್ಭವಿಸಿಸ್ಥಳಕ್ಷೇತ್ರಗಳಲ್ಲಿ ನಿರಾಜಿಸುವ ಶ್ರೀಭೀಮನಾಥ, ಶ್ರೀಷ್ಟಶ್ಚರ ಪ ವಾ ರೀಂಂಂಂಂರವರಿಸಿ, ಪರಮಾನಿತ್ಯವಾದ ವೀರಶೈವಸಿದ್ಧಾಂತವನ್ನು ಬೂರುಂತಲವಲ್ಲಿ ಸಲೆಗೂ ಸಿ, ವ್ಯಾಸ ಪದೀಚೆ ಮೊದಲಾದ ಅನಂತಜನ ಮಹರ್ಷಿಗಳನ್ನೂ ಗೌತಮೆ ಯಂಪ್ರ ವಾನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶವ್ವಾರಾ ಉದ್ಧರಿಸಿ ಲೋಕಕ್ಕೆಪೂಜ್ಯರಾಗಿರುವರೋ, ಅಂತಹ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದು ವೈಶಾಖ ಪಕ್ಷನಕ್ಷತ್ರದಲ್ಲಿ ವ್ಯಾಪ್ತವಾಗುವುದರಿಂದ ಸರ್ವ ಗುರುಬಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು **ವೈಶಾಖ ಶು॥ ೩ ಮಂಗಳವಾರ ತಾ॥ ೧೧—೫—೧೯೪೪** ನೆಯ ದಿನಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು॥ ೫ ಗುರುವಾರ ತಾ॥ ೧೩—೫—೧೯೪೪** ನೆಯ ದಿನಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವನನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಬರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀ ಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀ ಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇನೆ.

ವರ್ತಮಾನಸಂಗ್ರಹ

ಮೈಸೂರಿನ ಬಗ್ಗೆ ಗವರ್ನರ್ ಜನರಲ್ಲರ ಮೆಚ್ಚಿಕೆ

"ಮೈಸೂರು ಸಂಸ್ಥಾನವು ಎಲ್ಲ ವಿಚಾರಗಳಲ್ಲೂ ಪ್ರಗತಿಪರವಾದ ಮಾರ್ಗವನ್ನು ಹಿಡಿದು ಖ್ಯಾತಿಗಳಿಸಿದೆ ಮತ್ತು ಸಾಮಾಜಿಕ ಕಾರ್ಯಚಟುವಟಿಕೆಗಳಲ್ಲಿ ಮಾರ್ಗದರ್ಶಕವಾಗುವಂತೆ ನಡೆಯುವುದರಲ್ಲಿ ಹೆಸರು ವಾಸಿಯಾಗಿದೆ ಮೈಸೂರು ತನ್ನದೇ ಆದ ಒಂದು ಸ್ಥಾನವನ್ನು ಗಳಿಸಿ, ದೊಡ್ಡ ಸಂಸ್ಥಾನವಾಗಿ ಮುಂದೆಯೂ ನಿಲ್ಲುವುದೆಂಬುದು ಸ್ಪುಟಸ್ಪಿದ್ಧವಾದುದು. ಈ ಸಂಸ್ಥಾನವು ಇನ್ನೂ ಹೆಚ್ಚಿಗೆ ಅಭಿವೃದ್ಧಿಗೊಳ್ಳುವುದನ್ನು ನೀವೆಲ್ಲ ಎದುರುನೋಡಬಹುದೆಂದು ನಾನು ದೃಢವಾಗಿ ಹೇಳಬಲ್ಲೆ."

ಎಂಬುದಾಗಿ ಭಾರತದ ಗವರ್ನರ್ ಜನರಲ್‌ರವರಾದ ಲಾರ್ಡ್ ವೌಂಟ್ ಬೇಟನ್ನರು ಬೆಂಗಳೂರು ಲಾಲ್ ಬಾಗಿನ ಗ್ಲಾಸ್‌ಹೌಸಿನಲ್ಲಿ ಬೆಂಗಳೂರು ನಗರದ ಮತ್ತು ಸಿವಿಲ್ ಸ್ಟೇಷನ್ನಿನ ಪೌರಸಭೆಯವರು ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವೀಯುತ್ತ ತಿಳಿಸಿದರು

ಸಿಂಧ್ ಮಹಾಪ್ರಧಾನರು ಡಿಸ್‌ಮಿಸ್ ಮಾಡಲ್ಪಟ್ಟರು

ಸಿಂಧ್ ಸರ್ಕಾರದ ಪ್ರಕಟಣೆ

"ಪಾಕಿಸ್ತಾನದ ಗವರ್ನರ್ ಜನರಲ್‌ರವರ ಸೂಚನೆಯ ಪ್ರಕಾರ ಸಿಂಧ್ ಗವರ್ನರ್ ಮಿ॥ ಮೆಹಮೂದ್ ಅಯೂಬ್ ಖುರೋರವರನ್ನು ಸಿಂಧ್ ಪ್ರಾಂತ್ಯದ ಮಹಾಪ್ರಧಾನ ಪದನಿಯಿಂದ ತೆಗೆದುಹಾಕಲಾಗಿದೆ ದುರಾಡಳಿತ, ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ದುರ್ನಡತೆ ತೋರಿಸಿದುದು ಮತ್ತು ಲಂಚಬೋರತನ—ಈ ಆರೋಪನೆಗಳು ಸ್ಪಿರಪಟ್ಟುದೇ ಇದಕ್ಕೆ ಕಾರಣ.

"ಮಿ॥ ಖುರೋರವರ ಮೇಲೆ ಬಂದಿರುವ ಆಪಾದನೆಗಳನ್ನು ವಿಚಾರಿಸಲು ಗವರ್ನರು ಟ್ರಿಬ್ಯೂನಲ್ ಒಂದನ್ನು ನೇಮಿಸಲಿದ್ದಾರೆ ತಮ್ಮ ಮೇಲಿನ ಆಪಾದನೆಗಳು ನಿರಾಧಾರವಾದುವೆಂಬು ತೋರಿಸಲು ಮಿ॥ ಖುರೋರವ ರಿಗೆ ಪೂರ್ಣ ಅವಕಾಶಕೊಡಲಾಗುವುದು"

ಸಿಂಧ್ ಮಂತ್ರಿಮಂಡಲದಲ್ಲಿ ಬಹಳ ದಿನಗಳಿಂದ ಬಿಕ್ಕಟ್ಟು ತಲೆಹಾಕಿತ್ತು. ಗವರ್ನರು ಮಿ॥ ಖುರೋರವರ ಒಪ್ಪಿಗೆ ಇಲ್ಲದೆ ಮಂತ್ರಿಮಂಡಲದಲ್ಲಿ ಅಧಿಕಾರಗಳ ಹಂಚಿಕೆಯನ್ನು ಒದಲಾವಣೆ ಮಾಡಿದಾಗ ಬಿಕ್ಕಟ್ಟು ಸರಮಾನಸ್ಥಿಯನ್ನು ಮುಟ್ಟಿತು.

ಪಾಕಿಸ್ತಾನದ ಗವರ್ನರ್-ಜನರಲ್ಲರು ಗಡಿನಾಡಿನ ಪ್ರವಾಸದಿಂದ ಹಿಂತಿರುಗಿಬಂದನೆಯೇ ಈ ಬಿಕ್ಕಟ್ಟಿನ ಪ್ರಸಂಗವನ್ನು ಎಮರಿಸಿದರು ಅದರ ಫಲವಾಗಿ ಮಿ॥ ಖುರೋರವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಮಿ॥ ಖುರೋರವರು ಆಗಸ್ಟ್ ೧೫ ರಿಂದ ಸಿಂಧ್ ಮಹಾಪ್ರಧಾನರಾಗಿದ್ದರು

ಬೊಂಬಾಯಿಯಲ್ಲಿ ಪಂಡಿತ ನೆಹರೂರವರ ಭಾಷಣ

ಭಾರತ ಸರಕಾರವು ಹೈದರಾಬಾದಿನ ಪ್ರಜೆಗಳನ್ನು ರಕ್ಷಿಸುವುದು

ಹೈದ್ರಾಬಾದ್ ಸಮಸ್ಯೆಯನ್ನು ಇತ್ಯರ್ಥಮಾಡುವುದಕ್ಕೆ ಭಾರತ ಸರಕಾರವು ಮೊದಲಿನಿಂದಲೂ ಅತ್ಯಂತ ಸಹನೆಯಿಂದ ವರ್ತಿಸುತ್ತ ಬಂದಿತು. ಆದರೆ ಇನ್ನು ಮುಂದೆ ಅದೇ ಸಹನೆಯನ್ನು ತಾಳಲು ಸಾಧ್ಯವಿಲ್ಲ.

ಭಾರತ ಸರ್ಕಾರಕ್ಕೆ ವಿರುದ್ಧವಾಗಿ ಹೈದ್ರಾಬಾದ್ ಸಂಸ್ಥಾನದಲ್ಲಿ ರಜಾಕರು ಅನೇಕ ದುಷ್ಕೃತ್ಯಗಳನ್ನು ಮಾಡುತ್ತಿದ್ದಾರೆ ಇವರ ಬಲವನ್ನು ಮುರಿಯಲು ಹೈದ್ರಾಬಾದ್ ಸರಕಾರಕ್ಕೇ ಶಕ್ತಿ ಇಲ್ಲವೋ ಅಥವಾ ಸರಕಾರವೇ ಅವರ ಚಟುವಟಿಕೆಗಳಿಗೆ ಅಡ್ಡಿಬರದೆ ಇದೆಯೋ ಗೊತ್ತಿಲ್ಲದಾಗಿದೆ. ಅದು ಏನೇ ಇರಲಿ,

ಹೈದ್ರಾಬಾದ್ ಸರಕಾರವು ಈ ಪುಂಡರ ಜಾಲಳಯವ್ನು ತಪ್ಪಿಸದಿದ್ದರೆ ಭಾರತ ಸರಕಾರವು ತಕ್ಕುದು ಸೂಕ್ತ ಕ್ರಮ ಕೈಗೊಳ್ಳುವುದು. ಹೈದ್ರಾಬಾದ ಪ್ರಜೆಗಳನ್ನು ಭಾರತ ಸರಕಾರ ರಕ್ಷಿಸುವುದು. ಎಂಬುದಾಗಿ ಪಂಡಿತ್ ನೆಹರೂ ರವರು ಬೊಂಬಾಯಿನಲ್ಲಿ ನಿಗದಿತ ಪತ್ರಿಕೋದ್ಯೋಗಿಗಳು ಇತ್ತ ಸರ್ಕಾರ ಸಮಾರಂಭದಲ್ಲಿ ಭಾಷಣ ಮಾಡುತ್ತ ಸ್ಪಷ್ಟಪಡಿಸಿದರು

ಭಾರತ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್

ಬ್ರಿಟಿಷ್ ಕಾಮನ್‌ವೆಲ್ತಿನೊಂದಿಗೆ ಭಾರತವು ಹೆಚ್ಚು ಸಂಬಂಧವನ್ನಿಟ್ಟುಕೊಳ್ಳುವುದು ಉಪಯುಕ್ತಕರವೆಂದೂ, ರಾಜ್ಯಾಂಗ ಸಭೆಯು ಇದನ್ನು ನಿರ್ಧರಿಸುವುದೆಂದೂ ಪಂಡಿತ ನೆಹರೂರವರು ತಿಳಿಸಿದರು. ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಭಾರತವು ಇತರ ರಾಷ್ಟ್ರಗಳ ಸಹಕಾರವನ್ನು – ಅಪೇಕ್ಷಿಸುತ್ತಿದೆ. "ಸರ್ವ್ ಸಾಲಿ ಟ್ಸ್" ಬಲೆಗೆ ಭಾರತ ಬೀಳುವುದಿಲ್ಲ ಎಂದು ಬ್ರಿಟಿಷ್ ಕಾಮನ್‌ವೆಲ್ತ್ ಮತ್ತು ಭಾರತದ ಬಾಂಧವ್ಯವನ್ನು ಪ್ರಸ್ತಾಪಿಸುತ್ತ ತಿಳಿಸಿದರು

ರಾಷ್ಟ್ರಭಾಷೆ

ಇಡೀ ದೇಶಕ್ಕೆ ಒಂದೇ ಸರಕಾರಿ ಭಾಷೆ ಇರಬೇಕೆಂದೂ ಉರ್ದು ಮತ್ತು ದೇವನಾಗರಿ ಲಿಪಿಯಲ್ಲಿರುವ ಹಿಂದುಸ್ತಾನಿಯೇ ರಾಷ್ಟ್ರಭಾಷೆಯಾಗಬೇಕೆಂದೂ ಪ್ರಶ್ನೆ ಯೊಂದಕ್ಕೆ ಉತ್ತರ ಕೊಟ್ಟರು

ಕಮ್ಯೂನಿಸ್ಟರು ಶಸ್ತ್ರಗಳನ್ನು ಸಂಗ್ರಹಿಸುತ್ತಿದ್ದರು

ಕಮ್ಯೂನಿಸ್ಟರ ದಸ್ತಗಿರಿಯ ಬಗ್ಗೆ ವಿವರಣೆ ಕೊಡುತ್ತ -ಕಮ್ಯೂನಿಸ್ಟರು ತಮ್ಮ ಗುರಿ ಸಾಧಿಸಲು ಶಸ್ತ್ರಾಸ್ತ್ರಗಳನ್ನು ಸಂಗ್ರಹ ಮಾಡುತ್ತಿದ್ದರೆಂದೂ ನುತ್ತು ದೇಶಾದ್ಯಂತ ಚಳುವಳಿ ಹೂಡಲು ಅವರು ಒತ್ತಡಕ್ಕೆ ಗಳನ್ನು ಮಾಡಿಕೊಳ್ಳುತ್ತಿದ್ದುದರ ಬಗ್ಗೆ ಸರಕಾರವು ತಕ್ಕ ಸಾಕ್ಷ್ಯವನ್ನು ಒದಗಿಸಬಲ್ಲದೆಂದೂ ತಿಳಿಸಿದರು

ಪತ್ರಿಕಾ ಸ್ವಾತಂತ್ರ್ಯ

ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತ---ದೇಶದಲ್ಲಿ ನಡೆಯುತ್ತಿರುವ ಕೊಲೆ ಮತ್ತು ಹಿಂಸಕೃತ್ಯಗಳನ್ನು ಮೊದಲು ನಿಲ್ಲಿಸಿದರೆ ಆಮೇರ ಪತ್ರಿಕಾಸ್ವಾತಂತ್ರ್ಯದ ಮಾತನ್ನಾಡಬಹುದು ಎಂದು ನುಡಿದರು

ನದಂತಿಗಳನ್ನು ಮತ್ತು ಸುಳ್ಳು ಸುದ್ದಿಗಳನ್ನು ಉತ್ಪಾದಿಸಿ ಪ್ರಕಟಿಸುವ ಬೇಜವಾಬ್ದಾರಿ ಪತ್ರಿಕೆಗಳ ಬಗ್ಗೆ ಅವರು ಪ್ರಸ್ತಾಪನಾಡುತ್ತ ಉತ್ತರ ಇಂಡಿಯಾ ದಲ್ಲಿ ಕೆಲವು ಪತ್ರಿಕೆಗಳು ತುಂಬಾ ಬೇಜವಾಬ್ದಾರಿಯುತ ವಾಗಿ ಸುದ್ದಿಗಳನ್ನು ಪ್ರಕಟಿಸುತ್ತಿದ್ದವೆಂದು ತಿಳಿಸಿದರು 'ಪ್ರೆಸ್ ಕಮಿಟಿ' ಯ ಅವಗಾಹನೆಗೆ ತರದೆ ಪೆಹೆಲಿಯಲ್ಲಿ ಕೂಡ ಈ ಬೇಜವಾಬ್ದಾರಿ ಪತ್ರಿಕೆಗಳ ಮೇಲೆ ಸರಕಾರ ಕ್ರಮ ಕೈಗೊಳ್ಳಲಿಲ್ಲವೆಂದು ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟರು.

ಭಾರತದಲ್ಲಿ ಉಂಟಾಗಿರುವ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪತ್ರಿಕೆಗಳ ಮೇಲೆ ಕೆಲವು ನಿರ್ಬಂಧಗಳನ್ನು ಇನ್ನೂ ಹಾಕಿರಬೇಕಾಗಿದೆಯೆಂದು ಹೇಳಿದರು.

ನೆಹ್ರೂರವರ ಭಾಷಣಕ್ಕೆ ಕಾಸಿಂರಜ್ಜಿ ಉತ್ತರ

ಬೊಂಬಾಯಿಯಲ್ಲಿ ಪಂಡಿತ ನೆಹ್ರೂರವರು ಹೈದ್ರಾಬಾದಿನ ಬಗ್ಗೆ ಮಾಡಿದ ಭಾಷಣವನ್ನು ಕುರಿತು ಹೈದ್ರಾಬಾದ್ ಇತ್ತಿಹಾದ್ ಸಂಸ್ಥೆಯ ನಾಯಕರಾದ ಕಾಸಿಂ ರಜ್ವಿಯವರು ಒಂದು ಹೇಳಿಕೆ ಕೊಟ್ಟಿದ್ದಾರೆ—

"ಹೈದ್ರಾಬಾದಿನ ಮೇಲೆ ಯುದ್ಧ ಹೂಡಲು ಪಂ॥ ನೆಹ್ರೂರವರು ದಾರಿ ಮಾಡಿಕೊಳ್ಳುತ್ತಿದ್ದಾರೆ. ಭಾರತ ದೇಶವು ಇತ್ತೀಚಿಗೆ ದೊಡ್ಡ ದಾಗಿದ್ದರೂ ನಾವೇನೂ ಹೆದರುವುದಿಲ್ಲ. ಸರ್ವಶಕ್ತಿಮಾಲಿಗಳ ಮಧ್ಯೆ ದಾರಿಮಾಡಿ ಕೊಂಡು ಸಣ್ಣ ಪುಟ್ಟ ಝರಿಗಳು ಮುನ್ನುಗ್ಗುತ್ತವೆಂಬ ಅಂಶ ನಮಗೆ ಗೊತ್ತು! ಎಂದು ಕಾಸಿಂರಜ್ಜಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹೈದ್ರಾಬಾದ್ ಪರಿಸ್ಥಿತಿಯ ಬಗ್ಗೆ ಬೊಂಬಾಯಿಯಲ್ಲಿ ರಹಸ್ಯ ಚರ್ಚೆ

ಹೈದ್ರಾಬಾದ್ ಪರಿಸ್ಥಿತಿಯನ್ನು ವಿಮರ್ಶಿಸಲು ಎ ಐ. ಸಿ ಸಿ. ಗೋಷ್ಯ ಅಧಿವೇಶನವು ಸೇರಿ ಸುಮಾರು ಎರಡುವರೆ ಗಂಟೆಕಾಲ ಚರ್ಚೆ ನಡೆಸಿತು ಪಂಡಿತ್ ನೆಹ್ರೂರವರು ಸದಸ್ಯರನ್ನು ದ್ವೇಷಿಸಿ ಸುಮಾರು ಒಂದು ಘಂಟೆಕಾಲ ಭಾಷಣಮಾಡಿದರು

ಹೈದ್ರಾಬಾದ್ ಮತ್ತು ಕಾಶ್ಮೀರದ ಸಮಸ್ಯೆಗಳನ್ನು ಗೌರವಯುತವಾಗಿಯೂ ಮತ್ತು ತೃಪ್ತಿಕರವಾಗಿಯೂ ಬಗೆಹರಿಸಲು ಸರ್ಕಾರವು ಪ್ರಯತ್ನಿಸುತ್ತಿದೆ ಇನ್ನು ಸ್ವಲ್ಪ ಕಾಲ ಎಲ್ಲರೂ ಸಮಾಧಾನದಿಂದಿರಬೇಕೆಂದು ಪಂಡಿತ ನೆಹ್ರೂರವರು ಎ.ಐ.ಸಿ.ಸಿ ಸದಸ್ಯರಿಗೆ ತಿಳಿಸಿದರೆಂದು ಗೊತ್ತಾಗಿದೆ

ನಿಜಾಮ ಸರ್ಕಾರವಾಗಲೀ, ಅಥವಾ ರಜಾಕಾರರ ಸಂಸ್ಥೆಯಾಗಲೀ ಹಿಂಸಾಕೃತ್ಯಗಳಿಂದ ಪರಿಸ್ಥಿತಿಯನ್ನು ಹದಗೆಡಿಸಲು ಪ್ರಯತ್ನಿಸಿದ್ದೇ ಆದರೆ ಹೈದ್ರಾಬಾದ್ ಸಂಸ್ಥಾನದ ಸ್ವಜೆಗಳನ್ನು ರಕ್ಷಿಸುವ ಭಾರವನ್ನು ಭಾರತ ಸರ್ಕಾರ ಹೊರುವುದಲ್ಲದೆ ರಜಾಕಾರರ ಮತ್ತು ಹೈದ್ರಾಬಾದ್ ಸರ್ಕಾರದ ಮೇಲೆ ಸೂಕ್ತಕಾರ್ಯಕ್ರಮ ಕೈಗೊಳ್ಳಲು ಭಾರತ ಸರಕಾರವು ಸಿದ್ಧವಿದೆ ಎಂದು ಪಂಡಿತ್ ನೆಹ್ರೂರವರು ಗೋಷ್ಯ ಅಧಿವೇಶನದಲ್ಲಿ ಸ್ಪಷ್ಟಪಡಿಸಿದರೆಂದು ಹೇಳಲಾಗಿದೆ

ನಿಜಾಮರ ಫರ್ಮಾನ್

ನಿರಾಶಾದಾಯಕವೆಂದು ಜನರ ಅಭಿಪ್ರಾಯ

ಹಿಂದೂಮಹಾಸಭೆಯ ನಿರ್ಣಯ

ಹೈದ್ರಾಬಾದ್ ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆ ಗೊಳ್ಳಿ ಜಾರಿಗೆ ತರ ವುದಾಗಿ ಇತ್ತೀಚಿಗೆ ನಿಜಾಮರು ಹೊರಡಿಸಿರುವ ಸರ್ಮಾನ್ ತುಂಬಾ ನಿರಾಶಾದಾಯಕ ವಾಗಿದೆಯೆಂದು ಹೈದ್ರಾಬಾದ್ ಸಂಸ್ಥಾನದ ಹಿಂದೂ ಮಹಾಸಭೆಯು ನಿರ್ಣಯಮಾಡಿದೆ.

ಸುಧಾರಣೆಗಳ ಬಗ್ಗೆ ಫರ್ಮಾನಿನಲ್ಲಿ ಯಾವ ಅಂಶವೂ ದೃಢಪಟ್ಟಿಲ್ಲವೆಂದೂ ಸುಧಾರಣೆಗಳು ಯಾವ ರೀತಿಯವೆಂಬುದು ಒಬ್ಬರಿಗೂ ಗೊತ್ತಾಗದೆ ಇದೆಯೆಂದೂ ನಿರ್ಣಯದಲ್ಲಿ ವ್ಯಕ್ತಪಡಿಸಲಾಗಿದೆ.

ಹೈದರಾಬಾದ್ ಸಂಸ್ಥಾನವು ಸ್ವತಂತ್ರವಾಗಿಯೇ ಉಳಿಯುವುದೆಂದು ಅಲ್ಲಿಯ ಮುಖ್ಯಮಂತ್ರಿಗಳ ಹೇಳಿಕೆ

ಹೈದ್ರಾಬಾದಿನ ಮುಖ್ಯಮಂತ್ರಿ ಮಿ॥ ಮಿರ್ ಲಿಯಾಕ್ ಅಲಿಯವರು ಅಲ್ಲಿಯ ಶಾಸನ ಸಭೆಯಲ್ಲಿ ಮಾತನಾಡುತ್ತಾ ಹೈದರಾಬಾದು ಶಾಂತಿಯಿಂದ ಬಾಳಲು ಅಪೇಕ್ಷಿಸುವುದೆಂದೂ ಮತ್ತು ಸ್ವತಂತ್ರವಾಗಿಯೇ ಉಳಿಯು ವುದೆಂದೂ ತಿಳಿಸಿದ್ದಾರೆ

'ಬ್ರಿಟಿಷರು ಭಾರತವನ್ನು ಬಿಟ್ಟಿನಂತರ ಸಂಸ್ಥಾನ ಗಳು ಎರಡು ಡೊಮಿನಿಯನ್ನುಗಳಲ್ಲಿ ಯಾವುದಕ್ಕಾದರೂ ಸೇರಬಹುದು ಅಥವಾ ಸ್ವತಂತ್ರವಾಗಿಯಬಹುದು ಎಂದು ತಿಳಿಸಿದ ಅಂಶವನ್ನು ಒತ್ತಿ ಹೇಳಿ ಯಾವ ಹಂಗಡದವರ ಮನಸ್ಸನ್ನೂ ನೋಯಿಸದಿರಲು ಹೈದರಾಬಾದು ಯಾವ ಡೊಮಿನಿಯನ್ನಿಗೂ ಸೇರದೆ ಸ್ವತಂತ್ರವಾಗಿರುವುದೆಂದು ಹೇಳಿದ್ದಾರೆ

ಮುಂದುವರೆಯುತ್ತಾ— ಪ್ರಧಾನಿಗಳು ಭಾರತ ಯೂನಿಯನ್ನಿನೊಡನೆ ಸ್ನೇಹ ಮತ್ತು ಶಾಂತಿಯಿಂದ ಬಾಳಲು ನಾವು ಪ್ರಯತ್ನಮಾಡುತ್ತೇವೆ. ಆದರೆ ಅದಕ್ಕೆ ವಿರುದ್ಧವಾಗಿ ಬಲಪ್ರಯೋಗಮಾಡಿ ನಮ್ಮ ಹತ್ತೋಟಿಗೆ ಮಾರುವಂತೆ ಸಂದರ್ಭಗಳುಂಟಾದರೆ ಆಗ ನಾವು ನಮ್ಮ ಶಕ್ತ್ಯನುಸಾರ ಧೈರ್ಯವಾಗಿ ಬಲಪ್ರಯೋಗವನ್ನು ಎದುರಿಸಿ ನಿಲ್ಲುತ್ತೇವೆ. ನಾವು ನಿರ್ಬಲರಾಗಿ ನಿಸ್ಸಹಾಯ ಕರಾಗಿರಬಹುದು, ಆದರೆ ನಮ್ಮ ಪ್ರಯತ್ನವು ನ್ಯಾಯ ಬದ್ಧವಾಗಿರುವುದು. ದೇವರಿಚ್ಛವಿದ್ದಂತಾಗಲಿ! ನಮಗೆ ದೇವರಲ್ಲಿರುವ ನಂಬಿಕೆಯು ಅಚಲವಾದುದು" ಎಂದು ಘೋಷಿಸಿದ್ದಾರೆ.

ಆಂಧ್ರಕ್ರಾಂತ್ಯ ನಿರ್ಣಾಣದ ಬಗ್ಗೆ ನೆಹರೂ ಬಳಿಗೆ ನಿಯೋಗ

ಶ್ರೀ. ಟಿ ಪ್ರಕಾಶರವರನ್ನೊಳಗೊಂಡ ಆಂಧ್ರ ಕಾಂಗ್ರೆಸ್ ನಾಯಕರ ನಿಯೋಗವೊಂದು ಪಂಡಿತ ನೆಹರೂರವರನ್ನು ಕಂಡು ಹೈದರಾಬಾದಿನ ಜನರು ಆಡು ಭಾಷೆಯಾಡುತ್ತಿರುವ ಕಚ್ಚಪರಂಪರೆಯನ್ನೂ ಆಂಧ್ರಪ್ರಾಂತ್ಯ ನಿರ್ಮಾಣವಾಗಬೇಕೆನ್ನೂ ಕುರಿತು ಸಂಭಾಷಣೆ ನಡೆಸಿದರು

ಹೈದರಾಬಾದಿನ ಪರಿಸ್ಥಿತಿ ತಮಗೆ ಸಂಪೂರ್ಣವಾಗಿ ಮನವರಿಕೆ ಆಗಿದೆಯೆಂದು ಪಂ॥ ನೆಹರೂರವರು ಹೇಳಿ "ಆಂಧ್ರಪ್ರಾಂತ್ಯ ನಿರ್ಮಾಣ ಪ್ರಶ್ನೆಯು ವಿಚಾರದಲ್ಲಿ ಜನರು ವಿಶೇಷ ರಚಿತವಾದ ಉತ್ಸಾಹವನ್ನು ತೋರಿಸು ವುದನ್ನು ನಾನು ನಿರೀಕ್ಷಿಸುತ್ತೇನೆ ಈ ವಿಚಾರವನ್ನು ಪರಿಶೀಲಿಸಲು ಸರ್ಕಾರಕ್ಕೆ ಕಾಲಾವಕಾಶ ಬೇಕು" ಎಂದು ಹೇಳಿದರು

ಸ್ವೀಕಾರ

ವೈಸೂರು ಡಿ॥ ನಂಜನಗೂಡು ಟವನ್ನಿನಲ್ಲಿರುವ ರಾಜಾಶ್ವರ ಸುರದ ವೇ॥ ಎಸ್. ಆರ್ ಚೆನ್ನವೀರಯ್ಯ ನವರ ಪುತ್ರಿ ಚಿ॥ ಸೌ॥ ಚಂದ್ರಕಾಂತಮ್ಮನವ್ನು ಡಾವಣಗೆರೆ ತಾಲೂಕಿನ ಶಾಲಾ ಇನ್‌ಸ್ಪೆಕ್ಟರಾಗಿರುವ ಶಿರಾ ಕೋಡಿಗುಡಿಮಠದ ನೇ॥ ಎಸ್ ಸಿ. ರುದ್ರಯ್ಯ ನವರು ಬಿ ಎ, ಇವರ ಪುತ್ರ ಚಿ॥ ಎಸ್ ಆರ್ ಗುರುಶಂಕರ ಬಿ ಎ, ಎಲ್ ಎಲ್ ಬಿ, ಇವರಿಗೆ ಕೊಟ್ಟು ನಂಜನಗೂಡಿನಲ್ಲಿರುವ ಕನ್ಯಾಗೃಹದಲ್ಲಿ ಶಾ॥ ೨೮-೪-೧೯೪೪ ನೆಯ ದಿನಸ ನೆನೆಗೆಂದು ವಿವಾಹ ಸಮಯದಲ್ಲಿ ಸ್ವಭಾವೋತ್ಸಾಹಕ್ಕೊಸ್ಕರ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ವಧುವಿನ ಅಣ್ಣಂದಿರಾದ ವೇ॥ ಎಸ್. ಸಿ. ನಾಗಳುನೂರಯ್ಯನವರ ದ್ವಾರಾ ತಲ್ಪಿರು ತ್ತವೆ

ಕಾಳಿಕಾನಪಳ್ಳಿ ಶಾ॥ ದೊಡ್ಡಮುದುವಾಡಿ ಗ್ರಾಮದ ಶ್ರೀ ಗುರುಸಂಗಸ್ಥ ಮಠಸ್ಥಾಮಿ ಇವರ ಶಿವಲೀಲಾಶ್ರಮ ದಲ್ಲಿ ಶಾ॥ ೨೩-೦-೪೪ ನೇ ದಿನಸ ಚಿಕ್ಕಮುದುವಾಡಿ ಗ್ರಾಮದ ಯಜಮಾನ್ ಲಿಂಗೇಗೌಡರ ಮಕ್ಕಳು ಮ॥ ರಾ॥ ಲಿಂಗೇಗೌಡರ ಪುತ್ರಿ ಚಿ॥ ಜಯಮೆಂಗಳಮ್ಮನ ದಾಮಕರಣವೂ ಮತ್ತು ಅನ್ನದಾನವೂ ನೆರವೇರಿದ ಸಮಯದಲ್ಲಿ ಶ್ರೀ ಪ್ರಭಾವೋತ್ಸಾಹಕ್ಕೋಸ್ಕರ ಸಮರ್ಪಿಸಿದ 1 ರೂ ಯು ವು॥ ರಾ॥ ಸುಂದರರಾವ್ ಘೋರ್ಪಡೆ ಅಣ್ಣ ತಾಡಿ, ಇವರ ದ್ವಾರಾ ತಲುಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಗುರುಗಳು ಸಂಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಶ್ರೀ ಕೇದಾರಪೀಠದ ಸಮಾಚಾರ

ಈಗ್ಗೆ ೨ ವರ್ಷಗಳ ಕೆಳಗೆ ಶ್ರೀ ಕೇದಾರಪೀಠದ ಬಗ್ಗೆ ನಡೆದ ಎಲೆಕ್ಷನ್ನಿನಲ್ಲಿ ೮ ಮಠದ ಸ್ವಾಮಿಗೆ ವಿರುದ್ಧವಾಗಿ ಒಬ್ಬರು ಆರಿಸಿ ಬಂದಿದ್ದು, ಅವರ ಮೇಲೆ ಚಮೋಲಿ ಕೋರ್ಟಿನಲ್ಲಿ ದಾವೆಯು ಮಾಡಲ್ಪಟ್ಟಿರುವ ವಿಷಯವು ಪ್ರಭಾ ವಾಚಕರಿಗೆಲ್ಲಾ ವೇದ್ಯವೇ ಆದಿ ತಕ್ಕುಂಟಾಗಿದ್ದಾಗಿ ಆ ಕೋರ್ಟಿನ ವತಿಯಿಂದ ಈಗ್ಗೆ ೧ ತಿಂಗಳ ಕೆಳಗೆ ಕಮಿಷನರವರು ಮೈಸೂರು ದೇಶಕ್ಕೆ ಹೋಗಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಮತ್ತು ಗದಗಬೆಟಗೇರಿ ಮಃ॥ ರಾ॥ ಹರೀಮನೆ ಪಾಟೀಲ ಫೀಲಪ್ಪಗೌಡರ ಸಾಕ್ಷಿಗಳನ್ನು ತೆಗೆದುಕೊಂಡರು. ಇತ್ತೀಚೆಗೆ ಗವರ್ನಮೆಂಟಿನ ಆರ್ಡರಿನ ಮೇರೆಗೆ ಶಾ॥ ೨೦-೪-೧೯೪೪ ನೆಯ ದಿನಸ ರೀಸಿನರರು ಒಪೀ ಮಶಕ್ಕೆ ಬಂದು ಪ್ರತಿವಾದಿಯಿಂದ ಚಾರ್ಜು ತೆಗೆದು ಕೊಂಡು ಮಠದ ಆಡಳಿತವನ್ನೆಲ್ಲಾ ವಹಿಸಿಕೊಂಡಿರು ತ್ತಾರೆ. ಕೋರ್ಟಿನಲ್ಲಿ ವ್ಯಾಜ್ಯದ ವಿಚಾರಣೆಯು ಶಾ॥ ೨೮-೬-೧೯೪೪ ಕ್ಕೆ ಬರ್ತಿರುವುದು. ಕೋರ್ಟಿನ ತೀರ್ಮಾನವು ಬೇಗ ಆಗಬಹುದೆಂದು ನಿರೀಕ್ಷಿಸಲಾಗಿದೆ ಶಾ॥ ೨೯-೪-೪೪ ನೆಯ ದಿನಸ ಕೇದಾರನಾಥ ಮುಂದಿರದ ಬಾಗಿಲವು ತೆರೆಯುತು.

ಓರ್ವ ಕೇದಾರಪೀಠದ ಶಿಷ್ಯ

ಸಿದ್ಧಾಂತಶಿಖಾಮಣಿ

ವೀರಶೈವಸಮುದಾಯದಲ್ಲಿ ಜ್ಞಾನಿಗಳಾದ ಪ್ರತಿಯೊಬ್ಬರೂ ಸಿದ್ಧಾಂತಶಿಖಾಮಣಿಯನ್ನು ಓದಿ ಅರ್ಥಮಾಡಿಕೊಳ್ಳಬೇಕೆಂಬ ಈ ಮಹಾ ಗ್ರಂಥವನ್ನು ಶ್ರೀಜ [illegible] ಕಾಚಾರ್ಯರು ಅನೇಕ ದಿವ್ಯಶಾಸ್ತ್ರಗಳಿಂದ ಆಯ್ದು ಸಂಪೂರ್ಣ ಸಿದ್ಧಾಂತವನ್ನು ಅಳವಡಿಸಿರುವುದು ವಿಶೇಷ. ಇಂಥ ಮಹಾ ಗ್ರಂಥವನ್ನು ಕನ್ನಡ ವೀರಶೈವಸಮಾಜದ ಸದ್ಭಾ [illegible] ಗ್ರಂಥಮಾಲೆಯಲ್ಲಿ ಪ್ರಕಟಿಸಿರುವುದು ಅವೀಳು ಪುರಾತನಪ್ರಾಧಾನ್ಯವನ್ನು ಮೆರೆಯುತ್ತಿರುವುದು ಈ ಗ್ರಂಥದ ಉಗ್ಗಡಿಸಲು ಸಮಾನಿರ ವರ್ಷಗಳ ಪರಿಶ್ರಮವಿದ್ದು **ಶ್ರೀಪಟವಯೋಗಿಶಿವಾಚಾರ್ಯರಂಬ** ಆಚಾರ್ಯರಿಂದ ದೀಕ್ಷೆಗೊಟ್ಟರೆಯಲು ಈ ಗ್ರಂಥಾಧ್ಯಯನವು ವೀರಶೈವಸಮಾಜಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅರ್ಥಕ ವಿಧವಾದ ಸ್ವಾಮ್ಯತ್ವ ಕಲ್ಪಿಸಿ ಬರೆದಿರುತ್ತಾರೆ. ಅದೇ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಪ್ರೌಢಶೈಲಿ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವನ್ನಿಟ್ಟು ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಒಳ್ಳೆ ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರಿಗೆ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿದವರಿಗೆ ಸಾಮಾನ್ಯ ಜೀವನಕ್ಕೆ ಸಾರಕರ ಅನುಭವಗಳಿಂದ ಒಳ್ಳೆ ಕ್ರಮವನ್ನು ಸಿದ್ಧಪಡಿಸಿ ಸಿದ್ಧಾಂತಿಗಳಿಗೆ ಉಪಯೋಗಕ್ಕೆ ಬರುವಂತೆ ಮಾಡಿರುವುದಲ್ಲದೆ ಶಂಕರಾಚಾರ್ಯರ ಶಾರೀರಕಭಾಷ್ಯ ಮುಂತಾದ ಇತರ ಗ್ರಂಥಗಳಲ್ಲಿ ಕಂಡುಬರುವ ಕೆಲವು ಮತ್ತಿತರ ವಿಷಯಗಳಿಗೆ ಈ ಗ್ರಂಥದಲ್ಲಿ ಸಮರ್ಪಕವಾದ ಸಮಾಧಾನವನ್ನು ಕೊಟ್ಟಿರುವುದು ಈ ಗ್ರಂಥದ ಮಹತ್ವವನ್ನು ಹೆಚ್ಚಿಸಿದೆ. ಶ್ರೀ ಕಾಶೀನಾಥಶಾಸ್ತ್ರಿಗಳವರು ಈ ಗ್ರಂಥವನ್ನು ಮೂಲಗ್ರಂಥಕರ್ತರಾದ ಶ್ರೀಜಗದ್ಗುರು ಪಂಚಾಚಾರ್ಯರ ಪಾದಾರವಿಂದಗಳಲ್ಲಿ ಸಮರ್ಪಿಸಿ ಕೃತಾರ್ಥರಾಗಿರುವುದು ಅತ್ಯಂತ ಸಂತೋಷಕರವಾಗಿದೆ. ಈ ಗ್ರಂಥವು ಅಚ್ಚಿಗೆ ಸುಮಾರು ೨೫೦ ಪುಟಗಳಷ್ಟಿದ್ದು ಬೆಲೆ ೨ ರೂಪಾಯಿ.

ಮನಮೋಹಕವಾದ ಫೋಟೋಗಳು.

ಶ್ರೀ [illegible] ಕಾಚಾರ್ಯ [illegible] ಟೆ (ಕಾಗದಪರಿಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಶ್ರೀ [illegible] ಕಾಚಾರ್ಯ [illegible] ಸೈಜು ೧೪×೧೦ ಬೆಲೆ	೦—೪—೦
ಶ್ರೀ [illegible] ಚಿಕ್ಕ ಸೈಜು ಬೆಲೆ	೦—೨—೦
ಶ್ರೀ [illegible] ರುವ ಮಲ್ಲಿಕಾರ್ಜುನೇಶ್ವರ ಶಿವಾಚಾರ್ಯರ ಅಂತರ್ಧಾನದಿವ ಅಂತರಿಸಿರುವ ಫೋಟೋ	೦—೧—೬
ಶ್ರೀ [illegible] ಯರು ಶ್ರೀಮನ್ನಿಜಗುಣ ಶಿವಾಚಾರ್ಯರಿಗೆ ಬಿಲ್ವಾಧಿಕೇಶ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಏಳಿಗೆಗಾಗಿ ಪಂಚಾಚಾರ್ಯರಿಗೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ [illegible] ಮಲ್ಲರ ವಿವಿಧ ಶಿವಾಚಾರ್ಯ [illegible] ಹಾಸ್ಯಾದಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀರೇಣುಕಾಚಾರ್ಯರುಗಳಿಗೆ ಶ್ರೀವರಭ ಪುರೀ ಜಗದ್ಗುರುಗಳು ಕರಿಕಿಪ್ಪಾರಣಮಾಡುವ ಫೋಟೋ	೦—೧—೬
ಶ್ರೀ [illegible] ಯೇ ಸಿಂಹಾಸನಾರೋಢರಾ ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರಾಚಾರ್ಯರ ಫೋಟೋ	೦—೧—೬
[illegible] ಸುವ್ರಂಜ ಪುರೀ ಸೀಂಹಾಸನಾರೋಢರಾ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಷಣ್ಮುಖಸ್ವಾಮಿ ಜಗದ್ಗುರುಗಳವರ ಸ್ಮಾರಕ ಪ್ರತಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕಾಳತಿಗೆ ಇಂದಿರುವ ಫೋಟೋ	೦—೧—೬
ಪಂಡಿತ ಶ್ರೀಕಾ [illegible] ಶಾಸ್ತ್ರಿಗಳವ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು)	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವ [illegible] ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ	೦—೪—೦
[illegible] ಹಾಗಮ್ಮದು ಉಜ್ಜಯಿ [illegible] ಪಾದಾರವಿಂದದ ಆತ್ಯಂತ ಸುಂದರವಾದ ಫೋಟೋ ಬೆಲೆ	೦—೧—೬
[illegible] ಬಗೆಗುರು ಉಜ್ಜಯಿ [illegible] ಸೀರದ ಅತ್ಯಂತ ಪ್ರಾಚೀನತೆಯ ಸುಂದರ ಫೋಟೋ ಬೆಲೆ	೦—೧—೬
[illegible] ಗಾಮ್ಮ ಶ್ರೀಕಾಶಿಸಂಸ್ಥಾನದ ಅತ್ಯಂತ ಸುಂದರ [illegible] ಗೋಪುರದ ಫೋಟೋ	೦—೧—೬
[illegible] ಸಂಸ್ಥಾನದ ಜಗದ್ಗುರುಗಳವರ ಸ್ಮಾರಕ ಪ್ರತಿ ಶ್ರೀಮನ್ನಿಜಗುಣಶಿವಯೋಗಿಗಳವರು ವಿರಾಜಿಸುತ್ತಿರುವ ಫೋಟೋ	೦—೧—೬
ಈ [illegible] ಯೇ [illegible] ಜಗದ್ಗುರುಗಳ ಅಪ್ಪಣೆಪ್ರಕ್ಕಿ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರುಪಂಚಾಚಾರ್ಯರಿಂದ ಕೊಡಲ್ಪಟ್ಟಿರುವ ತಿಲಪಾತಸನಗಳು	೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ) ..	೧ ಆಣ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ	೧ ಆಣೆ
ಪೂಜವಿಧಿ ಪ್ರಥಮ ಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾರ್ಯ ಕೇತನ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೩ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ
ಶ್ರೀಜಗದ್ಗುರು ಪಟ್ಟಾಭಿಷೇಕ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಶಿವಪಾದಾದಿಸಿತತ್ಪದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಶ್ರೀಗುರುಶತ್ಪದಗಳು (೩ನೆಯ ಆವೃತ್ತಿ) ..	೩ ಆಣೆ
ಶ್ರೀರುದ್ರಮುನಿಪೀಠಾಚಾರ್ಯಶತಕ ..	೩ ಆಣೆ
ಶಿವಶಕ್ತಿವಿಲಾಸ ..	೩ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೩ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ ..	೩ ಆಣೆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ ...	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪಡಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಕೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ ...	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ಪ್ರತ್ಯೇಕೀಕರಣ (೩ನೆಯ ಆವೃತ್ತಿ) ...	೬ ಆಣೆ
ವಿಭೂತಿಧಾರಣೆಶ್ಚಿ—ಶ್ಚಾನ್ಯವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ) ...	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಒಸವಧ್ಯಾಂಶವಿವಾಕರ (೩ನೆಯ ಆವೃತ್ತಿ)	೮ ಆಣೆ
ಅಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀವೀಚನತಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ...	೧ ರೂ.
ನೈದಿಕಶಿವಪೂಜಾವಿಧಿ (ಸೈದಿಕ್ಷೇಶ್ವರಯುಕ್ತವಾದುದು ೩ನೆಯ ಆವೃತ್ತಿ)	೧೫ ರೂ
ಶ್ರೀಕರಭಾಷ್ಯಂ (ಜಸಾಸ್ಪಾಶ್ರಿ)	೧೫ ರೂ.
ವೀರಶೈವವರತ್ನ (೩ನೆಯ ಸಂವೃತ್ತಿ, ೩೦ ಮಹತ್ಪದ ಫೋಟೋಗಳಿರುವುವು)	೨ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಿಗಟ್ಟದಿ)	೨ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ)	೨ ರೂ.
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಶಿವಾದ್ವೈತಮಂಜರಿ (ಕನ್ನಡ ಪ್ರೌಢವ್ಯಾಖ್ಯಾನ ೧೩೪೪ ಪುಟ) ..	೪ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As.
Speeches by Pandit Shri Kashinatha Shastriji (*English*)	12 As
ಶಿಷ್ಟಾಚಾರಚಂದ್ರಿಕಾ (ಉಕ್ತ)	೩ ಕ.
ವೀರಶೈವಧರ್ಮ (ಗರಬೆ)	೧ ಕ.
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಉಕ್ತ)	೧ ಕ.
ಸಂಧಿಕೌಮುದೀಕಾರಿಕಾ (ಸಂಸ್ಕೃತ) ..	೩ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Pandit Kashinatha Shastri at Shri Panchachatya Electric Press, Sayaji Rao Road, Mysore

REGISTERED No. M. 2266 ಶ್ರೀಜಗದ್ಗುರು ಪಂಚಾಚಾರ್ಯಾಗಳ ಪ್ರಸೀದಮಂತು REGISTERED No M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರಪರಾಯಣಕರ್ ಪರಿಶಸ್ಪಂಚಾಕ್ಷರೀಮೋಧರ್ । ಪಂಚಾಚಾರ್ಯವಗಮ್ಯರೊತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ಏ ಸಿ. ಖರ್ಚು ಸೇರಿ ೬ ರೂ ೪ ಆಣೆ

ಸಂಪುಟ ೫೧] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೦ನೇ ಮೇ ೧೯೪೪ [ಸಂಚಿಕೆ ೫೫

ಹೈದರಾಬಾದ ಮತ್ತು ಕಾಶ್ಮೀರದಬಗ್ಗೆ ನೆಹರೂರವರ ವಿವರಣೆ

— ---

ಕಾಶ್ಮೀರದ ವಿಚಾರವಾಗಿ ಭದ್ರತಾ ಸಮಿತಿಯ ನಿರ್ಣಯವನ್ನು ಕುರಿತು ಭಾರತ ಸರ್ಕಾರದ ನೀತಿಯನ್ನು ಪಂ॥ ನೆಹರೂರವರು ಪತ್ರಿಕಾ ಸಮ್ಮೇಳನದಲ್ಲಿ ಈ ಕೆಳಗೆ ಕಂಡಂತೆ ವಿವರಿಸಿದರು

ಈ ವಿಚಾರದಲ್ಲಿ ಭಾರತದ ನೀತಿಯನ್ನು ಭದ್ರತಾ ಸಮಿತಿಯಲ್ಲಿ ಭಾರತ ನಿಯೋಗದ ನಾಯಕರು ವಿಶದಗೊಳಿಸಿರುತ್ತಾರೆ ಈ ನಿರ್ಣಯದ ಹಲವು ಅಂಶಗಳನ್ನು ಭಾರತವು ಒಪ್ಪುವಂತಾಗಿಲ್ಲ ಈ ನೀತಿಗೆ ವಿರುದ್ಧವಾಗಿರುವ ಅಲ್ಲದೆ ಕಾಶ್ಮೀರದ ನಿವಾಸಿಗಳ ಮತ್ತು ಸರಕಾರದ ಹಿತಕ್ಕೆ ವಿರುದ್ಧವಾಗಿರುವ ಈ ಸಲಹೆಗಳನ್ನು ಅಂಗೀಕರಿಸಲು ಸಾಧ್ಯವೇ ಇಲ್ಲ ಕಾಶ್ಮೀರದಲ್ಲಿ ಶಾಂತಿ ಶಿಸ್ತಿನ ರಕ್ಷಣೆಗಾಗಿ ಸಮಿತಿಯು ಸೂಚಿ ಮಾಡಿರುವಂತೆ ಪಾಕೀಸ್ತಾನದ ಸೈನ್ಯವನ್ನು ಹೇಗೆ ತಾನೇ ಸೇರಿಸಲು ಸಾಧ್ಯ? ಎಂಬುದಾಗಿ ಪಂ॥ ನೆಹರೂರವರು ತಿಳಿಸಿದರು ಇತ್ತೀಚೆಗೆ ಭಾರತ ಸೈನ್ಯೋಗದವರೆಲ್ಲಾ ಹಿಂತಿರುಗುವರೆಂದೂ, ಅವರ ಅಭಿಪ್ರಾಯಗಳನ್ನು ಪೂರ್ಣವಾಗಿ ಅರಿತ ಮೇಲೆ ಭಾರತ ಸರಕಾರ ಮುಂದಿನ ಕ್ರಮವನ್ನು ನಿರ್ಧರಿಸುವುದೆಂದೂ ಸೂಚಿಸಿದರು

ಯುದ್ಧ ಅಥವಾ ಸಂಧಾನದಿಂದ ಮಾತ್ರವೇ ಇತ್ಯರ್ಥವಾಗಬೇಕು

ಕಾಶ್ಮೀರದ ಸಮಸ್ಯೆ ಪರಿಹಾರವಾಗುವ ಮಾರ್ಗವನ್ನು ಸೂಚಿಸುತ್ತಾ ಪಂ॥ ನೆಹರೂರವರು, ಇದು ಯುದ್ಧದಿಂದ ಅಥವಾ ಸಂಧಾನದಿಂದ ಮಾತ್ರವೇ ಬಗೆ ಹರಿಯಬೇಕಾಗಿದೆ ಒಪ್ಪಂದ ಸಾಧ್ಯವಾಗುವವರೆಗೂ ಈ ಯುದ್ಧಾಚರಣೆಯನ್ನು ಭಾರತ ನಿಲ್ಲಿಸಲಾಗುವುದಿಲ್ಲ ಕಾಶ್ಮೀರದಲ್ಲಿ ಧಾಳಿಕಾರರನ್ನು ಅಲ್ಲಿಂದ ಹೊರದೂಡುವವರೆಗೆ ಇದು ನಿಲ್ಲುವಂತಿಲ್ಲ ಈ ಧಾಳಿಕಾರರಿಗೆ ಪಾಕಿಸ್ತಾನದ ಸಹಾಯವಿರುವುದರಿಂದಲೇ ಭಾರತ ಸರಕಾರ ಈ ಪ್ರಶ್ನೆಯನ್ನು ಭದ್ರತಾ ಸಮಿತಿಯ ಮುಂದೆ ತಂದಿತು ಈಗಲೂ ಪಾಕಿಸ್ತಾನದಲ್ಲಿ ಈ ಧಾಳಿಕಾರರಿಗೆ ನೆಲೆಯಿದೆ ಪಾಕಿಸ್ತಾನದ ಸಹಾಯವಿದೆ ಆದರೆ ಪಾಕಿಸ್ತಾನವನ್ನು ಪ್ರವೇಶಿಸದೆ ಭಾರತ ಸರಕಾರದ ಸೈನ್ಯಾಚರಣೆಗಳು ಫಲಿಯುವುವು ಎಂದು ತಿಳಿಸಿದರು.

ಈ ಪರಿಹಾರದ ಮತ್ತೊಂದು ಮಾರ್ಗ ಸಂಧಾನ ಸಮಾಲೋಚನೆಗಳಿಂದ ಇದಕ್ಕೆ ಭಾರತ ಸಿದ್ಧವಾಗಿದೆ ಆದರೆ ಈ ಸಮಾಲೋಚನೆ ಸಫಲವಾಗುವ ಸೂಚನೆ ಮೊದಲು ದೊರೆಯಬೇಕು. ಎಂದು ತಿಳಿಸಿದರು

ಹೈದರಾಬಾದಿನ ಬಗ್ಗೆ ವಿವರಣೆ

ಹೈದರಾಬಾದಿನ ವಿಚಾರವಾಗಿ ಎ ಐ ಸಿ. ಸಿ. ಸಭೆಯಲ್ಲಿ ತಾವು ಮಾಡಿದ ಭಾಷಣದಲ್ಲಿ ಹಲವು ಅಂಶಗಳು ತಪ್ಪಾಗಿ ವರದಿಯಾಗಿರುವುದನ್ನು ಸೂಚಿಸುತ್ತಾ ಪಂ॥ ನೆಹರೂರವರು ಹೈದರಾಬಾದಿನ ಪ್ರಾದೇಶಿಕ ಸ್ಥಿತಿಗನುಸಾರವಾಗಿ ಆ ಸಂಸ್ಥಾನ ಭಾರತದೊಂದಿಗೆ ನಿಕಟ ಸಂಬಂಧವನ್ನು ಹೊಂದಿರಬೇಕು ಕೇವಲ ಭೂಗೋಳಿಕ, ಆರ್ಥಿಕ ದೃಷ್ಟಿಯಿಂದ ನಾತ್ರವೇ ಈ ಸಂಸ್ಥಾನ ಭಾರತ ರಾಷ್ಟ್ರಭಾಗವಾಗಬೇಕೆಂದು ತಾವು ಹೇಳಿರಬಹುದಾಗಿ ತಿಳಿಸಿದರು

ವಿದೇಶಾಂಗ ವ್ಯವಹಾರ, ರಕ್ಷಣೆ ಮತ್ತು ಸಂಚಾರ ಸೌಕರ್ಯಗಳ ವಿಚಾರದಲ್ಲೂ ಸಂಸ್ಥಾನ ಸ್ವತಂತ್ರವಾಗಿರಲು ಸಾಧ್ಯವಿಲ್ಲ ಇದರಿಂದ ಯಾವ್ಯಾಲಾದರೂ ವೈದರಾಬಾದ್ ಭಾರತದ ಭಾಗವಾಗಲೇಬೇಕು ಇದಕ್ಕೆ ಒಪ್ಪಂದದಿಂದ ಈ ವಿಚಾರದಲ್ಲಿ ಭಾರತ ಸರ್ಕಾರಕ್ಕೆ ಅಧೀನವಾಗಿರಬೇಕು ಸೈನ್ಯಸಾಹಾಯದಿಂದ ಒಳೊದ್ದೆಂದಾಗಿಯಾವ ಸಂಸ್ಥಾನವನ್ನೂ ಭಾರತಕ್ಕೆ ಸೇರಿಸುವ ಅಭಿಲಾಷೆ ಭಾರತ ಸರ್ಕಾರಕ್ಕೆ ಸ್ವಲ್ಪವೂ ಇಲ್ಲ ಹೈದರಾಬಾದಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯೇ ಈಗ ಅಲ್ಲಿನ ಮುಖ್ಯ ಪ್ರಶ್ನೆ ಯಾಗಿದೆ—ಎಂದು ಪಂ॥ ನೆಹರೂರವರು ವಿಶದಗೊಳಿಸಿದರು

ರಜಾಕರ ಸಂಸ್ಥೆ ರದ್ದಾಗಬೇಕು

ಹೈದರಾಬಾದ್ ಭಾರತದ ಗಡಿಯಲ್ಲಿ ರಜಾಕರು ನಡೆಸಿದ ದುಷ್ಕೃತ್ಯಗಳನ್ನು ಸೂಚಿಸಿ ಪಂ॥ ನೆಹರೂರವರು ಭಾರತದಲ್ಲಿ ಖಾಸಗೀ ಸೈನ್ಯಗಳನ್ನು ರದ್ದುಗೊಳಿಸಿದಂತೆಯೇ, ಈ ರಜಾಕರ ಸಂಸ್ಥೆಯೂ ರದ್ದಾಗಬೇಕೆಂದು ಭಾರತ ಸರ್ಕಾರ ಕೋರಿದೆ ಈ ಸಂಸ್ಥೆಗೆ ಸಂಸ್ಥಾನ ಸರ್ಕಾರದ ನೆರವಿದ್ದರೆ, ಭಾರತಕ್ಕೆ ವಿರುದ್ಧವಾದ ಕಾರ್ಯಾಚರಣೆಯಲ್ಲಿ ಸಂಸ್ಥಾನ ಸರ್ಕಾರವು ತೊಡಗಿರುವುದು ವಾಸ್ತವಿಕವೆಂದು ತಿಳಿಸಿದರು

ಸಂಸ್ಥಾನದ ಸೈನ್ಯವನ್ನು ಹೆಚ್ಚಿಸಲಾಗಿದೆ

ಹೈದರಾಬಾದಿನ ಸೈನ್ಯೊಲವನ್ನು ೭,೦೦೦ ರಿಂದ ೨೫,೦೦೦ಕ್ಕೆ ಹೆಚ್ಚಿಸಲಾಗಿದೆ ಅಲ್ಲದೆ ಈ ಸೈನ್ಯಕ್ಕೆ ಹೊರಗಿನಿಂದ ಆಯುಧಗಳನ್ನು ಒದಗಿಸುವ ಪ್ರಯತ್ನ ನಡೆಯುತ್ತಿದೆ. ಇದು ಸ್ಟಾಂಡ್‌ಸ್ಟಿಲ್ ಒಪ್ಪಂದಕ್ಕೆ ವಿರುದ್ಧವಾದುದು ಇದರಿಂದ ಸಂಸ್ಥಾನಕ್ಕೆ ಆಯುಧ ಸಲಕರಣೆಗಳನ್ನು ಒದಗಿಸಲು ಭಾರತ ಸರಕಾರ ನಿರಾಕರಿಸಿದೆ. ಈ ಯುದ್ಧ ಸಲಕರಣೆಗಳ ವಿನಾ ಉಳಿದ ಆರ್ಥಿಕ ವಿಚಾರದಲ್ಲಿ ಸಂಸ್ಥಾನದ ದಿಗ್ಬಂಧನವಿಲ್ಲ ಎಂಬುದಾಗಿ ಪಂ॥ ನೆಹರೂರವರು ವಿವರಿಸಿರುತ್ತರು.

ಕಾಶ್ಮೀರ ನಿರ್ಣಯದ ಬಗ್ಗೆ ಪಾಕಿಸ್ತಾನದ ಮುಖ್ಯಮಂತ್ರಿಗಳ ಹೇಳಿಕೆ

"ಕಾಶ್ಮೀರದ ಬಗ್ಗೆ ಭದ್ರತಾ ಸಮಿತಿಯು ಅಂಗೀಕರಿಸಿರುವ ನಿರ್ಣಯದ ಪರತ್ವುಗಳ ಪ್ರಕಾರ ಕಾಶ್ಮೀರದಲ್ಲಿ ನಿಷ್ಪಕ್ಷಪಾತವೂ ನ್ಯಾಯವೂ ಆದ ಮತಗಣನೆ ನಡೆಯಲು ಸಾಧ್ಯವೇ ಇಲ್ಲವಾಗಿದೆ ವಿಶ್ವಸಂಸ್ಥೆಯ ಸೌಹಾರ್ದಗೋಷ್ಠಿಯು ಇಲ್ಲಿಗೆ ಬಂದಾಗ ನಿರ್ಣಯದ ಲೋಪದೋಷಗಳನ್ನು ನಾವು ಎತ್ತಿ ತೋರಿಸುತ್ತೇವೆ"

—ಎಂಬುದಾಗಿ ಭದ್ರತಾ ಸಮಿತಿಯು ಮಾಡಿರುವ ನಿರ್ಣಯಕ್ಕೆ ಪಾಕಿಸ್ತಾನದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತ ಮಿ॥ ಲಿಯಾಕತ್ ಅಲಿಖಾನರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು ಈ ಸಮ್ಮೇಳನಕ್ಕೆ ಸುಮಾರು ೫೦ ಮಂದಿ ವಿದೇಶಗಳ ಮತ್ತು ಸ್ವದೇಶೀಯ ಪತ್ರಿಕಾ ಪ್ರತಿನಿಧಿಗಳು ಬಂದಿದ್ದರು

ಕಾಶ್ಮೀರದಲ್ಲಿ ಒಪ್ಪುಮಂದಿಗೆ ಪಾಕಿಸ್ತಾನ ಸೇರಬೇಕೆಂಬ ಇಚ್ಛೆ ಇದೆ ಪ್ರಜೆಗಳ ಮತಗಣತಿಯಾಗಬೇಕಾದರೆ ಕಾಶ್ಮೀರದಲ್ಲಿರುವ ಭಾರತ ಸೈನ್ಯ ಹೊರಸೆ ಹೋಗಬೇಕು ಮತ್ತು ನಿಷ್ಪಕ್ಷಪಾತವಾದ ಆಡಳಿತ ವ್ಯವಸ್ಥೆ ಏರ್ಪಡಿಸಬೇಕು ಎಂದು ಮಿ॥ ಲಿಯಾಕತ್ ಅಲಿಯವರು ತಿಳಿಸಿ ಭದ್ರತಾ ಸಮಿತಿಯ ನಿರ್ಣಯವು ಕೃಷ್ಣಕರವಾಗಿಲ್ಲವೆಂದು ನುಡಿದರು ಪಾಕಿಸ್ತಾನದಲ್ಲಿ ಹೋರಾಡುತ್ತಿರುವವರಲ್ಲಿ ಬಹುಮಂದಿ ಕಾಶ್ಮೀರದ ಪ್ರಜೆಗಳೇ ಆಗಿರುವರೆಂದೂ, ಪಾಕಿಸ್ತಾನಕ್ಕೆ ಇವರ ವಿಚಾರದಲ್ಲಿ ಸಹಾನುಭೂತಿ ಇದೆಯೆಂದೂ ಅವರು ಸ್ಪಷ್ಟಪಡಿಸಿದರು

ಷೇಕ್ ಅಬ್ದುಲ್ಲಾ ಸರ್ಕಾರ ಇರಕೂಡದು

ಷೇಕ್ ಅಬ್ದುಲ್ಲಾರವರು ಕಾಶ್ಮೀರ ಸರಕಾರದ ಮುಖ್ಯಮಂತ್ರಿಯಾಗಿರುವುದರಿಂದ ನ್ಯಾಯವೂ ನಿಷ್ಪಕ್ಷಪಾತವೂ ಆದ ಮತಗಣನೆ ಸಾಧ್ಯವೇ ಇಲ್ಲವೆಂದೂ, ಭದ್ರತಾ ಸಮಿತಿಯ ನಿರ್ಣಯವು ನಿಷ್ಪಕ್ಷಪಾತವಾದ ಮತಗಣನೆಗೆ ಲೇಶವೂ ಸಹಾಯಕವಾಗಿಲ್ಲವೆಂದೂ ಪಾಕಿಸ್ತಾನದ ಮಂತ್ರಿಗಳು ತಿಳಿಸಿದರು

"ಕಾಶ್ಮೀರದಲ್ಲಿ ಕಷ್ಟಪರಂಪರೆಗಳನ್ನು ಅನುಭವಿಸುತ್ತಿರುವ ಮುಸ್ಲಿಂ ಬಾಂಧವರ ಯ.ಖ ನಿವಾರಣೆಗಾಗಿ ಧಾಳಿಕಾರರೂ, ಕಾಶ್ಮೀರದ ಪ್ರಜೆಗಳೂ ಹೋರಾಡುತ್ತಿದ್ದಾರೆ ಅವರ ವಿಚಾರದಲ್ಲಿ ಪಾಕಿಸ್ತಾನಕ್ಕೆ ಬಹಳ ಪಕ್ಷಪಾತವಿದೆ ನಿಷ್ಪಕ್ಷಪಾತವೂ, ನ್ಯಾಯವೂ ಆದ ಪ್ಲೆಬಿಸ್ಸೈಟ್ ನಡೆಯುವ ವಿಚಾರದಲ್ಲಿ ನಮಗೇ ಕಂಠೆ ಇರುವಾಗ ಧಾಳಿಕಾರರನ್ನು ವಾಪಸು ಕರೆಯುವುದಾದರೂ ಹೇಗೆ?—ಎಂದು ಮುಡಿದರು

ಹಿಂದೂಸ್ತಾನಿ ಭಾಷೆಯ ಬಗ್ಗೆ ಮದ್ರಾಸ್ ಸರ್ಕಾರದ ಆಜ್ಞೆ

ರಾಷ್ಟ್ರಭಾಷೆಯಾದ ಹಿಂದೂಸ್ತಾನಿಯನ್ನು ಶಾಲೆಗಳಲ್ಲಿ ಬೋಧಿಸುವ ಕ್ರಮವನ್ನು ಗೊತ್ತುಮಾಡಿ ಮದ್ರಾಸ್ ಸರ್ಕಾರವರು ಆಜ್ಞೆ ಹೊರಡಿಸಿದ್ದಾರೆ. ಸರ್ಕಾರದ ನೂತನ ವ್ಯವಸ್ಥೆಯ ಪ್ರಕಾರ ಹಿಂದೂಸ್ತಾನಿಯನ್ನು ಮೊದಲನೆಯ ಫಾರಂನಿಂದ ಪ್ರಾರಂಭಿಸಿ ೬ ವರ್ಷಗಳವರೆಗೂ ಬೋಧಿಸಲಾಗುವುದು ಎಸ್.ಎಸ್. ಎಲ್ ಸಿ. ಪರೀಕ್ಷೆಗೆ ಹಿಂದೂಸ್ತಾನಿಯು ಒಂದು ಐಚ್ಛಿಕ ಭಾಷೆಯಾಗಿರುವುದು ವಿದ್ಯಾರ್ಥಿಗಳು ದೇವನಾಗರ ಉರ್ದು ಲಿಪಿಗಳಲ್ಲಿ ಯಾವುದನ್ನಾದರೂ ಆರಿಸಬಹುದು

ಮಾನವರು ಆಚರಿಸತಕ್ಕ ರೀತಿನೀತಿಗಳು

ಲೇ॥—ಎ ಎಂ ಹಾಲಸ್ವಾಮಯ್ಯ ಎಸಂಪ್ಟ್ರಿ

ಮಾನವನು ಯಾವಾಗಲೂ ಸತ್ಯ ಸಾಧಾರಂಭೀಲ ನಾಗಿರಬೇಕು ಅಸತ್ಯ ಕ್ರೂರ ದ್ವೇಷಗಳಿಲ್ಲದವನಿಗೆ ಸರ್ವಜ್ಞತ್ವವು ಪ್ರಾಪ್ತವಾಗುವುದು ತಾನು ಬೇಕಾಬಿಟ್ಟಿ ಅಸಹ್ಯವಿಲ್ಲದವನು ಅನ್ಯರಿಗೆ ಹೃದಯಭೇದಕ ಮಾತು ಗಳನ್ನಾಡುವರಿದು ತಾನು ಅಪ್ಯರಿಂದ ಆಪತ್ತನ್ನ ಹೊಂದಿದರೂ, ಸಹನತಾಶಕ್ತಿಯಿಂದ ಕೇ ಹೆಗಾತು ಅವರನ್ನು ತಿರಿಗಿ ಅಪಮಾನಗಳಿಸದ ಸ್ಥಿತಿ ತೊಡಗಬಾರದು ಲೋಕದಲ್ಲಿ ತಿಳಿಗಿ ಪುಣ್ಯವಿಲ್ಲ ಹಿಂಸೆಗಿಂತಲೂ ಎಂದಿಗಾ ತನ್ನ "ಲ್ಪಸುಖಕ್ಕಾಗಿ ಪರರನ್ನ ಕಷ್ಟಕ್ಕೆ ಕೆಡವಿ ಹಿಂಸಪಡಿಸುವನು ಸನತ್ಸ ಪ್ರಾಣಿಗಳನ್ನು ಹತ್ಯೆ ಮಾಡಿ ಮಾಂಸವನ್ನು ತಿಗೆದುಕೊಳ್ಳುವ ಪರರ ಒಗೊಡೆ ಕೆಲಸಾ ಮಾಡಿಸಿ ಸನತ್ಸ ಎನ್ನುವಂತೆ ನಡೆಯಬೇಕು ಹೃದಯ ಕಾವಿದ ದೇವ ಮಾಡಿದ ವೇದಲು ಎಲ್ಲಾ ಜ್ಞಾನವನ್ನು ಸಂಪಾದನೆ ಮಾಡಿದ ಬೇಕ ಅಜ್ಞಾನವಾದರೆ ಸರನಸ ದೇವು ಲಭಿಸದ ಎಲ್ಲಾ ಜ್ಞಾನವು ಪ್ರಾಪ್ತವಾದ ದೆಲು ಜ್ಞಾನವನ್ನೀಸ ಪಾದನೆ ಮಾಡಿದ ಅತ್ಯಾಯ ಪಡೆಯಂತೆ ಆ ಜಿಕಿಲು ಜಾಗರೂಕರಾಗಿ ಮಾನವರು ಸತ್ಯವನ್ನು ಸಂಪಾದಿಸಿ ಮಾತ್ರವೇ ಒಟ್ಟು ಪಿಕ್ಕಿದಿರಿ ಪಡೆ ಹಿಂದಾವನು ಕ್ರೂ ಹಿತ ವಿಜಾತಿ ಮಾಡಿದ ನರಕಕ್ಕೆ ಕಾರಣ ಹಿಂಸೆಯನ್ನು ಎಂದು ಇದು ಮಾತ್ರವಲ್ಲ ಪಶುಪಕ್ಷಿಗಳನ್ನು ಹಿಂಸಿಸಿದವಕ್ಕೆ ಬರ್ಬರ ಸ್ಥಾನ ಪಡೆಯಬೇಕಾಗುವುದು ಎಂದು ಹೇಳಿದ್ದಾರೆ ಇದು ಸತ್ಯವೇ ಆಗಿದೆ ಮಾನವನಿಗೆ ಸಹಾನುಭೂತಿ ಕರುಣೆ ಇರಬೇಕು ಅಹಿಂಸಾತತ್ವವೇ ಮುಖ್ಯವಾದ ಧರ್ಮವೆಂದು ಹೇಳಿದ್ದಾರೆ ಇದು ಸತ್ಯವಾದ ಮಾತು ಅಹಿಂಸೆಯನ್ನು ಪಾಲಿಸಿದವರಿಗೆ ಸರ್ವಜೀವಿಗಳಲ್ಲಿಯೂ ಪ್ರೀತಿ ಉಂಟಾಗುವುದು

ವರ್ತಮಾನ ಸಂಗ್ರಹ

ಶ್ರೀ ರಾಜಗೋಪಾಲಾಚಾರಿಯವರು ಭಾರತದ ಗೌರ್ನರ್ ಜನರಲ್ ಆಗುವರು

ಭಾರತದ ಗವರ್ನರ್ ಜನರಲ್‌ರವರಾದ ಲಾರ್ಡ್ ಲೂಯಿ ಮೌಂಟ್ ಬೇಟನ್ನರು ಜೂ॥ ೧೭ ನೆಯ ಭಾ॥ ದಿವಸ ತಮ್ಮ ಪದವಿಯಿಂದ ನಿವೃತ್ತರಾಗುವರು ಇಂಡಿಯ ಸರಕಾರದವರೆ ಸಲಹೆಯ ಮೇರೆಗೆ ಬ್ರಿಟಿಷ್ ಪ್ರಭುತ್ವದ ಶ್ರೇಷ್ಠ ರಾಜಕಾರಣಪಟುಗಳ್ಲೂ ಹಿರಿಯ ನಾಯಕರೂ ಆದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರನ್ನು ಭಾರತದ ಗವರ್ನರ್ ಜನರಲ್ ಸ್ಥಾನಕ್ಕೆ ನೇಮಕ ಮಾಡಿದ್ದಾರೆಂಬುದಾಗಿ ಒಕೆಂಗ್‌ಹ್ಯಾಮ್ ಅರಮನೆಯಿಂದ ಅಧಿಕೃತ ಪ್ರಕಟಣೆ ಹೊರಟಿದೆ

ಶ್ರೀ ರಾಜಗೋಪಾಲಾಚಾರ್ಯರಿಗೆ ಜೆನ್ನಾರವರ ಅಭಿನಂದನೆ

ಭಾರತ ಡೊಮಿನಿಯನ್ನಿನ ನೂತನ ಗವರ್ನರ್ ಜನರಲ್‌ರವರಾಗಿ ತಾವು ನೇಮಕವಾಗಿರುವುದಕ್ಕಾಗಿ ನನ್ನ ಅಭಿನಂದನೆಗಳು ವಿವೇಕ ಪೂರ್ಣವಾದ ತಮ್ಮ ಮಾರ್ಗದರ್ಶಿತ್ವದಲ್ಲಿ ಭಾರತ ಪಾಕಿಸ್ತಾನಗಳಿಗೆ ನಿಜವಾದ ಸ್ವಚ್ಛ ಸೌಖ್ಯಾರ್ಥ ಬೆಳೆಯುವುದೆಂದು ನಾನು ಭರವಸೆಯುಳ್ಳವನಾಗಿದ್ದೇನೆ ಈ ಸ್ನೇಹವು ಪಾಕಿಸ್ತಾನಕ್ಕೆ ಎಷ್ಟು ಅವಶ್ಯಕವೋ ಭಾರತಕ್ಕೂ ಅಷ್ಟೇ ಅವಶ್ಯಕವಾಗಿದೆ ಎಂಬುದಾಗಿ ಭಾರತ ಗವರ್ನರ್ ಜನರಲ್ ಪದವಿಗೆ ನೇಮ ಕವಾಗಿರುವ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರಿಗೆ ಪಾಕಿಸ್ತಾನದ ಗವರ್ನರ್ ಜನರಲ್ ಜನಾಬ್ ಎಂ ಎ ಜೆನ್ನಾರವರು ಅಭಿನಂದಿಸಿ ಸಂದೇಶ ಕಳುಹಿಸಿದ್ದಾರೆ

ಶ್ರೀ ರಾಜಗೋಪಾಲಾಚಾರ್ಯರ ಉತ್ತರ

ಮಿ॥ ಜಿನ್ನಾರವರು ಕಳುಹಿಸಿರುವ ಅಭಿನಂದನ ಸಂದೇಶಕ್ಕೆ ತಮ್ಮ ಕೃತಜ್ಞತೆಯನ್ನು ಸೂಚಿಸಿ, ಶ್ರೀ ರಾಜಗೋಪಾಲಾಚಾರ್ಯರವರು ಈ ರೀತಿ ಉತ್ತರ ವಿತ್ತಿದ್ದಾರೆ

ಭಾರತ ಮತ್ತು ಪಾಕಿಸ್ತಾನಗಳಿಗೆ ನೈತ್ರಿ ತತ್ಯಾನ್ಯತ್ಯ ನೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ ತಾವು ಈ ಅವಶ್ಯಕತೆಯನ್ನು ಇಷ್ಟು ಶೀಘ್ರವಾಗಿ ಒತ್ತಿ ಹೇಳಿರುವುದು ನನಗೆ ಸಂತೋಷವನ್ನುಂಟುಮಾಡಿದೆ ಪರಸ್ಪರ ಸಂಬಂಧ ಮತ್ತು ಸಹಕಾರದಿಂದ ಒಬ್ಬರಿನ್ನೊಬ್ಬರು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ ಭಾರತ ಮತ್ತು ಪಾಕಿಸ್ತಾನಗಳಿಗೆ ಪರಸ್ಪರ ಸಹಕಾರಸಹಾಯ ಅತ್ಯಗತ್ಯವಾಗಿದೆ ನಿಮ್ಮ ಸಂದೇಶದಿಂದ ನನಗೆ ಹೆಚ್ಚು ಧೈರ್ಯ ಉಂಟಾಗಿದೆ

ಜಪಾನ್ ನಿಯೋಗನಾಯಕರ ಹೇಳಿಕೆ

ಜಪಾನ್ ವಾಣಿಜ್ಯ ನಿಯೋಗದವರು ಎಲ್ಲಿಗೆ ಒಂದರು ತನ್ನೊಂದಿಗೆ ಭಾರತದ ಸಾರ್ವಜನಿಕಸಂಸ್ಥೆಗಳು ಮತ್ತು ತಮಗಾಗಿ ಸರ್ಕಾರದವರು ಮಾಡಿರುವ ವಿಜಾ-ಪಾಡುಗಳಮ್ಮು ಪ್ರಶಂಸಿಸುತ್ತಾ, ನಿಯೋಗದನಾಯಕ ಕರು, ಜಪಾನ್ ರಾಷ್ಟ್ರವು ಭಾರತಕ್ಕೆ ಭಾರಿ ಯಂತ್ರ ಸಲಕರಣೆಗಳನ್ನು ಮುಖ್ಯವಾಗಿ ಬಟ್ಟೆ ತೈಯಾರಿಕೆಗೆ ಬೇಕಾದ ಯಂತ್ರೋಪಕರಣಗಳನ್ನು ತೈಯಾರಿಸಿ ಸಾಗಿಸಲು ಸಿದ್ಧವಿರುವುದಾಗಿ ಹೇಳಿದರು

ಅಪಹೃತ ಸ್ತ್ರೀಯರ ಉದ್ಧಾರ

ಅಪಹೃತ ಮಹಿಳೆಯರನ್ನು ಬಲವಂತವಾಗಿ ವಶದಲ್ಲಿಟ್ಟುಕೊಳ್ಳುವುದು ಧರ್ಮವಿರುದ್ಧವಾದುದೆಂಬುದರ ಬಗ್ಗೆ ಸಾರ್ವಜನಿಕಾಭಿಪ್ರಾಯವನ್ನು ಕ್ರೋಡೀಕರಿಸಲು ಎರಡು ಡೊಮಿನಿಯನ್‌ಗಳಲ್ಲೂ ಪ್ರಚಾರವನ್ನು ಆರಂಭಿಸಬೇಕೆಂದು ತೀರ್ಮಾನಿಸಲ್ಪಟ್ಟಿದೆ ಮುಖ್ಯ ವಾಗಿ ಗ್ರಾಮಾಂತರಗಳಲ್ಲಿ ಪ್ರಚಾರ ನಡೆಸಲಾಗುವುದು.

ಪಾಕಿಸ್ತಾನದಲ್ಲಿ ಏಕಪಕ್ಷ ಪ್ರಭುತ್ವನಿರಬೇಕು

ಅನಾರಭ್ಯಾಗದಿಂದ ಮುಸ್ಲಿಮರು ಹೋಸ ಇಸ್ಲಾಂ ರಾಷ್ಟ್ರವನ್ನು ಸ್ಥಾಪಿಸಿದ್ದಾರೆ ಇದನ್ನು ಭದ್ರಪಡಿಸಿ ಉಳಿಸಿಕೊಳ್ಳಬೇಕಾದರೆ ಏಕಪಕ್ಷದ ಪ್ರಭುತ್ವವಿರುವುದು ಸ್ಪೇಮ ಪಾರ್ಲಿಮೆಂಟಿನಲ್ಲಿ ನಿರುದ್ಯೋಗಿರುವುದು ಅನವಶ್ಯಕ – ಎಂಬುದಾಗಿ ಪಾಕಿಸ್ತಾನದ ಮುಸ್ಲಿಂ ಲೀಗಿನ ಸಂಶೋಷಕರಾದ ಮಿ॥ ಕಾಲಿಕ್ಕಾಜಮಾನ್‌ರವರು ತಿಳಿಸಿದ್ದಾರೆ

ಹೈದರಾಬಾದಿನ ಬಳಿ ರೈಲು ಉರುಳಿಸುವ ಪ್ರಯತ್ನ

ಏ ನೇ ತಾ॥ ರಾತ್ರಿ ಹೈದರಾಬಾದಿನ ಬಳಿ ರೈಲೊಂದನ್ನು ಹಳಿ ತಪ್ಪಿಸುವ ಪ್ರಯತ್ನ ನಡೆಯುತಿಂದು ನಿಜಾಮ್ ಸರ್ಕಾರದ ಪ್ರಕಟಣೆಯು ತಿಳಿಸುತ್ತಿದೆ ಈ ಪ್ರಯತ್ನ ಕಾರಣವಾಗಿ ಹೈದರಾಬಾದು ರೈಲ್ವೆನಿಲ್ದಾಣ ದಲ್ಲಿರುವ ಗುಂಪು ಇನ್ನೊಂದು ಕೋಮುಸನಸನಿಬ್ಬನಕ್ಕೆ ತಿವಿದು, ಮತ್ತೆರಿಬ್ಬನ್ನು ಗಾಯಗೊಳಿಸಿತು

ಹೈದರಾಬಾದ್ ಸರಕಾರಕ್ಕೆ ೭೦ ಲಕ್ಷ ರೂಪಾಯಿಗಳು ನಷ್ಟ

ಗೃಹಮಂತ್ರಿಗಳ ಜೇಳಿಕೆ

ಹೈದರಾಬಾದ್ ಸಂಸ್ಥಾನದ ಗಡಿಯ ಬಳಿ ನಡೆದ ದಾಳಿಯಿಂದ ಏಪ್ರಿಲ್ ೧೫ ರವರೆಗೆ ನಿಜಾಂ ಸರ್ಕಾರಕ್ಕೆ ೭೦ ಲಕ್ಷ ರೂ ಗಳು ನಷ್ಟವಾಗಿವೆಯೆಂದು ಹೈದರಾ ಬಾದಿನ ಗೃಹಮಂತ್ರಿಗಳು ಶಾಸನ ಸಭೆಯಲ್ಲಿ ತಿಳಿಸಿದರು ಏಪ್ರಿಲ್ ೧೫ ರ ನಂತರ ಕೆಲವು ಘಟನೆಗಳು ನಡೆದಿವೆ ಎಂದು ಇದರ ಸ್ಪಷ್ಟವಾಗಿ ನಿಜಾಂ ಸರ್ಕಾರದ ೨೭ ಜನ ಅಧಿಕಾರಿಗಳು ಸತ್ತರು ೫೭ ಮಂದಿಗೆ ಗಾಯವಾಗಿದೆ ಎಂದು ಅವರು ತಿಳಿಸಿದರು

ಇತ್ತೀಹಾದ್ ಸೈನ್ಯವನ್ನು ಹೆಚ್ಚಿಸುವ ಬಗ್ಗೆ ನಿಜಾಮರ ಮಂತ್ರಿಗಳ ಜೇಳಿಕೆ

'ಇತ್ತೀಹಾದ್ ಸೈನ್ಯವನ್ನು ಹೆಚ್ಚಿಸಿ ಬಲಪಡಿಸು ವೆವು ನಮ್ಮ ಸೈನ್ಯವನ್ನು ತುಳಿಯಲು ಯಾರಿಂದಲಾ ಸಾಧ್ಯವಿಲ್ಲ ಭಾರತದ ಬೆದರಿಕೆಗಳಿಗೆ ಹೈದ್ರಾಬಾದು ಜಗ್ಗುವುದಿಲ್ಲ ಹೈದ್ರಾಬಾದ್ ಮುಸ್ಲಿಮರ ಶಕ್ತಿ ಸಾಮರ್ಥ್ಯಗಳನ್ನು ಭಾರತದ ನಾಯಕರು ಇನ್ನೂ ತಿಳಿದುಕೊಂಡಿಲ್ಲ' ಎಂದು ನಿಜಾಮ್ ಸರ್ಕಾರದ ಪಬ್ಲಿಕ್ ವರ್ಕ್ಸ್ ಮಂತ್ರಿ ಅಬ್ದುಲ್ ರಫ್ ತಿಳಿಸಿವ್ದಾರೆ

ಸದ್ರೂ ಸರ್ಕಾರದ ಮೇಲೆ ಹೈದರಾಬಾದ್ ಕಮ್ಯೂನಿಸ್ಟರ ಅಪಪ್ರಚಾರ

ನಿಜಾಂ ಸರ್ಕಾರದವರು ಹೈದರಾಬಾದ್ ಕಮ್ಯೂನಿಸ್ಟರ ಮೇಲೆ ವಿಧಿಸಿದ್ದ ಪ್ರತಿಬಂಧಕಾಜ್ಞೆಯನ್ನು ಕೆಲವು ದಿನಗಳ ಹಿಂದೆಯಷ್ಟೆ ತೆಗೆದು ಹಾಕಿರುವರಷ್ಟೆ ಇದರಿಂದ ಕಮ್ಯೂನಿಸ್ಟರಿಗೆ ಬಹಳ ಸಂತೋಷ ಉಂಟಾಗಿ ಅವರು ನೆಹ್ರೂ ಸರ್ಕಾರದ ಬಗ್ಗೆ ಅಪಪ್ರಚಾರ ಮಾಡಲು ಆರಂಭಿಸಿದ್ದಾರೆ ಹೈದರಾಬಾದ್ ಕಮ್ಯೂನಿಸ್ಟ್ ಪಕ್ಷವು ಲಂಡನ್ನಿನಲ್ಲಿರುವ ಹೊರಪ್ರಪಂಚಕ್ಕೆ ನೆಹ್ರೂಸರ್ಕಾರವನ್ನು ದೂಷಿಸಿದೆ

ಹೈದರಾಬಾದ್ ಸಂಸ್ಥಾನವು ಭಾರತ ಯೂನಿಯನ್ನಿನಿಂದ ಸೇರುವುದು ಮತ್ತು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ವನ್ನು ಸ್ಥಾಪಿಸುವುದು ಪ್ರಜೆಗಳ ಹಿಂಚೆಲ್ಲಿ ಧಕ್ಕೆ ತರುವು ದೆಂದು ಆ ಪತ್ರಪ್ರತಿಯಲ್ಲಿ ತಿಳಿಸಲಾಗಿದೆ

ಹೈದರಾಬಾದಿನ ಪ್ರಜೆಗಳನ್ನು ಲೂಟಿ ಮಾಡಿ ಅವರ ಸಂಪತ್ತನ್ನು ಕಸಿದುಕೊಳ್ಳುದು ಮತ್ತು ಪ್ರಜಾಸತ್ತಾತ್ಮಕ ಶಕ್ತಿಯನ್ನು ತುಳಿಯುವುದೇ ಇಂಡಿಯ ಯೂನಿಯನ್ ಸೇರದಿರಕ್ಕೆ ಕೂಡಿಗೆ ಉದ್ದೇಶವೆಂದು ತಿಳಿಸಲಾಗಿದೆ. ಹೈದರಾಬಾದ್ ಕಾಂಗ್ರೆಸ್ ಪಕ್ಷವು ನೆಹ್ರೂ ಸರ್ಕಾರದ ಕೈಗೊಂಬೆಯಂತಿದೆಯೆಂದೂ, ಪ್ರಜೆಗಳು ಈ ಬಲೆಗೆ ಬೀಳದೆ ಹೈದರಾಬಾದ್ ಸಂತಂತ್ರವಾಗುಳಿಯುವಂತೆ ಪ್ರಯತ್ನ ಪಡಬೇಕೆಂದೂ ಆ ಪತ್ರಿಕೆಯಲ್ಲಿ ತಿಳಿಸಲಾಗಿದೆ.

ಅಮೆರಿಕದ ಮನವಿಗೆ ಬ್ರಿಟನ್ನಿನ ನಿರಾಕರಣೆ

ಪ್ಯಾಲೆಸ್ಟೈನಿನಲ್ಲಿ ಮೇ ೧೫ ರ ನೆರೆಗೂ ಬ್ರಿಟಿಷ್ ಆಡಳಿತವಿರಬೇಕು ಎಂಬುದಾಗಿ ಅಮೇರಿಕವ ಸಂಯುಕ್ತ ಸಂಸ್ಥಾನಗಳ ಸರ್ಕಾರವು ಮಾಡಿರುವ ಸಲಹೆಯನ್ನು ಬ್ರಿಟಿಷ್ ಸರ್ಕಾರವು ತಿರಸ್ಕರಿಸಿದ ಮೇ ೧೫ ರ ನಂತರ ಒಂದುಕ್ಷಣವೂ ಪ್ಯಾಲೆಸ್ಟೈನಿನಲ್ಲಿರಲು ತಮಗೆ ಇಚ್ಛೆ ಇಲ್ಲವೆಂದು ಬ್ರಿಟಿಷ್ ಸರ್ಕಾರವು ತಿಳಿಸಿದೆ ಪ್ಯಾಲೆಸ್ಟೈನ್ ನನ್ನು ವಿಶತ್ಪನ್ನಿಂದ ಉಳಿಸಲು ಸಂಯುಕ್ತ ಸಂಸ್ಥಾನಗಳ ಸರ್ಕಾರವಾಡಿದ ಕಟ್ಟಕಡೆಯ ಪ್ರಾಧ್ಯ ನೆಯೂ ವಿಫಲ ವಾಯಿತು

ಮೈಸೂರು ಸಂಸ್ಥಾನದಲ್ಲಿ ಕಾರ್ಮಿಕರಿಗಾಗಿ ಗೃಹಗಳ ನಿರ್ಮಾಣ

ಸಂಸ್ಥಾನಗಳ ಸುಖ ಸ್ಥಾಯಿತ್ವಗಳ ಕಾರ್ಮಿಕ ಮಂತ್ರಿ ಗಳ ಸಮ್ಮೇಳನವು ನವದಹಲಿಯಲ್ಲಿ ನೆರೆಗೊಂಡು

ಕಾರ್ಮಿಕರ ವಸತಿ ಗೃಹಗಳ ನಿರ್ಮಾಣದ ಬಗ್ಗೆ ದೀರ್ಘಕಾಲ ಚರ್ಚೆ ನಡೆಯಿತು

೧೦ ವರ್ಷದಲ್ಲಿ ಕಾರ್ಮಿಕರಿಗೋಸ್ಕರ ಸುಮಾರು ೧೦ ಲಕ್ಷ ಮನೆಗಳನ್ನು ನಿರ್ಮಿಸಬೇಕೆಂದಿರುವ ಯೋಜ ನೆಯನ್ನು ಸಮ್ಮೇಳನವು ಪರಿಶೀಲಿಸಿತು

ಮೈಸೂರು ಸಂಸ್ಥಾನದ ಕಾರ್ಮಿಕ ಶಾಖೆಯ ಸಚಿವ ರಾದ ಶ್ರೀ ಕೆ ಟಿ ಭಾಷ್ಯಂರವರು ಸಂಸ್ಥಾನದಲ್ಲಿ ಕಾರ್ಮಿ ಕರಿಗೆ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ ತಮ್ಮ ಯೋಜನೆಯ ನಿವರಗಳನ್ನು ಸಮ್ಮೇಳನದಲ್ಲಿ ಈ ಕೆಳಗೆ ಕಂಡಂತೆ ವಿವರಿಸಿದರು

ಈ ಯೋಜನೆಯ ಸ್ವಕಾರ ಪ್ರತಿ ಕಾರ್ಮಿಕನ ಸಂಸಾರಕ್ಕೂ ೩೦ ಅಡಿ ಉದ್ದ ೨೦ ಅಡಿ ಅಗಲವಿರುವ ಮನೆ ಗಳನ್ನು ಒದಗಿಸಲಾಗುವುದು ಇದರಲ್ಲಿ ವರಾಂಡೆ, ಒಂದು ಕೊರಡಿ ಮಲಗುವ ಮನೆ, ಅಡಿಗೆ-ಬಚ್ಚಲು ಮನೆಗಳು, ಫ್ಲಷ್‌ಟಾಯ್ ಮತ್ತು ಸ್ವಲ್ಪ ಖಾಲಿ ಜಾಗ ಇರುವುದು ನಲ್ಲಿ ಮತ್ತು ವಿದ್ಯುತ್ ದೀಪವಿರುವುದು ನಿವೇಶನವೂ ಸೇರಿ ಇತಕ ಒಂದು ಮನೆಗೆ ಮೈಸೂರಿನ ಯೋಜನೆಯ ಸ್ವಕಾರ ೧,೨೦೦ ರೂ ಖರ್ಚಾಗುವುದು

ಸ್ವೀಕಾರ

ಧಾರವಾಡ ಡಿ॥ ಗದಗ ಬೆಟಗೇರಿ ಗ್ರಾನ.ದಲ್ಲಿರುವ ಮಃ॥ ರಾ॥ ಗೆನ್ನಪ್ಪ ಗೋಡಿ, ಇವರ ಜ್ಯೇಷ್ಠಪುತ್ರಿ ಚಿ॥ ಸೌ॥ ಒಡ್ಡಿವಂತಮ್ಮನವು ಮಃ॥ ರಾ॥ ರೇವಪ್ಪ ಹೆರೂರ ಸಾ॥ ಅಬ್ಬಿಗೇರಿ ಇವರ ಪುತ್ರ ಚಿ॥ ಸಿದ್ಧಪ್ಪನಿಗೆ ಕೊಟ್ಟು ತಾ॥ ೨೬-೪-೪೮ ನೇ ದಿವಸ ನಿಶ್ಚಯಮಾಡಿದ ಸಮಯ ದಲ್ಲಿ ಪ್ರಭಾವೋಷಣಕ್ಕೋಸ್ಕರ ವರನಕಡೆಯವರು ಸಮರ್ಪಿಸಿದ 2 ರೂ ಕನ್ಯೆಯಕಡೆಯವರು ಸಮರ್ಪಿಸಿದ 1 ರೂ ಮತ್ತು ಸದರಿ ಗ್ರಾಮದಲ್ಲಿರುವ ಮಃ॥ರಾ॥ ವೈಲಾರಪ್ಪ ಚಿಕ್ಕಾಣ್ಣನವರ, ಇವರ ಪುತ್ರಿ ಚಿ॥ ಸೌ॥ ಪಾರ್ವತವ್ವನವ್ವನ ಮಃ॥ ರಾ॥ ಶಿವಪ್ಪ ಇಟಿಗಿ ಸಾ॥ ಮುಂಡರಗಿ ಇವರ ಪುತ್ರ ಚಿ॥ ಸಿದ್ಧಲಿಂಗಪ್ಪನಿಗೆ ಕೊಟ್ಟು ತಾ॥ ೨೮-೪-೪೮ ನೆಯ ದಿವಸ ನಿಶ್ಚಯಮಾಡಿದ ಸಮಯದಲ್ಲಿ ವರನಕಡೆಯವರು ಸಮರ್ಪಿಸಿದ 2 ರೂ ಕನ್ಯೆಯಕಡೆಯವರು ಸಮರ್ಪಿಸಿದ 1 ರೂ ಒಟ್ಟು 6 ರೂ ಗಳು ಗದಗ ಬೆಟಗೇರಿ ಗ್ರಾನ.ದಲ್ಲಿರುವ ಮಃ॥ ರಾ॥ ಹಿರೇಮನೆ ಪಾಟೀಲ್ ನೀಲಪ್ಪಗೌಡರಪ್ಪಾಗಾ ಕಲಬುರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೆಯ್ತಲೆಂದು ಹಾರೈಸುತ್ತೇನೆ.

ಸಿದ್ಧಾಂತಶಿಖಾಮಣಿ

ವೀರಶೈವಮತವನ್ನು ಶ್ರೀಮಾನ್ ಸಿ. ಪ್ರತಿಯೊಬ್ಬ ನಿಗೂ ಸಿದ್ಧಾಂತಿಯಾಗುವಷ್ಟು ಸ್ಪಷ್ಟವಾಗಿ ತಿಳಿಸುವ ಈ ಮಹಾಗ್ರಂಥವನ್ನು ಶ್ರೀಮದ್ವೀರಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಪಂಚಾಚಾರ್ಯರು ಜಗದ್ವಿಖ್ಯಾತನಾದ ಅಗ್ರೇಸರ-ಪಂಡಿತ' ವೀರಶೈವಸಿದ್ಧಾಂತವನ್ನು ಲಿಂಗಧಾರಣಾದಿ ವಿಷಯದ ಪ್ರತಿಪಾದಿಸಿದ್ದಾರೆ. ವೀರಶೈವಮತವನ್ನು ಸಂಸ್ಕೃತ ಗ್ರಂಥಗಳಲ್ಲಿ ಇದೇ ಮೊದಲು ಸ್ವತಂತ್ರವಾಗಿ ಪ್ರತಿಪಾದಿಸಿರುವುದು ಮೇಲೆಯೂ ಈ ಗ್ರಂಥವನ್ನು ಈಗ್ಗೆ ಸುಮಾರು ೨೫ವರ್ಷಗಳ ಹಿಂದೆಯೇ ಪ್ರಕಟಿಸಿದ್ದ **ಶ್ರೀಶಿವಯೋಗಿ ಶಿವಾಚಾರ್ಯರೆಂಬ** ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವೆಂತಿರುವುದರಿಂದ, ಇಷ್ಟಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದೂ ವ್ಯಾಖ್ಯಾನವಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವನ್ನು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ಪೂರೈಸುವುದಕ್ಕಾಗಿ ಎಂದಿತ **ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಮಂತಿತ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ಸ್ಪಷ್ಟವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೭೬೨ ಪುಟಗಳಿಂದ ಕೂಡಿದ್ದು, ಸರ್ಕಾರಿಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂಪೂರ್ಣವು ಸಾರಾಂಶ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಚಿತ್ರಗಳ ಹೊರಿಸಲ್ಪಟ್ಟಿರುವದಾದ ಗ್ರಂಥದ ಸೌಂದರ್ಯವನ್ನು ವರ್ಣಿಸಲಿಕ್ಕಾಗದು. ವೈದಿಕಶೈವತತ್ವಾಭಿಮಾನಿಯಾದ ಪ್ರತಿಯೊಬ್ಬ ಸಜ್ಜನರೂ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. ಬೆಲೆ ೨ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾಗಿರುವುದು)ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧೫ ... ೦—೩—೦

" " " ಚಿಕ್ಕ ಸೈಜು ಬೆಲೆ ... ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ ... ೦—೧—೬

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ .... ೦—೧—೬

ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೬

ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) .. ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ .... ೦—೧—೬

ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೧—೬

ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೫ ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪ .... ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪ .... ೦—೧—೬

ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರವ ಫೋಟೋ .... ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿಹಾಕಿಸುತ್ತಿರುವ ಫೋಟೋ .... ೦—೧—೬

ಬೆಂಗಳೂರು ಕಂಟೊನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೦—೧—೬

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ... ೦—೨—೦

ಸಮರ್ಥವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ	ಶಿವಾದ್ವೈತಪರಿಭಾಷಾ (ಸಂಸ್ಕೃತ)	೪ ಆಣೆ
ಸನ್ಯಾಸಾಶ್ರಮವಿಧಿಪ್ರಕಾಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ವೀರಶೈವಮಹಾತ್ಮರು	೪ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ	ಬಸವಘ್ವಾಂತದಿವಾಕರ (೩ನೆಯ ಆವೃತ್ತಿ)	೪ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಚರಿತ್ರೆ	೧ ಆಣೆ	ಆಗಮಪರಿಜ್ಞಾನ	೪ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೩ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೪ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ	ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೭ನೆಯ ಆವೃತ್ತಿ)	೩ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ	ಶಿವಾಸೂತ್ರಸಿದ್ಧಾಂತದರ್ಪಣ-	೧೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ	ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ.
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ	ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೩ನೆಯ ಆವೃತ್ತಿ)	೧। ರೂ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ	ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧॥ ರೂ.
ಶಿವಶಕ್ತಿವಿಲಾಸ	೪ ಆಣೆ	ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೨ ರೂ.
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೪ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ.
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೪ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಪಂಚಾಚಾರ್ಯಪ್ರಕಾಶ	೪ ಆಣೆ	ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ಪಂಚಾಚಾರ ಭೃಕಾಶಿಕಾ	೪ ಆಣೆ	ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ	**A brief life-sketch of Pandit Sri Kashinatha Shastriji** (*English*)	4 As.
ಲಿಂಗಧಾರಣವಿಧಿ	೪ ಆಣೆ	**The Philosophical Aspect of Virasaivism** (*English*) ...	8 As.
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ	**Speeches by Pandit Shri Kashinatha Shastriji** (*English*)	12 As.
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ	**ಲಿಂಗಧಾರಣಚಂದ್ರಿಕಾ** (ಸಂಸ್ಕೃತ)	೩ ಕ.
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ	**ವೀರಶೈವರತ್ನ** (ಮರಾಠಿ)	೧ ಕ.
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ	**ಸದಾಚಾರಾಗಮೋಪನಿಷತ್** (ವೀರಶೈವಭಾಷ್ಯ-ಸಂಸ್ಕೃತ) ..	೧ ಕ.
ವೈದಿಕವಾಙ್ಮಯರಹಸ್ಯ	೪ ಆಣೆ	**ಸಂಧಿಕಿಶೋರಕಾರಿಕಾ** (ಸಂಸ್ಕೃತ)	೨ ಆ.
ಸನ್ಯಾಸಾಶ್ರಮವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ)	೪ ಆಣೆ		
ವಿಶ್ವಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೪ ಆಣೆ		
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು) ...	೮ ಆಣೆ		

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ , ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಾಯಮಾಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ. ವಿ ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೭ನೇ ಮೇ ೧೯೪೮ [ಸಂಚಿಕೆ ೧

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ॥

ಪ್ರಭಾದೇವಿಯ ಪ್ರಭೆಯು ಸರ್ವತ್ರ ಬೆಳಗಲಿ

ಲೇ॥ ಮಲ್ಲಿಕಾರ್ಜುನಾರಾಧ್ಯ ರಾಣೆಬೆನ್ನೂರು ಮಳೆಮಠ, ಮುದೇನೂರು

ಯಾವನು ಚರಾಚರಾತ್ಮಕವಾದೀ ಜಗತ್ತಿಗೆ ಮೂಲ ಕಾರಣೀಭೂತನಾಗಿಯೂ, ಪ್ರಾಣಿಗಳ ಅಜ್ಞಾನಾಂಧಕಾರ ನಾಶಕನಾಗಿಯೂ ಇರುವನೋ, ಯಾವನು ಸರ್ವಭೂತ ಗಳಲ್ಲಿಯೂ ಅಂತರಾತ್ಮನಾಗಿ ನಿಕಟನಾಗಿದ್ದರೂ ಪ್ರತಿರೂಪ ದಲ್ಲಿಯೂ ಭಿನ್ನಾತ್ಮನಾಗಿ ತೋರುವನೋ, ಯಾವನ ದಿವ್ಯಪ್ರಕಾಶದ ಸಹಸ್ರಾಂಶದಲ್ಲೊಂದಂಶವನ್ನಾದರೂ ರವಿಚಂದ್ರರು ಪ್ರದರ್ಶಿಸಲಾರದ ದಿವಾರಾತ್ರಿಗಳಲ್ಲಿ ದಣಿದು ಧೃತಿಗೆಡುತ್ತಿರುವರೋ, ಯಾವನ ಅವ್ಯಕ್ತ ನಾಮವನ್ನು ನಿಹಂಗಮ ಗಣ್ಯರು, ನವನವೀನ ನಿರ್ಝರಿಣಿಗಳೂ ಮಂಜುಲಧ್ವನಿಯಿಂದ ಕೀರ್ತಿಸುತ್ತಿವೆಯೋ, ಯಾವನ ದಿವ್ಯದರ್ಶನವನ್ನು ಹೊಂದುವುದಕ್ಕಾಗಿ ಮೇಘಗಳು ಆಕಾಶದಲ್ಲಿ ಅಲೆದಲೆದು ಕೊನೆಗದು ಲಭ್ಯವಾಗದಿರಲು ಗದ್ಗದ ಕಂಠದಿಂದ ಧ್ವನಿಗೈಯುತ್ತ ಆಶ್ರುಜಲವನ್ನು ವರ್ಷಿಸುವುವೋ, ಯಾವನ ಚರಣಾರ್ಚನೆಗೆ ಹರಿದ್ವರ್ಣವಸನಗಳಿಂದ ಸಮಾವೃತವಾದ ತರುಲತಾಸಿಕರವು ಫಲಪುಷ್ಪಗಳನ್ನರ್ಪಿಸುತ್ತಿದೆಯೋ ಆ ಮಹಾಪುರುಷನ ಕೃಪಾಕಟಾಕ್ಷದಿಂದ ಈ ನಮ್ಮ ಪ್ರಭಾದೇವಿಗೆ ಇದೀ ಸರ್ವಧಾರಿ ಸಂವತ್ಸರದ ವೈಶಾಖ ಶು॥ ೫ ಗೆ ಇಪ್ಪತ್ತೆರಡನೆಯ ವರ್ಷವು ಪ್ರಾರಂಭವಾಗಿರುವುದು ಪ್ರಭಾದೇವಿಯನ್ನು ಸ್ವಧರ್ಮಾನುರಾಗಿಗಳಾದ ಗ್ರಾಹಕರು ನಿಜಮಂದಿರಗಳಲ್ಲಿ ಸಾದರದಿಂದ ಸತ್ಕರಿಸುತ್ತಿರುವರು. ಸುಜ್ಞರಾದ ಲೇಖಕರು ಪ್ರಭೆಯನ್ನು ವಿವಿಧ ಪ್ರಬಂಧರೂಪವಾದ ಗದ್ಯಪದ್ಯನಗಳಿಂದಲೂ, ಪದ್ಯಭೂಷಣಗಳಿಂದಲೂ ಪ್ರಸಾದಿಸಿ ಸಾಹಿತ್ಯ ಸಮಾಜಕ್ಕೂ ಪ್ರಭಾಮಾತೆಗೂ ಸಾಮರಸ್ಯವು ಸಂಜನಿಸುವಂತೆ ಆಚರಿಸುತ್ತಿರುವರು

ಸಾರಾಸಾರ ವಿಚಾರಶೀಲರೇ! ಈರ್ಷ್ಯಾಸೂಯೆ ಗಳಿಂದ ಪೂರ್ಣವಾದ ಜಗತ್ತಿನ ಈಗಿನ ಪರಿಸ್ಥಿತಿಯಲ್ಲಿ ಪ್ರಭೆಯು ಶುಕ್ಲಪಕ್ಷದ ಚಂದ್ರನಂತೆ ದಿನೇ ದಿನೇ ವೃದ್ಧಿಯನ್ನೈಯುತ್ತ ಬಂದಿರುವುದಕ್ಕೆ ಜಗದಾಚಾರ್ಯರ ಕೃಪಾಶೀರ್ವಾದವು, ಪ್ರಭಾಜನ್ಮದಾತರೂ, ಧರ್ಮಾವತಾರಿಗಳೂ, ಗುರುಕುಲತಿಲಕರೂ, ವಿದ್ವನ್ಮಣಿಗಳೂ ಆದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರೀಜಿಯವರ ಅತ್ಯಶಕ್ತಿಯ ತೇಜಸ್ಸಿನ ಪ್ರಭಾವವೂ ಮತ್ತು ಲೇಖಕರ ಗ್ರಾಹಕರ ಅಭಿಮಾನೋದಾರ್ಯಗಳೂ ಕಾರಣಗಳೆಂದು ಹೇಳದರೆ ಅತಿಶಯೋಕ್ತಿಯೆನಿಸದು. ಅಸ್ತು !

ಭರತಖಂಡದಲ್ಲಿರುವ ಸನಾತನ ಮತಗಳಲ್ಲಿ ಒಂದಾವ ನಮ್ಮಾವೀರಶೈವಮತವು ಪರಮ ಶ್ರೇಷ್ಠವಾಗಿರುವುದಲ್ಲದೆ ಮೋಕ್ಷದಾಯಕವೂ ಆಗಿರುವುದು. ಇಂತಹ ಮತಕ್ಕೆ ಕಲಿಯೋಷದಿಂದ ಉಚ್ಚ್ರಯನೀಚ ತಾರತಮ್ಯ ವಿಲ್ಲದ ಸೋಂಕು ವಜ್ರಲೇಪದಂತೆ ಬಲವಾಗಿ ಅಂಟಿ ಕೊಂಡು ಬಂದಿತ್ತು ಜನಗಳಾದರೂ ನಿಜತತ್ವವನ್ನು ಮರೆತು ಗಾಢಾಂಧಕಾರದಲ್ಲಿ ಮುಳುಗಿ ಗಾಢನಿದ್ರೆಯ ಲ್ಲಿದ್ದರು. ಜನಸಂಖ್ಯೆಯಲ್ಲಿ ಈ ವಿಧವಾದ ಜನರೇ ಬಹಳವಾಗಿದ್ದರು ನಿಜತತ್ವವನ್ನರಿತವರು ಒಬ್ಬಿಬ್ಬರಿ ದ್ದರೂ ಅದನ್ನು ಬೋಧಿಸಲು ಅವರ ನಾಲಗೆಯು ಕುಂಠಿತವಾಗಿತ್ತು. ಧರ್ಮದ ಗ್ಲಾನಿಯೂ ಅಧರ್ಮದ ಏಳಿಗೆಯೂ ಆದಕಾಲದಲ್ಲಿ ಮಹಾಪುರುಷರ ಅವತಾರವು ಈಶ್ವರನಿಯಮವಾಗಿರುವಂತೆ ಇಂತಹ ವಿಷಮ ಕಾಲ ದಲ್ಲಿ ಶ್ರೀಕಾಶೀನಾಥಪಂಡಿತರು ಅವತರಿಸಿ ಪ್ರಭಾದೇವಿಯ ಮೂಲಕ ಜಗತ್ತಿಗೆ ನಿಜತತ್ವಾಮೃತಪಾನವಂ ಮಾಡಿಸಿ ಎಚ್ಚರಗೊಳಿಸಿದರು ಪ್ರಭಾದೇವಿಯು ಈ ಮತದ ಪ್ರಾಚೀನತೆಯನ್ನೂ ಶ್ರೇಷ್ಠತೆಯನ್ನೂ, ಮತಸ್ಥಾಪನಾಚಾರ್ಯರ ಅಗಾಧ ಮಹಿಮೆಗಳನ್ನೂ ಬೋಧಿಸುತ್ತ ಒಂದರ್ದರಿಂದ ಸೂರ್ಯೋದಯದಿಂದ ಅಂಧಕಾರವು ಮರೆಯಾಗುವಂತೆ ಮನೋಗರ್ಗವು ಪಿಳ್ಳನೆಯ್ದಲನೆ ಮರೆ ಯಾಗುತ್ತ ಬಂದಿತು ಈ ರೀತಿಯಲ್ಲಿ ವೀರಶೈವ ಮತಕ್ಕೆ ಮಹೋಪಕಾರವನ್ನು ಮಾಡಿರುವ ಮತ್ತು ನಾಡುತ್ತಿರುವ ಪ್ರಭಾಮಾತೆಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಎಷ್ಟು ಕೃತಜ್ಞತೆಯನ್ನು ತೋರಿಸಿದರೂ ತೀರದಾಗಿದೆ ಇಲ್ಲದೆ ಪ್ರತಿವಾರವೂ ನಮ್ಮ ಮನೆಗೆ ಬಂದು ಬೋಧಿಸುತ್ತಿರುವ ಮತ್ತು ಆಹೋರಾತ್ರಿ ಈ ಮತದ ಏಳಿಗೆಗಾಗಿ ಅವಿಶ್ರಾಂತವಾಗಿ ಶ್ರಮಪಡುತ್ತಿರುವ ಬೋಧಕ ಗುರುರೂಪವಾದ ಈ ಪತ್ರಿಕೆಗೆ ಚಂದಾದಾರ ರಾಗುವುದೂ ಶುಭಾಶುಭ ಕಾರ್ಯಗಳಲ್ಲಿ ಅದರ ಪೋಷಣಕ್ಕಾಗಿ ಧನಸಹಾಯ ಮಾಡುವುದೂ ಪ್ರತಿ ಯೊಬ್ಬ ವೀರಶೈವನ ಆದ್ಯ ಕರ್ತವ್ಯವಾಗಿರುವುದು.

ಜಯವಾಗಲಿ, ಜಯವಾಗಲಿ, ಜಗದಾಚಾರ್ಯರ ಪವಿತ್ರ ನಾಮದಿಂದ ಮೆರೆವ ಪ್ರಭೆಗೆ ಜಯವಾಗಲಿ ; ಜಗದಾಚಾರ್ಯರ ಸದ್ಭಕ್ತರ್ಗೆ ಜಯವಾಗಲಿ, ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಜಿಯವರ ಆಯುರಾರೋಗ್ಯ ವೃದ್ಧಿ ಯಾಗಲಿ, ಧರ್ಮದ್ರೋಹಾದಿಗಳು ಪಲಾಯನವಾಗಲಿ; ವರ್ಣಾಶ್ರಮ ಧರ್ಮಗಳು ಸರ್ವತ್ರ ಪ್ರಕಾಶಿಸಲಿ, ಗುರುವರ್ಗದವರು ಸ್ವಕರ್ತವ್ಯನಿಷ್ಠರಾಗಲಿ; ಮಳೆಗಳು ಸುರಿಯಲಿ, ಭೂಮಿಗಳು ಬೆಳೆಯಲಿ, ಲೋಕದ ಬಡ ತನವು ಬಯಲಾಗಲಿ, ಸಿರಿತನವು ಏರಿದಾಗಲಿ; ಸರ್ವತ್ರ ಸುಖಶಾಂತಿಗಳು ನೆಲಸಲಿ, ಜಗದಾಚಾರ್ಯರ ಜಯ ಭೇರಿಯ ನಿನಾದವು ಸರ್ವತ್ರ ಮೊಳಗಲಿ.

ಲೋಕಾಃ ಸಮಸ್ತಾಸ್ತುಖಿನೋ ಭವಂತು

ಪಂಚಾಚಾರ್ಯಪ್ರಭೆಗೆ ಜಯವಾಗಲಿ

ಅಮಿತಬಲಸಂವನ್ನ ಮೂರ್ತಿಯೆ ।
ಸುಮತಿದಾಯಕ ಜ್ಞಾನರೂಪನೆ ।
ದಮಿತದಾನವ ವಿಶ್ವಪೂಜಿತ ವಿಜಯವರದಾತ ॥
ವಿಮಲ ಸುರವರಗೀತ ಶಿವಸುತ ।
ನಮಿಪೆ ಲಂಬೋದರ ಗಣಾಸ್ಯ ।
ಪ್ರಮಥತತಿಪತಿ ವಿಘ್ನನಾಶಕ ಸೌಖ್ಯದಾಯಕನೇ ॥೧॥

ಪಂಚಮುಖ ಸಂಜಾತರಾಗಿಪ ।
ಪಂಚಜಗದಾಚಾರ್ಯಪ್ರಭೆಯೇ ।
ಪಂಚತಾಜ್ಞಾನಾಂಧಕಾರವ ಕಳೆವ ದಿನಮಣಿಯೇ ॥
ಪಂಚವದನನ ದಿವ್ಯತತ್ತ್ವವ ।
ವಂಚನಿಲ್ಲದೆ ಬೋಧಿಸುತ ಪ್ರ ।
ಪಂಚವೆಲ್ಲವ ಬೆಳಗುತಿರುವೈ ದೇವಿ ದೀಪ್ತಿಮಯಿ ॥೨॥

ಪ್ರಭವಸಂವತ್ಸರದೊಳುದಿಸುತ ।
ವಿಭವದಿಂ ದಿಶೆದಿಶೆಯೊಳೆಲ್ಲ ।
ಪ್ರಭೆಯ ಪಸರಿಸಿ ತಮವ ಚದುರಿಸಿ ಬಾಳ್ವೆ ಬೆಳಗಿಸಿದೌ ॥
ಪ್ರಬಲವನುಪಮವೀರಶೈವ ।
ಪ್ರಭೆಯ ಭುವಿಯೊಳು ಬಿತ್ತಿ ಜನತೆಯು ।
ವಿಬುಧಲೋಕಾಧಿತಪಾಪ್ತವಿಷಯವ ಪರಿಸಿ ತಣಿಯುವುದು ॥

ಸಂದಿತಿಪ್ಪತ್ತೊಂದು ಸರುಷವು ।
ಇಂದ್ರಭೂಷನ ಕರುಣೆಯಿಂದಲಿ ।
ಬಂದುದೀಗ ಸುಭದ್ರವಿಪ್ಪತ್ತೆರಡನೆಯ ವರುಷ ॥
ಹಿಂದುದೇಶದ ಜಾತಿಕಟ್ಟಳೆ ।
ಯೆಂದಿಗೆಂದಿಗು ದೃಢತೆ ಗೊಳಿಸುತ ।
ಸಂಧಿಸುತಿಹ ಸಾಂಕರ್ಯ ತೊಡೆಯುತ ಜಗವನುದ್ಧರಿಸೌ ॥

ಹಿಂದುಮಾತೆಯ ದೇಹಖಂಡನ ।
ದೊಂದಿಗೆಯೆ ಬಂಧನವಿಮೋಚನ ।
ತಂದಿಹುದು ತಲೆಯೆದೆಯ ಬೇನೆಯ ರಾಷ್ಟ್ರಕೂಟಕ್ಕೆ ॥
ಹಿಂದುಬಾಂಧವರನ್ನು ರಕ್ಷಿಸೆ ।
ಹಿಂದುತನ ಜವದೊಳುಳಿಸಲು ಸಂ ।
ಬಂಧಲೇಖನಿಗಳಿಂದ ಹಿಂದುತ್ವವನು ಪ್ರಜ್ವಲಿಸು ॥೫॥

ವೀರಶೈವರ ಮೇಲ್ಮೈಗಾಗಿಯೆ ।
ಭಾರತೀಯರ ಗೆಲ್ಮೈಗಾಗಿಯೆ ।
ಶಾರದೀಯರ ಒಲ್ಮೈಗಾಗಿಯೆ ಸಾರಿ ಬರುತಿರುವೆ ॥
ವೀರವಾಡೊಳು ಸಾರಕನ್ನಡ ।
ವಾರಪತ್ರಿಕೆಯಾಗಿ ಹೊರಡುವೆ ।
ಸೂರ್ಯಸುಪ್ರಭೆಗಿಂತ ನೂರ್ಮಡಿಯಾಗಿ ಬೆಳಗೌ ನೀ ॥

ರವಿಯು ಕಳೆವನು ಬಾಹ್ಯತಮವನು ।
ರವಿಯು ತಿಳಿಯನು ಅಂತರಾತ್ಮವ ।
ಕವಿದ ಮೋಹಮಹಾಂಧಕಾರವ ಕಳೆಯಲಸಮರ್ಥ ॥
ಭವವಿಮೋಚನತತ್ತ್ವ ಬೋಧಿಸಿ ।
ಕವಿದ ಅಂತಸ್ತಮವ ನೀಗುವ ।
ಜವದಿ ಪರಿಪುದು ಪರಮಪಂಚಾಚಾರ್ಯ ಸುಪ್ರಭೆಯ ॥

ಕುರುಡರವರ್ಗೆ ಪ್ರಭೆಯ ನೋಡದ ।
ಮರುಳರವರ್ಗೆ ಪ್ರಭೆಯನೋದದ ।
ಅರಿಯದವರ್ಗೆ ಪ್ರಭೆಯ ಸುಧೆಯನು ಈಂಟಿದಿರುವವರು॥
ಸರಳಬರಹದಿ ತತ್ತ್ವವರುಹುವ ।
ಪರಮಗುರುವಿನ ಬೋಧೆ ಬೀರುವ ।
ಭರದಿ ಸಲಿಪುದು ನಿತ್ಯ ಪಂಚಾಚಾರ್ಯಸುಪ್ರಭೆಯ॥೮॥

[೩ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ವೈಶಾಖ ಶು|| ಪಂಚಮಿಗೆ ೨೧ ವರ್ಷಗಳು ತುಂಬಿ ೨೨ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ ವಿ. ಪಿ. ವಾಪಾಸುಬರುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೬ ಆಣೆ ಹೆಚ್ಚಿಗ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೬ ರೂಪಾಯಿಗಳನ್ನು ಮನಿಯಾರ್ಡರ್ ಮಾಡಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲಿ ಒಟ್ಟು ಕೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತ ಪ್ರಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ನೂತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕ

ನ್ಯಾ —

ಪಂಚಾಚಾರ್ಯಪ್ರಭಾ

೧೯ನೇ ನೆಯ ಮೇ ತಾ|| ೧೭ ನೆಯ ಸೋಮವಾರ

೨೨ ನೆಯ ವರ್ಷ ಪ್ರಾರಂಭ

ಸಂಚಾಚಾರ್ಯಸ್ವಪ್ರಾಪತ್ರಿಕೆಗೆ ಈ ಸರ್ವದಾರಿ ಸಂವತ್ಸರದ ವೈಶಾಖ ಪುಷ್ಯ ಸಂಪೂರ್ಣ ಪಂಚಮಿ ಗಳು ತುಂಬಿ ೨೨ನೆಯ ವರ್ಷವು ಪ್ರಾರಂಭವಾಗಿರುವುದು. ಪ್ರಪಾತಪ್ರತಿಯು ೨೧ ವರ್ಷಗಳ ವರೆಗೆ ಯಾವ ವ್ಯತ್ಯಯವೂ ಇಲ್ಲದಂತೆ ತಾನು ಕೈಕೊಂಡ ಕಾರ್ಯವನ್ನು ಆತ್ಯಾನಂದದಿಂದ ನೆರವೇರಿಸುತ್ತ ನಡೆದಿರುವುದು ಬ್ಲಾಸ್ತೋಷಾಸ್ಪದವಾಗಿದೆ ಈ ಪತ್ರಿಕೆಯು ತಾನು ಜನ್ಮನೆತ್ತಿದಂದಿನಿಂದ ಇಂದಿನವರೆಗೆ ವೀರಶೈವ ಸಮಾಜವಲ್ಲಿ ವಿಶಕ್ಷಣವಾದ ಜಾಗೃತಿಯನ್ನುಂಟುಮಾಡಿದ. ವೀರಶೈವರ ತೆನ್ನಾನಕರ ಸ್ಥೂರೂಪವೇ ಜನರಲ್ಲಿಗೆ ಗೋಚರನಿದ್ದಿಲ್ಲ ನುಕಾಚಾರ್ಯರ ನಾಮವೇ ಲೋಪವಾಗುವ ಸಮಯವೊದಗಿತ್ತು ಇಂದ ಸಮಯದಲ್ಲಿ ಈ ಪತ್ರಿಕೆಯು ಆನತರಿಸಿ ಋತಾಚಾರ್ಯರ ಸ್ವರೂಪನನ್ನೂ ಆ ಮಹಷೀಯರ ಮಹಿಮಾತಿಶಯಗಳನ್ನೂ ಇಡೀ ಜಗತ್ತಿನಲ್ಲಿ ಪ್ರಕಾಶವಂತೆ ನೂಡಿತು. ಅಲ್ಪ ಸುಸಾರಾಸ್ಯ ನೊದಲಾದ ನೇಶಗಳಲ್ಲಿಯೂ ತನ್ನ ಪ್ರಬೆಯನ್ನು ಪಸರಿಸಿ ಅಲ್ಲಿಯ ವೀರಶೈವ ಜನಾಂಗವನ್ನುದ್ಧರಿಸುವಂತೆ ಮಾಡಿತು ಪ್ರತಿ ವಾರದಲ್ಲಿಯೂ ತಪ್ಪದೆ ಪ್ರಸಿದ್ಧವಾಗತಕ್ಕ ಧರ್ಮಸಂಬಧವಾದ ಲೇಖ ಗಳಿಂದ ವೀರಶೈವ ಸಿದ್ಧಾಂತಜ್ಞಾನವನ್ನು ಸರ್ವರಲ್ಲಿಯೂ ಅಂಕುರಿಸುವಂತೆ ಮಾಡಿತು. ತನ್ನಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಲೇಖಗಳಿಂದ ಪರಮತೀಯರನ್ನೂ ಸಹ ಸಂತೋಷಸಾಗರದಲ್ಲಿ ಮುಳುಗಿಸಿತು. ವೀರಶೈವರ ಉದ್ಧಾರಕ್ಕಾಗಿ ಜನ್ಮ ನೆತ್ತಿರುವ ಈ ಪತ್ರಿಕೆಯ ವಿಷಯದಲ್ಲಿ ಅನೇಕಜನ ಮತಾಭಿಮಾನಿಗಳು ಇದರ ಪೂರೋಭಿವೃದ್ಧಿಗಾಗಿ ವಿಶೇಷ ಪ್ರಯತ್ನವನ್ನು ಮಾಡುತ್ತಿರುವುದು ಆತ್ಯಾನಂದಕರವಾದ ವಿಷಯವಾಗಿದೆ. ನಾನಾವಿಧವಾದ ತೊಂದರೆಗಳ ಮೂಲಕ ಈ ಕಾಲದಲ್ಲಿ ಪತ್ರಿಕೆಗಳನ್ನು ಹೊರಡಿಸುವದು ಬಹುಕಷ್ಟಕರವಾಗಿದೆ. ಇಂತಹ ಕಠಿನ ಸಮಯದಲ್ಲಿಯೂ ಕೂಡ ಈ ಪತ್ರಿಕೆಯು ನಿರ್ವಿಘ್ನವಾಗಿ ಕಾರ್ಯವನ್ನು ಮಾಡುತ್ತಿರುವುದಕ್ಕೆ ಶ್ರೀ ಜಗದ್ಗುರು ರೇಣುಕಾದಿ ಭಗವತ್ಪಾದರ ಅನುಗ್ರಹವೇ ಮೂಲಕಾರಣವೆಂದು ಹೇಳಬಹುದಾಗಿದೆ

ಭರತಖಂಡದಲ್ಲಿರುವ ಗುರುವರ್ಗಾಭಿಮಾನಿ ಗಳು ಈ ಪತ್ರಿಕೆಯು ಪೋಷಣಕ್ಕಾಗಿ ಲಿಂಗದಾರಣ ದೀಕ್ಷಾ ವಿನಾಹಾವಿ ನಡುತ್ತಿರುವ ಕಾರ್ಯಗಳಲ್ಲಿ ಸ್ತ್ರೀಕಾರ ದ್ರವ್ಯಸಹಾಯವನ್ನು ನಾಡುವ ಕಾರ್ಯ ನನ್ನು ಕೈಕೊಳ್ಳಬೇಕಾಗಿರುತ್ತೆಂದೆ ನಮ್ಮ ಚಾರ್ಯರ ಸ್ವಭಾವವನ್ನು ಸ್ವೀಕರಿಸಲು ಕಂಕಣ ಬದ್ಧವಾಗಿ ಕಾರ್ಯನಾಡುತ್ತಿರುವ ಈ ಪತ್ರಿಕೆಯು ಅಭಿವೃದ್ಧಿಯ ಬಗೆ ನಮಸ್ತ ಗುರುವೆತ್ತರೂ ಸಹಾಯಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ ಜಗದಾಚಾರ್ಯರ ಆರ್ಶೀರ್ವಾದಬಲದಿಂದ ಪ್ರಪಾತಪ್ರತಿಕೆಯು ಬಹು ಕಾಲ ಬಾಳಿ ತನ್ನ ಪ್ರಬಮಿಂದ ಜನರಲ್ಲಿರುವ ಅಜ್ಞಾನಾಂಧಕಾರವನ್ನು ಹೋಗಲಾಡಿಸಿ, ಜಗತ್ತನ್ನು ಪ್ರಬಾಸುರಮವನ್ನಾಗಿ ಮಾಡಲಂತಾಗಲೆಂದು ಆ ಪೂಜ್ಯಚಾರನ್ನ ಪ್ರಾರ್ಥಿಸುತ್ತೇವ

ವರ್ತಮಾನ ಸಂಗ್ರಹ

ಮೈಸೂರಿನ ಒಗ್ಗೆ ಭಾರತದ ರಕ್ಷಣಾ ಮಂತ್ರಿ ಸರದಾರ್ ಬಲದೇವಸಿಂಗರ ಸೌಟ್ಟಗೆಂಬ ನೂತು

ಮೈಸೂರು ಸಂಸ್ಥಾನಕ್ಕೆ ಆಗಮಿಸಿದ ಸಂದರ್ಭವಾದುದು ಇಂದಿನ ಈ ಸಭೆಯ ಸನ್ನ ಮನಸ್ಸನ್ನು ಒಬ್ಬಳಾಗಿ ಆನಂದಸೋಗತ ಕಂಡ ಕೆಲವು ವರ್ಷಗಳಿಂದ ಮೈಸೂರು ಜೀವನ್ಮೆ ಒರಬೀಮು ಅಭಿಪ್ರಾಯವುಳ್ಳವ ನಾಗಿದ್ದನ ಆದರ ಈ ಸಮಯಕಾಶ ನನಗೆ ದೊರೆತಿದ ಎ ಬುನಾಗಿ ಭಾರತದ ರಕ್ಷಣಾ ಸಚಿವರಾದ ಸರ್ದಾರ್ ಬಲದೇವಸಿ ಗರು ತಾ ೧೫ ೫ ಳಲ ನೆಯ ದಿನದ ರಾಜಪ್ರಾಸಾದ ಪುರಸಭೆಯ ಸ್ವಾಗತ ಸಮಾರಂಭದಲ್ಲಿ ಮೈಸೂರುನಗರದ ಸೌಂದರ್ಯವನ್ನು ಕೊಂಡಾಡಿದರು

ಪ್ರಾರಂಭದಲ್ಲಿ ಶ್ರೀ ಸೀತಾರಾಮಯ್ಯನವರು ಸ್ವಾಗತ ಭಾಷಣ ಮಾಡಿದರು ಮೈಸೂರು ನಗರದಲ್ಲಿ ಆಗಬೇಕಾಗಿರುವ ಅನೇಕ ಕಾರ್ಯಗಳನ್ನೂ ಪುರಸಭೆಯ ಪ್ರಯತ್ನ ಗಳನ್ನೂ ವಿವರಿಸಿದರು

ಅನಂತರ ಸಚಿವರಾದ ಶ್ರೀ ಟಿ ಮರಿಯಪ್ಪನವರು ನೂತನವಾಗಿ ಸರದಾರ್ ಬಲದೇವಸಿಂಗರ ವ ಕ್ತಿತ್ವ, ಆಸಾಧಾರಣ ತಿಸ್ಸ, ಶಕ್ತಿಸಾಮರ್ಥ್ಯಗಳನ್ನು ಕೊಂಡಾಡಿ, ಭಾರತದ ವಿಪತ್ತಿನ ಸಮಯದಲ್ಲಿ ಅವರ ಪಾಪ್ರವು ಸ್ತೋತ್ರಾರ್ಹವಾದುದೆಂದೂ, ೫೦ ಲಕ್ಷ ಜನರನ್ನು ಒಂದೆಡೆಯಿಂದ ಮತ್ತೊಂದು ಕಡೆಗೆ ಸಾಗಿಸಿದ ಧೀರ ರೆಂದೂ ಸಿಂಗರನ್ನು ಕೊಂಡಾಡಿದರು

ಸರದಾರ್ ಬಲದೇವಸಿಂಗರ ಭಾಷಣ

ಅನಂತರ ಸರದಾರ್ ಬಲದೇವಸಿಂಗರು ಈ ರೀತಿ ಭಾಷಣ ಮಾಡಿದರು

"ಈ ಸುಂದರ ನಗರಕ್ಕೆ ಇದೇ ನನ್ನ ಪ್ರಥಮ ವರ್ಷನ! ಸೌಂದರ್ಯದ ಜಾತಾವರಣದಿಂದಲೂ ನಿಮ್ಮ ಸ್ವಾಗತವಿಂದಲೂ ನನ್ನ ಮನಸ್ಸು ಸಂತೋಷಸಲ್ಲಿ ಮುಳುಗಿಹೋಗಿದೆ ಕಳೆದ ೫-೬ ವರ್ಷಗಳಿಂದ ಇಲ್ಲಿಗೆ ಆಗಮಿಸಬೇಕೆಂಬ ಆಸೆಯಿಂದ ಕೂಡಿದ್ದೆನು. ಆದರೆ ದುರದೃಷ್ಟವಶಾತ್ ಅವಕಾಶವೇ ಸಿಗಲಿಲ್ಲ. ನಿಮ್ಮ ಮಾಜಿ ದಿವಾನರಾದ ಸರ್ ಮಿರ್ಜಾರವರಿಂದ ಮೈಸೂರಿನ ಬಗ್ಗೆ ಬೇಕಾದಷ್ಟು ಕೇಳಿದ್ದೆನು.

ನಾನು ಯಾವ ದಯಾದಾಕ್ಷಿಣ್ಯಗಳಿಗೂ ಒಳಗಾಗದೆ ಒಂದು ಮಾತು ಹೇಳಬಲ್ಲೆ. ಅದೇನೆಂದರೆ ಮೈಸೂರಿನ ಆಡಳಿತ ಮತ್ತು ಸರ್ಕಾರದ ನಡವಳಿಕೆಗಳು ಭಾರತದ ಯಾವ ಪ್ರದೇಶಕ್ಕಿಂತಲೂ ಕಡಿಮೆಯಾಗಿಲ್ಲ

ನಿಮ್ಮ ನಗರದ ಒಗ್ಗೆ ತನೇಕರು ಮೆಚ್ಚಿಗೆಯ ನುಡಿಗಳನ್ನಾಡಿದ್ದಾರೆ ನಾನೂ ಅದರಲ್ಲಿ ಭಾಗಿಯಾಗಿ ಬಯಸುತ್ತೇನ

ನಾನು ಅಧಿಕಾರ ಸ್ವೀಕರಿಸಿದ ಮೇಲೆ ರಚ್ಚಾತ್ಮಳ ವಾದ ೦ ಾವ ಕೆಲಸವನ್ನೂ ಮಾಡಲು ಸಾಧ್ಯವಾಗಲಿಲ್ಲ ವೆಂದು ವಿಷಾದದಿಂದ ಹೇಳಬೇಕಾಗಿದೆ ದುರದೃಷ್ಟ ದಿಂದ ನಮ್ಮ ಕಾಲವೆಲ್ಲಾ ಕೋಮುವಾರು ಗಲಭೆಯ ಶಾಂತಿಯಲ್ಲಿ ಕಳೆಯಿತು ಅದು ನಿಂತ ಮೇಲೆ ಹೊಸ ತೊಡಕುಗಳು ಜನ್ಮತಾಳಿದುವು

ಕಾಶ್ಮೀರದ ಪ್ರಶ್ನೆ

ಕಾಶ್ಮೀರದ ಪ್ರಶ್ನೆಯು ಮುಖ್ಯವಾದುದು ಅಲ್ಲಿಯ ಪರಿಸ್ಥಿತಿ ಬಹಳ ಕಷ್ಟವಾಗಿದೆ ನಮ್ಮ ಸೈನ್ಯಗಳು ೧೩ ಸಪ್ತಸ್ತ ಅಡಿ ಎತ್ತರದ ಪರ್ವತಗಳ ಮೇಲೆ ಕಾರ್ಯಾ ಚರಣೆ ನಡೆಸುತ್ತಿವೆ ಭಾರತ ಮತ್ತು ಪಾಕಿಸ್ತಾನಗಳು ತಿರುಗಿಬೀಳದಂತಹ ಶಾರ್ಮಾನವನ್ನು ಭದ್ರತಾ ಸಮಿತಿ ಮಾಡಿದ ನಮ್ಮ ಕೈಲಾದ ಮಟ್ಟಿಗೆ ಸಹಾಯ ನೀಡುವ ದಾಗಿ ನಾವು ಕಾಶ್ಮೀರಿಗಳಿಗ ಅಭಯವಿತ್ತಿದ್ದೇವೆ ಅದನ್ನು ಉಳಿಸಿಕೊಂಡುಬರಲು ಒಬ್ಬ ಪಾಕಿಸ್ತಾನವೂ ಅಲ್ಲಿರದಂತೆ ಮಾಡುವವರೆಗೆ ನಾವು ವಿಶ್ರಾಂತಿ ಪಡೆಯುವು ದಿಲ್ಲವೆಂದು ಹೇಳಲಿಯಸುತ್ತೇನೆ ಮುಂದಿನ ಎರಡು ತಿಂಗಳಲ್ಲಿ ಈ ಕಾರ್ಯ ಸಾಧ್ಯವಾಗುವೆಂದು ನಂಬ ಬಹುದಾಗಿದೆ

ಭಾರತದ ಮತ್ತು ಸಂಸ್ಥಾನಗಳ ಜನ ಒಂದಾಗಬೇಕು

ಹಿಂದೆ ಅಧಿಕಾರದಲ್ಲಿದ್ದ ವಿದೇಶಿ ಸರ್ಕಾರವು ಸಂಸ್ಥಾನ ಗಳಿಗೂ ಉಳಿದ ಭಾರತಕ್ಕೂ ಅಂತರ ಹೆಚ್ಚಿಸುತ್ತಿತ್ತು ಆದರೆ ಈಗ ಪರಿಸ್ಥಿತಿ ಬದಲಾವನೆಯಾಗಿದೆ

ಭಾರತದ ಮತ್ತು ಸಂಸ್ಥಾನದ ಜನಗಳು ಒಂದಾಗದೆ ಹೊರತು ಭಾರತವು ಬಲಯುತವಾಗಲಾರದೆಮ. ಭಾರತದ ಇತರ ಭಾಗಗಳಲ್ಲಿರುವಂತೆಯೇ ಸಂಸ್ಥಾನಗಳಲ್ಲೂ ಸ್ಥಿತಿಗತಿಗಳು ಉಂಟಾಗಬೇಕೆಂಬುದು ಕೇಂದ್ರ ಸರ್ಕಾರದ ಆಶಯ

ಸಂಸ್ಥಾನಗಳು ಯೂನಿಯನ್ನಿಗೆ ಸೇರುವಂತೆ ಒತ್ತಾಯವೇ ಇಲ್ಲ ಆದರೆ ಕಾಲಧರ್ಮವನ್ನರಿತು ಯೂನಿಯನ್ನಿಗೆ ಸೇರಿದ ಕ್ಷೇತ್ರಿ ಮೊದಲು ರಾಜರಿಗೆ ಸಲುವುದು ಆಮೇಲೆ ಪ್ರಜೆಗಳಿಗೆ ಈಗ ಅವರೆಲ್ಲ ರಾಷ್ಟ್ರದ ಶಕ್ತಿಯನ್ನು ಹೆಚ್ಚಿಸಬೇಕಾಗಿದೆ

ಹೈದರಾಬಾದಿನ ಬಗ್ಗೆ ದುರುದ್ದೇಶವಿಲ್ಲ

ಹೈದರಾಬಾದಿನ ಬಗ್ಗೆ ನಮಗೆ ಯಾವ ದುರುದ್ದೇ ಶವೂ ಇಲ್ಲ ನಾವು ಶಾಂತಿಯಿಂದ ಬಾಳಬೇಕೆಂದೇ ಇಷ್ಟೇನೆ ಎಲ್ಲರೊಡನೆಯೂ ಮುಚ್ಚುಮರೆ ಇಲ್ಲದಂತಿರ ಬೇಕೆಂಬುದೇ ನಮ್ಮ ಆಸೆ

ಯಾವನು ಪಂಚಭೂತಗಳಲ್ಲಪ್ಪೋ, ಇಂದ್ರಿಯವಲ್ಲಪ್ಪೋ, ಇಂದ್ರಿಯ ಸಮುಚ್ಚಯರೂಪವೂ ಅಲ್ಲಪ್ಪೋ, ಯಾವನು ಸುಸ್ಥಿರಕಾಲದಲ್ಲಿಯೂ, ಪ್ರಳಯಕಾಲದಲ್ಲಿಯೂ ಏಕಮಾತ್ರಾವಸ್ಥಿತ್ಯವಸ್ತುವಾಗಿರುವನೋ, ಅವನೇ ಆತ್ಮನು ದೇಹ, ಇಂದ್ರಿಯ, ಮನಸ್ಸು, ಬುದ್ಧಿ ಮೊದಲಾದವುಗಳು ಯಾವನ ಸನ್ನಿಧಾನದ ಪ್ರಭಾವದಿಂದ ಪ್ರೇರಿತಗಳಾಗಿ ಭೃತ್ಯರ ಹಾಗೆ ತಮ್ಮ ತಮ್ಮ ಕಾರ್ಯಗಳಲ್ಲಿ ಪ್ರವೃತ್ತಗಳಾಗಿವೆಯೋ ಅವನೇ ಆತ್ಮನು ಅವರು ಬ್ರಾಹ್ಮಣ ಕ್ಷತ್ರಿಯಾದಿ ಯಾವ ವರ್ಣಾಂತರ್ಗತನೂ ಅಲ್ಲ ಅವನಿಗೆ ವರ್ಣಾಶ್ರಮವಿಹಿತವಾದ ಆಚಾರವೃವ ಹಾರಗಳಾವುವೂ ಇಲ್ಲ ಅವನಿಗೆ ಧಾರಣಕ್ಯಾನಾದಿ ಯಾವ ಯೋಗವೂ ಇಲ್ಲ, ಅವನಿಗೆ ತಂದೆತಾಯಿಗಳಿಲ್ಲ, ಸ್ವರ್ಗಾದಿಲೋಕಗಳಲ್ಲ, ಸುಸ್ಥಿರಕಾಲದಲ್ಲಿ ಎಲ್ಲವೂ ಲಯವಾಗಿ ಹೋದರೂ ಅವನು ಮಾತ್ರ ಅವಿಚ್ಛಿನ್ನನಾಗಿರುವನು ಅವನು ಸಚ್ಚಿದಾನಂದಮಯನು ಸ್ವಪ್ರಕಾಶದಿಂದ ಸಿಪಿಲವಿಶ್ವವನ್ನು ಪ್ರಕಾಶಗೊಳಿಸುತ್ತ, ಸತ್ಯ ಸ್ವರೂಪವಾದ ಧೀಗುಹಿಯ ಅಭ್ಯಂತರ ವಿಹಿಯಾದ ಅನ್ಯಕ್ರಾಶವಲ್ಲಿ ಸೂರ್ಯನ ಹಾಗೆ ಪ್ರಕಾಶಿಸುತ್ತಿರುವನು ಘಟವು ಭಗ್ನವಾದರೆ ತನ್ಮಧ್ಯವರ್ತಿಯಾದ ಆಕಾಶವು ಹೇಗೆ ನಷ್ಟವಾಗುವುದಿಲ್ಲವೋ, ಹಾಗೆಯೇ ಜಡದೇಹಾದಿಗಳು ನಾಶವಾದರೂ ಅವನುಮಾತ್ರ ನಾಶವಾಗದೆ ನಿತ್ಯನಾಗಿರುವನು ಮತ್ತು ಕರಣಗಳೊಳಗೆಲ್ಲ ಅರುವಿನರೂಪದಿಂದಿರುವ ಅಂತಃಕರಣದೊಳಗಿದ್ದುಕೊಂಡಿರುವ ಬೆಳಕಾದ ಪ್ರಭುವೇ ಆತ್ಮನು ಈ ಆತ್ಮನನ್ನು ತಿಳಿಯು ವದೇ ಮಾನವಜನ್ಮದ ಪ್ರಯೋಜನವೆಂದು ಹೇಳಿದೆನೆಂದರೆ, "ಯಥಾ ನದ್ಯಸ್ಸ್ಯಂದಮಾನಾಸ್ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ ! ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ ॥" ಎಂಬ ಮುಂಡಕಶ್ರುತಿಯಂತೆ ಫಡಿಗಳು ತಮ್ಮ, ತಮ್ಮ ನಾಮರೂಪಾದಿಗಳನ್ನು ಬಿಟ್ಟು ಸಮುದ್ರವನ್ನು ಸೇರಿ ಸಮರಸವಾಗುವಂತೆ ಸ್ಥೂಲಚಿದಚಿದಾತ್ಮಕ ಶಕ್ತಿವಿಶಿಷ್ಟನಾದ ಜೀವನು, ಸೂಕ್ಷ್ಮ ಚಿದಚಿದಾತ್ಮಕ ಶಕ್ತಿವಿಶಿಷ್ಟನಾದ ಪರವಸ್ತುವನ್ನೊಡನೆ ಸಮರಸವಾಗುವನೆಂಬುದೇ ಸ್ವಾಮಿ ! ಈ ಲೋಕದಲ್ಲಿ ಪರಲೋಕಕ್ಕಾಗಿ ಪಾಥೇಯವನ್ನು ಸಿದ್ಧಪಡಿಸಿಕೊಳ್ಳದೆ ಬಂದಿಯೆ ಫಕಾರಿಯಾಂತೆ ಬರಿಗೈಯಿಂದ ತೆರಳುವ ನಿಮಗಿಂತಲೂ ದೊಡ್ಡ ದಡ್ಡರಿರ್ತಾರಿರುವರು ? ಆದುದರಿಂದ ನಾನು ಕೊಂಬಲ್ಲು ನೀನೆ ತೆಗೆದುಕೊಂಡು ಹೋಗಿರಿ ಈ ಬುದ್ಧಿಮಾತಿಕೆಗಾಗಿಯೇ ನೀವು ನನ್ನನ್ನು ಪಡ್ಡನೆಂದು ಕರೆಯೋಣ ವಾಗುತ್ತಿದ್ದೇ ? ಚೆನ್ನಾಗಿದೆ! ನಿನ್ನು ದಡ್ಡತನಕ್ಕಾಗಿ ನೀವು ಪರಿಹಾರವಿಲ್ಲದ ಸಂಕಟವನ್ನು ಅನುಭವಿಸಲೇ ಬೇಕು ಮರಣಾನ್ನಿಹಿತವಾದನೆನ್ನಿಗೆ ಔಷಧವು ಹಿಡಿಯದಂತೆ ಈ ಮೊದಲು ನನ್ನ ಮಾತುಗಳು ನಿಮಗೆ ರುಚಿಸಿಲಿಲ ಈಗ ಬಾಯಿಬಾಯಿ ಬಿಡುತ್ತೀರಿ ಇದಕ್ಕೆ ಯಾರೂ ಏನೂ ಮಾಡಲಿಕ್ಕಾಗುವದಿಲ್ಲ ನೀವು ಮನುಷ್ಯ ರಾಗಿ ಹುಟ್ಟಿದ್ದೂ ಕೊಟ್ಟಂತೆರ ರೂಪಾಯಿ ಸಂಪಾದಿಸಿದ್ದೂ ವ್ಯರ್ಥವು ! ವ್ಯರ್ಥವು !! ಎಂದು ಹೇಳುತ್ತ ಲಿಂಗಣ್ಣನು ಹೊರಟುಹೋದನು ಇತ್ತ ನಿಜಲಿಂಗಪ್ಪನೂ ದೀರ್ಘ ಶ್ವಾಸವನ್ನು ಬಿಟ್ಟನು

ವಾಚಕರೇ, ಈ ಕಥೆಯ ಅಭಿಪ್ರಾಯ ವೆನ್ನು ಒಂದು ಸಾರೆ ಆಳವಾಗಿ ವಿಚಾರಮಾಡಿನೋಡಿದ್ದೀರ ಆದರೆ ಈ ಕಥೆಯಿಂದ ನಾವು ಆತ್ಯಾವಶ್ಯಕವಾಗಿ ಕಲಿಯಬೇಕಾದುದೇನು ? ಎಂಬಂಕವು ಗೋಚರಕ್ಕೆ ಬರುವದು ಆದರೆ ನಾವು ಅದರಲ್ಲಿಗಿನಿದೆ ? ಇದರಲ್ಲಿಗಿನಿದೆ ? ಎಂದು ಎಲಾವನ್ನೂ ಉದಾಶೀನತೆಯಿಂದ ಕಾಣುವದಾದರೆ ನಮ್ಮ ಭವಿಷ್ಯದ ಪರಿಣಾಮವೇನು ? ಎಂಬುದನ್ನು ಯಾರಾದರೂ ಎಂದಾದರೂ ಆಲೋಚಿಸಿ ನೋಡಿರುವರೇ ? ಎಲ್ಲಾ ಆಸ್ತಿಕಮತವರಿಗೂ ಪರಲೋಕ ಒಂದಿರುವಾಗ ಸನಾತನಧರ್ಮದವರಾದ ನಮಗೆ ಪರಲೋಕದ ಸುದ್ದಿಯೇ ಇಲ್ಲವೇ ? ಪುಣ್ಯ ಸಾಪ ಸ್ವರ್ಗ ನರಕ ಇತ್ಯಾದಿಗಳಿಲ್ಲವೆಂದು ಬಡಬಡಿಸುತ್ತಿದ್ದ ನಾಸ್ತಿಕರಿಲ್ಲರೂ ಆಸ್ತಿಕರಾಗಿರುವಾಗ, ನಾವುಮಾತ್ರ ಸ್ವೇಚ್ಛಾಪ್ರವರ್ತಕರಾಗಿ ವರ್ತಿಸುವುದು ಎಷ್ಟೂ ಸರಿಯಲ್ಲ

ಇಹಲೋಕ ಪರಲೋಕಗಳೆಂದು ಎರಡು ಲೋಕ ಗಳುಂಟು ಇಹಲೋಕದ ನೆರವಿನಿಂದ ಪರಲೋಕವು ಸಾಧಿಸತಕ್ಕದ್ದಾಗಿರುವದು ಇಹಲೋಕದ ಪಾಂಚ ಭೌತಿಕಸಾಮಗ್ರಿಗಳ ಸಹಾಯಸಂಪತ್ತಿನಿಂದ ನಿಲಲ್ಲಾಗ ನಾದ ಪರಲೋಕದ ಪಾಥೇಯವು ನಿರ್ಮಾಪಲ್ಪಡತಕ್ಕ ದ್ದಾಗಿರುವದು ಇಹಲೋಕದ ಸಾಮಗ್ರಿಗಳನ್ನೇ ಗಂಟು ಕಟ್ಟಿಕೊಂಡು ಪರಲೋಕಕ್ಕೆ ತೆಳಲಿಕ್ಕಾಗುವುದಿಲ್ಲ ಇಲ್ಲಿಯ ಸಾಮಗ್ರಿಗಳು ಇಲ್ಲಿಯೇ ನಿಂತುಬಿಡುವವು ಈ ಸಾಮಗ್ರಿಗಳು ಪರಲೋಕಕ್ಕೆ ಬೇಕಾಗಿಯೂ ಇಲ್ಲವು ಭಕ್ತವತ್ಸಲನಾದ ಪರತಿವನು ಸಾಂಚಭೌತಿಕಸಾಮಗ್ರಿಗಳನ್ನು ಪ್ರಾಣಿಗಳಿಗಕ್ಕೆ ಬದುಕಿರುವನ್ನು ದಿನನಗಳವರೆಗೆ ಉದಾರಭಾವದಿಂದ ಎಟ್ಟುಕೊಟ್ಟಿರುವನು ನಾವು ಅದರ ಉಪಯೋಗವನ್ನು ಮಾಡಿಕೊಂಡು ಪರಲೋಕಕ್ಕೆ ಬೇಕಾದ ಬುತ್ತಿಯನ್ನು ಸಂಪಾದಿಸಿಟ್ಟುಕೊಳ್ಳಲಿಬೇಕು ಇಹಲೋಕದ ವ್ಯಾಪಾರದಿಂದ ಲಬ್ಧವಾದ ಪುಣ್ಯ ಪಾಪ ಗಳೆರಡೂ ಪರಲೋಕದ ಬುತ್ತಿಗಳು ಇವೆರಡೂ ಪರ ಲೋಕಕ್ಕೆ ತೆರಳುವನವನ್ನು ಹಿಂಬಾಲಿಸುವವು ಇಲ್ಲಿ ನಾವು ಮಾಡುವ ಕರ್ಮಗಳೇ ಮುಂದಿನ ಜನ್ಮದ ಮೊಗ್ಗು ಹೂವು ಹಿಚ್ಚು-ಕಾಯಿ ಫಲಗಳಾಗಿರುವವು ಇಲ್ಲಿಯ ಪುಣ್ಯ-ಪಾಪಗಳಿಂದಲೇ ಪರಲೋಕದಲ್ಲಿ ಸ್ಥಾನ ವೈಪರೀತ್ಯವನು ಅಂದರೆ, ಪುಣ್ಯದಿಂದ ಸದ್ಗತಿಯೂ, ಪಾಪದಿಂದ ದುರ್ಗತಿಯೂ ಉಂಟಾಗುವದೆಂದು ಅಭಿ ಪ್ರಾಯವು ಅದಪ್ಪಯುಕ್ತ ನಾವು ಈ ಲೋಕದಲ್ಲಿ ಜನ್ಮವೆತ್ತಿ ಮಾಡಬೇಕಾದ ಕಾರ್ಯವು ಆಗಬೇಕಾಗಿರು ವದು ನಾವು ಇಲ್ಲಿಯೇ ಇಹಪರಗೆರೆಡನ್ನೂ ಸಾಧಿಸ ಬೇಕು ಎಂದಮೇಲೆ ಇಲ್ಲಿಯ ತಮ್ಮ ಕಾರ್ಯವು ಎಂಥ ದಾಗಿರಬೇಕೆಂಬುದನ್ನು ಬೇರೆ ಹೇಳಬೇಕಾದುದಿಲ್ಲವು ಇಷ್ಟು ಗುರುತರವಾದ ಕಾರ್ಯವನ್ನು ಮುಂದಿಟ್ಟುಕೊಂಡು ಮಾನವಮಹಾಶಯರು ಕಾಲವನ್ನು ನಿರ್ಲಕ್ಷ್ಯದಿಂದ ಕಾಣುತ್ತ ನಿದ್ರಿಸುತ್ತಿರುವವು ದುರಾಶೆಯು ಬಾಯಾರಿಕೆಯಿಂದ ಮೋಸ ಸುಳ್ಳು-ಕಳ್ಳತನ-ಲಂಚ ಅಪವಾದಾನಾಕತಂತ್ರಗಳನ್ನು ಮಾಡಿ ಜನರ ಗೋಣುಮುರಿಯುತ್ತಿರುವನು ಮಾನವನು ಪ್ರತಿ ದಿನವೂ ಪ್ರತಿಜ್ಞಾಪಬದ್ಧ ಮಾಡುತ್ತಿರುವ ಅಸತ್ಯ ಅಸಭ್ಯಕೃತ್ಯಗಳನ್ನು ನೋಡಿದರೆ ಒಂದುಕಡೆ ನಾಚಿಕೆಯೂ, ಒಂದುಕಡೆ ವೈಸನವೂ, ಒಂದು ಕಡೆ ಆಶ್ಚರ್ಯವೂ, ಒಂದು ಕಡೆ ಕ್ರೋಧವೂ ಉಂಟಾಗುವುದು

ಅದುಕಾರಣ, ಎಲ್ಲ ಮಾನವನುಹಾಶಯನೇ, ನೀನು ಮಾಡುವ ಕಾರ್ಯವೆಲ್ಲವೂ ಇಹದಲ್ಲಿ ಕೀರ್ತಿಯನ್ನು ಸಂಪಾದಿಸುವಂತಿರಬೇಕು ನೀನು ಸಂಪಾದಿಸುವ ಕೀರ್ತಿಯಾದರೋ ಪರಲೋಕಕ್ಕೆ ಸಾಧಕನಾದ

[೪ ನೆಯ ಪುಟವನ್ನು ನೋಡಿ]

ಸ್ವೀಕಾರ

ಧಾರವಾಡ ೫। ಗದಗ ಬೆಟಗೇರಿಗ್ರಾಮನಿವಾಸಿಯಲ್ಲಿರುವ ವೇ॥ ಕಂಬಿದ್ದಯ್ಯನವರ ಮಕಡ ಚೆನ್ನಯ್ಯನವರು ತಮ್ಮ ಪುತ್ರರಿಗೆ ವೈಶಾಖ ಶು॥ ೧೫ ದಿವಸ ದೀಕ್ಷಾಸಮಾರಂಭ ವೆನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ ಗಳು ವೇ॥ ಗಂಗಾಧರಯ್ಯ ಹಿರೇಮಠ ನಾರಾಯಣಪುರ ಇವರ ದ್ವಾರಾ ತಲುಪಿರುತ್ತವೆ

ಹಾಸನ ೫। ಅರಸಿಕೆರೆ ತಿವಸಿ ನಲ್ಲಿರುವ ವೇ॥ ಎ॥ ಜಿ ಶಿವಶಂಕರಯ್ಯನವರು ತಮ್ಮ ಶ್ರೀವೇಣುಕಾಂಬ ನಂದನಂದಿರದಲ್ಲಿ ವೈಶಾಖ ಬಿ॥ ೪ ಗುರುವಾರ ದಿವಸ ತಮ್ಮ ಪುತ್ರ ಚಿ॥ ವೀರಭದ್ರಾರಾಧ್ಯನ ದೀಕ್ಷೆಯನ್ನು ಕುಪ್ಪೂರು ಗದ್ದಿಗೆ ಮರದ ಶ್ರೀ॥ ೪। ಬ್ರ॥ ಜರಸಟ್ಟಿ ದೈವರ ಗುರುತ್ವದಲ್ಲಿ ವಿಧ್ಯುಕ್ತವಾಗಿ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂ ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಶಿವಾಂ ಇಲ ಖಾ ಗೆ ಬ್ಯರ್ಣಾನಗರದಲ್ಲಿರುವ ವೇ॥ ಮಮದಾಪುರದ ಶಿವಶಂಕರಯ್ಯನವರ ಪುತ್ರ ಚಿ॥ ನೂರಂದಯ್ಯ ಎಂಬ ವರಿಸಿಗೆ ವೇ॥ ಸಂಗೀತರತ್ನ ಪಂಚಾಕ್ಷರ ವ್ಹರಗವಾಯಿ ಬಿಳ್ಳಕೊಂಡಿ ಹಿರೇಮಠ ರಹಸ್ಯರ ಇವರ ಪುತ್ರಿ ಚ॥ ಸೌ॥ ಶಾಂತಾಬಾಯಿಯೆಂಬ ಕನ್ಯೆಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಜಾಪಾ ಪುರ ಹಿರೇಮಠದ ಶ್ರೀ॥ ಷ॥ ಬ್ರ॥ ಶಾಂತವೀರಶಿವಾ ಚಾರ್ಯ ಸ್ವಾಮಿಗಳವರ ಆಶೀರ್ವ್ಯಯ ನೇರಿಗೆ ಪ್ರಭಾ ಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 4 ರೂ ಗಳು ಮಗಿ॥ ರಾ॥ ಶಿವಯೋಗಪ್ಪ ಸ್ವಾದಿ ಇವರ ದ್ವಾರಾ ತಲುಪಿರುತ್ತವೆ

ಗುಲ್ಬರ್ಗಾ ನಗರದಲ್ಲಿರುವ ಮಗಿ॥ ರಾ॥ ಶಿವಯೋಗಪ್ಪ ಸ್ವಾದಿ ಇವರು ಪ್ರಭಾಪೋಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳ ಹಿಸಿದ್ದಾರೆ

ವಿಜಾಪುರ ತಾ॥ ಜೊಮ್ಮನಹಳ್ಳಿ ಗ್ರಾಮದಲ್ಲಿ ವೈಶಾಖ ಶುದ್ಧ ೪ ದಿನ ಶ್ರೀ ಜಡೆ ಶಾಂತೇಶ್ವರ ಜಾತ್ರೆಯು ಮಹಾ ವೈಭವದೊಡನೆ ನೆರವೇರಿದ ಸಮಯ ದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2ರೂ ಗಳು ಮಗಿ॥ ರಾ॥ ಬಸಪ್ಪ ಕರಣಿ ಮುಧೋಳ ಇವರ ದ್ವಾರಾ ತಲುಪಿರುತ್ತವೆ

ಧಾರವಾಡ ೫। ಹೊಳೆಆಲೂರು ಗ್ರಾಮದ ಸಕ್ಕದಲ್ಲಿ ಹರಿಯುತ್ತಿರುವ ಮಲಪ್ರಭಾ ನದಿಯ ಮಧ್ಯಭಾಗದಲ್ಲಿ ಶಿಲಾಮಂಟಪವನ್ನು ಕಟ್ಟಿಸಿ ಶಿವಲಿಂಗ ಪ್ರತಿಷ್ಠೆಯನ್ನು ಮಾಡಿಸಿದ ಸಮಯದಲ್ಲಿ ಸದರಿ ಗ್ರಾಮದ ಭಿಕ್ಷಾವರ್ತಿ ಹಿರೇಮಠದ ವೇ॥ ರೇವಣಸಿದ್ಧಯ್ಯನವರು ಪ್ರಭಾ ಪೋಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿ ಕಳುಹಿ ಸಿದ್ದಾರೆ

ನಿಜಾಂ ಇಲಾಖಾ ಯಲಬುರ್ಗಿ ತಾ॥ ಮಲಳಿ ಸಮೀಪದ ಹಿರೇಮಠದ ವೇ॥ ರಾಜಶೇಖರಯ್ಯನವರು ತಮ್ಮ ಪುತ್ರರ ದೀಕ್ಷೆಯನ್ನು ಜೆವನಳ್ಳಿ ಶ್ರೀ॥ ೪। ಬ್ರ॥ ಚರಮೂರ್ತಿಸ್ವಾಮಿಗಳವರ ಮತ್ತು ಮಂಗಳೂರು ಅರಳೆಲೆ ಮಕಡ ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳವರ ಗುರುತ್ವದಲ್ಲಿ ನೆರವೇರಿಸಿದ ಸಮಯದಲ್ಲಿ 1 ರೂ ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಈ ಮೇಲ್ಕಾಂಡ ಮಹಾಶಯರಿಗೆಲ್ಲಾ ಶ್ರೀ ಜಗನ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಪುಣ್ಯವನ್ನುಂಟುಮಾಡುವಂತಿರಬೇಕು ಈ ರೀತಿಯಿಂದ ಪ್ರವರ್ತಿಸುವದು ಎಲ್ಲರಿಗೂ ಒಳುವದಿಲ್ಲ ಬಲ್ಲವರಿಂದ ತಿಳಿದುಕೊಂಡು ಅವರ ನಡೆಸುಡಿಗಳನ್ನು ಅನುಕರಣ ಮಾಡಬೇಕು, ದುಡುಕಿ ಯಾವುದನ್ನೂ ಮಾಡುವಾರದು. ಭಾವೀಪರಿಣಾಮವನ್ನು ಪರಾಮರ್ಶಿಸದೆ ಪ್ರೇರಕವಾದ ಲಾಭಕ್ಕಾಗಿ ಕೆಲಸಮಾಡಬಾರದು, ಸ್ವಹಿತಾರ್ಥಕ್ಕಾಗಿ ಮೋಸದಿಂದ ಅನ್ಯರಿಗೆ ಅಹಿತಮಾಡ ಬಾರದು. ನಾವು ಮಾಡುವ ಪ್ರತಿಯೊಂದು ಕಾರ್ಯವು ಸಜ್ಜನ ಸಮ್ಮತವಾಗಿಯೂ, ಜನಸಮುದಾಯಕ್ಕೆ ಹಿತಕರವಾಗಿಯೂ ಇರಬೇಕು ಇವೆಲ್ಲಾ ಸರಿಬೀಲಿಸಿ ಪ್ರಪಂಚವ್ಯವಹಾರವನ್ನು ಮಾಡಿ-ವನನಿಗೆ ಸಜ್ಜನರ ಒಪ್ಪಿಗೆಯೂ ದೈವಸಹಾಯವೂ ಉಂಟು ಇವಂಂದಲೇ ಕೀರ್ತಿಯಹುದು, ಇದಂಂದಲೇ ಇಹಪರಗಳೆರಡರಲ್ಲಿಯೂ ಸದ್ಗತಿಯಹುದು ಹೀಗೆ ಮೇಲೆ ಹೇಳಿದ ರೀತಿಯಲ್ಲಿ ನಡೆಯಬೇಕಾದರೆ ಶಾಸ್ತ್ರಪರಿಚಯವಿರಬೇಕು ಸೂಕ್ಷ್ಮ ನಾರ್ಥಧರ್ಮಗಳ ಜ್ಞಾನವಿರಬೇಕು, ಲೋಕಾನುಭವವಿರ ಬೇಕು, ಸತ್ಪಹವಾಸವಿರಬೇಕು, ಇವೆಲ್ಲದರ ಮೇಲೂ ನಮ್ಮಲ್ಲಿ ವಿವೇಕವಿರಬೇಕು ವಿವೇಕಿಯೊಬ್ಬನಿಗೇ ಕಾರ್ಯದಲ್ಲಿ ಜಯವುಂಟು ವಿವೇಕಿಯೊಬ್ಬನೇ ಲೋಕದ ಕೀರ್ತಿಗೆ ಭಾಗಿಯು ವಿವೇಕಿಯಂದಲೇ ದರ್ಮ ಮಾರ್ಗವು ಸುಲಭವಾಗಿ ಕಂಡುಹಿಡಿಯಲ್ಪಡುವುದು ವಿವೇಕಿಗೇ ಸುಖಸಂತಸಗಳು ಲಭಿಸುವವು ಆದ ಕಾರಣ ಮನುಷ್ಯಪ್ರವನ್ಮ ಳಿಸಿಕೊಳ್ಳಬೇಕೆಬಿಚ್ಚೆಯುಳ್ಳ ವರು ಯಾವಾಗಲೂ ವಿವೇಕವನ್ನು ಸಂಪಾದಿಸುತಿರ ಬೇಕು ವಿವೇಕದಿಂದ ಕೆಲಸಮಾಡಬೇಕು ಸತ್ಪಂಗ ದಿಂದ ಸದ್ಬಾಸನೆಗಳನ್ನು ಮೈಗೂಡಿಸಿಕೊಳ್ಳುತ್ತಿರಬೇಕು ಸದ್ಬಾಸನೆಗಳನ್ನ ಲವಡಿಸಿಕೊಳ್ಳದಿದ್ದರೆ ಜೀವಾತ್ಮನಿಗೆ ಬೇಕು ಒಠಠಕ್ಕ ಬಾಗಿಲುಕಿಟಿಕಿಗಳಿಗೆ ಕೆರೆಹಾಕಿ ಕತ್ತಲೆ ಮಾಡಿದಂತಾಗುವುದು ಜ್ಞಾನಸ್ಪ ಕಾರವು ಪ್ರವೇಶಿಸಲು ಅವಕಾಶವಿಲ್ಲದಂತಾಗುವುದು ಪರಮಾತ್ಮನ ಕಾರ್ಯ ದಲ್ಲಿಯೂ, ಆಧ್ಯಾತ್ಮವಿಚಾರದಲ್ಲಿಯೂ ಜಗತ್ತಿಗೆ ಹಿತ ವನ್ನುಂಟುಮಾಡುವುದರಲ್ಲಿಯೂ ಶ್ರದ್ಧೆಯಿರಬೇಕು ಅವಿಚ್ಛಿನ್ನವಾದ ಯತ್ನವೂ ಉದಾತ್ತವಾದ ಧೈರ್ಯ ಗಳೂ ಇರಬೇಕು ಜಗತ್ತಿನಲ್ಲಿ ವಿನೇ-ನ ಕಾರ್ಯವೇ ಕಾರ್ಯವು ವಿವೇಕವಿಲ್ಲದವನೂ, ಜ್ಞಾನಶಪನವನ್ನು ಸಂಪಾದಿಸದವನೂ " ದೊಡ್ಡ ದಡ್ಡ "ನೆನಿಸುವನು

ದೀಕ್ಷಾಸಮಾರಂಭ ಗದಗ ಬೆಟಗೇರಿ

ಧಾರವಾಡ ಡಿ॥ ಗದಗ ಬೆಟಗೇರಿ ಗ್ರಾಮದಲ್ಲಿರುವ ವೇ॥ ಕರಿಸಿದ್ಧಯ್ಯನವರಮಠದ ಚನ್ನಯ್ಯನವರು ತಮ್ಮ ಸ್ವಹದಲ್ಲಿ ಇದೇ ವೈಶಾಖ ಶುದ್ಧ ೧೫ ದಿವಸ ತಮ್ಮ ಪುತ್ರರ ವೀರಮಾಹೇಶ್ವರದೀಕ್ಷಾಸಮಾರಂಭವನ್ನು ಆಬ್ಬೆ ಗೇರಿ ಅರಳೆಲೆ ಮಠದ ಶ್ರೀ॥ ಪಾ॥ ಬ್ರ॥ ಪಟ್ಟದ ಸ್ವಾಮಿ ಗಳವರ ಗುರುತ್ವದಲ್ಲಿ ಮಹಾ ವೈಭವದೊಡನೆ ನೆರವೇರಿಸಿ ದರು. ಈ ಸಮಯದಲ್ಲಿ ಧರ್ಮಾರ್ಥವಾಗಿ ೮-೧೦ ಜನ ಬಡ ಮಾಹೇಶ್ವರ ವಟುಗಳಿಗೆ ದೀಕ್ಷಾ ಸಂಸ್ಕಾರವು ಸಹ ಮಾಡಿಸಲ್ಪಟ್ಟತು. ದೀಕ್ಷಾಕಾರ್ಯವು ಮುಗಿದ ಮೇಲೆ ಸಕಲ ವಟುಗಳು ಶ್ರೀ ವೀರಭದ್ರದೇವಸ್ಥಾನಕ್ಕೆ ವಾದ್ಯಗೈಭವದೊಡನೆ ಹೋಗಿ ಶ್ರೀ ವೀರೇಶನ ಪ್ರಸಾದವನ್ನು ಸ್ವೀಕರಿಸಿದರು ಮಧ್ಯಮಾರ್ಗದಲ್ಲಿ ಭಕ್ತಾದಿಗಳು ವಟುಗಳಿಗೆ ಹಾರವನ್ನು ಸಮರ್ಪಿಸಿ ತಮ್ಮ ಭಕ್ತಿಯನ್ನು ಸ್ವಕ್ತಪಡಿಸಿದರು. ಈ ಮಂಗಲ ಕಾರ್ಯಕ್ಕೆ ಪುರಪ್ರಮುಖರು ಆಗಮಿಸಿ ಶೋಭೆಯನ್ನುಂಟುಮಾಡಿ ದ್ದರು ಗಣಾರಾಧನೆಯಾದ ಮೇಲೆ ದೀಕ್ಷಾಸಮಾರಂಭವು ಮಂಕ್ಷಾಯವಾಯಿತು. ವೇ॥ ಚನ್ನಯ್ಯನವರು ದೀಕ್ಷೆಯನ್ನು ಮಾಡಿದ ಗುರುಗಳಿಗೆ ತಮ್ಮ ಶಕ್ತಿ ಮಿಾರಿ ಕಾಣಿಕೆಯನ್ನು ಸಮರ್ಪಿಸಿದರು. ಸಕಲ ಸಮ್ಮಾನಗಭಭೂಷಿತರಾದ ವೇ॥ ಚನ್ನಯ್ಯನವರೂ, ಅವರ ಪುತ್ರರಿಗೂ, ಕುಟುಂಬ ವರ್ಗಕ್ಕೂ ಜಗದಾಂಬ ರ್ಯರು ಸಕಲ ಸನ್ಮಂಗಲಗಳನ್ನು ಅನುಗ್ರಹಿಸಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಕಾರ್ಯದರ್ಶಿಗಳು
ಫಕೀರಗೌಡ ತಿಮ್ಮನಗೌಡರ,
ಕರಿಯಪ್ಪ ಪಟ್ಟಣಶೆಟ್ಟರ.

ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರ ಭಾಷಣ

ಈ ಕೆಳಗಿನ ಟಿಪ್ಪಣಿಯು ತಾ॥ ೧೯ನೆಯ ದಿವಸ ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರ್‌ರವರು ಕೃಷ್ಣ ಪ್ರತಿನಿಧಿಸಭೆಯ ಬಜೆಟ್ ಅಧಿವೇಶನದಲ್ಲಿ ಭಾಷಣ ಮಾಡುತ್ತ ಈ ಕೆಳಗೆ ಕಂಡಂತೆ ನಿವರಿಸಿದರು

ಮೈಸೂರು ದೇಶದ ಆದಾಯ ವ್ಯಯ

೧೯೪೪ ೪೫ನೇ ಸಾಲಿನಲ್ಲಿ ನಿರೀಕ್ಷಿಸಿರುವ ಒಟ್ಟು ಆದಾಯ ೧೦ ಕೋಟಿ ೬೮ ಲಕ್ಷ ರೂ ಗಳು ನಿರೀಕ್ಷಿಸಿ ರುವ ಒಟ್ಟು ವೆಚ್ಚ ೧೩ ಕೋಟಿ ೭೨ ಲಕ್ಷ ರೂ ರೆವಿನ್ಯೂಬಾಬಿನಿಂದ ವೆಚ್ಚ ಮಾಡುವ ಹಣವನ್ನು ಸರಿ ಗಡಿಸಿದರೆ ಒಟ್ಟು ವೆಚ್ಚ ೧೧ ಕೋಟಿ ೩೭ ಲಕ್ಷ ರೂ ಆಗುತ್ತವೆ ಆಂದರೆ ೬೯ ಲಕ್ಷ ರೂ ಕಡಿಮೆ ಬಿದ್ದಂತಾ ಯಿತು.

ಮೊದಿನ ವರ್ಷ ಸರ್ಕಾರದವರು ೧೩ ಕೋಟಿ ೭೨ ಲಕ್ಷ ರೂ ವೆಚ್ಚ ಮಾಡಲಿದ್ದಾರೆ ಇದರಲ್ಲಿ ೨ ಕೋಟಿ ೨೫ ಜಿಲ್ಲೆಗಳಿಗನ್ನು ಬೇರೆ ಬೇರೆ ನಿಧಿಯಿಂದ ತೆಗೆದುಕೊಳ್ಳಲಾಗುವುದು ನೀರಾವರಿ ಅಭಿವೃದ್ಧಿ ನಿಧಿಯಿಂದ ೯೦ ಲಕ್ಷ ರೂ, ರಸ್ತೆ ನಿಧಿಯಿಂದ ೩೮ ಲಕ್ಷ ರೂ ವಿಶೇಷ ರಿಜರ್ವ್ ನಿಧಿಯಿಂದ ೧,೫೫ಲಕ್ಷ ರೂ, ಪಡೆಯಲಾಗುವುದು

ಸಂಬಂದ ಪುನರ್ವ್ಯವಸ್ಥೆಯಿಂದ ಅನೇಕ ಬಾಬುಗ ಳಲ್ಲಿ ವಚ್ಚ ಹೆಚ್ಚಾಗಿದೆ

ಮಿಲಿಟರಿ ಪೋಲೀಸ್ ವೆಚ್ಚ

ಪೋಲೀಸ್ ಒಲವನ್ನು ಹೆಚ್ಚಿಸಬೇಕಾಯಿತು ಸೈನ್ಯವು ಸಹ ಸಾಮಾನ್ಯ ಪುನಾರಣಕ್ಕಿಂತ ಕಡಿಮೆ ಇತ್ತು ಈಗ ಸೈನ್ಯಕ್ಕೆ ಹೆಚ್ಚು ಜನರನ್ನು ಸೇರಿಸಿಕೊಳ್ಳ ಲಾಗುತ್ತಿದೆ ಈ ಬಾಬಿನಲ್ಲಿ ಸಹ ಅಧಿಕ ಹಣ ವಿಶೇ ಯೋಗವಾಗುವುದು ಅಗಿನ ಪರಿಸ್ಥಿತಿಯಲ್ಲಿ ಈ ಬಲಗ ಳನ್ನು ಕಡಿಮೆ ಮಾಡುವುದು ಸ್ಥಾನುವಲ್ಲ

ಸಂಸ್ಥಾನದಲ್ಲಿ ಸಂಪೂರ್ಣವಾಗಿ ಪಾನನಿರೋಧವನ್ನು ಆಚರಣೆಗೆ ತರಬೇಕೆಂದು ಸರಕಾರದವರು ಸಂಕಲ್ಪ ಮಾಡಿದ್ದಾರೆ

ಶಿಕ್ಷಣಕ್ಕಾಗಿ ೨ ಕೋಟಿ ೭೫ ಲಕ್ಷ ರೂ. ವೆಚ್ಚ

ಮುಂದಿನ ವರ್ಷ 'ಶಿಕ್ಷಣ' ಬಾಬಿನಲ್ಲಿ ೨ ಕೋಟಿ ೭೫ ಲಕ್ಷ ರೂ. ವೆಚ್ಚ ಮಾಡಲಾಗುವುದು ಇದುವರೆಗೆ ಎಂದೂ ಈ ಬಾಬಿಗೆ ಇಷ್ಟು ಅಧಿಕ ವೆಚ್ಚ ಆಗಿರಲಿಲ್ಲ. ಸಂಸ್ಥಾನದ ಆದಾಯದಲ್ಲಿ ಸುಮಾರು ಕಾಲುಭಾಗ ಇದಕ್ಕೆ ವೆಚ್ಚ ವಾಗಲಿದೆ. ಹಿಂದೆ ಶಿಕ್ಷಣದ ಅವಕಾಶವನ್ನು ಪಡೆಯದೇ ಇದ್ದವರು ಇಂದು ಈ ಸೌಕರ್ಯವನ್ನು ಪಡೆಯಲು ಕಾತುರರಾಗಿರುವುದೇ ಇದಕ್ಕೆ ಕಾರಣ.

ಪ್ರಾಥಮಿಕ ವಿದ್ಯಾಭ್ಯಾಸವು ಸರ್ಕಾರದ ಪ್ರಥಮ ಕರ್ತವ್ಯವೆಂದು ಪರಿಗಣಿಸಲಾಗಿದೆ ಸಂಸ್ಥಾನದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳನ್ನು ಹೆಚ್ಚಾಗಿ ತೆರೆಯಲು ಅಧಿಕ ಹಣವನ್ನು ತೆಗೆದಿಡಲಾಗಿದೆ. ಇನ್ನೂ ಹಲವು ಕಾಲೂಕುಗಳಲ್ಲಿ ನಿರ್ಬಂಧ ಶಿಕ್ಷಣವನ್ನು ಜಾರಿಗೆ ತರಲಾಗುವುದು. ಸರಕಾರದವರೇ ಹಲವು ಹೈಸ್ಕೂಲುಗಳನ್ನು ಸ್ಥಾಪಿಸಿ, ನಡೆಯುವ ಯೋಜನೆ ಮಾಡಿದ್ದಾರೆ

ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯದ ವೆಚ್ಚವು ಸಹ ಹೆಚ್ಚಿದೆ. ಆಯಾ ಜಲ್ಲೆಯವರೇ ಆಯಾ ಜಲ್ಲೆಯ ಮುಖ್ಯ ಸ್ಥಳದಲ್ಲೇ ಇಂಟರ್ ಮಿಡಿಯೆಟ್ ಶಿಕ್ಷಣವನ್ನು ಕೊಡಬೇಕೆಂಬ ಒತ್ತಾಯ ಬರುತ್ತಿದೆ. ಅದ್ದರಿಂದ ಮಂಡ್ಯ, ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಕೋಲಾರಗಳಲ್ಲಿ ಇಂಟರ್ ಕಾಲೇಜುಗಳನ್ನು ತೆಗೆಯ ಬೇಕೆಂದು ಸರ್ಕಾರವು ನಿಶ್ಚಯಿಸಿದೆ. ಇದರಿಂದ ಬೆಂಗ ಳೂರು ಮತ್ತು ಮೈಸೂರು ಕಾಲೇಜುಗಳಲ್ಲಿ ಒತ್ತಡ ಕಡಿಮೆಯಾಗುವುದೆಂದು ಪರಿಗಣಿಸಲಾಗಿದೆ. ಆದರೆ ಇಂಟರ್ ಕೋರ್ಸ್ ಮುಗಿಸಿದ ಅನೇಕ ಮಂದಿ ವಿದ್ಯಾರ್ಥಿಗಳು "ಡಿಗ್ರಿ" ಪಡೆಯದಿದ್ದರೆ ತಮ್ಮ ಎರಡು ವರ್ಷ ಗಳ ಶಿಕ್ಷಣ ಅಪ್ರಯೋಜಕವೆಂದು ಭಾವಿಸುತ್ತಾರೆ. ಅವರಿಗೆ ಅವಕಾಶ ಕಲ್ಪಿಸಲು ಬೆಂಗಳೂರು ಮತ್ತು ಮೈಸೂರುಗಳಲ್ಲಿರುವ ಇಂಟರ್ ಕಾಲೇಜುಗಳನ್ನು ಮೊದಲನೇ ವರ್ಗದ ಕಾಲೇಜುಗಳನ್ನಾಗಿ ಪರಿವರ್ತಿಸಲಾ ಗುವುದು ಇದಲ್ಲದೆ ಜಿಲ್ಲೆಗಳಲ್ಲಿ ಸಹ ಮೊದಲನೇ ವರ್ಗದ ಕಾಲೇಜುಗಳನ್ನು ತೆರೆಯುವ ಯೋಜನೆ ಮಾಡಬೇಕಾಗಿ ಒರುತ್ತದೆ

ಇದಲ್ಲದೆ ಕಾಮರ್ಸ್ ಮತ್ತು ಲಾಕಾಲೇಜುಗಳನ್ನು ಈ ವರ್ಷದಿಂದ ತೆರೆಯಲಾಗುವುದು

ಸರ್ಕಾರದ ಹಣವು ಬಹಳ ಮಟ್ಟಿಗೆ ಪ್ರಾಥಮಿಕ ವಿದ್ಯಾಪ್ರಚಾರಕ್ಕೆ ವಿನಿಯೋಗವಾಗಬೇಕಾಗಿರುವುದರಿಂದ ಧಾರ್ಮಿಕರು ಮುಂದೆ ಬಂದು ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳನ್ನು ಸ್ಥಾಪಿಸಬೇಕು

ವೈದ್ಯ ಸೌಕರ್ಯ

ವೈದ್ಯ ಸೌಕರ್ಯಕ್ಕಾಗಿ ಸಹ ಅಧಿಕ ಹಣವನ್ನು ತೆಗೆದಿ ಡಲಾಗಿದೆ ಮಲೆನಾಡಿನಲ್ಲಿ ವೈದ್ಯ ಸಹಾಯ ನೀಡಲು ವಿಶೇಷ ಪ್ರಯತ್ನ ನಡೆಸಲಾಗುವುದು. ಆ ಪ್ರದೇಶಗಳಲ್ಲಿ ಆರೋಗ್ಯ ಕೇಂದ್ರಗಳನ್ನು ವಿಪ್ರಡಿಸಿ, ಹಲವು ಕಡೆ ಸುವ್ಯವಸ್ಥಿತವಾದ ಆಸ್ಪತ್ರೆಗಳನ್ನು ತೆರೆಯಲಾಗುವುದು. ಮಲೆನಾಡಿನ ಅಭಿವೃದ್ಧಿ ಸಮಿತಿಯ ಸಲಹೆಗಳ್ಲಲಿ ಹಲ ವನ್ನು ಆಚರಣೆಗೆ ತರಲಾಗಿದೆ

ವೈದ್ಯಕೀಯ ಶಾಲೆಗೆ ೨೦ ಲಕ್ಷ ರೂ. ಗಳನ್ನು ಕೊಡಲಾಗಿದೆ ಪಶುವೈದ್ಯಶಾಲೆಯ ವೆಚ್ಚವೂ ಜಾಲ್ಲಿ ಸಾಲಿಗಿಂತ ಎರಡರಷ್ಟಾಗುವುದು. ನೀರಾವರಿ ಶಾಖೆಯ ವೆಚ್ಚ ೧೫೦ ಲಕ್ಷ ರೂ. ಸಣ್ಣ ಪುಟ್ಟ ಕೆರೆಗಳ ಜೀರ್ಣೋ ದ್ಧಾರ ಕಾರ್ಯವನ್ನು ತ್ವರೆಗೊಳಿಸಲಾಗುವುದು ಹೊಸ ಕೆರೆಗಳನ್ನು ಆಣೆಕಟ್ಟೆಗಳನ್ನು ಹಾಕಲಾಗುವುದು ಮುಜ ರಾಯಿ ಶಾಖೆಯ ಹಣವನ್ನು ೩ ಲಕ್ಷ ೯೦ ಸಾವಿರ ರೂ. ಗಳಿಂದ ೬ ಲಕ್ಷ ೫೮ ಸಾವಿರ ರೂ. ಗೆ ಹೆಚ್ಚಿಸಲಾಗಿದೆ.

ಕೂಲಿಗಾರರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲೋ ಸುಗ ಸರ್ಕಾರದವರು ಅನೇಕ ಮಸೂದೆಗಳನ್ನು ತಂದಿ ದ್ದಾರೆ. ಅವರ ಹಿತಸಾಧನೆಗಾಗಿ ೧೦ ಲಕ್ಷ ರೂ ಗಳ ವಿಶೇಷ ನಿಧಿಯನ್ನು ಸ್ಥಾಪಿಸಲಾಗಿದೆ.

ಗ್ರಾಮಾಭಿವೃದ್ಧಿ

ಗ್ರಾಮಾಭಿವೃದ್ಧಿ ಯೋಜನೆಯೊಂದಕ್ಕೆ ಈಗ ಸರ್ಕಾರವು ಸಮ್ಮತಿ ಇತ್ತಿದೆ. ಗೌರವ ಗ್ರಾಮಸುಧಾರಕರಿಗೆ ಬದಲು ಸಂಬಳದ ನೌಕರರನ್ನು ನೇಮಿಸುವ ಯೋಜನೆ ಮಾಡ ಲಾಗಿದೆ ತಾಲ್ಲೂಕು ಮತ್ತು ಜಿಲ್ಲಾ ಅಭಿವೃದ್ಧಿ ಸಮಿ ತಿಗಳನ್ನು ಮತ್ತು ಕೇಂದ್ರ ಅಭಿವೃದ್ಧಿ ಸಮಿತಿಯೊಂದನ್ನು ಸ್ಥಾಪಿಸಲಾಗುವುದು. ಈ ಯೋಜನೆಯ ವಿವರಗಳನ್ನು ಬೇಗನೆ ಸಾರ್ವಜನಿಕರಿಗೆ ತಿಳಿಸಲಾಗುವುದು

ನ್ಯಾಯಾಂಗವನ್ನು ಬೇರ್ಪಡಿಸುವ ವಿಚಾರ

ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕ ಗೊಳಿಸುವ ವಿಚಾರದಲ್ಲಿ ಸಲಹೆ ಮಾಡಬೇಕೆಂದು ಹೈಕೋರ್ಟನ್ನು ಹಿಂದಿನ ಸರ್ಕಾರ ಪ್ರಾರ್ಥಿಸಿತ್ತು. ಈ ಬಗ್ಗೆ ಹೈಕೋರ್ಟಿನ ಶಿಫಾರ್ಸನ್ನು ಸಾಮಾನ್ಯವಾಗಿ ಅಂಗೀಕರಿಸಲಾಗಿದೆ ಈ ವರ್ಷದಲ್ಲಿ ಈ ಕಾರ್ಯವನ್ನು ನೆರವೇರಿಸುವನಿರೀಕ್ಷೆ ಇದೆ.

ಮಾರಾಟದ ತೆರಿಗೆ

ಈ ವೆಚ್ಚಗಳ ಪರಿಣಾಮವಾಗಿ ಆದಾಯಕ್ಕಿಂತ ವೆಚ್ಚ ೬೯ ಲಕ್ಷ ೪೨ ಸಾವಿರ ರೂ. ಹೆಚ್ಚಾಗಿ ಆಗಲಿದೆ. ನೂರಾಟದ ತೆರಿಗೆ ಹಾಕುವುದರ ಮೂಲಕ ಈ ಹಣ ವನ್ನು ಭರ್ತಿಮಾಡಲು ಆಲೋಚನೆಯಾಗಿದೆ. ಈ ಬಗ್ಗೆ ಒಂದು ಮಸೂದೆಯನ್ನು ತರಲಾಗುವುದು.

Edited, Printed and Published by Pandit Kashinatha Shastri at Shri Panchachaya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತಶ್ರೀ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರಕರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧನಿಯಾಮಕರ್ ಪರಲಸತ್ಪಂಚಾಕ್ಷರೀಜೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವದವರಿಗೆ ೨ ರೂ ೮ ಆಣೆ. ಪರಸ್ಥಳದವರಿಗೆ ೩ ರೂ. ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ನೇ ಜೂನ್ ೧೯೪೪ [ಸಂಚಿಕೆ ೪

ಶ್ರೀಶಿವಲಿಂಗಾನುಷ್ಠಾನ ಸಮಾಪ್ತಿ ಸಮಾರಂಭ
ಶ್ರೀಸಿದ್ಧೇಶ್ವರಬೆಟ್ಟಿ (ಬೈಲಹಳ್ಳಿಗೇರಿ)

ಬಳ್ಳಾರಿ ಡಿ॥ ಹೊಸಪೇಟೆ ತಾ॥ ಬೈಲಹಳ್ಳಿಗೇರಿ ಗ್ರಾಮದಲ್ಲಿರುವ ಶ್ರೀಸಿದ್ಧೇಶ್ವರದೇವಾಲಯದಲ್ಲಿ ಬಾಲ ತಪಸ್ವಿ ಮೊರಬದ ಜಡಿಮಠದ ಶ್ರೀ॥ ಷ॥ ಬ್ರ॥ ಗಂಗಾಧರತಿವಾಚಾರ್ಯರು ಶ್ರೀಶಿವಲಿಂಗಾನುಷ್ಠಾನ ಸಮಾಪ್ತಿ ಸಮಾರಂಭವನ್ನು ಇದೇ ವೈಶಾಖ ಶು॥ ೧೫ ದಿನಸ ಮುಖ್ಯಾಯಗೊಳಿಸಿದರು. ಆ ದಿನ ಶ್ರೀಸಿದ್ಧೇಶ್ವರ ಸ್ವಾಮಿಗೆ ಹೊಸಪೇಟೆ ಸಂಸ್ಕೃತ ಪಾಠಶಾಲಾಧ್ಯಾಪಕ ರಾದ ವೇ॥ ಕಲ್ಯಾಣಶಾಸ್ತ್ರಿಗಳ ಪೌರೋಹಿತ್ಯದಿಂದ ರುದ್ರಾಭಿಷೇಕವು ಬಹಳ ವೈಭವದಿಂದ ನಡೆಯಿತು ಈ ಸಮಾರಂಭಕ್ಕೆ ಕಾಕುಬಾಳು, ಬೈಲುವದ್ದಿಗೇರಿ, ಗುಡ್ಡ ವದ್ದಿಗೇರಿ, ಪಾಪಿನಾಯಕನಹಳ್ಳಿ, ಧರ್ಮಸಾಗರ, ಜೋಗ, ಮೆಟ್ರಿ, ಹೊಸಪೇಟೆ, ಕಂಪಲಿ, ಯಮ್ಮಿಗನೂರು, ಆಚೆಬೈಲ್, ಹೊಳಲುಗುಂದಿ ಮೊದಲಾದ ಗ್ರಾಮಗಳಿಂದ ೨೦೦೦ ಜನ ಭಕ್ತಾದಿಗಳು ಆಗಮಿಸಿ ದ್ದರು. ಇವರಿಗೆಲ್ಲಾ ಕಾಕುಬಾಳು ಗ್ರಾಮದ ಶ್ರೀಮಾನ್ ಧರ್ಮವೀರ ರಾಜಾವುರದ ಸಿದ್ಧಪ್ಪನವರು ಮತ್ತು ಇವರ ಧರ್ಮಪತ್ನಿಯವರಾದ ಪತಿವ್ರತಾಚೂಡಾಮಣಿ ಸೌ॥ ವೀರಮ್ಮನವರು ಈ ಉಭಯ ವೃದ್ಧದಂಪತಿಗಳು ತಮ್ಮ ಪುತ್ರಪೌತ್ರಮಿತ್ರಬಂಧುಬಾಂಧವರಿಂದೊಡಗೂಡಿ ಮಹಾಭಕ್ತಿಯಿಂದ ಮಿಷ್ಟಾನ್ನ ಸಂತರ್ಪಣೆಯನ್ನು ಮಾಡಿಸಿದರು. ಇದೇ ದಿವಸ ತೆಕ್ಕಲಕೋಟೆ ಶ್ರೀಗಳ ವರ ಆಧ್ಯಕ್ಷತೆಯಲ್ಲಿ ಸಭೆಯು ನಡೆಯಿತು. ಪ್ರಾರಂಭ ದಲ್ಲಿ ಮೆಟ್ರಿ ಹಿರೇಮಠದ ವೇ॥ ಅಮರಿಯಯ್ಯನವರು ತಮ್ಮ ಮಧುರ ಕಂಠದಿಂದ ಗುರುಸ್ತುತಿ, ಶಿವಸ್ತುತಿ ಗೀತಗಳನ್ನು ಹಾಡಿದರು. ಬಳಿಕ ವೇ॥ ಕಲ್ಯಾಣಶಾಸ್ತ್ರಿಗಳು, ಯಮ್ಮಿಗನೂರು ಶ್ರೀಗುರುಸಿದ್ಧಶಿವಾಚಾರ್ಯರು, ಮೆಟ್ರಿ ಸ್ಕೂಲ್‌ಮಾಸ್ಟರ್ ಜ್ಞಾನಮೂರ್ತೀಗಳಾದ ವೇ॥ ಎಚ್ ಎಂ ಮಹಾದೇವಯ್ಯನವರು ಭಾಷಣಗಳನ್ನು ಮಾಡಿದರು. ಅನಂತರ ವೀರತಪಸ್ವಿ ಗಂಗಾಧರತಿವಾ ಚಾರ್ಯರು ತಮ್ಮ ಪ್ರಸಾದವಾಣಿಯಿಂದ ಸಮಸ್ತಭಕ್ತಾದಿ ಗಳಿಗೆ ಸದ್ಧರ್ಮಬೋಧೆಯನ್ನು ಮಾಡಿ ಕೃತಕೃತ್ಯರ ನ್ನಾಗಿ ಮಾಡಿದರು. ಈ ಸಭೆಯಲ್ಲಿ ಯಮ್ಮಿಗನೂರು, ಆಚೆಬೈಲ್, ತೆಕ್ಕಲಕೋಟೆ, ಹೊಳಲುಗುಂದಿ, ಮೊರಬ ಈ ಪಂಚಮಠಾಧಿಪತಿಗಳು ಮಂಡಿಸಿದ್ದುದರಿಂದ ಸಭೆಯು ಪಂಚಮ-ಖಾಪರಮೇಶ್ವರರ ಕೈಲಾಸದೋಲಗದಂತೆಯೂ ಪ್ರತಿತ್ತು. ಈ ವಿಧವಾದ ಆನಂದಮಯ ಮಹತ್ಕಾರ್ಯ ಗಳು ನಡೆಯುವೆಕಾದರೆ, ನೋಡ್ಯಂತೆ ವೃದ್ಧದಂಪತಿಗಳ ಜ್ಞಾನಮಂದಿರಕ್ಕೆ ದಿನಮಣಿಯಂತೆಯೂ ಪ್ರತಿತ್ತಿರುವ ವೀರ ತೆಯಜ್ಞಾಜ್ಯೋತಿ ಪೂಜ್ಯಪಂಡಿತ ಶ್ರೀಶಾಕಿನಾಥಶಾಸ್ತ್ರಿ ಗಳವರ ಜಯಾಶೀರ್ವಾದಭಾವವೇ ಮೂಲಕಾರಣ ವೆಂದು ಕೊಂಡಾಡಬೇಕಾಗಿದೆ. ಸರ್ವರ ಭಾಷಣಗ ಳಾದಮೇಲೆ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು. ಈ ಶುಭಸಮಯದಲ್ಲಿ ತೆಕ್ಕಲಕೋಟೆ ಕಂಬಾಳಿಮಠದ ಶ್ರೀಗಳವರ ಅಪ್ಪಣೆಯ ಮೇರೆಗೆ ಶ್ರೀಮಾನ್ ಯಜ ಮಾನ ಸಿದ್ಧಪ್ಪನವರಿಂದ ಪ್ರಭಾವೇಷಣಕ್ಕೋಸ್ಕರ ೫ ರೂಪಾಯಿಗಳು ತೆಗೆಯಲ್ಪಟ್ಟವು. ಸಭೆಯು ಸಮಾಪ್ತಿಗೊಂಡ ಮೇಲೆ ಧರ್ಮವೀರ ಶ್ರೀ ಸಿದ್ಧಪ್ಪನವರ ಧರ್ಮಪರಾಯಣತೆಯನ್ನು ನೋಡಿ ಸಮಸ್ತ ಶ್ರೀಗಳ ವರೂ, ಸಂಡಿತರೂ, ನೆರೆದ ಭಕ್ತರೂ ಧರ್ಮವೀರ ಸಿದ್ಧಪ್ಪನಮಹಾರಾಜರೇ ಜೈ! ಎಂದು ಜಯಘೋಷ ಮಾಡಿದರು. ಬಳಿಕ ಕಾರ್ಯಕ್ರಮವು ಸಮಾಪ್ತಿಗೊಂಡಿತು.

ಎಚ್. ಯಂ. ಶಿವಲಿಂಗಯ್ಯ ಕಂಬಾಳಿಮಠ,
ಕಾಕಬಾಳು.

ಶಿವಧರ್ಮೋಪದೇಶ

ಬಳ್ಳಾರಿ ಡಿ॥ ಹೊಸಪೇಟೆ ತಾ॥ ಪಾಪಿನಾಯಕನ ಹಳ್ಳಿಯ ಪಾಟೀಲ್ ಸುಬ್ಬನ ಗೌಡರು ತಾ॥ ೨೬-೫-೧೯೪೪ನೇ ದಿವಸ ಕಾಕಬಾಳ ಗ್ರಾಮದಿಂದ ಬಾಲ ಬ್ಯಹಸ್ಪತಿ ಶ್ರೀಗಂಗಾಧರ ಶಿವಾಚಾರ್ಯಸ್ವಾಮಿಗಳ ವರನ್ನು ವಾದ್ಯವೈಭವದೊಡನೆ ದಯಮಾಡಿಸಿಕೊಂಡು ಬಂದರು. ಶ್ರೀಕೃಷ್ಣದೇವಾಲಯದಲ್ಲಿ ಸಭೆಗೂಡಿತು. ಆಗ್ಯೆ ಶ್ರೀಗಂಗಾಧರತಿವಾಚಾರ್ಯರು ದೇವಿಕರ ಸಂಜಾರ ಮತ್ತು ಶಿವರ ಸೇನೆ ಎಂಬ ವಿಷಯದ ಮೇಲೆ ಹೃದ ಯಂಗಮವಾದ ಭಾಷಣಮಾಡಿದರು. ಆ ಮೇಲೆ ಪಾಪಿ ನಾಯಕನ ಪಾಟೀಲರು ಶ್ರೀ ಸ್ವಾಮಿಗಳವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಪಾದಪೂಜಾದಿಗಳನ್ನು ನೆರವೇ ರಿಸಿ ಅನ್ನಸಂತರ್ಪಣೆಯನ್ನು ಮಾಡಿದರು. ಈ ಸಮಾ ರಂಭಕ್ಕೆ ಕಾಕಬಾಳ ಗ್ರಾಮದ ಧರ್ಮವೀರ ರಾಜಾವುರದ ಸಿದ್ಧಪ್ಪನವರೇ ಮೊದಲಾದ ಅನೇಕ ಜನ ಪ್ರಮುಖರು ಆಗಮಿಸಿದ್ದರು ಗುರುವರ್ಗ ಮಾಧಕಾರಿಗಳು ಇದೇ ರೀತಿ ದೇಶಮಧ್ಯದಲ್ಲಿ ಸಂಚರಿಸಿ ಧರ್ಮ ಜ್ಯೋತಿ ಯನ್ನು ಮಾಡಿ ಸಮಾಜವನ್ನು ಧ್ಯರಿಸಬೇಕೆಂದು ಕೋರುವ

ಎಚ್. ಎಮ್ ಶಿವಲಿಂಗಯ್ಯ ಕಂಬಾಳಿಮಠ,
ಕಾಕಬಾಳ.

ಪಲ್ಲಕ್ಕಿ ಮಹೋತ್ಸವ ಅಕ್ಕಿ ಆಲೂರು

ಧಾರವಾಡ ಡಿ॥ ಅಕ್ಕಿ ಆಲೂರು ಗ್ರಾಮದಲ್ಲಿರುವ ವೀರಭಿಕ್ಷಾವೃತ್ತಿಕ ಮಕಪ ಪಟ್ಟಾಧ್ಯಕ್ಷ ಶ್ರೀ॥ ಷ॥ ಬ್ರ॥ ಸಿದ್ಧಬಸವ ತಿವಾಚಾರ್ಯಸ್ವಾಮಿಗಳವರ ಪಲ್ಲಕ್ಕಿ ಮಹೋತ್ಸವವು ತಾ॥ ೩೭-೫-೪೪ನೆಯ ದಿವಸ ಪ್ರಾತಃಕಾಲ ೮ ಘಂಟೆಗೆ ತಳಿರುತೋರಣಗಳಿಂದಲಂಕೃತ ವಾದ ನಗರದ ಸಮಸ್ತ ಬೀದಿಗಳಲ್ಲಿ ನಾನಾ ವಿಧವಾದ್ಯ ವೈಭವದೊಡನೆ ಬಹು ಅದ್ಧೂರಿಯಾಗಿ ನೆರವೇರಿತು. ಸ್ತ್ರೀಯೊಂದು ಮನೆಯ ಸ್ತ್ರೀಪುರುಷರು ಆರತಿಯನ್ನೆತ್ತಿ ಆಶೀರ್ವಾದವನ್ನು ಪಡೆಯುತ್ತಿದ್ದರು. ಉತ್ಸವವು ಮುಲ್ಲಾ ಕೇರಿಯಲ್ಲಿ ಬಂದಾಗ್ಗೆ ಶ್ರೀಯುತ ಮಲ್ಲಪ್ಪ ನಿಂಯಕರ ಭಾಷಣವಾಯಿತು. ಈ ಉತ್ಸವದಲ್ಲಿ ಹಿಂದೂ ಮುಸಲ್ಮಾನರು ಅಕ್ಯಂತ ಭಕ್ತಿಯಿಂದ ಭಾಗವಹಿಸಿದ್ದರು. ಉತ್ಸವವು ಮರಳ್ಕೆ ತಲಪಿದ ಮೇಲೆ ಕುಂದುಗೋಳ ಹಿರೇಮಠದ ಉತ್ಸವಾಧಿಕಾರಿಗಳಾದ ಶ್ರೀ ಸಿದ್ಧಲಿಂಗ ದೇವರ ಅಧ್ಯಕ್ಷತೆಯಲ್ಲಿ ಸಭೆ ಗೂಡಿತು ಪಂಡಿತ ಕೊಟ್ಟೂರೇಶ್ವರಶಾಸ್ತ್ರಿಗಳು ಹಿರೇಮಠ ಇವರು ಸಮ ಯೋಚಿತ ಭಾಷಣಮಾಡಿದರು. ಆಮೇಲೆ ಅಧ್ಯಕ್ಷರು ನುಡ್ಡು ಶ್ರೀಸಿದ್ಧಬಸವ ತಿವಾಚಾರ್ಯರು, ಜಗದಾಚಾ ರ್ಯರ ಮಹಿಮೆಯ ಬಗ್ಗೆಯೂ, ಹಿಂದೂ ಮುಸಲ್ಮಾ ನರ ಐಕ್ಯದ ಬಗ್ಗೆಯೂ ಪರಿಣಾಮಕಾರಕವಾದ ಭಾಷಣ ಗಳನ್ನು ಮಾಡಿದರು. ಬಳಿಕ ಜಗದಾಚಾರ್ಯರ ಮಂಗಲದೊಡನೆ ಸಭೆಯು ಮುಕ್ತಾಯವಾಯಿತು

ಷಣ್ಮುಖಯ್ಯ ಪರ್ವತ ಇಲಾಖಾದಾರ

ವಿದ್ಯಾರ್ಥಿಗಳಿಗೆ ಸೂಚನೆ

ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲದಲ್ಲಿದ್ದು ಕೊಂಡು ಸಾಹಿತ್ಯ, ವ್ಯಾಕರಣ, ನ್ಯಾಯ, ವೇದಾಂತಾದಿ ಶಾಸ್ತ್ರಾಧ್ಯಯನ ಮಾಡಿ ಯುಕ್ತ ಪ್ರಾಂತೀಯ ಸೌರ್ ಮೆಂಟ್ ಸಂಸ್ಕೃತ ಕಾಲೇಜು, ಕಲ್ಕತ್ತಾ-ಬಿಹಾರ ಮೊದಲಾದ ಮಹಾವಿದ್ಯಾಸಂಸ್ಥೆಗಳ ಪರೀಕ್ಷೆಯನ್ನು ಕೊಡತಕ್ಕ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಯಕ್ತಪ್ರಾಂತೀಯ ಕಾಂಗ್ರೆಸ್ ಪ್ರಧುಕ್ಷರುವ ಕಾಶಿಯ ಕ್ವೀನ್ಸ್ ಸಂಸ್ಕೃತ ಕಾಲೇಜನ್ನು ಸಂಸ್ಕೃತ ವಿಶ್ವವಿದ್ಯಾಲಯವನ್ನಾಗಿ ಪರಿವರ್ತಿಸಿ ಭಾರತೀಯ ಸಂಸ್ಕೃತಿಗೆ ಮೂಲವಾದ ಸಂಸ್ಕೃತ ಭಾಷೆಯನ್ನು ಸರ್ವತೋಮುಖವಾಗಿ ಶಿಕ್ಷಿಸಬೇಕೆಂಬ ಮಹೋದ್ದೇಶ ದಿಂದ ಪ್ರೋತ್ಸಾಹವನ್ನೀಯುತ್ತಿರುವೆದು.

ಕಲ್ಕತ್ತೆಯ ಮಧ್ಯಮ ಪರೀಕ್ಷೆಯಲ್ಲಿ ಉತ್ತೀರ್ಣ ರಾದ, ವಿಶೇಷ ಶಾಸ್ತ್ರಾಧ್ಯಯನ ಮಾಡಲಿಚ್ಛೆಯುಳ್ಳ ಗುರುವಂಶೀಯ ವಿದ್ಯಾರ್ಥಿಗಳು ಈ ಸುಸಂಧಿಯನ್ನು ಕಳೆದುಕೊಳ್ಳದೆ ಶ್ರೀಜಗದ್ಗುರು ವಿಶ್ವಾರಾಧ್ಯ ಗುರು ಕುಲದ ಅಧ್ಯಕ್ಷರಿಗೆ ಶೀಘ್ರದೆರಿಸಿಕೊಂಡು ಅವರ ಅಮ ಮತಿ ಪಡೆದು ಬರತಕ್ಕದ್ದು ವಿದ್ಯಾರ್ಥಿಗಳಿಗೆ ಉಚಿತ ಭೋಜನ ವಸತಿಗಳ ವ್ಯವಸ್ಥೆಯಿದೆ. ಗುರುಕುಲದ ನಿಯಮಗಳಿಗೆ ಬದ್ಧರಾಗಿರಬೇಕು.

ಗುರುಕುಲದ ಅಧ್ಯಕ್ಷರಾಗಿದುವ ಭಾವೀ ಜಗದ್ಗುರು ಮಹಾಸ್ವಾಮಿಗಳವರು ವಿದ್ಯಾಭಿಮಾನಿಗಳೂ ವಿದ್ಯಾರ್ಥಿ ಪ್ರೇಮಿಗಳೂ ಆಗಿರುವುದರಿಂದ ಜಂಗಮವೇತಭೂಷಣ ವಾದ ಸಂಸ್ಕೃತ ವಿದ್ಯಾಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ತೀವ್ರ ಗಮನಕೊಡಬೇಕಾಗಿ ನಿವೇದಿಸುವ,

ರಾಮಚಂದ್ರಪ್ರಸಾದ,
ಮ್ಯಾನೇಜರ್,
ಜಂಗಮವಾಡಿಮಠ ಕಾಶೀ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮನೆತ್ತಿ ನೈಶಾಖ ಶು॥ ಪಂಚಮಿಗೆ ೨೧ ವರ್ಷಗಳು ತುಂಬಿ ೨೨ನೆಯ ವರ್ಷವು ಪ್ರಾರಂಭ ವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ ಮಾಡಬೇಕಾಗುತ್ತದೆ ವಿ ಪಿ ಮಾಡುವುದರಿಂದ ನಮಗೂ ಹೊಂದಿಕೆಯಾಗುವುದು ಹಾಗೂ ಚಂದಾ ದಾರರಿಗೂ ೬ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂಪಾಯಿಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮವು ದೆಲ್ಲಿರುವ ಅಭಿಮಾನಿಗಳು ಚಂದಾದಾರರ ಹೆಸರ್ ಲ್ಲ ಒಟ್ಟು ಕೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸ ಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತ ವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾ ರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು

ನ್ಯಾ

ಪಂಚಾಚಾರ್ಯಪ್ರಭಾ

೧೯೪೪ನೆಯ ಜೂನ್ ತಿ ೭ನೆಯ ಸೋಮ ವಾರ

ಪ್ರಾಚೀನನಿರಕ್ಷರ ಗುರುಭಿಕ್ತಿ

ಪರಶಿವನ ಪಂಚಮುಖಗಳಿಂದ ಆವತರಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರು ಆಸಾಧಾರಣ ಮಹಿಮಾ ಶಾಲಿಗಳಾಗಿದ್ದರೂ ವಿಸಯವು ಆವರ ಪವಿತ್ರ ಚರಿತ್ರೆ ಗಳಿಂದ ಕಂಡುಬರುತ್ತದೆ ಈ ಮಹಾತ್ಮರ ಸಮಕಾಲೀನ ಸಮಸ್ತ ವಿಷಯಗಳನ್ನು ತಿಳಿಸಿಗಮಗಳು ಮುಕ್ತಿಕಾರ ದಿಂದ ಸಾರುತ್ತಿರುವವು ಪೂರ್ವಕಾಲದಲ್ಲಿ ಮಹಾಮಹಿಮ ಮಹರ್ಷಿಗಳೂ, ಚಕ್ರವರ್ತಿಗಳೂ ಈ ಮಹಾತ್ಮರ ಆತೀವಾದಪ್ರಭಾವದಿಂದ ಕೈವಲ್ಯಸುಖವನ್ನನುಭವಿಸಿ ದರು ಬ್ರಹ್ಮಚರ್ಯಾದಿ ಚತುರಾಶ್ರಮಿಗಳು ಮತಾ ಚಾರ್ಯರಿಂದಲೇ ಆನುಗ್ರಹಿತರಾಗಬೇಕೆಂಬ ಶಾಸ್ತ್ರ ನಿಯಮದಂತೆ ಪೂರ್ವಕಾಲದಲ್ಲಿ ಸಕಲಾಶ್ರಮಿಗಳೂ ವರ್ಣಿಸಿ ಧನ್ಯರಾಗುತ್ತಿದ್ದರು ಕಲಿಕಾಲಪ್ರಭಾವದಿಂದ ಕೆಲವು ದಿನಸಗಳಿಂದೀಚೆಗೆ ನಾಲ್ಕನೆಯ ಆಶ್ರಮದವ ರಾದ ವಿರಕ್ತರೆಂಬವರು ಶಾಸ್ತ್ರವಾರ್ಗಕ್ಕೆ ತಿಲಾಂಜಲಿ ಯನ್ನಿತ್ತು ಧನಬಲದಿಂದ ಮತಸ್ಥಾಪಕರನ್ನು ದಿಕ್ಕರಿ ಸಲು ಪ್ರಾರಂಭಿಸಿರುವರು ಹೀಗೆ ನಡೆಯ ಬತ್ತಿರುವುದು ಕಲಿಕಾಲಪ್ರಭಾವವೇ ಹೇಳಬೇಕಾಗಿದೆ ಪ್ರಾಚೀನ ವಿರಕ್ತರು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಅಭಿಷಿಕ್ತ ಸಾಧಾರಣವಾದ ಭಕ್ತಿ ಯನ್ನಿಟ್ಟು ವೀಶೈವ ಧರ್ಮಾಭಿಮಾನಿಗಳಾಗಿದ್ದಾರೆ ಆವರು ತೋರಿಸಿರುವ ಗುರುಭಕ್ತಿಯು ಸಾಮಾಧಾರಣವಾದುದು ಆವರಂತಹ ಗುರುಭಕ್ತಿಯು ಯಾರಲ್ಲಿಯೂ ಇಲ್ಲೆಂದರೂ ಸಲ್ಲುವದು ವಿರಕ್ತರಲ್ಲಿ ಮಾತಾಮಹಮಹಾಲಿಂಗಗಳೆಂದು ಜಗದ್ವಿಖ್ಯಾತರಾಗಿರುವ ಆನಾದಿತೋಂಟದ ಸಿದ್ಧಲಿಂಗೇ ಶ್ವರರು ಮತಾಚಾರ್ಯರಲ್ಲಿ ಆನ್ಯಾದೃಶವಾದ ಭಕ್ತಿಯ ನ್ನಿಟ್ಟಿದ್ದರೆಂಬ ವಿಷಯದಲ್ಲಿ ಆನಂದಿ ಬರೆಯಲ್ಪಟ್ಟ ಸಿದ್ಧೇಶ್ವರವಚನವೇ ಬಲವಾದ ಸಾಕ್ಷಿಯಾಗಿದೆ ಆ ಮಹಾತ್ಮರು ತಮ್ಮ ವಚನದಲ್ಲಿ—

ಸಂದೀಶ್ವರ ಛೃಂಗೀಶ್ವರ ವೀರಭದ್ರ ಪಾಡ್ಯ ರೇಣುಕ ಶಂಕ ರ್ಷಣ ಸೋಕರ್ಜ ನಿಕಾಕ್ಷರ, ತ್ರ್ಯಕ್ಷರ ಚತುರಾಕ್ಷರ ಪಂಚಾಕ್ಷರ ಷಡಕ್ಷರ ಸದಾಶಿವ ಈಶ್ವರ ಮಹೇಶ್ವರ ರುದ್ರ ಭಂಟಿಹಕರ ಗಣಳರ್ಜ ನಿಳಮುಖ ದ್ವಿಮುಖ ತ್ರಿಮುಖ ಚತುರ್ಮುಖ ಪಂಚ ಮುಖ ಸಣ್ಮುಖ ಶತಮುಖ ಸಹಸ್ರಮುಖ ಮೊದಲಾದ ಗಣಾಧೀಶ್ವರರು ನ್ಯಸ್ತಸಂಪೂರ್ಣರಾಜಂಕ ಪರಿಪತ್ತ್ಯಧಿಕ್ಕೆ ಜ್ಯೋತಿಯಲ್ಲಿ ಜ್ಯೋತಿಯಯಿಸುವಂತೆ ಉಡಿಯಿ ಕುಪ್ಪ ಚಿವೃಷಭರಪ್ಪ ಪ್ರಮಥರು ಆನಾದಿಮುಳ್ಳ ಅವಾಂತರಮುಳ್ಳ ರೆಂಬ ಅವಲಕ್ಷಣ ನಾಮ ನಾಂಗಿ ಪದಿನೆಂಟು ಜಾತಿಯ ಕೆರಿ ಸಟ್ಟಿಗೆ ಸಂಯೆಂಬ । ಆ ಕ್ಷಾಸಕ್ಷಾ ನಿಗಳ ಶೈವಪರಿವಾರಮತಕಂ ರಲಿ ಆವರ ಆಗಮವಂತರಲಿ ನಿಮ್ಮ ಶರಣರಿಗೆ ನಿಮಗೆ ಬೇರೆ ಮಾಡಿ ಸಂಕಲ್ಪಿಸಿ ಪಡಿವ ಆಜ್ಞಾನಿ ಹೊಲಿಯರ ಏನಗೊಮ್ಮೆ ತೋರದಿರಯ್ಯ ಮಹಾಲಿಂಗ ಗುರುತಿಜ ಸಿದ್ಧೇಶ್ವರ ಪ್ರಭುವೇ ॥ ಮತ್ತು

ಆದಿಯಲ್ಲಿ ಶಿವತತ್ತ್ವವಲ್ಲಿ ರೇಣುಕನುದಯಿಸಾಗರಿಲ್ಲಿ ಇಲ್ಲಿ ಶಿವಲಿಂಗದಲ್ಲಿ ಉದ್ಭವಿಸಾವ ಪರಿಯಿಂ ? ಆ ಶಿವನಲ್ಲಿಯೇ ಹುಟ್ಟಿ ಶಿವನಲ್ಲಿಯೇ ಲಯವಾಗಿ ರೇಣುಕೇಶ್ವರನು ಅನಾದಿ ಮುಕ್ತನಲ್ಲ ಆಸಾಂಗಸಮುಕ್ತನೆಂಬ ಆಜ್ಞಾನಿಗಳಿಗಾ ನಾಯಕ ನರಕ ಕಟ್ಟದು ಸಕಲಕೋಟಿ ಬ್ರಹ್ಮಾಂಡಕ್ಕಾಧಾರ ಸಮಸ್ತ ಲೋಕಂಗಳಿಗೆ ಪವಿತ್ರಕಾರಣನಾಗಿಯು ಪರಮೇಶ ರನ ಎಜಸಿಸ್ಮ ಯವನ್ನು ಉದ್ಧ ಸುಮುಖದಲ್ಲಿ ಚಿತ್ತಜಸ್ಮರೂಪಾಕರಪ್ರಭುವಗಣಂ ಗಳುದಯಿಸುವಂದದಿಂ ನೋಡಿ ಆ ರುದ್ರಗಣಂಗಳು ಮತ್ತೆ ಜಗತ್ಪಾವನ ಕಾರಣಮ್ಯವಲ್ಲಿ ಅವತರಿಸಿದರು ಅವೆಲ್ಲ ಕಾರಣ ಉದಯಾಸ್ತಮಾನಂಗಳಿಗಾಗಿ ಸಗುಣವಿಲ್ಲದೆ ಎಂದು ಸಂಶಿಸಿ ಸುವ ನಾಯಿನಾಲಿಯ ಯಮದುಗತರು ಕೀಡಿದೆ ನಾನಂದೇ ?! ಇವಗ ನಾಯಕರಕಕ ಕಪ್ಪದು ಕಾಯಾ ಎಲೇ ಶಿವನೇ ನೀ ಸಾಕ್ಷಿಯಾಗಿ ಮಹಾಲಿಂಗ ಗುರುತಿಜ ಸಿದ್ಧೇಶ್ವರಪ್ರಭುವೇ।

ಇತ್ಯಾದಿ ವಚನಗಳನ್ನು ವಿವರಿಸಿದರೆ ಶ್ರೀಜಗ ದ್ಗುರು ರೇಣುಕಾದಿಪಂಚಾಚಾರ್ಯರಲ್ಲಿ ಆನಾದಿತೋಂಟದ ಸಿದ್ಧೇಶ್ವರರು ಎಂತಹ ಚಿತಾಧಾರಣವಾದ ಭಕ್ತಿಯನ್ನು ತೋರಿಸಿದ್ದಾರೆನ್ನುವದು ಸರ್ವರಿಗೂ ಸ್ಪಷ್ಟವಾಗಿ ತೋರಿ ಬರುತ್ತದೆ ಈ ಮಹಿಮರು ಕ್ರಿ ಶ ೧೫೦೦ನೆಯ ಶತಮಾನ ದಲ್ಲಿದ್ದರು ಇವರ ಸನ್ನಿಧಾನಿಯು ಮೈಸೂರಿನ ೭೦ ಮೈಲು ದೂರದಲ್ಲಿರುವ ಎಡೆಯೂರು ಎಂಬ ಗ್ರಾಮದಲ್ಲಿ ಉಂಟು ಸಮಾಧಿಸ್ಥಾನವು ಬಹು ರಮಣೀಯವಾಗಿರು ತ್ತದೆ ಇವರ ಸಮಾಧಿಯಿದ್ದ ಚೇನಸ್ಥಾನದಲ್ಲಿ ಶ್ರೀಜಗ ದ್ಗುರು ರೇಣುಕಾಚಾರ್ಯರ ಪುರಾಣದಲ್ಲಿ ವರ್ಣಿಸಿದ ಯಾವಸ್ತು ಲಿಲ್ಲ ಎಲ್ಲ ಪವಿತ್ರವಸ್ತುಗಳಿರುತ್ತವೆ

ಕ್ರಿ ಶ ೧೫೦೦ನೆ ಶತಮಾನದವೆಲ್ಲದ್ದ ಮೆದೆಕೆರೆ ನಾಯಕನ ದೆ ರ್ಷ್ಟಿಲ್ಪಟ್ಟು ಚಿಶ್ಚಿಕ್ಷಲ್ಪಟ್ಟಿದುಗಿದ ವಿರಕ್ತ ನಾರಿಗೆ ತಥಿಕಾರಿಗೆ ದರ್ಗಸಿದ್ದಸ್ಥಾನ ಗಳೆಂಬವರು ಕನ್ನಡದಲ ಬಲಂಸ ವರ್ಣನವನ್ನು ಬರೆದಿರುತ್ತಾರೆ ಆವರಲ್ಲಿ

ನೆ ನಿ ಬ್ಯಂಗಿ ಭೃಸಂ ಸ ಮಾಗುರಿ ಇಂಕಂ ಮತವಾಯಂ ಸುಂದರಂ ಕರಕ ಬಾಯಂ ಸಂಖ್ಯಾಗುಂ ನಿರಂಭಾಸ್ಯಾಗುಂ ॥ ನರ್ಂದಿ ಕ ಲಿಯಿಂದ ಮುಕ್ತಿತಿಗೆ ಮಂಜುಳವಾಣಿಯಂ

ಈ ಪ್ರಕಾರವಾಗಿ ಸ್ತುತಿಸಿರುತ್ತಾರೆ ಇದರಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ 'ಮತಾಗುರು' ಎಂದು ಸ್ಪಯೋಗವನ್ನು ಮಾಡಿ ತಮ್ಮ ಅಸಾಧಾರಣ ವಾದ ಭಕ್ತಿಯನ್ನು ಪ್ರಕಟಮಾಡಿದ್ದಾರೆ ಮತ್ತು—

ವೀಕ್ಷೆಯಿಂಸಿರಿದಿತ್ತಯ್ಯನ ನತ್ತಯ ಶಿಷ್ಟಯನಸುರ್ಕೆಯಂದಿತ್ತಸನಂ । ಪಕ್ಷದೆ ಸಜ್ಜಾನದನಂ ! ಲಕ್ಷಕ ಲಕ್ಷಿಯ ಸೊತ್ತನೊದಲೊಳೆ ನಯಂ

ಈ ಪದ್ಯದಿಂದ ತಮ್ಮ ದೀಕ್ಷಾಗುರುಗಳನ್ನು ಶಾಸ್ತ್ರಾ ನುಸಾರವಾಗಿ ಒಹುಭಕ್ತಿಯಿಂದ ಸ್ತುತಿಸಿದ್ದಾರೆ ಇದ ಲ್ಲದೆ ದೀಕ್ಷಾಗುರುಗಳೇ ಶಿಕ್ಷಾಗುರು, ನೋಡ್ಪರಿಗುರು (ಜ್ಞಾನಗುರು) ಗಳಾಗುತ್ತಾರೆಂದು ತೋರಿಸಿದ್ದಾರೆ ಮಹಾತಪಸಿ ಗಳೂ ಜ್ಞಾನಿಗಳೂ ಜಿತೇಂದ್ರಿಯರೂ ಹಾಗೂ ಮಹಾವಿರಕ್ತರೂ ಆದ ಇವರೆಲ್ಲರೂ ಶ್ರೀರೇಣು ಕಾದ್ಯಾಚಾರ್ಯರಲ್ಲಿಯೂ ಮತ್ತು ತಮಗೆ ದೀಕ್ಷೆಯನ್ನಿತ್ತು ಕೊಟ್ಟ ಗುರುಗಳಲ್ಲಿಯೂ ಆಸಾಧಾರಣವಾದ ಗುರುಭಕ್ತಿ ಯನ್ನು ತೋರಿಸಿ, ಶಿಷ್ಯರಾಗಿ ನಡೆದು ಹೋಗಿದ್ದಾರೆ ಹೀಗಿದ್ದು ಇವರಂತೆ ಒಂದೆರಲ್ಲಿಯೂ ಕೂಡ ಸಮರ್ಪ ರಾಗದೆ ಈಗಿನ ವಿರಕ್ತರು ಶ್ರುತಿಗಳ ಅಭಿಪ್ರಾಯವನ್ನನು ಲಕ್ಷಿಸಿ ಆದರಂತೆ ವರ್ತಿಸದೆ ಅಥವಾ ತಮ್ಮ ಪೂರ್ವಜರ ಮಾರ್ಗವನ್ನಾದರೂ ಹಿಡಿಯು ಆಚರಿಸದೆ ಮತಸ್ಥಾಪ ನಾಚಾರ್ಯರಲ್ಲಿಯೂ, ತಮಗೆ ದೀಕ್ಷೆಯನ್ನು ಕೊಟ್ಟು ಗುರುಗಳಲ್ಲಿಯೂ ಭಕ್ತಿಭಾವವನ್ನು ಪ್ರಕಟಮಾಡದೆ ಶಾಸ್ತ್ರವಿರುದ್ಧವಾಗಿ ನಡೆದುಹಕ್ಕಿರುತ್ತಾರೆ ಇದು ಕುದ್ದು ಅನ್ಯಾಯ. ಆದುದರಿಂದ ಈಗಿನ ವಿರಕ್ತರು ಪ್ರಾಚೀನ ವಿರಕ್ತರ ಗುರುಭಕ್ತಿಯನ್ನು ಶ್ರಿಕರಣಶುದ್ಧಿಯಿಂದ ಅವ ಲೋಕಿಸಿ ಆ ಮಹಾತ್ಮರಂತೆ ತಾವೂ ಸಹ ಮತಸ್ಥಾಪ ಕರಲ್ಲಿ ನಿಜವಾದ ಗುರುಭಕ್ತಿಯನ್ನಿಟ್ಟು ವರ್ತಿಸಿ ಧನ್ಯ ರಾಗಬೇಕೆಂದಾಶಿಸುತ್ತೇನೆ

ವರ್ತಮಾನಸಂಗ್ರಹ

ಬೆಂಗಳೂರಿನಲ್ಲಿ ಹೈದರಾಬಾದಿನ ನಿರಾಶ್ರಿತರು

ಹೈದರಾಬಾದಿನಿಂದ ಬಂದಿರುವ ಹಿಂದೂ ನಿರಾಶ್ರಿತರು ಬೆಂಗಳೂರು ರೈಲ್ವೆ ಸ್ಟೇಷ್ಷನ್ ಒಳ ಇರುವ ಗುಬ್ಬಿ ತೋಟ ದಪ್ಪನವರೆ ಛತ್ರದಲ್ಲಿದ್ದುಕೊಂಡು ಕಷ್ಟದಿಂದ ಜೀವನ ಮಾಡುತ್ತಿದ್ದಾರೆ ಹೈದರಾಬಾದಿನ ಬಿದರ ಜಿಲ್ಲೆಯಲ್ಲಿ ರಜಾಕರರ ದಾಳಿಗೆ ಈ ಹಿಂದುಗಳು ಈಡಾಗಿ ಮನೆಮಠ ಗಳನ್ನು ಬಿಟ್ಟು, ಬಂಧುಗಳನ್ನು ಕಳೆದುಕೊಂಡು ನಿರಾ ಶ್ರಿತರಾಗಿ ಬಂದಿರುತ್ತಾರೆ ಇನ್ನೂ ಅನೇಕ ಜನ ನಿರಾಶ್ರಿ ತರು ರೈಲುಗಳಲ್ಲಿ ಪ್ರತಿದಿವಸ ಬರುತ್ತಿದ್ದಾರೆ

ಹೈದರಾಬಾದಿನಲ್ಲಿ ೧ ಲಕ್ಷ ರೂ. ಗಳ ದರೋಡೆ

ಹೈದರಾಬಾದಿನ ಬೇಗಂಪೇಟೆಗೆ ಕೆಲವು ದರೋಡೆ ಖೋರರು ಮುಖಕ್ಕೆ ಮುಖವಾಡವನ್ನು ಹಾಕಿಕೊಂಡು ಸಿಸ್ತೂಲು, ಚೂರಿ ಮೊದಲಾದುವುಗಳನ್ನು ಹಿಡಿದು ಕೊಂಡು ಶ್ರೀಮಂತರೊಬ್ಬರ ಮನೆಗೆ ನುಗ್ಗಿ ಹೆದರಿಸಿ ೫೦ ಸಾವಿರ ರೂ ಗಳ ಮೌಲ್ಯದ ಚೀಲವನ್ನೂ, ೫೦ ಸಾವಿರ ರೂ ಬೆಲೆಬಾಳುವ ಇತರ ಸಾಮಾನುಗಳನ್ನೂ ಜೊತೆಗೆ ೬೭ ಕೊಲ ಬಂಗಾರವನ್ನೂ ತೆಗೆದುಕೊಂಡು ಹೋಗಿರುತ್ತಾರೆ

ಹೈದರಾಬಾದಿನ ಬಗ್ಗೆ ಜಿನ್ನಾರವರ ಹೇಳಿಕೆ

ಪೂರ್ವ ಸೂಚನೆಯಿಲ್ಲದೆಯೇ ಹೈದ್ರಾಬಾದಿನ ಮಜ್ಲಿಸ್ ಪ್ರತಿನಿಧಿಗಳು ಕ್ವೆಟ್ಟಾಕ್ಕೆ ಬಂದು ಸಾಕೇನ್ಸ್ಯಾ ನವ ಗೌ॥ಜಿ॥ ಜಿನ್ನಾರವರನ್ನು ಭೇಟಿಮಾಡಲು ಆವೇ ಕ್ಷಿಸಿದರು ಆಗ ಆವರು ರಾಜಕೀಯ ಸಂಸ್ಥೆಯೊಂದರ ಪ್ರತಿನಿಧಿಗಳಾಗಿ ಬಂದಿರುವುದರಿಂದ ಆವರಿಗೆ ಭೇಟಿ ಕೊಡುವುದು ಉಚಿತವಲ್ಲವೆಂದು ಭಾವಿಸಿ, ಜಿನ್ನಾರವರು ಹೈದರಾಬಾದ್ ಸಮಸ್ಯೆಯ ಬಗ್ಗೆ ಈ ರೀತಿ ತಿಳಿಸಿ ದ್ದಾರೆ —

"ಹೈದರಾಬಾದು ಸರ್ವತಂತ್ರ ಸ್ವತಂತ್ರವಾದ ರಾಜ್ಯ! ಅದು ಸರಿಯಾದ ರೀತಿಯಲ್ಲಿ ರಚಿತವಾಗಿದೆ ಭಾರತಕ್ಕೆ ಸೇರಲೂ ತಥವಾ ಸೇರದಿರಲೂ ಹೈದರಾಬಾದಿಗೆ ಪೂರ್ಣ ಅಧಿಕಾರವಿದೆ ಹೈದರಾಬಾದು ಸ್ವತಂತ್ರ ರಾಜ್ಯವಾಗಿ ಉಳಿಯಲು ಇಚ್ಛಿಸಿದ್ದಲ್ಲಿ ಅದು ಹಾಗೆ ಮಾಡಲು ಸ್ವತಂತ್ರವಿದೆ ಅಂತೆಯೆ ರಾಜ್ಯವು ಭಾರತಕ್ಕೆ ಸೇರಬೇ ಕೆಂದು ಭಾರತ ಸರ್ಕಾರವು ಬಲಾತ್ಕಾರ ಮಾಡುವುದು ಉಚಿತವಲ್ಲ ಆಯ ಕಟ್ಟಿನ ಪ್ರದೇಶದಲ್ಲಿರುವ ಹೈದರಾ ಬಾದನ್ನು ಯೂನಿಯನ್ನಿಗೆ ಸೇರಿಸಿಕೊಳ್ಳಲು ಭಾರತ ಸರ್ಕಾರ ನಾನಾ ರೀತಿಯಲ್ಲಿ ಪ್ರಯತ್ನಿಸುತ್ತಿದೆ ಕಡೆಗೆ ಯುದ್ಧವನ್ನು ಸಹ ಮಾಡಬೇಕಾದೀತು? ಎಂದು ಎಚ್ಚರಿಸುತ್ತಿದೆ ಈ ರೀತಿ ನಾಡುವುದು ತೀರ ಅನ್ಯಾಯ! ಹೈದರಾಬಾದ್ ಸಮಸ್ಯೆಯು ಬರಿಯ ಹೈದರಾಬಾದಿಗೇ ಸಂಬಂಧಿಸಿದುದಲ್ಲ ಪಾಕಿಸ್ತಾನದವರು ಸಹ ಹೈದರಾ ಬಾದಿನ ರಾಜಕೀಯವನ್ನು ಜಾಗರೂಕತೆಯಿಂದ ಅವ ಲೋಕಿಸುತ್ತಿದ್ದಾರೆ ಈ ಸಮಸ್ಯೆಯು ವಿಶ್ವದ ಮುಸ್ಲಿ ಮರೆಲ್ಲರಿಗೆ ಸಂಬಂಧಿಸಿದುದು ಒಂದು ವೇಳೆ ಹೈದರಾ ಬಾದು ದುರಂತಕ್ಕೆ ಒಳಗಾದರೆ ಆದರ ವಿಷಯದಲ್ಲಿ ಪ್ರಪಂಚದ ಮುಸ್ಲಿಮರೆಲ್ಲರ ಸಹಾನುಭೂತಿಯುಂಟೆ" ಎಂದು ಮಿ॥ ಎಂ ಎ ಜಿನ್ನಾರವರು ತಿಳಿಸಿದ್ದಾರೆ

ಉದಕಮಂಡಲದಲ್ಲಿ ಪಂಡಿತ ನೆಹರೂರವರ ಉಜ್ಜ್ವಲ ಭಾಷಣ

ಹೈದರಾಬಾದ್ ಪ್ರಶ್ನೆಯನ್ನು ಇತ್ಯರ್ಥ ಮಾಡಲು ಭಾರತ ಸರ್ಕಾರವು ಬಹಳ ಸಹನೆಯಿಂದ ವರ್ತಿಸುತ್ತಿದೆ ಒಳ್ಳೆ ಮಾತಿಗೆ ಹೈದರಾಬಾದು ಬಗ್ಗದಿದ್ದರೆ ಭಾರತ ಸರ್ಕಾರವು ಹೈದರಾಬಾದಿನ ಬಗ್ಗೆ ಬಿಗಿಯಾಗಿರಬೇಕಾಗು

ವುದು ಭಾರತಕ್ಕೆ ಸೇರಿರುವಂತೆ ಹೈದರಾಬಾದನ್ನು ಬಲಾತ್ಕಾರವಿಡೇಕೆಂಬುದು ನನ್ನ ಆಶಯವಲ್ಲ. ಆದರೆ ಭಾರತದ ಸುರಕ್ಷತೆಗೆ ಭಂಗ ಬರುವಂತಹ ಪರಿಸ್ಥಿತಿ ಒದಗಿದರೆ ಭಾರತ ಸರ್ಕಾರವು ತನ್ನ ಬಲವನ್ನು ಪ್ರಯೋಗಿಸಬೆಡವಿಧಿಯಿಲ್ಲ "

ಎಂಬುದಾಗಿ ಸಂಡಿತ ನೆಹರುರವರು ೨ ನೆಯ ತಾ। ದಿನಪ ಉದಕಮಂಡಲದಲ್ಲಿ ನೆರೆದಿದ್ದ ೫೫ ಸಾವಿರ ಜನಗಳನ್ನುದ್ದೇಶಿಸಿ ಭಾಷಣ ಮಾಡುತ್ತ ಸ್ಪಷ್ಟಪಡಿಸಿದರು

ಅನ್ನ ಬಟ್ಟೆಗಳ ಸಮಸ್ಯೆ

ರಾಜಕೀಯ ಸ್ವಾತಂತ್ರ್ಯಗಳಿಸಿದ ಮೇಲೆ ಈಗ ನಾವು ಗಳಿಸಿಕೊಳ್ಳಬೇಕಾಗಿರುವುದು ಆರ್ಥಿಕ ಸ್ವಾತಂತ್ರ್ಯ. ಪ್ರತಿಯೊಬ್ಬನಿಗೂ ಸಾಕಷ್ಟು ಅನ್ನ ಬಟ್ಟೆಗಳನ್ನು ದೊರಕಿಸಿ ಕೊಡುವುದು ದೇಶದ ಮುಂದಿರುವ ನೊಟ್ಟಮೊದಲನೆಯ ಕೆಲಸ ಅಪ್ಪಕ್ಕಿ ಹೆಚ್ಚಿಸಿ ರಾಷ್ಟ್ರದ ಸಂಪತ್ತನ್ನು ಅಧಿಕಗೊಳಿಸದೇರೇ ಕಾರಖಾನೆಯ ಕಾಲಿಗಾಕಲು ಬಡಿಕ್ಕೆತರು, ರಾಜಕೀಯ ಸ್ವಾತಂತ್ರ್ಯದ ಹಿರಿಮೆಯನ್ನು ಅರಿತುಕೊಳ್ಳಲು ಸಾಧ್ಯ " ಎಂದು ಪಂಡಿತ ನೆಹರೂರವರು ಆರ್ಥಿಕ ಸ್ವಾತಂತ್ರ್ಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ನ್ಪಷ್ಟಪಡಿಸಿದರು

ಹೈದರಾಬಾದಿನ ಪ್ರಶ್ನೆ ಜುಗುಪ್ಸೆಯಾಗಿದೆ

ಪಂಡಿತ ನೆಹರೂರವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ—ಒಂದು ಕಡೆ ಹೈದರಾಬಾದ್ ಸಂಸ್ಥಾನವು ತುಂಬಾ ಜಗುಪ್ಸೆ ಕೊಡುವುದಕ್ಕೆ ಪ್ರಾರಂಭಿಸಿದೆ ಇನ್ನೊಂದು ಕಡೆ ಕಾಶ್ಮೀರದಲ್ಲಿ ದಾಳಿಕಾರರನ್ನು ಹಿಡಿಸಿ ಸಂಸ್ಥಾನವನ್ನು ರಕ್ಷಿಸುವ ಜವಾಬ್ದಾರಿ ಭಾರತ ಸರಕಾರದ ಮೇಲೆ ಬಿದ್ದಿದೆ ಮತ್ತಿನ್ನೊಂದು ಸಮಸ್ಯೆಯೆಂದರೆ ಭಾಷಾನುಗುಣ ಪ್ರಾಂತಗಳ ರಚನೆ, ಎಂಬುದಾಗಿ ತಿಳಿಸಿದರು

ಭಾರತದಿಂದ ಹೊರಗಿರಲು ಸಾಧ್ಯವಿಲ್ಲ

ಪಂಡಿತ ನೆಹರೂರವರು ಸಂಸ್ಥಾನಗಳ ಇತಿಹಾಸವನ್ನು ವರ್ಣಿಸುತ್ತ ಪ್ರಬ್ರಿಟಿಷ್ ಸಾರ್ವಭೌಮತ್ವವು ಹೋದ ಮೇಲೆ ಸಂಸ್ಥಾನಗಳ ವರ್ಗವೇ ಮಾಯವಾದ ಹಾಗೆ! ಭಾರತದ ಎಲ್ಲಾ ಸಂಸ್ಥಾನಗಳಲ್ಲೂ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದರೂ ಹೈದ್ರಾಬಾದಿನಲ್ಲಿ ಮಾತ್ರ ಇಲ್ಲ

ಭಾರತದಲ್ಲಿ ಕ್ರಾಂತಿಕಾರಕ ಮಾರ್ಪಾಟುಗಳಾಗುತ್ತಿರುವಾಗ ಹೈದ್ರಾಬಾದು ಇನ್ನೂ ನಿದ್ದೆಯಲ್ಲೇ ಇರುವುದು ತುಂಬಾ ಕೋಡಿಪಿಯ!

ಹೈದ್ರಾಬಾದಿನ ಭೌಗೋಳಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಪರಿಶೀಲಿಸಿದರೆ ಹೈದ್ರಾಬಾದು ಭಾರತದ ಹೊರಗೆ ಇರಲು ಸಾಧ್ಯವಿಲ್ಲ

ಆದುದರಿಂದ ಹೈದ್ರಾಬಾದ್ ಸಮಸ್ಯೆಯನ್ನು ಬಗೆಹರಿಸಲು ಭಾರತ ಸರ್ಕಾರವು ಬಹಳ ಸಂಯಮದಿಂದ ವರ್ತಿಸುತ್ತಿದೆ

ಹೈದ್ರಾಬಾದು ಇಂಡಿಯ ಯೂನಿಯನ್ನಿಗೆ ಸೇರಿ ಭಾರತದ ಬಹು ಮುಖ್ಯ ಭಾಗವಾಗಿ ಉಳಿಯಲೆಂಬುದೇ ಭಾರತ ಸರ್ಕಾರದ ಆಶಯ ! ಆದರೆ ಅನೇಕ ಕಾರಣಗಳಿಂದ ಒಸ್ಸಂದವಾಗದೆ, ನಿಧಾನವಾಗುತ್ತಿದೆ

ಹೈದ್ರಾಬಾದಿನ ಬಗ್ಗೆ ಭಾರತ ಸರಕಾರವು ಬಹಳ ನಿಧಾನ ಮನೋವೃತ್ತಿಯನ್ನು ತಾಳಿದೆಯೆಂದು ಕೆಲವರೂ, ಹೈದ್ರಾಬಾದಿನ ಮೇಲೆ ಭಾರತ ಸರ್ಕಾರವು ಗದೆ ಎತ್ತಿನಿಂತದೆ ಎಂದು ಇನ್ನು ಕೆಲವರೂ ಹೇಳುತ್ತಿರುವುದು ಸರಿಯಲ್ಲ ಒಳ್ಳೇ ಮಾತಿನಿಂದಲೇ ಹೈದ್ರಾಬಾದನ್ನು ದಾರಿಗೆ ತರಬೇಕೆಂಬುದು ಭಾರತ ಸರ್ಕಾರದ ಇಚ್ಛೆ! ಆದಕ್ಕೆ ಆ ಸಂಸ್ಥಾನವು ಜಗ್ಗದಿದ್ದರೆ ಬಿಗಿಯಾದ ಕಾರ್ಯಕ್ರಮವನ್ನು ಭಾರತ ಸರ್ಕಾರವು ಕೈಗೊಳ್ಳದಿರಲಾರದು

ಭಾಷಾವಾರುಪ್ರಾಂತರಚನೆ ಇಷ್ಟವಿಲ್ಲ!

ಅತ್ಯಾವಶ್ಯಕ ಸಮಸ್ಯೆಗಳನ್ನು ಬಿಡಿಸುವುದನ್ನು ಬಿಟ್ಟು ಭಾರತದ ಏಕ್ಯಕ್ಕೆ ಲೋಪ ತಂದೊಡ್ಡುವಂತಹ ಪ್ರತ್ಯೇಕ ಭಾಷಾನುಗುಣ ಪ್ರಾಂತ್ಯಗಳ ರಚನೆಯ ಕಡೆಗೆ ಗಮನ ಕೊಡುವುದು ಈಗ ತಮಗೆ ಇಷ್ಟವಿಲ್ಲವೆಂದು ಪಂಡಿತ ನೆಹರೂರವರು ತಮ್ಮ ಭಾಷಣದಲ್ಲಿ ಸ್ಪಷ್ಟಪಡಿಸಿದರು.

ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವ

ಮದ್ದೂರು ತಾ॥ ಹಂಕರ ಕೂಡಲಸಂಗಮ ಶಿವ ಕ್ಷೇತ್ರವೆನಿಸಿದ್ದಮಿಕದಲ್ಲಿ ವೈಶಾಖ ಶುದ್ಧ ೫ ದಿನಪ ಪ್ರಾತಃಕಾಲ ಶ್ರೀದಾರುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಏಕಾದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆ ಶ್ರೀದಾರುಕಾಕ್ಷೋತ್ಸವ ಶತನಾಮಾವಳಿ ಪಾರಾಯಣಾದಿಗಳು ನಡೆದುವು ಮಧ್ಯಾಹ್ನ ಗಣಾರಾಧನೆಯು ನೆರವೇರಿತು ಸಾಯಂಕಾಲ ೬ ಘಂಟೆಯ ಮೇಲೆ ಮಹದ ದೊಡ್ಡಿ ಗ್ರಾಮದಲ್ಲಿ ಜಗದಾಚಾರ್ಯರ ಉತ್ಸವವು ವೈಭವದೊಡನೆ ನೆರವೇರಿಸಲ್ಪಟ್ಟಿತು ವೈಶಾಖ ಶುದ್ಧ ಸಂಚಮಿಯಿಂದ ಬಹುಳ ಬದಿಗೆಯವರೆಗೆ ಪ್ರತಿ ದಿನವೂ ಶ್ರೀ ಮಹದಲ್ಲಿ ಮಾಸ್ಟರ್ ಮಾದಪ್ಪನವರಿಂದ ಸಿದ್ಧಾಂತ ಶಿಖಾಮಣಿ ಪ್ರವಚನವೂ ಸದರಿ ಮಹದ ಶ್ರೀಸದಾಶಿವ ಸ್ವಾಮಿಗಳವರಿಂದ ಉಜ್ಜಯಿನೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಪುರಾಣಪ್ರವಚನವೂ ನಡೆಯುತ್ತಿತ್ತು ಪ್ರವಚನಕಾರರು ಶ್ರೀಗುರುಗಳವರ ಅದ್ಭುತಲೀಲೆಗಳನ್ನೂ ಮತ್ತು ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳಿಯರು ಗುರುವರ್ಗಕ್ಕೂ ವೀರ ಶೈವ ಸಮಾಜಕ್ಕೂ ಮಾಡಿರುವ ಮಾಡುತ್ತಿರುವ ಕಾರ್ಯಕಲಾಪಗಳನ್ನೂ ಹೃದಯಂಗಮವಾಗಿ ಉಪದೇಶಿಸುತ್ತಿದ್ದರು ಶ್ರೋತೃಗಳು ಇವುಗಳನ್ನೆಲ್ಲಾ ಕೇಳಿ ಪರಮಾನಂದಭರಿತರಾಗಿ ಮಧ್ಯೆ ಮಧ್ಯೆ ಜಗದಾಚಾರ್ಯರ ಜಯಘೋಷಗಳನ್ನು ಮಾಡುತ್ತಿದ್ದರು ತಾ॥ ೫೪ ೫-೪ ನೆಯ ನೋಮವಾರದ ದಿವಸ ಕಾರ್ಯಕ್ರಮವು ಕೊನೆಗೆಂಡಿತು ಆ ದಿನಪ ಸಾಯಂಕಾಲ ೬ ಘಂಟೆಗೆ ಮಡೇನಹಳ್ಳಿ ಗ್ರಾಮದಲ್ಲಿ ಜಗದಾಚಾರ್ಯರ ಮಹೋತ್ಸವವು ಪಂಚಾಚಾರ್ಯ ಬಜನ ಸಂಘದವರಿಂದಲೂ ನಾನಾ ವಿಧ ವಾದ್ಯಗೈಭವದಿಂದಲೂ ನಂದಿ ಧ್ವಜಸಮೇತವಾಗಿ ಪುಷ್ಪಸಲ್ಲಕ್ಕಿಯಲ್ಲಿ ಮಹಾಸಂಭ್ರಮ ದೊಡನೆ ನೆರೆದಿರುವ ಅಗ್ಗೆ ಶ್ರೀಮಠದ ಶ್ರೀ ಸದಾಶಿವ ಸ್ವಾಮಿಯವರು ಪ್ರತಿಯೊಬ್ಬರೂ ಆಚಾರ್ಯರ ಜಯಂತಿ ಗುನ್ನು ಮಹಾಭಕ್ತಿಯೊಡನೆ ನೆರವೇರಿಸಬೇಕೆಂದು ಭಾಷಣಮಾಡಿದರು ಆಮೇಲೆ ಆಚಾರ್ಯರ ಜಯ ಘೋಷದೊಡನೆ ಸಭೆಯು ಮುಕ್ತಾಯವಾಯಿತು

ಓರ್ವ ಗುರುಭಕ್ತ

ನಿಮಾಹ ಮಹೋತ್ಸವ ಬಳ್ಳಾರಿ

ಬಳ್ಳಾರಿ ನಿಗರದಲ್ಲಿರುವ ಶ್ರೀಮಂತ ಗಾಳಿ ಕರಿಬಸಪ್ಪನವರ ಗೃಹದಲ್ಲಿ ಇದೇ ಸರ್ವಧಾರಿ ಸಂ॥ ವೈಶಾಖ ಬಹು ೫ ಶುಕ್ರವಾರದ ದಿವಸ ಮಿ॥ ರಾ॥ ಗಾಳಿ ಕರಿಬಸಪ್ಪನವರ ಆಣ್ಣನವರ ಪುತ್ರ ಮಿ॥ ರಾ॥ ಸನ್ಮಲ್ಲಕಾಪ್ಪನವರ ಪುತ್ರಿ ಚಿ॥ ಸೌ॥ ಶಂಕರಮ್ಮನಿಗೂ ರಾಜೇಶ್ವೆನ್ನೂರು ಪಾಲ್ಗೂರು ಕುದುರೇಕಾರ ಮಿ॥ ರಾ॥ ನೀರಭದ್ರಪ್ಪನವರ ಜ್ಯೇಷ್ಠ ಪುತ್ರ ಚಿ॥ ವೀರಪ್ಪನಿಗೂ, ಮತ್ತು ಗಾಳಿ ಕರಿಬಸಪ್ಪನವರ ಆಣ್ಣನವರ ಪುತ್ರ ಮಿ॥ ರಾ॥ ದೊಡ್ಡ ಶರಣಪ್ಪನವರ ಜ್ಯೇಷ್ಠ ಪುತ್ರ ಚಿ॥ ಚಿನ್ನಪ್ಪನಿಗೂ ದಾವಣಗೆರೆಯಲ್ಲಿರುವ ಬೆಳಗಾಂವಿ ಚರಲಿಂಗಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ನೆರೆಳೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣ ಕ್ಷೋತ್ಸವ ನಭೂತರ ಕಡೆಯಿಂದ ಸಮರ್ಪಿಸಿದ 11 ರೂ ಗಳು ವೇಳೆ ಕಳ್ಳುಹೊಳೆ ಮಠದ ಕೆಂಪಯ್ಯ ನವರು ಮತ್ತು ವೇ॥ ಪಂಚಾಕ್ಷರಿ ಶಾಸ್ತ್ರಿಗಳವರು ಮಠದ ನಂಜುಂಡಾರಾಧ್ಯರು ಇವರ ದ್ವಾರಾ ತಲಪಿರುತ್ತವೆ

ಧಾರವಾಡ ಡಿ॥ ಅಕ್ಕಿ ಆಲೂರು ಗ್ರಾಮದಲ್ಲಿರುವ ವೀರಭದ್ರಾಚಾರ್ಯ ಮಠದ ಶ್ರೀ॥ ಪಟ್ಟಾಧಿಕಾರಿ ಶಿವಾಚಾರ್ಯಸ್ವಾಮಿಗಳವರ ಅಂದೋಲಿಕಾ ಮಹೋತ್ಸವವು ತಾ॥ ೩೭ ೫-೪ ನೇ ದಿನಪ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸವ ಸಮರ್ಪಿಸಿದ 5 ರೂ ಗಳು ವೇಳೆ ಪರ್ವತ ಇಲಾಖಾದಾರ ಷಣ್ಮುಖಯ್ಯನವರ ದ್ವಾರಾ ತಲಪಿರುತ್ತವೆ

ಬಳ್ಳಾರಿ ಡಿ॥ ಹೊಸಪೇಟೆ ತಾ॥ ಬೈಲುವದ್ದಿಗೇರಿ ಶ್ರೀಗಿದ್ದೇಶ್ವರ ಬೆಟ್ಟದಲ್ಲಿ ನೊರೆಬದ ಶ್ರೀ॥ ಪಟ್ಟಾ ಧಿಗಂಗಾಧರತಿರ್ಥಾಚಾರ್ಯಸ್ವಾಮಿಗಳವರು ತಿನಲಿಂಗಾ ಸ್ನಾನ ವ್ರತವನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ಕಾಕಬಾಳಗ್ರಾಮದ ಧರ್ಮವೀರ ರಾಜಾಪುರ ಸಿದ್ಧಪ್ಪನವರು ಪ್ರಭಾಪೋಷಣಕ್ಷೋತ್ಸವ ಸಮರ್ಪಿಸಿದ 5 ರೂ ಗಳು ಕಾಕಬಾಳ ಕಂಚಾಳಿ ಮರದ ವೇ॥ ಎಜ್ ಎಸ್ ತಿವಲಿಂಗಯ್ಯನವರ ದ್ವಾರಾ ತಲಪಿರುತ್ತವೆ

ಧಾರವಾಡ ಡಿ॥ ಹುಬ್ಬಳ್ಳಿ ನಗರದಲ್ಲಿರುವ ಶ್ರೀಮಂತ ಒಳ್ಳೇಳ್ಳಿ ತೀರ್ಥಪ್ಪನವರ ಪುತ್ರ ಚಿ॥ ಪಂಚಾಕ್ಷರಿ ಎಂಬ ವರನಿಗೆ ಹೊಸಪೇಟೆ ಗ್ರಾನುದ ಶ್ರೀಮಂತ ಜಾಲಿ ಬಸಪ್ಪನವರ ಪುತ್ರಿ ಚಿ॥ ಸೌ॥ ಚನ್ನಮ್ಮನನ್ನು ಕೊಟ್ಟು ವೈಶಾ ಬಹುಳ ೪ ಗುರುವಾರ ದಿನಪ ವಿವಾಹ ಮಹೋತ್ಸವನನ್ನು ಮಹಾ ವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 5 ರೂ ಗಳು ವೇ॥ ಆಡವಪ್ಪಯ್ಯ ತಿಗ್ಗನಮಠ ಇವರ ದ್ವಾರಾ ತಲಪಿರುತ್ತವೆ

ಬೆಂಗಳೂರು ಸಿಟಿಯಲ್ಲಿರುವ ವೇ॥ ಧರ್ಮಪ್ರಕಾಶ ಎನ್ ರುದ್ರಯ್ಯನವರ ಆಜ್ಞಾನುದಾದ ನಂದಿಗುಡಿ ಮಹಾಂತೇಶ ಮರದ ಲೇಟ್ ಅಪ್ಪಣ್ಣದೇವರ ಪುತ್ರ ಚಿ॥ ಎನ್ ರಾಜಶೇಖರಯ್ಯನವರ ವರನಿಗೆ ಬೆಂಗಳೂರು ಸಿಟಿ ಆಡಿಸನಲ್ ಫೈನ್ಸ್‌ಕಾಸ್ ಮ್ಯಾಜೆಸ್ಟೇಟ್ ವಿ ಚಿನ್ನಯ್ಯನವರ ಪುತ್ರಿ ಚಿ॥ ಸೌ॥ ಗಿರಿಜಾಂಬಾ ಎಂಬ ಕನ್ಯೆಯನ್ನು ಕೊಟ್ಟು ತಾ॥ ೩೭ ೫-೪ ನೆಯ ದಿವಸ ತುಮಕೂರು ಟೌನ್ನಿನ್ನಲ್ಲಿರುವ ಧರ್ಮಪ್ರಕಾಶ ಎನ್ ರುದ್ರಯ್ಯನವರ ಬಂಗ್ಲೆಯಲ್ಲಿ ವಿವಾಹ ಮಹೋತ್ಸವವು ಮಹಾ ವೈಭವದೊಡನೆ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 5 ರೂ ಗಳು ವೇ॥ ಸಿಕತಲ್ಲುಮಠದ ಎಸ್ ರೇವಣಾರಾಧ್ಯರ ದ್ವಾರಾ ತಲಪಿರುತ್ತವೆ

ಮದ್ದೂರು ತಾ॥ ಮರದದೊಡ್ಡಿ ಮಠದಲ್ಲಿ ವೈಶಾ ಶುದ್ಧ ೫ ಗುರುವಾರ ದಿವಸ ನೆರೆಳೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿ 2 ರೂ. ಗಳು ಸದರಿಮರದ ಶ್ರೀಸದಾಶಿವಸ್ವಾಮಿಯವರ ದ್ವಾರಾ ತಲಪಿರುತ್ತವೆ

ಹೊಸಪೇಟೆ ತಾ॥ ಪಾಪಿನಾಯಕನಹಳ್ಳಿಗ್ರಾಮದ ಪಾಟೀಲ ಸುಬ್ಬನ ಗೌಡರು ತಮ್ಮ ಗೃಹದಲ್ಲಿ ಶ್ರೀ ಮೋರಿಪದ ಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿ ಗಣಾರಾಧನೆಯನ್ನು ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 1 ರೂ ಯು ಮಿ॥ ರಾ॥ ಕೊಡಾಲು ಅಯ್ಯಪ್ಪನವರ ದ್ವಾರಾ ತಲಪಿರುತ್ತದೆ.

ಸ್ವೀಕಾರ

ಬಳ್ಳಾರಿ ಟೌನ್ನಿನ್ನಲ್ಲಿರುವ ಶ್ರೀಮಂತ ಗಾಳಿ ಕರಿಬಸಪ್ಪನವರ ಗೃಹದಲ್ಲಿ ಸದರಿಯವರ ಆಣ್ಣನವರ ಪುತ್ರ ಮಿ॥ ರಾ॥ ಸನ್ಮಾಕರಣಪ್ಪನವರ ಪುತ್ರಿ ಚಿ॥ ಸೌ॥ ಶಂಕರ ಮ್ಮನಿಗೂ ರಾಜೇಶ್ವೆನ್ನೂರು ಪಾಲ್ಗೂರು ಕುದುರೇಕಾರ ಮಿ॥ ರಾ॥ ವೀರಭದ್ರಪ್ಪನವರ ಜ್ಯೇಷ್ಠ ಪುತ್ರ ಚಿ॥ ವೀರಪ್ಪನಿಗೂ ಮತ್ತು ಗಾಳಿ ಕರಿಬಸಪ್ಪನವರ ಆಣ್ಣನವರ ಪುತ್ರ ಮಿ॥ ರಾ॥ ದೊಡ್ಡ ಶರಣಪ್ಪನವರ ಜ್ಯೇಷ್ಠ ಪುತ್ರ ಚಿ॥ ಚಿನ್ನಪ್ಪನಿಗೂ ದಾವಣಗೆರೆಯಲ್ಲಿರುವ ಬೆಳಗಾಂವಿ ಚರಲಿಂಗಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ನೆರೆಳೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ನಭೂತರ ಕಡೆಯಿಂದ ಸಮರ್ಪಿಸಿದ 11 ರೂ ಗಳು ವೇಳೆ ಕಳ್ಳುಹೊಳೆ ಮಠದ ಕೆಂಪಯ್ಯನವರು ಮತ್ತು ವೇ॥ ಪಂಚಾಕ್ಷರಿ ಶಾಸ್ತ್ರಿಗಳವರು ಮಠದ ನಂಜುಂಡಾರಾಧ್ಯರು ಇವರ ದ್ವಾರಾ ತಲಪಿರುತ್ತವೆ

ಧಾರವಾಡ ಡಿ॥ ಅಕ್ಕಿ ಆಲೂರು ಗ್ರಾಮದಲ್ಲಿರುವ ವೀರಭದ್ರಾಚಾರ್ಯ ಮಠದ ಶ್ರೀ॥ ಪಟ್ಟಾಧಿಕಾರಿ ಶಿವಾಚಾರ್ಯಸ್ವಾಮಿಗಳವರ ಅಂದೋಲಿಕಾ ಮಹೋತ್ಸವವು ತಾ॥ ೩೭ ೫-೪ ನೇ ದಿನಪ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 5 ರೂ ಗಳು ವೇಳೆ ಪರ್ವತ ಇಲಾಖಾದಾರ ಷಣ್ಮುಖಯ್ಯನವರ ದ್ವಾರಾ ತಲಪಿರುತ್ತವೆ

ಬಳ್ಳಾರಿ ಡಿ॥ ಹೊಸಪೇಟೆ ತಾ॥ ಬೈಲುವದ್ದಿಗೇರಿ ಶ್ರೀಗಿದ್ದೇಶ್ವರ ಬೆಟ್ಟದಲ್ಲಿ ನೊರೆಬದ ಶ್ರೀ॥ ಪಟ್ಟಾ ಧಿಗಂಗಾಧರತಿರ್ಥಾಚಾರ್ಯಸ್ವಾಮಿಗಳವರು ತಿನಲಿಂಗಾ ಸ್ನಾನ ವ್ರತವನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ಕಾಕಬಾಳಗ್ರಾಮದ ಧರ್ಮವೀರ ರಾಜಾಪುರ ಸಿದ್ಧಪ್ಪನವರು ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 5 ರೂ ಗಳು ಕಾಕಬಾಳ ಕಂಚಾಳಿ ಮರದ ವೇ॥ ಎಜ್ ಎಸ್ ತಿವಲಿಂಗಯ್ಯನವರ ದ್ವಾರಾ ತಲಪಿರುತ್ತವೆ

ಧಾರವಾಡ ಡಿ॥ ಹುಬ್ಬಳ್ಳಿ ನಗರದಲ್ಲಿರುವ ಶ್ರೀಮಂತ ಒಳ್ಳೇಳ್ಳಿ ತೀರ್ಥಪ್ಪನವರ ಪುತ್ರ ಚಿ॥ ಪಂಚಾಕ್ಷರಿ ಎಂಬ ವರನಿಗೆ ಹೊಸಪೇಟೆ ಗ್ರಾನುದ ಶ್ರೀಮಂತ ಜಾಲಿ ಬಸಪ್ಪನವರ ಪುತ್ರಿ ಚಿ॥ ಸೌ॥ ಚನ್ನಮ್ಮನನ್ನು ಕೊಟ್ಟು ವೈಶಾ ಬಹುಳ ೪ ಗುರುವಾರ ದಿನಪ ವಿವಾಹ ಮಹೋತ್ಸವನನ್ನು ಮಹಾ ವೈಭವದೊಡನೆ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 5 ರೂ ಗಳು ವೇ॥ ಆಡವಪ್ಪಯ್ಯ ತಿಗ್ಗನಮಠ ಇವರ ದ್ವಾರಾ ತಲಪಿರುತ್ತವೆ

ಬೆಂಗಳೂರು ಸಿಟಿಯಲ್ಲಿರುವ ವೇ॥ ಧರ್ಮಪ್ರಕಾಶ ಎನ್ ರುದ್ರಯ್ಯನವರ ಆಜ್ಞಾನುದಾದ ನಂದಿಗುಡಿ ಮಹಾಂತೇಶ ಮರದ ಲೇಟ್ ಅಪ್ಪಣ್ಣದೇವರ ಪುತ್ರ ಚಿ॥ ಎನ್ ರಾಜಶೇಖರಯ್ಯನವರ ವರನಿಗೆ ಬೆಂಗಳೂರು ಸಿಟಿ ಆಡಿಸನಲ್ ಫೈನ್ಸ್‌ಕಾಸ್ ಮ್ಯಾಜೆಸ್ಟೇಟ್ ವಿ ಚಿನ್ನಯ್ಯನವರ ಪುತ್ರಿ ಚಿ॥ ಸೌ॥ ಗಿರಿಜಾಂಬಾ ಎಂಬ ಕನ್ಯೆಯನ್ನು ಕೊಟ್ಟು ತಾ॥ ೩೭ ೫-೪ ನೆಯ ದಿವಸ ತುಮಕೂರು ಟೌನ್ನಿನ್ನಲ್ಲಿರುವ ಧರ್ಮಪ್ರಕಾಶ ಎನ್ ರುದ್ರಯ್ಯನವರ ಬಂಗ್ಲೆಯಲ್ಲಿ ವಿವಾಹ ಮಹೋತ್ಸವವು ಮಹಾ ವೈಭವದೊಡನೆ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 5 ರೂ ಗಳು ವೇಳೆ ಸಿಕತಲ್ಲುಮಠದ ಎಸ್ ರೇವಣಾರಾಧ್ಯರ ದ್ವಾರಾ ತಲಪಿರುತ್ತವೆ

ಮದ್ದೂರು ತಾ॥ ಮರದದೊಡ್ಡಿ ಮಠದಲ್ಲಿ ವೈಶಾ ಶುದ್ಧ ೫ ಗುರುವಾರ ದಿವಸ ನೆರೆಳೇರಿದ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿ 2 ರೂ. ಗಳು ಸದರಿಮರದ ಶ್ರೀಸದಾಶಿವಸ್ವಾಮಿಯವರ ದ್ವಾರಾ ತಲಪಿರುತ್ತವೆ

ಹೊಸಪೇಟೆ ತಾ॥ ಪಾಪಿನಾಯಕನಹಳ್ಳಿಗ್ರಾಮದ ಪಾಟೀಲ ಸುಬ್ಬನ ಗೌಡರು ತಮ್ಮ ಗೃಹದಲ್ಲಿ ಶ್ರೀ ಮೋರಿಪದ ಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿ ಗಣಾರಾಧನೆಯನ್ನು ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಷೋತ್ಸರ ಸಮರ್ಪಿಸಿದ 1 ರೂ ಯು ಮಿ॥ ರಾ॥ ಕೊಡಾಲು ಅಯ್ಯಪ್ಪನವರ ದ್ವಾರಾ ತಲಪಿರುತ್ತದೆ.

ದಿಲ್ಲಿಯು ಕೆಂಪುಕೋಟೆಯಲ್ಲಿ ಗಾಂಧೀಜಿಯವರ ಕೊಲೆಯ ವಿಚಾರಣೆ

ಗಾಂಧಿಯವರ ಕೊಲೆಯ ಒಗ್ಗೆ ಮುಖ್ಯ ಆಪಾದಿಯಾಗಿರುವ ಗೋಡ್ಸೆ ಮತ್ತು ಇತರ ಆಪಾದಿತರ ವಿಚಾರಣೆಯು ತಾ|| ೫ ೫೪೪ ನೆಯ ದಿನಸ ದಿಲ್ಲಿ ಕೆಂಪು ಕೋಟೆಯ ಸ್ಪೆಷಲ್ ಕೋರ್ಟಿನಲ್ಲಿ ಪ್ರಾರಂಭವಾಯಿತು ವಿಚಾರಣೆ ನಡೆಸಲು ಅನುಸರಿಸಬೇಕಾದ ಕ್ರಮದ ಒಗ್ಗೆ ಎರಡು ಗಂಟೆಕಾಲ ಚರ್ಚೆ ನಡೆದು ಆರ್ಡರ್ ಮಾಡಲಾಯಿತು ಜೂನ್ ೫೫ ನೇ ತಾ|| ನಿಂದ ಪ್ರತಿದಿನವೂ ವಿಚಾರಣೆಯು ನಡೆಯುವುದು

ಆಪಾದಿತರ ಮೇಲೆ ಪೋಲೀಸರು ಚಾರ್ಜ್‌ಷೀಟು ಹಾಕಿದ ಮೇಲೆ ನ್ಯಾಯಾಧೀಶರು ವಿವರಣೆ ಇತ್ತು, ಡಿನೆನ್ಸ್ ವಕೀಲರ ಒಗ್ಗೆ ಆಪಾದಿತರನ್ನು ಪ್ರಶ್ನಿಸಿದರು ೭ ಜನ ಆಪಾದಿತರು ತಮ್ಮ ವಕೀಲರನ್ನು ತಾವೇ ನೇಮಿಸಿಕೊಳ್ಳುವುದಾಗಿ ತಿಳಿಸಿದರು ಡಿ ಆರ್ ಒಡ್ಗೆ ಮತ್ತು ಮದ್ರಾಲ್ ಇವ್ಹರು ತಮಗೆ ವಕೀಲರೇ ಬೇಡವೆಂದರು

ಕೆಂಪುಕೋಟೆಯ ಸುತ್ತಲೂ ವಿಶೇಷ ರಕ್ಷಣೆಯ ವ್ಯವಸ್ಥಮಾಡಲಾಗಿದೆ ಕೋರ್ಟಿನ ಜಾಲಿನ ಸುತ್ತಲೂ ಮ. ಳ್ಳು ತಂಕಿ ಹೊರಬರುವಷ್ಟರದೆ ಶಸ್ತ್ರ ಸಜ್ಜಿತ ಸೈನಿಕರು ಕಾವಲಿರುವರು ಕೋರ್ಟಿಗೆ ತರುವ ಟೈಪರೈಟರುಗಳನ್ನೂ ಮತ್ತು ಕ್ಯಾಮರಗಳನ್ನೂ ಪರೀಕ್ಷಿಸಿದರು ಪ್ರೇಕ್ಷಕರಾಗಿ ಒಬೆಬ ಪ್ರತಿಯೊಬ್ಬರನ್ನೂ ಸೂಕ್ಷ್ಮವಾಗಿ ಪರೀಕ್ಷಿಸಲಯಿತು ಸುಮಾರು ೧೦೦ ಜನ ಪ್ರತಿಕೋರ್ಟಗಳಾಗಿ ಗಳೂ ಕ್ಯಾಮರೋದ್ಯೋಗಿಗಳೂ ಬಂದಿದ್ದರು ಇವರಲ್ಲಲ್ಲ ಪಾಸುಕೊಡಲಾಗಿತ್ತು

ಇತರ ವಿವರಗಳು

೧೦ ಘಂಟೆಗೆ ಆಪಾದಿತರನ್ನು ಕೋರ್ಟಿಗೆ ಕರೆತರಲಾಯಿತು ಗೋಡ್ಸೆಯವರು ಮೊಟ್ಟಮೊದಲು ಕೋರ್ಟು ಡಾಕ್‌ನ್ನಲ್ಲಿ ಆಸನದಲ್ಲಿ ಕುಳಿತರು ನಾರಾಯಣ ದತ್ತಾತ್ರೇಯ ಆಪ್ಟೆ ಅಲ್ಲಾಯೇ ಕುಳಿತರು ಇತರ ಆಪಾದಿತರಿಂದ ವಿಷ್ಣುರಾಮಕೃಷ್ಣ ಕಾರ ಕಾರೆ, ದಿಗಂಬರ್ ರಾಮಚಂದ್ರ ಬಂಡ್ಗೆ ಮದನಲಾಲ್, ಗೋಪಾಲ್ ವಿನಾಯ್ ಗೋಡ್ಸೆ ಶಂಕರ ಕೃಷ್ಣಯ್ಯ, ವಿನಾಯಕ ದಾಮೋದರ್ ಸಾವರ್ಕರ್ ಮತ್ತು ಡಿ ಎಸ್ ಪರಾಚೂರೆ ಇವರ ಹಿಂದಿನ ಸಾಲಿನಲ್ಲಿ ಕುಳಿತುಕೊಂಡರು

ಸಾವರ್ಕರ್‌ರವರಿಗೆ ಒಪಾಯೋಗ್ಯದ ನಿಮಿತ್ತ ಕುರ್ಚಿ ಸೀಟ್ ಕೊಡಲಾಗಿತ್ತು

ಬೊಂಬಾಯಿ ಅಡ್ವೊಕೇಟ್ ಜನರಲ್ ಶ್ರೀ ಸಿ ಕೆ ದಫ್ತಾರಿಯವರು ಜಾರ್ಜುಷೀಟನ್ನು ಓದಿದರು ಪ್ರಾಸಿಕ್ಯೂಷನ್ ಪರ ವಾದಿಸುವ್ವರಲ್ಲಿ ಶ್ರೀ ದಫ್ತಾರಿಯವರಿಗೆ ಶ್ರೀ ಎ ಕೆ ಬಿಗಾರ್ ರಾಘವಹದ್ದೂರ್ ಜ್ಞಾಲಾ ಪ್ರಸಾದ್ ಪಂಡಿತ್ ರಾಕುರದ್ದಾ ಜೆ ಪಿ ನಜೀರ್ ಸಾಲಾ ವಂಶಾಂವದರು ಸಹಾಯ ಮಾಡುವರು

ಆಪರಾಧಿಗಳ ಪರವಾಗಿ ವಕೀಲರು

ಭೋಪಟ್ಕರ್ ಶ್ರೀ ಬಾನರ್ಜಿ ಜಮ್ನಾದಾಸ್ ಮೆಹ್ತಾ ಗಣಪತಿರಾಯ್ ಮತ್ತು ಇನಾಂದಾರ್

ಆಪಾದಿತರು ಹರ್ಷಚಿತ್ತರಾಗಿದ್ದರು

ಆಪಾದಿತರು ಸಂತೋಷದಿಂದ ಇದ್ದರು ಸಾವರ್ಕರ್ ರವರು ಎಲ್ಲ ವಿಚಾರಗಳಿಗೂ ಗಮನ ಕೊಡುತ್ತಿದ್ದರು ಗೋಡ್ಸೆಯವರು ಮೌನವಾಗಿ ಕುಳಿತಿದ್ದರು

ಪ್ರಾಸಿಕ್ಯೂಷನ್‌ನವರು ಹೂಡಿರುವ ಚಾರ್ಜುಷೀಟಿನಲ್ಲಿ ಇನ್ನೂ ಮೂವರ ಹೆಸರನ್ನು ಸೇರಿಸಲಾಗಿದೆ ಅವರು ಗಂಗಾಧರ ಸೆಹಾರಾಮ ಧನವಟೆ, ಗಂಗಾಧರ ಜಡ್ಡಿ ಮತ್ತು ಸೂರ್ಯದೇವ ಶರ್ಮ ಈ ಮೂವರು ಇನ್ನೂ ಪೋಲೀಸರ ಕೈಗೆ ಸಿಕ್ಕಿಲ್ಲ

ಆಪಾದಿತರ ಸೂಕ್ಷ್ಮ ಪರಿಚಯ

ಮುಖ್ಯ ಆಪಾದಿತರಾದ ನಾಥೂರಾಂ ಮಹಾದೇವ ಬ್ರಾಹ್ಮಣ ಮನೆತನಕ್ಕೆ ಸೇರಿದವರು ಇವರ ವಯಸ್ಸು ೩೬ 'ಹಿಂದೂರಾಷ್ಟ್ರ' ಮತ್ತು 'ಅಗ್ರಣಿ' ಎಂಬ ಎರಡು ಪತ್ರಿಕೆಗಳ ಸಂಪಾದಕರಾಗಿದ್ದರು ಇವರ ವಿದ್ಯಾಭ್ಯಾಸ ಸಾಂಗ್ಲಿ ಸಂಸ್ಥಾನದಲ್ಲಿ ನಡೆಯಿತು ಇವರ ತಂದೆತಾಯಿಗಳು ಮತ್ತು ಇಬ್ಬರು ಸಹೋದರರು ರತ್ನಗಿರಿ ಜಿಲ್ಲೆಯಲ್ಲಿ ವಾಸವಾಗಿರುತ್ತಾರೆ

ಗೋಪಾಲ ವಿನಾಯಕ ಗೋಡ್ಸೆ—ನಾಥೂರಾಂ ಗೋಡ್ಸೆಯ ತಮ್ಮ, ವಯಸ್ಸು ೩೭ ಕಳೆದ ಯುದ್ಧದಲ್ಲಿ ಸೈನ್ಯಕ್ಕೆ ಸೇರಿ ಸೇವೆ ಸಲ್ಲಿಸಿದರು

ಎನ್ ಡಿ ಆಪ್ಟೆ—ಇವರು ಗೋಡ್ಸೆಯ ಸಹೋದ್ಯೋಗಿ ವಯಸ್ಸು ೩೬ 'ಹಿಂದೂರಾಷ್ಟ್ರ' ಪತ್ರಿಕೆಯ ಮೂಲೀಕರು ಇವರು ಪ್ರಸಿದ್ಧ ಚರಿತ್ರಕಾರರಾದ ಶ್ರೀ ದಶ್ತೋಪಂತ ಆಪ್ಟೆಯವರ ಪುತ್ರರು ಅಹಮದ್ ನಗರದ ಮಿಷನ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು

ಕಾರ ಕಾರೆ—ಅಹಮದ್ ನಗರದ ಹೋಟಲೊಂದರ ವೈಟಲೀಕರು

ಡಿ ಆರ್ ಬಾಡ್ಗೆ ಪೂನಾದಲ್ಲಿ ಟೂರಿ ಅಂಗಡಿಯ ಮೂಲೀಕರು

ಮದನಲಾಲ್ ಬಿರ್ಲಾ ಭವನದಲ್ಲಿ ಗಾಂಧಿಯವರ ಮೇಲೆ ಬಾಂಬೆಸೆಯಲು ಪ್ರಯತ್ನಪಟ್ಟು ದಸ್ತಗಿರಿಯಾದವನು

ಶಂಕರಕಿಸ್ಟಯ್ಯ ಬಾಡಗಿಯವರೆ ಅಳು

ಪರಾಚೂರೆ—ಗ್ವಾಲಿಯರ್ ಡಾಕ್ಟರ್

ಇವರೆಲ್ಲರ್—ಅಖಿಲಭಾರತ ಹಿಂದೂ ಮಹಾಸಭೆಯ ಮ್ಯಾಜಿ ಅಧ್ಯಕ್ಷರು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿವೇಕ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೪ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಶಿವಶತಕ್ಕವರ್ಣನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿವೇಕತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂತ್ಯೇಷ್ಟಿ- ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಸೂತ್ರ ಚಿಕ್ಕಸ್ಕೇಲ್) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ) ...	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀರೋಚನಶಿವಾಚಾರ್ಯಕೃತ)	೧೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೪ ಆಣೆ
ಶಿವಾಸೂತ್ರಸಿದ್ಧಾಂತದರ್ಪಣ	೧೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ವೈದಿಕಶಿವಪೂಜಾವಿಧಿ (ದ್ವೈದಿಕಸಂಧ್ಯಾ ಕ್ರಮಯುಕ್ತ ೩ನೆಯ ಆವೃತ್ತಿ)	೧॥ ರೂ
ಶ್ರೀಕರಭಾಷ್ಯಂ (ಬ ಬ್ರಹ್ಮಸೂತ್ರ)	೧॥ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟದಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ -ಕಾರಣಾಗಮ ಮಕುಟಾಗಮ. ಸೂರ್ಯಾಗಮಗಳಿಂದ ಸಂಗ್ರಹಿಸಲ್ಪಟ್ಟಿದೆ)	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sr Kashinatha Shastrigi (*English*)	4 As
The Philosophical Aspect of Viraśaivism (*English*)	8 As
Speeches by Pandit Shri Kashinatha Shastrigi (*English*)	12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ.
ವೀರಶೈವರತ್ನ (೪೧ಪು)	೧ ಕ
ಪ್ರಭಾದೇವಿಯಲ್ಲಿ ಪ್ರಭಾವಿಷ್ಣು (ವೀರಶೈವಮತ-ಸಂಸ್ಕೃತ)	೧ ಕ.
ಶಿವಾದ್ವೈತಕಾರಿಕಾ (ಸಂಸ್ಕೃತ)	೨ ಆಣೆ.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದತಾಂ ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾವನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದ್ಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀ ಲೋಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ. ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ನೇ ಜೂನ್ ೧೯೪೪ [ಸಂಚಿಕೆ ೫೫

ಶ್ರೀಜಗದ್ಗುರು ಪಂಚಾಚಾರ್ಯೇಭ್ಯೋ ನಮಃ

ವಿವಾಹಮಹೋತ್ಸವ ಕೋಂಡಕುಂದಿ

ಅನಂತಪುರ ಡಿ। ಗುತ್ತಿ ತಾಲೂಕು ರಾವಲುಡಿಕಿ ಹೀರೇಮಠದ ವೇ॥ ಶಾಂತವೀರಯ್ಯನವರ ಪುತ್ರ ಚಿ। ಸದಾಶಿವಶಾಸ್ತ್ರಿಗಳಿಗೆ ಆಲೂರು ತಾಲೂಕು ಗೂಳ್ಯದ ಮಠದ ವೇ॥ ಅಮರಯ್ಯನವರ ಸುಪುತ್ರಿ ಚಿ॥ ನೌ॥ ಶಿವಗಂಗಮ್ಮನವರ ಕನ್ಯೆಯನ್ನು ಕೊಟ್ಟು ಇದೇ ಸರ್ವಧಾರಿ ಸಂ॥ ವೈಶಾಖ ಬಿ॥ ೪ ಗುರುವಾರ ವಿವಾಹ ಮಹೋತ್ಸವವು ಕೋಂಡಕಂದಿ ಶಿಲಾಮಠದಲ್ಲಿ ಮಹಾ ವೈಭವದಿಂದ ನೆರವೇರಿತು ವಿವಾಹ ಸಂಸ್ಕಾರವು ಕುಂಡಕುಂದಿ ಶಿಲಾಮಠದ ಪ॥ ಬ್ರ॥ ಶ್ರೀ॥ ಶಿವಶಂಕರ ಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿಯೂ ವಿಸ್ತಾರ ಹಬ್ಬ ಮರದ ವೇ॥ ಗುರುಬಸವಶಾಸ್ತ್ರಿಗಳವರ ವೈದಿಕತ್ವ ದಲ್ಲಿಯೂ ವಿಧ್ಯುಕ್ತವಾಗಿ ನೆರವೇರಿತು ಈ ಸಮಾರಂಭಕ್ಕೆ ಬಳ್ಳಾರಿ, ಆದವಾನಿ ಕಣಿಕಲ್ಲು, ಮೋಕ, ಗುಳ್ಳ ಮೊದಲಾದ ಗ್ರಾಮಗಳಿಂದ ಒಂಭುಮಿತ್ರಾದಿಗಳು ಆಗಮಿಸಿದ್ದರು ರಂಭಾಪುರೀ, ಶ್ರೀಶೈಲ ಪೀಠಾಧಿಪತಿಗಳಿಂದ ಕಳುಹಿಸಲ್ಪಟ್ಟಿದ್ದ ಮಂತ್ರಾಕ್ಷತೆಗಳು ವಧೂವರರಿಗೆ ಆಶೀರ್ವದಿಸಲ್ಪಟ್ಟವು ಅವರ ಆಶೀರ್ವಾದಪತ್ರಗಳು ಸಭೆಯಲ್ಲಿ ಓದಲ್ಪಟ್ಟವು ಈ ವಿವಾಹ ಕಾರ್ಯವನ್ನು ಶ್ರೀಮತಿ ಶಿಲಾಮಠದ ಬಂಡೆಮ್ಮನವರು ಶ್ರೀಮತಿ ಆರ್ ಎಚ್ ಎಮ್ ಹಂಪಮ್ಮನವರು ಬಹು ದಕ್ಷತೆಯಿಂದ ನೆರವೇರಿಸಿದರು ಈ ಶುಭ ಸಮಯದಲ್ಲಿ ಕೊಂಡಕುಂದಿ ಶಿಲಾಮಠದ ಪ್ರ॥ ಪ್ರ॥ ಪ॥ ಶ್ರೀ ಶಿವತಂಕರಶಿವಾಚಾರ್ಯಸ್ವಾಮಿಗಳವರ ಸೂಚನೆಯ ಮೇರೆಗೆ ಪ್ರಥಾವೋಪಣಕ್ಕೆ ೫ ರೂಪಾಯಿಗಳು ಸಮರ್ಪಿಸಲ್ಪಟ್ಟವು ಜಗದಾಚಾರ್ಯರು ನೂತನ ವಧೂವರರಿಗೆ ಆಯುಆರೋಗ್ಯಭಾಗ್ಯ ಪುತ್ರಸೌಕ್ಕಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ

ಓರ್ವ ಉತ್ಸವಭಾಗಿ

ವಿವಾಹಮಹೋತ್ಸವ

ಬಳ್ಳಾರಿ ಜಿಲ್ಲಾ ಶಿರುಗುಪ್ಪಾ ತಾಲೂಕು ಹಡ್ಡೂರಿ ಗ್ರಾಮದ ಹರಂಕಿ ಮಠದ ಶ್ರೀ ಶರಬಸವಸ್ವಾಮಿಗಳವರಿಗೆ ಕಂಪ್ಲಿಯ ತೋಟದಪ್ಪನವರ ಮಠದ ತಂಕಯ್ಯನವರ ಪುತ್ರಿ ಚಿ॥ ನೌ॥ ಕೊಟ್ರಮ್ಮನ ಎಂಬ ಕನ್ಯೆಯನ್ನು ಕೊಟ್ಟು ವಿವಾಹಮಹೋತ್ಸವವು ತಾರೀಖು 3-6-44 ಗುರುವಾರ ವಿಜ್ರಂಭಣೆಯಿಂದ ಜರುಗಿತು ಈ ಮಹೋತ್ಸವಕ್ಕೆ ಕಂಪ್ಲಿಯ ಶ್ರೀಮಂತ ಉಳ್ಳಾಕ ಕಂಬಿಸಪ್ಪ ಪಕರು ಕೆಮ್ಮಿ, ವೀರಯ್ಯನವರೇ ಮುಂತಾದ ಪ್ರಮುಖರು, ಕವಲಕಿಳ, ಕಾಮಯ್ಯನವರೇ ಹೋಲಿ ಮೊಕಾಸಾ ಗ್ರಾಮದ ಭಕ್ತಾದಿಗಳೂ ಆಗಮಿಸಿದ್ದರು. ಇದಲ್ಲದೆ ಪಮ್ಮಿಗನೂರು ಮಹಾಂತಿಮಠದ ಶ್ರೀ ಗುರುಸಿದ್ಧ ಶಿವಾಚಾರ್ಯಸ್ವಾಮಿಗಳವರೂ ಮತ್ತು ಮೊರಬದ ಜಡೆ ಮಠದ ಶ್ರೀ 'ಬಾಲಬ್ರಹ್ಮಪತಿ ಗಂಗಾಧರಶಿವಾಚಾರ್ಯ ಸ್ವಾಮಿಗಳವರೂ ದಯಮಾಡಿಸಿದ್ದರಿಂದ ಈ ಕಾರ್ಯಕ್ಕೆ ತುಂಬಾ ಶೋಭೆಯುಂಟಾಗಿದ್ದಿತು ಅದೇ ದಿವಸ ಸಾಯಂಕಾಲ ೬ ಘಂಟೆಗೆ ಸೊರಬದ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭಾಕಾರ್ಯವು ವ್ಯಾಸಂಧಾನಯಿತು ಬಸರಕೆರೆ ಶ್ರೀಯುತ ಶಂಕರಗೌಡರು ವೇ॥ ಮೂಲೆ ಮಠದ ಜಾ॥ ಸಿದ್ಧಮಲ್ಲಯ್ಯನವರು ಗುರುವಿನ ಒಗ್ಗೂಯೂ ಎಮ್ಮಿಗನೂರು ಶ್ರೀಗಳವರು ಏಕೇಶ್ವರೀ ಭಕ್ತಿಯ ಬಗ್ಗೆ ಯೂ, ಭಾಷಣಮಾಡಿದರು ಕೊನೆಗೆ ಅಧ್ಯಕ್ಷರು ಶಿವ, ಜೀವ ಜಗತ್ತು, ಇವುಗಳನ್ನು ಕುರಿತು ಹೃದಯಂಗಮವಾದ ಭಾಷಣಮಾಡಿದರು ಆ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭಾ ವಿಸರ್ಜನೆಯಾಯಿತು ಕೌತಾಳದ ರದ ಹಂಪಯ್ಯನವರು ಮತ್ತು ಚರಂತಿಮರದ ಯಜಮಾನ ಮಹಾಂತಪ್ಪಜ್ಜನವರು ವ್ಯವಸ್ಥೆಯನ್ನು ಚೆನ್ನಾಗಿ ಇರಿಸಿದ್ದರು ಸರ್ವರಿಗೂ ಜಗದಾಚಾರ್ಯರು ಮಂಗಲವನ್ನುಂಟುಮಾಡಿದರು

ಸಾಲಿ ಚೆನ್ನಯ್ಯ ಮೂಲೆಮಠ

ವೀರಶೈವ ಬಾಂಧವರಲ್ಲಿ ನಿವೇದನೆ

ಮಹಾಶಯರೆ! ರಾಜಾಧಿರಾಜಯೋಗಿಪುರಂ ರಾಜಯೋಗೀಂದ್ರರೂ ಆದ ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶಿವೈಕ್ಯ ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರ ಜೀವನವು ತುಂಬ ಉಜ್ವಲವಾದುದೂ ಉದ್ಯೋಧವನ ಮಯ ಸರಿಯಷ್ಟೆ ! ಅವರ ಜೀವನ ಕಾಲದಲ್ಲಿ ಅನೇಕ ಅದ್ಭುತ ಘಟನೆಗಳು ಜರುಗಿರುವೆವೆಂದು ನಾನು ಕೇಳಿದ್ದೇನೆ. ವೀರಶೈವದ ಉದ್ಧಾರವೂ ವೀರಶೈವ ಸನ್ಯಾಸಿ ಗೌರವೋತ್ಕರ್ಷವೂ ಆದುದು ಅವರಿಂದಲೆ ! ಆದುದರಿಂದ ಆ ಮಹಾತ್ಮರ ಚರಿತ್ರವನ್ನು ಕನ್ನಡದಲ್ಲಿ ಪದ್ಯರೂಪಾಗಿ ಬರೆಯಬೇಕೆಂದು ಯೋಚಿಸಿ ತಿಂಗಳಿಗೇ ಒಂದು ಸಂಧಿಯನ್ನು ಬರೆದಿದ್ದೇನೆ. ಆಕಸ್ಮಾತ್ತಾಗಿಯು ವಿಕೇಷವಾಗಿ ತೆಲುಗುಂಬಿಲ್ಲವಾದುದರಿಂದ ಬಳ್ಳಾ ಮಹಾಶಯರು ಸಂಚಾರ ಕಾಲದಲ್ಲಿ ಅಲ್ಲಿಲ್ಲಿ ಜಡೆವ ವಿಚಿತ್ರ ಘಟನೆಗಳನ್ನೊ ಳಕೊಂಡ ಆ ಮಹಾಚಾರ್ಯರ ಜೀವನ ಚರಿತ್ರೆಯನ್ನು ಈ ತೆಲಗಿನ ವಿಶಾಸಕ್ಕೆ ಬರೆದು ಕಳುಹಿಸಿದ್ದಲ್ಲಿ ತೆಲುಗು ಜೆಯಿಂದ ಸ್ವೀಕರಿಸಲಾಗುವುದು. ಸಹಾಯಿಗಳು ಮಾಸಿಗಳು ಇತ್ತ ಲಕ್ಷ್ಯ ಕೊಡಬೇಕಾಗಿ ವಿನೀತರು.

ವಿಳಾಸ—

ಶ್ರೀಸಚ್ಚಿದಾನಂದಶಿವಾಚಾರ್ಯ ಕೌಳಿಮಂಡಿ ಹಿರೇಮಠ
Jangamawadi Math
Benares City

ಮೈಸೂರು ಪ್ರಜಾಪ್ರತಿನಿಧಿಸಭೆಯಲ್ಲಿ ಮಂತ್ರಿಗಳ ಸಂಬಳ ಭತ್ಯದ ಪ್ರಶ್ನೆ

ಸಚಿವರ ಸಂಬಳ, ಅವರು ಸಡೆಯುತ್ತಿರುವ ಭತ್ಯ; ಪ್ರಯಾಣ ಭತ್ಯ, ಅವರ ನೋಟೊರುಗಳಗಾಗಿರುವ ಖರ್ಚು, ಅದರ ಸಿಬ್ಬಂದಿಗಾಗುತ್ತಿರುವ ಖರ್ಚು, ಮೊದ ಅಂಶಗಳನ್ನೆತ್ತಿ ಹಲವು ಸದಸ್ಯರು ಪ್ರಶ್ನೆಗಳನ್ನು ಹಾಕಲು, ಚೀಫ್ ಸೆಕ್ರೆಟರಿಗಳಾದ ಶ್ರೀ ವೇದವ್ಯಾಸಾಚಾರ್ಯರು ಜವಾಬುಕೊಟ್ಟು, ಸಚಿವರು ಪಡೆಯುತ್ತಿರುವ ಸಂಬಳ, (೪೦೦ ರೂ) ವಾಹನಭತ್ಯ (ರೂ ೧೫೦) ಮತ್ತು ಮನೆ ಬಾಡಿಗೆ (ರೂ ೩೦೦ ಸರ್ಕಾರದ ಕಟ್ಟಡಗಳನ್ನು ಉಪಯೋಗಿಸದೇ ಇರುವವರಿಗೆ) ಇವುಗಳನ್ನು ತಿಳಿಸಿ, ವರ್ಷಕ್ಕೆ ಸಚಿವರುಗಳ ಬಗ್ಗೆ ಒಟ್ಟು ರೂ ೧೫೧೦೦೦ ಖರ್ಚು ಆಗುವುದೆಂದೂ, ಸಚಿವರ ಮೋಟಾರುಗಳಿಗೆ ಒಟ್ಟು ರೂ ೧೧೦೦೦ ಆಗಿದೆಯೆಂದೂ ತಿಳಿಸಿದರು ಮತ್ತೆ ಪ್ರಶ್ನೆಗಳು ಬರಲು ಸಚಿವರುಗಳು ತಾವು ೫೦೦ ರೂ ಸಂಬಳವನ್ನು ಮಾತ್ರ ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದರೋ ಇಲ್ಲವೋ ಸರ್ಕಾರಕ್ಕೆ ಗೊತ್ತಿಲ್ಲವೆಂದೂ, ಈಗ ಅವರು ಒಟ್ಟು ಪಡೆಯುತ್ತಿರುವ ಸಂಭಾವನೆ ಈಗಿನ ಸಂದರ್ಭಗಳಲ್ಲಿ ನ್ಯಾಯವಾಗಿಯೇ ಇದೆಯೆಂದೂ ಸಾರ್ವಜನಿಕ ಬಿಡದಲ್ಲಿ ಹಾಗೂ ಜನಗಳ, ರೈತರ, ಕುಂದುಕೊರತೆಗಳನ್ನು ವಿಚಾರಿಸಿ, ಅನುಕೂಲಗಳನ್ನುಂಟುಮಾಡುವ ದೃಷ್ಟಿಯಿಂದ, ಸಚಿವರು ಪ್ರವಾಸಮಾಡುವರೆಂದೂ, ಚೀಫ್ ಸೆಕ್ರೆಟರಿಗಳಿಂದ ಲವಾಬು ಒಂಟು

ಎತ್ತಿನ ಗಾಡಿಯಲ್ಲಿ ಸಚಿವರುಗಳು ಪ್ರಯಾಣ ಮಾಡುವುಗ, ಭತ್ಯ ತೆಗೆದುಕೊಳ್ಳುತ್ತಿದ್ದಿಲ್ಲವೆಂಬುದಾಗಿ ಚೀಫ್ ಸೆಕ್ರೆಟರಿಗಳು ಉಪಪ್ರಶ್ನೆಗೆ ಉತ್ತರಕೊಟ್ಟರು

ಹೈದ್ರಾಬಾದಿನ ನಿಜಾಸ್ತ್ರಿಗಳಿಗೆ ಸಹಾಯ

ಪಶ್ಚಿಮೋತ್ತರ ಕಾಲವಾದಮೇಲೆ, ಶ್ರೀ ನರಸಿಂಹೇ ಗೌಡರು ಹೈದರಾಬಾದಿನಿಂದ ಸಂನ್ಯಾಸಕ್ಕೆ ಬಂದಿರುವ ನಿಜಾಸ್ತ್ರಿಗಳಿಗೆ ನಮ್ಮ ಸರ್ಕಾರದೆಷ್ಟಾಪಿಸಿರುವ ವಸತಿ ಸೌಕರ್ಯ ಮೊದಲಾದ ವಿಚಾರಗಳನ್ನೆತ್ತಿ, ನಿಲುವಳಿ ಸೂಚನೆ ತರಲು, ಆ ಬಗ್ಗೆ ಅಧ್ಯಕ್ಷರು ಸರಕಾರ ಮಾಡುತ್ತಿರುವ ಸಹಾಯವನ್ನು ವಿವರಿಸಿ, ಸೂಚನೆಯನ್ನು ತಳ್ಳಿಹಾಕಿದರು

ಸಂನ್ಯಾಸಕ್ಕೆ ಒತ್ತು ಸುಮಾರು ೧೫೦೦ ಮೆಜೆ ಹೈದರಾಬಾದಿನಿಂದ ಬಂದಿರುವರೆಂದೂ ಸಂಸ್ಥಾನಕ್ಕೆ ಪ್ರೆಕೆ ಬಿಡಿಸಿದವರೆಗೆ ದಿನಕ್ಕೆ ತಲಾ ರೂ ೩-೧೦-೦ ಹೀಗೆ ತೊಡಗುತ್ತಿದೆಯೆಂದೂ, ಹಲವರಿಗೆ ಮನೆ ಸೌಲಭ್ಯವನ್ನು ಮಾಡಿಕೊಡಲಾಗಿದೆಯೆಂದೂ, ಸಾಮಾನ್ಯಕ್ಕೂ ಅವರಿಗೆ ರೇಷನ್ ತೊಡಕಾಗುತ್ತಿರಬೆಯೆಂದೂ ಹೇಳಿದರು.

ಪಂಚಾಚಾರ್ಯಪ್ರಭಾ

೧೯೪೪ ನೆಯ ಜೂನ್ ತಾ|| ೧೪ ನೆಯ ಸೋಮವಾರ

ಪೂರ್ವಕಾಲದ ವಿರಕ್ತರ ಗುರುಭಕ್ತಿ

ಪೂರ್ವಕಾಲದ ವಿರಕ್ತರು ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರಲ್ಲಿ ಅಸಿತರಸಾಧಾರಣವಾದ ಗುರುಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರೆಂಬ ವಿಷಯವನ್ನು ಆ ಮಹಸ್ಥೀಯರು ಬರೆದಿರುವ ಗ್ರಂಥಾಧಾರಗಳಿಂದ ಕಡೆದವಾರ ಪ್ರತಿಪಾದಿಸಿರುವುದು ಸರಿಯಷ್ಟೆ ! ಈಗಲೂ ಆದೇ ವಿಷಯವನ್ನೇ ಮುಂದು ವರೆಸುವದಾಗುವದು

ವಿರಕ್ತರಲ್ಲಿ ಮಹಾಪಂಡಿತರೆಂದು ಪ್ರಸಿದ್ಧರಾಗಿರುವ ಶ್ರೀ ಮರಿತೋಂಟದಾರ್ಯರು ತಮ್ಮ ಗುರುಗಳಾದ ಆಸಾದಿತೋಂಟದ ಸಿದ್ಧಲಿಂಗೇಶ್ವರರ ಪುರಾಣವನ್ನು ಬರೆದಿರುತ್ತಾರೆ ಆ ಪುರಾಣದಲ್ಲಿ ತೋಂಟದಸಿದ್ಧೇಶ್ವರರ ಓಪೇಶ್ವರರಿಕ್ಕೆ ಹೋದಕಾಲಕ್ಕೆ ಅಲ್ಲಿ ಕೆಲವು ಕುಟಿಲ ಸಿದ್ಧೆರು ಅವರಿಗೆ ಮಾಟವನ್ನು ಮಾಡಿದರು ಆಗ್ಗೆ ಸಿದ್ಧೇಶ್ವರರು ಕುಟಿಲಸಿದ್ಧರನ್ನು ಕುರಿತು ನವ ಗೆ ನಿನ್ನ ಮಾಟವು ತಗಲುವುದಿಲ್ಲ ಹಿಂದಕ್ಕೆ ಕೊಲ್ಲಾಪುರದಲ್ಲಿ ಶ್ರೀರೇವಣಸಿದ್ಧರಿಗೆ ಗೋರಕ್ಷನಾಥನೆಂಬವನು ಇದೇ ಪ್ರಕಾರವಾಗಿ ಮಾಡಿದ್ದನೆ ಎ ಹೇಳದ ವಿಷಯವನ್ನು ಮರಿತೋಂಟನಾರ್ಯರು ವರ್ತಿಸುವಾಗ್ಗೆ ಶ್ರೀರೇಣುಕಾಚಾರ್ಯರಿಗೆ ಸಿದ್ಧೇಶರು ಪರಮಗುರು "ಗುರು" "ಜಗದ್ಗುರುವಲ್ಲಳ ಮೊದಲಾದ ವಿಶೃಭಾವ ದ್ಯೋತಕವಿಶೇಷಣಗಳನ್ನು ಕೊಟ್ಟು ಸ್ತುತಿಸಿದಂತೆ ಬರೆದಿದ್ದಾರೆ ಸಿದ್ಧೇಶ್ವರಪುರಾಣದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಚರಿತ್ರವಂತೆ ಅಲ್ಲಮನ ಚರಿತ್ರವನ್ನಾದರೂ ತೋಂಟದಾರ್ಯರು ಬರೆದಿರುವರು ಅವರಲ್ಲಿ ಅಲ್ಲವಸಿಗೆ ಇಂತಹ ಮಹತ್ತ್ವಪೂರ್ಣವಿಶೇಷಣಗಳನ್ನು ಪ್ರಯೋಗಿಸಿಲ್ಲ ಸಿದ್ಧೇಶ್ವರಪುರಾಣದ ೫ನೆಯ ಸಂಧಿಯಲ್ಲಿ—

ಪರಮಗುರು ರೇಣಜಾಸಿದ್ಧ ಯತಿರಾಯರುರು !
ತರಹರಿಸದಿಂದ ಕೊಲ್ಲಾಪುರಕ್ಕೆ ತೆರಳ್
ದುರುಳರಿನಿಸುವ ಜೋಗಿಗಳು ಬರೋಗನುನಪ್ಪಿಸ್ಪಂಥಗಳ
ನೆಸಗಲು ॥

ನಿರುತದಿಂದಾಸ್ಥಂಬಗಳು ತಾಗದಿರೆ ಯರ್ವರ್ !
ಳಿರದೆ ಗೋರಕ್ಷನಿದ್ದೆಡಿಗೈದಿ ಕೇಳುತ್ತರಲು !
ಪರಿಕಿಸದರೂತಾನರಮನೆಗೆ ದುಂಗಗಡಿಯಳಿಗೆ ಸಂಧ್ಯಮಿಸುತೆ ॥

ಳುಟಲಿಸಿದ್ದಮಿಳಿರ್ದ ದಿಪ್ಪಾಗ್ ಭಿಕ್ಷವಕಃ !
ಪಟುತರಪಸ್ಯಾಬಿಗೆ ವಿಕ್ಷ ವಿಜಲಿ ಗೆ ಸಂ !
ಳಿಟಿಪಂಗೆ ಭಿಕ್ಷ ಸಜನಾಥಸಿದ್ಧಮಗಳಾಗಿ ಭಿಕ್ಷ ಫ್ರಾನ್ನ !
ಳಟುಂತರಿಸ್ಪಾಸ ಕೊಲ್ಲಾಪುರಮಾಂ ಸಿದ್ಧ !
ರಳಿಮಳಿಂ ಸಿದ್ಧಾಪಾಗ ಭಿಕ್ಷ ಜಸ ಯುರು
ಜುರಮೊಳ್ ಬಾರದಾಪಾಗ ಭಿಕ್ಷ ಸಿಟಲಿಸ್ಯಾಗ ಭಿಕ್ಷವೆಂಬೆನುತಿರೆ॥

ಗೋರಕ್ಷ ಇನ್ನ ನುಸಿಯೊಳಿಳಿಗೆ ಕುಳ್ಳಿದುಂ ಭಿ !
ಕ್ಷಾರನನ ಕೇಳ್ ಪಳ್ಳಿಯೊಡಿದು ಭಿಟಿಲ ದಿಸಿಬ !
ಳಾರುಭಟಿಯಿಂದ ಭಿಕಾರಿಸಿ ಕೂಸಲದಿಂದ ಪಡ ಪ ಕಿರಿಯಂತಸ
ಯಿನಿಸುವ !

ನಾರಿ ಲಕ್ಷ್ಮಿದೇವಿಯೆಂಬದಂ ಭಿಕ್ಷೆಯನು !
ತೀಳಂತೆ ಪಾಡಿಸಿ ಕರದೊಳ್ ಎಂ ನೋಡಲದು !
ನೀರಂತೆ ಕರಗಿ ಜಾನಗ್ಯೆಯ್ದನನು ಗುರುರೇಣಜಾ
ಸಿದ್ಧ ನಂದ್ರನು ॥೨೫॥

ಉಲ್ಲಾಸದಿಂ ರೇಣಜಾಸಿದ್ಧಯತಿರಾಯ !
ನಿಲ್ಲಿ ಜಾನಂಗ್ಯೆಯ್ದಲಾ ನುಸಿಗಿ ಜೋಗಿಯರ್ದ !
ಯಿಲ್ಲಿ ಕೀಲಿಸಿ ಪಿಸ್ಸಿಗಳಿಗೆ ನಟ್ಟುಗಿಯಲಂಜಿ ಹಿರಿಯ ಖಳ್ಳಾ
ದೇನಿಯ ॥

ನಿಲ್ಲಿದಾಕ್ಷಣ ಕರೆದು ನೀನುಸಿರ್ದ ಬುದ್ಧಿಗಳ !
ನುಲ್ಲಾಳಿಸಿದನು ತಳುವದೆಯಾಯತಿಯ ಚರಣ !
ದಲ್ಲಿ ಬೀಳ್ದಿನ್ನ ರಕ್ಷಿಸುವಂತೆ ಮೊಡಿಂದು ಳಳುವಿದಂ ನಿಜಸಿ
ಯನು ॥೨೬॥

ಆಳಿಯನ್ನಾಡದೆ ಪಾಲ್ಗಡಲ ಕುವರಿಯು ಮುಡಿದಿ !
ನಾಳಿಪಣಂ ಗೈದೂಡಂಗೊಂಡು ಬಂದು ಜಗ !
ದೇಳವಲ್ಲಭನಿಸಿರ ರೇಣಜಾಸಿದ್ಧ ರಂದ್ರನಿಗೆ ವಂದನೆಯಮಾಡಿ॥

ಸಾಕು ನಿನ್ನಯ ವಿಸೀಪಂ ದೀಪ ರಕ್ಷಿಸು ಕೃ !
ಪಾಕರ ಎನಲ್ಲ ಪಾನಂಗ್ಯೆಲ ರಸನನು !
ಳ್ಳಾಕರಾಪನಿರವ ರಾಣದಿಂ ಜಂಳ್ಳು ಜಿಂಳ್ಳಂತೆ ಮಾಡಿದ
ನಾಗಳು ॥೨೭॥

ಈರೀತಿಯಾಗಿ ಶ್ರೀರೇಣುಕಾಚಾರ್ಯರೆ ಚರಿತ್ರವನ್ನು ಬೆ ಸೋನುಸಾಥರಿಂದುಕ್ಕಮಾರ ಶ್ರೀಮಜ್ಜಗನ್ಮಾತೆಯ ಮೆಬ ಗ್ರಂಥವಲ್ಲಿಯೂ, ಸಪಸ್ಕತ್ತ್ವೋತ್ಪತ್ತಿ ರಾದ ಪದ್ಮರಾಜ ರಿಂದುಕ್ಕಮುದ ಸಾನಂದಚಂದ್ರನೆಂಬ ಗ್ರಂಥದಲ್ಲಿಯೂ ಸಕಲ ಶೈಸಾಗಮಾಭಜ್ಞರಾದ ಜ್ಯೋತಿರ್ನಾಥರಿಂದುಕ್ಕ ಸಾನದ ಶೈವಶಾಸ್ತ್ರಕವಿಯೆಂಬ ಗ್ರಂಥವಲ್ಲಿಯೂ ನೀಲಕಂಠ ನಾಗ ನಾಥಾಖ್ಯ ವೀಚಿಕರಿಂದುಕ್ಕವಾದ ವೀರನಾಮಕೇಳ್ಕರಾಚಾರ ಸಂಗ್ರಹದಂಬ ಗ್ರಂಥದಲ್ಲಿಯೂ ಸಾಕ್ಷಾತ್ಪಾರ್ವತ್ಯಮುಖೋ ತ್ಪಾನಕಾದ ಶ್ರೀಜಗದ್ಗುರು ರೇಣುಕಾಚಾರಿರಿಂದುಕ್ಕವಾದ ಸಿದ್ಧಾಂತಶಿಖಾಮಣಿಯೆಂಬ ಗ್ರಂಥದಲ್ಲಿಯೂ, ಇನ್ನೂ ಅನೇಕ ಗ್ರಂಥಗಳಲ್ಲಿಯೂ ಅಸಗಳ್ಕಮಾಮಮಂದಂಬಂದ ಸತ್ಪುರುಷರಿಂದ ಅನಾದರಕಲ್ಪಕ್ಕದಿಬಾದೇ ಸಿದ್ಧ ನುಳ್ಳಂ"

ಎಂದು ಬರೆದಿರುತ್ತಾರೆ ಇದರಲ್ಲಿ ಶ್ರೀರೇಣುಕಾಚಾರ್ಯರಿಗೆ ಅಸಾಧಾರಣಗುರುಭಕ್ತಿಯಿಂದ "ಜಗದ್ಗುರು" ಪದವನ್ನು ಪ್ರಯೋಗಮಾಡಿ ತಮ್ಮ ಸಹಜವಾದ ಗುರು ಭಕ್ತಿಯನ್ನು ತೋರಿಸಿದ್ದಾರೆ ಇದೇ ರೀತಿಯಾಗಿ ಅನೇಕ ಜನ ಸ್ವಾಚೀನವಿರಕ್ತರು ಸ್ವಮತಾಚಾರ್ಯರಲ್ಲಿ ನಿರತಿಶಯವಾದ ಭಕ್ತಿಯನ್ನು ತೋರಿಸಿ ದನ್ಯರಾಗಿ ಪ್ರಾ ರ ಆದರೆ ಈ ಕಾಲದ ವಿರಕ್ತರು ಇಂತಹ ಗುರು ಭಕ್ತಿಗೆ ತಿಲಾಂಜಲಿಯನ್ನು ಕೊಡಪತ್ತಿ ತವರ ವಿರುದ್ಧವಾಗಿ ವರ್ತಪಪತ್ತಿರುವುದನ್ನು ನೋಡಿವರೆ ಬಹು ವ್ಯಸನವಿಸುತ್ತವ ಇದು ಯಾವ ಮಿತ್ಯಮಾದ ಫಲವೋ ತಿಳಿಯಾಗಿದ ಪರಮೇಶ್ವರನು ಇನ್ನು ವೀಲಾ ವರೂ ಈ ಕಲಿಕಾಲವೆ ವಿರಕ್ತರಿಗೆ ಸದ್ಬುದ್ಧಿಯನ್ನು ಕೊಟ್ಟು ಇವರನ್ನು ಗುರುಭಕ್ತಿನಿರತರನ್ನಾಗಿ ಮಾಡ ಲೆಂದು ಈ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ

ಭಾರತಹೈದರಾಬಾದ್ ಸಂಧಾನವು ನಿಷ್ಫಲವಾಯಿತು

ಹೈದ್ರಾಬಾದಿನ ಭವಿಷ್ಯ ನಿರ್ಧಾರದ ಬಗ್ಗೆ ದೆಹಲಿಯಲ್ಲಿ ನಡೆಯುತ್ತಿದ್ದ ಸಂಧಾನವು ನಿಷ್ಫಲವಾಗಿ ಮಾತು ಕತೆಗಳು ೪ ನೇ ತಾ|| ದಿನ ಕೊನೆಗೊಂಡವು ಹೈದರಾ ಬಾದ್ ಸಿಯೋಗವು ಹೈದ್ರಾಬಾದಿಗೆ ತೆರಳಿ ನಿಜಾಮರಿಗೆ ಸಂಧಾನದ ವರದಿಯನ್ನು ಒಪ್ಪಿಸುವುದು

ರಜಕಾರರನ್ನು ಧ್ವಂಸಮಾಡಲು ಭಾರತ ಸರಕಾರದ ಆಜ್ಞೆ

ಏಕೈಕ್ಯಧ್ಯೆ ದಿನದಿನಕ್ಕೂ ಪ್ರಬಲಿಸುತ್ತಿರುವ ರಜಕಾರರ ಪುಂಡಾಟವು ಭಾರತ ಸರ್ಕಾರಕ್ಕೆ ತೀವ್ರ ಕಳವಳವನ್ನುಂಟುಮಾಡಿದೆ ಗಡಿ ಪ್ರದೇಶದ ಪ್ರಜೆಗಳು ಚಿತ್ರ ಹಿಂಸೆಗೆ ಗುರಿಯಾಗಿದ್ದಾರೆ ರಜಕಾರರ ಘಾತಕಳಿಯನ್ನು ತಡೆಗಟ್ಟಿಲು ತೀವ್ರವಾದ ಕಾರ್ಯಾಚರಣೆ ಕೈಗೊಳ್ಳುವುದಾಗಿ ಭಾರತ ಸರ್ಕಾರದವರು ಸ್ಪಷ್ಟವಾಗಿ ತಿಳಿಸಿಬಿಟ್ಟಿದ್ದಾರೆ ಅದರಂತೆ ರಜಕಾರರನ್ನು ಪುಡುಕಿಕೊಂಡು ಹೋಗಿ ಅವ ರನ್ನು ಮಟ್ಟಹಾಕಬೇಕೆಂದು ಭಾರತದ ಪೋಲೀಸ್ ಮತ್ತು ಮಿಲಿಟರಿಗಳಿಗೆ ಆಜ್ಞೆಮಾಡಲಾಗಿದೆ

ಹೈದರಾಬಾದ್ ಸಂಧಾನವು ವಿಫಲವಾದುದರ ಬಗ್ಗೆ ಭಾರತ ಸರ್ಕಾರದವರು ಹೊರಡಿಸಿರುವ ಪ್ರಕಟಣೆಯಲ್ಲಿ ಈ ರೀತಿ ತಿಳಿಸಲಾಗಿದೆ —

ಹೈದರಾಬಾದ್ ಮತ್ತು ಭಾರತ ಸರ್ಕಾರದ ಪ್ರತಿನಿಧಿಗಳಿಗೆ ಹೈದರಾಬಾದಿನ ಭವಿಷ್ಯದ ಬಗ್ಗೆ ನಡೆಯುತ್ತಿದ್ದ ಸಂಧಾನವು ನಿಷ್ಫಲವಾಗಿ ೯ನೇ ತಾ|| ದಿನ ಕೊನೆಗೊಂಡಿತು ಹೈದರಾಬಾದು ಭಾರತಕ್ಕೆ ಸೇರಬೇಕು ಮತ್ತು ಸಂಸ್ಥಾನವಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪನೆಯಾಗ ಬೇಳು ಎಂಬ ತತ್ವಗಳನ್ನು ಹೈದರಾಬಾದ್ ಸಿಯೋಗದವ ದವರು ಒಪ್ಪಿದರೆ ಅವುಗಳ ಆಧಾರದ ಮೇಲೆ ಸಂಧಾನ ಸಾಧ್ಯವೆಂದು ಇಂಡಿಯ ಸರ್ಕಾರವು ಸ್ಪಷ್ಟವಾಗಿ ತಿಳಿಸಿ ಬಿಟ್ಟಿತು ಈ ಎರಡು ತತ್ವಗಳನ್ನೂ ಅಂಗೀಕರಿಸಿದರೆ ಎರಡು ಉದ್ದೇಶಗಳು ಜಾರಿಗೆ ಬರುವವರೆಗೆ ಸಮರ್ಪಕವಾದ ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಲು ಸಾಧ್ಯವೆಂಬುದನ್ನೂ ಇಂಡಿಯ ಸರ್ಕಾರವು ಸ್ಪಷ್ಟಗೊಳಿಸಿತು.

ಹೈದರಾಬಾದಿನ ಗಡಿಯಲ್ಲಿಯೂ, ಒಳಭಾಗದಲ್ಲಿಯೂ ಶಾಂತಿ ಶಿಸ್ತುಗಳನ್ನು ಸ್ಥಾಪಿಸಿ ಪ್ರಜೆಗಳ ಭಯ ಭೀತಿಗಳನ್ನು ಹೋಗಲಾಡಿಸಲು ರಜಕಾರರ ಪಡೆಗಳನ್ನು ವಿಸರ್ಜಿಸುವುದರ ಅವಶ್ಯಕತೆಯನ್ನು ಭಾರತ ಸರ್ಕಾರವು ಒತ್ತಿ ಹೇಳಿತು.

ಭಾರತದ ಗಡಿಯಲ್ಲಿ ರಜಾಕರರು ನಡೆಸುತ್ತಿರುವ ದುಷ್ಕೃತ್ಯಗಳು ಸರ್ಕಾರಕ್ಕೆ ತೀವ್ರ ಕಳವಳವನ್ನುಂಟು ಮಾಡಿವೆ. ಇನ್ನು ಮುಂದೆ ಭಾರತದ ಪೋಲೀಸ್ ಮತ್ತು ಮಿಲಿಟರಿಯವರು ರಜಕಾರರನ್ನು ಹೈದ್ರಾಬಾದಿನ ಒಳಗೂ ಅಟ್ಟಿಸಿಕೊಂಡು ಹೋಗಿ ಸದೆಬಡಿಯುವರೆಂದು ಭಾರತ ಸರ್ಕಾರವು ಸ್ಪಷ್ಟಗೊಳಿಸಿದೆ. ಅಲ್ಲದೆ ಭಾರತದ ಪ್ರಜೆಗಳಿಗೆ ಉಂಟಾಗುವ ನಷ್ಟಕ್ಕೆ ಪೂರ್ಣ ಪರಿಹಾರ ಕೊಡಬೇಕೆಂದು ಸರ್ಕಾರ ಕೇಳುವುದು

ಇಂಡಿಯದ ಮಿಲಿಟರಿಗೆ ಸೂಚನೆ

ರಜಕಾರರನ್ನು ಮಟ್ಟಹಾಕುವಂತೆ ಮಿಲಿಟರಿ ಮತ್ತು ಪೋಲೀಸ್ ಪಡೆಗಳಿಗೆ ಅಪ್ಪಣೆ ಮಾಡಬೇಕೆಂದು ಪಂಡಿತ ಜವಹರಲಾಲರು ಸೂಚಿಸುವರೆಂದೂ ಅವರ ಆಜ್ಞೆಯನ್ನು ಮಿಲಿಟರಿ ಮತ್ತು ಪೋಲೀಸ್ ಅಧಿಕಾರಿಗಳಿಗೂ ಹೈದರಾ ಬಾದಿನ ಮುಖ್ಯ ಮಂತ್ರಿ ಜನಾಬ್ ಲಾಯಕ್ ಅಲಿಯವ ರಿಗೂ ತಿಳಿಸಲಾಗಿದೆಯೆಂದೂ ಶ್ರೀ ಮೆನನ್‌ರವರು ತಿಳಿಸಿ ರುವರು

ಮತ್ತೆ ದೆಹಲಿ ಯಾತ್ರೆಯೇ ?

ಹೈದರಾಬಾದ್ ಸಂಧಾನವು ಮುರಿದುಬಿದ್ದಿತೆಂದು ಈಗಲೇ ಹೇಳಲು ಸಾಧ್ಯವಿಲ್ಲ ಹೈದರಾಬಾದ್ ಸಿಯೋಗವು ನಿಜಾಮರ ಸಲಹೆಗಳನ್ನು ಪಡೆದು ಪುನಃ ದೆಹಲಿಗೆ ಸಂಧಾನಕ್ಕಾಗಿ ಬರಬಹುದೆಂದು ದೆಹಲಿಯಲ್ಲಿ ಅಭಿಪ್ರಾಯ ಪಡಲಾಗಿದೆ ಭಾರತ ಸರ್ಕಾರವಾಗಲೀ, ಹೈದರಾಬಾದ್ ಸಿಯೋಗವಾಗಲೀ, ಸಂಧಾನವು ಮುರಿದು ಬಿದ್ದಿತೆಂದು ಖಚಿತವಾಗಿ ಹೇಳಲ್ಲದಿರುವುದು ಗಮನಾರ್ಹವಾಗಿದೆ

ವಿಚಿತ್ರ ತರಹದ ಸಲಹೆ !

ಹೈದರಾಬಾದ್ ನಿಯೋಗದವರು ಡೊಮಿನಿಯನ್ ಪ್ರವೇಶ ವಿಚಾರದಲ್ಲಿ ಜನಮತಗಣನೆ ನಡೆಯಬೇಕೆಂಬ ಸಲಹೆಯನ್ನು ಕಟ್ಟುಕಡೆಯದಾಗಿ ಭಾರತ ಸರ್ಕಾರದ ಮುಂದಿಟ್ಟರು ಅದರೆ ಮೊದಲು ಜವಾಬ್ದಾರಿ ಸರ್ಕಾರ ಸ್ಥಾಪನೆಯ ತತ್ವವನ್ನು ಅಂಗೀಕರಿಸಿದರೆ ಮಾತ್ರ ಜನ ಗಣತಿ ಸಲಹೆಯನ್ನು ಪರಿಶೀಲಿಸಲಾಗುವುದೆಂದು ಇಂಡಿಯ ಸರ್ಕಾರದವರು ಸ್ಪಷ್ಟವಾಗಿ ಸೂಚಿಸಿ ಬಿಟ್ಟರು. ಮತ್ತು ತಾತ್ಕಾಲಿಕ ಸರ್ಕಾರದಲ್ಲಿ ಉಭಯ ಕೋಮು ಗಳಿಗೂ ಸಮಪ್ರಾತಿನಿಧ್ಯ ಕೊಡಲು ಎಂದಿಗೂ ಒಪ್ಪುವು ದಿಲ್ಲವೆಂದು ಭಾರತ ಸರ್ಕಾರದವರು ನಿಯೋಗಕ್ಕೆ ಖಚಿತ ವಾಗಿ ತಿಳಿಸಿದರು ಕೇವಲ ೬೦ ೧೫ ರಷ್ಟಿರುವ ಅಲ್ಪ ಸಂಖ್ಯಾತರಿಗೂ, ೪೦ ೧೫ ರಷ್ಟಿರುವ ಬಹು ಸಂಖ್ಯಾತ ರಿಗೂ ಒಂದೇ ಸಮನಾದ ಪ್ರಾತಿನಿಧ್ಯ ಕೊಡುವುದು ನ್ಯಾಯಬಾಹಿರವಾದುದೆಂದು ಭಾರತ ಸರ್ಕಾರ ಅಭಿಪ್ರಾಯ ಪಟ್ಟಿದೆ ರಜಕಾರರ ಜುಗಿನ ಸೇನೆಯನ್ನು ನಿರ್ಬಂಧಿಸು ವುದರ ಅವಶ್ಯಕತೆಯನ್ನು ಹೈದರಾಬಾದ್ ಸರಕಾರಕ್ಕೆ ಅನೇಕ ಸಲ ಸೂಚಿಸಿದೂಡೂ ಇನ್ನೂ ಯಾವ ಕ್ರಮ ವನ್ನೂ ಕೈಗೊಳ್ಳದಿರುವುದಕ್ಕೆ ಭಾರತ ಸರ್ಕಾರವು ವಿಷಾದವನ್ನು ವ್ಯಕ್ತಪಡಿಸಿತು.

ಬ್ರಿಟಿಷ್ ಜೊರೆಗಳ ಸಾರ್ವಭೌಮತ್ವವು ಮುಕ್ತಾಯ ವಾದ ಮೇಲೆ ದೇಶೀಯ ಸಂಸ್ಥಾನಗಳಿಗೆಸ್ವಾತಂತ್ರ್ಯ ಬಂತು. ಆದರೆ ಅವುಗಳು ಭೌಗೋಳಿಕ ದೃಷ್ಟಿಯಿಂದ ಭಾರತದ ಭಾಗಗಳೇ ಆಗಿವೆ. ಈ ದೇಶೀಯ ಸಂಸ್ಥಾನಗಳು ಪ್ರಕೃತಿಕವಾಗಿ ಉಳಿದರೆ ಅವರ್ಥವುಂಟಾಗುವುದು. ಸಾರ್ವಭೌಮತ್ವವು ಪರಿಸಮಾಪ್ತಿಯಾದ ನಂತರ ದೇಶೀಯ ಸಂಸ್ಥಾನಗಳು ಭೌಗೋಳಿಕ ಸನ್ನಿವೇಶಕ್ಕನುಗುಣವಾಗಿ ಯಾವುದಾದರೊಂದು ಡೊಮಿನಿಯರ್ ಸೇರಬೇಕೆಂಬುದು ಬ್ರಿಟಿಷ್ ಸರ್ಕಾರದ ಆಶಯ' ಎಂದು ಮಿ॥ ನೋಯೆಲ್ ಬೇಕರ್ ತಿಳಿಸಿದರು

ಹೈದರಾಬಾದ್ ಸಮಸ್ಯೆಯು ಬ್ರಿಟಿಷ್ ಸರಕಾರದ ಅಧಿಕಾರ ವ್ಯಾಪ್ತಿಯ ಎಲ್ಲೆ ಮೀರಿದೆ ಈ ವಿಚಾರದಲ್ಲಿ ಪ್ರಧಾನಿಯಾಗಲು ಬ್ರಿಟಿಷ್ ಸರ್ಕಾರಕ್ಕೆ ಅಧಿಕಾರವೇ ಇಲ್ಲ. ಹೈದರಾಬಾದ್ ಸಂಸ್ಥಾನವು ಬಾಗಶಃ ಮಧ್ಯಭಾರತದಲ್ಲಿದೆ ಭೌಗೋಳಿಕ ದೃಷ್ಟಿಯಿಂದ ಆದು ಎಂದಿದ್ದರೂ ಭಾರತದೊಡನೆ ಸ್ನೇಹದಿಂದ ಬಾಳ ಬೇಕಾಗುತ್ತದು ಈ ನಿಕಟಬಾಂಧವ್ಯವನ್ನೆ ರಿತು ಹೈದರಾ ಬಾದ್ ಭಾರತಗಳು ಕಾಂತಿಯುತವಾಗಿ ಒಪ್ಪಂದಕ್ಕೆ ಒರ ಬೇಕು ಹಾಗೆ ಮಾಡಿದರೆ ಭಾರತಬಾಮಗಳು ಕಾಂತಿಯುತವಾಗಿ ಎಲ್ಲ ಸಮಸ್ಯೆಗಳನ್ನೂ ಬಗೆಹರಿಸಿಕೊಂಡು ಬರುವುದೆಂ ಬುದೇ ನಮ್ಮ ಭಾವನೆ ಎಂದು ಮಿ॥ ನೋಯಲ್ ಬೇಕರ್ ಸೂಚಿದರು

ಕಾಕಿನಾಡದಲ್ಲಿ ೧೦೦೦ ತೋಟಾಗಳ ವತ್ತೆ !

ಕಾಕಿನಾಡ ಲೈಲ್ಸ್ ಸ್ಕೇಸ್ಟಿನಲ್ಲಿ ಸೂಟ್‌ಕೇಸುಗಳಲ್ಲಿ ಬಚ್ಚಿಟ್ಟಿದ್ದ ೧೦೦೦ ತೋಟಾಗಳನ್ನು ಪೋಲೀಸರು ಸತ್ತೆ ಹಚ್ಚಿ ವಶಪಡಿಸಿಕೊಂಡರು ಮತ್ತು ಗುಂಡುಗಳ ಅಂಗಡಿಗಳನ್ನೆಲ್ಲಾ ಪೋಲೀಸರು ಶೋಧಿಸಿದರು ಒಬ್ಬ ಮುಸ್ಲಿಮನನ್ನು ಬಂಧಿಸಲಾಗಿದೆ.

ಸ್ವೀಕಾರ

ಮಾಲೂರು ತಾ॥ ರಾಜೇಗಹಳ್ಳಿಯಲ್ಲಿರುವ ಮೆ॥ ರಾ॥ ಕಾವೇರಪ್ಪನವರ ಮೊನ್ಯೂಗೆ ಜಾವ್ರಶೇಷಾದಪ್ಪನಿಗೂ ಚಿಕ್ಕೂರು ಡಿ॥ ಪಲಮನೇರು ಗ್ರಾಮದಲ್ಲಿರುವ ಸಾಧು ಕಾರ್ ನಾಗಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನಿಗೂ ರಾಜೇಗಪಲ್ಯೆಯಲ್ಲಿ ನಡೆವ ವಿವಾಹಸಂಭ್ರಮೋತ್ಸವ ಸಮಯದಲ್ಲಿ ಪೂರ್ವದಲ್ಲಿ ಕಡೆಯಿಂದ ಪ್ರಧಾನ ಪೋಷಣಕ್ಕೋಸ್ಕರ ತೆಗೆಯಿಸಿದ **5-8-0** ರೂ ಗಳು ಬೆಂಗಳೂರು ಸಿಟಿಯಲ್ಲಿರುವ ಪ್ರೊಗೆಸ್ಸೂ ಟೈಪ್ ವೌಂಡ್ರಿ ವ॥ ರಾ॥ ವಿ ಚಂದ್ರಶೇಖರಪ್ಪನವರ ದ್ವಾರಾ ತಲಪಿರುತ್ತವೆ

ಹುಬ್ಬಳ್ಳಿ ಟೌನಿನಲ್ಲಿರುವ ಗುರುಭಕ್ತ ಶಿಖಾಮಣಿ ಬಳ್ಳಿಕೈ ಕೀರ್ತಪ್ಪನವರು ತಾ॥ 14 6 45 ನೆಯ ಸಾಮುವಾರ ದಿನಸ ಶಿವಾದೀಕ್ಷಾದ ಸವ.ಯದಲ್ಲಿ ಅವರ ಪುತ್ರರಾದ ಮೆ॥ ರಾ॥ ಷಣ್ಮುಖಪ್ಪನವರು ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂ ಗಳು ವೆ॥ ತಗ್ಗಿನ ನರದ ಅಡಿನಪ್ಪಯ್ಯನವರ ದ್ವಾರಾ ತಲಪಿರುತ್ತವೆ

ಕಾನಕಾನಹಳ್ಳಿ ತಾ॥ ದೊಡ್ಡಕೊಪ್ಪ ಗ್ರಾಮವ ಲ್ಲಿರುವ ಸ ಖಂಡೋದಯ್ಯನವರ ಪುತ್ರಿ ಚಿ॥ ಸೌ॥ ದೇವಮ್ಮನಿಗೂ ನಂ॥ ರಾ॥ ಪುಟ್ಟವ್ಮಾದಪ್ಪನವರ ಪುತ್ರ ಚಿ॥ ಪರಶಿವಯ್ಯನಿಂ ವರಿಸಿಗೆ ಕೊಟ್ಟು ತಾ॥ 13 6 45 ನೆಯ ದಿವಸ ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಬೀಮಗೌಂಡನಹಳ್ಳಿ ಮರದ ಶ್ರೀ ಪರ್ವತಾರಾಧ್ಯಸ್ವಾಮಿಗಳ ಸೂಚನೆಯ ಮೇರಗೆ ಪ್ರಭಾಪೋಷಣಕ್ಕೋಸ್ಕರ ನವನ ಕಡೆಯಿಂದ ತೆಗೆಯಿಸಿದ **1** ರೂ ವಪ್ಪುನಿನ ಕಡೆಯಿಂದ ತೆಗೆಯಿಸಿದ **1** ರೂ ಒಟ್ಟು **3** ರೂ ಗಳು ಮಿ॥ ರಾ॥ ಆರ್ಮಸ್ ಹಳ್ಳಿ ಎ ಎಂ ಕೆಂಪಯ್ಯನವರ ದ್ವಾರಾ ತಲಪಿರುತ್ತವೆ

ಬಳ್ಳಾರಿ ಡಿ॥ ಸೆಟ್ಟ್ರ ಗ್ರಾಮದಲ್ಲಿರುವ ಹಂದಿಸಾಳು ಕಂಬಳಿಮನೆಯ ವೆ॥ ಮಹಾದೇವಯ್ಯನವರ ಪುತ್ರ ಚಿ॥ ವಿಶ್ವಾಂಧ್ಯನೆಂಬ ವರಿನಿಗೂ ಏಜಾಂ ಇಲಾಖಾ ಕೊಪ್ಪಳ ಸಂಗನಕಾಳು ಸೊಸ್ಪಿಮಠದ ವೆಕೀಲ ವೆ॥ ಪಟ್ಟದಯ್ಯನವರ ಪುತ್ರಿ ಚಿ॥ ಸೌ॥ ಶಿವಬಾಯಿಗೂ ಮೇಲ್ಕಂಡ ಮಹಾದೇವಯ್ಯನವರ ತೃತೀಯ ಪುತ್ರ ಚಿ॥ ವಿಶ್ವಮುನಿಯೆಂಬ ವರಿನಿಗೂ ಶಿರಹಟ್ಟಿ ತಾ॥ ಅಂಕಲಿ ಹಿರೇಮಠದ ವೆ॥ ಚನ್ನಯ್ಯನವರ ಪುತ್ರಿ ಚಿ॥ ಸೌ॥ ಸುಲೋಚನಾಯಿಗೂ ನೆರವೇರಿದ ವಿವಾಹ ಸಮಯದಲ್ಲಿ ಪ್ರಧಾನಪೋಷಣಕ್ಕೋಸ್ಕರ ವೆ॥ ಮಹಾದೇವಯ್ಯನವರು **2** ರೂ. ಗಳನ್ನು ತೆಗೆಯಿಸಿ ಕಳುಹಿಸಿದ್ದಾರೆ.

ತುಮಕೂರು ಡಿ॥ ಕೋರಗ್ರಾಮದಲ್ಲಿರುವ ವೆ॥ ಮರದ ಹಲಗಾಖ್ಯಾಧ್ಯರ ಸಹೋದರ ವೆ॥ ಚನ್ನ ಬಸವದೇವರ ಪುತ್ರಿ ಚಿ॥ ಸೌ॥ ಗುರುಸಿದ್ಧಾಂಬೆಯನ್ನು ನಾಗಮಂಗಲ ತಾ॥ ದೇವಲಾಪುರ ಮರದ ಲೇಟ್ ರುದ್ರಾರಾಧ್ಯರ ಪುತ್ರ ಚಿ॥ ಆರ್ ನಂಜುಂಡಾರಾಧ್ಯ ಎಂಬ ವರನಿಗೆ ಕೊಟ್ಟು ಜ್ಯೇಷ್ಠ ಶುದ್ಧ ೧೧ ದಿನಸ ನೆರವೇರಿಸಿದ ವಿವಾಹ ಸಮಯದಲ್ಲಿ ವೆ॥ ಪಲಗಣ್ಣಾರಾ ಧ್ಯರು ಪ್ರಜಾಪ್ರೋಷಣಕ್ಕೋಸ್ಕರ **2** ರೂ ಗಳನ್ನು ತೆಗೆಯಿಸಿ ಕಳುಹಿಸಿದ್ದಾರೆ

ಜೊಸಪೇಟೆ ತಾ॥ ಗುಂಡ್ಲಹಳ್ಳಿಗೇರಿ ಗ್ರಾಮದಲ್ಲಿರುವ ಮೆ॥ ರಾ॥ ಸೊಂಡೂರು ಶಿವಪ್ಪನವರು ತಮ್ಮ ಗೃಹ ದಲ್ಲಿ ಶ್ರೀ ನೊಂಬದ ಸ್ವಾಮಿಗಳವರ ಪಾದಪ್ರಜೆಯನ್ನು ನೆರವೇರಿಸಿದ ಸಮಯದಲ್ಲಿ ಧರ್ಮವೀರ ರಾಜಾಶ್ರೀದ ಸಿದ್ಧಪ್ಪನವರ ಸೂಚನೆಯ ಮೇರಗೆ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ **2** ರೂ ಗಳು ವೇ॥ ಎಚ್. ಎಂ ಶಿವಲಿಂಗಯ್ಯನವರು ಕಂಬಳಿಮರೆ ಕಾಕಿಯಾಳು ಇವರ ದ್ವಾರಾ ತಲಪಿರುತ್ತವೆ

ಬಾದಾಮಿ ತಾ॥ ಗೋವನಕೊಪ್ಪ ಗ್ರಾಮದ ಶ್ರೀಮಂತ ಮಾಳವಾಡದ ಶಂಕರಪ್ಪನವರು ಶ್ರೀ ಬನ ಶಂಕರೀ ದೇವಸ್ಥಾನದಲ್ಲಿ ವೈಶಾಖ ಬ॥ ೧೦ ದಿವಸ ತಮ್ಮ ಅಣ್ಣಾದಿರಾದ ಸಿದ್ಧಪ್ಪನವರ ಪುತ್ರ ಚಿ॥ ಚಂದ್ರ ಶೇಖರಪ್ಪನಿಗೂ ಶುಚ್ಚಿಭೂಯಿಪ್ಪಿರನ ಮಗಿ ರಾ॥ ಕಟಗೇರಿ ಶಿವಪ್ಪನವರ ಪುತ್ರಿ ಚಿ॥ ಸೌ॥ ಚಂಪಾವತಿಯಿಗೂ, ಇವರ ಪುತ್ರ ಚಿ॥ ದೇವಣಸಿದ್ಧಪ್ಪನಿಗೂ ಬಾದಾಮಿಯಲ್ಲಿರುವ ಮೆ॥ ರಾ॥ ವಿಟ್ಟಲಕೋಡ ಗುಂಡಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತೀದೇವಿಗೂ, ಮಿ॥ ರಾ॥ ಸಂಗನ ಬಸಪ್ಪನವರ ಪುತ್ರ ನೀಲಮಲಿಂಗಪ್ಪನಿಗೂ ಕನ್ನೂರು ಕಡ್ಡಿ ಶಿವಪ್ಪನವರ ಪುತ್ರಿ ಚಿ॥ ಸೌ॥ ಗಂಗಾದೇವಿಗೂ, ಮೆ॥ ರಾ॥ ಗುರುಸಾದಪ್ಪನವರ ಪುತ್ರ ಪಂಚಾಕ್ಷರಪ್ಪನಿಗೂ ಬಾದಾಮಿ ಚಿನ್ನಪಾಲರ ಲಿಂಗಪ್ಪನವರ ಪುತ್ರಿ ಚಿ॥ ಸೌ॥ ವಿಮಲಾದೇವಿಗೂ ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ **2** ರೂ. ಗಳು ಕೊಣ್ಣೂರು ಹಿರೇಮಠದ ಶ್ರೀ ಪಟ್ಟದಸ್ವಾಮಿಗಳವರ ದ್ವಾರಾ ತಲಪಿರುತ್ತವೆ

ಬಳ್ಳಾರಿ ಡಿ॥ ನೆಟ್ಟ್ರ ಹಿರೇಮಠದ ವೇ॥ ಅಮರಯ್ಯ ನವರ ಮನಸ್ಕಂಕಲ್ಪವು ಜಗದಾಂಬಾಯರ ಅಶೀರ್ವಾ ದ ಬಲದಿಂದ ನೆರವೇರಿದ ಸಂತೋಷಕ್ಕಾಗಿ **1** ರೂ ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಸೊಲ್ಲಾಪುರ ತಾ॥ ಮಂದ್ರೂಪ ಗ್ರಾಮದಲ್ಲಿ ನೆರ ವೇರಿದ ಶ್ರೀ ಕರಣಜಸನೇಶ್ವರ ಪುರಾಣ ಸನಸ್ಪಪ್ತಿ ಸಮಯದಲ್ಲಿ ಸದರಿ ಗ್ರಾಮದವರು **1** ರೂ ಯನ್ನು ತೆಗೆಯಿಸಿ ಸೊಲ್ಲಾಪುರದ ಶ್ರೀ ಧೇನುಕರಣತಿವಾಚಾರ್ಯರ ದ್ವಾರಾ ಕಳುಹಿಸಿರುತ್ತಾರೆ

ಈ ನೇಮ್ಲಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಶ್ರೀನಿಜ್ಞಹಾರರಾಜರವರ ಪ್ರವಾಸ

ಶ್ರೀಮಜ್ಞಹಾರರಾಜರವರು ಈ ತಿಂಗಳು ೩೦ ರಿಂದ ಜುಲೈ ೪೮ ವರೆಗೆ ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರವಾಸಮಾಡುವರು ೨೮ನೇ ತಾ॥ ಮಧ್ಯಾಹ್ನ ೧೫ ಗಂಟೆಗೆ ಸಾಹ್ಯಾದ್ಭುಗಳು ಬೆಂಗಳೂರಿಗೆ ಆಗಮಿಸುವರು. ಮಧ್ಯಾಹ್ನ ೩ ರಿಂದ ೪ ರ ವರೆಗೆ ಮಾನ್ಯ ಮಹಿಸೀಯರಿಗೆ ಭೇಟಿ ದಯಪಾಲಿಸುವರು. ೨೯ನೇ ತಾ॥ ಬೆಳಿಗ್ಗೆ ೯-೩೦ ರಿಂದ ೧೦-೪೫ ಗಂಟೆ ವರೆಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗೆ ಭೇಟಿ ದಯಪಾಲಿಸುವರು.

೩೦ ನೇ ತಾ॥ ಬೆಳಿಗ್ಗೆ ೮ ಗಂಟೆಗೆ ಬೆಂಗಳೂರು ಅರಮನೆಯ ಪೋಲೋ ಮೈದಾನದಲ್ಲಿ ಸೈನಿಕರಿಂದ ಸೆಲ್ಯೂಟ್ ಸ್ವೀಕರಿಸುವರು. ಸಾರ್ವಜನಿಕರು ಈ ಸಮಾರಂಭಕ್ಕೆ ಬರಲು ಅವಕಾಶವುಂಟು ಪ್ರೇಕ್ಷಕರು ೧೫ ನಿಮಿತ ಮುಂಚೆ ಹಾಜರಿರಬೇಕು. ೧೦ ಗಂಟೆಗೆ ಕೇಷಾಧ್ರಿಪುರದಲ್ಲಿ ಶ್ರೀತಿರುವೆಂಗಡಸ್ವಾಮಿ ಮೊದಲಿ ಯಾರರ ಹೆರಿಗೆ ಆಸ್ಪತ್ರೆಯ ಅಂಥೋಪ್ತವನ್ನು ನೆರವೇರಿಸುವರು.

ಸಿದ್ಧಾಂತ ಶಿಖಾಮಣಿ

ರೆಕ್ಕೆಮಟಿದಲ್ಲಿ ಜಗದ್ಗುರುವಾಗಿರುವ ಪ್ರತಿಯೊಬ್ಬ ಪಿಗೂ ಸ್ಫೂರ್ತಿಯಿತ್ತು ಜಗದ್ಗುರು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರುದ್ರೇಣುಕಾಚಾರ್ಯರು ಜಾದ್ವಿಷ್ಯತ್ತಿನ ಆಗ್ಯೋಷ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಶ್ರುತಿಪ್ರಮಾಣಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸರ್ವ ಗ್ರಂಥಗಳಲ್ಲಿಲ್ಲ ಇದೇ ಬಹು ಪೂರ್ವಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **ಶಿವಾನಿರೆ** ವರ್ಷಗಳ ಹಿಂದೆಯೇ ಪ್ರಚಾರದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವನ್ನು ವೀರಶೈವಮತಕ್ಕೆ ಮೂಲಪುರುಷರೆನಿಸಿರುವ ಪಂಚಾಚಾರ್ಯರುಗಳಲ್ಲಿ ಒಬ್ಬರಾದ ಶ್ರೀಸದ್ಯೋಜಾತಾಚಾರ್ಯರು ಪರಮಭಕ್ತಿಯಿಂದ ಕೈಲಾಸಕ್ಕೆ ಹೋಗಿ ಶ್ರೀಪರಮೇಶ್ವರನಿಂದ ಪಡೆದು ತಂದಿರುವುದೆಂದು ಇದಕ್ಕೆ ಇಂದಿನವರಿಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಒದಿರುವ್ಯಾರೆ ಆದರೆ ಒಂದು ವ್ಯಾಖ್ಯಾನವಿದ್ದಲ್ಲಿಯವರೆಗೂ ಗೂಢಾರ್ಥಗರ್ಭಿತವಾದ ಜ್ಞೋಕಗಳಿಗೆ ಸಂಬಂಧವಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರವಾಗುವಂತೆ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುವ್ಯಾರೆ ಈ ಗ್ರಂಥವನ್ನು ಓದಿನೋಡಿದುಮೇಲೆ ಮೂಡಿತ ವ್ಯಾಖ್ಯಾನದ ಮಹತ್ವವು ಇವರ ಶ್ರಮ ಅರಿಗೆ ವೇದ್ಯವಾಗುವುದು ಸಾರಥ ಅನುಕೂಲ್ಯಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೪೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾಕ್ಷಕಾಜಿ ಮನೋಹರಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣಾತೀತವಾಗಿದೆ ಕೈವಲ್ಯಲಲ್ಸುಕ್ಕಾಗಿ ಸಿನಿಕಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರಲ್ಲರೂ ಅವಶ್ಯವಾಗಿ ಓದಬೇಕ **ಬೆಲೆ ೨ ರೂಪಾಯಿ.**

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗಾನುಷ್ಠಾನವಿರುವ ಫೋಟೋ (ಸ್ನಾನಸಿದ್ಧಾಂತಗ್ರಂಥದಲ್ಲಿ ಮುದ್ರಿತವಾದುದು)ಸೈಜು ೧೪×೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಾಟಲಿಪುತ್ರದಲ್ಲಿ ಶಿವಜ್ಞಾನೋಪದೇಶವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲೀಲಾಮೂರ್ತಿಯ ಫೋಟೋ ಸೈಜು ೧೪×೧೦ ರೆಗ್ಯೂ ೦—೨—೦

" " " ಚಿಕ್ಕ ಸೈಜು ಬೆಲೆ ೦—೧—೬

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಲೋಕಾವತಾರವಿರುವ ಫೋಟೋ ೦—೧—೬

ಶ್ರೀ ರೇಣುಕಾಚಾರ್ಯರು ಮಸ್ತಕಾಭಿಷೇಕಕ್ಕಾಗಿ ಪಟ್ಟಾಭಿಷೇಕ ಮಾಡುವ ಫೋಟೋ ೦—೧—೬

ಶ್ರೀರೇಣುಕಾಚಾರ್ಯರು ಶ್ರೀಲಂಕಾದಲ್ಲಿ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ ೦—೮—೬

ಶ್ರೀರೇಣುಕಾಚಾರ್ಯರು ಭೀಕರಾವತಾರ ಪರ್ವತದಲ್ಲಿರುವಂತೆ ೩ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೮—೬

ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯವರ ಹಸ್ತಾಮಿಗಳವರ ಫೋಟೋ (ನಾನಾವಿಧ ಬಣ್ಣದ್ದು) ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ ೦—೮—೬

ಶ್ರೀಮದ್ಭೂ ೧೪ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೬

ಶ್ರೀಮದ್ರಂಭಾಪುರೀ ಪೀಠಾಧೀಶ್ವ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೬

ಶ್ರೀಮದ್ಭುಯಿನ ಜಗದ್ಗುರುಗಳವರ ಸಪ ಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೬

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪೫ ೦—೩—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪೫ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಪ್ರಾಣದ ಅತ್ಯಂತ ಸುಂದರವಾದ ಫೋಟೋ ೧೪೫ ೦—೧—೬

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಕ್ತಿಯುತ ಸುಂದರ ಫೋಟೋ ೧೪೫ ೦—೧—೬

ಶ್ರೀ ಜಗದ್ಗುರು ಕೇದಾರಖಂಡಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ ೦—೧—೬

ಶ್ರೀರಂಭಾಪುರೀ ಜಗದ್ಗುರುಗಳವರ ಸಪ್ತ ಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ ೦—೧—೬

ದೇವಗಿರಿಯಲ್ಲಿರುವ ಲಂಬೋದರೇಶ್ವರಸನ್ನಿಧಿಯಲ್ಲಿ ನೆಲೆಸಿರುವ ರಂಭಾಪುರೀ ಜಗದ್ಗುರುಗಳ ಅಷ್ಟಪಲ್ಲಕ್ಕಿ ಮಹೋತ್ಸವದ ಫೋಟೋ ೦—೧—೬

ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ೦—೩—೦

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೩ನೆಯ ಆವೃತ್ತಿ)	೨ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಶಿವಶರಣರ ಪರ್ವಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಶ್ರೀಗುರುತತ್ತ್ವಪದಗಳು (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕ	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನಯ ಆವೃತ್ತಿ)	೪ ಆಣೆ
ಶ್ರೀಸಪಿಸಂಡಿತಾಕಾರಿಧ್ವರ ಕಾಲನಿರ್ಣಯ	೪ ಆಣೆ
ಶೈವೋಪಪತ್ತಿಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಸ್ತ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವನಿರೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾಂಶೀಸ್ಥಿ—ಕಾಶ್ಯಾದಿ ವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ
ಶಿವಾದ್ವೈತಪರಿಭಾಷಾ (೯೭)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ಯಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಗಳು (ತೆಲುಗು)	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಶಿವಾಗಮಸೂತ್ರಸಿದ್ಧಾಂತದರ್ಪಣ	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ವ್ಯಾಚೀನತ್ವ	೧ ರೂ
ವೈದಿಕಶಿವಪೂಜಾವಿಧಿ (ಸೈದಿಕ್ಸಕ್ಷಯುಕ್ತ್ವಸಂದುಮ ನೆಯ ಆವೃತ್ತಿ)	೧॥ ರೂ
ಶ್ರೀರಂಭಾಷ್ಯಂ (ಜ ೨೨ ಶ್ರೀ)	೧॥ ರೂ
ವೀರಶೈವರತ್ನ (ಸಚಿತ್ರ ಆವೃತ್ತಿ, ಇ ಗಡ್ಡದ ಫೋ ೧ ಗಲಿಂಗನದ)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಛಂದೋಬದ್ಧವಾದುದು)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಿಂಗ್ರಹ (ಪಂಚಬ್ರಹ್ಮಾಸ್ಯಾಗಮ-ಕಾಮಿಕಾಗಮ-ಮಂಚುಟಿಗಾ ಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡದ್ವಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastrin (*English*)	**4 As**
The Philosophical Aspect of Viraisaivism (*English*)	**8 As**
Speeches by Pandit Shri Kashinatha Shastrin (*English*)	**12 As**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	**೩ ಕ.**
ವೀರಶೈವರತ್ನ (ಮರಾಠಿ)	**೧ ರೂ.**
ಮಹಾಚಾರ್ಯಾಭಿನಂದನಮಾಲಿಕಾ (ವೀರಶೈವಾಚಾರ್ಯ-ಸಂಸ್ಕೃತ)	**೧ ರೂ.**
ಸಂಧಿಕೌಮುದೀಕಾರಿಕಾ (ಸಂಸ್ಕೃತ)	**೨ ಆಣೆ.**

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿಶ್ಚರ್ ಪಂಚಾಸ್ಯವೀರಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೇಶ್ವರರ್ ।
ಪಂಚಾಚಾರವಿಧಾಯಿಮಾಕರ್ ಪರಿಲಸತ್ಪಂಚಾಕ್ಷರೀಮೋಧರರ್ । ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪುದೀಲೋಕಮಂ ॥

ಒಳದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಜುಲೈ ೧೯೪೪ [ಸಂಚಿಕೆ ೮

ಪ್ರಭಾ ಶುಭಾಶಂಸನಂ

ಶ್ರೀಮದೇವಾನನಜಿ ಜನಿಸಿದ ।
ಸೋಮಸುಂದರಮೂರ್ತಿ ದಾರುಕ ।
ಶ್ರೀಮದಿಂದಲಿ ನಿಪ್ಪ ಮಹಿಮೆಯ ಸುಪಿಪೆ ನಾ ಸತಕಂ॥
ನಾವ ಜ್ಞಾನವಿಲೋಲ ಭಕ್ತಿ ।
ಶ್ರೀಮಿಗಳಗಿನ್ನಂದನಿಯುವ ।
ಶ್ರೀಮವಿಗ್ರಹ ವಿಶ್ವವಂದ್ಯನೆ ಕರಣ ಶರಣೆಂಬೆ ॥೧॥

ಸೌಜ್ಯಯಿಸಪ್ತವರ ಮಧ್ಯದಿ ।
ಪ್ರಜ್ವಲಿಪ ಸದ್ಧರ್ಮದೀಪವ ।
ಪ್ರಜ್ಞಾಪಾದಿನ್ನರಿ ಸದ್ಗುರುಸಿದ್ಧಲಿಂಗೇಶ ॥
ಸರ್ವಜ್ಞನಾದಿಗಳನ್ನು ವ ದಿಸಿ ।
ಸರ್ವರ ಒಯ್ಯಕೆಯನು ಸಲ್ಲಿಸಿ ।
ಪ್ರಜ್ಞ ಲೋಕದಿ ಮೆರೆದೆ ಗುರುವೆ ಭಕ್ತಸುರತರುನೆ॥೨॥

ಯೋಗಿಯೇ ಶ್ರೀನಹುದು ಪರವರೆ ।
ಭೋಗಿಯೇ ಮುಕ್ತ್ಯಂಗನೆಯೊಳು ವಿ ।
ರಾಗಿಯೇ ಪಡ್ಡಗಿಗಳ ಸಮುದಾಯದೊಳು ನೀನು ॥
ಭೋಗಿಬೂಷಣನಂತೆ ಮೆರೆದಿಹೆ ।
ತ್ಯಾಗಿ ಶಾಂಭವಯೋಗಿಯೇ ನೀಂ ।
ರಾಗದಿಂದಲಿ ನಲಹು ನಮ್ಮನು ಸಿದ್ಧಲಿಂಗೇಶಾ ॥೩॥

ಯೋಗಿವರ್ಯನ ಕೃಪೆಯ ಪಡೆದಿಹ ।
ರಾಗರಹಿತನು ಕಾತಿನಾಥನು ।
ತ್ಯಾಗದಿ ಪಂಚಾಚಾರ್ಯ ಪ್ರಭೆಯ ಬೆಳಗಿಸುವಂ ॥
ಶ್ರೀಗುರುಧ್ವಜೆ ಪ್ರಭಾದೇವಿಯೇ ।
ರಾಗದಿಂ ಸಲೆ ನುತಿಪ ನರರಿಗೆ ।
ಬೇಗನಜ್ಞಾನಾಂಧಕಾರವ ಕಳೆವುದೌ ಮಾತೇ ॥೪॥

ವೀರಶೈವೋದ್ಯಾರಕಾಗಿಯೆ ।
ಸಾರತತ್ತ್ವದ ಬೋಧೆಗಾಗಿಯೆ ।
ಧೀರರೆನಿಪ ಕೀರ್ತಿಗಾಗಿಯೆ ಸಾರಿ ಬರುತಿರುವೆ ॥
ವೀರಕನ್ನಡನಾಡಮಧ್ಯದಿ ।
ಸಾರಪತ್ರಿಕೆಯಾಗಿ ಹೊರಡುವೆ ।
ಸೂರಸುಸ್ರಭಿಗಿಂತ ಸೂರ್ಮಿಯಾಗಿ ಬೆಳಗು ನೀ॥೫॥

ಕವಿಕಲಾನಿಧಿ
ಸುಬ್ರಾಂತಿನಮಕ, ಎಮ್ಮಿಗನೂರು

ತಿರೋಪದೇಶಪ್ರಸಂಗ

ಬಳ್ಳಾರಿ ಡಿ॥ ಕೂಡ್ಲಿಗಿ ತಾ॥ ಕಾಶಾಮಡು ಗ್ರಾಮವು ಸುಪ್ರಸಿದ್ಧ ಶರಣರ ತಪೋಭೂಮಿಯಾಗಿದೆ. ಅಷ್ಟದಾಸ, ವಿದ್ಯಾದಾನಗಳು ಅವಿಚ್ಛಿನ್ನವಾಗಿ ಸಾಗಿವೆ ಇಲ್ಲಿ ಶಿವಾಚಾರದ ಆಚ್ಯುನಿಷ್ಠೆಗಳು ಬಹು ನಿಷ್ಠೆಯಿಂದ ಪಾಲಿಸಲ್ಪಡುತವು. ಈ ಸ್ಥಳವು ಮೈಸೂರು ಮತ್ತು ಮದ್ರಾಸು ಪ್ರಾಂತಗಳ ಗಡಿಯಲ್ಲಿರುವುದರಿಂದ ಉಭಯ ಸುಂಕದ ಆಗಂತುಕ ಮಂಡಲೆಯು ವಿಶೇಷವಾಗಿದೆ ಈ ಸಂಸ್ಥಾನದ ಯಜಮಾನರಾದ ಶ್ರೀಯುತ ಭಕ್ತಾಗ್ರೆಸ ಗಣ್ಯ ಶರಣಪ್ಪನವರು ಚಿಕ್ಕವರಾಗಿದ್ದು ತುಂಬಾ ಉತ್ಸಾಹಿಗಳೂ, ಧರ್ಮಾಭಿಮಾನಿಗಳೂ ಆಗಿದ್ದಾರೆ ಸದರಿಯವರ ಆಮಂತ್ರಣದ ಮೇರೆಗೆ ತಾ ೨೦ ೬ ಅಲ ಭಾನುವಾರ ಹುಟ್ಟುನಹಬಗಲಿ ತಾ॥ ಹೊಳಗುಂದಿ ಗ್ರಾಮದ ಉಜ್ಜಯಿನಿ ಒಡೆಯರ ಮಠಾಧ್ಯಕ್ಷ ಶ್ರೀ ಷ॥ ಬ್ರ॥ ಸಿದ್ಧಲಿಂಗಶಿವಾಚಾರ್ಯಸ್ವಾಮಿಗಳವರು, ಧಾರವಾಡ ಡಿ॥ ಮೊರಬ ಗ್ರಾಮದ ಜಡೆಮಠಾಧ್ಯಕ್ಷ ಬಾಲಬ್ರಹ್ಮಚಾರಿ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರೂ ಆಗಮಿಸಿದರು ಮರುದಿನ, ಸೋಮವಾರ ಸರ್ವರೂ ಸದಿಚ್ಛೆಯಂತೆ ಶ್ರೀ ಷ॥ ಬ್ರ॥ ಹೊಳಗುಂದಿ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭಾಪ್ರಾರಂಭವಾಯಿತು ಸ್ತೋತ್ರಾದಿ ನಂತರ ಮೊರಬದ ಶ್ರೀಗಳವರು, ವಿಜ್ಞಾನ, ಧರ್ಮ, ಗುರುಕುಲಶಿಕ್ಷಣ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿ ಗಳನುರಂದ ಗುರುವರ್ಗಕ್ಕೂ ತನ್ಮೂಲಕ ಸಮಾಜಕ್ಕೂ ಆಗಿರುವ ಮಹೋಪಕಾರ ಇವುಗಳ ಒಳ್ಳೆ ಪರಿಣಾಮ ವಾಗುವಂತೆ ಭಾಷಣವನ್ನಿತ್ತರು ಇದರಿಂದ ಸಂಸ್ಕೃತ ರಾದ ಸಭಿಕರು ಒಲಬೃಹಸ್ಪತಿಗಳಿಗ ಹೃತ್ಪೂರ್ವಕವಾಗಿ ಮಹತ್ವಪೂರ್ಣ ಬಿನ್ನವತ್ತಳೆಯನ್ನು ಅರ್ಪಿಸಿದರು ಒಳಕ ಅಧ್ಯಕ್ಷರು ಭಾಷಣಕಾರರ ಸಾಹಸಚೇತನವನ್ನು ಶ್ರದ್ಧಾಬುದ್ಧಿಗಳ ದಿಗ್ದರ್ಶನಮಾಡಿ ಶಾಬುದಾಡಿಗಳ ನುತ್ತು, ಸಮಾಜದ ಸೇವೆಗಾಗಿ ಅವಿಶ್ರಾಂತವಾಗಿ ಹೋರಾಡುವಿಕೆಯನ್ನು ಸಮಂಜಸವಾಗಿ ಬೋಧಿಸಿದರು ಕೊನೆಗೆ ಶ್ರೀ ಶರಣಪ್ಪನವರ ಮೂಲಕಗದ್ದಿಗೆಗೆ ಮರ್ಮಾಮಂಗಳಾರತಿಯಾಗಿ ಜಗದಾಚಾರ್ಯರ ಜಯ ಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಕೆ ಎಂ ಸಿ ಶರ್ಮಾ

ವಿವಾಹಮಹೋತ್ಸವ ಬಸ್ಸಿಹಬ್ಬಿ

ವಿಜಾಪುರ ಡಿ॥ ಹುನಗುಂದ ತಾಲೂಕಿನ ಚಿತ್ತವಾಡಿಗಿ, ವಿರಾಪುರೆ, ಚಿಕ್ಕಬಾದವಾಡಿಗಿ ಮೊದಲಾದ ಗ್ರಾಮಗಳಲ್ಲಿ ಮರ ಮತ್ತು ಸ್ಪಾಸ್ತಿಗಳುಳ್ಳವರೂ ಶಿಷ್ಯ ಪ್ರಶಿಷ್ಯ ಪರಂಪರೆಯುಳ್ಳವರೂ ಆದ ಹುನಗುಂದ ತಾ॥ ಒನ್ನಿಹಟ್ಟಿ ಸಾರಂಗದೇವರ ಹಿರೇಮಠದ ವೇ॥ ಸಂಗಯ್ಯಯ್ಯನವರು ತಮ್ಮ ಪುತ್ರ ಚಿ॥ ನ್ಯುತ್ಯುಂಜಯ ಸ್ವಾಮಿಗೆ ಧಾರವಾಡ ಡಿ॥ ರೋಣ ತಾ॥ ಗಾವರವಾಡ ಹಡಗಲಿ ಹಿರೇಮಠದ ವೇ॥ ಚಂದ್ರಶೇಖರಪ್ಪಯ್ಯನವರ ಪುತ್ರಿ ಚಿ॥ ಸೌ॥ ಗಿರಿಜಾದೇವಿಯನ್ನು ತಂದು ವೈಶಾಖ ಬ॥ ೧೦ ಬುಧವಾರ ದಿವಸ ವಿವಾಹಮಹೋತ್ಸವನನ್ನು ವಿಶೇಷ ವೈಭವದಿಂದ ನೆರವೇರಿಸಿದರು. ಈ ವಿವಾಹ ಸಮಾರಂಭವು ಗಾವರವಾಡ ಹಡಗಲಿ ಹಿರೇಮಠಾಧಿಪತಿಗಳಾದ ಶ್ರೀ ಷ॥ ಬ್ರ॥ ಪಟ್ಟಾಧ್ಯಕ್ಷ ಸಂಗಮೇಶ್ವರ ಶಿವಾಚಾರ್ಯಸ್ವಾಮಿಗಳ ಅಧ್ಯಕ್ಷತೆಯಲ್ಲಿಯೂ ಜೆಳವಡಿಕೆ ಹಿರೇಮಠದ ವೇ॥ ಗುರುದೇವಪ್ಪಾಸ್ವಾಮಿಗಳ ವೈದಿಕಕ್ರಿಯೆಗಳಲ್ಲಿಯೂ ವಿಧ್ಯುಕ್ತವಾಗಿ ಜರುಗಿತು. ಅಕ್ಷೇ ದಿವಸ ರಾತ್ರಿ ಉಭಯ ಮಹಾಸ್ವಾಮಿಗಳ ಮೇಲೆ ವಧೂ ವರರ ಮೆರವಣಿಗೆಯು ಮಂಗಳವಾದ್ಯವೈಭವದೊಡನೆ ನಡೆಯಿತು ಈ ಸಮಾರಂಭಕ್ಕೆ ಹುನಗುಂದ ತಾಲೂಕ ಕಚೇರಿಯ ಅಧಿಕಾರಿ ವರ್ಗದವರೂ ಅಪ್ತ ಮಿತ್ರರೂ ಎಲ್ಲ ಪ್ರತಿಷ್ಠಿತ ಗೃಹಸ್ಥರೂ ಆಗಮಿಸಿದ್ದರಿಂದ ಆತ್ಯಂತ ಕೋಳಿಯುಂಟಾಗಿತ್ತು ಈ ಶುಭಸಮಾರಂಭದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ ನದರಿ ಮರದ ಸಮಸ್ತ ಶಿಷ್ಯವೃಂದದ ಮನೋರಥವು ಫಲಸಲೆಂದೂ ನೂತನ ನದೂವರರಿಗೆ ಆಯುರಾರೋಗ್ಯಭಾಗ್ಯಗಳು ವರ್ಧಿಸ ಲೆಂದೂ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಪ್ರಾರ್ಥಿಸುತ್ತೇನೆ

ಸಿದ್ಧಲಿಂಗಸ್ವಾಮಿ ಹಿರೇಮಠ ಭುರಗಿ

ಹೈದರಾಬಾದಿನ ಬಗ್ಗೆ ರಿಸರ್ವ್ ಬ್ಯಾಂಕಿನ ಕಟ್ಟಾಜ್ಞೆ !

ಭಾರತ ಡೊಮಿನಿಯನ್ನಿನಿಂದ ಹೈದರಾಬಾದ್ ಸಂಸ್ಥಾನಕ್ಕೆ ಬಂಗಾರ, ಬೆಳ್ಳಿ, ಅಭರಣಗಳು, ವಜ್ರ, ವೈಡೂರ್ಯಗಳು, ಇಂಡಿಯಾಸರ್ಕಾರದ ಕರೆನ್ಸಿ ನೋಟುಗಳು, ಸಾಣ್ಯಗಳು ಮತ್ತು ಬ್ಯಾಂಕ್ ನೋಟುಗಳು ಮುಂತಾದುವುಗಳನ್ನು ಸಾಗಿಸಕೂಡದೆಂದು ಇಂಡಿಯಾ ರಿಸರ್ವ್ ಬ್ಯಾಂಕ್ ಕಟ್ಟಾಜ್ಞೆ ಮಾಡಿದೆ ಭಾರತ ಸರ್ಕಾರದವರು ಹೊರಡಿಸಿರುವ ವಿಶೇಷ ಗೆಜೆಟ್ಟಿನಲ್ಲಿ ಈ ಆಜ್ಞೆಯನ್ನು ಪ್ರಸಿದ್ಧಗೊಳಿಸಲಾಗಿದೆ

ಭಾರತ ಸರ್ಕಾರಕ್ಕೆ ಹೈದರಾಬಾದಿನ ಎಚ್ಚರಿಕೆ

' ಭಾರತ ಸರ್ಕಾರವು ಇತ್ತೀಚಿಗೆ ಕೈಗೊಂಡಿರುವ ಕಾರ್ಯಕ್ರಮಗಳನ್ನು ನೋಡಿದರೆ ಕಾಲುಕೆರೆದು ಜಗಳಕ್ಕೆ ನಿಲ್ಲುವ ಉದ್ದೇಶದಿಂದ ಆರ್ಥಿಕ ದಿಗ್ಬಂಧನವನ್ನು ಹಾಕಿರುವಂತೆ ಕಾಣುತ್ತದೆ ಆದರೆ ಇಂಥ ಬೆದರಿಕೆಗೆ ಹೈದರಾಬಾದು ಎಂದಿಗೂ ಹೆದರುವುದಿಲ್ಲ ಇನ್ನೂ ಎಷ್ಟೇ ವರ್ಷಗಳಾದರೂ ಹೈನರಾಬಾದನ್ನು ತುಳಿಯಲು ಸಾಧ್ಯವಿಲ್ಲ ಅದನ್ನು ಎದುರಿಸಿದಂತೆಲ್ಲಾ ಅದರ ಶಕ್ತಿಯು ಹೆಚ್ಚುತ್ತಾ ಹೋಗುವುದು' ಎಂದು ಹೈದರಾಬಾದಿನ ಮುಖ್ಯ ಮಂತ್ರಿ ಲಿಯಾಖ್ ಅಲಿಯವರು ಹೇಳಿದ್ದಾರೆ ಅವರು ತಮ್ಮ ಹೇಳಿಕೆಯನ್ನು ಮುಂದುವರೆಸುತ್ತಾ—ಹೈದರಾಬಾದಿನ ರಕ್ಷಣೆ ಮತ್ತು ಜಗಳ ಹಚ್ಚಿದ್ದಕ್ಕಿಂದ ಇದುವರೆಗೂ ಶಾಂತಿಯಿಂದ ಸಂಧಾನ ನಡೆಸಿ ದ್ದಾಯಿತು. ಇನ್ನು ಮುಂದೆ ಅಂಥ ಶಾಂತಿ ಸಂಧಾನಕ್ಕೆ ಅಪ್ಪದವಿಲ್ಲವೆಂದೂ ಕಾಣುತ್ತದೆ. ಹೈದರಾಬಾದಿನ ಮೇಲೆ ಯುದ್ಧವನ್ನು ಘೋಷಿಸಿದರೆ ಅದಕ್ಕೆ ಸಾವು ಹೆದರುವುದಿಲ್ಲ. ನಾವು ಅದಕ್ಕೆ ಸಿದ್ಧರಾಗಿಯೇ ಇದ್ದೇವೆ. ಭಾರತ ಸರ್ಕಾರವು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಜಾಗರೂಕತೆಯಿಂದ ವರ್ತಿಸಬೇಕೆಂದು ನಾವು ಎಚ್ಚರಿಸ ಬೇಕಾಗಿದೆ. ಇಲ್ಲವಾದರೆ ಅನರ್ಥವಾದೀತು ಹೇಗಾದರೂ ಕಮಗೆ ಇಯವು ಸಿದ್ಧ ! ಎಂದು ತಿಳಿಸಿದ್ದಾರೆ.

ಶಿವಲಿಂಗಾರ್ಚನೆ

ಶ್ರೀಚಟ್ಟಿವಿದ್ಯಾಮಿಗಳು ಹಿರೇಮಠ, ಕೊಣ್ಣೂರು

ವೀರಶೈವಮತೀಯರಿಗೆ ಗುರುವಿನಿಂದ ಅನುಗ್ರಹಿಸಲ್ಪಟ್ಟ ಶಿವಲಿಂಗದ ಪೂಜೆಯಿಂದಲೇ ಮುಕ್ತಿಯು ಲಿಂಗನಿಂದೆರೆ ಜಗಜ್ಜನ್ಮಾದಿಗಳಿಗೆ ಕಾರಣವಾದ ಶಿವ ನೆಂದರ್ಥವು ಅರ್ಚನೆಯೆಂದರೆ ಪೂಜಿಸುವುದೆಂದರ್ಥವು ಆಕಾರನೆಗೊಂಡಿರುವ ವಸ್ತುವನ್ನು ಪೂಜಿಸಬಹುದೇ ಹೊರತು ಅಕಾರದಿಂ ನಿರವಯವನಾದ ಶಿವನನ್ನು ಪೂಜಿಸುವುದು ಹೇಗೆ ಎಂದು ಕೆಲವರು ನುಡಿಯುತ್ತಿರುವರು ಕರಗಿದ ತುಪ್ಪವು ಗಟ್ಟಿಗೊಳ್ಳುವಂತೆ ಶಿವನು ನಿರವಯವನಾಗಿದ್ದರೂ, ಲೀಲಾಕಲ್ಪಿತವಿಗ್ರಹವುಳ್ಳವ ನಾದುದರಿಂದ ಭಕ್ತರ ಕಲ್ಯಾಣಕ್ಕೋಸ್ಕರ ಗುರುವಿನಿಂದ ಕೊಡಲ್ಪಟ್ಟ ಇಷ್ಟಲಿಂಗದಲ್ಲಿ ವಾಸಮಾಡಿ ಭಕ್ತರ ಕೈಂಕರ್ಯಾದಿಗಳನ್ನು ಸ್ವೀಕರಿಸುತ್ತ ಇಷ್ಟಲಿಂಗಾಕಾರ ನಾಗಿ ಪರಿಣಮಿಸಿರುವುದರಿಂದ ಶಿವಲಿಂಗವು, ಲಿಂಗಾಂಗಿ ಯಾದ ಮಾನವನಿಗೆ ಪೂಜ್ಯವಾಗಿರುತ್ತದೆ ಪರಶಿವನು ತೃಣಾತಿಸೂಕ್ಷ್ಮಾದಿಗಳಲ್ಲೆಲ್ಲ ಸಾಮಾನ್ಯವಾಗಿ ವ್ಯಾಪಿಸಿ ದ್ದರೂ, ಇಷ್ಟಲಿಂಗದಲ್ಲಿ ವಿಶೇಷಾಕಾರವಾಗಿ ಇರುತ್ತಾನೆಂಬುದೇ ವೀರಶೈವಸಿದ್ಧಾಂತದ ರಹಸ್ಯ!

ವೀರಶೈವರು ಶಿವಲಿಂಗವನ್ನು ಕರುಸಿರಪಲ್ಲಿಟ್ಟು ಏಕಾಗ್ರಚಿತ್ತರಾಗಿ ಪಂಚೋಪಚಾರಗಳಿಂದಾಗಲಿ ಷೋಡಶೋಪಚಾರಗಳಿಂದಾಗಲಿ, ಪೋಡಶೊ ಪಚಾರಗಳಿಂ ದಾಗಲಿ ಪೂಜಿಸಬೇಕು ತಿನಾರ್ಚನಾಸಕ್ತನಾದವನು ಸಕಲ ಪ್ರಯತ್ನದಿಂದಲೂ ಕಾಮಕರ್ನವನ್ನು ತ್ಯಜಿಸ ಬೇಕು

ಪ್ರಕಾಂ ಪಾಮಿಪ ನಾಮು ಶಿವಲಿಂ ತಸ್ಯಂ ಸಂ
ಪಚ್ಚಾಲಯಾಪ ತ್ರಿಕಾಲಂಪಾ ಪಕರುಂ ಸುಚೇ ಂ।
ಯೇ ಪೂಜಯಂತಿ ವಿಸ್ಪಷ್ಟಂ ತೇ ಯಾಂತಿ ಶಿವರೂಪತಾಂ॥

ಎಂದು ಧರ್ಮಶಾಸ್ತ್ರವು ಶಿವಲಿಂಗೋಪಾಸನೆಯೇ ಮುಕ್ತಿಗೆ ಸಾಧನವೆಂದು ಬೋಧಿಸುತ್ತಿರುವುದು

' ಸರ್ವಭೂತಶರೀರಾಶಯ ಎಂಬ ಶ್ರೀತಾರಕ ತತ್ತ್ವೋಪಾಸನವಾಸ್ತವ್ಯದಂತೆ ಅಂಂಲಿಂಗೋಪಾಸನೆಯೇ ಮಲ್ಯವಾದುದು ಬಹುಲಿಂಗೋಪಾಸನೆಯೆಂದು ಪ್ರಯೋಜನವೇನೆಂದು ಕೆಲವರು ನುಡಿಯುತ್ತಿರುವರು ಗೋವಿನ ಶರೀರದಲ್ಲಿ ಸೂಕ್ಷ್ಮರೂಪದಿಂದ ನೈತವಿದ್ದರೂ ಆ ಶ್ವೇತವು ಗೋವಿನ ರೋಗನಿವಾರಣೆಯನ್ನು ಸಾಧಿಸಲು ಎಂದೂ ಸಾಧ್ಯವಾಗುವಿಲ್ಲವಷ್ಟೆ! ಆದರೆ ಗೋವಿನಿಂದ ಕ್ಷೀರವನ್ನು ತೆಗೆದು ಕಾಸಿ ಹೆಪ್ಪುಹಾಕಿ, ಸುಧಾಸಾದಿ ಕ್ರಿಯೆಯಿಂದ ಜೆನ್ನಿಯನ್ನು ತೆಗೆದು ಶ್ವೇತವನ್ನು ಮಾಡಿ ದರೆ ಆ ಶ್ವೇತವು ಗೋವಿನ ರೋಗವನ್ನು ನಿವಾರಿಸು ವದು ಈ ತತ್ತ್ವಸಾಕ್ಷಾತ್ಕಾರಸಾಧನವಾಗಿಯೇ ಗುರುವು ದಶ ರಾಕಾಶದಲ್ಲಿರುವ ಪರಬ್ರಹ್ಮರೂಪಶಿವನನ್ನು ಯೋಗ ಕ್ರಿಯಾಬಲದಿಂದ ತಿಷ್ಯನ ಉಪ್ಪಾಸ್ಯರೆಸ್ಥಿರ ಇಷ್ಟ ಲಿಂಗದಲ್ಲಿ ನೆಲೆಗೊಳಿಸಿರುವನು ಬಹುಲಿಂಗೋಪಾಸನೆ ಯಿಲ್ಲದ ಅಂತರ್ಲಿಂಗೋಪಾಸನೆಯು ಎಂದಿಗೂ ಸಿದ್ಧಿಸುವದಿಲ್ಲ

ಗೋವಿನ ದೇಹದಲ್ಲಿ ಶ್ವೇತವಿರ್ದೊಡದೇಂ ಫಲವೆಂಬ ರೋಗನಿ । ದ್ರಾವನಶ್ವೇತಸಂಸ್ಕಾರಬಹುಲಕಕ್ಕೆ ಬಹಿರ್ಗತವಾಹೊದ ಲ್ಲಿಂ ॥ ಶ್ವೇತವಿಧದಿಂ ಶಿವಂ ಸಕಲಜಂತು ಶರೀರದೊಳ್ಪ್ರ ಸರಿರ್ದೊಡೇಂ । ಪ್ರಾಣಕಳಕ್ಕೆ ಬಾಹ್ಯಗುರುಪ್ರಾಣಪ್ರಯೋಕ್ಷೆಗೆ ಕಕ್ಷಾ ಪಿತಾಪಹಾ ತಿಳಿ!

ಎಂದು ಮೊಗ್ಗೆಯ ಮಾಯಿದೇವರು ಶತಕತ್ರಯ ದಲ್ಲಿ ನೇಮಲಿನ ವಿಷಯವನ್ನೇ ಸ್ಪಷ್ಟಪಡಿಸಿದ್ದಾರೆ

ಶಿವಲಿಂಗಮೂರ್ತಿಯು ಘೋರವೆಂತಲೂ, ಅಘೋರ ರವೆಂತಲೂ ಎರಡು ವಿಧವು ಕರಚರಣಾದಿಗಳುಳ್ಳ ಮೂರ್ತಿಯೇ ಘೋರವೆಂತಲೂ, ಲಿಂಗೂಪವಾದ ಮೂರ್ತಿಯೇ ಅಘೋರವೆಂತಲೂ ಶಾಸ್ತ್ರಕಾರರು ಹೇಳಿ ರುವರು " ಯಾ ತೇ ರುದ್ರ ಶಿವಾ ತನೂರಘೋರಾಣಾ ಪಾಪಕಾಶಿನೀ " ಎಂಬ ಯಜುರ್ವೇದದ ಮಂತ್ರ ಸ್ವರೂಪವನ್ನು ಶ್ರೀಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯ ೬ ನೆಯ ಪರಿಚ್ಛೇದದಲ್ಲಿ—

ಅಘೋರಂಲಿಂಗಸಾಕಾರಂ ಯಾ ತೇ ರುದ್ರ ಶಿವಾ ತನೂಃ ।
ಯಜುಷಾ ಗೀಯತೇ ಯಸ್ಮಾತ್ತಸ್ಮಾತ್ಸೌಮ್ಯತನುಃ ಶಿವಃ॥

ಎಂದು ಆಪ್ತನೆ ಕೊಡಿರುವರು ಮಗ್ವೇದವು ಸಹ ಈ ಕೆಳಗಿ ಋಚಾದಿಸಿರುವ ಮಂತ್ರದಿಂದ ಇಷ್ಟಲಿಂಗದ ಮಹತ್ತ್ವವನ್ನು ಮುಕ್ತಕಂಠದಿಂದ ಸಾರಿರುವದು

ಆಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರ
ಆಯಂ ಮೇ ಸಿ ವಿಶೇಷಾಯಂ ಲಿಂಗಾಭಿಮರ್ಶನಃ।
ಆಯಂ ಹಸ್ತೋ ಭಗವಾನ್ ಯಂ ಹಸ್ತಾಭ್ಯಾಂ ಜಗದ್ಭಿಷಜಾವುಭೌ
ಇಮಂ ತಂ ಸ್ವರ್ಗಸಾಧನಂ ಅಯಂ ಮೇ ಭಗವಾನ್

ಭಗವಾನ್ ಲಿಂಗರೂಪನಾದ ಶಿವನು, ನೆ ಹಸ್ತ ನನ್ನ ಆಂಗೈಯಲ್ಲಿಯೇ ಇರುವನು ಆಯಂ ಈ ನನ್ನ ಹಸ್ತದಲ್ಲಿರುವ ಲಿಂಗವು ಮೇ ನನಗೆ, ಭಗವತ್ತರ ಸಕಲೈಶ್ವರ್ಯವನ್ನು ಕೊಡುತ್ತದೆ ಆಯಂ ಈ ಲಿಂಗವು ಮೇ ನನ್ನ, ವಿಶ್ವಭೇಷಜ ಸಮಸ್ತ ರೋಗ ಗಳನ್ನು ಪರಿಹರಿಸುವುದರಲ್ಲಿ ದಿವ್ಯ ಷಧಸ್ವರೂಪವಾದುದು ಆಯಂ ಈ ನನ್ನ ಹಸ್ತಗತವಾದ ಲಿಂಗವು, ಶಿವಾಭಿ ಮರ್ಶನ- ಸಮಸ್ತಕಲ್ಯಾಣಗಳನ್ನುಂಟುಮಾಡತಕ್ಕುದು ಆಯಂ ಇ ಲಿಂಗವು ಮಾತಾ ತಾಯಿಯಂತೆ ಪ್ರೇಮಾ ಸ್ಪದವಾದುದು ಆಯಂ ಈ ಲಿಂಗವು ಪಿತಾ ತಂದೆ ಯಂತೆ ರಕ್ಷಿಸುವದು ಆಯಂ ಈ ನನ್ನ ಹಸ್ತಗತವಾದ ಲಿಂಗವು, ಜೀವನಾತು ತೀವನೌಷಧರೂಪವಾಗಿದೆ ಆಗ ಮಾತ್ರ ಜಾಪ್ಯಾಘಾದಿಂ ಪೀ ಸುಬಲಭೋ ಪೇಸಿರುವಿ ಕೊಡದೆ ಜಗದ್ಬಂಧುವೇ ? ನಿಜ ಬಾ, ಇದು ನನ್ನ ಹಸ್ತ ದಲ್ಲಿರುವ ಲಿಂಗವು ತನ್ನ ನಿನಗೆ ಪ್ರಸರ್ಪಣಾ ನಿವರಿ ರುವ ಸ್ವಾನುಗಾಗಿ ನಿರೀಹ ನುತ್ಕೃಷ್ಟ ಯ ಕೆಡೆಗೆ ಹೋಗದ ಈ ಶಿವಲಿಂಗವನ್ನು ರಿಸಾದರಿಂದ ಎಂದೆಂ ಗೂ ಧರಿಸುವ ಧಾರಣಾ ಪಹಕನನು ಒಹಳ ವಾಗಿ ಕೊಂಪಾಡಿರುವುದು ನೋಕ್ಷಾಪೇಕ್ಷೆಯುಳ್ಳ ವರಿಗಂತೂ ಎಷ್ಟರ ಮಾತ್ರವೂ ತಲೂ ಕರಸಿರ ಪೂಜೆಯೇ ಶ್ರೇಷ್ಠನಾದ ದೆಪ ಶ್ರೀತೇಜಾಕಾಚಾರ್ಯರು ಅಪ್ಪಣೆಕೊಡಿಸಿದ್ದಾರೆ

ಈ ವಿವಿಲಿಂಗವೆ ಶ್ರೇಷ್ಠತೆಯನ್ನು ತಿಳಿದುಕೊಂಡೇ ವಿಸ್ಮಬ್ರಹ್ಮಾದಿ ಸತತಿಗಳ್ ಲಕ್ಷಿಸಿ ಹೊದಲಾದ ಸಮಸ್ತಕ್ಷಿಯರೂ ಗೌತಮಂದಿ ಮಹರ್ಷಿ ಗಳು, ಶಿವಲಿಂಗವನ್ನು ಧರಿಸಿ ಪೂಜಿಸಿ ಕೆಲಸ್ಸನ ಪವನ್ನು ಅನುಭವಿಸಿದರೆಂದು ಅನೇಕ ಗ್ರಂಥಗಳಿಂದ ತಿಳಿಸು ತ್ತಿರುತ್ತದೆ

ಪ್ರತಿದಿನ ತಪ್ಪದೆ ಶಿವಪೂಜೆಯನ್ನು ಮಾಡಬೇ ಕೆಂದರೆ ಕೆಲವರು ನಾವು ಉದ್ಯೋಗಸ್ಥರು ನಮಗೆ ತಿಪೂಜೆಯನ್ನು ಮಾಡಲಿಕ್ಕೆ ನೇಳೆಯು ಎಗುವದಿಲ್ಲ ನೆಂದು ನುಡಿಯುತ್ತ ನಿರರ್ಥಕವಾದ ಚಿದರಂಗ, ಪಗಡಿ, ಇಸ್ಪೀಟು ಮುಂತಾದ ಆಟಗಳನ್ನು ಆಡುವವರಲ್ಲಿಯೂ ಹರಟೆಯನ್ನು ಹೊಡೆಯುವವರಲ್ಲಿಯೂ ಕಾಲವನ್ನು ಕಳೆಯುತ್ತಾರೆ ಹೀಗೆ ಮಾಡುವುದು ಅವರ ಘೋರಕರ್ಮದ ಫಲವೆಂದೇ ಹೇಳಬೇಕಾಗಿದೆ ಅಲ್ಲವೆ?

ಅಭಿಷೇಕ ಪೂಜನಂಗಳ್ಗೆ ಸಪ್ತ ಘೋ ಘತಿ ಧ್ಯಾನಾ
ವಾಹನಪತ್ರಿಪಹೋಗಾದಿ ತಿಥ್ಯ ಗತಿ ತೀರ್ಥಂ

ಸದಾ ಭ್ರಮರ ಚಿಂತೆನ್ಯೊಲ್ಲಿರುವ ಕೀಟವ್ಯ ಕೆಲವು ಕಾಲದಲ್ಲಿ ತೆನ್ನ ಕೀಟಾವಸ್ಥೆಯನ್ನು ಬಿಟ್ಟು ಭ್ರಮರ ಕೃತಿಯನ್ನು ಹೊಂದುವಂತೆ, ಮಾನವನು ಧ್ಯಾತರ ವಾದ ಶಿವೋಪಾಸನೆಯಿಂದ ಶಿವನ್ಯರೂಪಿಯಾಗುವ ನೆಂದು ಶಾಸ್ತ್ರವು ಘಂಟಾಘೋಷವಾಗಿ ಸಾರುತ್ತಿರುವುದು ಆದ್ದರಿಂದ ಪ್ರತಿಯೊಬ್ಬ ಸ್ತ್ರೀ ಪುರುಷರು ತಮ್ಮ ಗುರು ಗಳಿಂದ ಶಿವದೀಕ್ಷೆಯನ್ನು ಹೊಂದಿ ಶಿವಲಿಂಗವನ್ನು ಪಡೆದು ನಿತ್ಯ ಪೂಜಿಸಿ ಮುಕ್ತಿ ಸಾಮ್ರಾಜ್ಯ ಸುಖವನ್ನು ಹೊಂದಿ, ಮಾನವ ಜನ್ಮವನ್ನು ಸಾರ್ಥಕಗೊಳಿಸಿಕೊಳ್ಳ ಬೇಕೆಂದು ಹಾರೈಸುತ್ತೇನೆ

ವಿಮಾನಗಳು ಹೈದರಾಬಾದಿನಲ್ಲಿ ಇಳಿಯುವುದಿಲ್ಲ

ಹೈದರಾಬಾದಿನ ಮಾರ್ಗವಾಗಿ ಸಂಚರಿಸುತ್ತಿದ್ದ ಎರಡು ಇಂಡಿಯನ್ ವಿಮಾನಗಳು ಈಗ ಆ ನಿಲ್ದಾಣ ದಲ್ಲಿ ಇಳಿಯುವುದನ್ನು ನಿಲ್ಲಿಸಿವೆ ಬೊಂಬಾಯಿ-ಮದ್ರಾಸ್ ಮತ್ತು ಬೊಂಬಾಯಿ-ಕೊಲಂಬೊಗಳ ವಿಮಾನಗಳು ಸಿಕಂದರಾಬಾದಿನಲ್ಲಿ ಇಳಿಯುವುದಿಲ್ಲ ವೆಂದು ತಿಳಿದು ಬಂದಿದೆ.

ವರ್ತಮಾನ ಸಂಗ್ರಹ

ಹೈದರಾಬಾದಿಗೆ ಹೋಗುವ ಪ್ರಯಾಣಿಕರಿಗೆ ರಿಯಾಯಿತಿ

ಹೈದರಾಬಾದಿಗೆ ಹೋಗುವ ಪ್ರಯಾಣಿಕರಿಗೆ ಈ ಆಜ್ಞೆಯಿಂದ ಉಂಟಾಗಬಹುದಾದ ತೊಂದರೆಯನ್ನು ತಪ್ಪಿಸುವ ಸಲುವಾಗಿ ಪ್ರತಿಯೊಬ್ಬ ವಯಸ್ಕನಾದ ಪ್ರಯಾಣಿಕನೂ ತನ್ನೊಡನೆ ೧೫೦ ರೂ ಗಳನ್ನು ಮಾತ್ರ ತೆಗೆದುಕೊಂಡು ಹೋಗಬಹುದೆಂದೂ, ೧೫ ವರ್ಷಕ್ಕಿಂತ ಕಡಿಮೆ ವಯಸ್ಸಿನ ಪ್ರಯಾಣಿಕರು ೭೫ ರೂ ತೆಗೆದುಕೊಂಡು ಹೋಗಬಹುದೆಂದೂ ರಿಸರ್ವ್ ಬ್ಯಾಂಕ್ ರಿಯಾಯಿತಿ ತೋರಿಸಿದೆ

ಹೈದರಾಬಾದಿನ ಬಗ್ಗೆ ಭಾರತದ ಗವರ್ನರ ಜನರಲ್ಲರು ಆರ್ಡಿನೆನ್ಸ್ ಘೋಷಿಸಿದ್ದಾರೆ

ಹೈದರಾಬಾದ್ ಸರ್ಕಾರೆ ಆಫಂಾ ಹೈದರಾಬಾದ್ ಸ್ಟೇಟ್ ಬ್ಯಾಂಕ್ ಇವುಗಳ ನಡವಿದ್ದರುವ ಇಂಡಿಯ ಸರ್ಕಾರದ ಸೆಕ್ಯೂರಿಟಿ ಬಾಂಡುಗಳನ್ನು ಇತರರಿಗೆ ಭಾರತ ಸರ್ಕಾರದ ಪೂರ್ವಾನುಮತಿ ಇಲ್ಲದೆ ವರ್ಗಾಂತರಿಸಬೂಡದು ಎಂಬುದಾಗಿ ಭಾರತದ ಗವರ್ನರ್ ಜನರಲ್‌ರವರು ಆರ್ಡಿನೆನ್ಸ್ ಘೋಷಿಸಿದ್ದಾರೆ ವರ್ಗಾಂತರಕ್ಕೆ ಒಂದು ವೇಳೆ ಭಾರತ ಸರ್ಕಾರವು ಅನುಮತಿ ಇತ್ತರೆ ಸೆಕ್ಯೂರಿಟಿಗಳನ್ನು ಪಡೆಯತಕ್ಕವರು ಆರ್ಹರೇ, ಇಲ್ಲವೇ ಎಂಬ ವಿಷಯವನ್ನು ನಿರ್ಧರಿಸುವ ವಿವೇಚನಾಧಿಕಾರ ಈ ಆರ್ಡಿನೆನ್ಸಿನ ಪ್ರಕಾರ ಭಾರತ ಸರ್ಕಾರಕ್ಕೆ ಸೇರಿದೆ

ತಾತ್ಕಾಲಿಕ ಒಪ್ಪಂದ ಮುರಿದುದರ ಫಲ

" ಸೆಕ್ಯೂರಿಟಿ ರೆಸಪದಲ್ಲಿರುವ ಹೈದರಾಬಾದಿನ ಹೂಡವನ್ನು ತಪಹರಿಸುವ ದುರುದ್ದೇಶದಿಂದ ಈ ವಿಶೇಷ ಬಾಸವನ್ನು ಘೋಷಿಸಿರುವ ಭಾರತದ ಅನುಮತಿ ಇಲ್ಲದೆ ಇವುಗಳನ್ನು ಪರಭಾರೆ ಮಾಡುವುದನ್ನು ತಪ್ಪಿಸುವುದೇ ಈ ಆಜ್ಞೆಯ ಗುರಿ " ಎಂಬುದಾಗಿ ಭಾರತ ಸರ್ಕಾರದ ಸಂಸ್ಥಾನ ಖಾಯ ಪ್ರಕಟನೆಯಲ್ಲಿ ಸ್ಪಷ್ಟಗೊಳಿಸಲಾಗಿದೆ

ಕಳೆದ ಡಿಸೆಂಬರ್ ತಿಂಗಳಿನಲ್ಲಿ ತಾತ್ಕಾಲಿಕ ಒಪ್ಪಂದ ವನ್ನು ನಿರ್ಲಕ್ಷಿಸಿ ಹೈದರಾಬಾದು ಪಾಕಿಸ್ತಾನಕ್ಕೆ ಭಾರತ ಸರ್ಕಾರದ ೨೦ ಕೋಟಿ ರೂ ಬೆಲೆಬಾಳುವ ಸೆಕ್ಯೂರಿಟಿ ಗಳನ್ನು ಸ್ಥಳ ಕೊಟ್ಟಿತ್ತು

ಈ ನರ್ತನೆಯಿಂದ ಹೈದ್ರಾಬಾದ್ ಸರಕಾರವು ತಾತ್ಕಾಲಿಕ ಒಪ್ಪಂದವನ್ನು ಮುರಿದು ಪರದೇಶದೊಡನೆ ವ್ಯವಹರಿಸಿದಂತಾಯಿತು ಭಾರತ ಸರ್ಕಾರದವರು ಈ ವಿಷಯವಾಗಿ ತಮ್ಮ ಪ್ರತಿಭಟನೆ ಸೂಚಿಸಿದರು

ಪುನ್ ಹೈದರಾಬಾದ್ ಸರ್ಕಾರದವರು ಈ ಸೆಕ್ಯೂರಿಟಿ ಬಾಂಡ್‌ಗಳಿಗೆ ಬದಲಾಗಿ ಪ್ರಾಮಿಸರಿ ನೋಟುಗಳನ್ನು ಕೊಡಬೇಕೆಂದು ಈಗ ರಿಸರ್ವ್ ಬ್ಯಾಂಕಿಗೆ ಅರ್ಜಿ ಸಲ್ಲಿಸಿರುವುದು ಭಾರತ ಸರ್ಕಾರದ ಗಮನಕ್ಕೆ ಬಂದಿದೆ

ಹೈದರಾಬಾದ್ ಸರ್ಕಾರವು ಯುದ್ಧ ಸಾಮಗ್ರಿಗಳನ್ನು ಕೊಳ್ಳಲು ತನ್ನ ಸಾಧನ ಸಂಪತ್ತನ್ನೆಲ್ಲ ವಿನಿಯೋಗಿಸುತ್ತಿದೆ ಎಂದಿಂದ ಘೆರ್ಷಣೆಗೆ ಅನೆಕಾಶವಾಗುತ್ತದೆ ಆದುದರಿಂದ ಭಾರತ ಸರ್ಕಾರವು ಹಿತವ್ಯಷ್ಟಿ ಯಿಂದ ಈ ಕ್ರಮವನ್ನು ಕೈಗೊಳ್ಳಬೇಕಾಯಿತು

ಜಪಾನಿನಲ್ಲಿ ಉಗ್ರಭೂಕಂಪ

೪೦೦೦ ಜನರ ಪ್ರಾಣ ಹಾನಿ !

ಜಪಾನಿನಲ್ಲಿ ಜು ನೇ ತಾರೀಖಿನ ದಿನ ಮಧ್ಯರಾತ್ರಿಯಲ್ಲಿ ಭೀಕರ ಭೂಕಂಪವಾಗಿ ಸಾವಿರಾರು ಜನರು ಹತರಾದರು. ಸಹಸ್ರಾರು ಮನೆ ಮಠಗಳು ಉರುಳಿಬಿದ್ದು. ಅಸಂಖ್ಯಾತಜನರು ನಿರ್ಗತಿಕರಾಗಿರುವರು. ಈ ಬಗೆಯ ಭೂಕಂಪ ಇತ್ತೀಚೆಗೆ ಕೇಳಿರೋರಿಲ್ಲ.

ಮಧ್ಯರಾತ್ರಿಯ ಸುಮಾರಿನಲ್ಲಿ ಟೋಕಿಯೋ ನಗರಕ್ಕೆ ಈ ಅನಾಹುತದ ವರದಿಗಳು ಎಂದುವ

ವಾಹನ ಸೌಕರ್ಯಗಳೂ, ಅಂಚೆ ಸೌಕರ್ಯಗಳೂ ಅರೆಕ್ಷಣದಲ್ಲಿ ಭೂಕಂಪಕ್ಕೆ ಸಿಕ್ಕಿ ನಾಶವಾದದ್ದರಿಂದ, ನಿಜ ಸಂಗತಿಯ ಅರಿವೇ ಕಷ್ಟವಾಯಿತು

ಸಿಲ್ಕ್ ನಗರವು ಉಳಿಯುತ್ತಿತ್ತು !

ಹೊನ್ನುವಿನ ಪಶ್ಚಿಮ ತೀರದಲ್ಲಿ ಒಂದು ನಗರನಿರ್ಮಿಸಿ ಅದೇ ಪುಕುಯೆ ಸಿಲ್ಕ್ (ರೇಶಿಮೆ) ಕೈಗಾರಿಕೆಯಲ್ಲಿ ಹೆಸರುಗೊಂಡ ಅದನ್ನು ಸಿಲ್ಕ್ ನಗರವೆನ್ನಿಸಿದ್ದರು ಅಲ್ಲಿ ಸುಮಾರು ಮೂವತ್ತೇಳು ಸಾವಿರ ಮನೆಗಳಿದ್ದುವು ಎಂಭತ್ತೈದು ಸಾವಿರ ಜನರು ವಾಸಿಸುತ್ತಿದ್ದರು ಭೂಕಂಪ ಜರುಗಿದ ಕೂಡಲೇ ಈ ನಗರದ ಮರದ ಮನೆಗಳು ಉರುಳಿದುವು ಭಯಂಕರ ಬೇಗದಲ್ಲಿ ಬೆಂಕಿಯು ಮನೆಯಿಂದ ಮನೆಗೆ ಹರಿತು. ಹಿಂದೆ, ಯುದ್ಧ ಕಾಲದಲ್ಲಿ ವಿಮಾನ ದಾಳಿಯನ್ನು ಎದುರಿಸಲು ಜಪಾನೀಯರು ಈ ಮರದ ಮನೆಗಳನ್ನು ಮಾಡಿಕೊಂಡಿದ್ದರು, ಅವು ಇಂದು ಬೆಂಕಿಗೆ ಆಹುತಿ ಆದುವು

ಈ ನಗರಕ್ಕೆ ಆಕ್ಯಪಕ್ಕುಗಳಿಂದ ಸಹಾಯವನ್ನು ಕಳುಹಿಸಲು ನುಮಜು ರೈಲ್ವೆ ಸೇತುವೆಯೊಂದು ಅಡ್ಡಬಂತು ಒಂದು ಅಮೆರಿಕ ಜರ್ನಾ ರೈಲು ಆ ನೇತುವೆಯುವರೆಗೆ ಮಾತ್ರ ಬಂದ ಆಲ್ಲೇ ನಿಂತಿತು ಆದ್ದರಿಂದ ನಗರಕ್ಕೆ ಯಾವ ಸಹಾಯವನ್ನೂ ಕಳುಹಿಸುವುದು ಸಾಧ್ಯವಾಗಲಿಲ್ಲ

ಪುಕುಯೆ ನಗರದ ಥಿಯೇಟರ್ ಒಂದು ಶಿಕ್ಷಿರಿಯು ತುಂಬಿತ್ತಂತೆ ! ಭೂಕಂಪದ ಪರಿಣಾಮವಾಗಿ ಮಂದಿರದ ಹೊರಗೆ ಬಂದವರು ಕೇವಲ ಮೂವರು ಮಾತ್ರ ! ಉಳಿದವರೆಲ್ಲರೂ ಮಂದಿರಲ್ಲೇ ಆಸುಡಿಯಾದರು ನಗರದ ಬೈಲ್ವೆ ನಿಲ್ದಾಣವು ನುಶವಾಗಿದೆ ಒಟ್ಟು ನಾಲ್ಕು ಸಾವಿರ ಜನರು ಸತ್ತಿದ್ದಾರೆ

ಸಿಲ್ಕ್ ನಗರದ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ಮಿಸನಾಯ್ತ ಸಹಸ್ರಾರು ಜನಾಸ್ಥೀಯರ ಸ್ಥಿತಿಯು ಚಿಂತಾಜನಕವಾಗಿದೆ ಪುಕುಯೆಗೆ ೫೫ ಮೈಲು ದೂರ ವಲ್ಲಿರುವ ಹಳ್ಳಿಯೊಂದರಲ್ಲಿ ಆರುನೂರು ಜನರು ಹತರಾಗಿರುವರು

ಈ ಭೂಕಂಪವು ನಾಲ್ಕು ಡಿಗ್ರಿಯೆನ್ನು ಸೂಚಿಸುವ ಪ್ರಿತ್ವ ೧೯೨೨ರಲ್ಲಿ ನಡೆದ ಭೂಕಂಪವು ಆರು ಡಿಗ್ರಿಯ ದಾಗಿದ್ದು, ೧೫೩,೦೦೦ ಜನರನ್ನು ನುಂಗಿ ಬಿಟ್ಟಿತ್ತು

ಭೂಕಂಪಗಳು ಹೊಸದಲ್ಲ !

ಜಪಾನ್ ದೇಶಕ್ಕೆ ಭೂಕಂಪಗಳಿಂದ ಬಾಧೆಯು ಆಗಾಗ್ಗೆ ಇದ್ದೇ ಇದೆ ೧೯೪೬ನೇ ಡಿಸೆಂಬರ್‌ನಲ್ಲಿ ಭೂಕಂಪದಿಂದ ೧೦೩ ಜನರು ಸತ್ತು, ೧೦೩೦ ಜನ ಗಾಯಗೊಂಡು ಒಂದು ಲಕ್ಷ ಜನರು ನಿರ್ಗತಿಕರಾಗಿದ್ದರು ಜಪಾನಿನಲ್ಲಿ ಭಯಂಕರ ಭೂಕಂಪವೆಂದರೆ ೧೯೨೩ನೇ ಸೆಪ್ಟೆಂಬರ್ ತಿಂಗಳಲ್ಲಿ ನಡೆದದ್ದು ! ಆಗ ಟೋಕಿಯೊದಲ್ಲಿ ೧೫೩,೦೦೦ ಜನರು ಹತರಾಗಿದ್ದರು ೧೯೯೬ ಜ್ಯಾನಲ್ಲಿ ದೊಡ್ಡ ಬಿರುಗಾಳಿಯು ೨೩,೦೦೦ ಜನರನ್ನು ಕೊಂದುಬಿಟ್ಟಿತು

ಅಂತೂ ಜಪಾನು ನಿರಂತರ ಮೃತ್ಯುಪ್ರದೇಶ !

ಅಮೆರಿಕಾದಲ್ಲಿರುವ ಇಂಗ್ಲಿಷ್ ಫ್ರಾನ್ಸಿಸ್ಕೋನಗರದ ಅನುಭವ

ಇಗ ನೇ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ ದಲ್ಲಿ ಭಾಗವಹಿಸಲು ಮೈಸೂರಿನ ಕಾರ್ಮಿಕ ಮಂತ್ರಿ ಗಳಾದ ಶ್ರೀ ಕೆ ಟಿ ಭಾಷ್ಯಂರವರು ಸ್ಯಾನ್‌ಫ್ರಾನ್ಸಿಸ್ಕೋ ನಗರಕ್ಕೆ ತೆರಳಿದ್ದಾರಷ್ಟೆ ! ಅವರು ಅಲ್ಲಿಯ ಜೀವನದ ಅನುಭವವನ್ನು ಈ ರೀತಿ ವರ್ಣಿಸಿದ್ದಾರೆ.

ಈ ನಗರವು ಬಹಳ ಸುಂದರವಾದುದು ರಸ್ತೆಗಳೆಲ್ಲ ಟೂರು ಹಾಕಿದ್ದಾರೆ. ಬಳ್ಳದಲ್ಲಿ ಕಾಲು ಮಾರ್ಗಗಳಿವೆ ಎಲ್ಲರೂ ಅವುಗಳ ಮೇಲೆಯೇ ಪಡೆದುಕೊಂಡು ಹೋಗು ತ್ತಾರೆ ೫೮ ಗಂಟೆಗಳ ಕಾಲವೂ ಟ್ರಾಮುಗಳು, ಬಸ್ಸು ಗಳು, ಎಮ್ಬುಸ್ ಟ್ರಾಲಿಗಳು, ಕಾರುಗಳು, ಲಾರಿಗಳು ಬಿಡುವಿಲ್ಲದೆ ಓಡಾಡುತ್ತವೆ

ಈ ನಗರದ ಜನ ಸಂಖ್ಯೆ ೧ ಕೋಟಿಗಿಂತ ಹೆಚ್ಚಿದೆ ಅಂದರೆ, ಇಷ್ಟೊಂದೇ ನಗರದಲ್ಲಿ ಇಡೀ ಮೈಸೂರು ಸಂಸ್ಥಾನಕ್ಕಿಂತ ಹೆಚ್ಚು ಜನರು ವಾಸಿಸುತ್ತಾರೆ! ರಸ್ತೆಗಳ ಮೇಲೆ ಸುಮಾರು ೩೦ ಲಕ್ಷ ವಾಹನಗಳು ಸಂಚರಿಸು ವುದು. ಆದರೂ, ಒಂದು ಅಪಘಾತವೂ ಇತ್ತ ನಡೆಯು ವುದಿಲ್ಲ ಪಾಪನ ಸಂಚಾರದ ವಪಸ್ಸೆ ಅಷ್ಟು ಚೆನ್ನಾಗಿದೆ

ಈ ನಗರದ ಶುತ್ತಲೂ ಸಮುದ್ರವಿದೆ ಹೆಮೆಯು ತಂಪಾಗಿದ್ದು ಆತ್ಯಾದರಕರವಾಗಿದೆ ಒಂದುವಿಧದಲ್ಲಿ ನನಗೆ ಈ ನಗರವು ಉದಕಮಂಡಲವನ್ನು ಜ್ಞಾಪಕಕ್ಕೆ ತರುತ್ತದೆ ಹೊಯ್ಸಳ, ಹಲ್ಲುಂಬ, ಕಾಯಿಪಲ್ಲೆ, ಹೂಬು ಯಂಥೇಚ್ಛವಾಗಿ ದೊರಕುವುವು ಇನ್ನ ಕಾಯಿಪಲ್ಲೆ, ಮೆಸರು ಮತ್ತು ಪೂರ್ಟ್ ಜ್ಯೂಸ್ ಇನ್ನಗಳಂದ ಕೂಡಿದ ಊಟಕ್ಕೆ ೮ ರೂ ಆಗುತ್ತದೆ ಬಾಡಿಗೆ ದಿನಕ್ಕೆ ೬ ರೂ ಕೊಡಬೇಕು ಸ್ನಾನ, ಬಟ್ಟೆ ತೊಳೆಯುವುದು ಮೇರೆ ವೆಚ್ಚ ಅಂತೂ ಒಬ್ಬನಿಗೆ ಇಲ್ಲಿ ಕನಿಷ್ಠಪಕ್ಷ ತಿಂಗಳಿಗೆ ೧೦೦೦ ರೂ ಬೇಕು

ಬೆಂಗಳೂರಿನಂತೆ ಇಲ್ಲೂ ಜೀನಿಗೆಯಲ್ಲಿ ಬೆಳಿಗ್ಗೆ ೬.೩೦ ಕ್ಕೆ ಸೂರ್ಯೋದಯವಾಗುತ್ತದೆ ಸಂಜೆ ೮.೩೦ ಕ್ಕೆ ಸೂರ್ಯಾಸ್ತ ಚಳಿಗಾಲದಲ್ಲಿ ಸುಮಾರು ೭.೩೦ ಆಥವಾ ೮ ಕ್ಕೆ ಸೂರ್ಯೋದಯ, ಸಂಜೆ ೫ ಅಥವಾ ೫.೩೦ ಕ್ಕೆ ಅಸ್ತ

ಇಲ್ಲಿನ ಜನರು ಒಳ್ಳೆ ತಿಸ್ತುಗಾರರು! ಚೆನ್ನಾಗಿ ಉಡುವು ಧರಿಸುತ್ತಾರೆ ಹೋಟಲುಗಳೆಲ್ಲ ನಿರ್ಮಲ ವಾಗಿರುತ್ತವೆ ಒಳ್ಳೆಯ ಶಾಕಾಹಾರ ಸಿಗುತ್ತದೆ ಆದರೆ ಸಾರು, ಪಲ್ಯ, ಚಟ್ನಿ ಇವು ದೊರೆಯುವುದಿಲ್ಲ ಅನ್ನ ಕೊಡುತ್ತಾರೆ ಅದನ್ನೂ ಬೇಯಿಸಿದ ತರಕಾರಿಯನ್ನೂ ಬೆರೆಸಿ, ಅದಕ್ಕೆ ಉಪ್ಪು ಮತ್ತು ಮೆಣಸಿನ ಪುಡಿ ಸೇರಿಸಿ ಕೊಂಡು ತಿನ್ನಬೇಕು ಆ ಮೇಲೆ, ಅನ್ನ ಮಜ್ಜಿಗೆ ಕೊಡುತ್ತಾರೆ ಬಾಳೆಹಣ್ಣು, ಸೇಬು, ಕಿತ್ತಳೆ, ಅಂಜೂರ ಮುಂತಾದ ಹಣ್ಣುಗಳು ದೊರೆಯುವುವು ಬ್ರೆಡ್ ಬಿಸ್ಕತ್‌ಗಳು, ಬೆಣ್ಣೆ, ಜಾಲು, ಕಾಫಿ, ಟೀ ಇವೆಲ್ಲ ಸಿಗು ತ್ತವೆ ಶಾಕಾಹಾರಿಗಳೇನೂ ತಾಪತ್ರಯ ಪಡಬೇಕಾಗಿಲ್ಲ

ತಾತಾವಿಜ್ಞಾನ ಮಂದಿರಕ್ಕೆ ಮಹಾಪ್ರಭುಗಳವರ ಭೇಟಿ

ಶ್ರೀಮನ್ಮಹಾರಾಜರವರು ೨ನೇ ತಾ|| ಬೆಳಿಗ್ಗೆ ಬೆಂಗಳೂರಲ್ಲಿರುವ ತಾತಾ ವಿಜ್ಞಾನ ಮಂದಿರಕ್ಕೆ ಭೇಟಿ ಯಿತ್ತರು

ಶ್ರೀಮನ್ಮಹಾರಾಜರವರು ಸುಮಾರು ಒಂದೂ ಮುಕ್ಕಾಲು ಗಂಟೆಕಾಲ ಸಂಸ್ಥೆಯ ನಾನು ಭಾಗಗಳಿಗೆ ಭೇಟಿಯಿತ್ತು ಅಲ್ಲಿಯ ಕಾರ್ಯಗಳನ್ನು ಬಹಳ ಆಸಕ್ತಿ ಯಿಂದ ಪರಿಶೀಲಿಸಿದರು

ಜನರಲ್ ಕೆಮಿಸ್ಟ್ರಿ ಭಾಗವನ್ನು ಪರಿಶೀಲಿಸುವಾಗ, ಪ್ರೊ|| ಸಂಜೀವರಾಯರು 'ಪವರ್ ಆಲ್‌ಕೋಹಾಲ್' ತಯಾರಿಕೆ, ಕಚ್ಚಾವಸ್ತುಗಳಿಂದ ಎನಾಮಲ್ ತಯಾರಿಕೆ, ಹೆಚ್ಚು ಗುಣವುಳ್ಳ ಬೇಕೆ ಆಕ್ಕಿಗಳನ್ನು ಬೆಳೆಯಲು ಮಾಡುತ್ತಿರುವ ಪ್ರಯೋಗಗಳನ್ನು ತಿಳಿಸಿದರು ಶ್ರೀಮನ್ಮಹಾರಾಜರವರು ಆ ಕಾರ್ಯಗಳ ಬಗ್ಗೆ ತಮ್ಮ ಮೆಚ್ಚಿಕೆಯನ್ನು ಸೂಚಿಸಿದರು ಕೆಮಿಕಲ್ ಇಂಜನೀ ಯರಿಂಗ್ ಮಂದಿರದಲ್ಲಿ ಶ್ರೀಯುತರಾದ ಪಿ ಬಿ ಗುಪ್ತ ಮತ್ತು ನಂದಿಯವರು ಅಲ್ಲಿನ ವಿವಿಧ ಕಾರ್ಯಗಳನ್ನು ವರ್ಣಿಸಿದರು

ಸೋಯಾಬೀನ್ಸ್‌ನಿಂದ ಹಾಲನ್ನು ಹೇಗೆ ತಯಾರಿಸ ಬಹುದು ? ಅದನ್ನು ಹೇಗೆ ಸಾಧಾರಣ ಜನರಿಗೆ ಸುಲಭ ವಾಗಿ ದೊರಕುವಂತೆ ಮಾಡಬಹುದು ಎಂಬುದನ್ನೂ, ಲೆಮನ್ ಹುಲ್ಲಿಂದ ವಿಪರೈಮಿ ತಾಕಲ ನಸ್ಸುವಿನ ತಯಾರಿಕೆಯನ್ನೂ ಶ್ರೀಯುತ ಸುಬ್ರಮಣ್ಯಂ ಅವರು ವಿವರಿಸಿದರು

ಅನಂತರ ಶ್ರೀಮನ್ಮಹಾರಾಜರವರು ಇಂಜಿನೀರಿಂಗ್ ವಿಜ್ಞಾನಗಳ ಅಭ್ಯಾಸಕ್ಕೆ ಕಟ್ಟಿರುವ ಮಂದಿರಗಳನ್ನು ಪರಿಶೀಲಿಸಿದರು ಇಲ್ಲಿನ ಪ್ರೊ|| ಕಾಂಟ್ರ್ ಅವರು ಈ ವಿಭಾಗ ಮುಂದೆ ಭಾರತಕ್ಕೆ ಎತ್ತು ಮಟ್ಟಿಗೆ ಉಪ ಯೋಗವಾಗುತ್ತದೆ, ಸಂಸ್ಥಾನವು ಇದರಿಂದ ಯಾವ ಪ್ರಯೋಜನವನ್ನು ಪಡೆಯಬಹುದೆಂಬುದನ್ನು ತಿಳಿಸಿ ದರು. ಕೆಲವು ವರ್ಷಗಳಿಂದ ಈಚೆಗೆ ಎಷ್ಟೆಷ್ಟು ಎಲೆಕ್ಟ್ರಿಟಿಕಲ್ ಮತ್ತು ಎರೋನಾಟಿಕ್ಸ್ ಮಂದಿರ ಗಳಿಗೂ ಭೇಟಿಯಿತ್ತರು ಎರೋನಾಟಿಕ್ಸ್ ವಿಜ್ಞಾನವು ಈ ವಿಜ್ಞಾನಗಳುಗದಲ್ಲಿ ಬಹು ಮುಖ್ಯವಾದುದು ಚಿತ್ರ ಪ್ರದರ್ಶನದ ಮೂಲಕ ವಿಮಾನದ ಆಕಾರ ವಾಯುವಿನಲ್ಲಿ ಒತ್ತಡವನ್ನು ಹೇಗೆ ಕಡಿಮೆ ಮಾಡಬಹುದು ಮುಂತಾದ ವಿಚಾರಗಳನ್ನು ಪ್ರೊ|| ಹ್ಯಾರಿಸನ್‌ರವರು ತಿಳಿಸಿದರು

ಇನ್ನೆಲ್ಲವನ್ನೂ ಶ್ರೀಮನ್ಮಹಾರಾಜರವರು ಪರಿಶೀಲಿಸಿ ವಿವಿಧ ವಿಜ್ಞಾನಗಳಲ್ಲಿ ನಮ್ಮ ವಿದ್ಯಾರ್ಥಿಗಳು ಶಿಕ್ಷಣ ಹೊಂದುತ್ತಿರುವ ಬಗ್ಗೆ, ಈ ಮಂದಿರದಲ್ಲಿ ನಡೆಯುತ್ತಿ ರುವ ಉಪಯುಕ್ತ ಪರಿಶೋಧನೆಗಳ ಒಗ್ಗೆ ತಮ್ಮ ಮೆಚ್ಚಿಕೆಯನ್ನು ಸೂಚಿಸಿದರು

ಸ್ವೀಕಾರ

ಕಾನಕಾನಹಳ್ಳಿ ತಾ|| ಚಿಕ್ಕಕಲ್ಲಬಾಳು ಮರದ ಏಜೆಂಟ್ ಶ್ರೀಮಾನ್ ಮಲ್ಲಪ್ಪನವರ ಶ್ರೀಮತಿ ಪರ್ವತಯ್ಯನೆಂಬ ನಟುವಿಗೆ ತಾ|| ೧೫-೬-೪೪ ನೇ ದಿನದ ಪಬ್ಬುದ್ಧಿಕಾರವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಇದೇ ತಾ|| ದೊಡ್ಡಮುದವಾಡಿ ಪಟೇಲ್ ಚನ್ನಬಸವಯ್ಯನವರ ಪುತ್ರಿ ಚಿ|| ಸೌ|| ಚನ್ನಬಸವಮ್ಮನನ್ನು ಇದೇ ತಾ|| ಬಜ್ಜಹಳ್ಳಿ ಸಾಹುಕಾರ್ ಬ ಪುಟ್ಟಯ್ಯನವರ ಸಹೋದರ ಚಿ|| ಬಿ ಕೆ ಸಿದ್ದಲಿಂಗಯ್ಯನೆಂಬ ವರಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 3 ರೂ ಇದೇ ತಾ|| ಬಜ್ಜಹಳ್ಳಿ ಸಾಹುಕಾರ್ ಆರ್. ಎ ಸೆಂಬರು ಪುಟ್ಟಪ್ಪನವರ ಸಹೋದರನ ವಿವಾಹ ಮಹೋತ್ಸವ ಸಮಯದಲ್ಲಿ ಸಮರ್ಪಿಸಿದ 3 ರೂ. ಒಟ್ಟು 8 ರೂ ಗಳು ದೊಡ್ಡಮುದವಾಡಿ ಶ್ರೀ ಗುರುಸಂಗಪ್ಪ, ಮರಿಸ್ವಾಮಿ ಶಿವಲೀಲಾಶ್ರಮ ಇವರ ಸಂಚಿನಿಯ ಮೇರೆಗೆ ಸಮರ್ಪಿಸಲ್ಪಟ್ಟವು ಮೈ ರಾ|| ವಿ ಸುಂದರರಾವ್ ಫೋರ್‌ಮೆನ್ ಆಣಜವಾಡಿ ಇವರ ದ್ವಾರಾ ತಲಪಿರುತ್ತವೆ

ವಿಜಾಪುರ ಡಿ|| ಹೊನಗುಂದ ತಾ|| ಬನ್ನಿಹಟ್ಟಿ ಸಾರಂಗದೇವರ ಮರದ ಪೇ|| ಸಂಗಪ್ಪಯ್ಯನವರ ಪುತ್ರ ಚಿ|| ಮೃತ್ಯುಂಜಯಸ್ವಾಮಿ ಎಂಬ ವರಿಗೆ ರೋಣ ತಾ|| ಗಾವರವಾಡ ಹಡಗಲಿ ಹರೇಮುರದ ವೇ|| ಚಂದ್ರಶೇಖ ರಪ್ಪಯ್ಯನವರ ಪುತ್ರಿ ಚಿ|| ಸೌ|| ಗಿರಿಜಾದೇವಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವೆಧರಾದಿಂ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 4 ರೂ ಗಳು ವೇ|| ಸಿದ್ಧಲಿಂಗಸ್ವಾಮಿ ಹರೇಮರ ಪುರಾಣಿ ಇವರ ದ್ವಾರಾ ತಲಪಿರುತ್ತವೆ

ಬೆಂಗಳೂರು ಸಿಟಿಯಲ್ಲಿರುವ ಸೂಲಕುಂಟೆ ಶೆಟ್ಟರ ಮಗ ರಾ|| ಗಣೇಶಯ್ಯನವರ ಪುತ್ರಿ ಚಿ|| ಸೌ|| ಉಮಾ ದೇವಿಯನ್ನು ಕ್ವೀನ್ಸ್‌ಪೇಟೆ ಲೇಟ್ ಎನ್ ರುದ್ರಪ್ಪ ನವರ ಪುತ್ರ ಚಿ|| ತಿವರುದ್ರಪ್ಪ ಉರುಫ್ ರಾಜಣ್ಣನಿಗೆ ಕೊಟ್ಟು ನೈಕಾಖ ಒಮಗಳ ೫ ದಿವಸ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣೆಗೋಸ್ಕರ ಸಮರ್ಪಿಸಿದ 2 ರೂ. ಗಳು ಮೈ ರಾ|| ಸಂಗಪ್ಪ ಅಪ್ಪಾಸಾಹೇಬ ದೇಸಾಯಿ ಸೊನ್ನ ಇವರ ದ್ವಾರಾ ತಲಪಿರುತ್ತವೆ.

ಈ ಮೇಲ್ಕಾಣಿಸಿ ಮಹಾತಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಗಾಂಧೀಜಿಂರವರ ಕೂಲಂಕಷ ವಿಚಾರಣೆ
ಶ್ರೀಮತಿ ಸುಲೋಚನಾ ದೇವಿಂರ
ಸ್ವಾರಸ್ಯ

ಬಿಡ್ಲಾ ಭವನದಲ್ಲಿ ಜನವರಿ ೨೦ನೆಯ ತಾರೀಖು ಸಿಡಿದ ಸ್ಫೋಟಣೆಯ ಬಗೆಗೆ ಸುಲೋಚನಾದೇವಿ ಎಂಬವರು ಕೆಂಪೇಗೌಡ ನ್ಯಾಯಾಲಯದಲ್ಲಿ ವಿವರಣೆ ಇತ್ತರು

ಬಾಂಬು ಸಿಡಿದಸ್ಥಳವನ್ನು ನಾನು ನೋಡಿದೆನೆ ನಮ್ಮ ಮನೆಯಿಂದ ಸುಮಾರು ೧೨೦ ಹೆಜ್ಜೆ ದೂರದಲ್ಲಿ ಆದು ಸಿಡಿಯಿತು ಬಾಂಬು ಸಿಡಿದಾಗ ನಾನು ಆ ಸ್ಥಳಕ್ಕೆ ಸುಮಾರು ೧೫ ಅಥವಾ ೧೪ ಹೆಜ್ಜೆ ದೂರದಲ್ಲಿದ್ದೆನು ಮಹೇಂದ್ರ ಎಂಬ ನನ್ನ ಮಗು ಬಿಳಿಯ ನನ್ನ ಹಿಂದೆ ಸೇವಕರ ಗೃಹಗಳ ಒಳ ಆಡುತ್ತಿತ್ತು ಅದನ್ನು ಕರೆತರಲು ನಾನೆ ಹೋಗಿದ್ದೆ ಆ ವೇಳೆಗೆ ಬಾಂಬು ಪ್ರಕರಣ ನಡೆಯಿತು

ತಮ್ಮ ವಿವರಣೆಯನ್ನು ಮುಂದುವರಿಸುತ್ತಾ— ಸೇವಕರ ಗೃಹಗಳ ಹಿಂಭಾಗಕ್ಕೆ ನಾನು ಹೋದಾಗ ಅಲ್ಲಿಗೆ ಹಸುರು ಬಣ್ಣದ ಕಾರು ಒಂದಿತ ಕಾರಿನಿಂದ ಸುಮಾರು ನಾಲ್ಕು ಮಂದಿ ಪ್ರಯಾಣಿಕರು ಕೆಳಗಿಳಿದು ತನ್ನನ್ನು ನೋಡಿದೆ ಎನ್ನು ಕೆಳಗಿಳಿಯಲು ತ್ವರೆಯಾರ್ಕೊಂಡಿರು ಅದರಲ್ಲಿ ಒಬ್ಬರು ಅದವಾ ಮೂವರು ನರ ಬಳಿಗೆ ಒಂದು ಸಂಭಾಷಿಸಿದರ ಅವರೆಲ್ಲರೂ ತಮ್ಮ ತಮ್ಮಲ್ಲಿಯೇ ಮಾತನಾಡಿಕೊಂಡು ಬಿರ್ಲಾ ಪವನ ಗೇಟಿನ ಮೂಲಕ ಪ್ರಾರ್ಥನಾ ಸಭೆಯ ಕಡೆಗೆ ಹೋದರ

ಬಿರ್ಲಾ ಭವನದ ಹಿಂಭಾಗದಲ್ಲಿ ವಾಸಿಸುವ ಜೋಯಿ ಲ್ಲಂ ಸ್ತ್ರೀ ಮತ್ತು ಸೀ ಎಂಬ ಇಬ್ಬರು ಸೇವಕರು ನನಗೆ ಗುರುತು ಕಂಡರು ಇವರಲ್ಲಿ ಒಬ್ಬರು ಪ್ರಾರ್ಥನೆಗೆ ಬರುವವರ ವಿವರಗಳನ್ನು ಬರೆಯುತ್ತಿದ್ದರು

ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಪ್ರಮುಖರಲ್ಲಿ ಒಬ್ಬರು ಶ್ರೀಮತಿ ಸರೋಜಿನಿದೇವಿ ಅವರು ಎಂದು ನಾನು ಕೇಳಿದೆನೆ

ಪ್ರಾರ್ಥನೆಯಲ್ಲಿ ಭಾಗವಹಿಸಿದ್ದ ಸ್ಥಳಕ್ಕೆ ನಾವು ಒಟ್ಟಿಗೆ ಬಂದ್ದನ್ನು ನಾನು ಕಂಡೆ ಆಗ ಹತ್ತಿರದ ಪೊಲೀಸ್ ಸ್ಟೇಷನ್ನಿಗೆ ನಾನೆ ಮಗುವಿನೊಡನೆ ಸುದ್ದಿ

ಪ್ರ ಆಗ ನಿಮ್ಮ ಜೊತೆ ಯಾರಿದ್ದರು?

ಉ ಕಾರಿನಲ್ಲಿದ್ದವರು ಯಾರೂ ಇರಲಿಲ್ಲ

ಪ್ರ ಕಾರಿನಲ್ಲಿ ಬಂದವರಲ್ಲಿ ಅವನೂ ಒಬ್ಬನಾಗಿದ್ದನೆ?

ಉ ಇದ್ದನೆಂದು ನಾನು ಹೇಳಲಾರೆ ಜ್ಞಾಪಕವಿಲ್ಲ

ಪ್ರ ಆಗ ನೀವು ಏನು ಮಾಡಿದಿರಿ

ಉ ಒಂದನ್ನು ಎತ್ತಿಕೊಂಡು ಮೇಲೆ ಇಟ್ಟುಕೊಳ್ಳಲು ಪ್ರಯತ್ನಿಸಿದೆ

ಪ್ರ ಆಗ ಅಲ್ಲಿ ಎಷ್ಟು ಜನರಿದ್ದರು

ಉ ಅಲ್ಲಿ ಸುಮಾರು ಇನ್ನೂರು ಜನರಿದ್ದರು ಅವರಲ್ಲಿ ಕೆಲವರು ನನಗೆ ಪರಿಚಿತರಾಗಿದ್ದರು

ಪ ಪೊಲೀಸ್ ಸ್ಟೇಷನ್ನಿಗೆ ನೀವು ಹೋದ ನಂತರ ಏನಾಯಿತು?

ಉ ಅಲ್ಲಿಂದ ಸುಮಾರು ೧೫ ನಿಮಿಷಗಳ ನಂತರ ನಾನು ಮತ್ತೆ ಪ್ರಾರ್ಥನಾ ಸಭೆಗೆ ಹಿಂದಿರುಗಿದೆ

ಪ್ರ ಆಗ ನಿಮ್ಮ ಜೊತೆ ಯಾರಿದ್ದರು?

ಉ ಯಾರೂ ಇರಲಿಲ್ಲ ನಾನೊಬ್ಬಳೆ ಹೋದೆ

ಪ್ರ ಆಗ ಸಭೆಯಲ್ಲಿ ಎಷ್ಟು ಜನರಿದ್ದರು?

ಉ ಸುಮಾರು ೨೦೦ ಜನರಿದ್ದರು ಆಗ ಸಭೆಯಲ್ಲಿ ಗಾಂಧೀಜಿಯವರು ಇರಲಿಲ್ಲ ಅವರು ಪ್ರಾರ್ಥನೆಗೆ ಬರುವುದು ಸ್ವಲ್ಪ ತಡವಾಗಿತ್ತು

ಪ್ರ ಆಗ ನೀವು ಏನು ಮಾಡಿದಿರಿ?

ಉ ಸಭೆಯಲ್ಲಿ ಕುಳಿತುಕೊಂಡೆ

ಪ್ರ ಆಗ ಸಭೆಯಲ್ಲಿ ಯಾರಾದರೂ ಮಾತನಾಡುತ್ತಿದ್ದರೆ?

ಉ ಯಾರೂ ಮಾತನಾಡುತ್ತಿರಲಿಲ್ಲ ಎಲ್ಲರೂ ಮೌನವಾಗಿ ಕುಳಿತಿದ್ದರು

ಪ್ರ ಆಗ ಸಭೆಯಲ್ಲಿ ಏನಾದರೂ ಗಲಾಟೆ ಆಯಿತೆ?

ಉ ಇಲ್ಲ ಸಭೆಯಲ್ಲಿ ಯಾವ ಗಲಾಟೆಯೂ ಆಗಲಿಲ್ಲ

ಪ ಆಗ ನಿಮ್ಮ ಜೊತೆ ಯಾರಾದರೂ ಇದ್ದರೆ?

ಉ ಯಾರೂ ಇರಲಿಲ್ಲ ನಾನೊಬ್ಬಳೆ ಹೋದೆ

ಪ ಆಗ ಸಭೆಯಲ್ಲಿ ಎಷ್ಟು ಜನರಿದ್ದರು?

ಉ ಸುಮಾರು ೨೦೦ ಜನರಿದ್ದರು

ಪ ಆಗ ಸಭೆಯಲ್ಲಿ ಗಾಂಧೀಜಿಯವರು ಇದ್ದರೆ?

ಉ

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಶೀಲಾದಿಸರ್ ಪಂಚಕ್ಲೇಶವಿನಾಶಕರ್ ಕರತರೆತ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಸಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಧರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸ್ವದವರಿಗೆ ೨ ರೂ ೪ ಆಣೆ ಪರಸ್ವದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಸಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಜುಲೈ ೧೯೪೪ [ಸಂಚಿಕೆ ೯

ಸುಪ್ರಭಾಂಬಾ ಪಂಚಕಂ

ಅರವೈದೆ ನರಿದಂರಿಯನುಂ ।
ಪರಿವೈದೆ ಕಿರುಕುಂದ ಕಜ್ಜಗಳನುಂ ಮನುಜರ್ ॥
ಇರೆವೈದೆಯೋಗಿನ ವೈರಿಯ ।
ನೆರೆಗಿಂಬಿರೌ ಸುಪ್ರಭಾಂಬೆಯಂದುಸ್ಪವದಿಂ ।೧।

ಅಂದಿನ ಮೊದಲ್ಗೊಂಡಿಪ್ಪರ ।
ಒಂದನ ವ ನವರ್ಗಳಿಗೆ ನಿಂದ ಕರ್ಗತ್ತಲೆಯಂ ॥
ಒಂದರ ಸುಜ್ಞಾನಾಚೆಗಳ ।
ನಿಂದಂ ನೀಂ ಕಳೆವೆ ಸುಪ್ರಭಾಂಬೆಯೆ ಸತತಂ ।೨।

ಗರುಪೀರಿದ ಸದ್ಭಾವವ ।
ನರಿಯಿಸಿ ಸದ್ವೀರರೈಕ್ಯಮಂಕಗೆ ಳಿಲ್ಲಂ ।
ಧರೆಯೊಳ್ಪ್ರೀರಿಕೆ ನೀಂ ।
ಮೆರೆದಿ ಹ ದೇಂ ಜೋದ್ಯಮಿಹುದ ? ಯಡಿಗಲ್ಲೆನಿಸಿ ॥

ನಿನ್ನುದಯಕ್ಕುಂ ಕಾರಣ
ರೆನ್ನಿಪಿದಾ ಸಿದ್ಧಲಿಂಗಯತಿಶಾರ್ದೂಲಂ ॥
ಸನ್ನುತಕಾರೀನಧರು ।
ಮನ್ನರ್ವದದಿರ್ಪರಲ್ತ ! ಭೂಜನರಿ ದಂ ।೪।

ಪೆರತೇಂ ನೀನೆನ್ನೆ ವರಂ ।
ಧರಣಿಯೊಳಾ ದಿರ್ನಯನ್ನಬರೆ ಸದ್ಧರ್ಮಂ ॥
ಕಿರವೆ ನಿಸಿರ್ಚುದಿಂದಂ ।
ಹರನಿಯಲಿ ಎಾಯಿ ' ನಿನಗೆ ದೀರ್ಘಾಯುಷ್ಯಂ ॥೫॥

ಸಂ॥ ಬ ಯಂ ಶಿಲಾಕರಕ್ಕಿಗಳು
ಕನ್ನಡ ಪಂಡಿತರು,
ಬೋರ್ಡು ಹೈಸ್ಕೂಲು ಹೂವಿನಹಡಗಲಿ

ಮಾನವನ ಮಾಹಾತ್ಮ್ಯ

ಲೇಖಕ—ಎ ಎಂ ಹಾಸಿಪ್ಪಯ್ಯ ಅನುಗೋಡುನ ಕ, ಬಕವಾಪಟ್ಟಣ

"ಜಂತೂನಾಂ ನರಜನ್ಮ ದುರ್ಲಭಂ' ಎಂಬುವಂತೆ ಸಕಲ ಜನ್ಮಗಳಿಗೂ ಮನುಷ್ಯಜನ್ಮ ಒರುವಂತ ಮಹಾ ದುರ್ಲಭವು ಈ ಜನ್ಮದಲ್ಲಿ ಜನನ ಮರಣವನ್ನು ನೀಗಿ ಎಂದೂ ಕುಂದಿಲ್ಲದ ಪರಮಾನಂದವನ್ನು ಹೊಂದ ಬೇಕೆಂಬ ಅಪೇಕ್ಷೆಯೇ ಪ್ರತಿಯೊಬ್ಬ ಮನುಷ್ಯನ ಮುಖ್ಯ ಕರ್ತವ್ಯವು "ಜೀವ ಹೋಗುವ ಪ್ರಸಂಗ ಬಂದರೂ ಅಲ್ಪದ ಕೆಲಸವನ್ನು ಸರ್ವದಾ ಮಾಡಬಾರದು ಮಾಡ ತಕ್ಕ ಕೆಲಸವನ್ನು ಎಂದೂ ಬಿಡಬಾರದು ಇದೇ ಕಾಸ್ಪತ್ರವಾದ ಧರ್ಮವು" ಎಂದು ಮನುವು ಹೇಳಿದ್ದಾನೆ ಆದ ಕಾರಣ ಮನುಷ್ಯನು ತಾನು ಮಾಡತಕ್ಕ ಕರ್ತವ್ಯವನ್ನು ಮಾಡದೆ, ಕೇವಲ ಅಹಂಕಾರ ಮಮಕಾರಗಳಲ್ಲಿ ಮಗ್ನನಾಗಿ ಉಟಕಷಟಗಳಲ್ಲಿಯೇ ಪ್ರವೀಣತೆಯನ್ನು ಪಡೆದರೆ ಮನುಷ್ಯಜನ್ಮವ ಸಾರ್ಥಕವಾಗುವುದಿಲ್ಲ ಏಕೆಂದರೆ ಆಹಾರ ತೆಗೆದುಕೊಳ್ಳುವುದು, ನಿದ್ರೆಮಾಡುವುದು, ಭಯವುಂಟಾಗುವುದು, ಸ್ತ್ರೀಸಂಗಮಾಡುವುದು ಈ ನಾಲ್ಕು ಕಾರ್ಯಗಳು ಮನುಷ್ಯರಿಗೂ, ಪಶುಗಳಿಗೂ, ಸಮಾನವೆಂಬ ಆದರೆ ಮನುಷ್ಯನು ಪಶುಗಳಿಗಿಂತ ಜ್ಞಾನದಿಂದ ಮಾತ್ರ ಶ್ರೀಷ್ಠನಿರುತ್ತಾನೆ ಆದುದರಿಂದ ಯಾರಿಗೆ ನಿಜಜ್ಞಾನವಿರುವುದಿಲ್ಲವೋ ಅವರು ಪಶು ಸಮಾನರೆಂದೇ ತಿಳಿಯ ತಕ್ಕದ್ದು

ವ ಗುಣ ಇಲ್ಲದ ಮನುಷ್ಯ ಪ್ರಾಣವಿಲ್ಲದ ಶರೀರದಂ ಹೇಗೆ ನಿರರ್ಥಕವೋ ಹಾಗೆಯೇ ನಿಜಜ್ಞಾನವಿಲ್ಲದ ಮನುಷ್ಯಜನ್ಮವು ನಿರರ್ಥಕವು ದೇವರು ಜನರಿಗೆ ಕೊಟ್ಟ ಜ್ಞಾನವೆಂದರೆ ನಾನು ಯಾರು ? ಜನನಮರಣಾದಿಪ್ರಪಂಚ ರವು ನನಗೆ ಏಕೆ ಒಂಕು ? ಈ ಸಂಸಾರವನ್ನು ನಿ ಗುವು ದಕ್ಕೆ ಏನು ಮಾಡಬೇಕು ? ಎಂಬ ವಿಚಾರವಲ್ಲವನ್ನ ಗಿ ಸದ್ಗುರುವನ್ನು ಹೊಂದಿ ಜನನಮರಣವನ್ನು ಯಾವನು ಕಳೆದುಕೊಳ್ಳುವುದಿಲ್ಲವೋ ಆವನನ್ನು ದೇವರು ತಾನು ಕೊಟ್ಟ ಜ್ಞಾನದ ಉಪಯೋಗವನ್ನೇ ಈತನು ಮಾಡಿ ಕೊಳ್ಳಲಿಲ್ಲವೆಂದು ಭಾವಿಸಿ ಹಂದಿ ನಾಯಿ ನರಿ ಮುಂತಾದ ನೀಚಪ್ರಾಣಿಗಳ ಜನ್ಮದಲ್ಲಿ ಹಾಕುವನು ಅಲ ಲಪ್ಪ ಜೀವಾಧಾತಿಗಳ ಯೋನಿಯಲ್ಲಿ ಹುಟ್ಟಬಿಂದೂಡ ಕೂಡ ಜನನಮರಣದ ಸಲುವಾಗಿ ಮನುಷ್ಯನಿಗೆ ಹೇಸಿಕೆ ಒರಲೊಲ್ಲದು ಇನ್ನಾದರೂ ಜನನ ಮರಣವನ್ನು ಕಳೆದುಕೊಳ್ಳುವ ಉಪಾಯವನ್ನೇ ಮಾಡಬೇಕು ಆದನ್ನು ಬಿಟ್ಟು ನಶ್ವರ್ಯಾದಿಗಳನ್ನು ಗಳಿಸುವ ಉಪ್ಯೋಗಗ ಗ್ಗೆನ್ನೆಮ್ಮನುಾದಿರೂ, ಆವು ನಿತ್ಯಲನೇ ಸರಿ ಜಗತ್ತಿ ನಲ್ಲಿ ನರ್ವರೂ ಸುಖವನ್ನು ಬಯಸುವುದು ಸ್ವಾಭಾವಿಕ ವಾಗಿರುವುದು ಆದರೆ ನಿಜವಾದ ಸುಖವು ಶಂಭು ಲಿಂಗದ ಭಕ್ತಿಜ್ಞಾನಗಳಿಂದ ಮೂರೆಯುವುದಂಬುದನ್ನು ಅರಿಯ ದೆ ವಿಷಸಮಾನವಾದ ಸ್ತ್ರೀಪುತ್ರಧನಾದಿ ವಿಷಯ ಗಳಲ್ಲಿ ಸುಖವಿರುವುದೆಂದು ನಂಬಿ ಅನುಭವಿಸುವಾರದ ಅನಂತ ದು ಖಗಳನ್ನು ಜನರು ಸದಾ ಅನುಭವಿಸುತ್ತಿರು ವರು ದ್ರವ್ಯವು ಎಂದಾದರೂ ಅರಸನಪಾಗುವುದು ಸ್ತ್ರಿಯು ಒಮ್ಮೆ ಪುರುಷನ ಬೆನ್ನಹತ್ತಿ ಹೋಗುವಳು ಭೂವಿ ಯು ಕೊರಯುರಸನ ನಶವಾಗುವುದು ಶರೀರವು ವೃತ್ಯುವಿನ ವಶವಾಗುವುದು ಶರೀರವೇ ತನ್ನ ನಗಲುವ ದೆಂದಒಳಿ ಶರೀರದ ಹೊರತು ಉಳಿದವುಗಳನ್ನು ಎತ್ತು ಗೆಳಿಸದರೇನು ? ಅವೆಲ್ಲವೂ ತನ್ನ ನಗಲುವುದರಿಂದ ಸರ್ವಥಾ ನಿರರ್ಥಕವು ಬಂಧುಬಾಂಧವರಿಗೆ ವಿಷಯ ಮೋಹದಾದುಗಳಂದ ಮನುಷ್ಯನನ್ನು ಸಂರಕ್ಷಿಸಲಿಕ್ಕೆ ಶಕ್ತಿಯಿರುವುದಿಲ್ಲ ಸಾರ್ವಭೌಮನಾದರೂ ಯಮನನ್ನು ಓಡಿಸುವುದಿಲ್ಲ ಧರ್ಮ ಒಂದೇ ಮನುಷ್ಯನನ್ನು ರಕ್ಷಿಸು ವುದು ಅದು ಇವನನ್ನು ಎಂದೂ ಅಗಲುವುದಿಲ್ಲ "ಮೋಕ್ಷ ಸ್ವಧನಮೇವಹಿ ' ಎಂಬಂತೆ ಮೋಕ್ಷವು ಮಾತ್ರ ತನ್ನ ಸ್ವಂತ ದ್ರವ್ಯವಿರುತ್ತದೆ ಆದಕ್ಕೆ ಯಾರ ಭಯವೂ ಇಲ್ಲ ಆದುದರಿಂದ ಸರ್ವರೂ ಮೋಕ್ಷವನ್ನೇ ಸಂಪಾದಿಸಬೇಕು

ಹುಟ್ಟಿದ ಮೇಲೆ ತನಗೆ ಎಂದೂ ಮರಣವಿಲ್ಲದಂಥ ವಿದ್ಯೆಯನ್ನೇ ಸಂಪಾದಿಸಬೇಕು ಅದು ಒಂದುವೇಳೆ ಸಿದ್ಧಿಸದಿದ್ದರೆ ಸತ್ಕಮೇಲೆ ತಿರುಗಿ ಎಂದೂ ಹುಟ್ಟದಂತಿ ವಿದ್ಯೆಯನ್ನಾದರೂ ಗಳಿಸಬೇಕು. ಇವುಗಳ ಹೊರತು ಹೊಟ್ಟೆಯ ಸಲುವಾಗಿ ಶತ್ಪಸಹವ ಅನಂತವಿದ್ಯೆಗಳಂ ದೇನೂ ಪ್ರಯೋಜನವಿಲ್ಲ ಬಕ್ತಿ ಜ್ಞಾನಗಳ ಹೊರತು ಅನೆ ಮಾದಿಸಿದ್ದಿಗಳೂ ಅರಸಿಂದ ಬ್ರಹ್ಮಾದಿದೇವತೆಗಳ ಪದವಿಗಳು ೬ ೪ದ ಕಾಕುವೆೇಶವಿದ್ಯೆಗಳೂ, ಯಜ್ಞಾ ದಿಕಮಗಳೂ ಯೋಗಾದಿಗಳೂ ಯಾವುವೂ ನಿಜ ಸುಖವನ್ನು ಕೊಡಲಾರವು ಆದುದರಿಂದ ಭಕ್ತಿಜ್ಞಾನ ಗಳಿಂದ ಸರ್ವರೂ ನಿಜಸುಖವನ್ನು ಹೊಂದಲು ಯತ್ನಿಸ ಬೇಕಾಗಿ ಕೋರುತ್ತೇನೆ

ದೀಕ್ಷಾ ಸುಮ್ಹು ವಿವಾಹಮೋತ್ಸವ

ನೆರೆಬೂದಿಹಾಳ

ಶಿರಹಟ್ಟಿ ತಾ॥ ಎರೆಬೂದಿಹಾಳ ಗ್ರಾಮವು ಗುರು ಭಕ್ತರಿಗೆ ತವರುಮನೆಯಂತಿರುವುದು ಇಲ್ಲಿಯ ಜನರು ಯಾವಾಗಲೂ ಜಗದ್ಗಾಚಾರ್ಯರ ಭಜನಾದಿಗಳನ್ನು ಮಾಡುತಾ ಅತ್ಯಂತ ಆನಂದದಿಂದಿರುವರು ಇಲ್ಲಿ ಮಃ॥ ರಾ॥ ಅಮ್ಮನಬಾವಿ ಲಿಂಗಪ್ಪನವರು ಎಂಬುವರು ಮಹಾಗುರುಭಕ್ತಿಪರಾಯಣರಾಗಿದ್ದು ಸದಾಚಾರಸಂಪನ್ನ ರಾಗಿದ್ದವರು ಇವರೇ ಮೊದಲಾದ ಪ್ರಮುಖರೆಲ್ಲರೂ ಸೇರಿ ವೀ॥ ಹಿರೇಮಠದ ಗುರುಸಾದಯ್ಯನವರಿಂ ಪುತ್ರರಿ ದೀಕ್ಷಾ ಮತ್ತು ವಿವಾಹಕ್ಕೆ ತಮ್ಮ ಶಕ್ತಿಮೀರಿ ಸಹಾಯ ನೀಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾದರು ಈ ಮಂಗಳಕಾರ್ಯಗಳಾಗಿ ಈ ಗ್ರಾಮದ ಪ್ರಮುಖರು ಬಟ್ಟುರು ಬೃಹನ್ಮಠದ ಶ್ರೀ ಪಟ್ಟದಸ್ವಾಮಿಗಳವರನ್ನು ಆಂದೋಲಿಕೋತ್ಸವದೊಡನೆ ಒರಮಾಡಿಕೊಂಡು ಮೆಲ್ಲುಂಡ ಕಾರ್ಯಗಳನ್ನು ಜ್ಯೇಷ್ಠ ಶುದ್ಧ ೯-೧೦ ೧೧ ನೆಯ ದಿನಸ ಮಹಾಸಂಭ್ರಮದೊಡನೆ ನೆರವೇರಿಸಿದರು ಜಗದಾಚಾರ್ಯರು ಆ ಗ್ರಾಮದ ಸದ್ಭಕ್ತಮಂಡಲಿಗೆ ಸಕಲ ವಿಧವಾದ ಸ ಪತ್ತನ್ನು ಅನುಗ್ರಹಿಸಲೆಂದು ವಾರ್ದಿಸುತ್ತೇನೆ

ಓವ ಗುರುಭಕ್ತ

ಶ್ರೀ ಜಗದ್ಗುರು ಸಿದ್ಧಲಿಂಗೇಶ್ವರ ಪುರಾಣ

ಶ್ರೀ ಜಗದ್ಗುರು ಪಂಚಪೀಠಗಳ ಉದ್ಭಾರಕರೂ ಮಹಾಮಹಿಮಶಾಲಿಗಳೂ ಎಂದು ಜಗದ್ವಿಖ್ಯಾತರಾಗಿ ಹೋಗಿರುವ ಉಜ್ಜಯಿನಿ ಶ್ರೀ ಸಿದ್ಧಲಿಂಗಜಗದ್ಗುರು ಗಳವರ ಪುರಾಣವನ್ನು ಶ್ರಾವಣಮಾಸದಲ್ಲಿ ಪ್ರತಿಯೊಂದು ಗ್ರಾಮದವರೂ ತಮ್ಮ ತಮ್ಮ ಗ್ರಾಮದಲ್ಲಿ ಹಬ್ಬಿ ಆ ಮಹಾತ್ಮರ ಪವಿತ್ರ ಚರಿತ್ರವನ್ನು ಕೇಳಿ ಸರ್ವರೂ ಧನ್ಯರಾಗಬೇಕೆಂದು ಪ್ರಾರ್ಥನೆ. ಪ್ರತಿಗಳು ಸ್ವಲ್ಪ ಉಳಿದಿರುವದರಿಂದ ಶೀಘ್ರ ತರಿಸಿಕೊಳ್ಳಬೇಕು. ಬೆಲೆ ೧ ರೂ. ೪ ಆಣೆ

ಯಂ. ಚಂದ್ರಶೇಖರಪ್ಪ
ಆನಂದ ಬುಕ್‌ಡಿಪೋ ಮಂತಿಹೆಳೆ
ದಾವಣಗೆರೆ

॥ ಶ್ರೀಜಗದ್ಗುರು ಪಾದಾಕ್ರಾಚಾರ್ಯಾಯ ನಮಃ ॥

ಪ್ರಾಣಿಯ ಜನ್ಮ

ಲೇ—ಮಲ್ಲಿಕಾರ್ಜುನಾರಾಧ್ಯ, ಬಿ.ಇ.ಟಿ.ಸಿ.ಇ.ಸಿ.ಇ.
ಮುಡೀಸೂರು

ಜೀವಪೇ ತೆನ್ನ ಕರ್ಮಾನುಸಾರಂ ಸಲವನ್ನೂರಾ
ವಿಶ್ವಭೂತಾಶ್ರಿತಕ್ಕಶ್ವಸರಾಗಾಖಿಲ ಕಾಶ್ವಮ ಜನ್ಮ ।

ಎಂಬ ಶ್ರೀ ನಿಜಗುಣಶಿವಯೋಗಿಗಳ ವಚನಾದಿ ಪ್ರಾಯೋಜನಾನುಸಾರವಾಗಿ ಜೀವನು ತನ್ನ ಕರ್ಮಫಲಾನುಭವಕ್ಕಾಗಿ ಶರೀರಧಾರಣ ಮಾಡುವನು ಜೀವನ ಕರ್ಮಪ್ರವರ್ತಕನು ಈಶ್ವರನು ಪ್ರಾಣಿಯ ಸುಖ ದುಃಖಗಳನ್ನೂ ಪ್ರಿಯಾಪ್ರಿಯಗಳನ್ನೂ ಉತ್ಪತ್ಯವನಿತಿಗಳನ್ನೂ ಆ ಪ್ರಾಣಿಯ ಗರ್ಭೋತ್ಪತ್ತಿಯ ಸಲುವಾಗಿ ರೇತಸ್ಸಿನ ಪ್ರವೃತ್ತಿನಿವೃತ್ತಿಯಾಗುವ ಪೂರ್ವದಲ್ಲೇ ಪರವಾತ್ಮನು ನಿಶ್ಚಯಮಾಡಿರುವನು ಭಗವದಧೀನವಾದ ಪ್ರಕೃತಿಯೇ ಜೀವಾತ್ಮನನ್ನು ಕರ್ಮಮಾರ್ಗದಲ್ಲಿ ತಳ್ಳುವದು

ಜೀವನು ತಾನೇ ತನ್ನನ್ನು ಮತ್ತು ತನ್ನ ಕಲ್ಪಕೋಟಿ ವರ್ಷಗಳಿಂದ ಹೀನತಮಾನಭಿಮಾನದಿಂದ ನ್ಯೆರನರಕದಿಕುಯೋಜಿಸಿಯೆಂಬ ಕುಲಾಲಚಕ್ರದಲ್ಲಿ ಪಿಲ್ಲಿ ಮುಂಗಾಣದೆ ಭವಾರಣ್ಯದೊಳ್ ಚರಿಸುತಿರೆ ಸುಕ್ಕತಿಯಿಂದ ಪೆರ್ವಟ್ಟಿಯಿಂದಿಸಿದು ನನಪ್ಪಾನ ದೊಳು ಜಿರೆಕೊಂಬ ಸ್ತ್ರೀರಸದೊಳಣುವಾಗಿ ನಿಶ್ಚಸುರಿವ ಮಾಯಾಬಿಂದು ದಾರೆಯೊಳು ಕಳೆಸುಳಿದು ಜನಿಸಲ್ಕಾಜನಂತೆ ಮೇಣ ಜನಿತ ಕಾಮಾಗ್ನಿಯೊಳು ಕ್ಷಣಿಕ ಸಂಯೋಗದಲಿ ಚಿತ್ತಿಸಿ ಬೆಂಕೆಯ ಬಿಸಿಗೆ ಜಿನಿಗಿವ ಭಂಗಿಯಲಿ ಶುಕ್ರರೂಪಿಂದಿಳಿದು ಜನಿಸಿಯ ಶುಕ್ರುಕಮಲಸರಂಧ್ರಲ್ಲಿರೆಳಿಗೆ ಪಿಲ್ಲುವನು ತದನಂತರ ಬಕ್ಷ್ಮಣೋಣಿತ ಜೆತೆಯು ಜೊಜ್ಜಳಿಯಾಗಿ ಪಿನ ಶುಕ್ತಿಯೊಳು ಸ್ಫಾಣಿಪಲಿಂದು ಮುತ್ತಾಯಂತೆ ಕರಪರಾಣ್ಯವಯ ನಗಳಿಂದ ಕೂಡಿದ ದೇಹಧಾರಿಯಾಗುವನು

ಸ್ತ್ರೀಯರ ಶರೀರದಲ್ಲ ಮತ್ತೊಂದು ಜೀವಕ್ಕಾಗಿ ಒಂದು ದೇಹವು ಹೊಸದಾ ರಚನೆಯಾಗಿ ವರ್ಷ ಹಾರಾಡು ಜೀವವೇ ಹೊಸದಾಗಿ ಆಗವನ್ನಿಸ್ಥ ಸ್ತ್ರೀ ಪುರುಷರ ಆಹಾರದಲ್ಲಿ ಸೂಕ್ಷ್ಮ ಜೀವರ ತರರ ಪಾಪ ದೊಳಗೆ ಪ್ರವೇಶಿಸಬಹುದು ಆದರೆ ಆ ಜೀವರಲ್ಲಿ ಯಾರ ಯೋಗ್ಯತೆಯು ಆ ಸ್ತ್ರೀಪುರುಷರ ಗರ್ಭಾಶಯ ತೆಗೆ ಹೊಂದಿಕೆಯಾಗಿರುವರ್ಮಗ ಆಂಧವರು ಮಾತ್ರ ಗರ್ಭ ದಲ್ಲಿ ಪಿಲ್ಲುವರು ಉಳಿದವರೆಲ್ಲರೂ ಬಂದ ದಾರಿಯನ್ನು ಹಿಡಿದು ಹೋಗುವರು ಜೀವರು ಈ ಪರಿಯಲ್ಲಿ ಧಾನ್ಯ ಗಳಲ್ಲಿರುವಾಗ ಧಾನ್ಯಗಳಿಗಾಗುವ ಕುಟ್ಟುವಿಕೆ, ಬೀಸು ವಿಕೆ, ಬೇಯಿಸುವಿಕೆ ಇವೇ ಮೊದಲಾದ ಕ್ರಿಯೆಗಳಿಂದ ಅವರಿಗೆ ಅಗುವಂತೆ ಅವರ ಸ್ಥಿತಿಯು ಇರುವದು ಸಮುದ್ರದ ನೀರು ಬಿಸಿಲಿಂದ ಕಾಯ್ದು ಆವಿಯಾಗಿ ಆಕಾಶದಲ್ಲಿ ಸೇರಿ ಅಲ್ಲಿ ಘನರೂಪವಾಗಿ ತೇಲುತ್ತ ತಗಲಿದಾಗಲೆ ಕರಗಿ ಭೂಮಿಗೆ ಬೀಳುವಂತೆ ಹೀಗೆ ಬಿದ್ದ ನೀರೇ ನಾನಾ ಹಾದಿಗಳಾಗಿ ನಾನಾ ಭಾಗದಿಂದ ಹರಿದು ಸಮುದ್ರವನ್ನು ಸೇರುವಾಗಲು ಮಾಗಿ ವಂತೆ ಮಾನವನೆಲ್ಲರೂ ತಮ್ಮ ಜೀವನಕ್ಕೆ ಆಧಾರವಾಗಿ ಸಂಚಾರಗಳಲ್ಲಿರುವ ಸದಮಾತ್ಸರ್ಯ ದ ಜಾದಿ ನೋಡಿಗಳ ಮುಳು ನಲವಾಗಿ ಪರು ಆದರೆ ನಾನಾ ವ್ಯಕ್ತಿಯಿಂದ ಬದುಕಿ ಬಾಳಿ ಕಟ್ಟಕಡೆಗೆ ಆ ಸಾಗರ ದಲ್ಲಿಯೇ ಸೇರುವರು ಈ ಪರಿಯಲ್ಲಿ ವಿಚಾರಮಾಡಿ ನೋಡಿದರೆ, ಸಮುದ್ರದ ನೀರಿಗಿಂತಲೂ ನದಿಗಳ ನೀರೇಂಬುದು ಬೇರೆ ಹೇಗಿಲ್ಲವೋ, ಹಾಗೆಯೇ ಆ ಪರಬಿವನುರ್ತಿಯ ಜೈತನ್ಯವಲ್ಲದೆ ನಮ್ಮ ಜೈತನ್ಯ ವೆಂಬುದೊಂದು ಬೇರೆ ಇಲ್ಲವೇ ಇಲ್ಲವು ಆ ಪರಮಾತ್ಮನೇ ನಮ್ಮ ಜೀವನದ ಜೀವಾಳವು. ಅವನೇ ಸಕಲರಿಗೆ ಪರಮಗತಿಯಾಗಿರುವನು

ಸ್ತ್ರೀಪುರುಷರ ಸಂಯೋಗದ ಪ್ರಥಮದಿವಸದಲ್ಲಿ ಪುರುಷನ ರೇತಸ್ಸು ರಾಗೂ ಸ್ತ್ರೀಯ ರಕ್ತ ಇವೆರಡರ ಸಂಮಿಶ್ರಣವಾಗುವದು ಮುಂದೆ ಏಳನೇ ದಿವಸದಲ್ಲಿ ಅದು ಗೋಳಾಕಾರದ ಬುದ್ಬುದವಾಗುವದು. ಹತ್ತನೇ ದಿವಸದಲ್ಲಿ ಅದು ಸ್ವಲ್ಪವುಟ್ಟಿಗೆ ಬರುವಾಗ ಜೋರೆಯ ಕಾಯುಯಂತೆ ದುಂಡಗೆ ಆಗುವದು ಒಂದು ತಿಂಗಳಿಗೆ ಮೊಸದ ಪಿಂಡದಂತೆ ಆದರ ಆಕಾರವಾಗುವದು ಆಮೇಲೆ ಅದಕ್ಕೆ ತಲೆಯು ಆಗುವದು. ಎರಡು ತಿಂಗಳಲ್ಲಿ ಕೈ ಕಾಲುಗಳ ಪ್ರತ್ಯಂಗಗಳು ಸಣ್ಣದಾಗಿ ಕಾಣುವವು ಮೂರು ತಿಂಗಳಲ್ಲಿ ಕೈ ಕಾಲುಗಳು ಸ್ಪಷ್ಟವಾಗಿ ಕಾಣುವವು ಆ ಗರ್ಭವು ಸ್ತ್ರೀ ಇದ್ದಾಗ ಪುರುಷವಿದ್ದಂತೆ ಅವಕ್ಕೆ ಚಿಪ್ಪೆಗಳಾಗು ವವು ಸ್ತ್ರೀರಕ್ತ ಶೇಕಾಧಿಕ್ಯವಾದರೆ ಪುರುಷನೂ ಸ್ತ್ರೀರಕ್ತ ವಿಕಾರ ದರ್ಶಕವಾಗಿದ್ದರೂ ಸಮವಾದರೆ ನಪುಂಸಕನು ಹೀಗೆಯೇ ನಾಲ್ಕು ತಿಂಗಳಲ್ಲಿ ನೂರಾರು ಸಣ್ಣ ಸಣ್ಣ ಅಂಗಗಳು ಉತ್ಪನ್ನವಾಗುವವು ಆಮೇಲೆ ತಾಯಿಯು ಅನ್ನಾದಿಯ ಇದ್ದ ಅದಕ್ಕೆ ಹಸಿವು ತೃಷೆ ಹೊರಟುವವು ಆರನೇ ತಿಂಗಳು ಜಾಯುಜಜೀವಿ ಜೀಲದಿಂದ ಆಚ್ಛಾದಿಸಿಟ್ಟಿಟ್ಟು ಬಲಿಂಗದಲ್ಲಿ ಗರ್ಭ ಸರಿಯಾಗಿ ಕ್ರಮಿಸುವದು ಆಮೇಲೆ ತಾಯಿಯು ಅನ್ನಾದಿಯ ಸೇವನೆಯಿಂದ ಆ ಗರ್ಭದ ಸ್ತ್ರೀ ಅಂಶಗಳಾದ ಚರ್ಮ ಮಾಂಸ ರಕ್ತ ಶ್ರೋಣ ಆಶಯಗಳಾದಿಯಾಗಿ ನರ ಮಜ್ಜೆ ವೀರ್ಯ ಈ ಸಪ್ತಧಾತುಗಳು ಉತ್ಪತ್ತಿಗೊಳ್ಳುತ್ತ ಅಭಿವೃದ್ಧಿ ಯಾಗುವನ್ತ ತಾಯಿಯ ಗರ್ಭವೆಂದರೆ ಮಲಮೂತ್ರ ಗಳಿಂದ ತುಂಬಿದ್ದೂದರ ಕುಣಿಯು ಅದರಲ್ಲಿ ಜಂತು ಗಳ ಉತ್ಪತ್ತಿಯು ಆಗುತ್ತಲೇ ಇರುವದು ಅಂತಹ ಹೀಯ ವಾದ ಸ್ಥಳದಲ್ಲಿರುವದು ಜೀವನಿಗೆ ಅತಿ ಹೇಯ ವೆನಿಸುವದು ಆದರೆ ಮಾಡುವದೇನು? ಅಲ್ಲಿ ಅವನು ಒಮ್ಮು ಯಾತನೆಗಳನ್ನು ಸಹಿಸಬೇಕಾಗುವದು ಅವನ ಕೋಮಲ ಶರೀರಕ್ಕೆ ಕ್ರಿಮಿಗಳು ಕಚ್ಚುವವು ತಾಯಿಯು ಆಹಿಸಿದ ಉಪ್ಪಾಗರ ಹುಳಿಗಳು ಮೈಗೆ ಹತ್ತಿ ಸನಾಂಗಗಳಲ್ಲಿ ವೇದನೆಯಾಗುವದು ಅವನ ಶರೀರದ ಮೇಲೆ ಗರ್ಭಾಶಯದ ಆವರಣವಿರುವದು ಆದರ ಕೆಳಗೆ ತಾಯಿಯ ರಕ್ತ ನರ ಸೊಡಿಕೆ ಇರುವದು ಗರ್ಭದ ಎಡಗಡೆ ಮೆಲ್ಲಿಲ್ಲ ತಲೆ ಬಿಲ್ಲಾದ ಪೆಸ್ಸಿಯೊಹಾಗೆ ಬಾಗಿದ್ದು ಮೆಲ್ಲಿಲ್ಲ ತಲೆ ಬಿಲ್ಲಾದ ಪೆಸ್ಸಿಯೊಹಾಗೆ ಬಾಗಿದ್ದು ಇರುವದು ಇತರ ಪ್ರಾಣಿಗಳಲ್ಲಿ ತಿರುಗಿದ ಬಾಲವಿರುವದು ಸ್ತ್ರೀಯರಿಗೆ

ಇದರ ಜೊತೆಗೆ ಹೈದರಾಬಾದು ಮತ್ತು ಸಿಕಂದರಾಬಾದುಗಳಲ್ಲಿರುವ ಯೂನಿಯನ್ ಪೋಸ್ಟ್ ಆಫೀಸ್‌ಗಳು ಸ್ಟೇಟ್ ಕರೆನ್ಸಿಯನ್ನು ನಿರಾಕರಿಸಿವೆ

ಇನ್ನು ಮುಂದೆ ಸಂಸ್ಥಾನದಲ್ಲಿರುವ ಯೂನಿಯನ್ ಅಂಚೆ ಕಛೇರಿಗಳು ಯೂನಿಯನ್ ನಾಣ್ಯಗಳನ್ನು ಕೌಂಟರಿ ಮಾತ್ರ ಕಾರ್ಡು, ಕವರು, ಸ್ಟಾಂಪುಗಳನ್ನು ಕೊಡುವುವು

ಹೈದರಾಬಾದಿನ ಪರಿಸ್ಥಿತಿ ಬಗ್ಗೆ ನಿಜಾಮರ ಹೇಳಿಕೆ

ಹೈದರಾಬಾದಿನಲ್ಲಿ ಮೆಕ್ಕಾ-ಮದೀನಾ ಭವನದ ಶಂಕುಸ್ಥಾಪನ ಮಹೋತ್ಸವವನ್ನು ನೆರವೇರಿಸುತ್ತಾ ನೈಜಾಮರು ರಾಜಕೀಯ ಪರಿಸ್ಥಿತಿಯ ಬಗ್ಗೆ ಈ ರೀತಿ ಭಾಷಣ ಮಾಡಿದ್ದಾರೆ

"ಯುದ್ಧವು ನಿಂತ ಮೇಲೂ ಬ್ರಿಟಿಷರು ಭಾರತವನ್ನು ತ್ಯಜಿಸಿದ ಮೇಲೂ ಪ್ರಸಂಶದ ನಾನಾಭಾಗಗಳಲ್ಲಿ ಜಗಳಗಳಾಗುತ್ತಲೇ ಇವೆ ಪ್ರಪಂಚದ ದೃಷ್ಟಿಯಿಂದ ನೋಡುವುದಾದರೆ ಹೈದರಾಬಾದ್ ಪರಿಸ್ಥಿತಿಯು ಅಸಹ್ಯ ಮುಖ್ಯವೆನ್ನಲು ಭಾರತದಲ್ಲಿ ಅದೊಂದು ಸಮಸ್ಯೆಯಾಗಿ ಕಾಣಬಹುದು ಆದಕ್ಕೆ ಭಾರತ ಸರ್ಕಾರದ ಕಾರಣ ಹೈದರಾಬಾದ್ ಪರಿಸ್ಥಿತಿಯನ್ನು ಬಗೆ ಹರಿಸಲು ಸಂಯುಕ್ತ ರಾಷ್ಟ್ರಸಭೆಗೆ ಹೋಗಬೇಕಾದ ಪ್ರಮೇಯ ವಿಲ್ಲ

ಭಾರತ ಸಂಸ್ಥಾನವು ಹೈದರಾಬಾದಿನ ಮೇಲೆ ಆರ್ಥಿಕ ನಿರ್ಬಂಧವನ್ನು ಹಾಕಿದ ಮಾತ್ರಕ್ಕೆ ಆದರ ಸಮಸ್ಯೆಯು ಪರಿಹಾರವಾಗುವುದಿಲ್ಲ ನಿಷ್ಪಕ್ಷಪಾತ ಮತ್ತು ನ್ಯಾಯ ದೃಷ್ಟಿಯಿಂದ ಹೈದರಾಬಾದಿನ ಬೇಷರತ್ತನ್ನು ತೀರ್ಮಾನ ಮಾಡಲು ಯಾರಾದರೂ ಕೈ ಹಾಕಿದರೆ ಆಗ ನಾವು ೨ ವಿಷಯವು ತೃಪ್ತಿಕರವಾಗಿ ಇತ್ಯರ್ಥವಾಗುವುದು'

ಹೈದರಾಬಾದಿನ ಮೇಲೆ ಆರ್ಥಿಕ ನಿರ್ಬಂಧ ಏನೂ ಮಾಡಲಾರದು

ಮಜ್ಲಿಸ್, ಇತ್ತಿಹಾದ್ ಮುಸ್ಲಿಮೀನ್, ಸಂಸ್ಥಾನ ಆತ್ಯಸ್ಥರಾದ ಶ್ರೀ ಕಾಸಿಂ ರಜ್ವಿಯವರು ಆದರ ೨೦ ನೇ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುತ್ತಾ "ಹೈದರಾಬಾದಿನ ಮೇಲೆ ಆರ್ಥಿಕ ನಿರ್ಬಂಧವನ್ನು ಹೇರಿರುವುದರಿಂದ ಯಾವ ವಿಧದಲ್ಲೂ ತೊಂದರೆಯಾಗಲಾರದು ಭಾರತ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಎಣ್ಣೆಯನ್ನು ನಿಲ್ಲಿಸಿದೆ ಆದರೆ ಅದಕ್ಕೆ ನಾವು ಹೆದರುವುದಿಲ್ಲ ಡೀಸೆಲ್ ಎಣ್ಣೆಯನ್ನು ಕಡಲೆಕಾಯಿ ಎಣ್ಣೆಯಿಂದ ತಯಾರಿಸಿ ಬಸ್ಸುಗಳಿಗೆ ಉಪಯೋಗಿಸುತ್ತಿದ್ದೇನೆ ಇರ್ನಾಲಿಯಲ್ಲಿ ತಯಾರು ಮಾಡುತ್ತಿದ್ದ ಹಾಗೆ ಕಲ್ಲಿದ್ದಲಿನಿಂದ ಪೆಟ್ರೋಲನ್ನು ತಯಾರಿಸಿ ಉಪಯೋಗಿಸುತ್ತೇನೆ ಆದ್ದರಿಂದ ಇವುಗಳನ್ನು ಭಾರತ ಸರ್ಕಾರವು ನಿಲ್ಲಿಸಿ ಬಿಟ್ಟರೆ ಹೈದರಾಬಾದು ಹೆದರುವುದಿಲ್ಲವೆಂದು ತಿಳಿಸಿದ್ದಾರೆ"

ಹಳ್ಳಿಯೊಂದಕ್ಕೆ ಮೇಲೆ ನುತ್ತಿಗೆ

೫೦ ಜನ ರಜಕಾರರು ಸೊಲ್ಲಾಪುರ ಡಿ|| ಹಳ್ಳಿಯೊಂದನ್ನು ಮುತ್ತಿ ಹಳ್ಳಿಯವರ ಧನಕರುಗಳನ್ನು ಹೊಡೆದುಕೊಂಡು ಹೋದರು. ಹಳ್ಳಿಯಲ್ಲಿದ್ದ ಇಂಡಿಯನ್ ಪೋಲೀಸ್ ಪಡೆಯವರು ರಜಕಾರರ ಮೇಲೆ ಗುಂಡು ಹಾರಿಸಿದರೆ ಪರಿಣಾಮವಾಗಿ ರಜಕಾರಪೊಬ್ಬನು ಮಡಿದನು

ರೈಲು ಉರುಳಿಸುವ ಪ್ರಯತ್ನ

'ಬಾರ್ಸಿಮೈಲ್' ಉರುಳಸಲೇಕೆಂದು ರಜಕಾರರು ಕಂದಿಗ ಮೇಲೆ ಕಲ್ಲುಗಳನ್ನಿಟ್ಟು ರೈಲ್ವೆ ರಸ್ತೆಯನ್ನು ಮುಚ್ಚಿದ್ದರು. ರೈಲ್ವೆ ಡ್ರೈವರ್ ಇದನ್ನು ನೋಡಿ ರೈಲನ್ನು ನಿಲ್ಲಿಸಿದುದರಿಂದ ಅನಾಹುತವೆ ತಪ್ಪಿತು ಕಲ್ಲುಗಳನ್ನು ತೆಗೆದು ರೈಲು ಮುಂದಕ್ಕೆ ಹೋಯಿತು.

ನಾಗಪುರದ ಬಳಿಯಲ್ಲಿ ನೈಜಾಂ ಗೂಢಚಾರರ ಚಟುವಟಿಕೆ

ಯೂನಿಯನ್ ಪ್ರದೇಶದಲ್ಲಿ ನೈಜಾಂ ಗೂಢಚಾರರ ಚಟುವಟಿಕೆಗಳು ಜೋರಾಗಿವೆ ಇವರು ಹಿಂದುಗಡೆ ನೇಪದೂರಿನ ಹೈದರಾಬ್ ಪರವಾಗಿ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ ನೈಜಾಮರ ಮೂರು ಮಂದಿ ಮುಸ್ಲಿಂ ಗೂಢಚಾರರನ್ನು ಬುಲಢಾನ ಜಿಲ್ಲೆಯಲ್ಲಿ ರಾಯಪುರದ ಪೋಲೀಸರು ದಸ್ತಗಿರಿ ಮಾಡಿದ್ದಾರೆ

ಬೊಂಬಾಯಿಯಲ್ಲಿ ಭಯಂಕರ ಗಲಭೆ

೪ ನೇ ತಾ|| ರಾತ್ರಿ ನಡೆದ ಕೋಮುವಾರು ಘರ್ಷಣೆಯಲ್ಲಿ ೨೬ ಜನರು ಸತ್ತರು ೯೫ ಜನರಿಗೆ ತೀವ್ರ ಗಾಯಗಳಾಗಿವೆ ಜೊತೆಗೆ ಮುಳುಗುವ ವೇಳೆಯಿಂದ ಮುಂಜಾನೆವರೆಗೂ, ಕರ್ಫ್ಯೂ ಆಜ್ಞೆ ಜಾರಿಮಾಡಲಾಗಿದೆ ಈ ಆಜ್ಞೆಯು ೭ ದಿನಗಳವರೆಗೂ ಜಾರಿಯಲ್ಲಿರುವುದು

ಗಲಭೆಗೀಡಾದ ಪ್ರದೇಶಗಳಲ್ಲಿ ಶಸ್ತ್ರಧಾರಿಗಳಾದ ಪೋಲೀಸರು ಗಸ್ತು ತಿರುಗುತ್ತಿದ್ದಾರೆ ಇವರ ಜೊತೆಗೆ ಪೋಲೀಸರ ಪೋಷಾಕನ್ನು ಧರಿಸದೆ ಸಾಮಾನ್ಯ ಉಡುಪು ಹಾಕಿಕೊಂಡು ನೂರಾರು ಪೋಲೀಸರು ರಿವಾಲ್ವರ್‌ಗಳೊಡನೆ ತಿರುಗಾಡುತ್ತಿದ್ದಾರೆ

ಇಂಥಿಯನ ಪ್ರಯತ್ನದಲ್ಲಿ ತೊಡಗಿರುವನೆಂದನ್ನು ಸ್ಥಳದಲ್ಲೇ ರಿವಾಲ್ವರ್‌ನಿಂದ ಹೊಡೆಯಲು ಈ ಅಜ್ಞಾತ ಪೋಲೀಸರಿಗೆ ಅಧಿಕಾರ ಕೊಡಲಾಗಿದೆ ಸಾರ್ವಜನಿಕರಿಗೆ ಈ ವಿಷಯವನ್ನು ಬ್ರಾಡ್‌ಕಾಸ್ಟ್ ಮೂಲಕ ತಿಳಿಸಲಾಗಿದೆ

೧೪ ದಿನಗಳವರೆವಿಗೆ ೨೫ ಜನರಿಂಗಿತಲೂ ಜಾಸ್ತಿಯಾಗಿ ಒಂದು ಕಡೆ ಸೇರಕೂಡದೆಂದು ಪ್ರತಿಬಂಧಕಾಜ್ಞೆ ಜಾರಿ ಮಾಡಲಾಗಿದೆ ಇನ್ನು ಒಂದು ತಿಂಗಳವರೆಗೆ ಸಭೆ ಮತ್ತು ಮೆರವಣಿಗೆಗಳನ್ನು ನಿಷೇಧಿಸಿ ಪೋಲೀಸ್ ಕಮಿಷನರರು ಆಜ್ಞೆ ಹೊರಡಿಸಿದ್ದಾರೆ

ಸೋಮವಾರ ೬ ಇರಿತದ ಪ್ರಕರಣಗಳು ನಡೆದುವು ಈ ಗಲಭೆಗಳ ಸಂದರ್ಭದಲ್ಲಿ ೮೯ ಜನರನ್ನು ದಸ್ತಗಿರಿ ಮಾಡಲಾಗಿದೆ

ಗಲಭೆ ನಡೆಯಲು ಕಾರಣ

೪ ನೇ ತಾ|| ಭಾನುವಾರ ಟ್ರಾಂ ಕಾರಿನಲ್ಲಿ ಯಾವನೋ ಒಬ್ಬನು ಜೇಬಿನಲ್ಲಿದ್ದ ಹಣವನ್ನು ಅಪಹರಿಸಿ ಗುರಾಯಾಗಲು ಪ್ರಯತ್ನಿಸಿದಾಗ ಹಣ ಕಳೆದುಕೊಂಡ ಪ್ರಯಾಣಿಕನು ಕೂಗಿಕೊಂಡನು ಈ ಇಬ್ಬರೂ ಬೇರೆ ಬೇರೆ ಕೋಮಿನವರು ಈ ಸಣ್ಣ ಪ್ರಕರಣ ಕೋಮುವಾರು ಗಲಭೆಗೆ ಎಡೆಕೊಟ್ಟಿತು ಮಾತಿಗೆ ಮಾತು ಬೆಲೆಯು ಭೀಕರ ಕೋಮುವಾರು ಗಲಭೆ ಸಂಭವಿಸಿತು ಗಲಭೆಯು ಒಂದೆನೆಯಿಂದ ನುತ್ತೊಂದು ಎಡೆಗೆ ಹಬ್ಬಿತು ಕ್ಷಣಮಾತ್ರದಲ್ಲಿ ಜೊಂಬಾಯಿ ನಗರವು ಕೋವಿಯಾರು ಅಗ್ನಿಭಕ್ಷಕರ ಕೈಕಾಚಿಕ ಕೃತ್ಯಗಳಿಗೆ ರಂಗವಾಯಿತು ಪೋಲೀಸರು ಕಣ್ಣೀಕ್ಷಣ ಕ್ರಮ ಕೈಗೊಂಡು ಒಂದು ಗಂಟೆಯೊಳಗಾಗಿ ಸರಿಸ್ಥಿತಿಯನ್ನು ಹತೋಟಿಗೆ ತಂದರು

ಬ್ರಿಟನ್ನಿನಿಂದ ಹೈದ್ರಾಬಾದಿಗೆ ಶಸ್ತ್ರಾಸ್ತ್ರಗಳು ಹೋಗುವುದಿಲ್ಲವೆಂದು ಬ್ರಿಟಿಷ್ ಮಂತ್ರಿಗಳ ಹೇಳಿಕೆ

ಬ್ರಿಟನ್ನಿನಿಂದ ಹೈದರಾಬಾದ್ ಸಂಸ್ಥಾನಕ್ಕೆ ರಹಸ್ಯವಾಗಿ ಶಸ್ತ್ರಾಸ್ತ್ರಗಳನ್ನು ರವಾನಿಸಲಾಗುತ್ತಿದೆಯೆಂದು ಭಾರತ ಸರ್ಕಾರವು ಆಕ್ಷೇಪಿಸಿ ಪತ್ರ ಬರೆದಿದೆ. ಬ್ರಿಟನ್ನಿನಿಂದ ಹೈದರಾಬಾದಿಗೆ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ರವಾನಿಸಲು ಬ್ರಿಟಿಷ್ ಸರ್ಕಾರವು ಖಂಡಿತ ಒಪ್ಪುವ ದಿಲ್ಲ. ಅದು ಭಾರತ ಸರಕಾರವ ನಿಯಮ ನಿಬಂಧನೆ ಗಳಿಗೂ, ಚಳಾಗೋ ಸಮ್ಮೇಳನದ ತಠರಾಯಗಳಿಗೂ, ಬ್ರಿಟನ್ನಿನ ವಿಮಾನಸಂಚಾರ ನಿಬಂಧನೆಗಳಿಗೂ ತೀವ್ರ ವಿರುದ್ಧ. ಕಳ್ಳತನದಲ್ಲಿ ಶಸ್ತ್ರಾಸ್ತ್ರಗಳನ್ನು ಸಾಗಿಸಲು ನಾವು ಲೇಶವೂ ಅವಕಾಶ ಕೊಡುವುದಿಲ್ಲ ಎಂಬುದಾಗಿ ಬ್ರಿಟಿಷ್ ಕಾಮನ್‌ವೆಲ್ತ್ ರಿಲೇಶನ್ಸ್ ಮಂತ್ರಿಗಳಾದ ಮಿ|| ಫಿಲಿಪ್ ನೋಯಲ್ ಬೇಕರ್‌ರವರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು

ಭಾರತ ಸರ್ಕಾರವರೆ ಪ್ರತಿಭಟನಪತ್ರವು ತಲುಪಿಸಿ ಕೂಡಲೇ ಈ ವಿಚಾರದಲ್ಲಿ ತನಿಖೆ ನಡೆಸಲಾಯಿತು ಬ್ರಿಟಿಷರು ತಮ್ಮ ವಿಮಾನಗಳಲ್ಲಿ ನಿಜವಾಗಿಯೂ ಗುಪ್ತವಾಗಿ ಯುದ್ಧೋಪಕರಣಗಳನ್ನು ಸಾಗಿಸುತ್ತಿಲ್ಲವೆಂದು ಈ ತನಿಖೆಯಿಂದ ಹೊರಪಟ್ಟಿದೆ ಆಕ್ರಮವಾಗಿ ಶಸ್ತ್ರಾಸ್ತ್ರ ಗಳು ರವಾನೆಯಾಗದಂತೆ ಮಾಡಲು ಬ್ರಿಟಿಷ್ ಸರಕಾರವು ಸಾಧ್ಯವಾದ ಪ್ರಯತ್ನಗಳನ್ನೆಲ್ಲಾ ಮಾಡುವುದು ಎಂಬು ದಾಗಿ ತಿಳಿಸಿದರು

ಪ್ರಕ್ಷೋತ್ಪಾರಗಳು

ಮಿ|| ವಿಲ್ಸನ್ ಹ್ಯಾರಿಸ್—ಹೈದರಾಬಾದಿನ ಮೇಲೆ ಇಂಧನ ಆರ್ಥಿಕ ನಿರ್ಬಂಧನೆವನ್ನು ಸಡಿಲಿಸುವಂತೆ ನೀವು ಭಾರತ ಸರಕಾರಕ್ಕೆ ಸಲಹೆ ಮಾಡಬಾರದೇಕೆ ?

ಉ—ಸ್ಟ್ಯಾಂಡ್‌ಸ್ಟಿಲ್ ಒಪ್ಪಂದವನ್ನು ಉಲ್ಲಂಘಿಸ ಲಾಗಿದೆಯೆಂದು ಉಚಿತ ಸಪ್ತದಲೂ ಹೇಳುತ್ತಿದ್ದಾರೆ ನಾನು ಯಾರ ಪರವಾಗಿ ಮಾತನಾಡಲಿ ?

ಮಿ|| ಗ್ರಿಮನ್—ಬ್ರಿಟಿಷ್ ವಿಮಾನಗಳು ಭಾರತದ ವಿಮಾನ ನಿಲ್ದಾಣಗಳಲ್ಲಿ ಇಳಿಯಲೆ ಹಾದುಹೋಗುವುದ ರಲ್ಲಿ ತಪ್ಪೇನಿದೆ ?

ಉ —ಭಾರತದ ನಿಯಮ ನಿಬಂಧನೆಗಳಿಗೆ ಅದು ವಿರುದ್ಧ—ಎಂದು ಮಿ|| ನೋಯಲ್ ಬೇಕರ್‌ರವರು ತಿಳಿಸಿದರು

ಚೀಣಾದಲ್ಲಿ ಕಮ್ಯೂನಿಸ್ಟರಿಗೆ ಸೋಲು

ಚೀನಾ ಆಧಿಕಾರಿಯಿತ ವರದಿಯಂತೆ ಹೋನಾನ್ ಸ್ಯಾಂಡದಲ್ಲಿ ಒಂದು ವಾರ, ಸತತವಾಗಿ ೫೫ ದಿನ ನಡೆದ ಯುದ್ಧದ ಪರಿಣಾಮವಾಗಿ ಕಮ್ಯೂನಿಸ್ಟರ ಬೆನ್ನು ನೂಳೆ ಯಂತಿದ್ದ ಸೈನ್ಯಕ್ಕೆ ಬಲವಾದ ಪೆಟ್ಟುಬಿದ್ದಿದೆ ಇದರಿಂದ ಚೀಣಾ ರಾಜಧಾನಿಯೆಂದ ನ್ಯಾಂಕಿಂಗ್ ಮೇಲೆ ಕಮ್ಯೂ ನಿಸ್ಟರು ಬೀಳುವ ಪ್ರಯತ್ನವು ವಿಶಲನಾಗಿದೆ ಆಧಿಕಾರ ಯತ ವರದಿಯಂತೆ ಕಮ್ಯೂನಿಸ್ಟರ ಕಡೆ ೨೦ ಸಾವಿರ ಕಮ್ಯೂನಿಸ್ಟ ಸೈನಿಕರಿಗೆ ಸಾವು ನೋವು ಉಂಟಾಗಿದೆ

ಸ್ವೀಕಾರ

ತಿರಪಟ್ಟಿ ತಾ|| ಎರೆಬೂದಿಹಾಳ ಹಿರೇಮಠದ ಶ್ರೀ ಗುರುಸಾಮಯ್ಯನವರು ಬಟ್ಟೂರು ಹಿರೇಮಠದ ಶ್ರೀಮಚ್ಚಟದಸ್ವಾಮಿಗಳವರ ಗುರುತ್ವದಲ್ಲಿ ತಮ್ಮ ಪುತ್ರರಿಗೆ ಮಾಡೇಶ್ವರದೀಕ್ಷಾ ಮತ್ತು ವಿವಾಹಕಾರ್ಯಗಳನ್ನು ನೆರವೇರಿಸಿದ ಸಮಯದಲ್ಲಿ ವಿವಾಹಕಾರ್ಯಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕಕ್ಕೋಸ್ಕರ ಸಮರ್ಪಿಸಿದ **2** ರೂ ಗಳು ಶ್ರೀ ಬಟ್ಟೂರು ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲಪಿರುತ್ತವೆ

ಸೊರಬ ತಾ|| ಚಿಗಟೂರು ಗ್ರಾಮದ ವೈ.ಎಂ.ರಿ ಸ್ಕೂಲ್ ಹೆಡ್‌ಮಾಸ್ಟರ್ ಶ್ರೀಮಾನ್ ಕೆ ಸಿ ರುದ್ರರಾಜ ಗೌಡರು ತಮ್ಮ ಪುತ್ರಿ ಚಿ|| ಸೌ|| ರೇಣಕಾಂಬೆಯನ್ನು ತೀರ್ಥಹಳ್ಳಿಯ ಚೇರ್‌ಮನ್ ಸಿದ್ದನಗೌಡರ ಜ್ಯೇಷ್ಠಪುತ್ರ ಚಿ|| ಮಲ್ಲನಗೌಡರಿಗೆ ಕೊಟ್ಟು ವೈಕಾಖ ಶುದ್ಧ ೮ ರವಿವಾರದ ದಿವಸ ಸಾಲಂಕೃತ ಕನ್ಯಾದಾನ ಮಾಡಿದ ಸಮಯದಲ್ಲಿ ಪ್ರಭಾಪೋಷಣಕಕ್ಕೋಸ್ಕರ **1** ರೂ. ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಈ ಮೇಲ್ಕಂಡ ಮಹಾತ್ಮರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಪರಂಪ್ರೆಯ ಒಪ್ಪಿರುವ ಆಗಮ ಪ್ರಮಾಣ ಪ್ರಕಾರ ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಪಂಚದ ಈ ಮಹಾಪ್ರಂಥಪ್ರಪಂಚ ಶಿವಜಗದ್ಗುರು ಶ್ರೀ ಶ್ರೀ ಶ್ರೀ ಪಂಡಿತಾರಾಧ್ಯ ದಿವ್ಯಾತ್ಮರಿಂದ ಈ ಸೃಷ್ಟಿಪ್ರಪಂಚದಲ್ಲಿ ವೀರಶೈವಸಿದ್ಧಾಂತವನ್ನು ಉಳಿಸಬೇಕೆಂಬುದು ಲೋಕಕಲ್ಯಾಣಕ್ಕೆ ಪ್ರಪಂಚದ ವೀರಶೈವರೆಲ್ಲರ ಕರ್ತವ್ಯವೆಂದು ಸದ್ಭಾವನೆಯಿಂದ ಶ್ರೀ ಜಗದ್ಗುರುಗಳವರ ಆಜ್ಞೆಯಂತೆ ಪ್ರತಿಯೊಬ್ಬ ವೀರಶೈವರೂ ಈ ಗ್ರಂಥವನ್ನು ಪಠಿಸಿ ಪ್ರಚಾರಮಾಡಿ ಸಿದ್ಧಾಂತಶಿಖಾಮಣಿಯ ಮಹತ್ವವನ್ನು ಪೂರ್ಣವಾಗಿ ತಿಳಿದುಕೊಳ್ಳಬೇಕೆಂಬ ಶುಭೋದ್ದೇಶದಿಂದ **ಶ್ರೀಶಿವಯೋಗಿಶಿವಾಚಾರ್ಯರು** ಎಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವನ್ನು ಇತ್ತೀಚಿನವರೆಗೆ ಮೂಲಗ್ರಂಥವು ಸಂಸ್ಕೃತದಲ್ಲಿ ಇದ್ದುದರಿಂದ ಅನೇಕರಿಗೆ ಅನೇಕ ವಿಧವಾದ ಸಂದೇಹಗಳು ಉದ್ಭವಿಸುತ್ತಿದ್ದವು. ಒಂದು ವ್ಯಾಖ್ಯಾನಸಹಿತವಾಗಿ ಸಾರ್ವಜನಿಕರಿಗೆ ಉಪಯೋಗವಾಗಲೆಂಬ ಸದುದ್ದೇಶದಿಂದ ಕನ್ನಡ ಭಾಷೆಯಲ್ಲಿ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಅತ್ಯಂತ ಪ್ರೌಢವಾದ ಶೈಲಿಯಲ್ಲಿ ಬರೆದಿರುವ ಈ ಗ್ರಂಥವನ್ನು ಓದಿದಾಗ ಸಂಸ್ಕೃತ ಗ್ರಂಥವನ್ನು ಓದಿದಂತೆ ಆಗುವುದಿಲ್ಲ. ಈ ಗ್ರಂಥದ ಪ್ರತಿಯೊಂದು ಪದವೂ ಸಂಸ್ಕೃತ ಪದಗಳಂತೆ ಕಂಗೊಳಿಸುತ್ತಿರುವುದು ಈ ಗ್ರಂಥದ ವೈಶಿಷ್ಟ್ಯವೆಂದು ಹೇಳಬಹುದು. ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಕನ್ನಡ ಭಾಷೆಯಲ್ಲಿ ಅನೇಕ ಗ್ರಂಥಗಳನ್ನು ಬರೆದಿರುವರು. ಈ ಗ್ರಂಥವು ಅವರ ಕೃತಿಗಳಲ್ಲಿ ಒಂದು ಉತ್ತಮ ಕೃತಿಯೆಂದು ಹೇಳಲು ಅಡ್ಡಿಯಿಲ್ಲ. ಈ ಕೃತಿಯನ್ನು ದುರಾಸೆಯಿಲ್ಲದೆ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಬರೆದಿರುವುದು ಈ ಗ್ರಂಥದ ಇನ್ನೊಂದು ವಿಶೇಷವೆಂದು ಹೇಳಬಹುದು. ಈ ಗ್ರಂಥವನ್ನು ಓದಿದಾಗ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಕನ್ನಡ ಭಾಷೆಯಲ್ಲಿ ಅಪಾರವಾದ ಪಾಂಡಿತ್ಯವನ್ನು ಪಡೆದಿರುವರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಗ್ರಂಥವನ್ನು ಓದಿದಾಗ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಸಂಸ್ಕೃತ ಭಾಷೆಯಲ್ಲಿಯೂ ಅಪಾರವಾದ ಪಾಂಡಿತ್ಯವನ್ನು ಪಡೆದಿರುವರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಗ್ರಂಥವನ್ನು ಓದಿದಾಗ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಕನ್ನಡ ಭಾಷೆಯಲ್ಲಿ

ಉದ್ಯೋಗ ದೊರೆಯುವುದೆಂದೂ ಕಾರ್ಖಾನೆಯು ಪೂರ್ಣ ಅಕ್ಟೋಬರ್ ತಿಂಗಳಲ್ಲಿ ಆರಂಭವಾಗುವುದೆಂದೂ ತಿಳಿದುಬರುತ್ತದೆ

ಕೈಗಾರಿಕೆಯ ಅಭಿವೃದ್ಧಿಗೆ ಸರ್. ಎಂ. ವಿಶ್ವೇಶ್ವರಯ್ಯನವರ ಯೋಜನೆ

ಭಾರತದ ಕೈಗಾರಿಕೆಯು ಅಭಿವೃದ್ಧಿಗೊಳ್ಳಬೇಕಾದರೆ ಭಾರತ ಸರಕಾರವು ಏಮುವರುಷಗಳಿಗಾಗಿ ೪೦೦ ಕೋಟಿ ರೂಪಾಯಿ ನಿಧ್ಯ ಮಾಡಬೇಕು ಇದರಿಂದ ದೇಶದ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುವುದಲ್ಲದೆ ವಿದೇಶಗಳಂತೆ ಭಾರತವು ಕೈಗಾರಿಕೆಯಲ್ಲಿ ಬಹಳ ಮುಂದುವರಿಯುವುದೆಂದು ಸರ್ ಎಂ ವಿಶ್ವೇಶ್ವರಯ್ಯನವರು ಈಚೆಗಿನಾರ ಜೋಯಾಯಲ್ಲಿ ಸೇರಿದ್ದ ಒಂದು ಸಭೆಯಲ್ಲಿ ಸೂಚಿಸಿದರು

ಹೈದರಾಬಾದಿನ ಬಗ್ಗೆ ಸರ್ದಾರ್ ಪಟೇಲರ ಎಚ್ಚರಿಕೆಯ ನುಡಿ!.

ನಿಜಾಮರಿಗೆ ವಿನೇಕೋದಯವಾಗುವಂತೆ ಮಾಡಲು ಸರ್ದಾರ್ ಮೌಂಟ್ ಬೇಟನ್ನರು ಒಬಳ ಸಾಹಸಪಟ್ಟರು! ಆದರೆ ನಿಜಾಮರ ಮತ್ತು ಅವರ ಅನುಯಾಯಿಗಳ ಕಟನಾವಿರತ ಮತ್ತು ಧರ್ಮಾಂಧತೆಯಿಂದ ಆವರ ಪ್ರಯಾಸವು ನಿಷ್ಫಲೋಪಜನವಾಯಿತು ಲಾರ್ಡ್‌ಮೌಂಟ್ ಬೇಟನ್ನರು ನಿಜಾಮರಿಗೆ ಸೂಚಿಸಿದ್ದ ಪರತ್ತುಗಳು ಅವರ ಹಿಂದೆಯೇ ಹೊರಟುಹೋದವು! ಇತರ ಸಂಸ್ಥಾನ ಗಳಂತೆಯೇ ತಾವೂ ಪ್ರವೇಶ ಕರಾರಿಗೆ ಸಹಿ ಹಾಕುವ ಮುಂದೇ ನಿಜಾಮರಿಗೆ ಉಳಿದಿರುವೆ ಮಾರ್ಗ! ಇನ್ನು ಯಾಯಿತಿಗಳ ಮಾತೇ ಇಲ್ಲ ಹೈದರಾಬಾದು ಕೆಲವರಿದಿದ್ದರೆ ಜುನಾಗಢದ ಗತಿಯೇ ಆದಕ್ಕೂ ಪ್ರಾಪ್ತ ವಾಗುವುದು ಖಂಡಿತ!

—ಎಂಬುದಾಗಿ ಸರ್ದಾರ್ ವಲ್ಲಭಭಾಯಿ ಪಟೇಲರು ಬಾಂಬೆಯಾಲ ಮತ್ತು ಪೂರ್ವ ಪಂಜಾಬ್ ಸಂಸ್ಥಾನಗಳ ಮುಸಿಯನ್ನಿನ ಆರಂಭೋತ್ಸವನವನ್ನು ನೆರವೇರಿಸುತ್ತಾ ಮಾಡಿದ ಭಾಷಣದಲ್ಲಿ ತಿಳಿಸಿದರು

ಹೈದರಾಬಾದಿನ ವಿಚಾರದಲ್ಲಿ ಅನೇಕರು ಆತಾಂತರ ವಾಗ್ದಾನ ಆದರೆ ನಾವು ಹೇಳುವುದಷ್ಟೆ! ಹೈದರಾಬಾದಿನ ಬಗ್ಗೆ ಅವರಿಗೆ ಎಷ್ಟು ಯಾತನೆಯಾಗುತ್ತಿದೆಯೋ ಆಷ್ಟೇ ನನಗೂ ಉಂಟಾಗುತ್ತಿದೆ ಆದರೆ ಮುಂದಕ್ಕೆ ಪ್ರಯೋಜನವಿಲ್ಲ ಹೈದರಾಬಾದಿಗೆ ಸಕಾಲದಲ್ಲಿ ಶಸ್ತ್ರಚಿಕಿತ್ಸೆ ಮಾಡುವೆವು ಹಿಂಗಿನವರ ಸಹಾಯ ತಮ್ಮನ್ನು ರಕ್ಷಿಸುವುದೆಂಬ ಭ್ರಾಂತಿ ನಿಜಾಮರಿಗಿದ್ದರೆ ಅದು ಶುದ್ಧ ತಪ್ಪು!—ಎಂಬುದಾಗಿ ಸರ್ದಾರರು ಸಮಾಧಾನವಿತ್ತರು

ಹೈದರಾಬಾದ್ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಲು ಇಂಡಿಯ ಸರ್ಕಾರವು ಮಾಡಿದ ಪ್ರಯತ್ನ ಗಳನ್ನು ಸರ್ದಾರರು ವಿವರಿಸಿದರು ಲಾರ್ಡ್ ಮೌಂಟ್ ಬೇಟನ್ನರ ಕಟ್ಟಕಡೆಯ ಪ್ರಯತ್ನವು ಸಫಲವಾಗುವುದೇ? ಎಂಬ ಶಂಕೆ ನಮಗೆ ಮೊದಲಿನಿಂದಲೂ ಇದ್ದಿತು ಆದರೂ ಸಂಧಾನ ಮುಂದುವರಿಸಲು ಅವಕಾಶ ಕೊಟ್ಟೆನು ಆದರೆ ನಾನು ನಿರೀಕ್ಷಿಸಿದಂತೆ ಆವರ ಸಂಧಾನ ಮೂರಿದು ಮತ್ತು ನಿಜಾಮರ ವರ್ತನೆ ಬದಲಾಯಿಸಲಿಲ್ಲ—ಎಂದು ಹೇಳಿದರು

ಹೈದರಾಬಾದ್ ಸಮಸ್ಯೆಯನ್ನು ಒಗೆಹರಿಸುವ ಕಾರ್ಯವು ಸ್ವಲ್ಪ ನಿಧಾನವಾದುದೇನೋ ನಿಜ ಆದರೆ ಸಕಾಲದಲ್ಲಿ ಈ ಸಮಸ್ಯೆಯ ಪರಿಹಾರಕ್ಕೆ ತಕ್ಕ ಕ್ರಮ ತೆಗೆದುಕೊಳ್ಳುವುದು ಖಂಡಿತ ಈ ವಿಚಾರದಲ್ಲಿ ಅನುಮಾನ ಪಡುವ ಪ್ರಸಂಗವೇ ಇಲ್ಲ ಭಾರತದ ಪ್ರಗತಿಯು ತಮ್ಮಲ್ಲಿ ನಂಬಿಕೆ ಇಡಬೇಕು.' ಎಂದು ಉಪ ಪ್ರಧಾನರು ಸಮಾಧಾನವಿತ್ತರು

ಹೈದರಾಬಾದಿನ ಮುಖ್ಯಮಂತ್ರಿಗಳ ಭಾಷಣ

ನಮ್ಮ ಶಕ್ತಿ ಭಾರತದ ನಾಯಕರಿಗೆ ಗೊತ್ತಿಲ್ಲ!

'ನಮ್ಮ ಶಕ್ತಿ ಮತ್ತು ದೃಢ ನಿಶ್ಚಯದ ಬಗ್ಗೆ ಭಾರತ ನಾಯಕರು ತಪ್ಪು ಅಭಿಪ್ರಾಯ ತಿಳಿದಿದ್ದಾರೆ. ಸ್ವತಂತ್ರ ನಾಗಿರಲು ನಾವು ಕಟ್ಟಕಡೆಯವರೆಗೂ ಹೋರಾಟ ನಡೆಸುತ್ತೇವೆ ತನ್ನ ಆಧೀನಕ್ಕೆ ಬರಪಡಿಸಿಕೊಳ್ಳಬೇ ಕೆಂದು ಭಾರತ ಸರ್ಕಾರವು ಹೈದ್ರಾಬಾದಿನ ಮೇಲೆ ಆರ್ಥಿಕ ದಿಗ್ಬಂಧನವನ್ನು ಹಾಕಿ ದಿನ ದಿನಕ್ಕೂ ಬಿಗಿ ಮಾಡುವ ಪ್ರಯತ್ನ ಮಾಡಿತು

ಹೈದ್ರಾಬಾದಿಗೆ ಪೆಟ್ರೋಲ್, ಕ್ಲೋರಿನ್, ಔಷಧಗಳು ಮತ್ತು ಇನ್ನೂ ಕೆಲವು ವಸ್ತುಗಳು ಹೋಗದಂತೆ ಭಾರತ ಸರ್ಕಾರವು ತಡೆದರೂ ಹೈದರಾಬಾದು ಸ್ವಲ್ಪವೂ ಹೆದರದೆ ಇರುವುದನ್ನು ನೋಡಿ ಭಾರತ ಸರ್ಕಾರವು ನಿರಾಶೆಯನ್ನು ತಾಳಿದೆ ಹೈದ್ರಾಬಾದಿನ ಪ್ರಜೆಗಳಲ್ಲಿ ತಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬೇಕೆಂಬ ಮನೋಭಾವವು ದಿನದಿನಕ್ಕೂ ಬಲವಾಗುತ್ತಿದೆ'

—ಎಂಬುದಾಗಿ ಹೈದರಾಬಾದಿನ ಪ್ರಧಾನ ಲಾಯಕ್ ಅಲಿಯವರು ಹೈದ್ರಾಬಾದಿನಲ್ಲಿ ಸಾರ್ವಜನಿಕ ಸಭೆಯ ನ್ನುದ್ದೇಶಿಸಿ ಭಾಷಣ ಮಾಡುತ್ತ ತಿಳಿಸಿದರು

ಗಾಂಧೀಜಿ ಕೊಲೆ ವಿಚಾರಣೆ

ಗೋಡ್ಸೆಗೆ ಪಿಸ್ತೂಲು ಮಾರಿದ ಜಗದೀಶ ಪ್ರಸಾದರ ಹೇಳಿಕೆ

೧೨ ನೆಯ ತಾ|| ದಿನ ಗ್ವಾಲಿಯರಿನ ಜಗದೀಶ ಪ್ರಸಾದರು ಹೇಳಿಕೆಯನ್ನಿತ್ತರು ಡಾಕ್‌ನಲ್ಲಿದ್ದ ಆವಾ ದಿತರ ನೈಕ ಸರಾಜೂರೆಯನ್ನು ಜಗದೀಶ್ ಪ್ರಸಾದರು ಗುರ್ತಿಸಿದರು

'೧೯೨೧ ನೇ ವರ್ಷದಿಂದ ಪೂಜೂರೆಯವರು ನನಗೆ ಗೊತ್ತು ಅವರು ಹಿಂದೂ ಮಹಾ ಸಭಾ ಸೇನೆಯ ಮುಖ್ಯ ಆಧಿಕಾರಿಯಾಗಿದ್ದರು ವಿ ಡಿ ಸಾವರ್ಕರ್‌ರವರ ಕಾರ್ಯದರ್ಶಿ ಡಾಂಮ್ಲೆಯವರದು ನನಗೆ ಗೊತ್ತಿದೆ ಪೂಜೂರೆಯವರ ಪ್ರಭಾವದಿಂದಲೇ ನಾನು ಹಿಂದೂ ಮಹಾಸಭಾ ಸೇನೆಗೆ ಸೇರಿದ್ದೆ ಮಹಾ ಸಭೆಯ ಪ್ರಚಾರ ಕಾರ್ಯಕ್ಕೆ ಅವರು ಗ್ವಾಲಿಯರಿಗೆ ೧೯೪೧ ನೆಯ ವರ್ಷದಲ್ಲಿ ಬಂದಿದ್ದರು' ಎಂದು ಜಗದೀಶ್ ಪ್ರಸಾದರು ತಿಳಿಸಿ, ನಾಥೂರಾಮ ಆಪ್ಟೆಯನ್ನು ಗುರ್ತಿಸಿ ಅವರು ಮತ್ತು ಡಾನ್ಲೆ ಪರಾಜೂರೆಯೊಂದಿಗೆ ಗ್ವಾಲಿಯರಿಗೆ ಬಂದಿದ್ದರೆಂದು ಹೇಳಿದರು

ಗೋಡ್ಸೆಗೆ ಪಿಸ್ತೂಲ್ ಕೊಟ್ಟ ಬಗೆ

ಜಗದೀಶ್ ಪ್ರಸಾದರು ತವ ಸಾಕ್ಷ್ಯವನ್ನು ಮುಂದುವರಿಸಿ ಈ ರೀತಿ ತಿಳಿಸಿದರು

'ಗ್ವಾಲಿಯರಿನಲ್ಲಿ ಡಾ|| ಪರಾಜೂರೆಯವರ ಡಿಸ್ಪೆನ್ಸರಿಯಲ್ಲಿ ನಾನು ಗೋಡ್ಸೆಯನ್ನು ನೋಡಿದ್ದು ಜನವರಿ ೨೮ ನೇ ತಾ|| ನನಗೆ ಆಸ್ಪತ್ರೆಗೆ ಒಬವಂತೆ ಡಾ|| ಪರಾಜೂರೆ ಹೇಳ ಕಳಿಸಿದ್ದರು

ನಾನು ಆಸ್ಪತ್ರೆಗೆ ಹೋದಾಗ ಪರಾಜೂರೆ ಇರಲಿಲ್ಲ ಗೋಡ್ಸೆ ಮತ್ತು ಆಪ್ಟೆ ಇಬ್ಬರೂ ಕೂಡಿದ್ದರು

ಆ ಮೊಕದ್ದಮೆಯಲ್ಲಿ ಆವಾದಿತರಾಗಿರುವ ಮತ್ತು ತಲೆ ಮರೆಸಿಕೊಂಡಿರುವ ಧನವಾಡೆ ಗ್ವಾಲಿಯರಿನವರೇ ಜನವರಿ ೨೮ ನೇ ತಾ|| ಧನವಾಡೆ ನನ್ನ ಮನೆಗೆ ಬಂದು ಗೋಡ್ಸೆಗೆ ಒಂದು ಪಿಸ್ತೂಲು ಬೇಕೆಂದು ಆವರು ನನ್ನನ್ನು ಕೇಳಿದರು ನನ್ನ ಬಳ ಇದ್ದ ಪಿಸ್ತೂಲನ್ನು ಮಾರಬಹು ದೆಂದು ಧನವಾಡೆ ಸೂಚಿಸಿ ೫೦೦ ರೂ ಗಳನ್ನು ಕೊಡು ವುದಾಗಿ ತಿಳಿಸಿದರು ನಾನು ನನ್ನ ಪಿಸ್ತೂಲನ್ನು ಧನವಾಡೆಗೆ ಕೊಟ್ಟೆನು

ಫೆಬ್ರವರಿ ೨ ನೇ ತಾ|| ಪರಾಜೂರೆಯನ್ನು ಭೇಟಿ ಮಾಡಿದ್ದೆ ನನ್ನ ಪಿಸ್ತೂಲನ್ನು ಸುರಪಯೋಗ ಮಾಡಿ ಕೊಂಡಿದಕ್ಕೆ ನನ್ನ ವ್ಯಸನವನ್ನು ವ್ಯಕ್ತಪಡಿಸಿದೆ ಪರಾ ಜೂರೆ ಏನೂ ಮಾತಾಡದೆ ಮೌನವಾಗಿದ್ದರು" ಎಂದು ಜಗದೀಶ್ ಪ್ರಸಾದರು ತಮ್ಮ ಹೇಳಿಕೆಯಲ್ಲಿ ತಿಳಿಸಿದರು

ಆವರು ಕೋರ್ಟಿನಲ್ಲಿ ತನ್ನ ಪಿಸ್ತೂಲನ್ನು ಗುರ್ತಿಸಿ ದರು ಪರಾಜೂರೆ ಪರ ಲಾಯರ ಪ್ರಶ್ನೆಗಳಿಗೆ ಜಗದೀಶ್ ಪ್ರಸಾದರು ಉತ್ತರ ಕೊಡುತ್ತ ಫೆಬ್ರವರಿ ೩ ನೇ ತಾ|| ಪೋಲೀಸರು ತಮ್ಮ ಮನೆಗೆ ಬಂದರೆಂದೂ ತಾವು ಹಿಂಬಾಗಿಲಿಂದ ಪರಾರಿಯಾದರೆಂದೂ ತಿಳಿಸಿದರು. ಏಪ್ರಿಲ್ ೧೧ ನೇ ತಾ|| ವರೆಗೆ ತಲೆ ಮರೆಸಿಕೊಂಡಿದ್ದು ದಾಗಿಯೂ ಝಾನ್ಸಿಯಲ್ಲಿ ಪೋಲೀಸರು ತಮ್ಮನ್ನು ದಸ್ತಗಿರಿ ಮಾಡಿದ ಏಪ್ರಿಲ್ ೧೬ ನೇ ತಾ|| ಮೊಂಬಾಯಿಗೆ ರೈಪಾನಿದರೆಂದೂ ಏಪ್ರಿಲ್ ೧೬ ನೇ ತಾ|| ನಿಂದ ಜೂ ೧೬ ನೇ ತಾ|| ವರೆಗೆ ಬೊಂಬಾಯಿಯಲ್ಲಿ ಜೈಲಿ ನಲ್ಲಿದ್ದುದಾಗಿಯೂ ತಿಳಿಸಿದರು

ಪಿಸ್ತೂಲನ್ನು ರಿಜಿಸ್ಟರ್ ಮಾಡಿಸಿರಲಿಲ್ಲ

ಇನ್ನೊಂದು ಪ್ರಶ್ನೆಗೆ ಮೇ ೩ ನೇ ತಾ|| ತಾವು ತಮ್ಮ ಮನೆಗೆ ಕೆಲವು ಗಂಟೆಗಳ ಕಾಲ ಪೋಲೀಸರ ಅನುಮತಿ ಮೇರಿಗೆ ಹೋಗಿದ್ದೇನೆಂದೂ ಜಗದೀಶ್ ಪ್ರಸಾದರು ತಿಳಿಸಿದರು ಧನವಾಡೆಗೆ ತಾವು ಕೊಟ್ಟ ಪಿಸ್ತೂಲನ್ನು ಗ್ವಾಲಿಯರಿನಲ್ಲಿ ರಿಜಿಸ್ಟರ್ ಮಾಡಿಸಿರಲಿಲ್ಲ.

ಪಿಸ್ತೂಲ್ ತಮ್ಮದೇ ಎಂದು ತಿಳಿಸಿ ಪರಿಚಿತ ಕಾಗದ ಪತ್ರಗಳೇನೂ ತಮ್ಮ ಬಳ ಇಲ್ಲ ಎಂದು ಆವರು ತಿಳಿಸಿದರು. ಇಲ್ಲಿಗೆ ಗ್ವಾಲಿಯರಿನ ಜಗದೀಶ್ ಪ್ರಸಾದರವರ ಸಾಕ್ಷ್ಯ ಮುಗಿಯಿತು

ಕೇಶವ ಕಾಳೆಯವರ ಹೇಳಿಕೆ

"ಜನವರಿ ೩೦ ನೇ ತಾ|| ನಾನು ಪರಾಜೂರೆ ಮನೆಗೆ ಹೋದೆ ಆಲ್ಲಿ ಧನವಾಡೆ ಆಪ್ಟೆ ಮತ್ತು ಗೋಡ್ಸೆ ಇದ್ದರು ಗೋಡ್ಸೆ ಮತ್ತು ಆಪ್ಟೆ ಇಬ್ಬರೂ ಎರಡು ರಿವಾಲ್ವರುಗಳನ್ನು ಹಿಡಿದುಕೊಂಡು ಆವರು ಗುಂಡಿಗೆ ಳನ್ನು ಅಮುಕುವ ಪ್ರಯತ್ನದಲ್ಲಿದ್ದರು ಅದು ಅವರಿಂದ ಸಾಧ್ಯವಾಗಲಿಲ್ಲ ಬೇರೆ ಇನ್ನೊಂದುಪಿಸ್ತೂಲನ್ನು ತೆಂದು ಕೊಡಬೇಕೆಂದು ಆವರು ಧನವಾಡೆಯನ್ನು ಕೇಳಿದರು

ರಿವಾಲ್ವರುಗಳು ಚೆನ್ನಾಗಿಯೆಯೂ ಆದರ ಗುಂಡಿ ಅಮುಕುವುದನ್ನು ತೋರಿಸಿಕೊಡುವುದಾಗಿಯೂ ಧನ ವಾಡೆ ಹೇಳಿದರು ಆಮೇಲೆ ಆವರು ಒಂದು ಕಾರ್ಟ್ರಿಡ್ಜ್‌ನ್ನು ರಿವಾಲ್ವರಿಗೆ ಹಾಕಿ ಗುಂಡಿಗೆ ಹೊಡೆದರು ಆಮೇಲೆ ಆಪ್ಟೆ ಮತ್ತು ಗೋಡ್ಸೆ ಇಬ್ಬರೂ ರಿವಾಲ್ವರು ಗಳಿಗೆ ಕಾರ್ಟ್ರಿಡ್ಜ್ ಹಾಕಿ ಹೊಡೆಯಲು ಪ್ರಯತ್ನಿಸಿ ನಿಷ್ಫಲವಾದರು

ಆವರ ಸಾರ್ಟ್ ಆಗಲೇ ದೆಹಲಿಗೆ ಹೊರಟುಬಿಟ್ಟಿದ್ದು ದರಿಂದಲೂ, ಗೋಡ್ಸೆ ಮತ್ತು ಆಪ್ಟೆ ಆದಿನ ಮಧ್ಯಾಹ್ನ ೩ ಗಂಟೆ ರೈಲಿಗೆ ಹೊರಡಬೇಕಾಗಿದ್ದುದರಿಂದಲೂ ಆವರು ಪಿಸ್ತೂಲನ್ನು ಪಡೆಯಲು ಬಹಳ ಆತುರರಾಗಿದ್ದರು

ಧನವಾಡೆ ರಾತ್ರಿ ವೇಳೆಗೆ ದೇರೆ ಪಿಸ್ತೂಲನ್ನು ತೆಂದು ಕೊಡವುದಾಗಿಯೂ, ಆವರು ರಾತ್ರಿ ರೈಲಿಗೆ ಹೊರಡಬಹುದೆಂದೂ ತಿಳಿಸಿದರು ಆಪ್ಟೆ ಮತ್ತು ಗೋಡ್ಸೆ ರಾತ್ರಿ ರೈಲಿಗೆ ಹೋಗಲು ಎಲ್ಲಾ ಏರ್ಪಾಡು ಗಳನ್ನು ಬೇಗ ಮಾಡಿಕೊಳ್ಳಬೇಕೆಂದರು

ಧನವಾಡೆ ಹೇಳಿದ್ದಕ್ಕೆ ಗೋಡ್ಸೆ ಮತ್ತು ಆಪ್ಟೆ ಒಪ್ಪಿ ಕೊಂಡರು ನಾನೇ ಒಂದು ರಿವಾಲ್ವರನ್ನು ಕೈಗೆ ತೆಗೆದು ಕೊಂಡು ನೋಡಿ ಅದನ್ನು ಸ್ಫುಡಿಸಿ ಎಂದು ಹೇಳಿದೆ. ಆಮೇಲೆ ಅವರು ಡಾ|| ಪರಾಜೂರೆಯವರ ರೂಮಿಗೆ ಹೋದರು ಪರಾಜೂರೆಯವರು ತಮ್ಮ ಲೈಸನ್ಸ್‌ನ್ನು ರಿವಾಲ್ವರನ್ನು ಕೊಡಬಹುದೆಂದು ಧನವಾಡೆಯವರು ಗೋಡ್ಸೆ ಮತ್ತು ಆಪ್ಟೆಗೆ ತಿಳಿದರು ತಮ್ಮ ಲೈಸನ್ಸ್‌ನ್ನು ರಿವಾಲ್ವರನ್ನು ಕೊಡಲು ತಾವೇನೂ ದಡ್ಡರಲ್ಲ ಎಂದು ಪರಾಜೂರೆ ಹೇಳಿದರು ಆ ನೆಲೆ ಎಲ್ಲರೂ ಮಹಡಿ ಕೆಳಕ್ಕೆ ಇಳಿದು ಗ್ವಾಲಿಯರ್ ರಾಜಕೀಯದ ಮೇಲೆ ಚರ್ಚೆ ಪ್ರಾರಂಭಿಸಿದರು ಕಾಂಗ್ರೆಸ್ ನೀತಿಯನ್ನು ಪರಾಜೂರೆ ಖಂಡಿಸುತ್ತಲೇ ಇದ್ದರು ಇದನ್ನೆಲ್ಲ ಕೇಳುತ ಮೇಲೆ ನಾನು ಪರಾಜೂರಯವರ ಮನೆಯಿಂದ ಹೊರಟು ಹೋದೆ

ನಾನು ಮತ್ತೆ ಪರಾಜೂರೆಯವರನ್ನು ಜನವರಿ ೩೦ ನೇ ತಾ|| ಸಂಜೆ ನೋಡಿದ್ದೆ ಗಾಂಧೀಜಿ ನಿಧನರಾದ ರೆಂಬ ವಾರ್ತೆ ರೇಡಿಯೋದಲ್ಲಿ ಬರುತ್ತಿದೆಯೆಂದು ಹೇಳಿದೆ. ಪರಾಜೂರಿಯವರು ನನ್ನ ನ್ನೆ—

"ಗಾಂಧೀಜಿ ಮೃತಿಹೊಂದಿದರೋ ಆಥವಾ ಕೊಲೆ ಮಾಡಲ್ಪಟ್ಟರೋ?" ಎಂದು ಕೇಳಿದರು ಆ ಮೇಲೆ ನಾನು ಮತ್ತು ಪರಾಜೂರೆ ಇಬ್ಬರೂ ಮನೆಯಿಂದ ಆಸ್ಪತ್ರೆಗೆ ಹೋದೆವು ಗಾಂಧೀಜಿ ಕೊಲೆಮಾಡಲ್ಪಟ್ಟರೆಂಬ ವರ್ತಮಾನವನ್ನು ಕೇಳಿದೆವು ಆಸ್ಪತ್ರೆಯನ್ನು ಮುಚ್ಚುವೆಂತೆ ನಾನು ಡಾಕ್ಟರಿಗೆ ಹೇಳಿದೆ ಆವರು ಆಸ್ಪತ್ರೆಯನ್ನು ಮುಚ್ಚಿ ಮನೆಗೆ ಹಿಂತಿರುಗಿದರು.

ಗಾಂಧೀಜಿ ಕೊಲೆ ಮಾಡಿದವನು ನಾಥೂರಾಂ ವಿನಾಯಕ ಎಂಬುದಾಗಿ ನನಗೆ ಜನವರಿ ೩೧ ನೇ ತಾ|| ತಿಳಿದು ಬಂದು ಆ ಮೇಲೆ ನಾನು ಆತನೇ ನಾಥೂರಾಂ ಗೋಡ್ಸೆ ಎಂದು ನನ್ನ ಸ್ನೇಹಿತರುಗಳಿಗೆ ಹೇಳಿದೆ.

ಸಿದ್ಧಾಂತ ಶಿಖಾಮಣಿ

ಶ್ರೀ ಶೈವಾಗಮಗಳ ಸಾರ ಪ್ರಾಯವಾಗಿ ಪ್ರಪಂಚಪ್ರಸಿದ್ಧವಾಗಿರುವ ಸಿದ್ಧಾಂತಶಿವಾಚಾರ್ಯ ಪ್ರಣೀತವಾದ ಈ ಮಹತ್ತರ ಗ್ರಂಥವು ಶ್ರೀಜಗದ್ಗುರು ರೇಣುಕಾಚಾರ್ಯ ಪ್ರಣೀತವಾದ ಸಿದ್ಧಾಂತಶಿಖಾಮಣಿಯ ಸಂಸ್ಕೃತ ವ್ಯಾಖ್ಯಾನವಾಗಿದ್ದು ಈ ಗ್ರಂಥವು ಅನೇಕ ಪುರಾಣೇತಿಹಾಸಗಳಿಂದ ಪ್ರಮಾಣಗಳನ್ನು ಉದಾಹರಿಸಿ ಸಮರ್ಥಿಸಿರುವ ಕಾರಣ ಶೈವಸಮಾಜಕ್ಕೆ ಒಂದು ಅಪೂರ್ವ ಗ್ರಂಥವಾಗಿದೆ. ಈ ಗ್ರಂಥವನ್ನು ಶ್ರೀಶಿವಯೋಗಿಶಿವಾಚಾರ್ಯರು ಅನೇಕ ವರ್ಷಗಳ ಶ್ರಮದಿಂದ ಅನೇಕ ಪ್ರತಿಗಳಿಂದ ಪರಿಶೋಧಿಸಿ ಸಂಪಾದಿಸಿದ್ದಾರೆ. ಈ ಗ್ರಂಥವನ್ನು ಶ್ರೀಶಿವಯೋಗಿಶಿವಾಚಾರ್ಯರು ಅಚ್ಚು ಮಾಡಿಸಲು ಸಂಕಲ್ಪಿಸಿದ್ದಾರೆ. ಈ ಗ್ರಂಥವು ಸುಮಾರು ೧೨೦೦ ಪುಟಗಳಷ್ಟು ಬರುವುದು. ಇದಕ್ಕೆ ಇಂಡಿಯನ್ ಅಂಡ್ ಸೀಲೋನ್ ಪೇಪರ್ ಮಿಲ್ಸ್ ಲಿಮಿಟೆಡ್ ಕಂಪನಿಯವರು ಕಾಗದವನ್ನು ಕೊಡಲು ಒಪ್ಪಿರುತ್ತಾರೆ. ಅನೇಕ ವಿಧವಾದ ಶ್ರಮಸಾಧ್ಯವಾದ ಬಹುವ್ಯಯವಾಗುವ ಈ ಮಹಾಗ್ರಂಥವನ್ನು ಪ್ರಕಟಿಸಲು ಸಾಧ್ಯವಾಗಬೇಕಾದರೆ ಸಹೃದಯ ಶೈವಬಂಧುಗಳೆಲ್ಲರೂ ಸಹಾಯ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ. ಈ ಗ್ರಂಥವನ್ನು ಮುದ್ರಿಸಲು ಸಹಾಯ ಮಾಡಿದವರಿಗೆ ಕೃತಜ್ಞತಾಪೂರ್ವಕವಾಗಿ ಈ ಗ್ರಂಥವನ್ನು ಉಚಿತವಾಗಿ ಕೊಡಲಾಗುವುದು. ಈ ಗ್ರಂಥವನ್ನು ಓದುವುದರಿಂದ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರಿ. ಈ ಗ್ರಂಥವನ್ನು ಓದುವುದರಿಂದ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರಿ. ಈ ಗ್ರಂಥವು ಶೈವಾಗಮಗಳ ಸಾರ ಪ್ರಾಯವಾಗಿ ಪ್ರಪಂಚಪ್ರಸಿದ್ಧವಾಗಿರುವ ಸಿದ್ಧಾಂತಶಿವಾಚಾರ್ಯ ಪ್ರಣೀತವಾದ ಸಿದ್ಧಾಂತಶಿಖಾಮಣಿಯ ಸಂಸ್ಕೃತ ವ್ಯಾಖ್ಯಾನವಾಗಿದ್ದು ಈ ಗ್ರಂಥವು ಅನೇಕ ಪುರಾಣೇತಿಹಾಸಗಳಿಂದ ಪ್ರಮಾಣಗಳನ್ನು ಉದಾಹರಿಸಿ ಸಮರ್ಥಿಸಿರುವ ಕಾರಣ ಶೈವಸಮಾಜಕ್ಕೆ ಒಂದು ಅಪೂರ್ವ ಗ್ರಂಥವಾಗಿದೆ. ಈ ಗ್ರಂಥವನ್ನು ಶ್ರೀಶಿವಯೋಗಿಶಿವಾಚಾರ್ಯರು ಅನೇಕ ವರ್ಷಗಳ ಶ್ರಮದಿಂದ ಅನೇಕ ಪ್ರತಿಗಳಿಂದ ಪರಿಶೋಧಿಸಿ ಸಂಪಾದಿಸಿದ್ದಾರೆ. ಈ ಗ್ರಂಥವನ್ನು ಶ್ರೀಶಿವಯೋಗಿಶಿವಾಚಾರ್ಯರು ಅಚ್ಚು ಮಾಡಿಸಲು ಸಂಕಲ್ಪಿಸಿದ್ದಾರೆ. ಈ ಗ್ರಂಥವು ಸುಮಾರು ೧೨೦೦ ಪುಟಗಳಷ್ಟು ಬರುವುದು. ಇದಕ್ಕೆ ಇಂಡಿಯನ್ ಅಂಡ್ ಸೀಲೋನ್ ಪೇಪರ್ ಮಿಲ್ಸ್ ಲಿಮಿಟೆಡ್ ಕಂಪನಿಯವರು ಕಾಗದವನ್ನು ಕೊಡಲು ಒಪ್ಪಿರುತ್ತಾರೆ. ಅನೇಕ ವಿಧವಾದ ಶ್ರಮಸಾಧ್ಯವಾದ ಬಹುವ್ಯಯವಾಗುವ ಈ ಮಹಾಗ್ರಂಥವನ್ನು ಪ್ರಕಟಿಸಲು ಸಾಧ್ಯವಾಗಬೇಕಾದರೆ ಸಹೃದಯ ಶೈವಬಂಧುಗಳೆಲ್ಲರೂ ಸಹಾಯ ಮಾಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇವೆ. ಈ ಗ್ರಂಥವನ್ನು ಮುದ್ರಿಸಲು ಸಹಾಯ ಮಾಡಿದವರಿಗೆ ಕೃತಜ್ಞತಾಪೂರ್ವಕವಾಗಿ ಈ ಗ್ರಂಥವನ್ನು ಉಚಿತವಾಗಿ ಕೊಡಲಾಗುವುದು. ಈ ಗ್ರಂಥವನ್ನು ಓದುವುದರಿಂದ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರಿ.

ಈ ಗ್ರಂಥವು ಶ್ರೀಜಗದ್ಗುರು ರೇಣುಕ

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಬೀಜಾತರಿತರ್ ಪಂಚಕ್ಲೇಶವಿನಾಶಕರ್ ಪರತಶ್ಚಿತ್ಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ ॥ ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಒಂದು ವರ್ಷದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಜುಲೈ ೧೯೪೮ [ಸಂಚಿಕೆ ೧೧

ಶ್ರೀಸಮಾಜಕ್ಕೆ ಸನ್ಮಾರ್ಗದರ್ಶಕ ವಿಚಾರಗಳು

ಲೇ॥—ಎ ಎಂ ಕಾಲಾಸಿದ್ದಪ್ಪಯ್ಯ ಅನುಸೋಡುರು, ಬಳಗಾಪಟ್ಟಣ

ಆಕ್ಕರೆಯ ಅಕ್ಕತಂಗಿಯರೇ ಬೇಸರಿಯ ಬೇಡಿರಿ! ಸಿನಯವಿವೇಕಗಳಿಂದ ಸದಾಚಾರ ಸಚ್ಚಕ್ತಿಯಿಂದ ಪತಿಭಕ್ತಿ ಪವಿತ್ರ ಎತಿವ್ರತ್ಯದಿಂದ ಪ್ರತಿಯೊಬ್ಬ ಸ್ತ್ರೀಯಲ್ಲಗೂ ಜನುಸೂಯಾ, ಅರುಂಧತಿ, ಶಿವಪರಣಿ ಮೊದಲ್ಗೊಂಡ ಪತಿವ್ರತಾ ಸ್ತ್ರೀಯರಂತೆ ಮಾನವೀಯ ಸಹಿಷ್ಣುಗುಣಾಲಂಕಾರಾಲು ಬಂಪಡಿಲುದ್ದಿ ಎಳ್ಳಿನೊಳಗೆ ಎಣ್ಣೆಯು ಅಡಕವಾಗಿರುವ ತೆ ಹೆಣ್ಣುಮಕ್ಕಳ ಜೀವನದ ಸರ್ವಸ್ವವೂ ಅವರವರ ಗಂಡಂದಿರಲ್ಲಿ ಅಡಕವಾಗಿರುವುದು ಪತಿಭಕ್ತಿಯೇ ಸ್ತ್ರೀಯರಿಗೆ ಉಚ್ಚ ಳಯದ ಹಬ್ಬನ ಅಲಂಬಾರ! ಪಾವ್ರತೆಯಾರಿಂದ ಕೈಗೂಡಿರುವ ಕಾರ್ಯವೇ ಇಲ್ಲ ಪಾತಿವ್ರತ್ಯವು ಸರ್ವಾಜಮೆಂಬ ದೇವ ವ್ಯಾನಕ್ಕೆ ತಿಲರದ್ದಂತೆ! ಚಂದ್ರನ ಕಿರಣ ಳಲ್ಲಿ ಅಂಪು ಹೇಗೆ ಮರೆಯಾಗಿರುವುದೋ ಹಾಗೆಯೇ ಸ್ತ್ರೀಯರ ಅಭ್ಯುದಯದಲ್ಲಿ ರಾಷ್ಟ್ರದ ಅಭ್ಯುದಯವು ಮರೆಯಾಗಿರುವುದು ಸಹೋದರಿಯರೇ, ಇದಿಗ ಎಲ್ಲಿಯದೋ ಸುಧಾರಣೆಯ ಸುಂಟರಗಾಳಿಯು ಸುತ್ತೆಲ್ಲಾ ಬೀಸಿಬೀಸಿ ಗಾಮಮಾಡುತ್ತಿರುವುದು ಆದರ ಮುಟ್ಟಿಗೆ ಬಿದ್ದು ಮಾನಹೀನರಾಗಬೇಡಿರಿ! ಸುಧಾರಣೆ, ನೂತನ ಸುಧಾರಣೆ ಎಂದು ಕಿದ್ದಿ ಕಿದ್ದಿ ಮಾತನಾಡುವುದು ಪತಿವ್ರತೆಯರ ಲಕ್ಷಣವಲ್ಲ ಯಾವ ಸುಧಾರಣೆಯ ಪರಮಾವಧಿಯಿಂದ ಸ್ತ್ರೀಯರ ನೈತಿಕ ಬಲವು ಕುಗ್ಗುತ್ತಿದೆಯೋ, ಯಾವ ಸುಧಾರಣೆಗಳಿಂದ ಪಿಶಾಚಿಯಂದ ಸಮಾಜದ ಅರ್ಧಿಕಸಂಖ್ಯಾಸ್ಥಿತಿಯು ತಗ್ಗುತ್ತಿದೆಯೋ, ಯಾವ ಸುಧಾರಣಾಧಿಕ್ಯದಿಂದ ದೇಶದ ಶಾಂತಿಸೌಲಭ್ಯಗಳ ಜೀವನಶೈಲಿಯು ಮುಗ್ಗುತ್ತಿದೆಯೋ ಅಂತಹ ಸುಧಾರಣೆಯು ಸುಧಾರಣೆಯಲ್ಲ ಅದು ವಿದಾರಣೆಯು ವಾರಿಜೈತಲಿಗೆ ಮೆಚ್ಚಿ, ಪಿನ್ನಿಗಳ ಚುಚ್ಚಿ, ಪೌಡರನ್ನು ಹಚ್ಚಿ ಪುಃಲಿಕನ ನೆಚ್ಚಿ, ಚಕ್ಕೆಯನು ಕಡಿದು ಚರಾ (ಟೆ) ಕುಡಿದು, ಛತ್ರಿಯನ್ನು ಹಿಡಿದು, ಜೈನಿಯನು ಹೊಡೆದು, ನಾಚಿಕೆಯ ನೀಗಿ, ಶಾಲೆಗೆ ಹೋಗಿ ಅಯ್ಯೊ ಜೇಟ್ ಆಗಿ, ಪ್ರೇಮಕ್ಕೆ ಬಾಗಿ, ಗಂಡಸನ್ನು ಒದ್ದು, ಅರಕೆರಿಗು ಹೊದ್ದು, ಕಂಡಲ್ಲಿನೆದ್ದು, ರಭಸದಿಂದ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಅನುಭವಿಸುವುದರಲ್ಲಿ ಸುಧಾರಣೆಯ ರಹಸ್ಯವಿಲ್ಲ ಕಂಡಕಂಡ ದೇವರಿಗೆ ಸಲ್ಲದ ಹರಕೆಗಳನ್ನು ಹೊತ್ತು ಮಾಟಗಾರ್ತಿ, ಜೋಗಿತಿಯರಿಗೆ ಮನಬಂದಂತೆ ಹಣವನ್ನು ತೆತ್ತು, ವಸ್ತುವಡವೆಗಳಿಗಾಗಿ ಹಟಮಾಡಿ ಮಾಡಿ ಅತ್ತು ಪಕಟಪಕ್ಷಿಗಳಂತೆ ವಿಷಯಲಂಪಟರಾಗಿ ಪತ್ನಾರು ಮಳ್ಳಳ್ಳು ಹತ್ತು ಆಡಿಗೆ ಬೇಸತ್ತುಹೋಗಿ ದೇಶೆನ್ನು ವುದರಲ್ಲಿ ಸುಧಾರಣೆಯ ಮರ್ಮವಿಲ್ಲ ನಿರ್ಮಲ ಭೀತಿಗೆ, ದೇಹೋನ್ನತಿಗೆ ಪತಿಭಕ್ತಿಗೆ ಯಾವ ಸುಧಾರಣೆ ನಿಂದ ಯಾವ ಕಾಲಕ್ಕೂ ಎಳ್ಳಷ್ಟೂ ಸಹ ಅಡ್ಡಿಯಾ ಬುವುದಿಲ್ಲವೋ ಅದೇ ಶುದ್ಧ ಸುಧಾರಣೆಯು.

ಮಕ್ಕಳೆಯ ಮಹಿಳೆಯರೇ, ಅಂತಹ ಶ್ಲಾಘನೀಯ ಸುಧಾರಣೆಯನ್ನೇ ನೀವು ಅಂಗೀಕರಿಸಿರಿ ಇಂದು ನೀವು ಅಬಲೆಯರಲ್ಲ ಸಬಲೆಯರು ನಿಮ್ಮ ಲ್ಲಿ ಅದಿಶಕ್ತಿಯ ಅಂಶವಿದೆ ಹಿಂದಕ್ಕೆ ನಿಮ್ಮೊಳಗೆ ಎಷ್ಟೋ ವೀರತೆರುಣಿಯರೂ, ಶರಣೆಯರೂ, ತಪಸ್ವಿನಿಯರೂ, ದೇಶಸೇವಿಕೆಯರೂ, ಸರ್ವಕಲಾನಿಪುಣೆಯರೂ, ಮಹಾಪತಿವ್ರತೆಯರೂ ಆಗಿಹೋಗಿಲ್ಲವೆ? ಏರಿ ಎಚ್ಚರಾಗಿರಿ ಪತಿವ್ರತೆಯ ಧರ್ಮವನ್ನು ಪಾಲಿಸಿರಿ ಮುಂಜಿನ ನಿಮ್ಮ ಧಾರ್ಮಿಕ ಸ್ವರಾಜ್ಯಸತಾತ್ಯೆಯನ್ನು ನಿಲ್ಲಸಲು ಭಗವ ಕಟ್ಟಿರಿ ಏಪೇತಿವಸ್ತ್ರಗಳನ್ನು ತಿರಸ್ಕರಿಸಿ ಸ್ವದೇಶಿವಸ್ತ್ರ ಗಳನ್ನು ಎರಿಕ್ಕರಿಸಿರಿ ಭಾರತದ ಲ್ಪವ್ಯಾಪಾರ ರಾಜ್ಞಿ ದೇವಿಯ ಪೂಜೆಯನ್ನು ಒಮ್ಮನಸ್ಸಿನಿಂದ ಮಾಡಿರಿ ಅಲ್ಲಲ್ಲಿ ಹೆಂಗಳೆಯರ ಒಳ್ಳೆವನ್ನು ಸ್ಥಾಪಿಸಿ, ನಿಮ್ಮ ಮತತತ್ವಗಳನ್ನು ಚೆಚ್ಚಿ ಎ ತವಗಳಂತೆ ನಡೆದು ತೋರಿಸಿ ಮುಂದಿನ ಎಳಗೆಗೆ ಕೆತ್ತೆಯನ್ನು ಪಡಿ ಕೊಡಿರಿ ನಯವಿನಯಂಗಳಿಗೆ ಶರಣುಹೊಡೆಯದೆ ದಿಟ್ಟೆಯರಾಗಿ ಕರ್ತವ್ಯನಿಷ್ಠೆಯಿಂದ ಎದರಿಸಲು ಕಲಿಯಿರಿ ಗುರುಹಿರಿಯರನ್ನೂ ತಿತಿ ತ್ಯಾತಿಥರನ್ನೂ ಆದರದಿಂದ ಮನ್ನಿಸಿರಿ ನಿಮ್ಮ ನಿಮ್ಮ ಪತಿಗಳಿಗೆ ಪ್ರೇಮವಾಗುವಂತೆ ಪೆರಿಸಿರಿ ಎತ್ತೆತ್ತ ಹೊರಳಿದರೂ ಪತಿವ್ರತೆಯರ ಸೊಲ್ಲೇ ಕೇಳಲಿ ಜಗನ್ಮಾತೆಯಾದ ಶ್ರೀಸಾರ್ವತೀ ದೇವಿಯ ದೃಷ್ಟಿಯು ಎಲ್ಲಾ ನೂತಿಯರ ಮೇಲೂಬೀಳಲಿ

ವಿವಾಹಮಹೋತ್ಸವ, ಕೌಡಕುಂದಿ

ರಾಯಚೂರು ಡಿ॥ ಸಿಂಧನೂರು ತಾ॥ ರವಡಕುಂದಿ ಹಿರೇಮಠದಲ್ಲಿ ಇಂದ ವೈಶಾಖ ಬ॥ ೧೦ ಬುಧವಾರ ದಿವಸ ಹಿರೇಮಠದ ವೇ॥ ಸೋಮಶೇಖರಶಾಸ್ತ್ರಿಗಳವರ ದ್ವಿತೀಯ ಪುತ್ರ ಚಿ॥ ಪಂಚಾಕ್ಷರಶಾಸ್ತ್ರಿಗೂ ಒಳಗೇರಿಯವರ ವೇ॥ ರುದ್ರಾರಾಧ್ಯರ ಪುತ್ರಿ ಚಿ॥ ಸೌ॥ ಗುರುವಾದಾಂಬೆಗೂ, ವೇ॥ ಬಿ ಎಂ ರುದ್ರಾರಾಧ್ಯರ ದ್ವಿತೀಯ ಪುತ್ರ ಬಿ ಎಂ ವೀರೇಶ್ವರಶಾಸ್ತ್ರಿಗಳು ಕಾವ್ಯತೀರ್ಥ ಇವರಿಗೂ ಪೋತನಾಳ ಬ್ರಹ್ಮಶ್ರೀದ ವೇ॥ ಚನ್ನಮಲ್ಲಯ್ಯನವರ ಪುತ್ರಿ ಚಿ॥ ಸೌ॥ ಸಂಗಮ್ಮನಿಗೂ ವಿವಾಹಮಹೋತ್ಸವವು ಮಹಾವೈಭವದಿಂದ ನೆರವೇರುತು ತಾ॥ ೧೮-೬-೪೮ ರ ದಿವಸ ಶ್ರೀ॥ ಹಾ॥ ಬ್ರ॥ ಹರಪಟ್ಟಾಧ್ಯಕ್ಷ ಶ್ರೀತಿವಯೋಗಿ ಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮಾಹೇಶ್ವರ ವಟುಗಳಿಗೆ ಮಾಹೇಶ್ವರದೀಕ್ಷಾನಮಾರಂಭವು ವಿಧ್ಯುಕ್ತವಾಗಿ ಜರುಗಿತು ಈ ಮಹೋತ್ಸವಕ್ಕೆ ಸೋಮಲಾಪುರ ಸಂಸ್ಥಾನದ ಶ್ರೀ॥ ವೀ॥ ವಿ ಎಂ ಗುರುಸಿದ್ದಯ್ಯನವರು ಸಿಂಧನೂರು, ಮೆಟ್ರಿ ಸಿದ್ಧಲಿಂಗಪ್ಪ ವಕೀಲರು ಸಿಂಧನೂರು ಮತ್ತು ಇನ್ನಿತರ ಪ್ರಮುಖ ಮಹಾಜನಗಳೂ, ನಾನಾಭಾಗಗಳಿಂದ ಬಹಳ ಶಿಷ್ಯರು ಮೊದಲಾಗಿ ಸಾವಿರಾರು ಜನಗಳು ಆಗಮಿಸಿ ವಧೂವರರಿಗೆ ಮಂಗಲವನ್ನು ಕೋರಿದರು. ಈ ಮಂಗಲಸಮಯದಲ್ಲಿ ಪೀಠಾಚಾರ್ಯರು ವಧೂವರರ ಅಭಿವೃದ್ಧಿಗಾಗಿ ಫಲಮಂತ್ರಾಕ್ಷತೆಗಳಕೊಡಿಸಿ ಶುಭಾಶೀರ್ವಾದಪತ್ರಿಕೆಗಳನ್ನು ಕಳುಹಿಸಿದ್ದರು ವಿವಾಹಕಾರ್ಯವು ವೇ॥ ರುದ್ರಾರಾಧ್ಯಶಾಸ್ತ್ರಿಗಳ ವೈದಿಕತ್ವದಲ್ಲಿ ಸಾಂಗವಾಗಿ ನೆರವೇರಿತು ಶ್ರೀಜಗದ್ಗುರು ಪಂಚಾಚಾರ್ಯರು ವಧೂವರರಿಗೆ ಆಯುರಾರೋಗ್ಯಭಾಗ್ಯಾದಿ ಸಕಲಸಂಪತ್ಸಮೃದ್ಧಿಯನ್ನು ದಯಪಾಲಿಸಲೆಂದು ಪ್ರಾರ್ಥಿಸುವ

ಪಂಗನಗೌಡ ಪೋಲಿಸ್ ಪಾಟೀಲ್ರು
ರಾಡ್ ಂಡಿ

ವಿನಯೋಕ್ಷಾ ೌಪ್ತಿ ದರ್ಮೋಪದೇಶನಮಾರಂಭ

ರಾಯಚೂರು ಡಿ ಂವನೂರು ತಾ॥ ಕಲ್ಲೂರು ಗ್ರಾಮದ ಭಕ್ತಮಂಡಳಿಯವರು ಕಾಶೀಕ್ಷೇತ್ರದಿಂದ ಆಗಮಿಸಿರುವ ರವಡಕುಂದಿ ಹಿರೇಮಠಾಧ್ಯಕ್ಷರಾದ ವಿದ್ವದ್ವರ ಶ್ರೀ॥ ಷ ಬ್ರ॥ ಸಿದ್ಧರಾಮಶಿವಾಚಾರ್ಯ ಸ್ವಾಮಿಗಳವರನ್ನು ತಾ॥ ೨೬ ಲ ನೇ ದಿವಸ ತಮ್ಮ ಗ್ರಾಮಕ್ಕೆ ಶುಭ್ರವಪ್ರನ ಕ್ಷಾಗಿ ದಯಮಾಡಿಸಿಕೊಂಡು ಹೋದರು ಬಳಿಕ ಸಭೆಗೂಡಿತು ಸ್ವಾಮಿಗಳವರು ೧ ಘಂಟೆಯ ವರೆಗೆ 'ಚಕ್ರೆಯೋಗ' ಎಂಬ ವಿಷಯವಾಗಿ ಸಮಸ್ತರಿಗೂ ತಿಳಿಯುವಂತೆ ಬೋಧಿಸಿದರು ಕೈ। ಕಾರಬೆಟಿಗ ಅಯ್ಯನಗೌಡರ ಪುತ್ರ ಬಸವನಗೌಡನಿಗೂ, ಕೋ॥ನಾಳು ಪ್ರೇ॥ ಪಾ। ಶರಭಂಣನವರ ಪುತ್ರಿ ಶರಣಮ್ಮನಿಗೂ ಇರಲಿ ೩೦ ಜನ ಭಕ್ತಮಂಡಲಿಗೂ ಶಿವದೀಕ್ಷೆಯನ್ನು ಮಾಡಲಾಯಿತು ಬಳಿಕ ಇದೇ ಶುಭದಿನಸ ಚಿ॥ ಬಸವನಗೌಡನಿಗೂ ಚಿ॥ ಸೌ॥ ಶರಣಮ್ಮನಿಗೂ ವಿವಾಹವು ವೈಭವದಿಂದ ನೆರವೇರಿತು ಶ್ರೀ ಜಗದಾಚಾರ್ಯರು ವಧೂವರರಿಗೆ ಸಕಲಸಂಪತ್ಸಮೃದ್ಧಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಕರಡಿ ಬಸವನಗೌಡ ಕಲ್ಲೂರು

ಶಾಂತಿಕರ್ಮ ಸಮಾರಂಭ

ಬೆಳಗಾಂ ಡಿ॥ ಗಿರಿಯಾಲಾಸ್ತಾಮದಲ್ಲಿರುವ ಮಃ॥ ರಾ॥ ಗುಂಡಲೂರು ಗಂಗಾಧರಸ್ವಸವರು ತಮ್ಮ ಪುತ್ರನ ಜನನ ನಕ್ಷತ್ರದೋಷ ಶಾಂತಿಯನ್ನು ಶ್ರೀ॥ ಷ॥ ಬ್ರ॥ ಸುತ್ತಗಟ್ಟಿ ಹಿರೇಮಠದ ಚರಮೂರ್ತಿಸ್ವಾಮಿಗಳವರ ಗುರುತ್ವದಲ್ಲಿ ನೆರವೇರಿಸಿದರು ಇವರು ಒಳ್ಳೆಯ ಧರ್ಮಾಭಿಮಾನಿಗಳೂ, ಗುರುಲಿಂಗಜಂಗಮಭಕ್ತರೂ ಆಗಿದ್ದು ಜಕರಲ್ಲಿ ಬಹಳ ಪ್ರೀತಿಯನ್ನು ಸಂಪಾದಿಸಿ ಕೊಂಡಿದ್ದಾರೆ ವೀರಶೈವ ಧರ್ಮದ ಅಭಿವೃದ್ಧಿಗಾಗಿ ವಿಶೇಷ ಪ್ರಯತ್ನ ಪಡುತ್ತಲಿರುವರು ಇವರಿಗೆ ಜಗದಾಚಾರ್ಯರು ಸಕಲ ಸನ್ಮಂಗಲಗಳನ್ನು ಅನುಗ್ರಹಿಸಲೆಂದು ಕೋರುವ,

ಬಸಪ್ಪ ಗುಂಡಲೂರು.

ಗಾಂಧೀಜಿ ಕೊಲೆಯು ವಿಚಾರಣೆ

ಅಪ್ರೂವರ್ ಡಿ ಆರ್ ಬಾಷ್ಯಮ ಸ್ಥಾಪ್ಯ

ಗಾಂಧೀಜಿ ಕೊಲೆ ಮೊಕದ್ದಮೆಯಲ್ಲಿ ಅಪ್ರೂವರ್ ಆಗಿ ಸ್ವಮೆ ಪಡೆದಿರುವ ದಿಗಂಬರ ಬಾಮಚಂದ್ರ ಬಾಡ್ಗೆ ಈ ಕೆಳಗೆ ಕಂಡಂತೆ ಸಾಕ್ಷ್ಯವಿತ್ತನು

ನನಗೆ ಇಪ್ಪತ್ತೆ ನಲುವ್ವು, ನನ್ನ ಸ್ವಂತಿ ಮಹಾರಾಷ್ಟ್ರ ಗೋದಾಲಿ ಪ್ರಾಂತದಲ್ಲಿ ನಾರಾಯಣ್‌ಪೇಟೆ ನನ್ನ ನಾಸಸ್ಥಳ ಇಲ್ಲಿ ೧೯೪೬ ನೇ ವರ್ಷ ವ್ಯವಹಾರದಿಂದ ಶಸ್ತ್ರ ಬಂಡಾರದ ಮಾಲೀಕನಾಗಿದ್ದೇನೆ ಸ್ಟೆನ್‌ಗನ್‌ಗಳು, ಬಾಂಬುಗಳು, ರಿವಾಲ್ವರುಗಳು, ಹಿಂದೂಕುಗಳು ಹೋಟೊ ಮುಂತಾದ ಮದ್ದು ಗುಂಡುಗಳ ವ್ಯಾಪಾರವನ್ನು ನಡೆಸುತ್ತಿದ್ದೇನೆ ಹೊರಲು ೧೯೪೬ರಲ್ಲಿ ಬಾಕ್ಸು, ಜೂರಗಂಡುಗೊಡಲಿ, ವ್ಯಾಪ್ತಿನಲು ಮುಂತಾದ ಆಯುಧಗಳನ್ನು ಮಾರುತ್ತಿದ್ದೆ ಪುಸ್ತಕಗಳ ವ್ಯಾಪಾರ ಸಹ ನಡೆಸುತ್ತಿದ್ದೆ ನನಗೆ ಕೆಲಜನ ಹಿಂದೂ ಮಹಾಸಭಾ ಸದಸ್ಯರ ಪರಿಚಯ ೧೯೪೬ರಲ್ಲಿ ಆಯಿತು ಅಂದಿನಿಂದ ನಾನು ಮಹಾಸಭೆಯ ವಾರ್ಷಿಕ ಅಧಿವೇಶನಗಳಿಗೆ ಹೋಗುತ್ತಿದ್ದೆ ಅಲ್ಲಿ ಸಾವರ್‌ಕರ್ ಭೋಸಲೆ ಕರ್ ಮುಂತಾದವರ ಭಾಷಣಗಳನ್ನು ಕೇಲಿದ್ದೇನೆ ಈ ಅಧಿವೇಶನಗಳಲ್ಲಿ ನಾನು ಪುಸ್ತಕಗಳನ್ನು ಮತ್ತು ಆಯುಧಗಳನ್ನು ಮಾರಿತ್ತಿದ್ದೆ ಸಾವರ್‌ಕರರು ಗೌಹಾರಾವ್ಯದಲ್ಲಿಲ್ಲಾ ಸ್ವಾತ್ರ ಕ್ರೃವೀರ್ ಬ್ಯಾರಿಸ್ಟರ್ ತಾತ್ಯಾರಾವ್ ಸಾವರ್‌ಕರ್, ಎಂದು ಹೆಸರು ೧೯ ಸಿದ್ಧಾರೆ ಅಪ್ಪಾಸಾರ್ ಎಂಬುವರನ್ನೂ ನಾನು ಬಲ್ಲೆನ

ಸಾನಕ ರನ್ನು ನಾನು ೧೯೪೪ ಸಿದವಾ ೬ ಗರಲ್ಲಿ ಭೇಟಿ ಮಾಡಿದ್ದೆ ಅಂದು ಗೋಡ್ಸೆ ಕೆರಕಟ್ಟೆ ವೈದ್ಯ ನವಲ್ಲಿ ಸಾವರ್‌ಕರರಿಗೆ ಮಾನಪತ್ರವನ್ನು ಅರ್ಪಿಸಲಾಯಿತು ಈ ಸಭೆಗೆ ಗಿದಮೇಲೆ ನಾನು ವತು ಇನ್ನೂ ೩೦ ೪೦ ಮಂದಿ ಇರಬಹುದು ಸಾವರ್‌ಕರರ ಮನೆಗೆ ಹೋದವು ಅಲ್ಲಿ ಗುಪ್ತಸಭೆ ನಡೆಯಿತು ಸಾವರ್‌ಕರರು ಭಾಷಣಮಾಡಿದರು

೧೯೪೬ ರಲ್ಲಿ ನಾನೂ ಮತ್ತು ಇನ್ನೂ ೪೦ ೫೦ ಮಂದಿ ಬೊಂಬಾಯಿ ಪ್ರಾದರಿಸಲ್ಲಿ ಚಿಬಲ್ಬಾಸ್ ಸ್ಕೂಲಿನಲ್ಲಿ ನಡೆದ ಸಭೆಗೆ ಹೋಗಿದ್ದೆವು ನಾಥೂರಾಮ್ ಗೋಡ್ಸೆ ಮತ್ತು ನಾರಾಯಣ್ ಆಪ್ಟೆ ಕರ್ಕರೆ ಸಹ ಬಂದಿದ್ದರು ಸಾವರ್‌ಕರರ ಈ ಸಭೆಯಲ್ಲಿ ಭಾಷಣ ಮಾಡಿದರು

ಕಾಂಗ್ರೆಸ್ ನೀತಿಯಿಂದ ಹಿಂದೂಗಳಿಗೆ ಕೆಡಕಾಗುತ್ತಿದೆ ಮುಸ್ಲಿಮರ ಮೇಲೆ ಅತಿಶ ಒಟಿಷ್ಟಾರ ಹಾಕಬೇಕು ಮುಸಲ್ಮಾನರು ಹಿಂದೂಗಳ ವೇಷ ಧರಿಸಿ ಪುಣಾದಂತೆ ಹಿಂದೂಳ್ಳರೂ ಒಳ್ಳು ಸಂಘಗಳಲ್ಲಿ ಸೈನ್ಯಕ್ಕೆ ಸೇರಿಕೊಳ್ಳಬೇಕು ಎಂದು ಸಾವರ್‌ಕರರು ಉಪದೇಶಿಸಿದರು ಎಂದು ನನಗೆ ಜ್ಞಾಪಕವಿದೆ ಕರ್ಕರೆ ನನಗೆ ಎರಡು ಮೂರು ಪರ್ಷ್ಯಗಳಾದ ಗಡಿತ್ತು ಒಷಗಾವ್‌ಕರ್ ಎಂಬುವು ಅವರ ಇನ್ನೊಂದು ಹೆಸರು ಬೊಂಬಾಯಿಗೆ ಹೋಗುತ್ತಿದ್ದೆ ಸಾವರ್‌ಕರರ ಗೃಹವಪದಲ್ಲಿ ಸಭೆ ಸೇರಿ ಗ್ರೂಪ್ ಫೋಟೋ ತೆಗೆದುಕೊಂಡ ನಂಗತಿಯೊಂದು ಜ್ಞಾಪಕವಿದೆ ಅಂದು ನಂಡಿತ ಒಬಲೆ, ಪರಮೇಶ್ವರ್, ಸಾವರಕರ ಮುಂತಾದವರು ಇದ್ದರು

ಸಾಕ್ಷೀ ಸವಾಲ್

ತರುವಾಯ ಪ್ರಧಾನ ಪ್ರಾಸಿಕ್ಯೂಷನ್ ವಕೀಲರಾದ ಶ್ರೀದಫ್ಲರಿಯವರು ಸಾಕ್ಷಿಯ ಪಾಟ ಸವಾಲು ನಡೆಸಿದರು

'ನೀವು ಆಪ್ಟೆಗೆ ಆಯುಧಗಳನ್ನು ಎಂದಾದರೂ ಸರಬರಾಜು ಮಾಡಿದ್ದಿರಾ? ಎಂದು ಕೇಳಿದಾಗ ಆಪಾದಿತರ ಪರ ವಕೀಲರಂದ ಶ್ರೀ ಮೆಂಗಳೆ ಇದಕ್ಕೆ ಆಕ್ಷೇಪಣೆ ಎತ್ತಿದರು ಆದರೆ ನ್ಯಾಯಾಧೀಶರು ಪ್ರಶ್ನೆಗೆ ಅವಕಾಶ ಏಕ್ಕರು

ಬಾಡ್ಗೆ ಉತ್ತರ ಕೊಡುತ್ತಾ ಆಪ್ಟೆಗೆ ಹಲವಾರು ಬಾರಿ ಆಯುಧಗಳನ್ನು ಒದಗಿಸಿರುವುದಾಗಿ ತಿಳಿಸಿದರು.

ಮೊದಲು ೧೯೪೭ ನೇ ಜುಲೈ ಅಥವಾ ಆಗಸ್ಟ್ ಸುಮಾರಿನಲ್ಲಿ ಆಪ್ಟೆ ಮತ್ತು ಕರ್ಕಾರೆ ಇವರು ನನ್ನಲ್ಲಿ ಆಯುಧಗಳ್ಳನ್ನು ಒಂದರ ಒಪ್ಪ ೧೦೦ ರೂಗಳಿಗೆ ಹಿಂದು ಸೈನ್ಯ ಕೊಡುತ್ತೆಂದರು ೧೯೪೭ನೇ ಡಿಸೆಂಬರ್ ವರೆಗೆ ೩೦ ರೂಗಳನ್ನು ಬೆಲೆ ಮಾಳವ ಆಯುಧ ಮತ್ತ ಪದ್ರಗಂಡುಗಳನ್ನು ಎವೆ ಕೊಂಡು ಕೊಂಡಿದ್ದಾರೆ

೧೯೪೭ನೇ ಜನವರಿ ೧೫ ನೇ ತಾರೀಖು ತಪ್ಪಿ ನನ್ನ ಶಸ್ತ್ರ, ಭಂಡಾರಕ್ಕೆ ಒಬ್ಬರೇ ಬಂದು ರಾತ್ರಿ ಕರ್ಕಾರೆ ಮುಂತಾದವರು ಆಯುಧ ಕೊಳ್ಳಲು ಒಬನೆಂದು ತಿಳಿಸಿದರು ಆಮೇಲೆ ಕರ್ಕಾರೆ ತನ್ನ ಜತೆಯಲ್ಲಿ ಮದನಲಾಲ್ ಜೋಷ್ಯ ಮತ್ತು ಒಬ್ಬಸಾದ್ ಇವರುಗಳನ್ನು ಒಂದೆ ಕೊಂಡು ಬಂದು ಕಾರ್ಟಾಸ್ಟ್ಯಾಲ್ಸ್ ಹ್ಯಾಂಡ್‌ಗ್ರನೇಡ್ ತೋಟಾ ಪಿಸ್ತೂಲುಗಳು ಮತ್ತು ಬೈಜ್ ವೈಂ ಇವುಗಳ ಉಪಯೋಗವನ್ನು ತಿಳಿಸಿ ಕೊಡಲು ಕರ್ಕಾರೆ ಇವುಗಳನ್ನು ನೋಡಿದ ಮೇಲೆ ಹೊರಟುಹೋದನು

ಮಾರನೇ ದಿನ ಬೆಳ್ಳಗೆನ್ನು ಸಂಧಿಸಿದಾಗ ಆತನು ಎರಡು ರಿವಾಲ್ವರ್ ಗಳಿಗಾಗಿ ಸ್ಟಾಲ್ಸ್ ಮತ್ತು ಐದು ಹ್ಯಾಂಡ್ ಗ್ರೆನೇಡುಗಳನ್ನು ಕೊಳ್ಳುವುದಾಗಿ ತಿಳಿಸಿದನು ರಿವಾಲ್ವರುಗಳನ್ನು ನನ್ನಲ್ಲಿಲ್ಲವೆಂದು ಗಕಾರ್ಟಾಸ್ಟ್ಯಾಲ್ಸ್ ಮತ್ತು ಗ್ರೆನೇಡುಗಳಿಗಾಗಿ ಜೊ ವಾಯಿಗೆ ತಲಿಸಿದರೆ ಅಲ್ಲಿ ತೆಗೆದುಕೊಳ್ಳುವುದಾಗಿ ತಿಳಿಸಿದನು ಇದರಂತೆ ಈ ಸಾಮಾನನ್ನು ಒಂದು ಟೀಲಗಲ್ಲಿ ಹಾಕಿ ಕೊಂಡು ಬೆ ಂಬಾಯಿಗೆ ಮೆ ಗಿ ಎಂವರೆಕರರ ಸದನದಲ್ಲಿ ಅದನು ಆಪ್ಟೆಗೆ ತಲಪಿಸಿದೆ ಗೋಡ್ಸೆ ಸಹ ಅಲ್ಲಿದ್ದರು

ಆಮೇಲೆ ನಾತ್ರು ಹಿಂದೂರುಸಾಭಾ ಕಚೇರಿಗೆ ಹೋದೆವು ಅಲ್ಲಿ ಆಪ್ಟೆಯು ಗೋಡ್ಸೆಗೆ ಸ್ವಲ್ಪ ಹಣ ಕೊಟ್ಟನು ಅದರಲ್ಲಿ ೫೦ ರೂಗಳನ್ನು ಗೋಡ್ಸೆ ನನಗಿತ್ತು ಇ ತ ವು ಕೊಂಡ ಸಾಮಾನಿನ ಬೆಲೆಯುಲ್ಲನೆ ದೂ ನನ್ನ ಪ್ರಯಾಣದ ಖರ್ಚಿಗಾಗಿ ಕೊಟಿದಂಮ ಹೆ ದನು

೨ ನೆಯ ದಿನವದ ಹೇಳಿಕೆ

ನಾನು ಗೋಡ್ಸೆ, ಆಪ್ಟೆ ಮತ್ತು ಶಂಕರ ಎಲ್ಲರೂ ಕೂಡಿ ಪಟ್ಕರ್ ಮನೆಗೆ ಬಂದವು ಅಲ್ಲಿಂದ ಪಟರ್ಸ್‌ಂದನ್ನು ಕರೆದುಕೊಂಡು ಕಲ್ಕಾಮವರೆ ಬಂ ಲಿಗೆ ಒಂದವು ಕಾರ್ ಗೋಡ್ಸೆಗೆ ಸೇರಿದ್ದು ಸ್ಟೇಷನ್‌ವ್ಯಾಗನ್ ಮಾದರಿಯದು ಅದನ್ನು ಸಾಫರ ಅಧಿಪಾ ಸಾವಿರ ರೂ ಗಳಿಗೆ ಮಾರಬೇಕೆಂದು ಅಲ್ಲಿಂದ ನಾವು ಟ್ಯಾಕ್ಸಿಯಲ್ಲಿ ದೀಕ್ಷಿತ ಮಂಜಾಗಾರ ಮನಗೆ ಬಂದವು ಒಂದ ರಿವಾಲ್ವರು ಬೇಕೆಂದ ಆಪ್ಟೆಯು ವಿಷ್ಣಿತ ಮಹಾರಾಜನಲ್ಲಿ ಕೇಳಿದನ ಅವರು ಕೊಡಿಲಿಲ್ಲ ಅಲ್ಲಿಂದ ನಾವೆಲ್ಲ ಸಾಂಟಾಕ್ರೂಸ್ ನಿಲ್ದಾಣಕ್ಕೆ ಬಂದೆವು ಆಪ್ಟೆ ಟ್ಯಾಕ್ಸಿಯಿಂದ ಇಳಿದು ನನಗೆ ೫೦ ರೂ ನನ್ನ ತೆಂಬ್ಬು ಶಂಕರನ ಜತೆಯಲ್ಲಿ ರಾತ್ರಿ ರೈಲಿನಲ್ಲಿ ದೆಹಲಿಗೆ ಹೋಗಬೇಕೆಂದು ತಿಳಿಸಿದನು ಆಪ್ಟೆಯನ್ನು ಅಲ್ಲೇ ಬಿಟ್ಟು ನಾನು ಮತ್ತು ಶಂಕರನು ಸಟರ್ವರ್‌ನನ್ನು ಕಾಣಲು ಬುಲಾವಿಗೆ ಟ್ಯಾಕ್ಸಿಯಲ್ಲಿ ಹೊರಟೆವು ಅಲ್ಲಿ ಟ್ಯಾಕ್ಸಿಯವನಿಗೆ ೨೦ ೧೦ ೦ ಕೊಟ್ಟು ರಸೀತಿ ತೆಗೆದುಕೊಂಡೆವು

ನಮಗೆ ಹಣ ಬೇಕಾಗಿತ್ತು ಪಟವರ್ಧನ್‌ನಿಂದ ನಾನು ೪೦೦ ರೂ ಶಂಕರ ೨೦೦ ರೂ ಗಳನ್ನು ತೆಗೆದುಕೊಂಡೆವು ೧೮ ನೇ ತಾರೀಖಿನ ದಿನವ ನಾನು ಮತ್ತು ಶಂಕರನು ದೆಹಲಿಗೆ ಹೊರಟು ೧೯ ನೇ ತಾ|| ಆಪ್ಟೆಗೆ ತಲಪಿದೆವು ದೆಹಲಿಯಲ್ಲಿ ಹಿಂದೂಮಹಾಸಭಾ ಕಚೇರಿಗೆ ಹೋಗಿ, ಅಲ್ಲಿ ನಾಥೂರಾಮ್‌ಗೋಡ್ಸೆ, ಮದನಲಾಲ್, ಕರ್ಕಾರೆ ಮತ್ತು ಗೋಪಾಲ್‌ಗೋಡ್ಸೆ ಇವರುಗಳನ್ನು ಭೇಟಿ ಮಾಡಿದೆವು

ಆಪ್ಟೆಯು ನನ್ನನ್ನು ಮತ್ತು ಶಂಕರನನ್ನು ಬಿರ್ಲಾ ಭವನಕ್ಕೆ ಕರೆದುಕೊಂಡು ಹೋದನು ಅಲ್ಲಿ ಕಾವಲು ಗಾರನು ನನ್ನನ್ನು ತಡೆದನು ಕಾರ್ಯದರ್ಶಿಯನ್ನು ಕಾಣಲು ಬಂದಿದ್ದೇವೆ ಎಂದು ಚೀಟಿ ಬರೆದುಕೊಟ್ಟು ಗೇಟಿನ ಬಳಿ ನಿಂತಿದ್ದೆವು ಕರ ಸೂಟು ಧಾರಿಯಾದ ಸ್ಟೂಲಕಾಯನೊಬ್ಬರು ಹೊರಗೆ ಬಂದರು ಈತ ಸುಷ್ಮಾವರ್ದಿ ಎಂದು ಆಪ್ಟೆ ಹೇಳಿದನು. ಆಮೇಲೆ ಬಿರ್ಲಾಭವನದ ಹಿಂಭಾಗದಿಂದ ಗಾಂಧೀಜಿ ಪ್ರಾರ್ಥನಾ ಸಭೆಯ ಸ್ಥಳಕ್ಕೆ ಬಂದೆವು ಅಲ್ಲಿ ಗಾಂಧೀಜಿ ಮತ್ತು ಸುಷ್ಮಾವರ್ದಿ ಕೂಡುವ ಜಾಗವನ್ನು ಆಪ್ಟೆ ತೋರಿಸಿ ಸ್ಥಳ ಪರೀಕ್ಷೆ ಮಾಡಿದನು ಹಿಂಭಾಗದಲ್ಲಿದ್ದ ಕಿಟಕಿಯನ್ನು ತೋರಿಸಿ ಇಲ್ಲಿಂದ ರಿವಾಲ್ವರಿಂದ ಗುಂಡು ಹಾರಿಸಬಹುದು, ಅಪ್ಪಡೆ ಹ್ಯಾಂಡ್ ಗ್ರೆನೇಡನ್ನು ಎಸೆಯ ಬಹುದು ಎಂದು ಆಪ್ಟೆ ಹೇಳಿದನು

ಸಾಧ್ಯವಾದ ಮಟ್ಟಿಗೆ ಗಾಂಧೀಜಿ ಮತ್ತು ಸುಷ್ಮಾವರ್ದಿ ಇವರಿಬ್ಬರನ್ನೂ ಮುಗಿಸಿಬಿಡಬೇಕು ಹಾಗಿಲ್ಲವಾದರೆ ಒಬ್ಬರನ್ನಾದರೂ ಮುಗಿಸಲೇಬೇಕು ಎಂದು ಆಪ್ಟೆ ಹೇಳಿದನು ಜನರ ಗಮನವನ್ನಾಕರ್ಷಿಸಲು ಗನ್‌ಕಾಟನ್ ಎಸಯಬಹುದಾದ ಶ್ರೀಮಂತ ಸ್ಥಳಾವಕಾಶಗಳನ್ನು ಅವನ್ನೆ ತೋರಿಸಿದನು ತರುವಾಯ ಅಲ್ಲೇ ಕೂತಿವು ಫೋಟೋ ಗ್ರಾಫರ್ ಎಂದು ಹೇಳಿಕೊಂಡು ಆ ಕಿಟಕಿ ಇರುವ ಕೊಠಡಿ ಪ್ರವೇಶಿಸಬಹುದು ಎಂದು ತಿಳಿಸಿದನು ಸ್ಥಳ ಪರಿಶೀಲನೆ ಮಾಡಿ ನಾವು ಹಿಂತಿರುಗಿದವು

ಆಮೇಲೆ ನಾವೆಲ್ಲಾ ಹಿಂದೂಮಹಾಸಭಾ ಭವನಕ್ಕೆ ಬಂದೆವು ಆಪ್ಟೆ ೫ ನಿಮಿಷ ಹೊರಗೆ ಹೋಗಿ ವಾಪಸು ಬಂದು ಜಂಗಲಿಗೆ ಕರೆದುಕೊಂಡುಹೋದನು ಅಲ್ಲಿ ಗೋಡ್ಸೆ ನನ್ನ ಒಳಉಡ್ಡಿ ರಿವಾಲ್ವರುಗಳನ್ನು ಹಾರಿಸಿ ಪರೀಕ್ಷೆಸಬೇಕೆಂದು ಆಪ್ಟೆ ತಿಳಿಸಿದನು ನೋಡಾಲ ಗೋಡ್ಸೆಯ ರಿವಾಲ್ವರು ಕೆಟ್ಟುಹೋಗಿತ್ತು ನನ್ನ ರಿವಾಲ್ವರಿನ್ನು ಶಂಕರನು ಅಲ್ಲಿದ್ದ ಮರಕ್ಕೆ ಗುರಿಯಿಟ್ಟು ಹಾರಿಸಿದನು ಗುಂಡು ಮರಕ್ಕೆ ಬಡೆಯದೆ ಮುಂದೆ ಸ್ವಲ್ಪ ದೂರದಲ್ಲಿ ಬಿತ್ತು ಈ ರಿವಾಲ್ವರು ಉಪಯೋಗವಿಲ್ಲ ವೆಂದು ಆಪ್ಟೆ ಹೇಳಿದನು ಗೋಡ್ಸೆ ತನ್ನ ರಿವಾಲ್ವರ್ ಸರಿಪಡಿಸುವುದಾಗಿ ಹೇಳಿ ಅದನ್ನು ಬಿಚ್ಚಿ ಸರಿಪಡಿಸಲು ಕೂತನು ಈ ನೇರಿಗೆ ಮೂವರು ಫಾರೆಸ್ಟು ಗಾರ್ಡುಗಳು ಗುಮ್ಮು ಬಳಿಗೆ ಬಂದರು ಗೋಪಾಲಗೋಡ್ಸೆ ಅವರೊಡನೆ ಪಂಜಾಬಿಯಲ್ಲಿ ಸಮಾಧಾನ ಹೇಳಿ ಕಳಿಸಿಬಿಟ್ಟನು ಇನ್ನು ಅಲ್ಲಿರುವುದು ಸರಿಯಲ್ಲವೆಂದು ನಾವು ಹಿಂದೂಮಹಾಸಭಾ ಭವನಕ್ಕೆ ಒಂದೆವು

ಆ ಭವನದ ಹಾಲಿನಲ್ಲಿ ಕರ್ಕಾರೆ ಮತ್ತು ಮದನ್ ಲಾಲ್ ಕೂತಿದ್ದರು ಆಪ್ಟೆಯ ಕೋಠಿಕೆಯಂತೆ ಇವರಿಬ್ಬರೂ ಮೇರಾ ಹೋಟಲಿಗೆ ಹೋದರು ಎವೇಳೆ ನಾನು ಆಪ್ಟೆ, ಗೋಪಾಲಗೋಡ್ಸೆ ಅಲ್ಲಿಗೆ ಹೋದೆವು ಗೋಪಾಲಗೋಡ್ಸೆ ಗನ್‌ಕಾಟನ್‌ಸ್ಲಾಬ್ಸ್ ಇತಾದಿಗಳನ್ನು ಇಟ್ಟಿದ್ದ ಚೀಲವನ್ನು ಜತೆಯಲ್ಲಿ ತೆಗೆದ ಕೊಂಡುಬಂದನು ಅಲ್ಲಿ ಮಹಡಿಯೆಮೇಲೆ ಹೋಗಿ ನಾಥೂರಾಮ್‌ಗೋಡ್ಸೆ ಕೊಠಡಿಯಲ್ಲಿ ಆ ಚೀಲವನ್ನಿಟ್ಟು ೨೦ ೨೫ ನುಮ್ಮು ನಾನು ಊಟ ಮಾಡಲು ಕೆಳಗೆ ಇಳಿದು ಬಂದೆವು ಉಳಿದವರು ನಾಥೂರಾಮ್‌ಗೋಡ್ಸೆಯ ಜತೆಯಲ್ಲಿ ಕೊಠಡಿಯಲ್ಲೇ ಇದ್ದರು

ಊಟವಾದ ಮೇಲೆ ಕೊಠಡಿಗೆ ಬಂದೆವು ನಾಥೂರಾಮ್‌ಗೋಡ್ಸೆ, ಕರ್ಕಾರೆ ಮತ್ತು ಮದನಲಾಲ್ ನಾನೂ ಸ್ನಾನಗೃಹಕ್ಕೆ ಹೋದೆವು ಅಲ್ಲಿ ಮದನಲಾಲ್ ಮತ್ತು ಆಪ್ಟೆ ಹ್ಯಾಂಡ್ ಗ್ರೆನೇಡ್ ಶಕ್ತಿಯುತ ಡಿಟೋನೇಟರ್ ಸ್ಲಾಬ್ಸ್‌ನ್ನು ಆದರಲ್ಲಿ ಸಿಕ್ಕಿಸಲು ಹೊಡಗಿದ್ದರು

"ಇಬೇ ನನ್ನು ಕೊನೆಯ ಪ್ರಯತ್ನ! ಈ ಕಾರ್ಯ ಮುಗಿಸಲೇಬೇಕು ಆದ್ದರಿಂದ ಎಲ್ಲವೂ ಸರಿಯಾಗಿ ನೈಸರ್ಗಿಯಾಗುವಂತೆ ನೋಡಿ" ಎಂದು ನಾಥೂರಾಮ್ ಗೋಡ್ಸೆ ನನಗೆ ಹೇಳಿದನು

ಹ್ಯಾಂಡ್ ಗ್ರೆನೇಡ್‌ಗಳನ್ನು ಸಿದ್ಧಪಡಿಸಿ ಹೊರಗೆ ಬಂದಾಗ ಗೋಪಾಲಗೋಡ್ಸೆ ತನ್ನ ರಿವಾಲ್ವರನ್ನು ಸರಿಪಡಿಸಿಕೊಂಡು ಬಂದು ಕತಿದ್ದನು ಮದನಲಾಲ್ ಮತ್ತು ಶಂಕರ ಒಂದೊಂದು ಗ್ರೆನೇಡ್ ಮತ್ತು ಗನ್ ಕಾಟನ್ ಸ್ಲಾಬ್ಸನ್ನೂ, ತಾನೂ ಮತ್ತು ನಾಥೂರಾಮ್ ಒಂದೊಂದು ರಿವಾಲ್ವರನ್ನೂ ತೆಗೆದುಕೊಂಡು ಹೊರಡಬೇಕು ಎಂದು ಆಪ್ಟೆ ಸೂಚಿಸಿದನು.

ಆಸ್ಟ್ರೇಲಿಯಂದ ಜನರನ್ನು ಗಾಬರಿಗೊಳಿಸಲು ಮತ್ತು ಗನ್‌ಕಾಟನ್ ಸ್ಯಾಬ್ ಸಾಳು ಮದನಲಾಲ ಒಂದು ಗ್ರೆನೇಡು ಮತ್ತು ಗನ್‌ಕಾಟನ್‌ಸ್ಯಾಬ್ ಡಿ ಗೋಪಾಲಗೋಡ್ಸೆ ಮತ್ತು ಕರ್ಕಾರೆ ಡೊಂದು ಗ್ರೆನೇಡ್ ತೆಗೆದುಕೊಳ್ಳಲಿ ಶಂಕರನು ದು ರಿವಾಲ್ವರ್ ತೆಗೆದುಕೊಳ್ಳಲಿ, ನಾನು ಒಂದು ಲ್ವರ್ ಮತ್ತು ಗ್ರೆನೇಡ್ ತೆಗೆದುಕೊಂಡು ತ್ತೇನೆ ನಾಥೂರಾಮ್ ಗೋಡ್ಸೆ ಮತ್ತು ಆಪ್ಟೆ ರೂ ಅಲ್ಲಿದ್ದು 'ಸಿಗ್ನಲ್' ಕೊಡಲಿ ಎಂದು ಸೂಚ ಈ ಸಲಹೆಗೆ ಒಪ್ಪಿಗೆ ದೊರೆಯಿತು

ಅನಂತರ ಮದನಲಾಲನು ಗನ್‌ಕಾಟನ್ ಸ್ಯಾಬ್‌ನ್ನು ಸಿದ ಕೂಡಲೇ ನಾವೆಲ್ಲಾ ಗಾಂಧೀಜಿ ಮೇಲೆ ಕ್ರಮ ಗಿ ಗುಂಡು ಹಾರಿಸಿ ಹ್ಯಾಂಡ್ ಗ್ರೆನೇಡುಗಳನ್ನು ಯಬೇಕೆಂದು ಕರ್ಕಾರೆ ಸೂಚಿಸಿದನು ಮದನ ಲನು ಗೋಡೆ ಬಳಿ ಗನ್‌ಕಾಟನ್ ಸ್ಯಾಬ್‌ನ್ನು ಸಬೇಕೆಂದೂ, ನಾನು ಫೋಟೋಗ್ರಾಫರ್ ಸೋಗಿ ಕೊರಡಿಯನ್ನು ಪ್ರವೇಶಿಸಿ ರಿವಾಲ್ವರಿನಿಂದ ಗುಂಡು ರಿಸಿ ಹ್ಯಾಂಡ್ ಗ್ರೆನೇಡ್‌ನ್ನು ಎಸೆಯಬೇಕೆಂದೂ ಆಪ್ಟೆ ಸಿದನು

ಉಳಿದವರು ಪ್ರಾರ್ಥನಾಸಭೆಯಲ್ಲಿ ಬೆರೆತಿರಬೇ ಂದೂ, ನನಗೆ ತಾನು ಸಿಗ್ನಲ್ ಕೊಡುವುದಾಗಿಯೂ, ಆಪ್ಟೆಯು ತ್ತನು ನಾಥೂರಾಮ್‌ಗೋಡ್ಸೆ ದೇಶಪಾಂಡೆ ಂದೂ, ಕರ್ಕಾರೆ ವ್ಯಾಸ್ ಎಂದೂ, ತಾನು (ಆಪ್ಟೆ) ಮೆಕರ್ ಎಂದೂ, ಶಂಕರ್ ತುಕಾರಾಂ ಎಂದೂ ತ್ತು ಬಾಡ್ಗೆ ಒಂಡೋಪಂತ್ ಎಂದೂ ಸುಳ್ಳು ಹೆಸರು ನ್ನಿಟ್ಟುಕೊಳ್ಳಬೇಕೆಂದು ಸೂಚಿಸಿದನು

ಹಾಗೆಯೇ ನಮ್ಮ ವೇಷಭೂಷಣಗಳನ್ನು ಬದಲಾ ಸಲು ನಿರ್ಧರಿಸಿ, ಹಾಗೇ ಮಾಡಿದೆವು ಆಮೇಲೆ ವ್ಯಕಾರಿಗಳಾಗಿ ಕರ್ಕಾರೆ ಮತ್ತು ಮದನಲಾಲರು ಲಾಭವನೆತ್ತೆ ಹೊರಟೆವು ನಾಥೂರಾಂ ಆಮೇಲೆ ರುವುದಾಗಿ ಹಿಂದೆ ಉಳಿದನು ಉಳಿದ ನಾವು ಲ್ವರೂ ಹಿಂದೂಮಹಾಸಭೆಯ ಆಕೇರಿಗೆ ಟ್ಯಾಕ್ಸಿಯಲ್ಲಿ ಂದವು

ನಾನು ಅಂದು ಮನೆಯಲ್ಲಿ ನಿಂತು ಗಾಂಧೀಜಿಯ ಮೇಲೆ ಗುಂಡು ಹಾರಿಸುವುದಕ್ಕಿಂತ ಬಯಲಲ್ಲಿ ನಿಂತು ದುರಿಗೇ ಹಾರಿಸುವುದಾಗಿ ಗೋಡ್ಸೆಗೆ ತಿಳಿಸಿದೆನು ಮದನಲಾಲನು ಗ್ರೆನೇಡನ್ನು ಸಿಡಿಸಿದಾಗ ಆಪ್ಟೆಯಿಂದ ಂಕ್ಷಿಸಿದ್ದ ಸಿಗ್ನಲ್ ಬರಲಿಲ್ಲ ಆ ಸಂದರ್ಭದಲ್ಲಿ ಏನೂ ತೂಚಲು ಆಗಲೇ ಇಲ್ಲ ಮದನಲಾಲನ ದಸ್ತಗಿರಿ ಯಾಗಿ, ಕೊನೆಗೆ ನಾವೆಲ್ಲಾ ಪಠಾಣಿಯಾಗಬೇಕಾಯಿತು

ಗೋಪಾಲಗೋಡ್ಸೆ, ಶಂಕರ್ ಮತ್ತು ನಾನು ಅಂದು ಜೆ ಬಿರ್ಲಾ ಭವನಕ್ಕೆ ತೆರಳುವ ಮುಂಚೆ ಹಿಂದೂ ಮಹಾಸಭಾಕಚೇರಿಗೆ ಹೋದೆವು ಗೋಪಾಲಗೋಡ್ಸೆ ಜೇವನ್ನು ಗೋಡೆಯ ಬೀಳುವಿಪ್ಪಿಟ್ಟಿನು ನಾನೊಂದು ಮಿವಲ್ ತೆಗೆದುಗೊಂಡೆ ಆ ಮೇಲೆ ಟ್ಯಾಕ್ಸಿಯಲ್ಲಿ ರ್ಲಾ ಭವನಕ್ಕೆ ಬಂದೆವು ಮದನಲಾಲನನ್ನು ಭೇಟಿ ಯಾದೆವು ಟ್ಯಾಕ್ಸಿಯನ್ನು ಗೋದಲ ಸಕ್ಕದಲ್ಲಿ ನಿಲ್ಲಿಸಿ ದೆವು ಮದನಲಾಲನು ಹತ್ತಿರಕ್ಕೆ ಒಂದು ನಾಪ್ಕೆನರು ಂಬಾ ಕಡೆ ಇರುವ ಗಡಿಬಿನ ಕಡೆ ಹೊರಟೆವು

'ತಯಾರ್ ಹೈ ಕ್ಯಾ?' ಎಂದು ಆಪ್ಟೆ ಮದನಲಾಲ ನನ್ನ ಕೇಳಿದನು ಸಿದ್ಧವಾಗಿರುವುದಾಗಿ ಮದನಲಾಲನು ಉತ್ತರವನ್ನು ನಾವು ಗೇಟಿನ್ನು ಸಮೀಪಿಸುತ್ತಿದ್ದಾಗ ರ್ಕಾರೆಯು ಸ್ವಾರ್ಥನಾ ಸಭೆ ಕಡೆ ಬರುತ್ತಿದ್ದುದನ್ನು ಕಂಡೆನು ಕರ್ಕಾರೆ ಸಂಗಡೆ ಯಾವನೋ ಮಾತಾಡು ತ್ತಿದ್ದನು ಅವನು ನಮ್ಮನ್ನು ನೋಡಿ ನಮ್ಮ ಬಳಿಗೆ ಬಂದನು ಗಾಂದೀಜಿಯವರು ಪ್ರಾರ್ಥನಾ ಸಭೆಗೆ ಆಗಲೇ ಬಂದಿದ್ದಾರೆ ಕೊಠಡಿಯಲ್ಲಿ ಫೋಟೋಗ್ರಾಫರನ್ನು ಬಿಳಗೆ ಬಿಡಲು ಏರ್ಪಡಿಸಲಾಗಿದೆಯೆಂದು ತಿಳಿಸಿದನೆ ಈ ವೇಳೆಗೆ ನಾಥೂರಾಂ ಗೋಡ್ಸೆ ಸಹ ಅಲ್ಲಿಗೆ ಬಂದನು

ನಾನು ಕೊಠಡಿ ಒಳಗೆ ನೋಡಿದೆ ಅಲ್ಲಿ ಇಬ್ಬರು ದ್ದರು ಏನಾದರೂ ಸಂಭವಿಸಿದರೆ ನಾವು ಆ ಕೊಠಡಿ ಯಲ್ಲಿ ಬೇಕಾಗುವುದು ಎಂದು ಹೆದರಿ ಹೆದರಬಾರದೆಂದೂ ನಾವೆಲ್ಲರೂ ಪಾರಾಗಲು ಸಕಲ ಸಿದ್ಧತೆ ಮಾಡಿರುವುದಾಗಿಯೂ ನಾಥೂರಾಂ ಗೋಡ್ಸೆ ತಿಳಿಸಿದನು ಕೂಡಲೇ ಪ್ರವೇಶಿಸಬೇಕೆಂದು ನನ್ನನ್ನು ಒತ್ತಾಯಪಡಿಸಿದನು.

ಮರೆಯಲ್ಲಿ ನಿಂತು ಗಾಂಧೀಜಿಯರ ಮೇಲೆ ಗುಂಡುಹಾರಿಸುವ ಬದಲು ಎದುರಿಗೇ ನಿಂತು ಗುಂಡು ಹಾರಿಸುವುದಾಗಿ ನಾನು ತಿಳಿಸಿದೆನು ಇದಕ್ಕೆ ಗೋಡ್ಸೆ ಮತ್ತು ಆಪ್ಟೆ ಇಬ್ಬರೂ ಒಪ್ಪದಿರು ಟ್ಯಾಕ್ಸಿ ಹತ್ತಿರ ಹೋಗಿ ಶಂಕರನಿಗೆ ಹ್ಯಾಂಡ್ ಗ್ರೆನೇಡ್ ಒಂದನ್ನು ಕೊಟ್ಟು ನಾನು ಹೇಳುವವರೆಗೆ ಏನೂ ಮಾಡಕೂಡದು ಎಂದು ಸೂಚಿಸಿ ಕಳಿಸಿದೆನು

ಆನಂತರ ನಾವಿಬ್ಬರೂ ನಾಥೂರಾಂ ಗೋಡ್ಸೆ ಮತ್ತು ಆಪ್ಟೆ ಬಳಿಗೆ ಒಂದೆವು ನಾನು ಸಿದ್ಧನಾಗಿದ್ದೇನೆ ಎಂದು ತೋರಲು ನನ್ನೆರಡು ಕೈಗಳನ್ನೂ ನನ್ನ ಆಂಗಿಯ ಹೊರಜೇಬಿನಲ್ಲಿಟ್ಟಿದ್ದೆ

'ಸಿದ್ಧವಾಗಿದ್ದೀಯಾ?' ಎಂದು ಆಪ್ಟೆ ಕೇಳಿದನು ಇದ್ದೇನೆ ಎಂದೆ ಆಮೇಲೆ ನಾನು ಮತ್ತು ಶಂಕರ ಪ್ರಾರ್ಥನಾ ಸಭೆಗೆ ಹೋದೆವು ಆಪ್ಟೆಯು ಮದನಲಾಲನ ಜೊತೆ ಮೇಲೆ ಕೈಹಾಕಿ 'ಜೊರ್' ಎಂದನು ಮದನ ಲಾಲನು ಗನ್‌ಕಾಟ್ ಸ್ಯಾಬ್ ಇಟ್ಟಿದ್ದ ಜಾಗಕ್ಕೆ ಹೋದನು

ಆಮೇಲೆ ಶಂಕರ, ಕರ್ಕಾರೆ ಮತ್ತು ನಾನು ಪ್ರಾರ್ಥನಾ ಸಭೆಗೆ ಬಂದೆವು ಬಂದ ಮೂರು ನಾಲ್ಕು ನಿಮಿಷಗಳಲ್ಲಿ ಭಾರೀ ಆಸ್ಫೋಟನೆಯೊಂದು ಕೇಳಿಸಿತು ಆಗ ನಾನು! ಗಾಂಧೀಜಿಯಿಂದ ಕೇವಲ ಹದಿನೈದು ಇಪ್ಪತ್ತು ಹೆಜ್ಜೆ ದೂರದಲ್ಲಿದ್ದೆ ಗಾಂಧೀಜೀ ಎಡಪಾರ್ಶ್ವ ದಿಂದ ಬಿಳಿ ಹೊಗೆ ಬರುತ್ತಿದ್ದುದನ್ನು ನೋಡಿದೆ ಆ ಕಡೆ ಹಲವರು ಓಡಿದರು

ಜನರು ಕಾಂತಿಯಿಂದಿರಬೇಕೆಂದು ಮಹಾತ್ಮರು ತಮ್ಮ ಕೈಯೆತ್ತಿ ಸೂಚಿಸಿದರು ನಾನು ಸ್ವಲ್ಪವಾಗಿ ನಿಂತಿದ್ದೆ ಐದು ನಿಮಿಷಗಳಲ್ಲಿ ಮದನಲಾಲನ ದಸ್ತಗಿರಿ ಘೋಷಣೆ

ಪೋಲೀಸರು ನನ್ನ ಕಡೆ ಬರುತ್ತಿದ್ದರು ಇವನ್ನು ಕಂಡು ದಸ್ತಗಿರಿಯಾಗುವೆನೆಂದು ಹೆದರಿ ಹಿಂದೂಮಹಾ ಸಭೆಯ ಆಕೇರಿಗೆ ತೆರಳಿದೆ ಗೋಡ್ಸೆ, ಆಪ್ಟೆ ಕರ್ಕಾರೆ ಇವರುಗಳಿಗೇನಾಯಿತೆಂಬುದು ನನಗೆ ಗೊತ್ತಾಗಲಿಲ್ಲ

ಮಹಾಸಭೆಗೆ ಬಂದ ಮೇಲೆ ಶಂಕರನ ಒಳಿಯಿದ್ದ ಗ್ರೆನೇಡ್‌ಗಳನ್ನು ಹಿಂದುಗಡೆ ಇದ್ದ ಜಂಗಲಿನಲ್ಲಿ ಬಿಸಾಡು ಎಂದೆ ನಾನು ಹಾಸಿಗೆ ಕಟ್ಟುತ್ತಿದ್ದಾಗ ಗೋಡ್ಸೆ ಮತ್ತು ಆಪ್ಟೆ ಬಂದರು ಏನಾಯಿತು? ಎಂದು ಆಪ್ಟೆ ಕೇಲದ ಕೋಪದಿಂದ ನೀವಿಲ್ಲಿಂದ ಹೊರಡಿ ಎಂದೆ ಆವರು ಕೂಡಲೇ ಹೊರಟು ಹೋದರು

ಆಮೇಲೆ ಅಲ್ಲಿಂದ ರೈಲ್ವೆ ಸ್ಟೇಷನ್ನಿಗೆ ಬಂದು ಪೋಲಾಯಿಗೆ ಹೋದೆವು ಜನವರಿ ೩೦ನೇ ತಾ|| ಮಧ್ಯಾಹ್ನ ಪೂನಾ ತಲ್ಪಿದೆವು ೩೧ನೇ ತಾರೀಖು ನನ್ನ ದಸ್ತಗಿರಿಯಾಯಿತು

ವರ್ತಮಾನ ಸಂಗ್ರಹ

ಸಯಸ್ಕರ ವಿದ್ಯಾಭ್ಯಾಸಕ್ಕಾಗಿ ಮದ್ರಾಸ್ ಪ್ರಾಂತದಲ್ಲಿ ಯೋಜನೆ

ಮದ್ರಾಸ್ ಪ್ರಾಂತದಲ್ಲಿ ಅನಕ್ಷರತೆಯನ್ನು ಪೂರ್ಣವಾಗಿ ನಿರ್ಮೂಲ ಮಾಡಲು ಒಂದು ಯೋಜನೆಯನ್ನು ತಯಾರಿಸಲು, ಮಂತ್ರಿಮಂಡಲದ ಉಪಸಮಿತಿಯನ್ನು ರಚಿಸಲಾಗಿದೆ ಈಗ ತಯಾರಾಗುವ ಯೋಜನೆಯ ಪ್ರಕಾರ ಇನ್ನು ೧೦ ವರ್ಷಗಳಲ್ಲಿ ಮದ್ರಾಸ್ ಪ್ರಾಂತದಲ್ಲಿ ಎಲ್ಲರೂ ಅಕ್ಷರಸ್ಥರನ್ನಾಗಿ ಮಾಡಲಾಗುವುದು

ಹೈದ್ರಾಬಾದಿಗೆ ಶಸ್ತ್ರಗಳ ರವಾನೆ

ಪೂನಾ ದಂಡಿನ ಪ್ರದೇಶದಲ್ಲಿ ಒಂದು ಮನೆಯ ಮೇಲೆ ಧಾಳಿಯಿಟ್ಟ ಪರಿಣಾಮವಾಗಿ ಅಲ್ಲಿಯ ಪೋಲೀಸ್ ನವರು ತ್ಸಾಲ್ಕರೆನ್ನು ಸೆರೆ ಹಿಡಿದಿದ್ದಾರೆ ಸೈನ್ಯಗಣ್ ಒಂದು ಆರ್ಮಿ ಲಿಲಿಕ್ಸೋಸ್, ಹಾಗೂ ಯುದ್ಧ ಸಾಮಗ್ರಿ ಗಳನ್ನು ಪತಸಡಿಸಿಕೊಂಡಿದ್ದಾರೆ ಸೆರೆ ಹಿಡಿದವರಲ್ಲಿ ಇಬ್ಬರು ಆಂಗ್ಲೋ ಇಂಡಿಯನ್ನಿದ್ದಾರೆ. ಅವರಲ್ಲಿ ಒಬ್ಬ ಮಾಜಿ ಸೈನಿಕನಾಗಿದ್ದಾನೆ ಒಬ್ಬ ಮುಸ್ಲಿಂ, ಇನ್ನೊಬ್ಬ ಕ್ರಿಶ್ಚಿಯನ್, ಇದರಿಂದ ಹೈದರಾಬಾದಿಗೆ ಶಸ್ತ್ರ ಸಾಮಗ್ರಿ ಗಳನ್ನು ಕಂಡೊಯ್ಯುತ್ತಿರುವ ಗ್ಯಾಂಗನ್ನು ಹಿಡಿದು ಅವರನ್ನು ಬಂಧಿಸಲು ಸಹಾಯವಾಗಿದೆ

ಭಾರತ ಸರ್ಕಾರವು ಆಸ್ಟ್ರೇಲಿಯಾ ಸರ್ಕಾರಕ್ಕೆ ಪ್ರತಿಭಟನೆ ಸೂಚಿಸಿದೆ

ಆಸ್ಟ್ರೇಲಿಯನ್ ವೈನಾಫಿಕನಾದ ಸಿಡ್ನಿ ಕಾಟನ್ ಎಂಬವನು ಕರಾಚಿಯಿಂದ ಭಾರತ ಪ್ರದೇಶವನ್ನು ಹಾಟಿಕೊಂಡು ವೈದರಾಬಾದಿಗೆ ವಿಮಾನದಲ್ಲಿ ಹೋಗು ವಾಗ, ಸುಂಕದ ತನಿಖೆಗಾಗಿ ಭಾರತದಲ್ಲಿ ಎಲ್ಲೂ ಇಳಿಯದೆ ನೇರವಾಗಿ ವಿಮಾನವನ್ನು ಹಾರಿಸಿದುದರಿಂದ ಚಿಕಾಗೋ ಅಂತರ ರಾಷ್ಟ್ರೀಯ ವಿಮಾನ ಸಂಚಾರದ ಒಪ್ಪಂದವನ್ನು ಸ್ಪಷ್ಟವಾಗಿ ಉಲ್ಲಂಘಿಸಿದಂತಾಗಿದೆ ಎಂದು ಭಾರತ ಸರ್ಕಾರವು ಆಸ್ಟ್ರೇಲಿಯನ್ ಸರ್ಕಾರಕ್ಕೆ ತನ್ನ ಪ್ರತಿಭಟನೆಯನ್ನು ಸೂಚಿಸಿದೆ

ಹೈದ್ರಾಬಾದಿಗೆ ಶಸ್ತ್ರ ಸಹಾಯ ಮಾಡುತ್ತಿದ್ದ ಇಬ್ಬರು ಬೊಂಬಾಯಿ ಮ್ಯಾಜಿಸ್ಟ್ರೇಟ್‌ಗಳ ದಸ್ತಗಿರಿ

ಹೈದ್ರಾಬಾದಿಗೆ ಶಸ್ತ್ರಾಸ್ತ್ರಗಳನ್ನು ಕಳಿಸಿಕೊಡುವ ಕಾರ್ಯವನ್ನು ಕೈಕೊಂಡಿರುವ ನೈಜಾಂ ಗೂಢಚಾರಿಗಳೆ ಬೊಂಬಾಯಿಯ ಇಬ್ಬರು ಮ್ಯಾಜಿಸ್ಟ್ರೇಟರು ಸಹಾಯ ಮಾಡುತ್ತಿದ್ದುದನ್ನು ಸಿ ಐ ಡಿ ಶಾಖೆಯವರು ಕಂಡು ಹಿಡಿದು ಅವರನ್ನು ದಸ್ತಗಿರಿ ಮಾಡಿದ್ದಾರೆ ಯೂರಿಯನ್ ಸರ್ಕಾರದ ರವ್ಯೆನೆಯನ್ನು ಪಡೆದು ಹೈದ್ರಾಬಾದಿ ನೊಂದಿಗೆ ವಿಕರಿ ಮಾಡುತ್ತಿರುವ ಇನ್ನೂ ಅನೇಕ ಜನ ಗಣ್ಯ ವ್ಯಕ್ತಿಗಳಿಗೆಹಿಕೊಂಡಿರುವರೆಂದು ಬೊಂಬಾಯಿ ಸಿ ಐ ಡಿ ಗಳು ಇಚ್ಚೆಪಡ್ಡಿಯೇ ದಸ್ತಗಿರಿ ಮಾಡಿ ಅವರ ವಿಕಾರಿ ಕಾರ್ಯಕ್ರಮವನ್ನು ಹೊರಗೆಡುವುದ ರಲ್ಲಿದ್ದಾರೆ

ಪಾಕಿಸ್ತಾನದಲ್ಲಿ ಹೆಂಡದಂಗಡಿಯ ಮುಂದೆ ಮುಷ್ಕರ

ಪಾಕಿಸ್ತಾನದಲ್ಲಿ ಹೆಂಡ ಕುಡಿಯುವ ದುರಭ್ಯಾಸ ವನ್ನು ತಡೆಗಟ್ಟುತ್ತಲು ಸರ್ಕಾರದವರು ಕ್ರಮ ತೆಗೆದುಕೊಳ್ಳ ದಿದ್ದರೆ, ಹೆಂಡದಂಗಡಿಗಳ ಮುಂದೆ ಮುಷ್ಕರ ಹೂಡುವೆ ವಾಗಿ ಅಲ್ಲಿಯ ಮುಸ್ಲಿಂ ಲೀಗಿನ ಸ್ವಯಂಸೇವಕರು ತಿಳಿಸಿದ್ದಾರೆ

ಸ್ವೀಕಾರ

ರಾಯಚೂರು ಡಿ|| ಸಿಂಧನೂರು ತಾ|| ರೊಡಕುಂದಿ ಹಿರೇಮಠದ ವೇ|| ವೀರಭದ್ರಯ್ಯನವರ ಪುತ್ರ ಚಿ|| ಪಂಚಾಕ್ಷರಶಾಸ್ತ್ರಿಗೂ ಬಂಗೇರಿ ಮಠದ ವೇ|| ರುದ್ರಾರಾಧ್ಯರ ಪುತ್ರಿ ಚಿ|| ಸ || ಗುರುಸಾದಮ್ಮನಿಗೂ ಮತ್ತು ವೇ|| ಬಿ ಎಂ ರುದ್ರಾರಾಧ್ಯರ ಜ್ಯೇಷ್ಠ ಪುತ್ರ ಬಿ ಎಂ ವೀರೇಶ್ವರಶಾಸ್ತ್ರಿಗಳಿಗೂ ಪ್ರಕಾನಾಳ ಹಿರೇಮಠರ ವೇ|| ಚನ್ನಮಲ್ಲಯ್ಯನವರ ಪುತ್ರಿ ಚಿ|| ಸೌ|| ಸಂಗಮ್ಮನಿಗೂ ನಿರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣ ಕ್ಕೋಸ್ಕರ ಸಮರ್ಪಿಸಿದ 2 ರೂ ಮತ್ತು ಸಿಂಧನೂರು ತಾ|| ಕಲ್ಲೂರು ಗ್ರಾಮದಲ್ಲಿ ನೆರವೇರಿದ ದೀಕ್ಷಾ ಸಮಯ ದಲ್ಲಿ ಸಮರ್ಪಿಸಿದ 2 ರೂ ಒಟ್ಟು 4 ರೂ ಗಳು ವೇ|| ಬಿ ಎಂ ವೀರೇಶ್ವರಶಾಸ್ತ್ರಿಗಳವರ ದ್ವಾರಾ ತಲಪಿರುತ್ತವೆ

ಬೆಳಗಾಂ ಡಿ|| ಗಿರಿಯಾಲ ಗ್ರಾಮದಲ್ಲಿರುವ ಮ||ರಾ|| ಗುಂಡೂರಿ ಗಂಗಾಧರಪ್ಪನವರು ತಮ್ಮ ಪುತ್ರನ ಜನನ ನಕ್ಷತ್ರದೋಷ ಶಾಂತಿಯಮ್ಮ ನೆರವೇರಿಸುವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂ ಯನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನಾಯಲೆಂದು ಹಾರೈಸುತ್ತೇವೆ

ಗಂಗಾ ನದಿಯಲ್ಲಿ ೧೦೫ ಜನರ ಜಲಸಮಾಧಿ!

ಈ ತಿಂಗಳು ೧೯ ನೆಯ ತಾರೀಖಿನ ದಿವಸ ಕೆಲಸ ಗಾರರನ್ನು ವಹಿಸ್ಕೊಳ್ಳಿದ್ದ ದೋಣಿಯೊಂದು ಗಂಗಾನದಿಯ ಮಧ್ಯದಲ್ಲಿ ಮುಳುಗಿಹೋದುದರ ಪರಿಣಾಮವಾಗಿ ೧೦೫ ಜನರು ಜಲಸಮಾಧಿಯಾದರು ಪ್ರಯಾಗದಲ್ಲಿ ಗಂಗಾ ಮತ್ತು ಯಮುನಾ ನದಿಗಳ ಸಂಗಮಕ್ಕೆ ಕೇವಲ ೩ ಮೈಲಿಗಳ ದೂರದಲ್ಲಿ ಈ ದುರಂತ ಘಟನೆ ಸಂಭವಿಸಿತು

ಮರಣದಂಡನೆ ರದ್ದಾಗಬಾರದು

ಮರಣದಂಡನೆಯನ್ನು ರದ್ದುಮಾಡಬೇಕೆಂದು ಬ್ರಿಟಿಷ್ ಶಾಸನ ಸಭೆಯಲ್ಲಿ ಒಂದು ಮಸೂದೆಯನ್ನು ತರಲಾಗಿತ್ತು. ಈ ವಿಷಯವಾಗಿ ವಿಶೇಷ ಚರ್ಚೆಯಾಯಿತು ಕಡೆಯಲ್ಲಿ ಕೆಲವು ಗೀತಿಯ ಕೊಲೆಯ ಆಪಾದನೆಗಳಿಗೆ ಮರಣದಂಡನೆ ವಿಧಿಸಬೇಕೆಂದು ಶಾಸನ ಸಭೆಯು ಬಹು ಮತದಿಂದ ತೀರ್ಮಾನಿಸಿತು

ಭಾರತ ಸರ್ಕಾರಕ್ಕೆ ನಿಜಾಂ ಸರ್ಕಾರದ ಪ್ರತಿಭಟನೆ

ಭಾರತ ಸರ್ಕಾರದವರು ಹೈದರಾಬಾದಿನ ಮೇಲೆ ಹಾಕಿರುವ ಆರ್ಥಿಕ ದಿಗ್ಬಂಧನವು ನ್ಯಾಯಬಾಹಿರವಾದು ದೆಂದು ನಿಜಾಂ ಸರ್ಕಾರವು ಭಾರತ ಸರ್ಕಾರಕ್ಕೆ ಪ್ರತಿಭಟನ ಪತ್ರವನ್ನು ಬರೆದಿದೆ ರಿಸರ್ವ್ ಬ್ಯಾಂಕಿನವರು ಹೈದರಾಬಾದಿನ ಬಗ್ಗೆ ಕೈಗೊಂಡಿರುವ ಕ್ರಮವು ಸ್ವಾಂಡ್ ಸ್ಟಿಲ್ ಒಪ್ಪಂದಕ್ಕೆ ತೀವ್ರವಿರುದ್ಧವಾಗಿದೆ ಯೆಂದು ಆ ಪತ್ರದಲ್ಲಿ ಸೂಚಿಸಲಾಗಿದೆ

ಹೈದರಾಬಾದ್ ಸರ್ಕಾರದವರು ಪಾಕಿಸ್ತಾನ್ ಸರ್ಕಾರಕ್ಕೆ ವರ್ಷಾಯಿಂ ಬಾಂಡ್‌ಗಳು ಹೈದರಾಬಾದ್ ಕರೆನ್ಸಿ ಶಾಸನಗಳ ಕಿವ್ವುಪಡಿ ಮುಂತಾದ ವಿಚಾರಗಳನ್ನು ಇತ್ಯರ್ಥ ಮಾಡಲು ಭಾರತ ಸರ್ಕಾರದೊಂದಿಗೆ ಜರ್ಚಿಸಿ ಒಪ್ಪಂದಕ್ಕೆ ಬರಲಾಯಿತು ದಷ್ಟಲಿಯಲ್ಲಿ ಆದ ಒಪ್ಪಂದಕ್ಕೆ ಅನುಗುಣವಾಗಿ ನಿಜಾಂ ಸರ್ಕಾರದವರು ಕ್ರಮ ಕೈಗೊಂದರು ಈ ಒಪ್ಪಂದಕ್ಕೆ ವಿರುದ್ಧವಾಗಿ ಭಾರತ ಸರ್ಕಾರದವರು ಹೈದರಾಬಾದಿಗೆ ಸೇರಿದ ಇಂಡಿಯ ಸೆಕ್ಯೂರಿಟಿಗಳ ವರ್ಗಾವರಣಕ್ಕೆ ಪ್ರತಿ ಬಂಧಕ ಹಾಕಿರುವುದು ನ್ಯಾಯವಿರುದ್ಧವಾಗಿದೆ ಮತ್ತು ಭಾರತವು ಆರ್ಥಿಕ ದಿಗ್ಬಂಧನವನ್ನು ಬಿಗಿಗೊಳಿಸಿರುವುದರಿಂದ ನಿಜಾಂ ಸರ್ಕಾರದವರು ಆಡಳಿತ ಯಂತ್ರವು ಕುಸಿದು ಬೀಳುವಂತೆ ಮಾಡುವುದೇ ಈ ಕ್ರಮದ ಉದ್ದೇಶವೆಂದು ಪತ್ರಿಕೆಗಳಲ್ಲಿ ವಿಮರ್ಶೆ ಬಂದಿದೆ ಎಂಬುದಾಗಿ ನಿಜಾಂ ಸರ್ಕಾರದ ಪ್ರತಿಪಾದನೆಯೊಂದು ತಿಳಿಸುತ್ತದೆ

ಶಿವಮೊಗ್ಗಾ ಜೈಲಿನಿಂದ ಐವರು ಖೈದಿಗಳ ಪರಾರಿ

ಶಿವಮೊಗ್ಗಾ ಜೈಲಿನಿಂದ ಐದು ಮಂದಿ ಖೈದಿಗಳು ಪರಾರಿಯಾಗಿರುವರೆಂದು ವರದಿಯಾಗಿದ ಮರಿದಾಸ್ ಸತ್ಯ ದೇವರಾಜ ಅರಸ್ ಮತ್ತು ಶ್ರೀನಿವಾಸನ್ ಈ ನಾಲ್ವರು ಕಮ್ಯೂನಿಸ್ಟರು ಮತ್ತು ಮಿಗಾಸಾ ಎಂಬ ಶಿಕ್ಷಿಗೆ ಗುರಿಯಾಗಿರುವ ಖೈದಿ ಪೈಲು ಗೋಡೆಯಲ್ಲಿ ಕನ್ನ ಕೊರೆದು ತಪ್ಪಿಸಿಕೊಂಡಿರುವರು ಎಂದು ಹೇಳಲಾಗಿದೆ ಸೋಲೀಸರು ಬಲವಾದ ಪತ್ತೆ ಕ್ರಮ ನಡೆಸುತ್ತಿದ್ದಾರೆ

ಸಿದ್ಧಾಂತ ಶಿಖಾಮಣಿ

ವೀರಶೈವಮತದಲ್ಲಿ ಜಗದ್ಗುರುಗಳಾದ ಪ್ರಾತಃ ಸ್ಮರಣೀಯರೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣಪ್ರದವಾಗಿರುವುದು ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ದ್ವಿಜೋತ್ತಮರಾದ ಆಸ್ಥಾನ ವಿದ್ವಾಂಸರಿಗೆ ವೀರಶೈವಮತಾಂತರ್ಗತ ಉಪದೇಶಾಸಾರದ ವಿಷಯವು ಪ್ರತಿಪಾದಿಸಲ್ಪಟ್ಟಿದೆ. ವೀರಶೈವಮತಕ್ಕೆ ಸಕ್ಷ ಪ್ರಮಾಣಕವಾಗಿರುವ ಸಿದ್ಧಾಂತಶಿಖಾಮಣಿಗ್ರಂಥವು ಪೂರ್ವಾಚಾರ್ಯರಿಂದ ಬಂದು ಪುರಾತನವಾಗಿರುವ ಗ್ರಂಥವೆಂದು ಸಿದ್ಧಾಂತಿಸಿಕೊಂಡು ಬರುತ್ತಿರುವುದು ಗ್ರಂಥವು ಈಗ್ಗೆ ಸುಮಾರು ೩೦೦ವರ್ಷಗಳ ಹಿಂದೆ ವೀರಶೈವ ಪೂರ್ವಾಚಾರ್ಯರಾದ ಶ್ರೀಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರು ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವರ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಒಂದು ವ್ಯಾಖ್ಯಾನದಲ್ಲಿಂತಾದರೂ ಗೂಢಾರ್ಥಗಳಿರುತ್ತವೆ ಶ್ಲೋಕಗಳಿಗೆ ಸರಿಯಾದ ಅರ್ಥವನ್ನು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವದಕ್ಕಾಗಿ **ಹಿಂದಿ ಶ್ರೀಕಾಶೀ ಶಾಸ್ತ್ರಿಗಳವರು** ಇಂಥಕ್ರಮವಹಿಸಿ ಈ ಗ್ರಂಥಕ್ಕೆ ಈ ಭಾಷೆಯಲ್ಲಿ ಒಂದು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವು ಒಂದಿಮೂರಿಮಮೇಲೆ ಪ್ರಕಾಶಕರು ವ್ಯಾಖ್ಯಾನದ ಮುದ್ರಣವು ಸಂಪೂರ್ಣವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜ ಮ್ಮದುರೇಣುಕಾಚಾರ್ಯರ ಲೀಲಾಕ್ಷರಮುಷ್ಟಿಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈಬಳ್ಳಕ್ಕರಮಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಆವಶ್ಯಕವಾಗಿ ಓದಬೇಕು **ಬೆಲೆ ೨ ರೂಪಾಯಿ**

ಸಿದ್ಧಾಂತಗ್ರಂಥಗಳು ಮತ್ತು ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)			೧ ಆಣೆ
ಸಂಧ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)			೧ ಆಣೆ
ಪಂಚವಿಂಶತಿ ಪ್ರಶ್ನ ಪ್ರಕಾಶ (೫ನೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ			೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)			೨ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ)			೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)			೨ ಆಣೆ
ಭಸ್ಮಾದಿಸಿದ್ಧತತ್ವದರ್ಪಣ (೪ನೆಯ ಆವೃತ್ತಿ)			೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)			೨ ಆಣೆ
ಶ್ರೀಗುರುಪಾದ್ಯಪದಗಳು (೩ನೆಯ ಆವೃತ್ತಿ)		...	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ			೨ ಆಣೆ
ಶಿವತಕ್ತಿವಿಲಾಸ			೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ			೨ ಆಣೆ
ಬಲ್ವಮಾಹಾತ್ಮ್ಯ (೨ನೆಯ ಆವೃತ್ತಿ)			೨ ಆಣೆ
ಪಂಚಾಚಾರ್ಯಪ್ರಕಾಶ	...	...	೩ ಆಣೆ
ಪಂಚಾಚಾರ ಪ್ರಕಾಶಿಕಾ		...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)		...	೪ ಆಣೆ
ಲಿಂಗಧಾರಣವಿಧಿ	...	...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)		...	೪ ಆಣೆ
ಶ್ರೀಪಟಿಮೆಂಡಿಶಾಸ್ತ್ರಿಯ ಕಾಲನಿರ್ಣಯ	..	...	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)		...	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ		.....	೪ ಆಣೆ
ವೈದಿಕವಾಙ್ಮಯರಹಸ್ಯ	.....	...	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಶ್ಶಿರೀಕರಣ (೩ನೆಯ ಆವೃತ್ತಿ)		.....	೬ ಆಣೆ
ವೀರಶೈವಾಂಶ್ಯಿಷ್ಟಿ-ಶ್ರಾದ್ಧವಿಧಿ		.....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಸೂತ್ರ ಚತುಸ್ಸೂತ್ರ)		.....	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)			೮ ಆ
ವೀರಶೈವಮತಪ್ರಾಮಾಣ್ಯರು			೮ ಆ
ಬಸವಧ್ಯಾಂತವಿವಾರ (೩ನೆಯ ಆವೃತ್ತಿ)		...	೮ ಆ
ಆಗಮಾರ್ಥಜ್ಞಾನ			೮ ಆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆ
ಸಿದ್ಧಾಂತಸಾರಾವಳಿ (ಶ್ರೀಮೋಜನಶಿವಾಚಾರ್ಯಕೃತ)			೧೨ ಆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ			೧೨ ಆ
ಶಿವಾಸೂತ್ರಸಿದ್ಧಾಂತದರ್ಪಣ			೧೨ ಆ
ಶ್ರೀಜಗದ್ಗುರು ಪಂಚಾಚಾರ್ಯರ ವ್ಯಾಪ್ತಿಚೇನತ್ವ			೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ಮರಯುಕ್ತವಾದುದು ೨ನೆಯ ಆವೃತ್ತಿ)			೧ ರೂ
ಶ್ರೀಕರಭಾಷ್ಯಂ (ಶಾಸ್ತ್ರಾಸ್ತ್ರಿಂ)			೧॥ ರೂ
ವೀರಶೈವರತ್ನ (೩ನೆಯ ಆವೃತ್ತಿ ೩೦ ಮಹತ್ವದ ಫೈಟೋಗ್ರಾಫುಗಳು)			೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪದ್ಯದ)			೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ವ್ಯಾಖ್ಯಾನಸಹಿತ)			೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)			೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)			೪ ರೂ
A brief life-sketch of Pandit Sri Kashinat' a Shastriji (*English*)			4 As
The Philosophical Aspect of Virasaivism (*English*)			8 As
Speeches by Pandit Shri Kashinatha Shastriji (*English*)			12 As
ಶಿವಾಚಾರಚಂದ್ರಿಕಾ (ಉರ್ದು)			೩ ಕ
ಶಿವಸಿದ್ಧಾಂತ (ಮರಾಠಿ)			೧ ರೂ ೪ ಕ
ಪ್ರಾಣಾಚಾರಪ್ರಕಾಶಿಕಾ (ಶಿವಸಿದ್ಧಾಂತ-ತೆಲುಗು)			೧ ರೂ ೪ ಕ
ಶಿವಸಿದ್ಧಾಂತಚಂದ್ರಿಕಾ (ತೆಲುಗು)			೨ ರೂ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No M 2266 ಶ್ರೀಚಾಮರಾಜೇಂದ್ರ ಪಂಚಾಂಗಾರ್ಯಾಃ ಪ್ರಸೀದಂತು REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಸ್ವಕಟೆನಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಕರಪ್ರೇಮಂಚಲಿಂಗೈ ದೈವರ್ ॥
ಪಂಚಾಚಾರಪಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ ಪಂಚಾಂಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ವೈದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ೨ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ನೇ ಆಗಸ್ಟ್ ೧೯೪೪ [ಸಂಚಿಕೆ ೧೨

ಕನ್ನಡ ರಂಗಭೂಮಿಯ ಶತಮಾನೋತ್ಸವ ಸಮಾರಂಭದಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿದ ಭಾಷಣ

ಕನ್ನಡ ರಂಗಭೂಮಿಯ ಶತಮಾನೋತ್ಸವವೂ ಗುಬ್ಬಿ ನಾಟಕ ಮಂಡಲಿಯ ವಜ್ರೋತ್ಸವವೂ ಜರಿಪ ತಿಂಗಳು ೨೬ ನೆಯ ತಾರೀಖು ಸೋಮವಾರ ದಿವಸ ಮೈಸೂರಿನಲ್ಲಿರುವ ದಸರಾ ವಸ್ತುಪ್ರದರ್ಶನಾಲಯದಲ್ಲಿ ಬಹುವಿಜೃಂಬಣೆಯಿಂದ ನೆರವೇರಿದವು ಆಗ್ಗೆ ಮಹಾಪ್ರಭುಗಳವರು ಈ ಉತ್ಸವದ ಸ್ವಾರಂಭೋತ್ಸವವನ್ನು ನೆರವೇರಿಸಿ ಈ ರೀತಿ ಭಾಷಣ ಮಾಡಿದರು

ಕನ್ನಡ ಭಾಷೆಯು ಮಧುರವಾದ ಮತ್ತು ಇಂಪಾದ ಭಾಷೆಯೆಂದು ಪ್ರಸಿದ್ಧವಾಗಿರುವುದು ಯುಕ್ತವಾಗಿಯೇ ಇದೆ ಕರ್ನಾಟಕ ಸಂಗೀತದ ಖ್ಯಾತಿಯು ನಮ್ಮ ನಾಡಿನಿಂದ ಆಚೆಗೂ ಬಹು ದೂರ ವ್ಯಾಪಿಸಿದೆ ಕೀರ್ತಿಶೇಷರಾದ ನಮ್ಮ ಪೂರ್ವಿಕರು ಕನ್ನಡ ಭಾಷೆಯ ವಿಚಾರವಾಗಿಯೂ ಮತ್ತು ಕನ್ನಡ ಸಾಹಿತ್ಯದ ವಿಚಾರವಾಗಿಯೂ ಪ್ರೇನುವನ್ನೂ ಗೌರವವನ್ನೂ ತೋರಿಸಿದ್ದಾರೆ ಅವರಲ್ಲಿ ಕೆಲವರಂತೂ, ಗ್ರಂಥರಚನೆಯಲ್ಲಿ ಖ್ಯಾತಿಯನ್ನು ಗಳಿಸಿದ್ದಾರೆ ಕನ್ನಡ ಸಾಂಡಿತ್ಯಕ್ಕೂ ಮತ್ತು ಲಲಿತ ಕಲೆಗಳಿಗೂ ಅವರು ಪ್ರೋತ್ಸಾಹವನ್ನು ಕೊಟ್ಟಿರುವುದಕ್ಕೆ, ಅವರಿಗಿದ್ದ ಬಾಹ್ಯಾಭಿಮಾನವೇ ಕಾರಣವಾಗಿದೆ ಸಂಸ್ಕೃತ ಭಾಷೆಯ ಪ್ರತಿತಕ್ಕ ಕೆಲವು ಪವಿತ್ರ ಗ್ರಂಥಗಳ ಕನ್ನಡಕ್ಕೆ ಭಾಷಾಂತರವಾಗಿ ಅರಮನೆಯಿಂದ ಪ್ರಕಟವಾಗುವಂತೆ ವರ್ಸಡಿಸಿರುವುದು ನಮ್ಮ ಸುಯೋಗವೆಂದೂ ಮತ್ತು ಕರ್ತವ್ಯವೆಂದೂ ಭಾವಿಸಿದ್ದೇನೆ ಈ ಗ್ರಂಥಗಳಿಂದ ನಮ್ಮ ಜ್ಞಾನ ಭಂಡಾರವು ವರ್ಷ ವರ್ಷವೂ ವೃದ್ಧಿಯಾಗಲು ಕಾರಣವಾಗಿದೆ

ನಾಟಕವು ನೋಟ್ಟನೋದಲು ನಮ್ಮ ದೇಶದಲ್ಲೇ ಪ್ರಾರಂಭವಾಯಿತೆಂಬುದನ್ನು ನಿಸ್ಸಂದೇಹವಾಗಿ ಸಾಧಿಸುವುದು ಎಷ್ಟುಮಟ್ಟಿಗೆ ಸಾಧ್ಯವೆಂಬುದನ್ನು ಹೇಳುವಂತಿಲ್ಲ ಆದಾಗ್ಯೂ, ನಮ್ಮ ದೇಶದಲ್ಲಿ ನಾಟಕವು ಸ್ವಾಭಾವಿಕತೆಯಲ್ಲಿ ಯಾವ ದೇಶದ ಯಾವ ಭಾಷೆಯ ನಾಟಕಕ್ಕಿಂತಲೂ ಕಡಿಮೆಯಿಲ್ಲವೆಂದು ಸಾರಾಳವಾಗಿ ಹೇಳಬಹುದಾಗಿನೆ ಕವಿಗಳೂ ಮತ್ತು ನಾಟಕ ಕರ್ತರೂ, ಮಾನವ ವರ್ಗದ ಹಿತಚೋಧಕರಲ್ಲಿ ಅತ್ಯಂತ ಶ್ರೇಷ್ಠರಾದವರ ಗುಂಪಿಗೆ ಸೇರಿದವರಾಗಿದ್ದಾರೆ ಪಾಶ್ಚಾತ್ಯ ವಿದ್ವಾಂಸನೊಬ್ಬನು ನನಗೆ ಜನಪದ ಗೀತೆಗಳನ್ನು ಬರೆಯುವ ಅವಕಾಶ ದೊರೆತರೆ ನಾಕು ನ್ಯಾಯ ನಿಬಂಧನೆಗಳನ್ನು ಯಾರು ರಚಿಸುವರೆಂಬ ಚಿಂತೆಯೇ ಆಗ್ಗೆ ನನಗಿರ ವುದಿಲ್ಲ ಎಂದ ಹೇಳಿದ್ದಾನೆ ಕವಿಗಳ ಮತ್ತು ನಾಟಕ ಕರ್ತರ ಗುಣಗಳು ಎಷ್ಟು ಪರಿಣಾಮಕರವಾಗಿರ ತ್ತವಂಬ ವಿಷಯವನ್ನು ಅತನ ಮಾತುಗಳಿಂದ ವ್ಯಕ್ತವಾಗುತ್ತದೆ ವ್ಯಸೂರು ಸಂಸ್ಥಾನದಲ್ಲಿ ಕಾವ್ಯಕಲೆಯ ವೃದ್ಧಿ ಹೊಂದುತ್ತಾ ಬಂದಿರುವುದನ್ನು ಕಂಡ ನವಗೆ ಹೆಮ್ಮೆಯು ಂಟಾಗಿದೆ ಮುಂದೆ ಸನ್ನಿವೇಶಗಳು ಬೇಗಬೇಗನೆಲೂ ಮತ್ತ ಕೆಲವು ನೆಲೆ ಅನಿರೀಕ್ಷಿತವಾಗಿ ತೋರುವಂತೆಯೂ ಮಾರ್ಪಟ್ಟಿರಬೆಪ್ಪ, ಶ್ರೇಷ್ಠವಾದ ಮತ್ತು ವನ್ನೋಮೋಹಕವಾದ ತಮ್ಮ ಕಲಾಕೌಶಲ್ಯವನ್ನು ತೋರಿಸಲು ಕವಿಗಳಿಗೆ ಪೂರ್ಣವಾದ ಅವಕಾಶ ದೊರಯುತ್ತದೆಂದು ನಾವು ನಂಬಿದ್ದೇವೆ ಜನಗಳ ಭಾವನೆಗಳಲ್ಲಿಯೂ ಜೀವನ ವಿಮರ್ಶೆಯ ವಿಷಯದಲ್ಲಿಯೂ ಮತ್ತು ಸಾಮಾಜಿಕ ವ್ಯವಸ್ಥೆಗಳಲ್ಲಿಯೂ ವ ಹತ್ತರವಾದ ಬದಲಾವಣೆಗಳು ನಡೆದ ಕಾಲಗಳೇ ಕಾವ್ಯಗಳ ಉತ್ಕರ್ಷದ ಸುವರ್ಣ ಯುಗಗಳಿಗೆ ಸಿಂದೆ ಅನೇಕ ದೇಶಗಳಲ್ಲಿ ಕಂಡ ಒಂದಿದ

ಅಂಧ ಕಾಲಗಳಲ್ಲಿ ನಾಟಕಗಳು ಮತ್ತಷ್ಟು ಪರಿಣಾಮಕರವಾಗಿರುತ್ತವ ಸಕಿಂದರೆ, ಉತ್ತಮವಾದ ಸುಧಾರಣೆಗಳ ನಡೆಯಿವ ರೀತಿಯಲ್ಲಿ ಜನ ಜೀವನವನ್ನು ಹೊಂದಿಸುವಹಾಗೆ ಸೂಕ್ತವಾದ ನೂತನ ಮಾರ್ಗಗಳನ್ನು ಬೋಧಿಸುವುದೂ, ಮತ್ತು ಸಂತೋಷವನ್ನುಂಟುಮಾಡುವ ನ್ಯಾಯವಿಂಗಲೇ ಮಾಡುವುದೂ ನಾಟಕ ಪ್ರದರ್ಶನದಿಂದ ಸಾಧ್ಯವಾಗುತ್ತದ ಕನ್ನಡ ರಂಗಭೂಮಿಯೂ ಇತರ ರಂಗಭೂಮಿಗಳಂತೆಯೇ ಅಭಿವೃದ್ಧಿ ಹೊಂದಿದೆ, ಪ್ರಾಚೀನ ಕಾಲದ ಪ್ರಾಕೃತ ಸ್ಥಿತಿಯಿಂದ ಕ್ರಮ ಕ್ರಮವಾಗಿ ಅದು ಪರಿಷ್ಕರಣ ಹೊಂದಿದೆ ಆಲ್ಲದೆ ನಾಜೂಕಾದ ಮತ್ತು ಸೊಗಸಾದ ರಂಗಪರಿಕರ ದಿಂದ ತುಂಬಿ, ಶ್ರೇಷ್ಠವಾದ ಅಭಿನಯ ಕೌಶಲ ದಿಂದ ಶೋಭಿಸುವ ಮಟ್ಟಕ್ಕೆ ಏರಿದೆ ಸಾರ್ವ ಜನಿಕ ಜೀವನದ ಮೇಲೆ ಅದರ ಪ್ರಭಾವವು ಹೆಚ್ಚುತ್ತಿಲೇ ಬರುತ್ತಿದೆ ಮತಸಂಬಂಧವಾದ ತತ್ತ್ವಗಳನ್ನು, ಎಚ್ಚರೋಹವಾದ ಕನಿವಾಣೆಯಲ್ಲಿ ನಾಟಕ ರೂಪವಾಗಿ ರಂಗಭೂಮಿಯ ಮೇಲೆ ಪ್ರದರ್ಶನ ಮಾಡಿದಂಗ, ಅವುಗಳಿಂದ ಆಗ ವ ಪರಿಣಾವ ವು ಕೇವಲ ಬೋಧನೆಯಿಂದ ಆಗ ವುದ ಕ್ಕಿಂತಲೂ ಹಚ್ಚಿನದಂದ ಒಬ್ಬ ಪಾಶ್ಚಾತ್ಯ ಲೇಖಕ ಹೇಳಿದ್ದಾನೆ ಈ ದೇಶದಲ್ಲಿ ಪೌರಾಣಿಕ ಕಥೆಗಳಿಗೆ ಸಂಬಂಧಪಟ್ಟ ಚಲಚ್ಚಿತ್ರಗಳನ್ನು ಪ್ರದರ್ಶಿಸಿದಂಗ ಕ್ಷಾದು ತುಂಬುವ ಜನಸಂದಣಿಯನ್ನು ನೋಡಿದರೆ ಅತನ ಮಾತುಗಳು ನಿಜ ಸಂಬಂಧ ಸ್ವಷ್ಟವಾಗಿ ಗೊತ್ತಾಗುತ್ತದೆ, ಆಲ್ಲದೆ ಭಾರತೀಯರಲ್ಲಿ ಮಾತ್ರ ಗಳ ಮೇಲಿನ ಶ್ರದ್ಧೆಯು ಎಷ್ಟು ವ ಹತ್ತರವಾಗಿದೆಯೆಂಬುದೂ, ಆದರಿಂದ ವ್ಯಕ್ತವಾಗುತ್ತದೆ ಸೂಕ್ತವಾದ ಮಾರ್ಗಗಳಲ್ಲಿ ಸಮಾಜ ಸುಧಾರಣೆಗಳು ನಡೆಯುವುದು ಅವಶ್ಯಕವೆಂಬುದನ್ನು ತೋರಿಸುವ ಸಾಮಾಜಿಕ ನಾಟಕಗಳಿಂದಲೂ ಪೌರಾಣಿಕ ನಾಟಕಗಳಿಂದ ಆಗುವಷ್ಟೇ ಪರಿಣಾಮ ಉಂಟಾಗುತ್ತದೆ ನಮ್ಮ ದೇಶದಲ್ಲಿ ಈಚೆಗೆ ರಚಿಸಲಾಗಿರುವ ನಾಟಕಗಳನ್ನು ನೋಡಿದರೆ—ಮುಖ್ಯವಾಗಿ ಕರ್ನಾಟಕದ ಈಚಿನ ನಾಟಕಗಳನ್ನು ನೋಡಿದರೆ ಸಾಮಾಜಿಕ ನಾಟಕಗಳಿಗೂ ಪೌರಾಣಿಕ ನಾಟಕಗಳಂತೆಯೇ ಸಮಾನವಾಗಿ ಗವ ನಕೊಡ ತ್ತಿರುವ ಅಂಶವು ವ್ಯಕ್ತವಾಗುತ್ತದೆ

ಕನ್ನಡ ರಂಗಭೂಮಿಯು ದಿನ ದಿನವೂ ವೃದ್ಧಿ ಹೊಂದಿ ಕನ್ನಡ ನಾಟಕ ಪ್ರದರ್ಶನಗಳ ಮೂಲಕ ಒಟ್ಟು ಕನ್ನಡ ನಾಡಿನಲ್ಲಿಯೂ ಮತ್ತು ಇತರ ಪ್ರದೇಶಗಳಲ್ಲಿಯೂ ಜನಗಳ ಮನಸ್ಸಿನ ಮೇಲೆ ಸತ್ಪರಿಣಾವ ವನ್ನು ಉಂಟ ಮಾಡಲೆಂದೂ ಮತ್ತು ಕನ್ನಡ ರಂಗಭೂಮಿಯ ಮುನ್ನಡೆಗಾಗಿ ಶ್ರಮಿಸುತ್ತಿರುವವರ ಸಮಸ್ತ ಪ್ರಯತ್ನಗಳೂ ಸಫಲವಾಗಿ ನೆರವೇರುತ್ತ ಬರಲೆಂದೂ, ನಾವು ಮನಃಪೂರ್ವಕವಾಗಿ ಹಾರೈಸುತ್ತೇನೆ ''

ದಿವಾನರಿಗೆ ಬಿರುದು

ಶ್ರೀಮನ್ಮಹಾರಾಜರವರು, ಈ ವರ್ಷದ ವರ್ಧಂತೀಮಹೋತ್ಸವದ ಸಂದರ್ಭದಲ್ಲಿ ದಿವಾನ ರಾದ ಸರ್ ಎ ರಾಮಸ್ವಾಮಿಮೊದಲಿಯಾರವರಿಗೆ '' ರಾಜಮಂತ್ರ ಚಿಂತಾಮಣಿ '' ಎಂಬ ಮಹಾ ಬಿರುದನ್ನು ದಯಪಾಲಿಸಿರುವರು

ಶ್ರೀಮನ್ಮಹಾರಾಜರವರ ೫೦ನೆಯ ವರ್ಷದ ವರ್ಧಂತೀಮಹೋತ್ಸವ

ಸದ್ಧರ್ಮರೂಪಃ ಶಮಿತಾರ್ತತಾಪಃ । ವಿಧ್ವಸ್ತಕೋಪಃ ಧೃತಶಾಂತಿಚಾಪಃ ॥
ಸತ್ಯಸ್ವರೂಪಃ ಯದುವಂಶದೀಪಃ । ಜೀಯಾಚ್ಚಿರಂ ಶ್ರೀಜಯಚಾಮರಾಜೂಪಃ ॥

ಸೈಸೂರು ವೇಗದ ಸ್ಪರ್ಧೆಗಳನ್ನು ಸ್ವತ್ಸಾಮಂಜ ಸರ್ವಾಲಂಕೃತನಾದ ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ ಜಯಂತಿ, ಜಯಮಂಗಳಾ ಮಹಾಪ್ರಭುಗಳವರಿಗೆ ಕಳೆವ ತಿಂಗಳು ೩೭ ನೆಯ ತಾರೀಖು ನುಂಗಳಾರ್ಷಕ್ಕೆ ೩೦ ಸರ್ಷಗಳು ಮಂ ಮಹಾವತ್ಸರವು ವರ್ಷವು ಪ್ರಾರಂಭವಾಯಿತು. ಆ ದಿನ ಬೆಳಿಗ್ಗೆ ಮಹಾಪ್ರಭುಗಳು ನುಂಗಳಸ್ನಾನ ಮತ್ತು ದೇವರ ದರ್ಶನವನ್ನು ಮಾಡಿಕೊಂಡು ರಾಜಸಭಾ ಮಂಟಿಪಕ್ಕೆ ಆಗಮಿಸಿ ಧಾರ್ಮಾಸನವನ್ನು ಅಲಂಕರಿಸಿದರು. ಬಳಿಕ ದಿವಾನರೇ ಮೊದಲಾದ ಉನ್ನತಾಧಿಕಾರಿಗಳು ರಾಜಕತ್ತಾಸನ್ನು ಸಲ್ಲಿಸಿದರು. ಅನಂತರ ಸಿಂಹಾಗದಲ್ಲಿ ಆಸೀನ್ಯಜನ ಸ್ತ್ರೀಪುರುಷರು ನೆರೆದು ಮಹಾಪ್ರಭುಗಳವರ ದರ್ಶನವನ್ನು ಪಡೆದು ಧನ್ಯರಾದರು.

ಪ್ರಭುಗಳು ಚಿಕ್ಕ ವಯಸ್ಸಿನವರಾಗಿದ್ದರೂ ಜ್ಞಾನವೃದ್ಧರಂತೆ ಪರಿತೋಷಿಸುತ್ತಿರುವರು. ಇವರಲ್ಲಿ ದೈವಭಕ್ತಿಯು ಮೆಸೆಯುತಿರುವುದು. ಸದಾ ದೇವಪೂಜೆಯಲ್ಲಿಯೂ ಜ್ಞಾನವಾಯಕಗ್ರಂಥಗಳ ಆವಲೋಕನದಲ್ಲಿಯೂ ಕಾಲವನ್ನು ಕಳೆಯುತ್ತಿರುವರು. ಸುಪ್ರಾಪ್ರಭುಗಳವರಲ್ಲಿ ವಿವೇಕ-ವೈರಾಗ್ಯ-ಶಾಂತಿ-ದಾಂತಿ ಮೊದಲಾದ ಸದ್ಗುಣಗಳು, ರಾಜಧರ್ಮಕ್ಕನುಸಾರವಾದ ಪ್ರಜಾಪಾಲನದಕ್ಷತೆ, ಧೀರೋದಾತ್ತತೆ, ರಾಜನೀತಿಕೌಶಲತೆ, ಸಾನುಮಾನವಿಶಿಷ್ಟತೆ, ವಿನಯಯಾಪರತೆ, ದಾನಶೂರತೆ ಮೊದಲಾದ ದಿವ್ಯಗುಣಗಳೂ ಸ್ವಭಾವಸಿದ್ಧವಾಗಿ ಸಜೆಗೊಂಡಿರುವವು. ತಮ್ಮ ಪ್ರಜೆಗಳಲ್ಲಿ ಸನಾತನಧರ್ಮಜ್ಯೋತಿಯು ಬೆಳಗಲೆಂಬ ಮಹೋದ್ದೇಶ್ಯದಿಂದ ನಂಪ್ರತಕಾಲಯಲ್ಲಿರುವ ಸಕಲ ವೇದಾಗಮವುರಾಣೇತಿಹಾಸಗಳನ್ನು ಕನ್ನಡಭಾಷೆಗೆ ಸರಿನರ್ತಿಸುವ ಅದ್ಭುತಕಾರ್ಯವನ್ನು ಕೈಕೊಂಡು ಇಪಕ್ಕಾಗಿ ಪ್ರತಿವರ್ಷವೂ ಲಕ್ಷಾಂತರ ರೂಪಾಯಿಗಳನ್ನು ವ್ಯಯಮಾಡುತ್ತಿರುವರು. ಇಂತಹ ಪವಿತ್ರಕಾರ್ಯವನ್ನು ಭರತಖಂಡದಲ್ಲಿರುವ ಯಾವ ಮಹಾರಾಜರೂ ಕೈಕೊಂಡಿಲ್ಲವೆಂದು ಘಂಟಾಘೋಷವಾಗಿ ಸಾರಬಹುದಾಗಿದೆ. ಮಿಕ್ಕರಾಜರ ಸಂಪತ್ತು ಲೌಕಿಕವಿನೋದಕ್ಕಾಗಿ ವೆಚ್ಚವಾಗುತ್ತಿದ್ದರೆ, ನಮ್ಮ ಮಹಾಪ್ರಭುಗಳವರ ಸಂಪತ್ತು ಕೇವಲ ಜ್ಞಾನವಿನೋದಕ್ಕೋಸ್ಕರ ವೆಚ್ಚವಾಗುತ್ತಿರುವುದು. ಇದು ನೈಸೂರು ರಾಜಮನೆತನದ ಪುಣ್ಯಪ್ರಭಾವವೆಂದೇ ಹೇಳಬೇಕಾಗಿದೆ. ಕಲಿಕಾಲದಲ್ಲಿ ಉದಯಿಲ್ಲಿ ಈಗಿನಂತಹ ವಿಲಕ್ಷಣವಾತಾವರಣದಲ್ಲಿ ಈ ವಿಧವಾದ ಸತ್ಕಾರ್ಯದಲ್ಲಿ ತೊಡಗಿ, ಜನಕಮಹರ್ಷಿಯಂತೆ ಸದಾ ಜ್ಞಾನಾರ್ಜನೆಯಲ್ಲಿ ಲೀನಮನಸ್ಕರಾಗಿರುವ ಮಹಾಪ್ರಭುಗಳವರನ್ನು ಪಡೆದಿರುವ ನೈಸೂರು ವೇಶದ ಪ್ರಜೆಗಳ ಪುಣ್ಯಕ್ಕೆ ಎಣೆಯೇ ಇಲ್ಲವೆಂದು ಸಾರಿಸಾರಿ ಹೇಳಬಹುದಾಗಿದೆ.

ಕಳೆದ ತಿಂಗಳು ೩೭ ನೆಯ ತಾರೀಖಿನ ದಿನವೆ ರಾಜಧಾನಿಯಲ್ಲಿ ಕನ್ನಡ ರಂಗಭೂಮಿಯ ಶತಮಾನೋತ್ಸವ ಸಮಾರಂಭವನ್ನು ನೆರವೇರಿಸಿದ ನನುಯವಲ್ಲಿ ಮಹಾಪ್ರಭುಗಳವರು—

" ಸಂಸ್ಕೃತಭಾಷೆಯಲ್ಲಿರತಕ್ಕ ಕೆಲವು ಪವಿತ್ರ ಗ್ರಂಥಗಳು ಕನ್ನಡಕ್ಕೆ ಭಾಷಾಂತರವಾಗಿ ಅರನುನೆಯಿಂದ ಪ್ರಕಟನಾಗುವಂತೆ ಏರ್ಪಡಿಸಿರುವುದು ನಮ್ಮ ಸುಯೋಗವೆಂದೂ, ಮತ್ತು ಕರ್ತವ್ಯವೆಂದೂ ಭಾವಿಸಿದ್ದೇವೆ. ಈ ಗ್ರಂಥಗಳಿಂದ ನಮ್ಮ ಜ್ಞಾನಭಂಡಾರವು ವರ್ಷವರ್ಷವೂ ವೃದ್ಧಿಯಾಗಲು ಕಾರಣವಾಗಿದೆ. "

ಎಂದು ಅಪ್ಪಣೆಕೊಡಿಸಿರುವಂತೆ, ಅವರ ಜ್ಞಾನಭಂಡಾರವು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿರುವುದು ಅಕ್ಷರಶಃ ನಿಜವಾಗಿದೆ. ಮಹಾಪ್ರಭುಗಳು ಲೌಕಿಕಸಂಪತ್ತು ಶಾಶ್ವತವಾದುದಲ್ಲವೆಂದೂ, ಜ್ಞಾನಸಂಪತ್ತು ಮಾತ್ರ ಶಾಶ್ವತವೆಂದೂ ಪೂರ್ಣನಂಬಿ ಅವರಂತೆ ಆಚರಿಸುತ್ತಿದ್ದಾರೆ. ಇದು ಸ್ವಾರ್ವಜನ್ಮದ ಪುಣ್ಯಪ್ರಭಾವ ವಲ್ಲದೆ ಬೇರೆಯಲ್ಲ. ಆಸ್ತು !

ಈ ರೀತಿ ಜ್ಞಾನಸೂರ್ತಿಗಳಾಗಿರುವ ನಮ್ಮ ಮಹಾಪ್ರಭುಗಳವರ ವರ್ಧಂತೀ ಮಹೋತ್ಸವಗಳು ಶತಪರಿಮಿತವಾಗಿ ನೆರವೇರುವಂತೆ ಶ್ರೀಪರಮೇಶ್ವರನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ವರ್ತಮಾನಸಂಗ್ರಹ

ಹೈದರಾಬಾದಿಗೆ ನೆಹರೂರವರ ಎಚ್ಚರಿಕೆ

" ಇತರ ಸಂಸ್ಥಾನಗಳಂತೆ ಹೈದರಾಬಾದ್ನು ಸಂಸ್ಥಾನವೂ ಭಾರತಡೊಡನೆ ಸೇರಿಕೊಳ್ಳಬೇಕು ; ಅದರಂತೆ ಆದು ನಡೆಯುವುದೆಂದು ನಿರೀಕ್ಷಿಸುತ್ತೇನೆ. ಹಾಗೆ ನಡೆಯದಿದ್ದರೆ ಹೈದರಾಬಾದು ಅಳಿಯುವುದು ಖಂಡಿತ. ಇದರಲ್ಲಿ ಯಾವ ಅನುಮಾನವೂ ಇಲ್ಲ "—ಎಂಬುದಾಗಿ ಮಹಾ ಪ್ರಧಾನಿ ಪಂಡಿತ ಜವಹರಲಾಲ್ ನೆಹರೂರವರು ಮದ್ರಾಸಿನಲ್ಲಿ ನಡೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ತಿಳಿಸಿದರು.

ಹೈದರಾಬಾದಿನ ಇಂದಿನ ಆಡಳಿತ ವರ್ಗದೊಡನೆ ಸಂಧಾನ ಸಂಭವವೆಂಬುದು ಇಲ್ಲವೇ ಇಲ್ಲ. ಗೂಂಡಾ ಪ್ರವೃತ್ತಿಯುಳ್ಳವರಿಂದ ಕೂಡಿರುವ ಸರ್ಕಾರದೊಡನೆ ಯಾರು ತಾನೇ ಸಂಧಾನ ನಡೆಸಲು ಸಾಧ್ಯ ?

ನಾವು ಹೈದರಾಬಾದಿನೊಡನೆ ಕಾಶ್ಮೀರದಂತೆ ಯುದ್ಧವನ್ನು ಬಯಸುವದಿಲ್ಲ. ಹಾಗೆ ಭಾವಿಸುವುದು ಶುದ್ಧತಪ್ಪು !

ಆದರೆ ಹೈದರಾಬಾದಿನ ಮೇಲೆ ಮಿಲಿಟರಿ ಕಾರ್ಯಾಚರಣೆಯನ್ನು ನಡೆಸಬೇಕಾದ ಅವಶ್ಯಕತೆ ಮತ್ತು ಸಂದರ್ಭ ಒದಗಿದರೆ ಹಾಗೆ ನಾವೇ ಮಾಡುವೆವು. ಎಂದು ಸ್ಪಷ್ಟವಾಗಿ ತಿಳಿಸಿದರು.

ಹೈದರಾಬಾದಿನ ಮೇಲೆ ನಡೆಸುವ ಮಿಲಿಟರಿ ಕಾರ್ಯಾಚರಣೆಯನ್ನು ' ಯುದ್ಧ ' ಎನ್ನುವುದು ಹಾಸ್ಯಾಸ್ಪದವಾದುದು. ಎರಡು ಸ್ವತಂತ್ರವಾದ ರಾಷ್ಟ್ರಗಳಿಗೆ ನಡೆಯುವ ಹೋರಾಟ ಯುದ್ಧವೆನಿಸುವುದು. ' ಯುದ್ಧ ' ಎನ್ನುವ ಪೊಡ್ಡ ಪದಪ್ರಯೋಗವು ಹೈದರಾಬಾದಿಗೆ ಸಲ್ಲದು.

ಹೈದರಾಬಾದಿನ ಪರಿಸ್ಥಿತಿ ವಿಚಾರದಲ್ಲಿ ಭಾರತ ಸರ್ಕಾರವು ಕಣ್ಣುಮುಚ್ಚಿಕೊಂಡಿಲ್ಲ. ಆದರೆ ಸರ್ಕಾರವು ಈ ಬಗ್ಗೆ ಕೈಗೊಳ್ಳಬಹುದಿರುವ ಮತ್ತು ಕೈಗೊಳ್ಳಬೇಕೆಂದಿರುವ ಕಾರ್ಯಾಚರಣೆಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದರು.

ಭಾರತದ ಹಿತಕ್ಕೆ ವಿರೋಧವಾಗಿ ಹೈದರಾಬಾದಿಗೆ ಸಹಾಯಮಾಡುವ ಭಾರತ ಸರ್ಕಾರದ ನೌಕರರನ್ನೂ ಮತ್ತು ಪ್ರಾಣಿಯವರನ್ನೂ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವೆವು. ಎಂದು ಎಚ್ಚರಿಕೆಯಿತ್ತರು.

ಹೈದರಾಬಾದಿನ ಮಂತ್ರಿಗಳಾದ ಶ್ರೀ ಜೋಷಿಯವರ ರಾಜೀನಾಮೆ !

ರಜಕಾರರ ದೌರ್ಜನ್ಯದ ಬಗ್ಗೆ ವಿವರಣೆ !

ನಿಜಾಮರ ಮಂತ್ರಿಮಂಡಲದಲ್ಲಿ ವಾಣಿಜ್ಯ ಸಚಿವರಾಗಿದ್ದ ಶ್ರೀ ಜೆ. ವಿ. ಜೋಷಿಯವರು ರಾಜೀನಾಮೆ ಯಿತ್ತಿದ್ದಾರೆ. ತಮ್ಮ ಈ ತ್ಯಾಗದಿಂದ ಭಾರತಡೊಡನೆ ಹೈದರಾಬಾದ ಸರ್ಕಾರವು ಹೆಚ್ಚು ಸೌಹಾರ್ದದಿಂದ ನರ್ತಿಸುವಂತಾಗಲೆಂದು ಹಾರೈಸಿದ್ದಾರೆ.

ಹೈದರಾಬಾದಿನ ಮುಖ್ಯಮಂತ್ರಿಗಳಿಗೆ ಕಳಿಸಿರುವ ರಾಜೀನಾಮೆ ಪತ್ರದಲ್ಲಿ ಶ್ರೀ ಜೋಷಿಯವರು ತಮ್ಮ ರಾಜೀನಾಮೆಗೆ ಬಲವತ್ತರವಾದ ಕಾರಣಗಳನ್ನು ನಮೂದಿಸಿದ್ದಾರೆ.

" ಸಾರ್ವಜನಿಕ ಶಾಂತಿಪಾಲನೆಗಾಗಿ ಪೋಲೀಸರು ಮತ್ತು ಮಿಲಿಟರಿಯವರಿಗೆ ಸಾರ್ವಜನಿಕ ಹುಟ್ಟುವಳಿಯಿಂದ ಸಂಬಳವನ್ನು ಕೊಡಬೇಕಾಗುತ್ತಿದೆ. ಆದರೆ ಶಾಂತಿಪ್ರಿಯರಾದ ಹಿಂದುಗಳ ಆಸ್ತಿ ಪಾಸ್ತಿಗಳ ಮತ್ತು ಮಾನ ಪ್ರಾಣಗಳ ಮೇಲೆ ನಡೆಯುತ್ತಿರುವ ಭೀಕರಕೃತ್ಯಗಳನ್ನು ಪೋಲೀಸರು ಮತ್ತು ಮಿಲಿಟರಿಯವರು ತಡೆಗಟ್ಟುವುದಿಲ್ಲ. ಅಲ್ಲದೆ ಈ ಭೀಕರ ಕೃತ್ಯಗಳನ್ನು ತಡೆಗಟ್ಟಲು ಸ್ಥಳೀಯ ಅಧಿಕಾರಿಗಳೂ ಸಹಕರಿಸುವುದಿಲ್ಲ.

ಹಿಂದೂಗಳು ಬಂದೂಕು ಮುಂತಾದವುಗಳ ಲೈಸನ್ಸನ್ನು ಪಡೆದಿದ್ದರೂ ಸ್ಥಳೀಯ ಅಧಿಕಾರಿಗಳು ಅವರ ರಕ್ಷಣೆ ಮಾಡದೆ ಇರುವುದಲ್ಲದೆ ಅವರಲ್ಲಿದ್ದ ಬಂದೂಕು ಮುಂ

ದ ಆಯುಧಗಳನ್ನು ಕಿತ್ತುಕೊಂಡಿದ್ದಾರೆ. ಇದಲ್ಲ
ೀಲೀಸರು ರೇಡಿ ಕೂಡ ಕೊಟ್ಟಿಲ್ಲ.

ಅಲ್ಲದೆ ರಜಕಾರರು ನಡೆಸಿದ ಲೂಟಿ ಕೊಲೆ,
ಗರ ಮಾನಭಂಗ ಮುಂತಾದ ಅಕೃತ್ಯಗಳಲ್ಲೂ
ೀಲೀಸರು ಪೆಟಲಾಬಿತ್ತೆ ಸಂದರ್ಭಗಳನೆ. ಇವುಗಳ
ವಾಗಿ ಹೈದರಾಬಾದಿನ ಪ್ರಜೆಗಳನೇಕರು ನಿರಾಶೆ
ಂಡು ಹೈದರಾಬಾದಿನ ಹೊರಗೆ ರಕ್ಷಣೆ ಪಡೆಯಲು
ಗುತ್ತಿದ್ದಾರೆ.

ರಾಕ್ಷಸಕೃತ್ಯಗಳ ವಿವರಣೆ

ನಾಂದೇಡ್ ಮತ್ತು ಲೋಹಾ ಜಿಲ್ಲೆಗಳ ಗ್ರಾಮ
ಮೇಲೆ ವೈಪ್ರಕಾರವಾಗಿ ಮೂರು ದಿನಗಳವರೆಗೆ
ಳಿ ನಡೆದವು. ಅಲ್ಲಿಯ ಶಾಂತಿಪಾಲನೆಯ ಜವಾಬ್ದಾರಿ
ನ್ನು ಹೊತ್ತಿರುವ ಸ್ಥಳೀಯ ಅಧಿಕಾರಿಗಳೂ
ಳಿಯನ್ನು ತಡೆಗಟ್ಟಲು ಪ್ರಯತ್ನಿಸಲೇ ಇಲ್ಲ.

ಭೀಮಣಾವ್ ಎಂಬಾತನನ್ನು ರಜಕಾರರು ಮರದ
ಬಕ್ಕೆ ಕಟ್ಟಿಹಾಕಿ ಚಿತ್ರಹಿಂಸೆ ಕೊಟ್ಟು ಕಣ್ಣುಗಳನ್ನು
ತ್ತು ಕೊನೆಗೆ ಗುಂಡಿಕ್ಕಿಕೊಂದರು.

ಪಂಡಿತರಾವ್ ಎಂಬವರೂ ಹತರಾದರು. ಕಡೆಗೆ
ೀ ಗ್ರಾಮವನ್ನು ಲೂಟಮಾಡಿ ಬೆಂಕಿಯಿಟ್ಟರು.

ವಾಮನ ಭವಾಮಕರ್ ಎಂಬವರಿಗೆ ಭಲ್ಲೆಯ
ಯವಾಗಿದೆ. ಅವರ ಮನೆಯೂ ಲೂಟಿಯಾಗಿದೆ.

ನಾರಾಯಣ ಮಂಡಿವಾಲಾರವರ ಪತ್ನಿಯ ಬಂಧು
ಳ ಮುಂದೆಯೇ ಏಳು ಜನ ಗೂಂಡಾಗಳು ಆಕೆಯ
ಾನಭಂಗ ಮಾಡಿದ್ದಾರೆ.

ನಿಮ್ಮ ಅಧಿಕಾರವಧಿಯಲ್ಲಿ ಗ್ರಾಮಗಳು ಒಂದಾದ
ಮೇಲೆ ಒಂದರಂತೆ ಈ ದುಸ್ಥಿತಿಗೆ ಒಳಗಾಗುವೆಂದು
ನು ಭಾವಿಸಿರಲಿಲ್ಲ. ಬಿಂದೂ ನುಂತಿ ಎಂದು ನನ್ನ
ಲಿಗೆ ಪ್ರಜೆಗಳು ಬಂದು ತಮ್ಮ ದುಸ್ಥಿತಿಯನ್ನು ಹೇಳಿ
ೂಂಡಾಗ ನಾನು ರೋದಿಸುವಂತಾಯಿತು.

ಗೂಂಡಾಗಳ ದುಷ್ಕೃತ್ಯಗಳನ್ನು ತಡೆಗಟ್ಟಲು ಅಸ
ರ್ಥವಾಗಿರುವ ಸರ್ಕಾರದಲ್ಲಿರಲು ನನಗೆ ಸಾಧ್ಯವೇ
ಲ್ಲ.

ಭಾರತದ ಸೈನ್ಯದ ಮೇಲೆ ರಜಕಾರರ ಮುತ್ತಿಗೆ

ಹಿಂದೂಸ್ಥಾನ ಸರಕಾರದ ಮಿಲಿಟರಿ ಕಾನ್‌ವಾಯ್
ಮೇಲೆ ರಜಕಾರರು ನಿಜಾಮ ಎಂಬ ಹಳ್ಳಿಯ ಬಳಿ ದಾಳಿ
ಮಾಡಿದ ವಿಷಯದ ಬಗ್ಗೆ ಹಿಂದೂಸ್ಥಾನ ಸರಕಾರದ
ಪ್ರಕಟಣೆಯೊಂದು ಈ ರೀತಿ ತಿಳಿಸುತ್ತದೆ.

ಹಿಂದೂಸ್ಥಾನ ಮಿಲಿಟರಿ ಕಾನ್‌ವಾಯ್ ಒಂದು
ನೋಲಾಪುರ ಬಾರ್ಸಿ ಮಾರ್ಗದಲ್ಲಿ ಹೋಗುತ್ತಿರುವಾಗ
ಾಡನ್ನು ನಾಗರಿಕ ಉಡುಪು ಧರಿಸಿದ ಸುಮಾರು ೫೦
ಜನ ರಜಕಾರರು ಮುತ್ತಿದರು. ಅವರು ಬಂದೂಕು,
ೈನ್‌ಗನ್‌ಗಳು, ಹಗುರವಾದ ಶಿರಂಗಿಗಳು ಮತ್ತು ನಾಡ
ಾಂಬುಗಳಿಂದ ಸಜ್ಜಿತರಾಗಿದ್ದರು. ಹಿಂದೀ ಸೇನೆಯು
ನೇಕ ಸಾವು ನೋವುಗಳಾಲ್ಲಿ ಅನುಭವಿಸಿ ನೆನಾಜ
ಹಳ್ಳಿಯನ್ನು ಸುತ್ತುಗಟ್ಟಿತು. ಹಳ್ಳಿಯಲ್ಲಿ ಕದನಕ್ಕೆ
ಅವಶ್ಯಕವಾದ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು.
ಶತ್ರುಸೈ ಪಕ್ಕದಲ್ಲಿ ಗುಂಡಿಗಳನ್ನು ಆಗಿದ್ದರು. ಮನೆಗಳ
ಾಡೆಗಳಲ್ಲಿ ಸಹ ಕೆಂಡಿಗಳನ್ನು ಕೊರೆದು ಬಂದೂಕು
ಗಳನ್ನು ಸಿದ್ಧಪಡಿಸಿಕೊಂಡಿದ್ದರು. ಹಿಂದೀ ಸೈನಿಕರು
ಹಳ್ಳಿಯಲ್ಲಿಯೇ ಕಾವಲಿದ್ದರು. ಕಾನ್‌ವಾಯ್ ಸುರಕ್ಷಿತ
ವಾಗಿ ಸಾಗುವ ಬಗ್ಗೆ ರಕ್ಷಣೆಗೆ ಸಿದ್ಧರಾಗಿದ್ದರು. ರಜಕಾ
ರರು ಮೊದಲು ದಾಳಿ ಮಾಡಿದ ಮೇಲೆ ಮತ್ತೆರಡು ಸಲ
ದಾಳಿ ಮಾಡಿದರು. ಈ ಎಲ್ಲ ದಾಳಿಗಳಲ್ಲೂ ಹಿಂದೀ
ಸೈನಿಕರು ಯಶಸ್ವಿಯಾಗಿ ಹಿಮ್ಮೆಟ್ಟಿಸಿದರು.

ನಿಜಾಮ ಸರ್ಕಾರದ ಪ್ರತಿಭಟನೆ

ನಿಜಾಮರ ಸರ್ಕಾರದವರು ಭಾರತ ಸರ್ಕಾರಕ್ಕೆ
ಂದು ತಂತಿ ಕಳುಹಿಸಿ ಅದರಲ್ಲಿ ಹಿಂದೀ ಸೇನೆಗಳು
ನೆನಾಜ ಎಂಬ ನಮ್ಮ ಹಳ್ಳಿಯ ಮೇಲೆ ದಾಳಿ ಮಾಡಿದೆ
ಂದು ಪ್ರತಿಭಟಿಸಿದ್ದಾರೆ. ರಜಕಾರರು ಮತ್ತು ಪಠಾಣರು
ಹಿಂದೀ ಮಿಲಿಟರಿ ಕಾನ್‌ವಾಯ್ ಮೇಲೆ ದಾಳಿಮಾಡಿ
ದುದನ್ನು ಮರೆಮಾಡಲು ನಿಜಾಮ್ ಸರಕಾರ
ದೆವರು ಈ ರೀತಿ ಪ್ರತಿಭಟನೆ ಕಳುಹಿಸಿದ್ದಾರೆ.

ನಿಜಾಂ ಸರ್ಕಾರದ ಪ್ರತಿನಿಧಿಯೊಬ್ಬನು ಳಿಸಿದ
ಸ್ಥಳಕ್ಕೆ ಹೋಗಿ ಗಾಯಗೊಂಡವರನ್ನು ವಿಚಾರಿಸಿದಾಗ
ಳಿಸಿದ್ದೆಯ ಬಗ್ಗೆ ಇಂಡಿಯಾ ಸರಕಾರದವರು ಹೊರಡಿಸಿ
ರುವ ಹೇಳಿಕೆಯನ್ನು ಸಮರ್ಥಿಸಿದ್ದಾನೆ. ಇದಾದನಂತರ
ಹೈದರಾಬಾದ್ ಸಂಸ್ಥಾನ ಸೇನೆಗಳ ಮುಖ್ಯ ದಂಡನಾ
ಯಕರಾದ ಜ|| ಇದ್ರೂಸ್‌ರವರು ಪ್ರಧಾನಿ ಮೀರ್
ಲಾಯಕ್ ಅಲಿಯವರಿಗೆ ಇಂಡಿಯಾ ಸರ್ಕಾರದ ವರ
ದಿಯನ್ನು ಒಪ್ಪಿಸಿದ್ದಾರೆ. ಈ ಸಂದರ್ಭದಲ್ಲಿ ನಿಜಾಂ
ಸರಕಾರದವರು ಇಂಡಿಯಾಸರಕಾರಕ್ಕೆ ಪ್ರತಿಭಟನೆಯ
ತಂತಿ ಕಳಿಸಿರುವುದು ಆಶ್ಚರ್ಯಕರವಾಗಿದೆ.

ನಾನಜ ಎಂಬ ಹಳ್ಳಿಗೆ ನಿಜಾಮರ ಸೇನೆಗಳನ್ನು
ಕಳಿಸಬೇಕೆಂದು ನಿಜಾಮ ಮಂತ್ರಿಮಂಡಲದವರು
ಮೊದಲು ನಿರ್ಧರಿಸಿದ್ದರು. ಆದರೆ ತಮ್ಮ ನಿರ್ಧಾರದಂತೆ
ಸೇನೆಗಳನ್ನು ಕಳಿಸಲಿಲ್ಲ.

ಭದ್ರತಾ ಮುಂಡಲಕ್ಕೆ ಮೊರೆಯೆ ?

ಹೈದರಾಬಾದ್ ಸಮಸ್ಯೆಯನ್ನು ಭದ್ರತಾ ಮಂಡಲಕ್ಕೆ
ತೆಗೆದುಕೊಂಡು ಹೋಗುವ ಬಗ್ಗೆ ನಿಜಾಮರು ತಮ್ಮ
ರಾಜಕೀಯ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್ಟ
ನ್ನರನ್ನು ಕೇಳಿದ್ದಾರೆಂದು ನನದೆಹಲಿಯ ರಾಜಕೀಯ
ವಲಯಗಳಲ್ಲಿ ಹೇಳಲಾಗಿದೆ. ಸರ್ ವಾಲ್ಟರ್ ಮಾಂಕ್ಟ
ನ್ನರ ಕಾರ್ಯದರ್ಶಿಗಳಾದ ಮಿ|| ವಿಡರ್ಪ್ ಬ್ಯೂಮೌಂಟರು
ದೆಹಲಿಯಲ್ಲಿರುವ ವಿಜೇಟ್ ಜನರಲ್ಲರಾದ ನನಾಜ್
ಯಾರಜಂಗ್‌ರವರೊಡನೆ ಇಂಗ್ಲೆಂಡಿಗೆ ಹೋದರು.
ಹಿಂದೂಸ್ಥಾನದ ಸುಂಕದ ಅಧಿಕಾರಿಗಳು ಅವರನ್ನು
ಶೋಧಿಸಿದಾಗ ಅವರಲ್ಲಿ ಎರಡು ಕಾಗದಗಳು ದೊರೆತವು.
ಸಾರ್ವಭೌಮರಿಗೆ ಒಂದು ಪತ್ರವೂ, ಹೈದ್ರಾಬಾದು ವಿಶ್ವ
ಸಂಘಕ್ಕೆ ಹೋಗುವ ಬಗ್ಗೆ ಸರ್ ಮಾಂಕ್ಟನ್ನರನ್ನು
ಸಲಹೆ ಕೇಳಿರುವ ಎರಡು ಕಾಗದಗಳೂ ದೊರೆತಿವೆ.
ಮಿ|| ಬ್ಯೂಮೌಂಟರು ಪತ್ರಗಳೊಂದಿಗೆ ಲಂಡನ್ನಿಗೆ
ತೆರಳಿದರು.

ಬರ್ಲಿನ್ ಬಿಕ್ಕಟ್ಟಿನ ಬಗ್ಗೆ ಮಿ|| ಬೆವಿನ್ ಹೇಳಿಕೆ

ಪ್ರಸಂಗ ಬಂದರೆ ರಕ್ಷಣೆ ಮೇಲೆ ಬಲಪ್ರಯೋಗ ಸಿದ್ಧ

ಬರ್ಲಿನ್ ಸಮಸ್ಯೆ ದಿನದಿಕ್ಕೂ ಜಟಿಲವಾಗುತ್ತ
ಬಂದಿರುವುದರಿಂದ ಬ್ರಿಟನ್ನು ಅನಿವಾರ್ಯವಾಗಿ ಬಲ
ಪ್ರಯೋಗ ಮಾಡಬೇಕಾಗುವುದೆಂದು ಬ್ರಿಟಿಷ್ ಏನೇ
ಶಾಂಗ ಸಚಿವರಾದ ಮಿ|| ಬೆವಿನ್‌ರವರು ಕಾಮನ್ಸ್ ಸಭೆ
ಯಲ್ಲಿ ತಿಳಿಸಿದರು.

ಸರ್ಕಾರದವರು ಆತಗತ್ಯ ಕಾರ್ಯಕ್ರಮಗಳನ್ನೆಲ್ಲ
ತೆಗೆದುಕೊಳ್ಳಬೇಕಾಗಿದೆಯೆಂದೂ ಪ್ರತಿತಿಂಗಳ ಸನುರ
ಸೇವೆಯಿಂದ ನಿವೃತ್ತರಾಗುತ್ತಿರುವ ೨೦ ಸಾವಿರ ಸೈನಿಕ
ರನ್ನು ಸಮರ ಸೇವೆಗಾಗಿ ಉಳಿಸಿಕೊಳ್ಳಬೇಕಾಗಿದೆ
ಯೆಂದೂ ತಿಳಿಸಿದರು.

ಮಿ|| ಬೆವಿನ್‌ರವರು ಮಾತನಾಡುತ್ತಿರುವಾಗ ಸಭಾ
ಸದಸ್ಯರು ಮೌನನಾಗಿ ಕುಳಿತು ಅವರ ಸ್ಪಷ್ಟಭಿಪ್ರಾಯ
ಗಳನ್ನು ಆಸಕ್ತಿಯಿಂದ ಕೇಳುತ್ತಿದ್ದರು.

" ಪರಿಸ್ಥಿತಿಯು ದಿನದಿನಕ್ಕೂ ಹದೆಗೆಡುತ್ತಿದೆಯೆಂ
ಬುದು ನಮ್ಮ ಗಮನಕ್ಕೆ ಬರಲಾರಂಭಿಸಿದೆ. ಆದರೆ ಸಮ್ಮ
ಯುದ್ಧಕಾಲದ ಬುತ್ರರು, ನಾವು ಶಕ್ತಿಯನ್ನು ಉಪ
ಯೋಗಿಸುವಂಥ ಸಂದರ್ಭವನ್ನು ತಂದೊಡ್ಡುವರೆಂದು
ನಾವೆಂದೂ ನಿರೀಕ್ಷಿಸಿರಲಿಲ್ಲ.

ನಾವು ಪರಿಸ್ಥಿತಿಯನ್ನೆಲ್ಲ ಬೇರೆ ದೃಷ್ಟಿಯಿಂದ ನೋಡ
ಬೇಕಾಗಿದೆ. ಅದಕ್ಕನುಸಾರವಾಗಿ ಕಾರ್ಯಕ್ರಮಗಳನ್ನು
ತೆಗೆದುಕೊಳ್ಳಬೇಕಾಗಿದೆ. ಪರಿಸ್ಥಿತಿಯನ್ನು ಎದುರಿಸಲು
ಬ್ರಿಟಿಷ್ ಸರ್ಕಾರವು ಎಂತಹ ತೀವ್ರ ಕಾರ್ಯಕ್ರಮವನ್ನಾ
ಗಲೀ ತೆಗೆದುಕೊಳ್ಳಲು ಸಿದ್ಧವಿದೆ. ಆದರೆ ನಾವು ಕಾರ್ಯ
ಕ್ರಮ ತೆಗೆದುಕೊಳ್ಳುತ್ತೇವೆಂಬ ಬಗ್ಗೆ ಬಹಿರಂಗವಾಗಿ
ಹೇಳುವುದು ಉಚಿತವಲ್ಲವೆನ್ನುವುದನ್ನು ಸಭೆ ಒಪ್ಪು
ತ್ತದೆ.

ಮಾಸ್ಕೋದೊಂದಿಗೆ ಸಂಧಾನದ ವಿಚಾರವಾಗಿ
ನಾನುಸಕತೆ ನಡೆಸಲು ತಾವು ಯಾವಾಗಲೂ ಸಿದ್ಧರಿರುವೆ
ರೆಂದೂ ಆದರೆ ಸೋವಿಯೆಟ್ ಸರ್ಕಾರವು ಒತ್ತಾಯ
ಮಾಡಿದರೆ ತಾವು ಕೈಬಿಟ್ಟು ಕುಳಿತುಕೊಳ್ಳಲು ಸಾಧ್ಯ
ವಿಲ್ಲೆಂದೂ ಮಿ|| ಬೆವಿನ್‌ರವರು ಹೇಳಿದರು. ಬರ್ಲಿನ್
ಪರಿಸ್ಥಿತಿಯ ಹಾಗು ಅವಕ್ಕೆ ಸಂಬಂಧಪಟ್ಟ ವಿಚಾರ
ಗಳನ್ನೆಲ್ಲ ನಾವು ಕೂಲಂಕುಷವಾಗಿ ತಿಳಿದುಕೊಂಡಿದ್ದೇವೆ.
ಪಾಶ್ಚಾತ್ಯ ರಾಷ್ಟ್ರಗಳ ನಾಣ್ಯ ಚಲಾವಣೆಯು ನೇತೆಯೇ
ಬರ್ಲಿನ್ನಿನ ಬಿಕ್ಕಟ್ಟಿಗೆ ಕಾರಣವೆಂದು ಸೋವಿಯೆಟ್
ಸರ್ಕಾರವು ಆರೋಪ ಹೊರಿಸಿದೆ. ಬ್ರಿಟಿಷ್ ಸರ್ಕಾರವು
ನಾಣ್ಯಚಲಾವಣೆ ನೀತಿಯ ಬಗ್ಗೆ ರಷ್ಯನ್ ಸರ್ಕಾರ
ದೊಂದಿಗೆ ಚರ್ಚಿಸಲು ಇಂದಿಗೂ ಸಿದ್ಧವಿದೆ. ಈ
ವಿಷಯವಲ್ಲದೆ ಇತರ ವಿಷಯಗಳ ಬಗ್ಗೆ ಸಹ ಚರ್ಚಿ
ಸಲು ಬ್ರಿಟನ್ನು ಸಿದ್ಧವಿದೆ. ಕೇವಲ ಸಂಧಾನಗಳಿಂದಲೇ
ಎಲ್ಲ ತೊಡಕುಗಳನ್ನೂ ಬಗೆಹರಿಸಿಕೊಳ್ಳಲು ಕಾತುರ
ವಾಗಿದೆ. ಎಂದು ಮಿ|| ಬೆವಿನ್‌ರವರು ಹೇಳಿದರು.

ಕಾಶ್ಮೀರದಲ್ಲಿ ಶತ್ರುಸಂಹಾರವು ಪ್ರತಿದಿನವೂ ನಡೆಯುತ್ತಿದೆ

ಹಿಂದೀ ಸೈನಿಕರು ದಾಳಕಾರರ ಪಡೆಯಲ್ಲಿದ್ದ ಅನೇಕ
ಜನ ನಾಶ್ಯಾನವರ ಯೋಧ್ಯರನ್ನು ಸೆರೆ ಹಿಡಿದಿರುವರು.
ಚಕ್ರೋತ್ತ ರಂಗದಲ್ಲಿ ಶತ್ರುಗಳು ಅತಿಬಿರುಸಾಗಿ ಕಾರ್ಯಾ
ಚರಣೆ ನಡೆಸುತ್ತಿದ್ದಾರೆ. ಈ ವಿಷಯವನ್ನು ಹಿಂದೂಸ್ಥಾ
ನದ ರಕ್ಷಣ ಖಾಬೆಯ ಪ್ರಕಟನೆಯು ಈ ರೀತಿ ತಿಳಿಸು
ತ್ತದೆ.

ಶುಕ್ರವಾರ ರಾತ್ರಿ ಶತ್ರುಪಡೆಯೊಂದು ಚಕೋತಿಗೆ
ಆಗ್ನೇಯ ದಿಕ್ಕಿನಲ್ಲಿ ಫಿರಂಗಿಗಳನ್ನು ಹೊಡೆಯಲಾರಂಭಿ
ಸಿತು. ಮತ್ತೆರಡು ಸಾರಿ ಶತ್ರುಗಳ ದಾಳ ನಡೆಯಿತು.
ಈ ಮೂರು ದಾಳಿಗಳನ್ನೂ ಹಿಂದೀ ಸೇನೆಗಳು ಯಶಸ್ವಿ
ಯಾಗಿ ಪ್ರತಿಭಟಿಸಿದವು. ಆತಿ ಹೆಚ್ಚು ಪ್ರಮಾಣದ
ಮದ್ದುಗುಂಡುಗಳನ್ನೂ ಶಸ್ತ್ರಾಸ್ತ್ರಗಳನ್ನೂ ಹಿಂದೀ
ಸೈನಿಕರು ವಶಪಡಿಸಿಕೊಂಡರು. ೭ ಬ್ರೆನ್‌ಗನ್‌ಗಳು,
೫ ಸ್ಟೇನ್‌ಗನ್‌ಗಳು ೪೫ ಬಂದೂಕುಗಳು ಸಿಕ್ಕಿವೆ.

ಶತ್ರುಗಳು ೪೫ ಪೌಂಡಿನ ಫಿರಂಗಿಗಳನ್ನು ಯುದ್ಧ
ರಂಗಕ್ಕೆ ತಂದಿದ್ದರೂ ಸಹ ಭಾರತ ಫಿರಂಗಿ ಪಡೆಯು
ಶತ್ರುವನ್ನು ಹಿಮ್ಮೆಟ್ಟುವಂತೆ ಮಾಡಿತು. ಮತ್ತು
ಶತ್ರುಪಿಸಿಂದ ೨ ಸ್ಪಿರಂಗಿ, ೨ ಲಾರಿಗಳನ್ನು ನಶಪಡಿಸಿ
ಕೊಂಡಿತು.

ಸ್ವೀಕಾರ

ಪಾವಣಗೆರೆ ಸಿಟಿಯಲ್ಲಿರುವ ಗುರುಭಕ್ತಶಿಖಾಮಣಿ
ನಾಗಾನಪ್ಪಜ್ಜ ಮಹಾಲಿಂಗಪ್ಪನವರು ತಾ|| ೩೦-೭-೪೮
ನೆಯ ಶುಕ್ರವಾರ ದಿನದ ಶಿವಾಭಿನಂದನ ಸಮಯದಲ್ಲಿ
ಪ್ರಭಾಪ್ರೋತ್ಸಾಹಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು
ದಾವಣಗೆರೆ ಹಿರಿಯಮಠದ ವೇ|| ಶಿವಾನಂದಸ್ವಾಮಿ
ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಈ ನೇಲ್ಯಂಡ ಮಹಾಶಯರಿಗೆ ಶ್ರೀಜಗದ್ಗುರು
ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು
ಪಾರ್ಥಿಸುತ್ತೇನೆ.

ಮಾಗಾನಹಳ್ಳಿ ಮಹಾಲಿಂಗಪ್ಪನವರ ನಿಧನ

ಪಾವಣಗೆರೆ ಸಿಟಿ ವಾಸಿಗಳಾದ ಶ್ರೀಮಂತ ಮಾಗಾನ
ಹಳ್ಳಿ ಮಹಾಲಿಂಗಪ್ಪನವರು ತಮ್ಮ ೮೦ ನೇ ವರ್ಷದಲ್ಲಿ
(ತಾ|| ೩೦-೭-೪೮) ಶುಕ್ರವಾರ ತಿಪ್ಪೈಕ್ಯರಾದರೆಂದು
ತಿಳಿಸಲು ಬಹು ವಿಷಾದನೆನಿಸುತ್ತಿದೆ. ಇವರು ಬಹು
ಸರಳಜೀವಿಗಳೂ, ಗುರುನೇವಾಧುರುಧರರೂ ಲಿಂಗ
ಪೂಜಾ ತತ್ಪರರೂ, ದೀನದಯಾಳುಗಳೂ ಆಗಿದ್ದರು.
ಇದಲ್ಲದೆ ಇವರು ತಮ್ಮ ಜೀವಿತಕಾಲದಲ್ಲಿ ಅನೇಕ
ಪ್ರಕಾರ ದಾನಧರ್ಮಗಳನ್ನು ಮಾಡುತ್ತ ಅವ್ಯಾಹತವಾಗಿ
ಜಂಗಮಾರಾಧನೆಯನ್ನು ಮಾಡಿಸುತ್ತಾ ಅಂತ್ಯದವರೆಗೂ
ತಿಪ್ಪೈಕಚಿತ್ತರಾಗಿ ತಿವನ್ನಲ್ಲಿ ಲೀನರಾದರು. ಇವರಿಗೆ
ನಾಲ್ಕು ಜನ ಗಂಡುಮಕ್ಕಳೂ ಒಬ್ಬ ಹೆಣ್ಣುಮಗಳೂ
ಇರುವರಲ್ಲದೆ ಅನೇಕ ಜನ ನೆಮ್ಮಕ್ಕಳಿಂದ ಕೂಡಿದ

ದೊಡ್ಡ ಕುಟುಂಬಿಗಳಾಗಿದ್ದರು ಇವರು ತಮ್ಮ ಲಿಂಗಪೂಜೆಯನ್ನು ನೆರವೇರಿಸುವುದರಲ್ಲಿ ಅಂತ್ಯದ ವರೆಗೂ ದಕ್ಷರಾಗಿದ್ದರು. ಇವಲ್ಲದೆ ಇವರು ಇದೇ ಪಟ್ಟಣದಲ್ಲಿ ಸ್ಥಾಪಿತವಾಗಿರುವ ಶ್ರೀ ಜಗದ್ಗುರು ಅಭಿನವ ರೇಣುಕ ಮಂದಿರಕ್ಕೂ, ಗೋಕರ್ಣಕ್ಷೇತ್ರದಲ್ಲಿ ಕಟ್ಟಲ್ಪಡುವ ಶ್ರೀ ವೀರಶೈವ ಮಠಕ್ಕೂ ನಿಮಿನಿದುನೂರು ರೂಪಾಯಿಗಳನ್ನು ಸಲ್ಲಿಸಿರುವರು ಇಂಥ ಧರ್ಮಾತ್ಮರು ನಮ್ಮನ್ನು ಅಗಲಿ ಹೋದದ್ದು ನಮ್ಮ ಧರ್ಮಕ್ಕೊಂದು ತುಂಬಿಬರಲಾರದ ಹಾನಿಯೆಂದೇ ಭಾವಿಸಬೇಕಾಗಿದೆ ಇವರು ತಮ್ಮ ಅಂತ್ಯಕ್ರಿಯೆಗಾಗಿ ನೊದಲೇ ಶ್ರೀ ದುರ್ಗಾವತಿ ಪಟ್ಟದಸ್ವಾಮಿಗಳನ್ನೂ. ಶ್ರೀ ನೆಗಳೂರು ಪಟ್ಟಾಭಿಷ್ಟಕ್ಷಗಳನ್ನೂ ಕರೆಯಿಸಿಕೊಂಡಿದ್ದರು ಅಂತೇಷ್ಟಿ ಕ್ರಿಯೆಗಳೆಲ್ಲವೂ ಸಧಾನೋಕ್ತವಾಗಿ ನೆರವೇರಿದವು ಆಚಾರ್ಯಪ್ರಂಗವರು ಮ್ಮತರ ಆತ್ಮಕ್ಕೆ ಶಾಂತಿಯಸ್ಥೀಯ ಲೆಂದು ಅನನ್ಯ ಭಾವದಿಂದ ಭಜಿಸುತ್ತೇನೆ ಈ ಸಮಯ ದಲ್ಲಿ ಇವರ ಸ್ವತ್ರರು ಶ್ರೀ ಜಗದ್ಗುರು ಅಭಿನವರೇಣುಕ ಪಂಡಿಗೆ ಐದು ರೂಪಾಯಿಗಳನ್ನೂ, ಪಂಚಾಚಾರ್ಯ ಪ್ರಭಾನ್ಯೋಷಣಕ್ಕೆ ಐದು ರೂಪಾಯಿಗಳನ್ನು ಸಮರ್ಪಿಸಿದರು.

ಓರ್ವ ದುಃಖಿಬಾಗಿ

ಎಲ್ಲೆಡೆಯೂ ಸಂಚರಿಸಬಹುದಾದ ವಿಮಾನ

ಭೂ, ಜಲ ಮತ್ತು ವಾಯು ಮಾರ್ಗಗಳಲ್ಲಿ ಉಪಯೋಗಿಸಬಹುದಾಗಿರುವ ಎರಡು ಇಂಜಿನ್‌ಗಳುಳ್ಳ ಒಂದು ಚಿಕ್ಕ ವಿಮಾನವನ್ನು ಬ್ರಿಟಿಷ್ ಏರ್‌ಕ್ರಾಫ್ಟ್ ಸಂಸ್ಥೆಯು ರಚಿಸುತ್ತಿದೆ ಇದರಲ್ಲಿ ನೂರು ಗಾಲ್ಲು ಜನ ಕುಳಿತುಕೊಳ್ಳಬಹುದು!

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರು ಲಿಂಗಾವತಾರದಲ್ಲಿ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೪ಕ್ಕೆ .... ೦—೩—೦

" " " ಚಿಕ್ಕ ಸೈಜು ಬೆಲೆ ... ೦—೧—೦

ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ .... ೦—೧—೦

ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ ... ೦—೧—೦

ಶ್ರೀವೀರಸೋಮೇಶ್ವರಾಚಾರ್ಯರು ಶ್ರೀಸೋಮೇಶ್ವರಾಚಾರ್ಯರಿಗೆ ಚಂದ್ರಸೂರ್ಯಲಿಂಗವನ್ನು ಅನುಗ್ರಹಿಸುವ ಫೋಟೋ ೦—೦—೦

ಶ್ರೀರೇಣುಕಾಚಾರ್ಯರು ಪಿಟೀಸಣನ ಪ್ರಾರ್ಥನೆಯಂತೆ ೫ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೮—೦

ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) .. ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ .... ೦—೧—೦

ಶ್ರೀಮಜ್ಜಗದ್ಗುರು ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ .... ೦—೧—೦

ಶ್ರೀಮತ್ ಭೂಪತೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ .... ೦—೧—೦

ಶ್ರೀಮದ್ಭೂಮಂಡಲಾಧೀಶ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ ೦—೧—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕ ಸೈಜು ೧೪ಕ್ಕೆ ೦—೨—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡ ಸೈಜು ೧೪ಕ್ಕೆ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧೪ಕ್ಕೆ ... ೦—೧—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪ಕ್ಕೆ .... ೦—೧—೦

ಶ್ರೀ ಜಗದ್ಗುರು ಕೇದಾರಪಂಡಿತಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ .... ೦—೧—೦

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ .... ೦—೧—೦

ಲೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವದ ಫೋಟೋ ೦—೧—೦

ಶ್ರೀ ಜಗದ್ಗುರುಪಂಚಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು ... ೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ	ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ವೀರಶೈವಮಹಾತ್ಮರು	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ	ಬಸವಧ್ವಾಂತತಿವಾಕರ (೩ನೆಯ ಆವೃತ್ತಿ)	೮ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ	ಅಗಮನಿರಜ್ಞಾನ	೮ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೦ನೆಯ ಆವೃತ್ತಿ) ...	೩ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ	ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ ..	೧೨ ಆಣೆ
ಬಸವಾದಿಸಿಜತತ್ವದರ್ಪಣ (೪ನೆಯ ಆವೃತ್ತಿ) ..	೩ ಆಣೆ	ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ	ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ.
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ) .. .	೩ ಆಣೆ	ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದುದು. ೩ನೆಯ ಆವೃತ್ತಿ)	೧೫ ರೂ
ಶ್ರೀರುದ್ರಮುನಿಶಿವಾಚಾರ್ಯಶತಕ . ..	೩ ಆಣೆ	ಶ್ರೀಕರಭಾಷ್ಯಂ (ಚತುಸ್ಸೂತ್ರಿ)	೨ ರೂ.
ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಶ್ರೀಗಳಾದ ಪಂಡಿತ ಕುಂಜ್ರು, ಕಾಮತ್, ವಿಲ್‌ಸನ್ ಮುಂತಾದವರು ಹೈದ್ರಾಬಾದಿನ ಬಗ್ಗೆ ಹಲವು ಪ್ರಶ್ನೆಗಳನ್ನು ಕೇಳಿದರು. ಸರ್ದಾರ್ ಪಟೇಲರು ಸೂಕ್ತ ಉತ್ತರವಿತ್ತರು.

" ವಿಶ್ವಸಂಸ್ಥೆಗೆ ನಿಜಾಮರು ಸೋರೆಹೋಗಿರುವುದು ಯಥಾಸ್ಥಿತಿ ಒಪ್ಪಂದಕ್ಕೆ ತೀವ್ರ ವಿರುದ್ಧವಾಗಿದೆ. ಯಥಾಸ್ಥಿತಿ ಒಪ್ಪಂದವನ್ನು ಮುರಿದುದಕ್ಕಾಗಿ ಹೈದ್ರಾಬಾದಿನ ಮೇಲೆ ಯಾವ ಕ್ರಮ ಕೈಗೊಳ್ಳಬೇಕೆಂಬುದನ್ನು ಸರ್ಕಾರವು ತೀವ್ರವಾಗಿ ಆಲೋಚಿಸುತ್ತಿದೆ. ಹೈದ್ರಾಬಾದಿನಲ್ಲಿ ಪರಿಸ್ಥಿತಿ ಹದಗೆಟ್ಟಿದೆ ಎಂಬ ವಿಚಾರವು ನನಗೆ ಚೆನ್ನಾಗಿ ತಿಳಿದಿದೆ" ಎಂದು ಸರ್ದಾರ್ ಪಟೇಲರು ತಿಳಿಸಿದರು.

ಹೈದ್ರಾಬಾದ್ ನಿಯೋಗಕ್ಕೆ ರಹದಾರಿ

ನಿಶ್ಚಸಂಸ್ಥೆಗೆ ಪ್ರಯಾಣ ಬೆಳೆಸಲು ಹೈದರಾಬಾದ್ ನಿಯೋಗಕ್ಕೆ ರಹದಾರಿ ಕೊಡಲಾಗುವುದೇ? ಎಂದು ಶ್ರೀ ಕೆ ಹನುಮಂತಯ್ಯನವರು ಕೇಳಿದ್ದಕ್ಕೆ ಸರ್ದಾರ್ ಪಟೇಲರು ಉತ್ತರ ಕೊಡುತ್ತ " ಯಾರಿಗೆ ಬೇಕಾದರೂ ರಹದಾರಿ ಕೊಡುತ್ತೇವೆ ಮೊದಲಿಕಕ್ಕೆ ಪ್ರಯಾಣ ಮಾಡಲು ಇಚ್ಛೆಪಡುವ ಜವಾಬ್ದಾರರಿಗೂ ಸಹ ಪಾಸ್‌ಪೋರ್ಟ್ ಕೊಡುತ್ತೇವೆ " ಎಂದರು ಸರ್ದಾರರ ಉತ್ತರ ಸಭೆಯಲ್ಲಿ ಕೋಲಾಹಲವೆಬ್ಬಿಸಿತು. ಪಂಡಿತ್ ಕುಂಜ್ರುರವರ ಪ್ರಶ್ನೆಗೆ ಉತ್ತರ ಕೊಡುತ್ತ ಆವಮ್ಯ ಮೇಗ ಹೈದ್ರಾಬಾದಿನ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಸರ್ದಾರರು ಭರವಸೆ ಇತ್ತರು

ಗವರ್ನರ್-ಜನರಲ್ಲರು ಪತ್ರ ಬರೆಯಲಿಲ್ಲ

ಮತ್ತೊಂದು ಪ್ರಶ್ನೆಗೆ ಉತ್ತರ ಕೊಡುತ್ತ ಸರ್ದಾರ್ ಪಟೇಲರು—ಗವರ್ನರ್-ಜನರಲ್‌ರವರು ನಿಜಾಮರಿಗೆ ವೈಯಕ್ತಿಕವಾಗಿ ಯಾವ ಪತ್ರವನ್ನೂ ಬರೆದಿಲ್ಲ ಇಂಗ್ಲೆಂಡಿನ ದೊರೆಗಳು ನಿಜಾಮರಿಗೆ ಬರೆದಿದ್ದ ಪತ್ರವನ್ನು ಮಾತ್ರ ನಿಜಾಮರಿಗೆ ಕಳುಹಿಸಿಕೊಡಲಾಯಿತು ಎಂದರು.

ಹಕೀಂಪೇಟೆ ವಿಮಾನ ನಿಲ್ದಾಣ

ಮೈಸೂರಿನ ಪ್ರತಿನಿಧಿಗಳಾದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಸರ್ದಾರ್ ಬಲದೇವ್ ಸಿಂಗರು ಹೈದರಾಬಾದಿನ ಹಕೀಂಪೇಟೆ ವಿಮಾನ ನಿಲ್ದಾಣವು ಭಾರತಕ್ಕೆ ವಿರುದ್ಧವಾದ ಕಾರ್ಯಾಚರಣೆ ನಡೆಸುವ ಸಲುವಾಗಿಲ್ಲವೆಂದೂ ಆ ವಿಮಾನ ನಿಲ್ದಾಣವನ್ನು ಮಿಲಿಟರಿ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತಿರುವುದಂತೆ ಕ್ರಮಕೈಗೊಳ್ಳಲಾಗುವುದೆಂದೂ ತಿಳಿಸಿದರು.

೧೬ ಜನ ರಜಕಾರರ ಮರಣ

ಹೈದ್ರಾಬಾದ್ ಗಡಿಯಲ್ಲಿ ರಜಕಾರರೂ ಮತ್ತು ಭಾರತ ಸೈನಿಕರೂ ಪರಸ್ಪರ ಹೊಡೆದಾಟವು ಸಂಭವಿಸಿ ೧೬ ಜನ ರಜಕಾರರು ಹತರಾದರು ಒಬ್ಬ ರಜಕಾರನನ್ನು ಸೆರೆ ಹಿಡಿಯಲಾಯಿತು. ಲೂಟಿ ಮಾಡಿದ್ದ ಚಿನ್ನ, ಬೆಳ್ಳಿ, ಒಡವೆಗಳನ್ನೂ, ೩೬ ಬಂದೂಕಗಳನ್ನೂ, ಸುತ್ತು ಗುಂಡುಗಳನ್ನೂ ಭಾರತ ಸೈನಿಕರು ರಜಕಾರರಿಂದ ಸ್ವಾಧೀನಪಡಿಸಿಕೊಂಡರು.

ಘಟನೆಯ ವಿವರ

ನಿಜಾಮ್ ಸ್ಟೇಟೀಸರ ಸಹಾಯದಿಂದ ರಜಕಾರರ ಭಾರಿ ತಂಡವೊಂದು ವಿಜಾಪುರ ಜಿಲ್ಲೆಯಲ್ಲಿರುವ ಒಂದು ಹಳ್ಳಿಯನ್ನು ಆಗಸ್ಟ್ ೩೬, ೩೭ ನೇ ರಾತ್ರಿ ಮುತ್ತಿ ಲೂಟಿ ಮಾಡಲು ಪ್ರಾರಂಭಿಸಿತು ಹಳ್ಳಿಯವರು ಅಲ್ಲಿಯೇ ಕಾವಲಿದ್ದ ಭಾರತ ಸೈನಿಕರ ಸಹಾಯವನ್ನು ಕೋರಿದರು ಸಮಾಚಾರವು ತಿಳಿದ ಕೂಡಲೇ ಭಾರತ ಸೈನಿಕರು ಆ ಹಳ್ಳಿಗೆ ಬಂದರು. ರಜಕಾರರು ಭಾರತ ಸೈನ್ಯದ ಮೇಲೆ ಗುಂಡನ್ನು ಹಾರಿಸಿದರು. ಭಾರತ ಸೈನ್ಯವು ಪ್ರತಿಯಾಗಿ ರಜಕಾರರ ಗುಂಪಿನ ಮೇಲೆ ಗುಂಡನ್ನು ಹಾರಿಸಿತು. ಇದರ ಪರಿಣಾಮವಾಗಿ ೧೬ ಜನ ರಜಕಾರರು ಮಡಿದರು ಆ ಮೇಲೆ ಉಳಿದ ರಜಕಾರರು ನಿಜಾಂ ಗಡಿಯೊಳಕ್ಕೆ ಓಡಿದರು

ವಿಜಯವಾಡದ ಬಳಿ ಭಾರತದ ಪಡೆಯ ಮೇಲೆ ರಜಕಾರರ ಆಕ್ರಮಣ

ಕಳೆದ ತಿಂಗಳು ೯ನೆಯ ತಾರೀಖಿನ ಸುಮಾರು ೧೨೦ ಜನ ರಜಕಾರರು ನಿಜಾಮ ಪೋಲೀಸ್ ಮತ್ತು ಮಿಲಿಟರಿ ಸೈನಿಕರೊಡಗೂಡಿ ಭಾರತ ಗಡಿಯೊಳಕ್ಕೆ ಒಂದು ಮೈಲಿ ದೂರ ಆಕ್ರಮವಾಗಿ ಬಂದು ಸ್ಟೇಲಂಬಲ್ಲಿ ಎಂಬ ಹಳ್ಳಿಯಲ್ಲಿದ್ದ ಭಾರತ ರಕ್ಷಣ ಪಡೆಗಳ ಮೇಲೆ ಗುಂಡನ್ನು ಹಾರಿಸಿದರು.

ಸುಮಾರು ೧ ಗಂಟೆಯ ನಂತರ ಹೊಡೆದಾಟ ಸಂಭವಿಸಿ ರಜಕಾರರಲ್ಲಿ ಮೂರು ಜನರು ಸತ್ತರು. ಒಬ್ಬನಿಗೆ ಗಾಯವಾಯಿತು. ಆ ಮೇಲೆ ರಜಕಾರರು ಓಡಿದರು. ಗಡಿ ಹಳ್ಳಗಳಲ್ಲಿ ದಾಳಿ ನಡೆಸಲು ನಿಜಾಂ ಪೋಲೀಸರು ಮತ್ತು ಮಿಲಿಟರಿಯವರು ರಹಸ್ಯ ನೆಲೆಗಳನ್ನು ನಿರ್ಮಿಸಿದ್ದಾರೆಂದು ತಿಳಿದು ಬಂದಿದೆ. ಸ್ಟೇಲಂಬಲ್ಲಿ ಹಳ್ಳಿಗೆ ಬಂದ ರಜಕಾರರು ನಿಜಾಂಗಡಿಯ ೧ ಮೈಲಿ ದೂರ ದೊಳಗಿರುವ ಹಳ್ಳಿಯಿಂದ ಬಂದರೆಂದು ಹೇಳಲಾಗಿದೆ.

೫೦೦ ಜನ ಗ್ರಾಮಸ್ಥರ ಕೊಲೆ

ಹೈದರಾಬಾದಿನ ಸೈನಿಕರೂ, ಪೋಲೀಸರೂ, ರಜಕಾರರೂ ಕೂಡಿ ಒಟ್ಟು ೫೦೦ ಜನರು ಆಗಸ್ಟ್ ೩೫ ಮತ್ತು ೩೬ ನೆಯ ತಾರೀಗಳಲ್ಲಿ ಹೈದರಪಲ್ಲಿ, ಕಂಡಿಕಲ್ಲ, ಬೆಕ್ಕಂಟಿ ಮತ್ತು ಧುನಿಮೆಟ್ಟು ಗ್ರಾಮಗಳಿಗೆ ನುಗ್ಗಿ ೫೦೦ ಮಂದಿ ಗ್ರಾಮಸ್ಥರನ್ನು ಗುಂಡಿನಿಂದ ಹೊಡೆದು ಕೊಂದರೆಂದೂ, ಬೇಕಾದಷ್ಟು ಅಭರಣಗಳನ್ನೂ, ಹಣವನ್ನೂ ಲೂಟಿ ಮಾಡಿಕೊಂಡು ಹೊರಟುಹೋದರೆಂದೂ ಪ್ರತಿಕಟನವಾಗಿದೆ.

ಮೈಸೂರು ಸಂಸ್ಥಾನದ ಆಹಾರ ಪರಿಸ್ಥಿತಿಯ ಬಗ್ಗೆ ಮುಖ್ಯಮಂತ್ರಿಗಳ ವಿವರಣೆ

ಮುಖ್ಯ ಮಂತ್ರಿಗಳಾದ ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಬೆಂಗಳೂರು ಆಹಾರ ಕಚೇರಿಯಲ್ಲಿ ನಡೆದ ಕೇಂದ್ರ ಆಹಾರ ಸಮಿತಿಯ ಸಭೆಯಲ್ಲಿ "ಆಹಾರ ಪದಾರ್ಥಗಳ ಮಾರಾಟದಿಂದ ಯಾರಾದರೂ ಕುಬೇರರಾಗಲು ಪ್ರಯತ್ನಿಸಿದರೆ ಅವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುವುದು" ಎಂದು ಎಚ್ಚರಿಕೆಯ ಸೂಚನೆಯನ್ನಿತ್ತರು. ಸಂಸ್ಥಾನದಲ್ಲಿ ಕ್ಷಾಮದ ಛಾಯೆಗೆ ಸ್ವಲ್ಪವೂ ಕಾರಣವಿಲ್ಲವೆಂದು ಘೋಷಣೆ ನೀಡಿದರು.

ಇಂದು ಸಂಸ್ಥಾನದ ಆಹಾರ ಸರಬರಾಜು ಪರಿಸ್ಥಿತಿ ಕೆಡುವ ಸಂಭವವಿರುವುದರಿಂದ ಮೂಲ ಪಡಿತರ ಪ್ರಮಾಣದಲ್ಲಿ ಒಂದು ಔನ್ಸನ್ನು ಕಡಿಮೆಮಾಡ ಬೇಕಾಗಿರುವುದು. ಉಳಿದ ಪಡಿತರ ಧಾನ್ಯಗಳ ಮಾರಾಟದ ಬೆಲೆಯನ್ನು ನಿರೀಕ್ಷಾಂತಗಳ ಧಾರಣೆಗೆ ಸರಿತೂಗುವಂತೆ ಹೆಚ್ಚಿಸಬೇಕಾಗುತ್ತದೆ. ಎಂದು ತಿಳಿಯಪಡಿಸಿದರು.

ಮುಖ್ಯ ಸಚಿವರು ಸಂಸ್ಥಾನದ ಇಂದಿನ ಆಹಾರ ಪರಿಸ್ಥಿತಿಯನ್ನು ಪ್ರಸ್ತಾಪಿಸುತ್ತಾ-" ಭಾರತ ಸರ್ಕಾರವು ಮೈಸೂರಿಗೆ ಒದಗಿಸುವ ಆಹಾರ ಧಾನ್ಯಗಳ ಪ್ರಮಾಣವನ್ನು ೩೫೦೦೦ ಟನ್ ನಿಂದ ೬೨೦೦೦ ಟನ್ನಿಗೆ ಇಳಿಸಿರುವುದಾಗಿ ಇತ್ತೀಚೆಗೆ ತಿಳಿಸಿದೆ. ಬರ್ಮಾಘಟನೆಗಳ ಪರಿಣಾಮವಾಗಿ ಭಾರತದ ಆಹಾರ ಧಾನ್ಯಗಳ ಆಮದು ಪರಿಸ್ಥಿತಿ ಇಳಿಮುಖವಾದುದೇ ಇದಕ್ಕೆ ಕಾರಣವೆಂದು ಹೇಳಿದರು.

ಇಂದು ಬದಲಾಯಿಸಿಯಾಗಿರುವ ಯೋಜನೆಯ ರೀತ್ಯಾ ಮೈಸೂರಿಗೆ ಭಾರತ ಸರ್ಕಾರವು ಒಟ್ಟು ೩೫೦೦೦ ಟನ್ ಧಾನ್ಯ ಅಂದರೆ, ೧೧೦೦೦ ಟನ್ ಅಕ್ಕಿ, ೧೦೦೦೦ ಟನ್ ದ್ವಿದಳ ಧಾನ್ಯ ಮತ್ತು ೧೫೦೦೦ ಟನ್ ಗೋಧಿ ಸರಬರಾಜು ಮಾಡುವ ನಿರೀಕ್ಷೆ ಇದೆ. ಸಂಸ್ಥಾನದಲ್ಲಿ ಈಗ ೧೬೫೦೦ ಟನ್ ಅಕ್ಕಿ, ೧೮೦೦೦ ಟನ್ ದ್ವಿದಳ ಧಾನ್ಯ, ೬೨೦೦ ಟನ್ ಗೋಧಿ ಮತ್ತು ಗೋಧಿ ಪರ್ಯಾರ್ಥಗಳು ಅಂದರೆ ಒಟ್ಟು ೩೪೮೦೦ ಟನ್‌ಗಳಷ್ಟಿವೆ

ಡಿಸೆಂಬರ್ ಅಂತ್ಯದವರೆಗೆ ಪಡಿತರ ನ್ಯವನ್ಯೆಯನ್ನು ಪೂರ್ತಿಸಲು ನಮಗೆ ಒಟ್ಟು ೨೮೦೦೦ ಟನ್ ಧಾನ್ಯ ಬೇಕಾಗುವುದು. ಆದರೆ ನಮ್ಮಲ್ಲಿರುವ ದಾಸ್ತಾನು ಮತ್ತು ಭಾರತದಿಂದ ಬರಲಿರುವ ಸರಬರಾಜು ಎರಡೂ ಸೇರಿದರೆ ಸುಮಾರು ೫೦೦೦೦ ಟನ್‌ಗಳಾಗುವುದು.

ಅಂತೆಗೆ ನಮ್ಮ ಸರಬರಾಜಿನಲ್ಲಿ ಒಟ್ಟು ೨೦೦೦೦ ಟನ್ ಕಡಿಮೆ ಬೀಳಲಿದೆ. ಅಷ್ಟೇ ಅಲ್ಲ . ಮುಂದಿನ ವರ್ಷದ ಆರಂಭದಲ್ಲಿ ನಾವು ಸ್ವಲ್ಪ ಶಿಲ್ಕನ್ನು ಉಳಿಸಿಕೊಂಡಿರ ಬೇಕಾದುದು ಅತ್ಯಗತ್ಯವಾಗಿದೆ ಆದ್ದರಿಂದ ಸುಮಾರು ಒಟ್ಟು ೩೩೦೦೦ ಟನ್ ಧಾನ್ಯ ಕಡಿಮೆ ಬೀಳುವುದು ಎಂದು ಅಂದಾಜಾಗಿದೆ.

ಭಾರತ ಸರ್ಕಾರವು ನಮ್ಮ ಸರಬರಾಜಿನಲ್ಲಿ ಮಾತ್ರವೇ ಅಲ್ಲ, ಇತರ ಪ್ರದೇಶಗಳ ಸರಬರಾಜಿನಲ್ಲೂ ಕಡಿಮೆಮಾಡಿದೆ ಆಲ್ಲದೆ ಈ ಪರಿಸ್ಥಿತಿಯನ್ನು ಎದುರಿಸಲು ಕೆಲವು ಸಲಹೆಗಳನ್ನು ಸೂಚಿಸಿದೆ.

ಭಾರತ ಸರ್ಕಾರದ ಸಲಹೆಗಳು

ಪಡಿತರ ಪ್ರಮಾಣದಲ್ಲಿ ಸ್ವಲ್ಪ ಕಡಿಮೆಮಾಡು ವುದು, ಶೈತಿಂದ ಕೊಳ್ಳುವ ಬೆಲೆಯನ್ನು ಹೆಚ್ಚಿಸಿ ಅದಕ್ಕೆ ತಕ್ಕ ಮಾರಾಟದ ಬೆಲೆಯನ್ನು ಇಡುವುದು, ಸೂಕ್ಷ್ಮ ಕಂಡಿ ಸಂದರ್ಭಗಳಲ್ಲಿ ಸರ್ಕಾರದವರೇ ಬೆಲೆ ಗೊತ್ತುಮಾಡಿ ಹೆಚ್ಚುವರಿ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳುವುದು ಮತ್ತು ಪಡಿತರ ಪ್ರದೇಶಗಳಲ್ಲಿ ಹೆಚ್ಚಿಗೆ ಮತ್ತು ಕಡಿಮೆ ಉತ್ಪನ್ನವಿರುವ ವರ್ಗಗಳನ್ನು ಬಿಗಡಿಸಿ ಕಡಿಮೆ ಉತ್ಪನ್ನವಿರುವ ವರ್ಗಗಳಿಗೆ ಅಗ್ಗದ ಬೆಲೆಗೆ ಆಹಾರ ಧಾನ್ಯಗಳನ್ನು ಒದಗಿಸುವುದು ಇವು ಮುಖ್ಯವಾದ ಸಲಹೆಗಳು.

ಮೈಸೂರಿನ ಆಹಾರ ಪರಿಸ್ಥಿತಿಯನ್ನು ವಿಶೇಷ ರೀತಿಯಲ್ಲಿ ಪರಿಗಣಿಸಿ ನಮಗೆ ಸಾಕಷ್ಟು ಧಾನ್ಯ ಸರಬರಾಜು ಮಾಡಬೇಕೆಂದು ನಾವು ಭಾರತ ಸರ್ಕಾರವನ್ನು ಒತ್ತಾಯಪಡಿಸುತ್ತಲೇ ಇದ್ದೇವೆ ನಮ್ಮಿಪ್ರಯತ್ನ ಸ್ವಲ್ಪವೂ ಸಡಿಲವಾಗಿಲ್ಲ ಆದರೂ ಏನೆನ್ನೆಲ್ಲಿ ಜರುಗಿ ಪರಿಸ್ಥಿತಿಯನ್ನು ಎದುರಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯಕವಾದಕಾರಣ ಪಡಿತರ ಪ್ರದೇಶದಲ್ಲಿ ಸಾರ್ವತ್ರಿಕವಾಗಿ ಒಂದು ಔನ್ಸ್‌ನಷ್ಟು ರೇಷ್ಠ ಕಡಿಮೆ ಮಾಡಬೇಕು: ಪಡಿತರ ಧಾನ್ಯಗಳ ಮಾರಾಟದ ಬೆಲೆ ಯನ್ನು ಸ್ವಲ್ಪ ಹೆಚ್ಚಿಸಬೇಕು ಮತ್ತು ಸರ್ಕಾರವು ಬೆಲೆ ನಿಗದಿಮಾಡಿ ಆಹಾರ ದಾಸ್ತಾನನ್ನು ಕೊಂಡು ಸರ್ಕಾರದ ಶೇಖರಣೆಯನ್ನು ಸ್ವಲ್ಪ ಉತ್ಪನ್ನಮಡಿಸಬೇಕು; ಮತ್ತು ಮೇಲ್ಕಂಡ ಅಶ್ಚೆಯನ್ನು ಸರಿಯಾಗಿ ಪಾರಿಸಿ ಮಾಡಿ ಜನತೆಯಲ್ಲಿ ಧೈರ್ಯವನ್ನೂ ವಿಶ್ವಾಸವನ್ನೂ ಹೆಚ್ಚಿಸಬೇಕು.

ಮುಖ್ಯವಾಗಿ ಇಂದಿನ ಆಹಾರ ಪರಿಸ್ಥಿತಿಯು ಭಾರತ ಸರ್ಕಾರದ ನಿರೀಕ್ಷೆಗೆಯನ್ನು ಮೀರಿ ಹತಾಶ್ಚಾಗಿ ಸಂಭವಿಸಿದುದಾಗಿದೆ. ಮೊದಲು ಹಿಕಂಟ್ರೋಲ್ ನೀತಿ ಅನುಸರಿಸಿದಾಗ ಪರಿಸ್ಥಿತಿ ಉತ್ಪತ್ತಿಮಗೊಳ್ಳುವ ಸೂಚನೆಗಳೇ ಇದ್ದುವು. ನಾವು ರಾಗಿ ಹಿಟ್ಟೋಟ ತೆಗೆದುಹಾಕಿದಾಗ ಅದರ ಬೆಲೆ ಕಂಟ್ರೋಲ್ ಬೆಲೆಗಿಂತಲೂ ಇಳಿಯಿತು. ಆದರೆ ಈಗ ಅದನ್ನು ಶೈತಿಂದ ಕೊಂಡ ವರ್ತಕರೇ ಬೆಲೆಯನ್ನು ವಿಪರಿಬ್ಬಿದ್ದಾರೆ.

ಇಂದು ನಾವು ಪರಿಸ್ಥಿತಿಯನ್ನು ಎದುರಿಸಲು ಅಪ್ರಿಯವಾದ ಕೆಲಸಕ್ಕೆ ಕೈಹಾಕಬೇಕಾಗಿ ಬಂದಿದೆ. ನಿಜ ಪರಿಸ್ಥಿತಿಯನ್ನು ಪ್ರತಿಗೆಗಳ ಮುಂದೆ ಇಟ್ಟು ಮನಃ ಪರಿವರ್ತನೆಯಿಂದ ಇಡಿಯುವುದು ನಮ್ಮ ಧರ್ಮ! ಎಂದು ಹೇಳಿದರು.

ಸಿದ್ಧಾಂತಶಿಖಾಮಣಿ

ವೀರಶೈವ ಸಂ[illegible] ಪ್ರತಿಯೊಬ್ಬ ಸಿದ್ಧಾಂತಿಯು ಸದ್ಗ್ರಂಥವೆಂದು ಪ್ರಾಮಾಣಿಕವಾಗಿ ಅಭಿಮಾನಿಸುವ ಮತ್ತು ಪ್ರತಿದಿನವೂ ಪಾರಾಯಣ ಮಾಡುವ ಸಿದ್ಧಾಂತಶಿಖಾಮಣಿಯು ಪಂಚಾಚಾರ್ಯ ಪರಂಪರೆಯ ಜಗದ್ಗುರುಗಳಲ್ಲಿ ಒಬ್ಬರಾದ ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಜಗದ್ಗುರು ಶ್ರೀ ಶಿವಾಚಾರ್ಯ ಭಗವತ್ಪಾದರಿಂದ ಉಪದೇಶಿಸಲ್ಪಟ್ಟ ಶಿವಾಗಮಗಳಲ್ಲಿ ಒಂದಾದ ಸುಪ್ರಭೇದಾಗಮದ ಸಾರಸಂಗ್ರಹವಾಗಿದ್ದು ಸಕಲ ಶಿವಾಗಮಗಳ ಸಾರಸರ್ವಸ್ವವೆಂದು ಪ್ರಸಿದ್ಧವಾಗಿರುವ ಈ ಗ್ರಂಥವು ಈಗ್ಗೆ ಸುಮಾರು ೨೩೦ವರ್ಷಗಳ ಹಿಂದೆ ಪೂರ್ಣಾಯುರ್ದಾಯಕರಾಗಿ ಬಾಳಿ ಬದುಕಿದ್ದ ಪರಮಪೂಜ್ಯ

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾದಿ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಭವನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧಿಯಾಮಕರ್ ಪರಿಲಸತ್ಪಂಚಾಕ್ಷರೀಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀ ಲೋಕಮಂ ।

ಸ್ಥಳದವರಿಗೆ ೨ ರೂ ೪ ಆಣೆ ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಸೆಪ್ಟೆಂಬರ್ ೧೯೪೮ [ಸಂಚಿಕೆ ೧೮

ವ್ಯವಸಾಯಮಂತ್ರಿಗಳ ಸಮ್ಮೇಳನ

ಆಹಾರದ ಬಗ್ಗೆ ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿಗಳ ಭಾಷಣ

ವ್ಯವಸಾಯಕ್ಕೆ ಹೆಚ್ಚು ಹಣ ಮತ್ತು ಹೆಚ್ಚು ಜನರು ವಿನಿಯೋಗವಾಗದಿದ್ದಲ್ಲಿ ಭಾರತದ ಆಹಾರಪರಿಸ್ಥಿತಿಯು ಯಾವಾಗಲೂ ಅನುಮಾನಗ್ರಸ್ತವಾಗಿಯೇ ಇರುವುದು ಮತ್ತು ಆಹಾರದಂಥ ಅತ್ಯವಶ್ಯ ಪದಾರ್ಥದ ವಿಷಯದಲ್ಲಿ ಭಾರತವು ಪರರಾಷ್ಟ್ರಗಳ ಮೇಲೆ ಅವಲಂಬಿಸುವುದು ತಪ್ಪಲಾರದು ಎಂದಿರಲು ವೇಳೆಗೆ ಯಾವ ಪ್ರಾಂತವೇ ಆಗಲಿ ಕೇಂದ್ರ ಸರ್ಕಾರದ ಕಡೆ ಕೈಚಾಚಕೂಡದು.

ಎಂಬುದಾಗಿ ಕೇಂದ್ರ ಸರ್ಕಾರದ ವ್ಯವಸಾಯ ಸಚಿವರಿಂದ ಶ್ರೀಜಯರಾಮದಾಸ ದೌಲತ್‌ರಾಮರವರು ವ್ಯವಸಾಯ ಸಚಿವರ ಸಮ್ಮೇಳನದಲ್ಲಿ ಭಾಷಣಮಾಡುತ್ತಿರುವಿದರು ಈ ಸಮ್ಮೇಳನದಲ್ಲಿ ಎಲ್ಲ ಪ್ರಾಂತಗಳ ವ್ಯವಸಾಯ ಸಚಿವರೂ ಅಧಿಕಾರಿಗಳೂ ಬಂದಿದ್ದರು ಒರಿಸ್ಸಾ ಮುಖ್ಯಮಂತ್ರಿಯವರಾಗಿದ್ದ ಶ್ರೀ ಹರೇಕೃಷ್ಣ ಮಹತಾಬ್‌ರವರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು ಆಹಾರ ಬೆಳೆಯುವ ಮತ್ತು ಹಾಗೆ ಬೆಳೆಯಲು ಉಂಟಾಗುವ ಹೊಡೆದಾಟಗಳನ್ನು ಪರಿಹರಿಸುವ ಬಗ್ಗೆ ಸಮಾಲೋಚನೆ ನಡೆಸುವ ಉದ್ದೇಶ್ಯದಿಂದ ಈ ಸಮ್ಮೇಳನವನ್ನು ಕರೆಯಲಾಗಿತ್ತು ಸಮ್ಮೇಳನದಲ್ಲಿ ವಹಿಸಿದ ಮೂರು ಬೇರೆ ಬೇರೆ ಉಪಸಮಿತಿಗಳನ್ನು ರಚಿಸಲಾಯಿತು ಧಾರಣೆಯಾಗಗೆನ್ನು ಪರಿಶೀಲಿಸಲು ಕೃಷ್ಣಮಾಚಾರಿ ಸಮಿತಿಯ ಸಲಹೆ ಮೇರೆಗೆ ಸಮಿತಿಯನ್ನು ನೇಮಿಸಲಾಯಿತು ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಸಭೆಯ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಸಭೆಯು ಸೆಪ್ಟೆಂಬರ್ ೧೫ ರಲ್ಲಿ ವ್ಯವಸಾಯ ಸಚಿವರ ಸಮ್ಮೇಳನವನ್ನು ಕರೆಯಲು ಶಿಫಾರಸ್ಸು ಮಾಡಿತು ಭಾರತದ ಆರ್ಥಸಂಪತ್ತನ್ನು ಹೆಚ್ಚಿಸಲು ಮೂರು ಸಮಿತಿಗಳು ರಚಿತವಾಗಿವೆ

ಶ್ರೀಜಯರಾಮದಾಸ್ ದೌಲತ್‌ರಾಮರವರು ಆಧ್ಯಕ್ಷ ಭಾಷಣ ಮಾಡುತ್ತಾ, ವ್ಯವಸಾಯದ ಉನ್ನತಿಗಾಗಿ ಹೆಚ್ಚು ಹಣ ಮತ್ತು ಹೆಚ್ಚು ಜನರನ್ನು ವಿನಿಯೋಗಿಸಿದ್ದಲ್ಲಿ ಭಾರತದ ಆಹಾರಪರಿಸ್ಥಿತಿ ಸುಧಾರಿಸುವುದೆಂದೂ, ಅದು ಸರಕಾರ್ಯಗಳ ಮೇಲೆ ಆಹಾರ ಪದಾರ್ಥಗಳ ಬಗ್ಗೆ ಆವಲಂಬಿಸಬೇಕಾಗುತ್ತದೆಂದೂ ಹೇಳಿದರು

ಪ್ರಾಂತಗಳು ಕೇಂದ್ರಕ್ಕೆ ಮೊರೆಹೋಗಬಾರದು

ಪ್ರಾಂತಗಳು ತಮ್ಮ ಆಹಾರವನ್ನು ತಾವೇ ಪೂರೈಸಿಕೊಳ್ಳುವಂತೆ ಮುಂಚಿತವಾಗಿಯೇ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಬೇಕು ಮತ್ತು ಯಾವುದೇ ಸಂದರ್ಭವಾಗಲೀ ಕೇಂದ್ರಸರ್ಕಾರವನ್ನು ಅವಲಂಬಿಸಬಾರದು ಎಂದೂ ಇನ್ನು ಇನ್ನಮುಂದೆ ಆಹಾರ ಪದಾರ್ಥಕ್ಕೆ ಯಾವ ಪ್ರಾಂತವೇ ಆಗಲಿ ಕೇಂದ್ರಸರ್ಕಾರದ ಕಡೆ ಕೈಚಾಚಬಾರದು ದೇಶದ ಆಹಾರ ತಯಾರಿಕೆಯನ್ನು ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಮಾಡಬೇಕೆಂದು ಶ್ರೀ ದೌಲತ್‌ರಾಮರವರು ಸೂಚಿಸಿದರು

ವ್ಯವಸಾಯ ಲೆಕ್ಕಪತ್ರಗಳ ಅವಶ್ಯಕತೆ

ಯಾವ ದೇಶದ ಆಳಿ ಸರಿಯಾದ ಅಂಕಿ ಅಂಶಗಳನ್ನು ಪತ್ತೆಗೆ ಇಟ್ಟುಕೊಳ್ಳದೆ ಮತ್ತು ಸದ್ಯದ ಪರಿಸ್ಥಿತಿಯನ್ನು ಸರಿಯಾಗಿ ಅರಿತುಕೊಳ್ಳದೆ ಯಾವ ಯೋಜನೆಯನ್ನೂ ಸಿದ್ಧಗೊಳಿಸಿಕೊಳ್ಳಲಾರದು ಇದರಂತೆ ಇಂಡಿಯಾದ ವ್ಯವಸಾಯಕ್ಕೆ ಸಂಬಂಧಿಸಿದ ಅಂಕಿ ಅಂಶಗಳನ್ನು ಯಾರಿಂದಲೂ ಗೋಡಿದಾಗ ಅವು ಸರಿಯಾಗಿ ಇಲ್ಲವೆಂಬ ಭಾವನೆ ಉಂಟಾಗುತ್ತದೆ ಅಮೆರಿಕವು ತಯಾರಿಸಲಿರುವ ವಿಶ್ವ ಆಹಾರ ಮತ್ತು ವ್ಯವಸಾಯ ಅಂಕಿ ಅಂಶಗಳನ್ನು ಆಳಿ ಹಾಕುವ ಕೆಲಸದಲ್ಲಿ ಭಾರತವು ಪಾಲ್ಗೊಳ್ಳಬೇಕು. ಮತ್ತು ನಾವೂ ಸಹ ೧೯೪೦ ರಲ್ಲಿ ನಡೆಯುವ ವ್ಯವಸಾಯ ಸೆನ್ಸಸ್‌ನಲ್ಲಿ ಒಂಗ ಕೆಲಸ ಕೊಳ್ಳಬೇಕು

ವ್ಯವಸಾಯಕ್ಕೆ ತಕ್ಕ ಶ್ರಮವಹಿಸಿ ಕೆಲಸಮಾಡಿದಲ್ಲಿ ಭಾರತವು ಆಹಾರದ ಬಗ್ಗೆ ಇನ್ನು ಒಂದಷ್ಟು ವರ್ಷಗಳಲ್ಲಿ ನಮ್ಮ ಕೈಗಾರಿಕಾ ಚಟುವಟಿಕೆಗಳಿಗೆ ಮತ್ತು ರಾಷ್ಟ್ರೀಯ ಸಂಪದಭಿವೃದ್ಧಿಗೆ ವ್ಯವಸಾಯವು ಬೆನ್ನೆಲುಬಾಗಿಯಂತಿದೆ ಅಮೆರಿಕನ್ ವ್ಯವಸಾಯಗಾರರು ನಮಗಿಂತಲೂ ಹೇಗೆ ಹೆಚ್ಚು ಬೆಳೆ ಬೆಳೆಯುತ್ತಾರೆಂದು ನಮ್ಮವರು ಹೇಳಿದ ಜವ ಟೀಕಿಸುತ್ತಾರೆ ಆದರೆ ಅಮೆರಿಕನ್ ರೈತರಿಗೆ ಎಷ್ಟು ನೆರವು ನೋಪುತ್ತಿದೆಯೆಂಬುದನ್ನು ಗಮನಿಸಬೇಕು ಎಂದು ಹೇಳಿದರು ಭಾರತದಲ್ಲಿರುವ ಜಿಲ್ಲಾ ವೇಕ್ಷಕ ಇಲ್ಲಿನ ಜನಸಂಖ್ಯೆ ಹೆಚ್ಚಿಂದು ಜನೆ ಕರು ಭಾವಿಸಿದ್ದಾರೆ ಆದರೆ ಈ ಭಾವನೆ ತಪ್ಪು ತಿಯಿಸಿಕೆ ಯಿಂತ್ರೀಕರಣಗಳಿಂದ ಪಶು ವ್ಯವಸಾಯ ಪದ್ಧತಿಯಿಂದ ನಾವು ಆಹಾರವನ್ನು ಬೆಳೆದುಕೊಂಡು ಇತರರನ್ನು ಅವಲಂಬಿಸದಂತೆ ಇರಬಹುದೆಂದು ಹೇಳಿದರು

ಭಾರತ ಸೈನಿಕರಿಗೆ ನೂತನ ಸ್ಫೂರ್ತಿ

ಕಾಶ್ಮೀರದ ಕದನದಲ್ಲಿ ಪರಾಕ್ರಮ ತೋರಿಸಿ ಹೋರಾಡಿರುವ ಸೈನಿಕರಿಗೆ, ವೀರಚಕ್ರ, ಪರಮವೀರ ಚಕ್ರ ಇತ್ಯಾದಿ ನೂತನ ಬಿರುದಿನ ಪೆಡಲುಗಳನ್ನು, ಕೊಡಲಾಗುವುದೆಂದು ಭಾರತ ಸರ್ಕಾರದ ರಕ್ಷಣಮಂತ್ರಿ ಸರ್ದಾರ್ ಬಲದೇವಸಿಂಗ್‌ರವರು ಹೇಳಿದ್ದಾರೆ

ಪಾಕಿಸ್ಥಾನದ ಗವರ್ನರ್ ಜನರಲ್ ಜನಾಬ್ ಜಿನ್ನಾರವರ ನಿಧನ

ಪಾಕಿಸ್ಥಾನದ ಗವರ್ನರ್ ಜನರಲ್ ಆಗಿದ್ದ ಜನಾಬ್ ಜಿನ್ನಾರವರು ಇದೇ ತಿಂಗಳು ೧೧ ನೆಯ ತಾರೀಖಿನ ದಿವಸ ರಾತ್ರಿ ಕರಾಚಿಯಲ್ಲಿ ಹೃದಯಸ್ತಂಭನದಿಂದ ಮರಣಹೊಂದಿದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ.

ಶ್ರೀ ರೇವಣಸಿದ್ಧೇಶ್ವರಮಹೋತ್ಸವ
ಸೊಲ್ಲಾಪುರ

ಸೊಲ್ಲಾಪುರ ನಗರದಲ್ಲಿ ಶ್ರೀ ರೇವಣಸಿದ್ಧೇಶ್ವರ ಮಹೋತ್ಸವವು ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಸಹ ಶ್ರಾವಣಮಾಸದಲ್ಲಿ ಮಹಾ ವೈಭವದೊಡನೆ ನೆರವೇರಿತು ಶ್ರಾವಣ ಒಹುಳ ನವಮಿ ದಿವಸ ಶ್ರೀ ಸ್ವಾಮಿಯ ಪಲ್ಲಕ್ಕಿ ಉತ್ಸವವು ಹುಬ್ಳಿ ಮಕ್ಕಿಂದ ಹೊರಟು ದೇವಾಲಯಕ್ಕೆ ತಲಪಿದ ಮೇಲೆ ಏಕಾದಶರುದ್ರಾಭಿಷೇಕ ಸಪ್ತಸ್ವರಬಲ್ಲಾರ್ಕನಾದಿಗಳು ನೆರೆವೇರಿದುವು ಅಮೇಲೆ ಗಣಾರಾಧನೆಯು ನಡೆಯಿತು ಮಧ್ಯಾಹ್ನ ೩ ಗಂಟೆ ಉತ್ಸವವು ಗುರುಭಿಕ್ಷೆಯಿಂದ ಕೊರಬಿಕು ಅಲ್ಲಲ್ಲಿ ಭಕ್ತರು ಕಾಯಿ ಕರ್ಪೂರಾದಿಗಳನ್ನು ಸಮರ್ಪಿಸಿ ಶಿಕೀರ್ವಾದವನ್ನು ಪಡೆಯುತ್ತಿದ್ದರು ಉತ್ಸವವು ಹುಬ್ಳಳ್ಳಿ ವರ್ತಕ ತಲಪಿದಮೇಲೆ ಮಹಾಮಂಗಳಾರತಿಯು ನೆರೆವೇರಿತು ಒಳಕ ಶ್ರೀ ಜೈನಾಪುರ ಚರಮೂರ್ತಿಸ್ವಾಮಿಗಳವರ ಅದ್ಯಕ್ಷತೆಯಲ್ಲಿ ಸಭೆ ಗೂಡಿತು ಶ್ರೀ ವೆಂಟಿಮೂರಿ ಪಟ್ಟಾಧ್ಯಕ್ಷರು ಶ್ರೀ ವಿಶ್ವೇರಾಮಾರಾಧ್ಯ ಬ್ಯಾಹಟ್ಟಿ, ವೇ॥ ಪಂಡಿತ ಮಣೂರು ಮಲ್ಲಿಕಾರ್ಜ. ನಶಾಸ್ತ್ರಿಗಳು ಇವರೇ ಮೊದಲಾದವರು ಗುರುಮಹತ್ತಿದ ಒಗ್ಗೆ ಭಾಷಣ ಮಾಡಿದರು ಅಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಸಲ್ಪಟ್ಟಿತು

ಸಿದ್ಧರಾಮಶಾಸ್ತ್ರೀ ದೇವಣಗಾನವರ್

ಸ್ವೀಕಾರ

ಗದಗ ಸಿಟಿಯಲ್ಲಿರುವ ಶ್ರೀ ರಾಜೋಪ ವೀರಭದ್ರ ದೇವಸ್ಥಾನದಲ್ಲಿ ವೇ॥ ಗುಡೂರು ರುದ್ಯಾರ್ಯಸ್ವಾಮಿ ಶಾಸ್ತ್ರಿಗಳು ಶ್ರಾವಣ ಮಾಸದಲ್ಲಿ ವಿಶೇಷಕಾರ್ತಿಕನೆಯನ್ನು ಅತ್ಯಂತ ವೈಭವದಿಂದಾಗಿ ಮಾಡಿ ಸರ್ವರನ್ನೂ ಆನಂದತುಂದಿಲರನ್ನಾಗಿ ಮಾಡಿದ ಸಂತೋಷಕ್ಕಾಗಿ ಪ್ರಭಾಪ್ರೇಸಣಕ್ಕೋಸ್ಕರ ಶ್ರೀಮಂತ ಮಾನ್ಯ ಶಿವಲಿಂಗಪ್ಪನವರ ಸೂಚನೆಯ ಪ್ರಕಾರ ಸಮರ್ಪಿಸಲ್ಪಟ್ಟ 5 ರೂ ಗಳು ವೇ॥ ಗುಡ್ಡಿಮಠದ ಸಂಗಯ್ಯನವರ ದ್ವಾರಾ ತಲಪಿರುತ್ತವೆ

ಸೊಲ್ಲಾಪುರದಲ್ಲಿ ಶ್ರೀ ರೇವಣಸಿದ್ಧೇಶ್ವರರ ಉತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪ್ರೇಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ವೇ॥ ಸಿದ್ಧರಾಮ ಶಾಸ್ತ್ರಿಗಳು ದೇವಣಗಾಂವಕರ್ ಇವರ ದ್ವಾರಾ ತಲಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿಷ್ಕಳಂಕಲಿಪ್ಸಿ ಆಶೀರ್ವದಿಸುತ್ತೇವೆಯೆಂದು ಹಾರೈಸುತ್ತೇವೆ

ಸದ್ಗುರುವಿನ ಸ್ವರೂಪ

ಲೇ|| ಎಸ್. ಜಿ. ಜಗನ್ನಾಥರಾವ್ ಪಾಟೀಲ್ ಬಿ.ಎ. ಬಿ.ಟಿ. ಬಸವಪಟ್ಟಣ

ಗುಣಾತೀತಂ ಗುಕಾರಂ ಚ ಜ್ಞಾನಾತೀತಂ ಗುಕಾರಕಂ
ಗ ಸಾತೀತಮನಂತಂ ಚ ಯೋ ಗುರುಃ ಸೈ ಶ್ರೀ ಗುರವೇ ನಮಃ

ಗುಕಾರವು ಪ್ರಕೃತಿಗುಣಗಳಿಂದ ಪೂರವಾದುದು ರುಕಾರವು ಅಶುದ್ಧವಾದ ಮಾಯಾರೂಪದಿಂದ ರಹಿತವಾದುದು ಪ್ರಕೃತಿಮಯವಾದ ಮಾಯೆಯಿಂದ ಬಿಡಲ್ಪಟ್ಟ ಜ್ಯೋತಿರ್ಮಯವಾದ ಮಹಾಲಿಂಗವನ್ನು ಯಾವನು ಉಪದೇಶಿಸುವನೋ ಅವನೇ ಗುರುವು! ಯಾವನ ಕರುಣಾಮಾತ್ರದಿಂದ ನಾನು ನನ್ನಲ್ಲಿಂಬ ಮಮಕಾರ ರೂಪ ಮನಶ್ಯಕ್ತಿಯ ನಿಜಾತ್ಮಾನಂದದಲ್ಲಿ ನಿರಭಿಮಾನದಿಂದ ನಿಶ್ಚೈಸುಖಿಯಾಗುವನೋ ಶಂತಪ ಮಯಾಸಾರನಾದ ಅಪರಿಮಿತ ಒಂಬನೇ ಗುರುವು! ಯಾವನು ಸಹಸ್ರಾರವೆಂಬ ತಿರಶ್ಚಕ್ರದಲ್ಲಿ ಸ್ವಯ ಾಶನಾಗಿರುವ ಪರಮೇಶ್ವರನ ಪಾದಗಳಲ್ಲಿ ನವನಭಕ್ತಿಯನ್ನಿಂಟು ಮಾಡಿ ಸತ್ಯಮ್ಯಾನುಷ್ಠಾನ ಸಂವಿಧಾನಗಳನ್ನು ತಿಳಿಯಪಡಿಸಿ ಸಮಸ್ತ ಪಾಪಗಳನ್ನು ಪರಿಹರಿಸಿ, ಸಕಲ ಪ್ರಾಣಿಸಾಧಾರಣವಾಗಿರುವ ಕ ಪೆಯನ್ನೂ ದಗಿಸಿಕೊಟ್ಟು ಸನ್ಮಕಲವೂ ಸನಾ ರ್ದಯಿಯಾಗವನೋ ಅವನೇ ಗುರುವು! ಯಾವನು ಸಹ ಸದ್ಭವ ಅಹಿ ಸಾದಿ ತತ್ತ್ವಗಳನ್ನು ಬೋಧಿಸಿರುಡಿ ಸಂಪ ಪ್ರೀತಿ ಮಾಡಲಂದ ವಿಷಯಾಕಾಂಕ್ಷೆಯನ್ನು ತಪ್ಪಿಸಿ ಸದಾ ಸತ್ಸ ಗತ್ತಿಡೆ ಯೆಂಬಿ ದು ನೇಮಿಸಿ, ಮಾದವೆಯ್ಯಗಿಳಲ್ಲಿ ದೂರ ನೆಗಿಸಿ ವೈರಾಗ್ಯವೆಂಬ ನಿರಾಕಾಂಕ್ಷೆಯನ್ನು ನಮಗೆ ದಯಪಾಲಿಸುವನೋ ಅವನೇ ಗುರುವು! ಯಾವನು ಇದು ಎಂಥ ಇಷ್ಟೆಹವೆಂದು ಎಲ್ಲಿ ಗತಿ ನನ್ನು ಎಂದಿಗೂ ನಿತ್ಯತಾಗಲ್ಲ ಪಿಸಿ ನಿವೆ ಮಾಡಿ ಬಿಟ್ಟಿರಿ ಆಸಕ್ತಿಂದ ವಿರ್ವನ ಕ್ಕಂದು ಸನುಸ್ತ ಭೂತ್ಕಳ್ಳಿಯೂ ಸಮಳ ಿತ್ತಿವಿನ್ನ ಅಳವಡಿಸಿಕೊಟು ತತ್ತ್ವ ನಾ ಮುಖಾಕಾರ ನ್ನು ಪವೇಶಿಸಿ, ಜಾಂಬೂ ವಸಿಚಿತ್ಕಾನವನ್ನೂ ಬಿಗೆದ ಹಾಗೆ ಮಾಡಿ ಸಗಾಂನಂದರೂಪನೆ ೈಕ್ಯವನ್ನ ಮನೆಮೂರ್ಗಂಕರಿ ಪ್ರಾಪ್ತಿ ವ ಜೀವನ ಶಿವನ ಗುರುವು! ಯಾವನ ಯಾವ ಪ್ರಾಂತದಿ ದಲೂ ಮರಿಮನೆಯುಂಟಾಗದ ಹಾಗೆ ನಾಡಿ ಮೆಸಕರ್ಕಾರಿವಿ ಗಳ ವಿವರವನ್ನು ತಿಳಿಯಪಡಿಸಿ ಮನುಷ್ಯನ ಜಾಂಜಿಲ್ಯ ವೆನು ತಪ್ಪಿಸಿ ವಿಕಾಗ್ರವಪ್ಪಿಂತೆ ಮಾಡಿ ಸಕಲ ಸಂಶಯಗಳನ್ನು ತಾಶಮಾಡಿ ಸಮಾನಂದಾನ ಬವದಲ್ಲಿ ರಮಿಸುವಂತೆ ಮಾಡುವನೋ ಅವನೇ ಗುರುವು! ಯಾವನು ಜೀವಾತ್ಮ ಪರಮಾತ್ಮೈಕ್ಯಸಾಧನವನ್ನು ಗ್ರಹಿಸಿ ಸಂಸಾರವೆಂಬ ಬೇಗೆಯನ್ನು ಶಾಂತಮೂಡಿ ಅನದ್ಯತ ಮೋಕ್ಷಾಂಗೆನಾಸಂಸರ್ಗವ್ಯಂಬಾಗುವಂತೆ ಮಾಡಿ ನಿಜಸುಖವನ್ನು ಕೊಡುವನೋ ಅವನೇ ಗುರುವು! ಯಾವನು ಆತ್ಮಾನಾತ್ಮವಿವೇಕಸಂಪನ್ನನಾಗಿಯೂ, ವೈರಾಗ್ಯಶಾಲಿಯಾಗಿಯೂ, ಶುದ್ಧಮನಸ್ಸುಳ್ಳವನಾಗಿಯೂ, ಶಾಸ್ತ್ರವಿಚಾರವುಳ್ಳವನಾಗಿಯೂ, ಮಾಯಾಸಂಸಾರವನ್ನ ಬಿಟ್ಟವನಾಗಿಯೂ, ಶಿವನೊಬ್ಬ ನನ್ನೇ ಶರಣುಹೊಕ್ಕವನಾಗಿಯೂ, ಲೋಕವಿಖ್ಯಾತ ನಾಗಿಯೂ, ಆರಿಷಡ್ವರ್ಗಗಳನ್ನು ಬಿಟ್ಟವನಾಗಿಯೂ, ಅತ್ಯತತ್ತ್ವವಿಚಾರವನ್ನು ತಿಳಿದವನಾಗಿಯೂ, ಶಿವ ಸಿದ್ಧಾಂತತತ್ತ್ವಜ್ಞನಾಗಿಯೂ, ಧರ್ಮಿಕನಾಗಿಯೂ, ಸತ್ಯ ಸಂಧನಾಗಿಯೂ, ಸರ್ವಂತಸಂಶಾತನಾಗಿಯೂ, ಗುರು ವಂಶಕ್ಕವಾನುಗತಾಚಾರವುಳ್ಳವನಾಗಿಯೂ, ಕುಮಾ ರ್ಗಾಚಾರವರ್ಜಿತನಾಗಿಯೂ, ಶಿವಲಿಂಗಚಿಂತಾಪರ ನಾಗಿಯೂ, ರಾಗದ್ವೇಷರಹಿತನಾಗಿಯೂ, ಪರಶಿವ ಸ್ವರೂಪವನ್ನು ತಿಳಿದವನಾಗಿಯೂ, ಭಸ್ಮೋದ್ಧೂಳನ ತುಶಲನಾಗಿಯೂ, ಭಸ್ಮತ್ರಿಪುಂಡ್ರಪವಿತ್ರಕವನ್ನು ತಿಳಿದವ ನಾಗಿಯೂ, ತ್ರಿಪುಂಡ್ರಧಾರಣದಲ್ಲಿ ಉತ್ಸಾಹವನಾಗಿಯೂ ರುದ್ರಾಕ್ಷಿಮಾಲಿಕೆಗಳನ್ನು ಧರಿಸಿದವನಾಗಿಯೂ, ದಂಡ ಕಮಂಡಲ್ವಾದಿ ಪಂಚತುದ್ರಾಮುದ್ರಾಧಾರನಾಗಿಯೂ, ಸರ್ವತ್ರ ಶಿವಸ್ಥಾಂತವನ್ನು ಸಾರುತ್ತ ಲೋಕೋದ್ಧಾರ ಪರನಾಗಿಯೂ, ಅಂತರ್ಬಾಹ್ಯಲಿಂಗಧಾರಣವುಳ್ಳವನಾಗಿ ಯೂ, ಬಾಹ್ಯಾಂತರ ಲಿಂಗಪೂಜಾನಿಷ್ಠನಾಗಿಯೂ, ಏಕೋತ್ತರ ಶತಸ್ಥಲಜ್ಞಾನವುಳ್ಳವನಾಗಿಯೂ ಇರುವನೋ ಅವನೇ ನಿಜವಾದ ಶ್ರೀ ಸದ್ಗುರುಸ್ವಾಮಿಯು!

ವರ್ತಮಾನ ಸಂಗ್ರಹ

ವ್ರಾಂತಬಾವನೆಗಳ ಮೂಲಕ ತಿಳ್ಳಣ

ಭಾರತದ ಕಾಲೇಜುಗಳಲ್ಲಿಯೂ, ಸ್ಕೂಲುಗಳಲ್ಲಿಯೂ ಕ್ರವ ಕ್ರವ ವಾಗಿ ಇಂಗ್ಲಿಷಿನ ಒದಲು ಆಯಾ ಪ್ರಾಂತಗಳ ಭಾಷಗಳಲ್ಲಿಯೇ ವಾರ ನಡೆಸಬೇಕೆಂದು ಭಾರತ ಸರ್ಕಾರದವರು ನಿಶ್ಚಯಿಸಿದ್ದಾರೆ

ಭಾರತದಲ್ಲಿ ಮೋಟಾರುಗಳ ತಯಾರಿಕೆ

ಭಾರತದಲ್ಲಿರುವ ೧೯೪೩ ಸಾಲಿನ ವೇಳೆಗೆ ಮೋಟಾರು ಗಳನ್ನು ತಯಾರಿಸುವ ಕಾರ್ಖಾನೆಗಳು ಕಾರ್ಯವನ್ನು ಪ್ರಾರಂಭಿಸುವುದೆಂದು ಭಾರತ ಸರ್ಕಾರದ ಕೈಗಾರಿಕಾ ಸಚಿವರಾದ ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರು ಹೇಳಿದ್ದಾರೆ

೧೦೦ ರೂ ನೋಟುಗಳನ್ನು ರದ್ದುಮಾಡುವುದಿಲ್ಲ

ಭಾರತದಲ್ಲಿ ನೂರುರೂಪಾಯಿಗಳ ನೋಟುಗಳೆನ್ನು ಚಲಾವಣೆಯಿಂದ ರದ್ದುಮಾಡುವುದಿಲ್ಲವೆಂದೂ, ಎಲ್ಲ ನೋಟುಗಳಿಗೂ ಅವುಗಳ ಮೂಲ ಬೆಲೆಯನ್ನು ಕೊಡಲಾಗುವುದೆಂದೂ ಭಾರತದ ಬ್ರಹ್ಮಣ ವ್ಯವಸಾ ಮಂತ್ರಿ ಪಂಡಿತ ಜವಹರಲಾಲ್ ನಹ್ರುರವರು ಶಾಸನ ಸಭೆಯಲ್ಲಿ ತಿಳಿಸಿದರು

ಗಂಗಾನದಿಯಲ್ಲಿ ಸ್ರಚಂಡಸ್ರಕೋಪ

ಗಂಗಾನದಿಯ ಪ್ರವಾಹವು ಆಶುಗ್ರವಾಗಿದೆ ಕಾಶೀ ಪಟ್ಟಣದ ಅನೇಕ ಭಾಗವು ಮಡಿ ನೀರಿನಿಂದ ತುಂಬಿ ಹೋಗಿವೆ ಗಗುದವರೆಗೂ ಜ್ಯ ನೀರಿನಲ್ಲಿ ಮೋಟಿ ಗಳು ಓಡಾಡುತ್ತಿವೆ ಬೈಲೆ ಸಂಚಾರವು ನಿಂತಿದೆ

ಕಾಶೀ ಪಟ್ಟಣದ ದೊಡ್ಡಮೇಧ ರಾಂಪುರ, ಸೋದ ಲಾದ ಪ್ರದೇಶಗಳೆಲ್ಲಾ ನೀರಿನಿಂದ ಆವೃತವಾಗಿವೆ ದೊಡ್ಡಮನೆಗಳ ರೆಲ್ಲಿ ಸ್ಪೆರ್ಶ ನೀರಿನಲ್ಲಿ ಮುಳುಗಿದೆ

ಕಾಶೀ ಹಿಂದೂ ವಿಶ್ವವಿದ್ಯಾನಿಲಯದಲ್ಲೂ ಸಹ ನೀರು ತುಂಬಿರುತ್ತದೆ ಹಿಂದೆ ಯಾವ ಕಾಲದಲ್ಲೂ ಇಷ್ಟೊಂದು ಪ್ರವಾಹವು ಬಂದಿದ್ದಿಲ್ಲವಂತೆ!

ಭಾರತದ ಜನರ ಆರೋಗ್ಯ

ಭಾರತ ಸರ್ಕಾರದವರು, ಭಾರತವನ್ನು ಎರಡು ಭಾಗಮಾಡುವ ಮುಂಚೆ, ೧೯೪೫—೪೬ನೇ ವರ್ಷದಲ್ಲಿ ಜನರ ಆರೋಗ್ಯದ ಸ್ಥಿತಿಗತಿಬಗ್ಗೆ ಕಂಡುಹಿಡಿದಿದ್ದರಲ್ಲಿ ಆ ವರ್ಷ ಭಾರತದಲ್ಲಿ ಪ್ರತಿಯೊಬ್ಬರಿಗೆ ವರ್ಷ ೧ ಕ್ಕೆ ಸರಿ ೧೯೦ ರೂ ವರಮಾನ ಒರುತ್ತಿತ್ತು ಅದೇ ಕಾಲದಲ್ಲಿ ಪ್ರತಿಯೊಬ್ಬರಿಗೆ ಅಸ್ಟ್ರೇಲಿಯಾದಲ್ಲಿ ೧೯೯೯ ರೂ, ಕಾನಡಾದಲ್ಲಿ ೨೦೬೮ ರೂ ಬ್ರಿಟನ್ನಿನಲ್ಲಿ ೩೩೫೫ ರೂ, ಅಮೆರಿಕಾದ ಸಂಯುಕ್ತ ಸಂಸ್ಥಾನ ಗಳಲ್ಲಿ ೪೬೬೮ ರೂ ವರಮಾನ ಬರುತ್ತಿತ್ತು ಇದರಿಂದ ನಮ್ಮ ದೇಶದ ಜನರ ಜೀವನದ ಮಟ್ಟ ಎಷ್ಟು ಕಡಿಮೆ ಯಾಗಿದೆ ಎಂಬುದು ಗೊತ್ತಾಗುತ್ತದೆ ಆದ್ದರಿಂದಲೇ ದೇಶದಲ್ಲಿ ಪಪಾಧ್ಗಗಳ ತಯಾರಿಕೆಯನ್ನು ಹೆಚ್ಚಿಸಲು ಎಲ್ಲರೂ ಸಹಾಯ ಮಾಡಬೇಕೆಂದು ಸರ್ಕಾರದವರು ಸ್ಪಾರ್ಥಿಸುತ್ತಿರುವುದು

ಸಿಕಂದರಾಬಾದಿನಲ್ಲಿ ಭಾರತ ಸೇನೆಯನ್ನಿಡಲು ನಿರ್ಧಾರ!

ಹೈದರಾಬಾದ್ ಸಂಸ್ಥಾನದಲ್ಲಿ ಅಮಾನುಷ ಕೃತ್ಯ ಗಳನ್ನು ನಡೆಸುತ್ತಿರುವ ರಜಾಕಾರ ಪಡೆಗಳನ್ನು ವಿಸರ್ಜನೆ ಮಾಡದೇಲೂ ಮತ್ತು ಸಂಸ್ಥಾನದಲ್ಲಿರುವ ಕಾಂತಿ ಮತ್ತು ಶಿಸ್ತುಗಳನ್ನು ಪಾಲಿಸಲು ಅವಶ್ಯಕವಾದಷ್ಟು ಭಾರತದ ಸೇನೆಯನ್ನು ಸಿಕಂದರಾಬಾದಿನಲ್ಲಿ ಇಡಲು ಅವಕಾಶ ಕಲ್ಪಿಸಿಕೊಡಬೇಕು ಎಂದು ನಿಜಾಮರಿಗೆ ಕಟ್ಟಕಡೆಯದಾಗಿ ಸೂಚನೆ ಕೊಡಲಾಗಿದೆ ಎಂದು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಪಂಡಿತ ನೆಹರೂರವರು ಹೈದರಾಬಾದಿನ ಬಗ್ಗೆ ಹೇಳಿಕೆ ಕೊಡುತ್ತ ತಿಳಿಸಿದರು

ಗವರ್ನರ್-ಜನರಲ್ಲರ ಹಿತೋಕ್ತಿಗೆ ತಿರಸ್ಕಾರ

ಗವರ್ನರ್-ಜನರಲ್ ಶ್ರೀ ರಾಜಗೋಪಾಲಾಚಾರ್ಯ ರವರು ನಿಕಂದರಾಬಾದಿನಲ್ಲಿ ಭಾರತ ಸೇನೆಯನ್ನಿಡಲು ಅವಕಾಶ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸಿ ನಿಜಾಮರಿಗೆ ಪತ್ರ ಬರೆದಿದ್ದರೆಂದೂ, ನಿಜಾಮರು ಗವರ್ನರ್-ಜನರಲ್ಲರ ಹಿತೋಕ್ತಿಯನ್ನು ತಿರಸ್ಕರಿಸಿದರೆಂದೂ ಪಂಡಿತ ನೆಹರೂರವರು ಸುಡಿದರು ನಿಜಾಮರು ಗವರ್ನರ್-ಜನರಲ್ಲರವೀರಿಗೆ ಬರೆದಿರುವ ಪತ್ರದಲ್ಲಿ ಹೈದರಾಬಾದಿನಲ್ಲಿ ಪರಿಸ್ಥಿತಿ ಅಷ್ಟೇನೂ ಹದಗೆಟ್ಟಿಲ್ಲವೆಂದೂ, ಭಾರತ ಸೇನೆ ಗಳನ್ನಿಡುವ ಅವಶ್ಯಕತೆಯಿಲ್ಲವೆಂದೂ ತಿಳಿಸಿದ್ದಾರೆ

ರಜಾಕಾರರ ರಾಕ್ಷಸಕೃತ್ಯ

ಹೈದರಾಬಾದಿನ ಪರಿಸ್ಥಿತಿ ಹದಗೆಟ್ಟಿಲ್ಲವೆಂದು ನಿಜಾ ಮರು ಹೇಳಿರುವುದು ಸತ್ಯಕ್ಕೆ ದೂರವಾಗಿದೆ ಹೈದರಾ ಬಾದಿನಲ್ಲಿ ರಜಕಾರರು ನಡೆಸುತ್ತಿರುವ ಪೈಶಾಚಿಕ ಕೃತ್ಯಗಳು ಅಸಹನೀಯವಾಗಿವೆ ನಮಗೆ ಬಂದಿರುವ ವರದಿಗಳ ಪ್ರಕಾರ ಹೈದರಾಬಾದಿನ ೭೦ ಗ್ರಾಮಗಳಲ್ಲಿ ರಜಾಕಾರರು ನುಗ್ಗಿ ಕೊಳ್ಳೆಹೊಡೆದಿದ್ದಾರೆ ಭಾರತ ಯೂನಿಯನ್ ಪ್ರವೇಶಕ್ಕೆ ೧೭೦ ಸಾರೆ ನುಗ್ಗಿ ದಾಳಿ ನಡೆಸಿದ್ದಾರೆ ನೂರಾರುಜನರನ್ನು ಗುಂಡಿಗೆ ಆಹುತಿ ತೆಗೆದುಕೊಂಡಿದ್ದಾರೆ ಸೂರಾರು ನುಹಿಳೆಯರ ಮಾನಾಪ ಹರಣ ಮಾಡಿದ್ದಾರೆ ಇಂತಹ ಪಶುವರ್ತನೆಯನ್ನು ನೋಡಿಕೊಂಡು ತಿಪ್ಪಗೆ ಕುಳಿತಿರಲು ಯಾವ ಸಕಾರ ರಕ್ಕೂ ಸಾಧ್ಯವಿಲ್ಲ ರಜಕಾರರಿಗೆ ಹೈದರಾಬಾದ್ ಸೈನ್ಯ ಅಧಿಕಾರಿಗಳು ಎಲ್ಲ ವಿಧದಲ್ಲೂ ಸಹಾಯ ನೀಡುತ್ತಿದ್ದಾರೆ ಹೈದರಾಬಾದಿನ ಅನಾಪ ಪ್ರಜೆಗಳಿಗೆ ರಕ್ಷಣೆ ನೀಡುವ ಸಲುವಾಗಿ ಸಿಕಂದರಾಬಾದಿನಲ್ಲಿ ಭಾರತ ಸೇನೆಗಳನ್ನಿಡ ಬೇಕೆಂದು ನಾವು ಯೋಚಿಸಿದ್ದೇವೆ ರಜಕಾರರನ್ನು ಮಟ್ಟಹಾಕಬೇಕೆಂದು ನಾವು ಕೊಸೆಸುವುದಾಗಿ ನಿಜಾಮರಿಗೆ ಎಚ್ಚರಿಕೆ ಕೊಟ್ಟಿದ್ದೇನೆ ಎಂದು ಪಂಡಿತ ನೆಹರೂ ತಿಳಿಸಿದರು

ಸ್ವಾತಂತ್ರ್ಯದ ಬಯಕೆ ಈಡೇರದು!

ಭೌಗೋಳಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ದೃಷ್ಟಿಗಳಿಂದ ಹೈದರಾಬಾದಿನ ಸ್ವಾತಂತ್ರ್ಯವು ವೈಧ ಪ್ರಲಾಪವೆಂದು ಸ್ಪಷ್ಟವಾಗುವುದು ಭಾರತದ ಹೃದಯ ದಂತಿರುವ ಹೈದರಾಬಾದ್ ಸಂಸ್ಥಾನವು ಸ್ವತಂತ್ರವಾ ಗಿರಲು ನಾವು ಅನಕಾಶ ಕೊಡಲಾರೆವು ಅದು ಭಾರತ ಡೊಮಿನಿಯನ್ನಿನಲ್ಲಿ ಸೇರಿ ಅದರ ಅಂಗರಾಷ್ಟ್ರವಾಗಲೇ ಬೇಕು ನಾವು ಈಗಾಗಲೇ ಸ್ಪಷ್ಟಪಡಿಸಿರುವಂತೆ ಈ ಬಗ್ಗೆ ಜನರ ಅಭಿಪ್ರಾಯಕ್ಕೆ ಮಾನ್ಯತೆ ಕೊಡಲು ಸಿದ್ಧ ಹೈದರಾಬಾದಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆಯಾ ಹೈದರಾಬಾದು ಭಾರತಕ್ಕೆ ಸೇರಬೇಕೆಂಬುದೇ ಭಾರತ ಸಂಕಲ್ಪವೆಂದು ಹೇಳಿದರು

ಸ್ವಾತಂತ್ರ್ಯದ ಪ್ರಯೋಜನ ಎಲ್ಲರಿಗೂ ಉಂಟು

ಹೈದರಾಬಾದಿನ ಸಮಸ್ಯೆಯನ್ನು ಕೋಮುವಾದ ದೃಷ್ಟಿಯಿಂದ ನೋಡಬಾರದೆಂದೂ, ಹೈದರಾಬಾದಿನ ಸಮಸ್ತ ಪ್ರಜೆಗಳ ಹಿತಕ್ಕಸ್ಕಿಯಿಂದ ಈ ಸಮಸ್ಯೆಯನ್ನು ಪರಿಶೀಲಿಸಬೇಕೆಂದೂ ಪಂಡಿತ ನೆಹರೂರವರು ಪ್ರಾರ್ಥಿಸಿ ದರು ಹೈದರಾಬಾದಿನಲ್ಲಿ ಉಗ್ರವಾದಿಗಳ ಭಯಂಕರ ಜಬಾಬ್ದಾರಿ ಸರ್ಕಾರ ಸ್ಥಾಪನೆಯಾದರೆ ಆದರೆ ಸ್ವಯಂ ಜನವು ಕೇವಲ ಒಂದು ಹಗಡಹಸ್ತೆ ಮಾತ್ರವೇ ಆಲ್ಲದೆ ಇಡೀಜನತೆಗೇ ಲಭಿಸುವುದೆಂದು ಅವರು ಭರವಸೆ ಯಿತ್ತರು

ಭಾರತದ ವಿಶ್ವ ಪ್ರಯತ್ನ

ಹೈದರಾಬಾದ್ ಸಮಸ್ಯೆಯನ್ನು ಶಾಂತಿಯುತವಾಗಿ ಬಗೆಹರಿಸಲು ಭಾರತ ಸರ್ಕಾರದವರು ಪಟ್ಟು ಶ್ರಮ ಪಡು ಸ್ಪಷ್ಟವಾದ ಬಗ್ಗೆ ನಿಜಾಮರ ಹಕ್ಕುಮಾಡಿನ ಹೈದರಾಬಾದಿನಲ್ಲಿ ಬೇರೂರಿರುವ ಪ್ರಗತಿಕಂಟ ಶಕ್ತಿಗಳು, ಸಮರ ಸಿದ್ಧತೆಗಳು, ರಜಕಾರರ ಜಾನಿ ಮುಂತಾದುವುಗಳ ಸಿಂಹಾವಲೋಕನ ಮಾಡಿ, ಭಾರತ ಇತಿಹಾಸದಲ್ಲಿ ಇದು ಮಹತ್ವದ ಕಾಲವೆಂದೂ, ನೆ ಹಾಸಿಕ ಘಟನೆಗಳು ಸಂಭವಿಸಲಿವೆಯೆಂದೂ, ಜನ

ನ್ನು ಸಂಯಮ ಮತ್ತು ಜವಾಬ್ದಾರಿಯಿಂದ ನರ್ವಿಸ ಳೇಕೆಂದೂ ಪಂ|| ನೆಹರೂರವರು ಹಿತೋಕ್ತಿ ಇತ್ತರು ೋಮವಾರು ಭೂತ ಮತ್ತೆ ತಲೆ ಎತ್ತಿದರೆ ಉಗ್ರ ಮ ಕೈಗೊಂಡು ಆದನ್ನು ನಿರ್ಮೂಲ ಮಾಡುವುದಾಗಿ ವರು ಎಚ್ಚರಿಸಿದರು ಹೈದರಾಬಾದಿನ ಜನರು ಮನೆ ುರಗಳನ್ನು ತೊರೆದು ಹೋಗದೆ, ಪರಿಸ್ಥಿತಿಯನ್ನು ನ್ವಿಂದ ಎದುರಿಸಬೇಕೆಂದು ಸೂಚಿಸಿದರು

ಹೈದರಾಬಾದ್ ಸಂಸ್ಥಾನಾದ್ಯಂತ ತೀಕ್ಷ್ಣವಾದ ವಾತಾವರಣ

ಸಿಕಂದರಾಬಾದಿನಲ್ಲಿ ಸೇನೆಯನ್ನಿಡಲು ಭಾರತ ರ್ಕಾರದವರು ನಿರ್ಧಾರ ಮಾಡಿರುವರಲ್ಲೆ ! ಈ ನಿರ್ಧಾ ದ ಪರಿಣಾಮವಾಗಿ ಹೈದರಾಬಾದಿನಲ್ಲಿ ತೀಕ್ಷ್ಣ ವಾತಾ ರಣ ಕಂಡುಬರುತ್ತಿದೆ ಸಿಕಂದರಾಬಾದಿನಲ್ಲಿ ಅಧಿಕಾರಿ ಗಳದಲ್ಲಿ ತೀವ್ರ ಕಾತುರತೆ ಮತ್ತು ಕಳವಳ ಕಂಡುಬರು ತ್ತಿದೆ ಸಿಕಂದರಾಬಾದಿನಲ್ಲಿ ರಕ್ಷಣೆಯ ವ್ಯವಸ್ಥೆ ಅತಿ ಬರು ದಿಂದ ಸಾಗುತ್ತಿದೆ ವಿಮಾನದಳಿಯನ್ನು ಎದುರಿಸಲು ಂ ಆರ್ ಪಿ ವಿಶೇಷಗುಣಗಳನ್ನು ಮಾಡಲಾಗುತ್ತಿದೆ ವಿಮಾನದಳಿಯಾದಾಗ ಅಕ್ಕರಸ್ಸನ್ನೆ ಮಾಡಿಕೊಳ್ಳಲು ಟ್ರೆಂಚ್ 'ಗಳನ್ನು ನಿರ್ಮಿಸಲಾಗಿದೆ ರಾತ್ರಿವೇಳೆ ಯಲ್ಲಿ ದ್ದೀಪಗಳು ಕಾಣದಂತೆ ಮರೆಮಾಡಲಾಗುತ್ತಿದೆ ೈದರಾಬಾದ್ ಸಂಸ್ಥಾನಾದ್ಯಂತ ಎ ಆರ್ ಪಿ ಸಿಬ್ಬಂದಿ ಮಿತಿಗಳನ್ನು ರಚಿಸಲಾಗಿದೆ

ಭಾರತವನ್ನು ಪ್ರತಿಭಟಿಸಲು ನಿಜಾಂ ಸರ್ಕಾರವು ಸಿದ್ಧವಿದೆ

ನಿಜಾಂ ಸರ್ಕಾರವ ಮಂತ್ರಿಗಳಾದ ಶ್ರೀ ಪಿಂಗಳೆ ೆಂಕಟರಾಮ ರೆಡ್ಡಿ ಯನರು ಆಲ್ಲಿಯೆ. ಶಾಸನ ಸಭೆಯಲ್ಲಿ ಹೇಳಿಕೆಯೊಂದನ್ನು ಕೊಡುತ್ತಾ ಭಾರತ ಸೈನ್ಯವು ಸಿಕಂದರಾಬಾದಿಗೆ ಬರಲು ಕಾರಣವೇ ಇಲ್ಲ ಹೈದರಾ ಾದ್ ಸರ್ಕಾರವು ತನ್ನ ರಕ್ಷಣೆಗೂ ಪ್ರಜೆಗಳ ರಕ್ಷಣೆಗೂ ಾಕಾದಷ್ಟು ಸೈನ್ಯವನ್ನಿಟ್ಟುಕೊಂಡಿದೆ ಭಾರತ ಯೂನಿ ಯನ್ನು ಉದ್ದೇಶ ಪೂರ್ವಕವಾಗಿ ನಿಜಾಂ ಸರಕಾರವನ್ನು ತೆಗಲು ಸೈನ್ಯ ಕಾರ್ಯಾಚರಣೆಯನ್ನು ನಡೆಸುವುದಾದರೆ ದನ್ನು ಎದುರಿಸಲು ನಿಜಾಂ ಸರ್ಕಾರ ಸಿದ್ಧವಿದೆ ಆದರೆ ಾವಿಂದುಟಾಗುವ ಪರಿಣಾಮಕ್ಕೆಲ್ಲಾ ಭಾರತ ಸರ್ಕಾ ರವೇ ಹೊಣೆಯಾಗಬೇಕು ಎಂದು ತಿಳಿಸಿದ್ದಾರೆ

ಪೋಲಂಪಳ್ಳಿ ಗ್ರಾಮಕ್ಕೆ ರಜಕಾರರ ಮುತ್ತಿಗೆ

ಜಗ್ಗಯಪೇಟೆ ಸಬ್ ತಾಲೂಕಿಗೆ ಸೇರಿದ ಪೋಲಂ ಪಳ್ಳಿ ಗ್ರಾಮಕ್ಕೆ ರಜಕಾರರು, ನಿಜಾಂ ಪೋಲೀಸರೂ ಮುಗಿ ೩ ನುಂದ ಗ್ರಾಮಸ್ಥರನ್ನು ಕೊಂದು, ಹೆಣ ಗಳನ್ನು ಹಗ್ಗಗಳಿಂದ ಕಟ್ಟಿ ಬಾವಿಗೆ ಎಸೆದರು ಈ ಘೋರಾವಾರ್ತೆಯು ತಿಳಿದೊಡನೆಯೇ ಭಾರತದ ಪ್ರಜ್ಞೆ ನಷ್ಟಕ್ಕೆ ಪೋಲೀಸರು ಶ್ವಕಲ್ಪ ಹೋಗಿ ರಜಕಾರರ ಮೇಲೆ ಗುಂಡುಹಾರಿಸಿ ಅವರನ್ನು ಹೈದರಾಬಾದ್ ಗಡಿಯೆಳಗೆ ಮೂರು ಮೈಲಿ ದೂರವನೆಗೂ ಅಟ್ಟಸಿಕೊಂಡು ಹೋದರು

ಇಂಥ ಸ್ವಾತಂತ್ರ್ಯಕ್ಕೆ ಬದಲು ಗುಲಾಮನಾಗಿರುತ್ತಿದ್ದೆ

ಬಾಬು ತಾಂಡನರವರ ಕಿಚ್ಚೇರು

ಆಲಹಾಬಾದಿನಲ್ಲಿ ಮೊನ್ನೆ ಕಾಂಗ್ರೆಸ್ಸಿನವರ ದೊಡ್ಡ ಸಭೆಯಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸ್ಸಿನವರಲ್ಲಿರತಕ್ಕ ಲಂಚಗುಳಿತನ, ಬಂಧುಬಳಗ ಪಕ್ಷಪಾತ, ಅಧಿಕಾರ ದಾಲಸೆಗಳಿಗಾಗಿ ಸಂಘಟಿಪಡುತ್ತಾ ನಡ್ಡದ ಸ್ವರದಿಂದ ಸಂಯುಕ್ತ ಸ್ವಾತ್ಯದ ಕಾಂಗ್ರೆಸ್ ಅಧ್ಯಕ್ಷರಾದ ಸರೋಜ ಸ್ವಿನಿ ಬಾಬು ಪುರುಷೋತ್ತಮದಾಸ್ ತಾಂಡರವರು ಳಳಾರಂಭಿಸಿದರು. ಅವರು ಕಣ್ಣೀರನ್ನು ಸುರಿಸುತ್ತಾ ನಾವು ಸ್ವರಾಜ್ಯವನ್ನು ಗಳಿಸಿದ್ದಕ್ಕೆ ಇದು ಪ್ರತಿಫಲವೇ? ದಕ್ಕಾಗಿ ನಾವು ಕಷ್ಟನಿಷ್ಠುರಗಳನ್ನನುಭವಿಸಿ ಪ್ರಾಣ ತ್ತಿನೇ? ದೇಶ ಪ್ರೇಮಗಳೆಂದು ಭುಜಪಟ್ಟುಕೊಳ್ಳು ವವರು ಇನ್ನು ನೀಚತನಕ್ಕೂ ಕೀಳುತನಕ್ಕೂ ಇಳಿಯುವ ರೆಂದು ತಿಳಿದಿದ್ದರೆ ಇಂಥ ಸ್ವಾತಂತ್ರ್ಯಕ್ಕೆ ಬದಲಾಗಿ ನಾನು ಗುಲಾಮನಾಗಿರುತ್ತಿದ್ದೆ

ಸ್ನೇಹಿತರೇ, ಹಣಕಾಸಿಗಾಗಿ, ಅಧಿಕಾರದಾಸೆಗಾಗಿ, ನಿಮ್ಮ ಆತ್ಮವನ್ನು ಕಳೆದುಕೊಳ್ಳಬೇಡಿರಿ ' ಎಂದು ಕೈಜೋಡಿಸಿ ಬೇಡಿಕೊಂಡರು

ಕಾಶ್ಮೀರದ ಬಗ್ಗೆ ಪಾಕಿಸ್ಥಾನದ ನಾದನೆಲ್ಲ ಮೋಸ ಮತ್ತು ಸುಳ್ಳಿನ ಮೇಲೆ ನಿಂತಿದೆ

ಸೆಕ್ಯೂರಿಟಿ ಕೌನ್ಸಿಲ್ಲಿನಲ್ಲಿ ಪಾಕಿಸ್ಥಾನವು ಕಾಶ್ಮೀರದ ವಿಚಾರವಾಗಿ ಮುಂದಿಟ್ಟ ವಾದವೆಲ್ಲ ಮೋಸ ಮತ್ತು ಸುಳ್ಳಿನ ಕಂತೆಯಿಂದ ತುಂಬಿದ ಎಂಬುದಾಗಿ ನೆಹರೂ ರವರು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಹೇಳಿದರು ಕಾಶ್ಮೀರ ನಿಯೋಗದವರು ಸೂಚಿಸಿದ ' ಸೀಜ್‌ಫೈರ್ ' ಒಪ್ಪಂದವನ್ನು ಭಾರತವು ಉತ್ಸಾಹದಿಂದ ಅಂಗೀಕರಿಸಿಲ್ಲ ನೆಂದೂ, ಆನವಶ್ಯಕ ರಕ್ತಪಾತವನ್ನು ತಡೆಗಟ್ಟುವುದ ಕ್ಕಾಗಿ ಒಪ್ಪಿತೆಂದೂ ತಿಳಿಸಿದರು.

ಆನೇಕ ತಿಂಗಳವರೆಗೆ ಪಾಕಿಸ್ಥಾನವು ಕಾಶ್ಮೀರ ಯುದ್ಧದಲ್ಲಿ ತಾನು ಭಾಗಿಯಾಗಿಲ್ಲವೆಂದು ಹೇಳಿ, ಕೊನೆಗೆ ತನ್ನ ಸಂಬಂಧ ಇದೆಯೆಂದು ಒಪ್ಪಿತೊಂಡು ಪಾಕಿಸ್ಥಾನವು ಈ ರೀತಿ ಒಪ್ಪಿಗೆ ಕೊಟ್ಟದ್ದರಿಂದ ಆದು ವಿಶ್ವಸಂಸ್ಥೆಯಲ್ಲಿ ನೆಡಿದ ವಾದವೆಲ್ಲ ಮೋಸ ಮತ್ತು ಸುಳ್ಳಿನ ಕಂತೆಗಳ ಮೇಲೆ ನಿಂತಿದೆ ಎಂಬುದು ನೇವ್ಯವಾಯ ತೆಂದು ತಿಳಿಸಿದರು

ಕಾಶ್ಮೀರ ಸರ್ಕಾರದೊಂದಿಗೆ ನಿಕಟ ಸಂಬಂಧ

ವಿಶ್ವಸಂಸ್ಥೆದ ಕಾಶ್ಮೀರ ನಿಯೋಗದೊಂದಿಗೆ ಇಂಡಿ ಯಾ ಸರ್ಕಾರವು ಚರ್ಚೆ ನಡೆಸಿದಾಗಲೆಲ್ಲ ಅಮ ಮೇಕ್ ಆಲ್ಬ್ರಾಸರವರ ಕಾಶ್ಮೀರ ಸರ್ಕಾರದೊಂದಿಗೆ ನಿಕಟ ಸಂಬಂಧವನ್ನಿಟ್ಟುಕೊಂಡು ಘನಘನೋಷವಾಗಿ ಆವರ ಧೃಕ್ಕೋಣವನ್ನು ತಿಳಿದುಕೊಳ್ಳುತ್ತಲೇ ಇದ್ದನು ನೃತಿಕ ಅವಮಾ ಬೇರೆ ಯಾವುದೇ ವಿಷಯಗಳಲ್ಲಾಗಲೀ ಇಂಡಿಯಾ ಡೊಮಿ ನಿಯನ್ ಗವರ್ನರ್ ಜನರಲ್ ಆದ ಲಾರ್ಡ್ ಮೌಂಟ್‌ಬ್ಯಾಟನ್‌ರವರು ತಿಳಿಸಿದರು ಯಾವ ದೇಶವು ಮೋಸ ಮತ್ತು ಸುಳ್ಳಿನ ಆಧಾರದ ಮೇಲೆ ಮುಂದೆ ಸಾಗಲು ಯತ್ನಿಸು ವುದೋ ಆದಕ್ಕೆ ಎಂದಿಗೂ ಜಯ ಲಭಿಸುವನಿಲ್ಲವೆಂದು ಬೇಳದರು

ಸೀಜ್‌ಫೈರ್ ಸಲಹೆ

ವಿಶ್ವಸಂಘದ ಸೀಜ್‌ಫೈರ್ ಸಲಹೆಗೆ ಇಂಡಿಯಾ ಸರ್ಕಾರವು ಒಪ್ಪಿಗೆ ಕೊಟ್ಟ ಒಗ್ಗೆ ಮಾತನಾಡುತ್ತ—

ಕಾಶ್ಮೀರ ಕದನವು ಆರಂಭವಾಗಿ ಇಂದಿಗೆ ಹತ್ತು ತಿಂಗಳುಗಳು ಕಳೆದವು ಪಾಕಿಸ್ಥಾನ ಸರ್ಕಾರವು ಈ ಕದನದಲ್ಲಿ ತಾನು ಯಾವ ವಿಧವಾದ ಭಾಗವನ್ನೂ ತೆಗೆದುಕೊಂಡಿಲ್ಲವೆಂಬ ಘೋಷಣೆಯನ್ನಾ ಸಾರುತ್ತು ಆನವಶ್ಯಕ ರಕ್ತಪಾತವನ್ನು ತಡೆಗಟ್ಟುವದಕ್ಕಾಗಿ ಭಾರತ ಸರ್ಕಾರವು ವಿಶ್ವಸಂಘೆಕ್ಕೆ ಕಾಶ್ಮೀರ ಸಮಸ್ಯೆಯನ್ನು ತೆಗೆದುಕೊಂಡುಹೋಯಿತು ಆವರೆ ಅಲ್ಲಿ ಸಹ ಪಾಕಿ ಸ್ಥಾನವು ನಿರಾಕರಿಸಿತು ಆದರೆ ಪಾಕಿಸ್ಥಾನದ ಸೇನೆಗಳು ಹೇಗೆ ಭಾಗ ತೆಗೆದುಕೊಂಡಿವೆ ಎಂಬುದಕ್ಕೆ ಶಕ್ತ ರುಜು ವಾತುಗಳು ನಮ್ಮ ಕೈಯಲ್ಲಿವೆ

ಕಾಶ್ಮೀರದ ಒಳಾಡಳಿತ

ಕಾಶ್ಮೀರದ ಎಷ್ಟುಭಾಗವು ಈಗ ಇಂಡಿಯಾ ಡೊಮಿ ನಿಯನ್ನಿನಿಗೆ ಸೇರಿರುವುದೋ ಅವನ್ನು ಇಂಡಿಯಾ ಸರ್ಕಾ ರವು ರಕ್ಷಿಸುವದಾಗಿ ಅಶ್ವಾಸನೆ ಕೊಡುವುದು ಮತ್ತು ಅದನ್ನು ರಕ್ಷಿಸಲು ಎಷ್ಟು ಸೈನ್ಯಗಳನ್ನು ಇಡಬೇಕೋ ಆಷ್ಟನ್ನೂ ಇಡುವುದು ಆಲ್ಲಿ ವಾಸಿಸುವ ಎಲ್ಲ ಜನರ ನಾಗರಿಕ ಹಕ್ಕುಬಾಧ್ಯತೆಗಳನ್ನು ರಕ್ಷಿಸಲಾಗುವುದು. ಕಾಶ್ಮೀರದ ಭವಿಷ್ಯವನ್ನು ನಿರ್ಧರಿಸುವ ಹೊಣೆಗಾರಿ ಕೆಯು ಕಾಶ್ಮೀರ ಜನರ ಮೇಲೆ ಇದೆಯೆಂಬುದನ್ನೂ ಇಂಡಿಯಾ ಮತ್ತು ಪಾಕಿಸ್ಥಾನ ಸರ್ಕಾರಗಳು ಒಪ್ಪಿ ಕೊಂಡಿವೆ ಮತ್ತು ಕಾಶ್ಮೀರದ ಪರಿಸ್ಥಿತಿಯು ತೃಪ್ತಿಕರ ವಾಗಿ ಶಾಂತಿಯುತವಾಗಿದೆಯೆಂದು ಮನಗಂಡ ಮೇಲೆ ಜನಾಭಿಪ್ರಾಯ ತೆಗೆದುಕೊಳ್ಳುವ ವಿಚಾರವು ಮಾಡ ಲಾಗುವುದು.

ಶಾಂತಿ ಪರಿಪ್ತೆಗೆ ಒಪ್ಪಿಕೊಂಡಿದ್ದೇಕೆ ?

ವಿಶ್ವಸಂಘದ ' ಸೀಜ್‌ಫೈರ್ ' ಸಲಹೆಗೆ ಇಂಡಿಯಾ ಸರ್ಕಾರವು ಒಪ್ಪಿಕೊಂಡ ಬಗ್ಗೆ ಪಂಡಿತ ನೆಹರೂರವರು ಈ ರೀತಿ ತಿಳಿಸಿದರು

ಸಲಹೆಗಳಲ್ಲಿರುವ ಆನೇಕ ವಿಷಯಗಳನ್ನು ಇಂಡಿಯಾ ಸರ್ಕಾರವು ಒಪ್ಪುವಷ್ಟಾಗಿಲ್ಲ ಆದರೆ ಸಲಹೆಯನ್ನು ಸಂಪೂರ್ಣವಾಗಿ ಒಪ್ಪಬೇಕೆಂದೂ ಆದನ್ನು ಬಿಡಿ ಬಿಡಿ ಯಾಗಿ ಒಪ್ಪಲು ಸಾಧ್ಯವಿಲ್ಲೆಂದೂ ನಿಯೋಗದವರು ಬೇಳದ್ದರಿಂದ ಆದಕ್ಕೆ ಒಪ್ಪಬೇಕಾಯಿತು ಈ ರೀತಿ ಒಪ್ಪಿಗೆಯನ್ನು ಕೊಟ್ಟ ಬಗ್ಗೆ ಇಂಡಿಯಾ ಸರ್ಕಾರಕ್ಕೆ ಉತ್ಸಾಹವಿಲ್ಲ ರಕ್ತಪಾತವಾಗುವುದನ್ನು ತಡೆಗಟ್ಟುವುದ ಕ್ಕಾಗಿ ಒಪ್ಪಿಗೆ ಕೊಡಬೇಕಾಯಿತೆಂದು ತಿಳಿಸಿದರು

ರೈಲುಗಳ ನಿರ್ಮೂಪಕ

ಪ್ರಪಂಚದಲ್ಲಿ ಎಲ್ಲ ಭಾಗಗಳಲ್ಲಿಯೂ ಈಗ ರೈಲುಗಳು ಓಡಾಡುತ್ತಿವೆಯಷ್ಟೆ ! ರೈಲುಗಳನ್ನು ನೋಡದಿರುವವರೂ, ಅವುಗಳಲ್ಲಿ ಕುಳಿತು ಹಿಂದು ಊರಿನಿಂದ ಮತ್ತೊಂದು ಊರಿಗೆ ಪ್ರಯಾಣ ಮಾಡದಿರುವವರೂ ಬಹಳ ಕಡಿಮೆ ಆದರೆ ಜನ ರಿಗೆ ಸಂಚಾರಮಾಡುವುದಕ್ಕಾಗಿಯೂ, ಬಹು ಭಾರವಾದ ಸಾಮಾನುಗಳನ್ನು ಬಹಳ ದೂರ ಸಾಗಿಸುವುದಕ್ಕಾಗಿಯೂ ಇಷ್ಟೊಂದು ರೈಲುಗಳನ್ನು ತಯಾರಿಸಿ ಆನುಕೂಲಮಾಡಿಕೊಟ್ಟವರು ಯಾರು ? ಎಂಬುದು ಆನೇಕರಿಗೆ ಗೊತ್ತಿಲ್ಲ ! ಈ ರೈಲುಗಳನ್ನು ಮೊದಲು ಕಂಡು ಹಿಡಿದವನು ದನಕಾಯುವ ಹುಡುಗನಾಗಿದ್ದನು ಆವನ ಹೆಸರು ಜಾರ್ಜ್ ಸ್ಟೀಫನ್‌ಸನ್ ಈತನು ಮರಣಹೊಂದಿ ಕಳೆದ ಆಗಸ್ಟ್ ೧೫ನೆಯ ತಾರೀಖಿಗೆ ನೂರುವರ್ಷ ಗಳಾದುವು.

ಜಾರ್ಜ್ ಸ್ಟೀಫನ್‌ಸನ್ ಇಂಗ್ಲೆಂಡಿನ ಆತಿ ಸಾಮಾನ್ಯವಂಶದಲ್ಲಿ ೧೭೮೧ ರಲ್ಲಿ ಹುಟ್ಟಿದನು. ಈತನ ತಂದೆ ಕಲ್ಲಿದ್ದಲು ಗಣಿಯೊಂದರಲ್ಲಿ ಕೂಲಿ ಗಾರನಾಗಿದ್ದನು ಸ್ಟೀಫನ್‌ಸನ್ ಮೊದಲು ಯಾವ ಶಾಲೆಗೂ ಹೋಗದೆ, ತನ್ನ ಬಾಲ್ಯವನ್ನೆಲ್ಲಾ ದನ ಕಾಯುವುದರಲ್ಲಿ ಕಳೆದನು ಆನಂತರ ಕಲ್ಲಿದ್ದಲು ಗಣಿಯಲ್ಲಿ ಕೆಲಸಕ್ಕೆ ಸೇರಿದನು. ಆವನ ೧೪ ನೆಯ ವಯಸ್ಸಿನಲ್ಲಿ ಕಲ್ಲಿದ್ದಲು ಗಣಿಯಲ್ಲಿ ಆವನ ತಂದೆಗೆ ಸಹಾಯಕನಾಗಿ ಕೆಲಸ ದೊರಕಿತು ಆಗ ಆವನಿಗೆ ದಿನವೊಂದಕ್ಕೆ ೧೨ ಆಣೆ ಕೂಲಿ ಸಿಗುತ್ತಿತ್ತು. ಇವನಿಗೆ ಯಂತ್ರಗಳ ಬಗ್ಗೆ ವಿಶೇಷ ಆಸಕ್ತಿ ಇತ್ತು. ೧೪ ನೆಯ ವಯಸ್ಸಿನಲ್ಲಿ ರಾತ್ರಿಕಾಲೆಯೊಂದಕ್ಕೆ ಸೇರಿ ಬಹು ಬೇಗನೆ ಯಂತ್ರಗಳ ಬಗ್ಗೆ ವಿಶೇಷ ಜ್ಞಾನವನ್ನು ಪಡೆದನು. ಆವನ ೩೧ ನೆಯ ವಯಸ್ಸಿನ ವೇಳೆಗೆ ಆನೇಕ ಯಂತ್ರಗಳನ್ನು ನಡೆ ಸುವ ಕೆಲಸಗಳು ಆವನಿಗೆ ಸಿಕ್ಕಿದವು. ಕಲ್ಲಿದ್ದಲು ಗಣಿಯೊಂದರಲ್ಲಿ ಆವನಿಗೆ ತಿಂಗಳಿಗೆ ೧೨೦ ರೂ. ಸಂಬಳದ ಮೇಲೆ ಯಂತ್ರ ನಡೆಯಿಸುವ ಕೆಲಸ ಪೊಂದು ದೊರಕಿತು. ಈ ವೇಳೆಗೆ ಆವನ ಗಣಿ ಗಳಲ್ಲಿ ಕೆಲಸ ಮಾಡುವವರ ಪ್ರಾಣವನ್ನು ರಕ್ಷಿ ಸಲು ಸಹಾಯವಾಗುವ ಲಾಂಪ್ರವೊಂದನ್ನು ಕಂಡುಹಿಡಿದನು.

ಇವನಿಗೆ ಮೊದಲಿನಿಂದಲೂ ಆವಿಯ ಸಹಾಯ ದಿಂದ ಓಡಾಡುವ ಯಂತ್ರಗಳನ್ನು ತಯಾರಿಸ ಬೇಕೆಂಬ ಆಸೆ ಬಹಳವಾಗಿತ್ತು. ತಾನು ಕೆಲಸ ಮಾಡುತ್ತಿದ್ದ ಗಣಿಯ ಆಧಿಕಾರಿಗಳಿಗೆ ಬಹುವಾಗಿ ಹೇಳಿ ಕೊಡಿಸಿ ಗಣಿಯಿಂದ ೯ ಮೈಲಿ ದೂರದ ಲ್ಲಿದ್ದ ಬಂದರಿಗೆ ಹೋಗಲು ಒಂದು ಸಂಡಿಯನ್ನು

ಯಂತ್ರವನ್ನು ತಯಾರಿಸಿದನು. ಈರೀತಿ ತಯಾರಿಸಿದ ಮೊದಲನೆಯ ರೈಲು ೧೬೧೪ ನೇ ಇಸವಿ ಜುಲೈ ೨೩ ನೆಯ ತಾರೀಖು ಯಶಸ್ವಿಯಾಗಿ ಸಂಚರಿಸಿತು

೧೮೨೨ ರಲ್ಲಿ, ಕುದುರೆಗಾಡಿಗಳಿಗಿಂತ ಆವಿಯಿಂದ ಓಡುವ ಯಂತ್ರಗಳು ವೇಗವಾಗಿ ಓಡುತ್ತವೆ ಎಂಬುದನ್ನು ಕೆಲವರಿಗೆ ಮನಗಾಣಿಸಿ ಅವರ ಸಹಾಯದಿಂದ ರೈಲೊಂದನ್ನು ತಯಾರಿಸಿದನು ಇದೇ ಪ್ರಯಾಣಿಕರಿಂದಲೂ, ಸಾಮಾನುಗಳಿಂದಲೂ ಕೂಡಿ, ಓಡಿದ ಮೊಟ್ಟಮೊದಲನೆಯ ರೈಲು

೧೮೨೫ ರಲ್ಲಿ ಇವನು ತಯಾರಿಸಿದ ರೈಲೊಂದು ಆಗ ನಡೆದ ಪರೀಕ್ಷೆಯಲ್ಲಿ ತೇರ್ಗಡೆಯಾಯಿತು

೧೮೨೩ ರಲ್ಲಿ ಸ್ಟೀಫನ್‌ಸನ್, ಇಬ್ಬರು ಸಹಾಯಕರೊಡನೆ ಇಂಗ್ಲೆಂಡಿನ ನ್ಯೂಕ್ಯಾಸಲ್ ಎಂಬಲ್ಲಿ ಇಂಜಿನ್ನುಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಪ್ರಾರಂಭಿಸಿದನು

ಬೆಲ್ಜಿಯಂ, ಸ್ಪೈನ್ ಮೊದಲಾದ ರಾಷ್ಟ್ರಗಳಲ್ಲಿ ರೈಲುಗಳನ್ನು ತಯಾರಿಸಲು ಸ್ವೀಫನ್‌ಸನ್ನನ ಸಲಹೆ ಪಡೆಯಲಾಯಿತು

ಈಗಲೂ ಇಂಗ್ಲೆಂಡಿನಲ್ಲಿ ದಕ್ಷಿಣ ಕೆನ್ಸಿಂಗ್ಟರ್ ಎಂಬಲ್ಲಿ ಇರುವ ವಿಜ್ಞಾನ ಪ್ರದರ್ಶನಶಾಲೆಯಲ್ಲಿ ಇಟಲಿಯ ರೈಲ್ವೆ ಕೆಲಸಗಾರರು ಗೌರವಾರ್ಥವಾಗಿ ಕೊಟ್ಟ ಸ್ಟೀವನ್‌ಸನ್ನನ ದೊಡ್ಡ ಪ್ರತಿಮೆಯೊಂದನ್ನು ಇಡಲಾಗಿದೆ

ಅನುಸೋದರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗವತ್ತಂದ ಫೋಟೋ (ಸಾನಾವಿಧಬ್ಲಾಗಳಿಂದ ಮುದ್ರಿತವಾದದ್ದು) ಸೈಜು ೧೪×೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರ ವರ್ಣದ ಪರ್ಮಾಗಳಿಗೆ ನಿರ್ಮಿಸಿದ್ದಂಥವನ್ನು ಅಳವಡಿಸುವ ಫೋಟೋ	೦—೩—೦
,, ,, ಚಿಕ್ಕ ಸೈಜು ಬೆಲೆ	೦—೨—೦
ಜಗದ್ಗುರು ಪಂಚಾಚಾರ್ಯರ ಲಿಂಗಾಕಾರದ ಫೋಟೋ ಸೈಜು ೧೪×೧೦ ಬೆಲೆ ಇಕ್ಕೆ	೦—೩—೦
,, ,, ಚಿಕ್ಕ ಸೈಜು ಬೆಲೆ	೦—೨—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಘೂಗರ್‌ಧಂದಿಂದ ಆವರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಲಿಂಗ ಧಾರಣೆಯ ಮಾಡಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀ ವಿಶ್ವಾರಾಧ್ಯರಿಗೆ ಪಂಚಪೀಠಗಳಲ್ಲಿ ಪ್ರತಿಷ್ಠಿಸಿದ ಪಂಚಲಿಂಗಗಳನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಧ್ಯುಕ್ತವಾಗಿ ಕ್ಷಾಧಾರಣೆಯಿಂದ ೫ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಜಾಜಿ ಜಗದ್ಗುರು ವೀರಭದ್ರಶಿವಾಚಾರ್ಯರು ಹಾಸ್ಯಮಿಗಳವರ ಫೋಟೋ (ಸಾನಾವಿಧಬ್ಲಾದ್ದು)	೦—೪—೦
ಶ್ರೀಕಾಶೀಪೀಠದ ಜಗದ್ಗುರುಗಳಿಗೆ ಶ್ರೀವೀರಭದ್ರ ಪುರೀ ಜಂಗಮರುಗಳು ಕಿರೀಟಧಾರಣೆ ಮಾಡಿಸುವ ಫೋಟೋ	೦—೧—೬
ಶ್ರೀ ಉಮಮಹೇಶ್ವರ ಸಿಂಹಾಸನಾರೂಢರಾದ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಪೀಠಾಧಿಪತಿಗಳಾದ ಜಗದ್ಗುರು ಶಿವಾನಂದವೀರಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉತ್ತರಿಸುತ್ತಿರುವ ಫೋಟೋ	೦—೧—೬
೧ ದಿಷ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸಾನಾವಿಧ ಬ್ಲಾಗಳಿಂದ ಮುದ್ರಿತವಾದದು) ಚಿಕ್ಕ ಸೈಜು ಇಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ಸಾನಾವಿಧ ಬ್ಲಾಗಳಿಂದ ಮುದ್ರಿತವಾದದು) ದೊಡ್ಡ ಸೈಜು ಇಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಸಿರಿದ ಮಹಾಪ್ರಾಸಾದದ ಅತ್ಯಂತ ಸುಂದರವಾದ ಫೋಟೋ ಇಕ್ಕೆ	೦—೧—೬
೧ ಜಗದ್ಗುರು ಉಜ್ಜಯಿನೀ ಸಿರಿದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ಇಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರೇಂಜಾಸನದ ಅತ್ಯಂತ ಸು ದರವಾದ ಗೋಪುರದ ಫೋಟೋ	೦—೧—೬
೧ ಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಜಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೬
ಕೊಪ್ಪಳ ಕಂಟೋನ್ಮೆಂಟಿನಲ್ಲಿ ನೆ ೀ ಸ ೬ ಬರಿ ಜ ದುರುಗಳ ಅದ್ಧಪಲ್ಲಕ್ಕಿ ಪುಷ್ಪೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರುಂಭಾಪುರೀ ೀರವಿಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ೬ಣೆ
ಸನ್ಯಾಸಾಶ್ರಮವಿವೇಕ (೩ನೆಯ ಆವೃತ್ತಿ ಸಂಸ್ಕೃತ)	೧ ೮ಣೆ
ಷಂಡವಿಂಶತಿ ಪ್ರಶ್ನೆವ್ಯಾಕರಣ (೫ನೆಯ ಆವೃತ್ತಿ)	೧ ೮ಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ೮ಣೆ
ಸಂಕ್ಷಿಪ್ತ ವಿವಾಹಾವಿಧಿ (೨ನೆಯ ಆವೃತ್ತಿ)	೨ ೮ಣೆ
ಶ್ರೀಪಂಚಾಚಾರ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ೮ಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ೮ಣೆ
ಜನವಾದಿನಿಜಿಹ್ವಪರಶು (೯ನೆಯ ಆವೃತ್ತಿ)	೩ ೮ಣೆ
ಶ್ರೀರೇಣುಕಾಚಾರ್ಯಶತಕ (೭ನೆಯ ಆವೃತ್ತಿ)	೩ ೮ಣೆ
ಶ್ರೀಗುರುಚತ್ವಾರವಿಂಶತಿ (೭ನೆಯ ಆವೃತ್ತಿ)	೩ ೮ಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೩ ೮ಣೆ
ಶಿವಶಕ್ತಿವಿಲಾಸ	೩ ೮ಣೆ
ವಿಜಯನಗರ ಸಾಮ್ರಾಜ್ಯದಲ್ಲಿ ಶ್ರೀರೇಣುಕಾಚಾರ್ಯರು	೩ ೮ಣೆ
ಬಲ್ಲಮಾಕಾತ್ಪ್ಯ (೨ನೆಯ ಆವೃತ್ತಿ)	೩ ೮ಣೆ
ಪಂಚಾಚಾರ್ಯಪ್ರಕಾಶ	೩ ೮ಣೆ
ಪಂಚಾಚಾರ ಪ್ರಕಾಶಿಕಾ	೩ ೮ಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ೮ಣೆ
ಲಿಂಗಧಾರಣವಿಧಿ	೪ ೮ಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ೮ಣೆ
ಶ್ರೀಪಶಿಸಂಡಿತಾರಾಧ್ಯರ ಕಾಲನಿರ್ಣಯ	೪ ೮ಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ೮ಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ೮ಣೆ
ವೈದಿಕನಾಮ್ಯಯರಹಸ್ಯ	೪ ೮ಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ೮ಣೆ
ವೀರಶೈವಾಂಹ್ನಿಕ್ಕಾದ್ಧವಿಧಿ	೬ ೮ಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ೮ಣೆ
ಶಿವಾದ್ವೈತರಹಸ್ಯಮಾಲಾ (೨ನೆಯ)	೮ ೮ಣೆ
ವೀರಶೈವಮತಪಾತ್ಯರು	೮ ೮ಣೆ
ಒಸವಪ್ಪಾಂತದಿವಾಕರ (೭ನೆಯ ಆವೃತ್ತಿ)	೮ ೮ಣೆ
ಆಗಮ ಪರಿಜ್ಞಾನ	೮ ೮ಣೆ
ಪ ದಿಷ ಶ್ರೀಕಾಶೀನಾಥಶಾಸ್ತ್ರಿಲವಾರಿ ಭಾಷಣಗಳು (೨ನೆಯ)	೮ ೮ಣೆ
ಸಿದ್ಧಾಂತಸಾರಾವಳಿ (ಪ್ರಬೋಧಚಂದ್ರೋದಯಾಚಾರ್ಯಕೃತ)	೧೨ ೮ಣೆ
ವೀರಜಂಗಮರುಗಳ ಸಂಪಾದಕರಾಯಿ ಸ್ವಾತ್ಮರತ್ನಾಕರ	೧೨ ೮ಣೆ
ಶಿವಾಸೂಕ್ತಿವಿವಾಂತರಪಣಿ	೧೨ ೮ಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಮಾಪೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವೈದಿಕಶಿವವ್ಯಾಜನವಿಧಿ (೨ನೆಯ ಆವೃತ್ತಿ)	೧ ರೂ
ವೀರಶೈವಭೂಷ್ಯಂ (೩ನೆಯ ಆವೃತ್ತಿ)	೨ ರೂ
ವೀರಶೈವ ವೆಬ್ಬತ್ತ (೩ನೆಯ ಆವೃತ್ತಿ, ೨೦ ಪಠ್ಯವಳಿಗೆ ಟೀಗಳಿಂದ ಕೂಡಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾವಿ ಪೀಠಪ್ರತಿ)	೨ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮಕಾರಣಾಗಮ ಮತ್ತು ಬೀಜಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ಶಿವಾದ್ವೈತಮಂಜರಿ (ಕನ್ನಡದೊವ್ಯಾಖ್ಯಾನ ೧೩ಳಳ ಪುಟ)	೪ ರೂ
A brief life-sketch of Pandit Sri Kashinatha Shastriya (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriya (*English*)	**12 As**
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಆ
ವೀರಶೈವಜ್ಞ (ಮರಾಠಿ)	೧ ಆ
ಮಹಾನಾರಾಯಣೋಪನಿಷತ್ (ವೀರಶೈವಾಭಾಷ್ಯ ಸಂಸ್ಕೃತ)	೧ ಆ
ಸಂಧಿಕೌಮುದೀಕಾರಿಕಾ (ಸಂಸ್ಕೃತ)	೨ ಆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ॥ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಭವನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀ ಲೋಕಮಂ ॥

ಸ್ವಕದವರಿಗೆ ೨ ರೂ ೪ ಆಣೆ ಪರಸ್ವಕದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಸ್ವಭಾ, ಸೋಮವಾರ ತಾ॥ ೨೦ನೇ ಸೆಪ್ಟೆಂಬರ್ ೧೯೪೪ [ಸಂಚಿಕೆ ೧೯

॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಆಸ್ಥಾನ ಸಮಾಪ್ತಿ

ಶ್ರೀಕುಪ್ಪೂರು ಗದ್ದಿಗೆಮಠವು ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿದ್ದು, ಶ್ರೀಮದ್ರಂಭಾಪುರಿ ಪೀಠದ ಶಾಖಾ ಮಂಗವಾಗಿರುತ್ತದೆ ಈ ಮಠದ ಮೂಲಗುರು ಶ್ರೀಮದ್ಗುರು ಸಿದ್ಧೇಶ್ವರಸ್ವಾಮಿಯ ಮಹಿಮಾತಿಶಯ ದಿಂದ ಭಕ್ತಾದಿಗಳು ತಮ್ಮ ತಮ್ಮ ಮನೋರಥಗಳನ್ನು ಸಡೆಯ ಕೃಪಾ ಧಾರಾಳಿಯಾದ ಈ ಮಠದಲ್ಲಿ ಪ್ರತಿನಿತ್ಯವೂ ನೂರಾರು ಜನಗಳಿಗೆ ಅನ್ನದಾನವು ನಡೆಯುತ್ತಿರುವುದು ಈ ಈ ಮಠದ ಅಧಿಪತಿಗಳಾಗಿರುವ ಶ್ರೀ॥ ಜ॥ ಶ್ರೀ॥ ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳವರು ಮಠವನ್ನು ಒಳ್ಳೆ ಒಳಿತ್ವದ್ಧಿಗೆ ತಂದಿರುತ್ತಾರೆ ಇವರು ಚಿಕ್ಕವರಾಗಿದ್ದರೂ ಉದಾರಿಗಳೂ, ಒಳ್ಳಜನಪ್ರೇಮಿಗಳೂ ಆಗಿರುವರು ಆದುದರಿಂದ ಸರ್ವರೂ ಇವರಲ್ಲಿ ಭಕ್ತಿಯನ್ನಿಟ್ಟು ಪಡೆದುಕೊಳ್ಳುತ್ತಿರುವರು ಇವರ ಪ್ರಾರ್ಥನೆಯ ಮೇರೆಗೆ ಶ್ರೀರಂಭಾಪುರೀ ಜಗದ್ಗುರುಗಳವರು ಈ ವರ್ಷದ ಶ್ರಾವಣ ಪೂಜಾನುಷ್ಠಾನವನ್ನು ಸುಪ್ರಸಿದ್ಧವಾದ ಈ ಮಠದಲ್ಲಿಯೇ ನೆರವೇರಿಸಿದರು ಶ್ರೀಜಗದ್ಗುರುಗಳವರು ತಾ ೨೪ ಆಗಸ್ಟ್ ನೆಯ ಸೋಮವಾರ ದಿವಸ ಸಕಲ ಬಿರುದಾವಳಿಗಳೊಡನೆ ಇಲ್ಲಿಗೆ ದಯಮಾಡಿಸಿದರು ಉಷ್ಣವಕ್ಕೆ ಚಿಕ್ಕನಾಯಕನ ಹಳ್ಳಿ ತಾ॥ ಅಮಲ್ದಾರ್ ಸಾಹೇಬರು ಮತ್ತು ಪೋಲೀಸ್ ಇನ್‌ಸ್ಪೆಕ್ಟರ್ ಸಾಹೇಬರು ಪೋಲೀಸ್ ಸಿಬ್ಬಂದಿಯೊಡನೆ ಒಂಬ ಉತ್ಸವವನ್ನು ಸಾಂಗವಾಗಿ ನೆರವೇರಿಸಿದರು ಶ್ರಾವಣ ಶು ೯ ರಿಂದ ಮಹಾನ್ನಿಧಾನದಲ್ಲಿ ಪೂಜಾನುಷ್ಠಾನವನ್ನು ಪ್ರಾರಂಭಿಸಿದರು ದೂರದೂರದೇಗಳಿಂದ ಭಕ್ತಾಳು ಸಾವಿರಾವೇಕ್ಷಗಳಾಗಿ ಬಂದು ಈ ಪವಿತ್ರಸ್ಥಳದಲ್ಲಿ ನಡೆಯುತ್ತಿದ್ದ ಪೂಜಾದಿಗಳನ್ನು ನೋಡಿ ಹರ್ಷಚಿತ್ತರಾಗುತ್ತಿದ್ದರು ಶ್ರೀಸನ್ನಿಧಿಯ ಪ್ರತಿಕಾಲಪೂಜೆಯಂತೆಯೂ ತೀರ್ಥಪ್ರಸಾದ ಸೇವನೆಯಿಂದಲೂ, ಅನ್ನಸಂತರ್ಪಣೆಯಿಂದಲೂ ಭಕ್ತಾದಿಗಳಿಗೆ ಆನಂದವೇ ಆನಂದವಾಗಿತ್ತು ಈ ರೀತಿ ಒಂಬತ್ತು ತಿಂಗಳು ನಡೆದು ತಾ॥ ೧೯ ಆಗಸ್ಟ್ ನೆಯ ದಿವಸ ಪಂಚಮಕಳಶ ಮರವರ ಗಟಿಗೆಗಳೂ ಪರಸ್ವಳದಿಂದ ಬಂದಿದ್ದ ನೂರಾರು ಜನ ಗಟುಗಳೂ ದೀಕ್ಷಾಸಂಸ್ಕಾರವು ಮಾಡಲ್ಪಟ್ಟಿತು ತಾ॥ ೨೯ ಆಗಸ್ಟ್ ಗುರುವಾರ ಪ್ರಾತಃಕಾಲ ಮಹಾಸನ್ನಿಧಾನದ ಶಿವಲಿಂಗ ಮೂರ್ತಿಗೆ ಗೋಕ್ಷೀರ ಮಹಾರುದ್ರಾಭಿಷೇಕವೂ, ಲಕ್ಷ ಬಿಲ್ವಾರ್ಚನೆಯೂ ನಡೆದುದಲ್ಲದೆ, ಅದೇ ದಿವಸ ಸಾಯಂಕಾಲ ಶ್ರೀಪ್ರಾಣಾಯಕನಾದ ಶ್ರೀಮಗುಲಸಿದ್ಧೇಶ್ವರ ಸ್ವಾಮಿಗೆ ಸಹಸ್ರ ದೀಪೋತ್ಸವವು ಮಹಾಸಂಭ್ರಮ ದಿಂದ ನೆರವೇರಿತು ತಾ॥ ೩೦-೮-೪೪ ಶುಕ್ರವಾರ ಮಹಾಸನ್ನಿಧಾನದ ಪ್ರಾತಃಕಾಲದ ಪೂಜೆಯಲ್ಲಿ ಶ್ರೀಶಿವ ಲಿಂಗಸೂರ್ತಿಗೆ ನಾಂದೀಮೋದಕದಿಂದ ಮಹಾರುದ್ರಾಭಿಷೇಕವೂ ಸಹಸ್ರಕಮಲಾರ್ಚನೆಯೂ ಮಹಾಮೃತ್ಯುಂಜಯ ಹೋಮವೂ ಮಹಾಪೂರ್ಣಾಹುತಿಯೂ ಆದಮೇಲೆ ಶ್ರೀಜಗದ್ಗುರುಗಳವರು ಸಕಲ ಬಿರುದಾವಳಿಗಳೊಡನೆ ಪಲ್ಲಕ್ಕಿಯಲ್ಲಿ ಕುಳಿತು ಶ್ರೀಮಠದ ಪ್ರದಕ್ಷಿಣೆಯನ್ನು ಮಾಡಿ ಮಹಾಸನ್ನಿಧಾನದ ಮುಂಭಾಗದಲ್ಲಿ ಪಲ್ಲಕ್ಕಿಯಿಂದ ಇಳಿದು ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಾದಾರವಿಂದಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಶ್ರೀಗುರುಗಳವರ ಆಜ್ಞಾನುಸಾರ ಶ್ರೀಸನ್ನಿಧಿಯಲ್ಲಿ ಕುಳಿತು ಶ್ರೀಗುರುಗಳವರ ಪಾದಪೂಜೆಯನ್ನು ಮಾಡಿ ಶ್ರೀಗುರುಗಳವರಿಂದ ಪ್ರಸಾದವನ್ನು ಸ್ವೀಕರಿಸಿದರು ಆಗ ಶ್ರೀಗುರುಗಳವರು ಶ್ರೀಮಠದ ಪರಂಪರೆಯಲ್ಲಿ ಬಂದಿರುವ ಶ್ರೀಮಠದ ಆಸ್ತಿಯನ್ನು ಅನುಭವಿಸಿಕೊಂಡು ಬಂದಿರುವ

ಶ್ರೀಜಗದ್ಗುರು ಪೂಜ್ಯ ಕಾಜಾರ್ಯಾಂಬ ಸಮಃ

ಸ್ತ್ರೀಮೋಹದ ಮುಕ್ತುರಿಣಾಮ

ಶ್ರೀ—ಮಲ್ಲಿಕಾರ್ಜುನಾರಾಧ್ಯ ಸಾಳೆಗ್ರಾಮದ ಮಳಿಯಂತೆ
ಪಾಠಶಾಲೆಯವರು

ಈ ಪ್ರಪಂಚದಲ್ಲಿ ಸ್ತ್ರೀಮೋಹವೆ ಬುವ ದಾಟಲರಕ್ಕೆ ವಾದ ಸಮುದ್ರವನ್ನು ದೆ ಯಾದಿಂದ ದಾಟಲುವೆಗೆ ವಾದ ಸಮುದ್ರವನ್ನು ದೆ ಯಾದಿಂದ ದಾಟಲುವೆಗೆ ಅವನೇ ನೀರಿನಿಸಿನವನು ಎಲ್ಲಾ ಚಟುಗಳಲ್ಲಿಯೂ ಸ್ತ್ರೀಮೋಹವೆಂಬ ಚಟುವು ಬಹು ಕೆಟ್ಟದಾಗಿರುವಪು ಸ್ತ್ರೀಮೋಹವು ಇನಂದವು ಕಾಮುಂಗಿಂತ ಪ್ರಾಣಾನಂದ ಕ್ಕಿಂತಲೂ ಮಿಗಿಲಾಗಿರುವುದು ಆದರೆ ಆ ಆನಂದವು ಕಾಮನಬಿಲ್ಲು ಏಳು ನೀರಿಪೆ ಲಿನ ಗುಳಿಯಂತೆ ಕ್ಷಣಿಕವು ವಿಷಮಿಶ್ರಿತವಾದ ಸುಖವಿನಂತೆ ಆಪಾಯ ಕರವು ಆಗುವುದು ಮನುಗ ಒಂದುಸಾರಿ ಸ್ತ್ರೀ ಮೋಹಪಾಶಕ್ಕೆಳಿಕ್ಕಾದರೆ ತದರ ಬಂಧನದಿಂದ ತಪ್ಪಿಸಿ ಕೊಳ್ಳಲು ಸಾಧ್ಯವೇ ಆಗುವದಿಲ್ಲ ಸ್ತ್ರೀಯ ರನ್ನ ಮೋಹ ವೈಕ್ಷಿಯಿಂದ ನೇಗಿದರೆ ಅವ ಎಂದಿನ್ನ ಒಸಿ ಪಾತಾಲಕ್ಕೆ ಕುಸಿಯುವಪೆ ಬಿಡ ನದಿಲ್ಲ ಇವರಿಂದ ದನ ಹಾನಿ ಮಾನವಾನಿ ನ್ಯಾಯಾಪಯಿಗಳ ಪದ

ನ ಜಾತಿಯ ಕಾನು ಕಾವನ್ನು ಪಂಚಭೋಗ ನ ಸಾಮ್ಯತಿ ಪವಿತಾ ಕನ್ಯನರ್ತ್ಯಪ ಬಾಯಿ ಎಂಬಾ ಕೆ

ಸಾಮಯಿಕ ಉಪಭೋಗದಿಂ ದ ಎಂದಿಗೂ ಇವನು ಶಾಂತವಾಗಿ ಪುನಿಸ್ಸಿಲ್ಲ ಅನ್ನುವನ ಸಂದಿ ದಸೂ ಎಂದ ಹೆಚ್ಚು ಹೆಚ್ಚಾಗಿ ಪ್ರಜ್ವಲಿಸುತ್ತಿ ದನು ಜೊಳಿ ಗಿತ್ತ ಬೆಂಕಿಯ ಹೊಗೆಯಿಂದಲೆ ತಯರಿ ದ ಂಎ ಕೈಣ್ಣಯನ್ನು ತ್ಯಾಗಮಾಡಿಬೇಕ ಮನುಷ್ಯರಾಲ್ಲ ವೃಷ್ಟಿಯಿಂದ ಇದು ಆಗದ ಮಾತ ವಸಿಷ್ಠನು ಎಂದುಕನ ದರೂ ಕಾಮಾಬಿಲಾಷಯು ವಾತ್ರ ಪ್ರಾಯಸಮಭ್ರ ವಾಗಿರ್ ಇರವದು ಆದ ಜಿಯಾಗಿ ಪ್ರಾಣದ ಜೊತೆಯಲ್ಲಿಯ ಕೊನಗಾಮವರ ಗೆ ಈ ತತ್ಸ್ಥಾಂಗ್ನು ವಿಶ್ವನರ್ ಮಾತ್ರ ಸಮರ್ಥ ಶಾಂತಿಯಿಂ ಲಿಸುಗದಲ್ಲಿ ತನಿನ ಸುದ್ಧಾರ್ಥ ಆಗುವನು ವಿಚಾರವನಾಡಿ ನೋಡಿದರೆ ಸ್ತ್ರೀಮೋಹವು ಒಮ ಅನರ್ಥಕರವಾದುದೆಂದು ದೃಢವಾಗಿ ಪೆದು

ನ ದುಮಾಗರುವಂತೆ ತೋರುವ ಸ್ತ್ರೀಯರ ತನಯವ ಗಳೂ ಬಾಳೆಯಂದಿಂದಿನಂತರವು ಅವರ ಜೋಳ್ಕೊಡೆಗಳೂ ಮರ್ಯೋಪರಾಗಾಗಿರುವ ಕೇಶಪಾಶವೂ ಪುರುಷರ ಹೃದಯ ವನ್ನು ಮೋಹನೆಂಬ ಕಾಲಿಗೃಹವನು ಸೃಷ್ಟಿಸುವುದಕ್ಕೆ ಸಹಕಾರಿಗಳಾಗಿರುವುದು ತವರ ಜರ್ಮದ ಸೌಂದರ್ಯವು ಅವರ ಸಂಸರ್ಗದಿಂದುಂಟಾಗುವ ದುಸ್ಪರಿಣಾಮಗಳನ್ನು ಅಜ್ಞಾನಿಯಿಕೊಂಡಿರುವುದು ನೆ ಹ ಮರು ಹೆಸ್ಸುಳ್ಳು ಸ್ತ್ರೀಯರು ಇಲ್ಲದಿರಬ ಪ್ರಪಂಚ ಗಳಿ ಕಾಸುಂಬ ರಾಕಾಶ ಹಾಡಿದ ಒಲಿಯಂತಿರು ವರು ಕ್ರೂರವಾದ ಹುಲಿಯ ಬಾಯಿಗೆ ಸಿಲ್ಲಿ ಬಂದಿರುಗ ಬಹುದು ಕೀಪ್ಣನಾದ ಆಯುಧವ ಎಲುಗಿಗೆ ಳಿಲ್ಲಿ ತಪ್ಪಿಸಿಕೊಳ್ಳಬಹುದು ಆದರೆ ಸ್ತ್ರೀಮೋಹವೆಂಬ ಜಾಲಗಿಯೊಳಗೆ ಎಲ್ಲಿ ತಪ್ಪಿಸಿಕೊಳ್ಳುವುದು ಬಹು ಕಷ್ಟ! ಕಾದ ಕಬ್ಬಿಣವು ಕಣ್ಣಿಗೆ ತೆಗುಲಿದಲ್ಲಿ ಕಣ್ಣು ಮಾತ್ರ ಇಂಗಿಹೋಗುವುದು ಆದರೆ ಸ್ತ್ರೀಯನ್ನು ಮೋಹದ್ಷಷ್ಟಿಯಿಂದ ನೋಡಿದಲ್ಲಿ ಮನುಷ್ಯನೇ ಇಂಗಿ ಹೋಗುವನು ಸ್ತ್ರೀಯಳು ಒಂದುನೇಳೆ ಚಿತ್ರಪಟದಲ್ಲಿ ಕಾಣಿಸಿಕೊಂಡರೂ ಅಲ್ಲಿಯೂ ಸಹ ಅವಳು ತನ್ನ ಸೌಂದರ್ಯಗಳನ್ನು ಸುರುಕರ ಬೀಳಿ ಬೀಸಿ, ಅವರನ್ನು ತನ್ನ ಮೋಹನೆಂಬ ಒಂಧನದಲ್ಲಿ ಕೆಡಿಪುವುದಕ್ಕೆ ಪ್ರಯತ್ನಪಡುವಳ ಇಚ್ಛೇ ಅಲ್ಲಾ, ಅವಳ ರೂಸಲಾವಣ್ಯ ಅವಯವಗಳ ಸ್ಮರಣೆಯನ್ನು ಮಾಡಿಕೊಂಡರೂ ಸಾಕು, ಪುರುಷನು ಭೋಗಾಭಾಸಿ ಯಾಗುವನು ಸ್ತ್ರೀಯರ ಅವಯವಗಳು ರಕ್ತಮಾಂಸಾಸ್ಥಿ ಗಳಿಂದ ತುಂಬಿ ಚರ್ಮದಿಂದ ಆಚ್ಛಾದಿತಗಳಾಗಿರುವವೇ ಹೊರತು ಮುತ್ತಿ ಬೆರೆಯಿಲ್ಲ ಆಮಭಿವಜ್ಞರೂ ಸಹ—

"ಕೆಂವುತುಟಿಯಬಲೆಯರ ರೂಪಿನ ಲಂಪಟದ
ಪುರುಷರನು ರತಿಪತಿ ಕೆಂವುದೋರದವೋಲ್ ಕೊರಳನು
ಕಂಬಿಸಲೆ ಕೊಯ್ವು ॥'

ಎಂದು ಹೇಳಿರುವರು ಆದುದರಿಂದ ಬುದ್ಧಿಶಾಲಿಗಳು ಚರ್ಮದ ಸೌಂದರ್ಯ ಕ್ಷಾಗಿ ಮೋಸಹೋಗಿ ಮರುಳಾಗ ಬಾರದು ಸ್ತ್ರೀಯರ ಪ್ರಭಾವವು ಹೀಗಿರುವುದರಿಂದ ಇಂದ್ರಾಣಿಗಳನು ವಿಶಾಲಗೊಳಿಸುವ ಸ್ತ್ರೀಯರ ಜಕ್ಕಪಟಿ ಗಳನ್ನ ವಸ ಳಲ್ಲಿ ಕಟ್ಟುಬಾರದು ಸ್ತ್ರೀವಾಮೋಹವು ಒಂ ದಸ್ಪರ್ಶಾವ ಕಾರಿಯಾದುದು ಈ ಮೋಹದ ನ ಜು ನ ನೆ ದಿನವೇ ಗ ಕಾಯುತ್ತ ವಿವೇ ಚನೆಯೇ ಇಂಸಿದ್ದಿ ಇವನ ನಗಳ ಕಾರಿಯು ಪಿಂಡಾದ ಪಾಶವೇಯನು ಮೋಹ ಪಾಶವನ್ನು ಪರ್ಯಂತಕ್ಕೂ ಸ್ನಾನಕ್ಕೆ ಹೋಗು ವಂತೆ ವಾಡಿ ಪಸವಯವಲ್ಲ ಸೌಮನಸವ ಕಷಟ ವೇಷವನ್ನು ಅಳಿ ತನ್ನ ಸೌಂಗಳವಾದ ಉಮವಾಸನೆ ಯನ್ನು ಪಣೆಸಿಕೊಳ್ಳಲು ಬಿಡದು ಅವ್ಯಲ್ಲಿ ಸೌಮನು ಒಂದು ಈ ಪವಿತ್ರತನವನ್ನು ನೋಡಿ ಕೋಪಿಸ್ಪಿದ್ದಾದಿಂದ ನಿನಗೆ ಸಹಸ್ರಬಗಗಾಲ! ನೀನ ನಪ್ಪುಸಕನಾಗಿ! ಎಂದ ಶಾಪವನ್ನು ಕೊಟ್ಟನು ನಮನನ ಇಂದ್ರನ ಪಟ್ಟಕ್ಕೆ ಒಂದಮೇಲೆ ಇಂದ್ರನ ಶೆಂಡಿಯಾದ ಶಬ್ದೀಲಿಯನ್ನು ನೋಡಿ ತವಳು ನಿಯನ ನ್ನಟ ಪ್ರಕಾರ ತಾನು ಪಲ್ಲಕ್ಕಿಯಲ್ಲಿ ಕುಳು ಬರ್ಗಿಂದ ಪಲ್ಲಕ್ಕಿಯನು ಹೊರಿಸಿಕೊಂಡು ಬೀಗಿ ಲುಂಪಲಲಿ ದ ಪೀಠದಿಯ ಮನೆಗೆ ಹೊರಟನ ತದ ಪವಿತ್ರ ದಿಂದ ವರ್ಗದಲ್ಲಿ ಸಹ ಸನು ಸರ್ವ ಎಂದರೆ ಬೆಗ ಬೇಗ ಸಾಗಿಸೆಂದ ನರು ಕ್ಯಂ ತಾಂಬದನ ಲಿದು ಎ ರಿಗಿ ಂದ ಪ್ರ ಎತ್ತಿ ಸಪ್ಪುಗೆ ಪ್ರ ಲಿಸಲು ಕೊಟ್ಟು ಲ ತ ನ ಪಾದವು ರಿಷ್ಟ ತಾಪ ಯವು ಕಪಟವು ಎಂದು ಪ ಸ ತ್ಕಾರವಾಗಿ ಪ ವಿತ್ರ ಕೆತ್ರ ಗ್ರಾ ವಿವನ್ನಪ್ಪ ಲಂ ಪಟ್ಟಣವಿ ಸಟ್ಟು ಸಂಸಾರವು ತ ವರೀಕ್ಷಿ ಎಂಬ ಮೆ ರ್ಯವು ತಿಕಲ್ಪಾಯಿತಾಗಿದ್ದನ ಅವನು ಈವನು ಅಜ್ಞಿ ಎಂಬ ನರಗಾಯ ಕಾಸ್ಪಿಯಂತೆ ತನಗೆಯಿಂತ ಯನ್ನು ತನ್ನ ವೆಂದು ತ್ರಿಮೂರ್ತಿ ಕೊಂಡಿದರ ಫಲವಾಗಿ ಲಯ ಗುಲವಾಗಿ ಕ್ಕೆನ್ನ ಪಾಪಿಯಾದ ಬಾಹಸ್ಪತಿಯ ತನ್ನ ಹಿರಿಯ ಬಂಧುವಾದ ಉತಥ ನ ಪತ್ನಿಯಾದ ಮಮತೆ ಎಂಬವ್ಯನ್ನು ಗರ್ಭಿಣಿಯಾಗಿದ್ದರೂ ಬಲಾತ್ಕಾರದಿಂದ ರಮಿ ದನ ರತಿಕಾಲದಲ್ಲಿ ಎಂಡವು ಇಲ್ಲಿ ನಾಸಿರಿಂನೆಯು, ಇನ್ನೊಂದು ಗರ್ಭಕ್ಕೆ ತವಕಾಕಪಲ್ಲವೆನೆಲು ನೀನು ಕುರುಡಾಗೆಂದು ಶಪಿಸಿದನು ಎಂದುಸಾರೆ ವರಾಶರ ಮಹರ್ಷಿಯು ನದಿಯನ್ನು ದಂಟುತ್ತರುವಾಗ ದೋಣಿ ಯೆನ್ನು ನಡೆಸುತ್ತಿದ್ದ ನವಯೌವನವನಾಯಾದ ಮತ್ಸ್ಯ ಗಂಧಿಯ ಅವಯವವನ್ನು ನೋ ಡಿ ಮೋಹಿತನಾಗಿ ಅವಳನ್ನ ಆಲಿಂಗಿಸಿಕೊಳ್ಳಲು ಹೋದನು ಆಗ ಅವಳು ದೂರ ಸರಿದು ಸ್ವಾಮೀ! ಪ್ರಾಚೀನ ಕಾಲದಿಂದ ನನ್ನ ದೇಹವು ಮೆರ್ಗಂಧಯುಕ್ತವಾಗಿರುವುದು ನನ್ನ ಪತ್ತಿರ ಬರಬೇಡಿರೆಂದಳು ಆಗ ತನ್ನ ಕರ ಪ್ರಭಾವದಿಂದ ಅವಳಲ್ಲಿ ಸುಗಂಧಯುಕ್ತವಾಗಿ ಮಾಡಿ ಪುನಃ ತಬ್ಬಿಕೊಳ್ಳಲು ಯತ್ನಿಸಲು, ಸ್ವಾಮೀ! ಈಗ ಇನ್ನೂ ಸೂರ್ಯನು ಅಸ್ತಂಗತನಾಗಿಲ್ಲ ಇದು ರತಿ ಕ್ರೀಡೆಗೆ ಏಷದ್ಧಕಾಲವೆಂದಳು ಆಗ ಆ ಮಹರ್ಷಿಯು ಸುತ್ತಲೂ ಮಂಜುಕವಿಯುವಂತೆ ಮಾಡಿ ಅವಳನ್ನು ಭೋಗಿಸಿದನು ಇವರಿರ್ವರ ಸಂಪರ್ಕದಿಂದ ಜನಿಸಿ ದವನೇ ವ್ಯಾಸರು ಪಾಂಡುರಾಯನು ವಿಧಿಪ್ರಕಾರ ವಾಸಕ್ರಸ್ಯಾಶ್ರಮವನ್ನು ಸ್ವೀಕರಿಸಿ ಕಾಡಿನಲ್ಲಿರುವಾಗ್ಗೆ ಒಂದು ದಿವಸ ಕೆರಿಯ ಹೆಂಡತಿಯಾದ ಮಾದ್ರಿಯನ್ನು ನೋಡಿ ಕಾಮೋದ್ರಿಕ್ತನಾಗಿ ಅವಳನ್ನು ಕ್ರೀಡಿಸಲು ಯತ್ನಿಸಿದಪು ಆಗ ಅವಳು ಪ್ರಾಣನಾಥಾ! ತಮಗೆ ಋಷಿಗಳ ಶಾಪವಿರುವುದು ಈಗ ನೀವು ನನ್ನನ್ನು ಕ್ರೀಡಿಸಿದರೆ ನಿಮಗೆ ಮರಣವಾಗುವದು, ಆದ್ದರಿಂದ ಸರ್ವಥಾವೇಡವೆಂದು ಹೇಳಿದರೂ, ತನಗೂ ಆ ಸಂಗತಿ ಗೊತ್ತಿದ್ದರೂ, ಕ್ರೀಡಿಸಿ ಅವಳ ಎದೆಯಮೇಲೆಯೇ ಪ್ರಾಣ ಬಿಟ್ಟನು ಪುರೂರವೆಂಬ ರಾಜನು ಊರ್ವಸಿ ಯಲ್ಲಿ ಮೋಹಿತನಾಗಿ ಅವಳ ಅಂಗಸಂಗಪ್ರಾಪ್ತಿಗಾಗಿ ಕುರುಕ್ಷೇತ್ರದಲ್ಲಿ ಯಜ್ಞವನ್ನು ಮಾಡಿ ಆಕೆಯ ಲೋಕಕ್ಕೆ ಹೋಗಿ ಎಷ್ಟೋನರ್ಷ ಆಕೆಯೊಡನೆ ರ ಸುಖಾನುಭವನವನ್ನು ಮಾಡಿಕೊಂಡಿದ್ದು ಕೊನೆಗೆ ಆ ರಿಂದ ಕಾಂತಿ ಪೆಗೆದುಬಿಡುವಂತೆ ಮನೆಗಂಡು ಸ್ಪಾಪ್ತಾಪ್ತಾ ವನ್ನು ಹೊಂದಿ ತನ್ನ ಲೋಕಕ್ಕೆ ಬಂದು ಶೇತಾಯುಷ್ಯ ವನ್ನು ಭುವಚ್ಛಿಂತನೆಯಲ್ಲಿ ಕಳೆದು ಸಾರ್ಥಕಮಾಡಿ ಕೊಳ್ಳಬೇಕೆಂದು ಋಷ್ಯಾಶ್ರಮವನ್ನು ಸೇರಿದನು, ಯಯಾತಿ ಎಂಬ ಪ್ರಸಿದ್ಧ ರಾಜನು ಶುಕ್ರಾಚಾರ್ಯ ಶಾಪದಿಂದ ಮುದುಕನಾದನು ಆದರೆ ದೇಹವು ಮುಖ್ಯವಿದರೂ ವಿಷಯಭೋಗಾಭಿಲಾಷೆಯ ಮಾತ್ರ ಪ್ರಾಯಸಸನುಭ್ರ ನಾಗಿರ್ಯೇ ಉಳಿದಿತ್ತು ಆಗ ರಾಜನು ಬಹು ವಿಷ್ಣನಾಗಿ ಶುಕ್ರಾಚಾರ್ಯರ ಆಸ್ರಗ್ರಹದಿಂದ ತನ್ನ ಮುಪ್ಪನ್ನು ಕಿರಿಯ ಮಗನಿಗೆ ಕೊಟ್ಟು ಆವ ಪ್ರಾಯವನ್ನು ತಾನು ಕಡವಾಗಿ ತೆಗೆದುಕೊಂಡನು ಆಗ ಯಯಾತಿಯು ತುಂಬಾ ಹರ್ಷಿತನಾಗಿ ಇಷ್ಟ ಸುಗುಣವೆಂದು ವಿಷಯಸುಖಾನುಭವನವನ್ನು ಬಹು ವರ್ಷಗಳ ವರೆಗೆ ಸೂರೆಗೊಂಡನು ಆದರೂ ಅವನಿಗೆ ತೃಪ್ತಿಯೇ ತೋರಲಿಲ್ಲ ಒಂದುದಿನ ಅವನು ವಿಕಾರದಲ್ಲಿ ಕುಳಿತುಕೊಂಡು ವಿಚಾರಮಾಡಿ ವಿಷಯಸುಖಾನು ಭವದಲ್ಲಿ ವಿಷ ಹುರುಳಿಲ್ಲವೆಂದು ಮನಗಂಡು ಕಡಾ ತೆಗೆದುಕೊಂಡಿದ್ದ ಯೌವನವನ್ನು ಮಗನಿಗೆ ಕೊಟ್ಟು ತನ್ನ ಮುಪ್ಪನ್ನು ತೆಗೆದುಕೊಂಡು ಆ ಮಗನಿಗೆ ಪಟ್ಟ ವನ್ನ ಕಟ್ಟಿ ಸನ್ಯಾಸವನ್ನು ಸ್ವೀಕರಿಸಿ ಕಾಡಿಗೆ ಹೊರಟನು

ಇಗೆ ಎಷ್ಟೋ ಜನರು ಸ್ತ್ರೀವ್ಯಾಮೋಹದಿಂದ ತಮ್ಮ ನೇಕ ಕಷ್ಟನಷ್ಟಗಳನ್ನು ಹೊಂದಿರುವರಲ್ಲದೆ ಪ್ರಾಣ ವನ್ನೂ ಕಳೆದುಕೊಂಡಿರುತ್ತಾರೆ ಆದ ಪ್ರಯು ಸ್ತ್ರೀಮೋಹವು ತರವಲ್ಲ! ಸರ್ವದಾ ತರವಲ್ಲ ಸ್ತ್ರೀಯರ ಸಂಗದಿಂದಾಗುವ ದುಷ್ಪರಿಣಾಮ ಎಷ್ಟಿವಾಗಿ ಶ್ರೀ ಸರ್ವಭೂಷಣಶಿವಯೋಗಿಗಳು —

ನೋಡಿದರೆ ಮನವ ಮಾತಾಡಿದರೆ ಧನವ ನೊಡಿ ಗೂಡಿದರೆ ಪ್ರಾಣಗಳ ಳೆಯಿಡುಕೊಳ್ಳುವದು॥ ಮಾಟ ಬಾರದು ಮಾಡಿಸಿ ಕಡೆಗೆ ಯವಭಯ। ತಾಡನೆ ಹಿಡಿಕೊಟ್ಟು ಕೊಲ್ಲುವುದಂತ ಧರೆಯೋಳ ಹೆಣ್ಣು ರಕ್ಕಸಿಯಲ್ಲದ ಬೇರನ್ನುಂಟೆ ? ! ಎಂದು ಭೋಧಿಸಿದ್ದಾ ವರು ಆದುದರಿಂದ ಮಾನವರು ಸ್ತ್ರೀಮೋಹಕ್ಕೆ ಒಳಗಾಗದೆ ಪರಮಾತ್ಮಧ್ಯಾನದಲ್ಲಿ ನಿರತರಾಗಿ ಧನ್ಯರಾ ಬೇಕು

ರುದ್ರಾಭಿಷೇಕ ಸಮಾರಂಭ ಬಟ್ಟೂರು

ಶಿರಹಟ್ಟಿ ತಾ| ಬಟ್ಟೂರು ಗ್ರಾಮವು ಗುರುಭಕ್ತಿಗೆ ಮಾತ್ರ ಭೂಮಿಯೊಶಿರುವುದು ಇಲ್ಲಿರುವ ಸಮಸ್ತ ಜನರೂ ಪ್ರೇಂಸಿತ್ಯವೂ ಪಂಚಾಚಾರ್ಯರ ಭಜನೆಯನ್ನು ನೂಹುತ್ತಾ ನಿಜವಾದ ಗುರುಭಕ್ತಿಯನ್ನು ವ್ಯಕ್ತಪಡಿಸು ತ್ತಿರುವರು ಈ ಗ್ರಾಮದ ನ ರಾ ಮುದಿಪ್ಪ ಗಾಡರು ಏಲಾಜ ಗೌಡರು ಪಾಟೀಲ ಇವರು ನೂತನ ಗೃಹವನ್ನು ಕಟ್ಟಿಸಿ ಶ್ರಾವಣ ಮಾಸದ ಅಂತ್ಯಕ್ಕೆ ಇಪ್ಪತ್ತು ಬ್ರಹ್ಮಸ್ಮರದ ಶ್ರೀಗಣ ಬ್ರ। ಪಟ್ಟದ ಸ್ವಾಮಿಗಳ ರನ್ನು ತಲ್ಲಗೆ ದಯಮಾಡಿಸಿಕೊಂಡು ಅವರ ಗುರುಸ್ಥ ದಲ್ಲಿ ಮಾಘೇಶ್ವರರ ಮೂಲಕ ರುದ್ರಾಭಿಷೇಕವನ್ನು ಮಹಾ ವೈಭವದಿಂದಸೆ ನೆರವೇರಿಸಿರುವರು ಈ ಮಂಗಳ ಕಾರ್ಯಕ್ಕೆ ಈ ಗ್ರಾಮದ ಪ್ರಮುಖ ಜನರು ಮತ್ತು ಸುತ್ತ ಮುತ್ತಲ ಗ್ರಾಮಗಳ ಜನರು ವಿಶೇಷವಾಗಿ ಆಗಮಿಸಿ ದ್ದರು ಈ ಸಮಯದಲ್ಲಿ ಮ॥ರಾ। ಮುದುಕಪ್ಪಗೌಡರು ಈ ಗ್ರಾಮದ ಮಾಜೇಶ್ವರ ಪಟುಗಳಿಗೆ ಧರ್ಮಾಧ್ಯಕ್ಷರಾ ವಾಗಿ ದೀಕ್ಷಾ ಕಾರ್ಯವನ್ನು ನೆರವೇರಿಸಿದರು ಎಷ್ಟೋ ಜಾತಿಯ ಜನರಿಗೂ ಮೈಷ್ಣಾನ್ನ ಸಂತರ್ಪಣೆಯು ನೆ ವೇಧಕ ಬಳಿಕ ನೂತನ ಗೃಹದಲ್ಲಿ ಶ್ರೀ ಗೆಣಸಿ ಮಾಸ್ಟರ ಇವರಿಂದ ಶಿವನೇತ್ರನವು ಮನೋಹರವಾ ಮಾಡಲ್ಪಟ್ಟಿತು ಆ ಮೇಲೆ ಶ್ರೀ ಸ್ವಾಮಿಗಳವರು ಅಷ್ಟಾವರಣಗಳ ಬಗ್ಗೆ ದಿವ್ಯವಾದ ಭಾಷಣವನ್ನು ಮಾಡಿ ಸರ್ವರನ್ನೂ ಸಂತೋಷ ಪಡಿಸಿದರು ಕಾರ್ಯಕರ್ತರಿಗೆ ಜಗದ್ಗುರುಗಳ ಮಂಗಳವನ್ನೂ ಯಿಲಿ

ಶಿರಹಟ್ಟಿ ಶಿರಹ

ಯಜಾಮರು ಶರಣಾಗತರಾದರು

ಈ ವರೆಗೆ ನಿಜಾಮ ರಾಜ್ಯದಲ್ಲಿ ರಜಕಾರಿಂದ ದ ಸೋಕೃತ್ಯಗಳ ವಿವರವು ಎಲ್ಲರಿಗೂ ತಿಳಿದೇ ಈಗ ೩೪ ತಿಂಗಳುಗಳಿಂದಲೂ ನಿಜಾಮ ್ಯದಲ್ಲಿದ್ದ ಹಿಂದೂಗಳು ಭಯಂಕರ ಕಷ್ಟನಿಷ್ಠುರ ನ್ನು ಸಹಿಸಿದರು ನೀಚರಾದ ರಜಕಾರರ ಕಾವಳ ಂದ ಸಾವಿರಾರು ಜನರು ಮರಣಹೊಂದಿದರು. ಕ ಗ್ರಾಮಗಳು ಲೂಟಿಮಾಡಲ್ಪಟ್ಟವು ಲಕ್ಷಾಂತರ ರು ತಮ್ಮ ತಮ್ಮ ಗ್ರಾಮಗಳನ್ನು ಬಿಟ್ಟು ಭಾರತ ದೇಶಕ್ಕೆ ಓಡಿ ಬಂದು ವಾಸಮಾಡುತ್ತಿದ್ದರು ಭಾರತ ರ್ಕಾರದವರು ರಜಕಾರರ ಘೋರಕೃತ್ಯವನ್ನು ಕೂಡಲೇ ಯಬೇಕೆಂದು ನಿಜಾಮ ಸರಕಾರಕ್ಕೆ ಎಚ್ಚೋ ಸಾರಿ ಚನೆ ಕೊಟ್ಟರೂ ಸಹ ಸಫಲವಾಗಲಿಲ್ಲ ಕೊನೆಗೆ ರ್ಕಾರವಿಲ್ಲದೆ ಭಾರತ ಸರ್ಕಾರದವರು ಪೋಲೀಸ್ ರ್ಯಾಚರಣೆಯನ್ನು ಕೈಕೊಂಡು ನಿಜಾಮ ರಾಜ್ಯದ ಟು ದಿಕ್ಕಿನಿಂದಲೂ ತಮ್ಮ ಸೈನಿಕರನ್ನು ನುಗ್ಗಿಸಿ ು ಸೋಮವಾರ ಬೆಳಿಗಿನ ಜಾವ ಏದು ಘಂಟೆಗೆ ರತ ಸೈನಿಕ ಕಾರ್ಯಾಚರಣೆಯು ಪ್ರಾರಂಭವಾಯಿತು ರತ ಸೈನಿಕರು ವಾಯುವೇಗದಿಂದ ನುಗ್ಗಿ ೩೪ ಸಗಳಲ್ಲಿಯೇ ಅರ್ಧ ನಿಜಾಮ ರಾಜ್ಯವನ್ನು ಕೈವಶ ಡಿಕೊಂಡು ರಜಕಾರರನ್ನು ಧ್ವಂಸಮಾಡತೊಡಗಿದರು ವಿದವಾದ ಭಾರತ ಸೈನಿಕರ ವಿಜಯವನ್ನು ಕಂಡು ಾಮರು ಮತ್ತು ಅವರ ಸರ್ಕಾರದವರು ಪೂರ್ಣ ುಗೊಂಡು ಭಾರತ ಸರ್ಕಾರದ ಇಚ್ಛವಂತೆ ನಡೆದು ಳ್ಳುತ್ತೇವೆ ಸೈನಿಕ ಕಾರ್ಯಾಚರಣೆಯನ್ನು ನಿಲ್ಲಿಸ ೆಂದು ಭಾರತ ಸರಕಾರವನ್ನು ಬೇಡಿಕೊಂಡರಲ್ಲದೆ ಸೈನಿಕರಿಗೆ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು ಭಾರತ ೃಷ್ಟಿ ಶರಣಾಗತರಾಗಬೇಕೆಂದು ಆಜ್ಞೆಮಾಡಿದರು ನ್ನೆ ಶುಕ್ರವಾರ ಸೈನಿಕ ಕಾರ್ಯಾಚರಣೆಯು ಕೂಡ ನಿಲ್ಲಿಸಲ್ಪಟ್ಟಿತು ಇಂದಿಯಾ ದೇಶದಲ್ಲಿ ಐತ್ಯಂತ ಡ್ಡದಾಗಿದ್ದ ಹೈದರಾಬಾದ್ ಸಂಸ್ಥಾನವನ್ನು ದಿವಸಗಳಲ್ಲಿಯೇ ಜಯಿಸಿದ ಭಾರತ ಸೈನಿಕರ ಸಾಹ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಡಿತಕ್ಕಿರುವುದು ಭಾರತಮಾತೆಗೆ ಜಯವಾಗಲಿ!

—ಂಂಂಂ—

ನಿಜಾಮರ ಘೋಷಣೆ

೧೯ನೆಯ ತಾ॥ ಸಾಯಂಕಾಲ ನಿಜಾಮರು ಹೈದರಾ ್ ರೇಡಿಯೋದಿಂದ ಭಾಷಣಮಾಡುತ್ತ, ತಾವು ರತ ಯೂನಿಯನ್ನಿಗೆ ಸೇರುವುದಾಗಿ ಮಾಡಿಕೊಂ ನ ನಿರ್ಧಾರವನ್ನು ಭಾರತ ಗವರ್ನರ್ ಜನರಲ್‌ರವ ತಿಳಿಸಿರುವುದಾಗಿ ಸೂಚಿಸುತ್ತಾ — ಇಂದಿನ ರಾಜ ು ಪರಿಸ್ಥಿತಿಯನ್ನು ಗಮನಿಸಿ ನಾನು ನನ್ನ ದೇಶದ ಳಿತಸೂತ್ರಗಳನ್ನು ನಾನೇ ಪೂರ್ಣವಾಗಿ ಮಂಡಿ ಂಡಿದ್ದೇನೆ ಇದಕ್ಕೆಂತ ಮುಂಚಿತವಾಗಿಯೇ ಕಾರ್ಯ ುವನ್ನು ಕೈಗೊಳ್ಳದೆಹೋದ ದಕ್ಕೆ ವಿಷಾದಿಸುತ್ತೇನೆ ರ್ ಲಿಯಾಕ್ ಅಲಿ ಮಂತ್ರಿಮಂಡಲದ ರಾಜೀ ಮೆಯನ್ನು ನಾನು ಅಂಗೀಕರಿಸಿದ್ದೇನೆ ಹೊಸ ತ್ರಿಮಂಡಲವು ರಚಿತವಾಗುವ ವರೆಗೂ, ಬೀರಾನ ಹುಮಾರರು, ಕಮ್ಯಾಂಡರ್ ಇನ್‌ಚೀಫ್ ಡ್ರಾಸ್, ಶ್ರೀ ಜಿ ರಾಮಾಚಾರ್, ಶ್ರೀ ಅಬ್ದುಲ್ ೇಸ್ ಸಯ್ಯದ್ ಅಲಿ, ಪನ್ನಾಲಾಲ್ ಮತ್ತು ದೀನ್ ರ್ ಜಂಗ್ ಬಹದ್ದೂರ್‌ರವರನ್ನೊಳಗೊಂಡ ಒಂದು ್ವಾಲಿಕ ಮಂತ್ರಿಮಂಡಲವನ್ನು ರಚಿಸಿದ್ದೇನೆ ನನ್ನ ಯೆಷ್ಟತ್ವದಲ್ಲಿ ನನ್ನ ಮಿತ್ರರಾಷ್ಟ್ರ ಭಾರತದ ವಿಜೇಂಟ್ ರಲ್ ಶ್ರೀ ಕೆ ಎಂ ಮುನಿಷಿಯವರ ಹೆಸರಿನಲ್ಲಿ ಒಂದು ಪತ್ರವನ್ನು ದಿದ್ದೇನೆ ಆದಕ್ಕಾಗಿ ನಾನು ಅವನನ್ನು ವಂದಿಸು ೆ ಈದಿನ ಸಾಯಂಕಾಲ ೫ ಘಂಟೆಗೆ ನನ್ನ ರು ಗುಂಡುಹಾರಿಸುವುದನ್ನು ನಿಲ್ಲಿಸುವಂತೆ ಆಜ್ಞೆ ಡ್ತಿದ್ದೇನೆ

ಕೂಡಲೇ ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ರಮಾನಂದತೀರ್ಥರನ್ನು ಬಿಡುಗಡೆ ಮಾಡ ಬೇಕೆಂದು ಆಜ್ಞೆ ಮಾಡಿದ್ದೇನೆ ಆಲ್ಲದೆ ನೈಟ್ ಕಾಂಗ್ರೆಸ್ ನಾಯಕರನ್ನೆಲ್ಲಾ ಬಿಡುಗಡೆ ಮಾಡಬೇಕೆಂದೂ ಆ ಸಂಸ್ಥೆಯ ಮೇಲಿದ್ದ ಎಲ್ಲ ಪ್ರತಿಬಂಧಕಾಜ್ಞೆಗಳನ್ನೂ ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಆಜ್ಞೆ ನಾಡಿದ್ದೇನ ಆಲ್ಲದೆ ವಿಶ್ವಭದ್ರತಾ ಸಂಸ್ಥೆಯ ಮುಂದೆ ಭಾರತ ಸರ್ಕಾರದ ಮೇಲೆ ಹೈದರಾಬಾದ್ ಸರ್ಕಾರವು ಕೊಟ್ಟಿರುವ ದೂರನ್ನು ಒತ್ತಾಯಿಸಿಹಿಸ ಕೂಡದೆಂದು ಸಹ ತಿಳಿಸಿದ್ದೇನೆ ಎಂದು ಹೇಳಿದರು

ಸಂಸ್ಥಾನದ ಪ್ರಜೆಗಳೆಲ್ಲರೂ ಶಾಂತರೀತಿಯಿಂದ ರ್ವಸಜ್ಜಕರೆಂದೂ ಗಾಬರಿ ಪಡಬಾರದೆಂದೂ ನಿಜಾಮರು ತಮ್ಮ ಪ್ರಜೆಗಳನ್ನು ಉದ್ದೇಶಿಸಿ ಕೋರಿದರು ನಿಜಾಮರು ತಮ್ಮ ಸಂದೇಶದಲ್ಲಿ ಹೈದರಾಬಾದಿನಲ್ಲಿ ತಾವು ಹೊಸ ಪರಿಚ್ಛೇದನ್ನು ತರಲಿಪಸಿರುವುದಾಗಿ ತಿಳಿಸಿ ದ್ದಾರೆ

ಸರ್ ಮಿರ್ಜಾರವರಿಗೆ ಆಹ್ವಾನ

ನರ್ವಮಾನ್ಯತೌಕರ್ಯಳುಬಾದಕರಾಡಲೆ, ತಾವು ಸರ್ ಸುರ್ಜಾರವರನ್ನೂ, ಸರ್ ಆರಾಮದಂ ಅಯ್ಯಂಗಾರ್‌ರನ್ನೂ ಮತ್ತು ಜಂಗ್‌ಯಾರ್ ಜಹದ್ದೂರ್‌ರವರನ್ನೂ ಕರೆಯಿ ಸಿತೊಂಡು ಇಂದಿ ರಾಜಕೀಯ ಪರಿಸ್ಥಿತಿಯನ್ನು ಹದಕ್ಕೆ ತರಲು ಪ್ರಯತ್ನಿಸುವುದಾಗಿ ಸಹ ನಿಜಾಮರು ಸೂಚಿಸಿದರು ರಜಕಾರರ ಸಂಸ್ಥೆಯನ್ನು ರದ್ದುಗೊಳಿಸುವುದಾ ಸಹ ನಿಜಾಮರು ತಮ್ಮ ಭಾಷಣದಲ್ಲಿ ಸೂಚಿಸಿದರ

ಮುನಿಷಿಯವರ ಸಂದೇಶ

೧೬ನೆಯ ತಾ॥ ದಿವಸ ಹೈದರಾಬಾದ್ ರೇಡಿಯೋದಿಂದ ಶ್ರೀ ಎಂ ಮುನಿಷಿಯವರು ಭಾಷಣಮಾಡುತ್ತಾ, ಹೈದರಾಬಾದ್ ಭಾರತ ಸೈನಿಕರು ಸಹೋದರರಂತೆ ಬರುತ್ತಿದ್ದಾರೆಂದೂ ತವರ ನಿರ್ಧಾರದಲ್ಲಿ ಹೈದರಾಬಾದಿನ ಪ್ರಜೆಗಳು ಸ್ವಲ್ಪವೂ ಗಾಬರಿಪಡಲು ಕಾರಣವಿಲ್ಲವೆ ದೂ ಸೂಚಿಸಿದರು

ಹೈದರಾಬದು ಈಗ ಭಾರತದ ಒಂದು ಅಂಗವಾಗಿದೆ ನಿಜಾಮರು ಭಾರತ ಯೂನಿಯನ್ನಿಗೆ ಸೇರಲು ಒಪ್ಪಿದ್ದಾರೆ ಈಗ ಉಂಟುಮಾಡಿರುವ ಮನ ಕಷ್ಟಾಯವನ್ನಲ್ಲ ನಾವೆಲ್ಲ ಮರೆತುಬಿಡಬೇಕು ಇನ್ನು ಮುಂದೆ ನಾವೆಲ್ಲರೂ ಭಾರತದ ಹಿತಕ್ಕಾಗಿ ಮುಡಿಪುಮಾಡಬೇಕು ಎಂದು ಹೇಳಿದರು ತಮ್ಮ ಭಾಷಣವನ್ನು ಮುಂದುವರಿಸುತ್ತ — ಶ್ರೀ ಮುನಿಷಿಯವರು ನಾಳೆ ಬೆಳಿಗ್ಗೆ (೧೭ನೇ ತಾ॥) ಬಾರತದ ಸೈನಿಕರು ಹೈದರಾಬಾದನ್ನು ಪ್ರವೇಶಿಸಲು ಒಬ್ಬರು ಹೈದ್ರಾಬಾದಿಗೆ ೪ ಮೈಲಿಗಳ ದೂರದಲ್ಲಿ ನಾನೂ, ಬೀರಾದಿನ ರಾಜಕುಮಾರ ಶ್ರೀ ಆಜಂತಾರ ವರೂ ಹೈದರಾಬಾದಿದ ಸೈನ್ಯವಧಿಗೆಗೆ ವಂಡನಾಯಕರೂ, ನವಾಬ್ ದೀನ್ ಯಾರ್‌ಜಂಗ್‌ರವರೂ ಭಾರತ ಯೀಧರನ್ನು ಸ್ವಾಗತಿಸುವೆವು ಸಮೀಪದರಂತೆ ರುತ್ತಿರುವ ಅವರೆಲ್ಲರಿಗೂ ಸ್ವಾಗತಿಸಿದೇಬೇಕು ನ್ನೆಯ ದಿನ ರಾತ್ರಿಯೇ ನಿಜಾಮರು ತಮ್ಮೊಡನೆ ಸಂಸರ್ಕವನ್ನಿಟ್ಟುಕೊಂಡು ಮಾತುಕತೆಗಳನ್ನು ನಡೆಸಿದ ರೆಂದೂ ಆಗ ತಾವು ಇಂಡಿಯಾ ಸರ್ಕಾರದವರು ಕೈ ಗೊಂಡಿರುವ ಕಾರ್ಯಕ್ರಮದ ಅರ್ಜವನ್ನು ವಿವರಿಸಿ ರೆಂದೂ, ನಿಜಾಮರು ಅದನ್ನು ಒಪ್ಪಿಕೊಂಡು, ಈ ದಿನ ಬೆಳಿಗ್ಗೆ ಯುದ್ಧ ನಿಲ್ಲಿಸುವುದಾಗಿ ತಿಳಿಸಿದರೆಂದೂ ಶ್ರೀ ಮುನಿಷಿಯವರು ಭಾರತದ ಗವರ್ನರ್ ಜನರಲ್‌ರವರಿಗೂ ಪಂಡಿತ ನೆಹರುರವರಿಗೂ ದಕ್ಷಿಣ ಭಾರತದ ಜ ಓ ಸಿ ಗಳಾದ ಶ್ರೀ ರಾಜೇಂದ್ರಸಿಂಹಜಿಯವರಿಗೂ ತಮ್ಮ ಸಂದೇಶದಲ್ಲಿ ಸೂಚಿಸಿದರು

ಎಚ್ಚರಿಕೆ

ಎಲ್ಲರೂ ಶಾಂತಿಯಿಂದ ಇರಬೇಕೆಂದೂ ಶಾಂತಿ ಭಂಗ ತರುವವರನ್ನು ಮುಟ್ಟಿಪಾಕಲಾಗುವುದೆಂದೂ ಎಂದೂ ಎಚ್ಚರಿಸಿದರು ಶ್ರೀ ಮುನಿಷಿಯವರು ಕೋರಿದ್ದಾರೆ

ಹೈದರಾಬಾದಿನ ಮಂತ್ರಿಗಳ ಬಂಧನ

ಈ ವೊದಲು ಹೈದರಾಬಾದಿನಲ್ಲಿ ಮಂತ್ರಿಗಳಾಗಿದ್ದವರೆಲ್ಲರ್ನು ಅವರವರ ಮನೆಯಲ್ಲಿ ಬಂಧವಡಲ್ಪಡಿಸಲಾಗಿದೆ.

ಕಾತಿಂ ರಜ್ವಿಯ ಬಂಧನ

ಈ ವರೆಗೆ ಹೈದರಾಬಾದಿನಲ್ಲಿ ನಡೆದ ಭಯಂಕರವಾದ ಅನಾಹುತಕ್ಕೆಲ್ಲಾ ಮೂಲಕಾರಣನಾದ ಕಾತಿಂ ರಜ್ವಿ ಎಂಬವನನ್ನು ದಸ್ತಗಿರಿ ಮಾಡಿ ಒಂಭವದಲ್ಲಿಡಲಾಗಿದೆ ಇವನ ಬಗ್ಗೆ ಸರಿಯಾದ ವಿವರಣೆ ಮಾಡಲಾಗುವು ದೆಂದು ತಿಳಿದುಬಂದಿದೆ

ಹೈದರಾಬಾದಿನಲ್ಲಿ ಮುಂದಿನ ರಾಜ್ಯ ವ್ಯವಸ್ಥೆ

ಸದ್ಯ ಅತ್ಯಂತ ಅವ್ಯವಸ್ಥಿತವಾಗಿರುವ ಹೈದರಾಬಾದಿನ ಸ್ಥಿತಿಯನ್ನು ಸುವ್ಯವಸ್ಥಿತವನ್ನಾಗಿ ಮಾಡುವಡಕ್ಕೋಸ್ಕರ ಮೇಜರ್ ಜನರಲ್ ಚೌಧರಿಯವರನ್ನು ಮಿಲಿಟರಿ ಗವರ್ನರರೆನ್ನಾಗಿ ನಿಯಮಿಸಲಾಗಿದೆ ಇವರ ಆಜ್ಞೆಯಂತೆಯೇ ಈಗ ಹೈದರಾಬಾದಿನ ರಾಜ್ಯ ವ್ಯವಸ್ಥೆಯು ಸ್ಸಾರಂಭವಾಗಿರುವುದು ಹೈದರಾಬಾದಿನಲ್ಲಿರುವ ಎಲ್ಲಾ ಜಿಲ್ಲೆಗಳಿಗೂ ಕಲೆಕ್ಟರರನ್ನೂ, ಡಿ॥ ಪೋಲೀಸ್ ಸೂಪರಿಂಟೆಂಡೆಂಟರನ್ನೂ, ಇತರ ಮುಖ್ಯ ಮುಖ್ಯ ಅಧಿಕಾರಿಗಳನ್ನೂ ನಿಯಮಿಸಲಾಗಿ ವುದೆಂದು ತಿಳಿದು ಒಂದಿದೆ

ನಿಜಾಮರು ಯಾವಾಗಲೂ ಸ್ವತಂತ್ರರಲ್ಲ!

ಭಾರತದಿಂದ ಬ್ರಿಟಿಷರನ್ನು ಓಡಿಸಲು ಪಣತೊಟ್ಟಿದ್ದ ವರಲ್ಲಿ ಮೈಸೂರು ಟಿಪ್ಪುಸುಲ್ತಾನ ಪ್ರಮ ಒಬ್ಬನು ೧೭೯೯ ರಲ್ಲಿ ನಡೆದ ೪ನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷ್ ಮತ್ತು ಮರಾಠರೊಡನೆ ಹೈದರಾಬಾದ್ ನೈಜಾಮರೂ ಸೇರಿ ಟಿಪ್ಪೂಸುಲ್ತಾನನ್ನು ಸೋಲಿಸಿ ಸೆರೆಸಿಕ್ಕಿದ ಹಾದು ಹಂಚಿದರು ಬ್ರಿಟಿಷರು ಸೆರೆಯಾಗಿ ನಿಂತರು ನಿಜಾಮರು ಬ್ರಿಟಿಷರ ಅಧೀನರಾದರು

ಹೈದರಾಬಾದಿನ ಈಗಿನ ನಿಜಾಮರು ಅಸಾಫ್‌ಜಾಹಿ ವಂಶದಲ್ಲಿ ಹನ್ನೊಂದನೆಯವರು ೧ ಕೋಟಿ ೭೦ ಲಕ್ಷ ಪ್ರಜೆಗಳುಳ್ಳ ಈ ರಾಜ್ಯವು ೮೬,೦೦೦ ಚದರ ಮೈಲಿ ವಿಸ್ತೀರ್ಣವುಳ್ಳದ್ದಾಗಿದೆ ಹೈದರಾಬಾದ್ ಸಂಸ್ಥಾನದ ಪ್ರಜೆಗಳಲ್ಲಿ ಮುಸ್ಲಿಮರು ಆಲ್ಪಸಂಖ್ಯಾತರು!

ಹೈದರಾಬಾದಿನ ನೈಜಾಮರು ಹಿಂದೆ ಎಂಡೂ ಸ್ವತಂತ್ರರಾಗಿರಲಿಲ್ಲ ೨೩೪ ವರ್ಷಗಳಿಂದಲೂ ಹೈದರಾಬಾದಿನಲ್ಲಿ ಆಳುತ್ತಿರುವ ಆಸಫ್‌ಜಾಹಿ ವಂಶಿಕರು ನೊದಲು ಮೊಗಲ್ ಸಾಮ್ರಾಜ್ಯಕ್ಕೂ, ಆನಂತರ ಮರಾಠರಿಗೂ, ಕೊನೆಯಲ್ಲಿ ಬ್ರಿಟಿಷರಿಗೂ ಅಧೀನರಾಗಿದ್ದರು

ಹೈದರಾಬಾದಿನ ಪ್ರಧಾನ ನೈಜಾಮರು ನೋಲ್ ಚಿಕ್ರವರ್ತಿಯು ವರ್ಜಿರ್ ಅಥವಾ ಗ್ರೆರ್ ಆಗಿದ್ದರು ಇವರ ವಂಶಿಕರು ಪೇಷ್ವೆಯವರ ಮೇಲೆ ಯುದ್ಧಮಾಡಿ ಸಾಲುಸಾರಿ ಸೋತು, ಪೇಷ್ವೆಯವರಿಗೆ ಕಪ್ಪಕಾಣಿಕೆಗಳನ್ನು ಕೊಡಲೊಪ್ಪಿದರು

ಈ ನಾಲ್ಕು ಯುದ್ಧಗಳಲ್ಲಿ ಕೊನೆಯದಾದ ಖರ್ಡಾ ೧೭೯೫ ಯುದ್ಧವಾಗುವಾಗ, ಆಗಿನ ನಿಜಾಮರ ದಿವಾನರು ಮರಾಠರಿಗೆ ಅವಶ್ಯವಾಗುವಂತಹ ಮಾತು ಗಳನ್ನಾಡಿ, ಸೈನ್ಯಕ್ಕೆ ಧರಿಸಲು ಲಂಗೋಟಿ ಕೈಗೆ ಬೋಟಾ-ಪಕ್ಷತಾಕೆ ಕೊಟ್ಟು ಅಕ್ಷರಿಯಾಕ್ಷೆಗೆ ಕಳುಹಿಸುವುದಾಗಿ ಜಂಭ ಕೊಚ್ಚಿದ್ದರು ಆದರೆ ಯುದ್ಧದಲ್ಲಿ ನೈಜಾಮರಿಗೆ ಪ್ರಬಲವಾದ ಸೋಲಾಗಿ, ನೈಜಾಮರು ತಮ್ಮ ದಿವಾನರನ್ನು ನುರಾರಿಗೆ ಒಪ್ಪಿಸಬೇಕಾಯಿತು ಇದರ ಜೊತೆಗೆ ನಿಜಾಮರು ೩ ಕೋಟಿ ರೂಗಳನ್ನು, ದೌಲತಾಬಾದ್ ನೊದಲಾದ ಪ್ರದೇಶಗಳನ್ನೂ ಮರಾಠರಿಗೆ ಒಪ್ಪಿಸಿದರು

ಆಬ್ಬರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವುದು ಬಹಳ ಹಿಂದಿನಿಂದಲೂ ನಿಜಾಮರ ಪದ್ಧತಿ! ಈಗಲೂ ಹೈದರಾಬಾದಿನ ಸೈನ್ಯದ ಹೆಚ್ಚು ಭಾಗ ಅರಬ್ಬರಿಂದಲೂ ಮತ್ತು ಪಠಾಣರಿಂದಲೂ ಒಡಗೂಡಿದೆ. ಸರ್ ರಿಚರ್ಡ್ ಟೆಂಪಲ್ ರವರು ೧೮೮೭ ರಲ್ಲಿ ಹೀಗೆ ಹೇಳಿದ್ದಾರೆ "ಮೈಸೂರಿನ ಸೈನ್ಯಕ್ಕೋಸ್ಕರ ಸೇರಿಸಿಕೊಂಡಿರುವ ಅರಬ್ ಸೈನಿಕರು, ಲಾರ್ಡ್ ಹಾಲ್‌ಸಿಯವರು ಮಧ್ಯೆ ಬಾಡಿ

ದಿದ್ದರೆ, ಫಿರ್ಯಾದುದಾರನು ಆವರ ಕೋರಿಕೆಯಲ್ಲೇ ಸರಿ ಹಾಕಿಸಿಕೊಡಬೇಕು.

ಲಾಡ ವೆಲ್ಫೆಸ್ಟ್ ಕಾಲದಲ್ಲಿ ಬಿಟಿಷರು ಫಿರ್ಯಾದುದಾರರಿಗೆ ಒತ್ತಾಸೆ ಕೊಡುವುದಕ್ಕೂ ಮತ್ತು ರಕ್ಷಣೆ ಕೊಡುವುದಕ್ಕೂ ದಕ್ಷವಾದ ಒಪ್ಪಿಕೊಂಡರು ಚಕ್ರಾಧಿಪತಿಗಳ ಮೂಲಕವಲ್ಲದೆ ತಾವು ವಿದೇಶಗಳೊಡನೆ ವ್ಯವಹಾರ ಇಡೆಸುವುದಿಲ್ಲವೆಂದು ನಿಜಾಮರು ಒಪ್ಪಿದರು.

೧೮೫೩ ರಲ್ಲಿ ನಡೆದ ಕ್ರಾಂತಿ ಪ್ರಕಾರ ೧೭,೦೦೦ ಚದುರ ಮೈಲಿ ವಿಸ್ತೀರ್ಣವುಳ್ಳ ಬೀರಾರ (ವರ್ಹಾಡ್) ನ್ನು ನಿಜಾಮರು ಬ್ರಿಟಿಷರಿಗೆ ಒಪ್ಪಿಸಿದರು ನಿಜಾಮರು ೧೮೫೬ರಲ್ಲಿ ಸಿಪಾಯಿ ದಂಗೆಯನ್ನು ಆಡಗಿಸಲು ಬ್ರಿಟಿಷರಿಗೆ ಸಹಾಯಮಾಡಿದ್ದಕ್ಕಾಗಿ ೧೯೬೦ ರಲ್ಲಿ ಬ್ರಿಟಿಷರು ಉಸ್ಮಾನಾಬಾದ್ ಮತ್ತು ರಾಯಚೂರನ್ನು ನಿಜಾಮರಿಗೆ ತಿರುಗಿ ಕೊಟ್ಟರು

ಗಂಗಾ ಪ್ರವಾಹದಿಂದ ೪೦೦೦ ಹಳ್ಳಿಗಳಿಗೆ ನಷ್ಟ

ಗಂಗಾಪ್ರವಾಹದ ಪರಿಣಾಮವಾಗಿ ಕಾಶಿಯಲ್ಲಿ ೨೫೦ ಮನೆಗಳು ಕುಸಿದುಬಿದ್ದುವು ಪೌರಸಭೆಯ ಗಡಿಯೊಳಗಿರುವ ೪೫,೦೦೦ ಮನೆಗಳ ಪೈಕಿ ೭೦೦೦ ಮನೆಗಳಲ್ಲಿ ಇನ್ನು ಮುಂದೆ ಜಾಸಿಸುವುದಕ್ಕಾಗುವಂತಿಯೇ ಇಲ್ಲ

ಗಂಗಾ ನದಿಯು ಉಕ್ಕಿ ಹರಿದ ಪರಿಣಾಮವಾಗಿ ಮಿರ್ಜಾಪುರ ಕಾಶಿ, ಗಾಜೀಪುರ, ಬಾಲಿಯಾ ಜಿಲ್ಲೆಯ ಸುಮಾರು ೪೦೦೦ ಹಳ್ಳಿಗಳಲ್ಲಿ ಸಸ ಪಸ ಮುರಿ ಬೆಳೆ ಇತ್ಯಾದಿಗಳಿಗೆ ವಿಪರೀತ ನಷ್ಟ ಸಂಭವಿಸಿದೆ ಪ್ರವಾಹವೀಗ ಇಳಿಮುಖವಾಗಿದೆ

ಪ್ರಪಂಚದೆಲ್ಲೆಲ್ಲೂ ಅತಿ ಚಿಕ್ಕ ಹೆಂಗಸು

ಲಂಡನ್ನಿನ ಯಾರ್ಕ್‌ಷೈರ್ ಎಂಬ ಪಟ್ಟಣದಲ್ಲಿ ಪ್ರಪಂಚದೆಲ್ಲೆಲ್ಲಾ ಅತಿ ಕುಳ್ಳದ ಹೆಂಗಸೊಬ್ಬಳು ಇದ್ದಾಳೆ ಈಕೆ ಕೇವಲ ೩೧ ಇಂಚು ಎತ್ತರವಾಗಿದ್ದು ೧೭ ಪೌಂಡ್ ತೂಕವಿದ್ದಾಳೆ ಈಕೆಗೆ ಈಗ ೨೧ ವರ್ಷ ವಯಸ್ಸು

ಶ್ರೀದೇವಾರಾಣಾಭೇ ಪೂಜೆ

ಭರತಖಂಡದಲ್ಲಿ ವಿರಾಜಿಸುತ್ತಿರುವ ಧ್ಯಾವತ ಜ್ಯೋತಿರ್ಲಿಂಗಗಳಲ್ಲಿ ಏಮಲಾಲಯದಲ್ಲಿ ಪರಿಢೋಭಿಸುತ್ತಿರುವ ಶ್ರೀಕೇದಾರೇಶ್ವರಲಿಂಗವು ಅತ್ಯಂತ ಶ್ರೇಷ್ಠವಾಗಿರುವುದು ಆ ಮಹಾಲಿಂಗವು ೬ ತಿಂಗಳು ದೇವತೆಗಳಿಂದಲೂ ೬ ತಿಂಗಳು ಮಾನವರಿಂದಲೂ ಪೂಜಿಸಲ್ಪಡುತ್ತಿರುವ ವಿಷಯವು ಜಗತ್ಪ್ರಸಿದ್ಧವಷ್ಟೆ ಈ ದೇವಾಲಯದ ಆದಿಕಾರವು ವೀರಶೈವಮತಾಚಾರ್ಯರ ಅಧೀನದಲ್ಲಿದ್ದು ಕೇದಾರೇಶ್ವರಲಿಂಗವು ಜಂಗಮರಿಂದ ಪೂಜಿಸಲ್ಪಡುತ್ತಿರುವದು ಕೇದಾರೇಶ್ವರನ ದ್ವಾರವು ತೆರೆಯುವ ಸಮಯದಲ್ಲಿ ಸಾವಿರಾರು ಜನ ಯಾತ್ರಾರ್ಥಿಗಳು ಲಿಂದರ್ಶನ ಸ್ಪರ್ಶನಾದಿಲಾಭಗಳನ್ನು ಪಡೆಯುತ್ತಿರುವರು ಈಗ ಆ ಪವಿತ್ರಸ್ಥಾನದಲ್ಲಿ ಶ್ರೀಕಾಂತಲಿಂಗೇಶ್ವರ ಶಿವಾಚಾರ್ಯರೆಂಬವರು ಶ್ರಾವಣಮಾಸದಿಂದ ಆಶ್ವಯುಜ ಮಾಸಪರ್ಯಂತ ಕೇದಾರಸ್ಥಾನದಲ್ಲಿ ಶ್ರೀಕೃಷ್ಣರಾವಾಗಿ ಆವ ಸ್ಥಾನಕ್ಕಾರಾಯಣರಾಗಿರುವರು ಇತರ ಜನಗಳಿಗೂ ಈ ಸ್ಥಾನಫಲವು ಲಭಿಸಲೆಂಬ ಸದುದ್ದೇಶದಿಂದ ಜನಗಳು ಕಳುಹಿದ ಹಣದಿಂದ ಆವರನೆರ ಹೆಸರಿನಿಂದ ಪೂಜೆಯನ್ನು ಜರುಗಿಸಿ ಪ್ರಸಾದವನ್ನು ಕಳುಹಿಸುವ ಕಾರ್ಯವನ್ನು ಅವರು ಕೈಕೊಂಡಿದ್ದಾರೆ ಅಲ್ಲಿಗೆ ಹೋಗಲು ಸಾಧ್ಯವಿಲ್ಲದ ಭಕ್ತರಿಗಾಗಿ ಒಂದು ವಿಪ್ರರ ಒಂದು ಪೂಜೆಯ ವೆಚ್ಚ ೧೦ ರೂ ಕಳುಹಿಸಿ ಪೂಜೆ ಮಾಡಿಸಿ ಪ್ರಸಾದವನ್ನು ಪಡೆಯುತ್ತಲಿದ್ದಾರೆ ಈ ಸಂತೋಷವನ್ನು ತಿಲಮಿ ಸದಾಚಾರಸಂಪನ್ನರೂ ಆಚಾರ್ಯರೂ ರಲ್ಲಿ ಒಬ್ಬೆ ಭಕ್ತಿಯುಳ್ಳವರೂ ಆದ ತಿಗಡಿಯ ಅಧ್ಯಿ ಮಠದ ಶ್ರೀಶರಮೂರ್ತಿಸ್ವಾಮಿಗಳವರು ತಮ್ಮದೊಂದು ದಿವಸದ ಪೂಜೆ ನೆರವೇರಲೆಂದು ಅಲ್ಲಿಗೆ ೧೦ ರೂ ಗಳನ್ನು ಕಳುಹಿಸಿದ್ದಾರೆ ಇವರಂತೆಯೇ ಗುರುಭಕ್ತರು ೧೦ ರೂ ಗಳನ್ನು ಕಳುಹಿಸಿ ತಮ್ಮ ಜೆಸರಿನಿಂದ ಪೂಜೆಮಾಡಿಸಿ ಧನ್ಯರಾಗಬೇಕೆಂದು ಕೋರುತ್ತೇನ

ಪಂಡಿಆ ಶಾಂತಲಿಂಗಶಿವಾಚಾರ್ಯಜೀ ಮಂದಿರ
ಶ್ರೀಕೇದಾರನಾಥ ಪೋಸ್ಟ್ ಕೇದಾರನಾಥ ಜಿಲ್ಲಾ ಗಢವಾಲ್ ೦೨ ಪಿ ಆ ಅಡ್ರೆಸ್ಸಿಗೆ ಹಣ ಕಳಿಸಬೇಕು

ಒಬ್ಬ ಗುರುಭಕ್ತ

ಶ್ರೀ ರೇಣುಕವಿಜಯ ಪುರಾಣ ಸಮಾಪ್ತಿ

"ಅಯ್ಯಾ ರಾಜಕುಮಾರನೇ, ಒಂದು ರಹಸ್ಯದ ಮಾತಂ ಪೇಳುವೆನು. ಪೂರ್ವದಲ್ಲಿ ಸಾಹಸ ಪರಾಕ್ರಮುಗಳಿಂದ - ಕೂಡಿ ಅದ್ವಷ್ಟಶಾಲಿಯಾಗಿ ಗೌತಮುಗೋತ್ರದಲ್ಲಿ ಪುಟ್ಟಿದ ಭೋಜನಂತೋತ್ತನ್ನನಾದ ಕೂರದೇವರಾಯನೆಂಬ ದೊರೆಯು ಹಿಂದಾನೊಂದು ಕಾರಣದಿಂದ ಮಧುರಾನಗರವಂ ಬಿಟ್ಟು ತನ್ನ ಬಂಧುಜನಸಮೇತನಾಗಿ ಈ ಕರ್ನಾಟಕ ದೇಶವನ್ನೆಯ್ದಿ ಶ್ರೀ ಚಾಮುಂಡೇಶ್ವರಿ ಅಮ್ಮನವರ ಅನುಗ್ರಹದಿಂದ ಬಹಳ ನಿಧಿಯಂ ಪಡೆದು ಈ ಮೈಸೂರು ನಗರದ ದೊರೆತನವಂ ಸಂಪಾದಿಸಿ ಅನುಭವಿಸಿಕೊಂಡು ಇದ್ದನು. ಆ ತೂರದೇವನ ವಂಶದಲ್ಲಿ ಚಾಮರಾಜನೆಂಬ ದೊರೆಯು ಪುಟ್ಟಿ ರಾಜ್ಯವನ್ನಾಳುತ್ತಿದ್ದು ಹಿಂದು ಕನ್ಯಾರತ್ನವಂ ಪಡೆದು ಪುತ್ರಸಂತಾನವಿಲ್ಲದೆ ಪರಲೋಕವ ಪೊಂದಿದನು. ಈ ಪಟ್ಟಣಕ್ಕೆ ದೊರೆಯಿಲ್ಲದೆ ಇದ ನದರಿಂದ ಇಲ್ಲಿ ಸೇನಾಪತಿಯಾದ ಮಾರನಾಯಕನೆಂಬನನು ದುಷ್ಟನಾಗಿ ಈ ದೊರೆಯ ಹೆಂಡ ದೇವಾಜಮ್ಮಣ್ಣಿಗೆ ನಾನಾವಿಧವಾದ ತೊಂದರೆಗಳ ಕೊಡುತ್ತಲಿರುವನು ಆ ದುಷ್ಟನಂ ಸಂಹರಿಸು ಯೋಗ್ಯತೆಯು ನಿನಗೆ ನಮ್ಮ ಅನುಗ್ರಹದಿಂದ ಉಂಟಾಗುವುದು. ಆ ವೃತ್ತಾಂತವನ್ನೆಲ್ಲಾ ನಿನಗೆ ವಿಸ್ತಾರವಾಗಿ ನನ್ನಂತೆ ಇನ್ನೊಬ್ಬ **ಜಂಗಮೋತ್ತಮನು** ಬಂದು ಹೇಳುವನು. ಆ ಪ್ರಕಾರವಾಗಿ ನೀನು ನಡೆದರೆ ನಿನಗೆ ಈ ಪಟ್ಟಣದ ದೊರೆತನವೂ ವಿವಾಹವಾಗುವುದಲ್ಲದೆ ಈ ದೊರೆತನವೂ ಕೈಸೇರಿ ನಿನ್ನ ವಂಶವು ಆಚಂದ್ರಾರ್ಕವಾಗಿ ಅಭಿವೃದ್ಧಿಯಾಗಿ ಪಡೆದು ನೀನು ಸುಖದಿಂದಿರುವೆ ; ಮತ್ತು ಆ ಜಂಗಮೋತ್ತಮನು ಏನು ಬೇಡುವನೋ ಅದನ್ನು ನೀನು ನಡೆಸಿದರೆ ಅದರಿಂದ ನನಗೆ ಬಹಳ ಸಂತೋಷವುಂಟಾಗುವುದು "

ಎಂದು ಪೇಳಿ ಪೊರಮಟ್ಟು ಸ್ವಲ್ಪ ದೂರದಲ್ಲಿದ್ದ ಅಂತರ್ಧಾನನಾಗಲು, ಇದಂ ನೋಡಿದ ಯದುರಾಯ ಕೃಷ್ಣರಾಯರಿಗೆ ಪರಮಾಶ್ಚರ್ಯವಂಪಟ್ಟು ಬೆಟ್ಟದ ಮೇಲೆ ದೂರದಲ್ಲಿ ಕಂಡ ಶ್ರೀಕಂಠೇಶ್ವರಸ್ವಾಮಿಯೇ ಈ ರೂಪನಲ್ಲಿ ಬಂದು ಇದ್ದನೆಂದು ತಿಳಿದು ಸಂತೋಷದಿಂ ದೊಡಗೂಡಿ ಅಮ್ಮನವರು ಅಪ್ಪಣೆಯಂ ಕೊಟ್ಟ ಕಾರ್ಯವು ನಮಗೆ ಕೈಗೂಡಿಬಂದರೆ ನಮ್ಮ ವಂಶಪಾರಂಪರ್ಯವಾಗಿ ಶ್ರೀ ಚಾಮುಂಡೇಶ್ವರಿ ಅಮ್ಮನವರು ಹ್ಯಾಗೆ ಕುಲದೇವತೆಯೋ ಅದೇ ಪರಿಯಾಗಿ ಸಂಜಗೂಡು ಶ್ರೀಕಂಠೇಶ್ವರನಂ ಕುಲದೇವರಾಗಿ ಪೂಜಿಸುವೆಂದು ನಿಶ್ಚಯಂ ಮಾಡುತ್ತಿದ್ದರು

ಆ ಕಾಲದ ಮೈಸೂರು ರಾಜರ ಪತ್ನಿ ದೇವಾಜಮ್ಮಣ್ಣಿಯವರ ಸ್ವಪ್ನ

ಅತ್ತಲಾ ಮಾರನಾಯಕನ ಬಾಧೆಯಂ ತಾಳಲಾರದೆ ಚಿಂತಾಕ್ರಾಂತಳಾಗಿ ವೈಸಧಿಯಂತಿರುವ ಚಾಮರಾಜ ಪತ್ನಿಯಂ ಕುರಿತು ಪರಮೇಶ್ವರನು ಉಷಃಕಾಲದೊಳ್ ಸ್ವಪ್ನದೊಳ್ ಆಜ್ಞಾಪಿಸಿದ ಪರಿ ಏನೆಂದರೆ—

"ಎಲೌ ರಾಜಪತ್ನಿಯೇ, ನೀನು ವೃಥೆಯಂ ಬಿಟ್ಟು ಸ್ವಸ್ಥಚಿತ್ತಳಾಗಿ ಶ್ರೇಯಸ್ಕರವಾದ ನಮ್ಮ ಮಾತಂ ಕೇಳುನವಳಾಗು. ಅತ್ರೇಯ ಗೋತ್ರೋತ್ಪನ್ನರಾಗಿ ಯದುವಂಶದಲ್ಲಿ ಪುಟ್ಟಿದ ಅಣ್ಣತಮ್ಮಂದಿರಾದ ಇವರು ರಾಜಕುಮಾರರುಗಳು ಮೈಸೂರು ಪಟ್ಟಣದ ಕೆರೆಯ ಕೋಡಿಬೈರವ ದೇವಸ್ಥಾನದಲ್ಲಿ ಬಂದಿರುವರು. ನಿನ್ನ ಬಂಧುತ್ವಕ್ಕೆ ಯೋಗ್ಯರಾದ ಅವರಿಬ್ಬರಲ್ಲಿ ಜ್ಯೇಷ್ಠನಾದ ರಾಜಕುಮಾರನು ನಿನ್ನ ಮಗಳಿಗೆ ಸದೃಶನಾದ ವರನಾಗಿರುವ ಕಾರಣ ಅವರುಗಳ ಸಮಾನವಾದ ಕುರಿತು ಅಸ್ತನಾಗಿ ಬುದ್ಧಿವಂತನಾದ ಹಿರಿಯ ಪುರುಷನಂ ಕಳುಹಿಸಿ ಅವನ ಮುಖಚರ್ಯೆಯಂ ಇಲ್ಲಿಂಗ ವೃತ್ತಾಂತವನ್ನೆಲ್ಲಾ ತಿಳಿಯಪಡಿಸಿ ಅವರ ಸಂಗದಲ್ಲೇ ಆ ರಾಜಪುತ್ರರಂ ಪಟ್ಟಣಕ್ಕೆ ಕರೆತಂದು ಜ್ಯೇಷ್ಠನಾದ ರಾಜಕುಮಾರನಿಗೆ ನಿನ್ನ ಮಗಳಂ ಕೊಟ್ಟು ವಿವಾಹ ಮಾಡುವವಳಾಗು. ಅದರಿಂದ ನಿನಗೆ ಬಹಳ ಕ್ಷೇಮವುಂಟಾಗುವದು. ಆತ ತನ್ನ ಭುಜಪರಾಕ್ರಮದಿಂದ ಶತ್ರುಗಳನ್ನೆಲ್ಲ ಸಂಹರಿಸಿ ನಿನ್ನ ರಾಜ್ಯವಂ ಧರ್ಮದಿಂ ಪರಿಪಾಲಿಸುತ್ತಾ ಗೈದು ವಂಶಾಭಿವೃದ್ಧಿಯನ್ನುಂಟುಮಾಡುವನು"

ಎಂದು ಪೇಳಿ ಆ ಪರಮೇಶ್ವರಮ್ಮ ಅಂತರ್ಧಾನಾದಳು. ಆ ರಾಜಪತ್ನಿಯು ಆ ಸ್ವಪ್ನವೃತ್ತಾಂತವನ್ನೆಲ್ಲಾ ಸಂತೋಷಭರಿತಳಾಗಿ ತನ್ನ ಮಗಳಾ ಸಖಿಯಳಾ

ವೃತ್ತಾಂತವಂ ಹೇಳಿ ಇವರೂ ಆಲೋಚನೆಯಂ ಮಾಡಿ ಕೊಂಡು ಸ್ವಸ್ಥದಲ್ಲಿ ಹೇಗಾದ ಲಕ್ಷಣವುಳ್ಳ ಆಕ್ಕಿತಾಜದ ಲಿಂಗಧಾರಿಯಾದ ಒಬ್ಬ ಪುರುಷನಂ ಕರೆದು ಹೇಳತಕ್ಕ ಮಾತುಗಳಂ ಹೇಗೆ ಆ ರಾಜಕುಮಾರರ ಸನ್ನಿಧಿಯಂ ಸುರಿತು ಕಳುಹಿಸಲು, ಆ ಬಳಿಕ ರಾಜಪುತ್ರಿಯು ಸಂತೋಷವುಳ್ಳವಳಾಗಿ ಆಕ್ಷರಾದ ಇವರಲ್ಲಿ ಅವ್ವೇರುಗಳಂ ಕರೆದು—

" ಎಲೌ ಅವ್ವೇರುಗಳಿರಾ? ನೀವು ಈ ಪಟ್ಟಣದ ಕೆರೆಯ ಕೋಡಿಯಲ್ಲಿರುವ ಭೈರವ ದೇವತಾ ಸ್ಥಾನಕ್ಕೆ ಈಗ ಬಂದು ಇರತಕ್ಕ ಪುರುಷರುಗಳ ರೂಪಲಾವಣ್ಯಚಾತುರ್ಯಾದಿಗಳಂ ಅವರ ರೀತಿಗಳಂ ನುತ್ತು, ಅವರು ಯಾರ ಸಂಗಡ ಮಾತುಗಳಂ ನುಡಿ ಆಡುತಲಿದ್ದಾರೆಂಬ ವೃತ್ತಾಂತವಂ ಸಹ ಒಬ್ಬರೂ ಅರಿಯದಂತೆ ಪೋಗಿ ತಿಳಿದುಕೊಂಡು ಬನ್ನಿ "

ಎಂದು ಹೇಳಿ ಕಳುಹಿಸಿದಳು. ಅದೇ ಪರಿಯಾಣ ಆ ಅವ್ವೇರುಗಳು ತಿಳ್ಳಿದಂ ಪೋಗಿ ಅಲ್ಲಿರುವ ರಾಜಕುಮಾರರ್ಗಳು ಜಂಗಮಯ್ಯನೊಡನೆ ಮಾತನಾಡುತಲಿರುವ ಕೆಲವು ಮಾತುಗಳಂ ಕೇಳಿ ಅವರ ಯೌವನ, ರೂಪಲಾವಣ್ಯ ಗುಣಗಳಂ ಮನದಣಿಯಂತೆ ನೋಡಿ ತಿಳ್ಳಿದಂದ ಬಂದು ರಾಜಪುತ್ರಿಗೆ ರಹಸ್ಯವಾಗಿ ಈ ವೃತ್ತಾಂತವೆಲ್ಲಾ ಚೆನ್ನಾಗಿ ಬಿನ್ನವಿಸಲು ರಾಜಪುತ್ರಿಯು ಶ್ರವಣ ಸಂತೋಷವಂದಿಂದ ಇರುತ್ತಿರಲಾಗಿ ಆ ಜಂಗಮಯ್ಯ ಪೋತ್ತ ಮನೆಯ ಆ ರಾಜಕುಮಾರರ ಕುಲಶೀಲನಾಮ ಗೋತ್ರಗಳಂ ವಿಚಾರಿಸಿ ಯೋಗಕ್ಷೇಮವುಗಳಂ ಕೇಳಿ ಈ ವೃತ್ತಾಂತವನ್ನು ಸಭೆಯಲ್ಲಿ ನಡೆದಿರುವ ವೃತ್ತಾಂತವಂ ರಾಜಪತ್ನಿಯ ಮನೋಭಿಲಾಷೆಯಂ ಮುಂದೆ ಪರಾಕ್ರಮವಿಂದ ಸಾಧಿಸತಕ್ಕ ಶೌರ್ಯಗಳಂ ಸಹ ಸಂಪ್ರೇಷವಾಗಿ ನುಡಿದು ನಾನು ಮರಳಿ ಬರುವೆನು ನಿಮ್ಮಗಳಂ ಕೋಟೆಯೊಳಕ್ಕೆ ಕರೆದುಕೊಂಡು ಪೋಗುವೆನೆಂದು ಆರಮನೆಗೆ ಬಂದು ತಲ್ಲಿಯ ವೃತ್ತಾಂತವನ್ನೆಲ್ಲಾ ದೇವಾಜಮ್ಮಣ್ಣಿಯವರಿಗೆ ಪೇಳಲು, ಆ ರಾಜಪುತ್ರಿಯು ತನಗೆ ಸ್ವಸ್ಥದಲ್ಲಿ ಪರಮೇಶ್ವರನು ಅಕ್ಷಣಿಯಂ ಪೊಟ್ಟರುವದು ಯಥಾರ್ಥವೆಂದು ತಾನು ಕಳುಹಿಸಿವ್ವ ಜಂಗಮೋತ್ತಮನೆ ಮುಖ ವರ್ತನೆಯಿಂದ ತಿಳಿದು ಸಂತೋಷಪಟ್ಟು ಮುಂದೆ ಆಗತಕ್ಕ ಕಾರ್ಯಗಳಿಗೆ ತನ್ಮುಖ್ಯಪ್ರಾಣರಾಗಿ ಶ್ರೋದ್ಯದಿಂದಲೂ ಬಂದ ತಿಮ್ಮರಸಯ್ಯ ಕಾರಣಯ್ಯರೆಂಬವರುಂ ಕರಣಿಕರುಗಳಂ ಕರೆದು ಈ ವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ಹೇಳಿ ನಿಮ್ಮ ಬುದ್ಧಿ ಮತ್ತಾರಗಳಿಂದ ರಾಜಪುತ್ರರುಗಳಂ ಕರೆತರುವುದಕ್ಕೆ ನಿಬೇಕಾದುದೂ ಅಮುಕೂಲವಂ ಮಾಡಿಕೊಡುತಲಿರುವೆಯೆಂದು ಹೇಳಿ ಕಳುಹಿದರು

ಯದುರಾಯರ ಪುರಪ್ರವೇಶ

ಆ ಕರಣಿಕರುಗಳು ರಾಜಪತ್ನಿಯವರ ಆಜ್ಞೆಯಂ ಪಡೆದು ಸೇನಾಪತಿಯಾದ ಮಾರರಾಯಕವಿಗೆ ಧ್ವೇಷಿಗಳಾಗಿದ್ದ ಶೂರರಾದ ಜನರುಗಳಿಗೆ ಹೇಳತಕ್ಕ ಮಾತುಗಳಂ ಹೇಳಿ ತಮ್ಮ ಸ್ವಾಧೀನಮಾಡಿಕೊಂಡು ಆನರುಗಳಲ್ಲಿ ಅಪ್ತರಾದ ಜನರುಗಳಂ ಆರಮನೆಗೆ ಬಾಗಿಲಿನಲ್ಲಿ ನಿಲ್ಲಿಟ್ಟು ಮತ್ತೆ ಕೆಲವರು ಆಯುದಪಾಣಿಗಳಾದ ನರುಗಳಂ ಅಲ್ಲಿ ಗೋಪ್ಯವಾಗಿರಿಸಿ, ರಾಜಕುಮಾರರ ಬಳಿಗೆ ಹೋಗಿ ಮಾತನಾಡಿಕೊಂಡು ಬಂದ ಆ ಲಿಂಗ ಧಾರಿಯೊಡಗೂಡಿ ಭೈರವದೇವಸ್ಥಾನಕ್ಕೆ ಹೋಗಿ ಅಲ್ಲಿ ಇದ್ದ ರಾಜಕುಮಾರರ ಸಂಗಡ ಈ ವೃತ್ತಾಂತವೆಲ್ಲಾ ವಿಸ್ತಾರವಾಗಿ ಹೇಳಿ, ನೀವುಗಳು ಪರಾಕ್ರಮವುಳ್ಳ ರಾಜಕುಮಾರರುಗಳಾಗಿರುವಿರಿ ಆಗಲಿ, ಆ ಶತ್ರುಗಳಂ ಸಂಹರಿಸಿ ನಮ್ಮಗಳಿಗೆಲ್ಲಾ ಸಂತೋಷವನ್ನುಂಟುಮಾಡುವವರಾಗಿ ಎಂದು ಹೇಳಲು, ಆ ಮಾತಂ ಕೇಳಿ ರಾಜಕುಮಾರರುಗಳು ಅತ್ಯಂತ ಹರ್ಷದಿಂದ ಆ ಮೂರು ಜನಗಳಂ ಕರೆದುಕೊಂಡು ಪಟ್ಟಣಕ್ಕೆ ಪ್ರವೇಶಮಾಡುವ ಸಮಯದಲ್ಲಿ ಪಟ್ಟಣದ ಬಾಗಿಲಲ್ಲಿ ಹೋಗಬೇಕೆಂದು ತಡೆದ ಕಾವಲುಗಾರರಾದ ಆ ಮಾರನಾಯಕನ ಕಡೆಯ ಜನರಂ ಸಂಹರಿಸಿ, ಪ್ರವೇಶಮಂ ಮಾಡಿ ರಾಜಪತ್ನಿಯ ಆಜ್ಞೆಯಿಂದ ಆರಮನೆಯಲ್ಲಿಯೇ ಒಂದು ಮೂಲೆಯಲ್ಲಿ ಇರುತ್ತಿದ್ದರು.

ವರ್ತಮಾನಸಂಗ್ರಹ

ಪಂಡಿತ ನೆಹರೂರವರು ಲಂಡನ್ನಿಗೆ

ಲಂಡನ್ನಿನಲ್ಲಿ ಕಳೆದ ಸೋಮವಾರ ನಡೆದ ಪ್ರಟ್ಟಿನ್ನಿಗೆ ಸೇರಿದ ಡೊಮಿನಿಯನ್ನುಗಳ ಪ್ರಧಾನ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದ ಮುಖ್ಯಮಂತ್ರಿ ಪಂಡಿತ ನೆಹರೂ ಅವರು ಲಂಡನ್ನಿಗೆ ಪ್ರಯಾಣ ಮಾಡಿದ್ದಾರೆ ಪಂಡಿತರು ಮುಂದಿನ ತಿಂಗಳು ದೆಂಗ ಳೂರಿಗೆ ಬರುವ ನೀರೀಕ್ಷೆ ಇದೆ

ನೈಜಾಮರ ಹಣ ಪಡೆಯಲು ದಾವಾ

ಲಂಡನ್ನಿನ ಬ್ಯಾಂಕ್ ಒಂದರಲ್ಲಿ ಹೈದರಾಬಾದಿನ ಲೆಖ್ಖದಿಂದ ಸಾಕಿಸ್ತಾನ ಸರ್ಕಾರದ ಪ್ರತಿನಿಧಿಯ ಲೆಖ್ಖಕ್ಕೆ ನಗದಾಗಿ ೯ ಕೋಟಿ ೪೦ ಲಕ್ಷ ರೂಪಾಯಿ ಗಳನ್ನು ವಾಪಸು ಪಡೆಯಲು ದಾವಾ ಹೂಡುವುದಕ್ಕಾಗಿ ಲಂಡನ್ನಿನಲ್ಲಿರುವ ಭಾರತ ಸರ್ಕಾರದ ಪ್ರತಿನಿಧಿಯವರು ಒಬ್ಬ ವಕೀಲರನ್ನು ನೊತ್ತುಮಾಡಿದ್ದಾರೆ.

ಇತಿಹದ್ ಸಂಸ್ಥೆ ರದ್ದಾಗಬೇಕು

ಹೈದರಾಬಾದಿನ ಈಗಿನ ಹೊಸ ವಾತಾವರಣದಲ್ಲಿ ಮಜ್ಲಿಸ್ ಇತಿಹದ್ ಸಂಸ್ಥೆಗೆ ಸ್ಥಾನವಿಲ್ಲ ಅದಕಾರಣ ಅದನ್ನು ವಿಸರ್ಜನೆ ಮಾಡಬೇಕು ಎಂದು ಹೈದರಾಬಾದಿನ ನ್ಯಾಮುಖ ಮುಸ್ಲಿಂರಾದ ನವಾಬ್ ಮಸೂರ್ ಜಂಗ್‌ರವರು ಹೇಳಿಕೆ ಇತ್ತಿದ್ದಾರೆ ಮುಸ್ಲಿಮರು ಕಾಂಗ್ರೆಸ್ ಸಂಸ್ಥೆಗೆ ಅಧಿಕ ಸಂಖ್ಯೆಯಲ್ಲಿ ಸೇರಬೇಕೆಂದು ಅವರು ಕೋರಿದ್ದಾರೆ

ಹೈದರಾಬಾದಿನ ಸಮಾಚಾರ

ಹೈದರಾಬಾದಿನ ಭವಿಷ್ಯದ ಬಗ್ಗೆ ಅನೇಕ ಊಹಾ ಪೋಹಗಳೆದ್ದಿವೆ ಮಿಲಿಟರಿ ಆಡಳಿತವು ಕೊನೆಗೊಂಡು ತಾತ್ಕಾಲಿಕ ಆಕ್ಷ್ಯೆಜರಿ ಪ್ರಭುತ್ವವು ವಿಸರ್ಜಿಸಲ್ಪಟ್ಟು ಮಿಲಿಟರಿ ಸರ್ ಎಸ್ ವಿ ರಾಮಮೂರ್ತಿ ಮತ್ತು ಶ್ರೀ ಕೆ ಎಂ ಮುನ್ಷಿ ಇವರುಗಳು ಸಲಹೆಗಾರರಾಗಬಹುದೆಂದೂ ಕೆಲವರ ನಿರೀಕ್ಷೆ ಮತ್ತೆ ಕೆಲವರು ರಾಜ್ಯಾಂಗ ರಚನಾ ಸಭೆಯ ಬಗ್ಗೆ ಭಾರತ ಸರ್ಕಾರದಿಂದ ಪ್ರಕಟನೆಯನ್ನು ನಿರೀಕ್ಷಿಸುತ್ತಿದ್ದಾರೆ

ಕಮ್ಯೂನಿಸ್ಟ್‌ನು ಗುಂಡುಹಾರಿಸಿದನು

ಹೈದರಾಬಾದ್ ಸಂಸ್ಥಾನದ ಉಪ್ಪೇರಿ ಎಂಬ ಗ್ರಾಮದಲ್ಲಿ ಕಳೆದ ಸೋಮವಾರ ಕಮ್ಯೂನಿಸ್ಟರನ್ನು ಹಿಡಿಯಲು ಯತ್ನಿಸುತ್ತಿದ್ದಾಗ ಮದ್ರಾಸ್ ಶಸ್ತ್ರಸಜ್ಜಿತ ದಳದ ಅಸಿಸ್ಟೆಂಟ್ ಕಮ್ಯಾಂಡರಾದ ಲೆ॥ ಗೋವಿಂದರಾಜುಲು ಎಂಬವರ ಕಡೆಗೆ ಕಮ್ಯೂನಿಸ್ಟ್ ಒಬ್ಬನು ಗುಂಡು ಹಾರಿಸಿದನು ಇದರ ಗಂಭೀರಾಮವಾಗಿ ಲೆ॥ ಗೋವಿಂದ ರಾಜುಲುರವರ ಒಲತೋಳಿಗೆ ಸ್ವಲ್ಪ ಗಾಯವಾಯಿತು ಚಿಕಿತ್ಸೆಗಾಗಿ ಅವರು ಮದ್ರಾಸಿಗೆ ಬಂದಿದ್ದಾರೆ

ಬ್ರಿಟಿಷ್ ಮುಖ್ಯಮಂತ್ರಿಗಳ ಭಾಷಣ

ಅಶಾಂತಿ ತಾಂಡವನಾಡುತ್ತಿರುವ ಈಗಿನ ಜಗತ್ತಿನಲ್ಲಿ ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಕೂಟದ ರಾಷ್ಟ್ರಗಳಲ್ಲಿರುವ ಏಕ ಮುಖವಾದ ಧ್ಯೇಯ ಸಾಧನೆಗಾಗಿ ಐಕಮತ್ಯದಿಂದ ಶ್ರಮಿಸುತ್ತಿವೆ ಮಾನವ ಸಾತಂತ್ರ್ಯ ಮತ್ತು ಪ್ರಜಾ ಪ್ರಭುತ್ವಧ್ಯೇಯಗಳಲ್ಲಿ ನಾಥ ವಿಶ್ವಾಸ ಹೊಂದಿರುವ ಈ ರಾಷ್ಟ್ರಕೂಟವು ಜಗತ್ತಿನಲ್ಲಿ ಶಾಂತಿಯನ್ನು ರಕ್ಷಿಸಲು ಮಹತ್ತರವಾದ ಸಾಧನವಾಗಿದೆ. ಎಂಬುದಾಗಿ ಕಾಮನ್‌ವೆಲ್ತ್ ಪ್ರಧಾನರುಗಳನ್ನು ದ್ವೇಷಿಸಿ ೧೧ ನೆಯ ತಾ॥ ರಾತ್ರಿ ರೇಡಿಯೋ ಮೂಲಕ ಸ್ವಾಗತ ಭಾಷಣ ಮಾಡುತ್ತ ಬ್ರಿಟಿಷ್ ಮುಖ್ಯಮಂತ್ರಿಗಳಾದ ಮಿ॥ ಕ್ಲೆಮೆಂಟ್ ಆಟ್ಲ್ಲಿ ಯವರು ತಿಳಿಸಿದರು.

ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳು ಈ ರೀತಿ ಪರಸ್ಪರ ಕಲೆತು ಚರ್ಚಿಸುತ್ತಿರುವುದು ಶುಭಾರ್ಹವಾದುದು ಅದರಲ್ಲೂ ಮುಖ್ಯವಾಗಿ ನೂತನ ಡೊಮಿನಿಯನ್‌ಗಳ ಮುಖ್ಯ ಮಂತ್ರಿಗಳಾದ ಪಂ॥ ನೆಹರೂ, ಮಿ॥ ಲಿಯಾಕತ್ ಅಲಿಖಾ ಮಿ॥ ಸೇನಾನಾಯಕೆ ಇವರುಗಳು ಬಂದಿರುವುದಕ್ಕಾಗಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತ ಪಡಿಸಿದರು

ಮಿ॥ ಆಟ್ಲ್ಲಿಯವರು ತಮ್ಮ ಭಾಷಣದಲ್ಲಿ ಸಮ್ಮೇಳನದ ಉದ್ದೇಶವನ್ನು ಸ್ಪಷ್ಟಪಡಿಸಿದರು.

" ನಾವು ಇಲ್ಲಿ ಸೇರಿರುವುದು ಕಠಾವುಗಳನ್ನು ಮಾಡುವದಕ್ಕಲ್ಲ ಕಾಮನ್‌ವೆಲ್ತ್ ರಾಷ್ಟ್ರಗಳ ಏಕಮುಖವಾದ ಸಮಸ್ಯೆಗಳನ್ನು ಪರಸ್ಪರ ಅರಿತುಕೊಳ್ಳುವುದೇ ಇದರ ಉದ್ದೇಶ ಶಾಂತಿ ಮತ್ತು ಸೌಹಾರ್ದವೇ ನಮ್ಮ ಗುರಿ " ಎಂದು ಮುಡಿದರು

ಬೆಂಗಳೂರಲ್ಲಿ ಟೆಲಿಫೋನ್ ಕಾರ್ಖಾನೆ

ಶ್ರೀ ಖುರ್ಷಿದ್‌ಲಾಲ್‌ರವರಿಂದ ಶಂಕುಸ್ಥಾಪನೆ

ಭಾರತದ ಪ್ರಥಮ ಟೆಲಿಫೋನ್ ಕಾರ್ಖಾನೆಯ ಶಂಕುಸ್ಥಾಪನೆಯನ್ನು ೧೩ ನೆಯ ತಾರೀಖಿನ ಬೆಳ್ಗೆ ಭಾರತದ " ಕಮ್ಯೂನಿಕೇಷನ್ " ಉಪಮಂತ್ರಿಗಳಾದ ಶ್ರೀ ಖುರ್ಷಿದ್‌ಲಾಲ್‌ರವರು ನೆರವೇರಿಸಿದರು ಈ ಸಮಾರಂಭಕ್ಕೆ ಪ್ರಧಾನ ಶಿರೋಮಣಿ ಎ॥ ವಾಧವ ರಾಯರೂ, ಶ್ರೀ ಓ ಎಸ್ ಎ. ವೀಥ್, ಶ್ರೀ ಹಯಾತ್ (ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್) ಮುಂತಾದ ವೃನುಖಾಧಿಕಾರಿಗಳೂ ಬಂದಿದ್ದರು ಭಾರತ ಕಮ್ಯೂನಿಕೇಷನ್ಸ್ ಇಲಾಖಾ ಕಾರ್ಯದರ್ಶಿಗಳಾದ ಶ್ರೀ ವಿ ಕೆ ಆರ್ ಮೆನನ್ ಮೊದಲಾದವರೂ ಬೆಂಗಳೂರಿನ ನಾನಿಕರನೇಕರೂ ಬಂದಿದ್ದರು ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ ಆರ್. ನಟರಾಜರವರೂ, ಆಡ್ಮಿನಿ ಸ್ಟ್ರೇಟಿವ್ ಅಧಿಕಾರಿಗಳಾದ ಶ್ರೀ ಬಿ ವಿಶ್ವನಾಥರವರೂ ಮತ್ತಿತರ ಅಧಿಕಾರಿಗಳೂ ಎಲ್ಲರನ್ನೂ ಸ್ವಾಗತಿಸಿದರು.

ಸ್ವಾಗತ ಭಾಷಣ

ಇಂಡಿಯನ್ ಟೆಲಿಫೋನ್ ಇಂಡ್ಯಸ್ಟ್ರೀಸ್ ಎಂಬ ಹೆಸರಿನ ಈ ಕಾರ್ಖಾನೆಯ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ವಿ ಕೆ ಆರ್ ಮೆನನ್‌ರವರು ಸ್ವಾಗತ ಭಾಷಣ ಮಾಡಿದರು ಭಾಷಣದ ಸಾರಾಂಶವಿದು ಈ ಕಾರ್ಖಾನೆಯು ಸಂಪೂರ್ಣವಾಗಿ ಕೆಲಸ ಮಾಡಿಸಲು ಆರಂಭಿಸಿದ ಮೇಲೆ ವರ್ಷಕ್ಕೆ ಸುಮಾರು ೨ ಕೋಟಿ ರೂ ಗಳಷ್ಟು ಬೆಲೆ ಬಾಳುವ ಟೆಲಿಫೋನ್‌ಗಳು ತಯಾರಾಗುವುವು ಸದ್ಯ' ಇಂಗ್ಲೆಂಡಿನಿಂದ ತಯಾರಾದ ಟೆಲಿಫೋನ್ ಭಾಗಗಳನ್ನು ತರಿಸಿ ಇಲ್ಲಿ ಜೋಡಿಸುವ ಕಾರ್ಯವನ್ನು ಕೈಗೊಳ್ಳಲಾಗುವುದು. ಇನ್ನು ಮೂರು ವರ್ಷಗಳಲ್ಲಿ ಟೆಲಿಫೋನ್‌ಗಳನ್ನು ಪೂರ್ತಿಯಾಗಿ ನಾವೇ ತಯಾರಿಸುವ ವಿಸ್ತಾರು ಮಾಡಲಾಗುವುದು ಈ ಕಾರ್ಖಾನೆಯನ್ನು ಯಶಸ್ವಿಯಾಗಿ ನಡೆಸಲು ಮತ್ತು ಭಾರತೀಯರಿಗೆ ಟೆಲಿಫೋನ್ ಕೈಗಾರಿಕೆಯ ಶಿಕ್ಷಣ ಕೊಡಲು ಇಂಗ್ಲೆಂಡಿನ ಆಟೋವ್ಯಾಟಿಕ್ ಟೆಲಿಫೋನ್ ಕಂಪೆನಿಯವರನ್ನು ಪಾಲುದಾರರನ್ನಾಗಿ ಸೇರಿಸಿಕೊಳ್ಳಲಾಗಿದೆ

ಶ್ರೀ ಖುರ್ಷಿದ್ ಲಾಲ್‌ರವರ ಭಾಷಣ

ತರುವಾಯ ಶ್ರೀ ಖುರ್ಷಿದ್‌ಲಾಲ್‌ರವರು ಭಾಷಣ ಮಾಡುತ್ತ ನೆರೆದಲು ಕಮ್ಯೂನಿಕೇಷನ್ಸ್‌ಮಂತ್ರಿ ಶ್ರೀ ರಫಿ ಅಹಮದ್ ಕಿದ್ವಾಯಿಯವರು ದೇಶಾಲಯ್ಯ ಸಮಿತ್ತ ಬರಲಾಗದಿದ್ದಕ್ಕಾಗಿ ವ್ಯಸನವನ್ನು ಸೂಚಿಸಿ, ಕ್ರಿಯಾಶಕ್ತಿಗೆ ಬೇಗ ಆರೋಗ್ಯವು ಲಭಿಸಲೆಂದು ಪ್ರಾರ್ಥಿಸಿದರು.

ಈ ಕಾರ್ಖಾನೆಯ ಯೋಜನೆಯು ಇನ್ನು ಬೇಗ ಕಾರ್ಯ ರೂಪಕ್ಕೆ ಬಂದುದಕ್ಕೆ ಶ್ರೀ ಕಿದ್ವಾಯಿಯವರ ಉತ್ಸಾಹ, ಆಸಕ್ತಿಗಳೇ ಮುಖ್ಯ ಕಾರಣ. ಟೆಲಿಫೋನ್ ಸೌಕರ್ಯದ ವಿಚಾರದಲ್ಲಿ ಭಾರತವು ಪ್ರಪಂಚದ ಇತರ ದೇಶಗಳಿಗಿಂತಲೂ ಬಹಳ ಹಿಂದೆ ಬಿದ್ದಿದೆ. ವಿಶಾಲವಾದ ತಮ್ಮ ದೇಶದಲ್ಲಿ ಕೇವಲ ೧೧೧೦೦೦ ಟೆಲಿಫೋನ್ಸುಗಳು ಮಾತ್ರ ಇವೆ. ಆದರೆ ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳ ಅನೇಕ ಪ್ರಮುಖ ಪಟ್ಟಣಗಳಲ್ಲಿ ಇದೇ ತಮ್ಮ ದೇಶದಲ್ಲಿರುವ ಒಟ್ಟು ಟೆಲಿಫೋನ್ ಸಂಖ್ಯೆ

ಗಿಂತಲೂ ಹೆಚ್ಚು ಟೆಲಿಫೋನುಗಳಿವೆ ಆಸ್ಟ್ರೇಲಿಯ ದಲ್ಲಿ ೯ ಜನಾಭ್ಯರಿಗೆ ಒಳ್ಳಿನ ಸಿಡ್ನಿ ನಗರದಲ್ಲಿರುವಷ್ಟು ಟೆಲಿಫೆ ನುಗಳು ಇಡೀ ಭಾರತದಲ್ಲಿಲ್ಲ ಜೀಣದ ಟೆಲಿ ಫೋನ ಗಳಲ್ಲಿ ಅರ್ಧದಷ್ಟು ನಮಲ್ಲಿವೆ

ನಮ್ಮ ದೇಶದಲ್ಲಿ ಇಂದು ಟೆಲಿಫೋನುಗಳ ಅಗತ್ಯ ಹೆಚ್ಚುತ್ತಿದೆ ಈಗಾಗಲೇ ವೈಟಿಂಗ್ ಲಿಸ್ಟಿನಲ್ಲಿ ೨ ೦೦೦೦ ದಷ್ಟು ಟೆಲಿಫೋನ್ ಬೇಕೆಂಬ ಅರ್ಜಿಗಳು ಬಂದಿವೆ ನಮ್ಮ ದೇಶದ ಆವಶ್ಯಕತೆಗೆ ಬೇಕಾಗುವ ಟೆಲಿಫೋನುಗಳನ್ನು ನಾವೇ ಇನ್ನು ೩ ೪ ವರ್ಷಗಳಲ್ಲಿ ತಯಾರಿಸಿಕೊಳ್ಳುವ ಯೋಜನೆ ಮಾಡಬೇಕೇ ಹೊರತು ಹೊರಗಿನಿಂದ ತರಿಸು ವುದು ಸಾಧ್ಯವಾಗುವುದಿಲ್ಲ ಈ ಉದ್ದೇಶದಿಂದ ಈ ಕಾರ್ಖಾನೆಯನ್ನೆಂದು ಸ್ಥಾಪಿಸುತ್ತಿದ್ದೇನೆ

ಇನ್ನೆರಡು ವರ್ಷಗಳಲ್ಲಿ ಈ ಕಾರ್ಖಾನೆಯು ಟೆಲಿ ಫೋನುಗಳನ್ನು ಪೂರ್ತಿಯಾಗಿ ತಯಾರಿಸುವ ಶಕ್ತಿ ಪಡೆಯುವುದೆಂದು ಆನಿಬುಕ್ತೆನೆ ಜಿನೆಂಬರು ತಿಂಗಳ ವೇಳೆಗೆ ಈ ಕಾರ್ಖಾನೆಯು ನಿರ್ಮಾಣವಾಗಿ ತಿಂಗಳಿಗೆ ೨೦೦೦ ಟೆಲಿಫೋನುಗಳಂತೆ ಜೋಡಣೆ ಕೆಲಸ ಸಾಗುವ ನೀರೀಕ್ಷೆ ಇದೆ ಇದರಿಂದ ನಮ್ಮ ದೇಶದ ಟೆಲಿಫೋನ್ ಸಮಸ್ಯೆಯು ಸ್ವಲ್ಪಮಟ್ಟಿಗಾದರೂ ಸುಲಭವಾಗುವುದು ಎಂದು ತಿಳಿಸಿದರು

ಕೊನೆಯಲ್ಲಿ ಶ್ರೀ ಖುರೈಷಿ ಲಾಲ್‌ರವರು ಈ ಕಾರ್ಖಾನೆಯ ನಿರ್ಮಾಣಕ್ಕೆ ಕಾರಣವಾದ ಭಾರತ ಸರ ಕಾರವನ್ನು ಮತ್ತು ಈ ಕಾರ್ಯದಲ್ಲಿ ನೆರವಾದ ಮೈಸೂರು ಸರ್ಕಾರವನ್ನು ವಂದಿಸಿದರು ಇಂಗ್ಲೆಂಡಿನ ಟೆಲಿಫೋನು ಕಂಪನಿಯೊಂದು ಈ ಕಾರ್ಖಾನೆಯಲ್ಲಿ ಪಾಲುವಹಿಸಿರು ವುದು ಬಾರತ ಬ್ರಿಟನ್ನಿನ ಒಂಭಧವ್ಯದಲ್ಲಿ ನೂತನ ಅಧ್ಯಾಯವಾರಂಭವಾಗಲು ಒನಾದಿಯಾಗಿ ಈ ಎರಡು ದೇಶಗಳ ವಾಣಿಜ್ಯ ಪ್ರಗತಿಯಾಗಲಿ ಎಂದು ಹಾರೈಸಿ ದರು

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗವಂತ ರದ ಫೋಟೋ (ನಾನಾವಿಧಬಣ್ಣ ಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚಾಚಾರ್ಯರು ಪಂಚಪೀಠಗಳಿಗೆ ತಿಪಿಪಿಡ್ಡಾಂತನನ್ನು ಉಪದೇಶಿಸುವ ಫೆ ಟೋ ೦—೩—೦

ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಕಾರದ ಫೋಟೋ ಸೈಜು ೧೪ × ೧೦ ಬೆಲೆ ೧೪ ೦—೪—೦

" " " ಚಿಕ್ಕ ಸೈಜು ಬೆಲೆ ೦—೧—೦

ಶ್ರೀ ಜಗದ್ಗುರು ರುದ್ರಮೂರ್ತಿ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ ೦—೧—೦

ಶ್ರೀ ರೇಣುಕಾಚಾರ್ಯರು ರುದ್ರಮೂರ್ತಿ ಶಿವಾಚಾರ್ಯರಿಗೆ ಪಟ್ಟ ಭಿಷೇಕ ಮಾಡುವ ಫೋಟೋ ೦—೧—೦

ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೆ.ಜಿ ತೂಕದ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ ೦—೧—೦

ಶ್ರೀ ಕಾಶೀ ಜಗದ್ಗುರು ವೀರಭದ್ರ ಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು) ೦—೪—೦

ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟ ಧಾರಣಮಾಡುವ ಫೋಟೋ ೦—೧—೦

ಶ್ರೀಷಮಡುಜ್ಜಯಿನೀ ಸಿಂಹಾಸನಾರೂಢಶ್ರೀ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ ೦—೧—೦

ಶ್ರೀಮದ್ರಂಭಾಪುರೀ ಪೀಠಾಧಿಪೆಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ ೦—೧—೦

ಶ್ರೀಷಮಡುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉತ್ತರಪತ್ರಿಕೆಯನ್ನು ಓದುತ್ತಿರುವ ಫೋಟೋ ೦—೧—೦

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪ ೦—

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪ ೦—೪—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹದ್ದಾರದ ಅತ್ಯಂತ ಸುಂದರವಾದ ಫೋಟೋ ೧೪ ೦—೧—೦

ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧೪ ೦—೧—೦

ಶ್ರೀ ಜಗದ್ಗುರು ಕೇದಾರಖಂಡಾಸನದ ಅತ್ಯಂತ ಸುಂದರವಾದ ಗೋಡ್ಡರಿಪ ಫೋಟೋ ೦—೧—೦

ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಮಾನರಾಗಿರುವ ಫೋಟೋ ೦—೧—೦

ಲಿಂಗಸೂರು ಕಂಟೋನ್ಮೆಂಟಿನಲ್ಲಿ ನೆ ವೆ ಪ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ ೦—೧—೦

ಶ್ರೀಜಗದ್ಗುರುರಂಭಾಪುರೀ ಒಳವೆಪಲ್ಲಿ ಸ್ಥಾಪಿಸಲ್ಪಟ್ಟರುವ ಶಿಲಾಶಾಸನಗಳು ೦—

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ	ಶಿವಾದ್ವೈ ತವರಿಭಾಷಣ (ಸಂಸ್ಕೃ॥)	೮ ಆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ವೀರಶೈವಮಹಾತ್ಮರು	೮ ಆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ	ಬಸವಧ್ವಾಂತವಿನಾಶರ (೩ನೆಯ ಆವೃತ್ತಿ)	೮ ಆ
ಶ್ರೀಜಗದ್ಗುರು ರೇಣುಕಾಚಾರ್ಯ ರ ಕೀರ್ತನ	೧ ಆಣೆ	ಆಗಮಪರಿಜ್ಞಾನ ..	೮ ಆ
ಸಂಕ್ಷಿಪ್ತ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ	ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೩ ಆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೫ ಆ
ಬಸವತಿನಿಷತ್ಪದರ್ಪಣ (೪ನೆಯ ಆವೃತ್ತಿ)	೨ ಆಣೆ	ಶಿಖಾಸೂತ್ರಸಿದ್ಧಾಂತದರ್ಪಣ ..	೧೫ ಆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ಆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೨ ಆಣೆ	ಮೋಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ಆ
ಶ್ರೀರುದ್ರಮುನಿತಿವಾಚಾರ್ಯತತಕ	೨ ಆಣೆ	ವೈದಿಕತಿವಪೂಜಾವಿಧಿ (ವೈದಿಕಸ್ತಲಯುಕ್ತವಾಮುದು ೩ನೆಯ ಆವೃತ್ತಿ)	೧೫ ಆ
ತಿವಶಕ್ತಿವಿಲಾಸ	೨ ಆಣೆ	ಶ್ರೀಕರಭಾಷ್ಯಂ (೬ ಅಧ್ಯಾಸ್ತ್ರಿಕ)	೨ ಆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ	ವೀರಶೈವರತ್ನ (೩ನೆಯ ಆವೃತ್ತಿ, ೪೦ ಮಹತ್ವದ ಫೋಟೋಗಳಿವೆ.ವ್ಯವ)	೨ ಆ
ಬಿಲ್ವಮಾಹಾತ್ಮ್ಯ (೩ನೆಯ ಆವೃತ್ತಿ)	೨ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ) ...	೨ ಆ
ಪಂಚಾಚಾರ್ಯಪ್ರಕಾಶ ...	೩ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೨ ಆ
ಪಂಚಾಚಾರ ಪ್ರಕಾಶಿಕಾ ..	೩ ಆಣೆ	ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಮಕುಟಾಗಮ-ಮಕುಟೋತ್ತಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ಆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ) ...	೪ ಆಣೆ	ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ...	೪ ಆ
ಲಿಂಗಧಾರಣವಿಧಿ ...	೪ ಆಣೆ	A brief life-sketch of Pandit Sri Kashinatha Shastriya (*English*)	೪
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ	The Philosophical Aspect of Virasaivism (*English*) ...	೪
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ -	೪ ಆಣೆ	Speeches by Pandit Shri Kashinatha Shastriji (*English*)	೧೨
ತೈಲೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ	ಶಿವಾಚಾರಚಂದ್ರಿಕಾ (ಅಚ್ಚಾಗ)	೩
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ	ಶೀಲಶೇಖರ (ಅರಾಬಿ)	೧
ವೈದಿಕವಾಙ್ಮಯರಹಸ್ಯ	೪ ಆಣೆ	ಮಹಾಚಾರಚಂದ್ರಿಕಾ (ಶೀಲಶೇಖರ-ಅಚ್ಚಾಗ) ..	೧
ಸನ್ಯಾಸಾಶ್ರಮವಿರ್ಮರ್ಶತತ್ತ್ವಸ್ಫುಟೀಕರಣ (೩ನೆಯ ಆವೃತ್ತಿ)	೬ ಆಣೆ	ಶಕ್ತಿವಿಶಾಚಾರಚಂದ್ರಿಕಾ (ಅಚ್ಚಾಗ) ..... —	೨
ವೀರಶೈವಾಂಶೀಪ್ಯ-ಶಾಸ್ತ್ರಾರ್ಥವಿಧಿ	೬ ಆಣೆ		
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೮ ಆಣೆ		

ಮ್ಯಾನೇಜರ್ —ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಸ್ವಯಂ

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಬೀಜಾಧಿಪರ್ । ಪಂಚಶ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪರಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ವರಿಗೆ ೨ ರೂ ೪ ಆಣೆ ವರ್ಷಾಂತದವರಿಗೆ ೩ ರೂ ೨ ಬಿ ಖರ್ಚು ಸೇರಿ ೩ ರೂ ೪ ಆಣೆ

ಮಹಾಪ್ರಭುಗಳವರಿಂದ ದಸರಾ ವಸ್ತುಪ್ರದರ್ಶನದ ಸಮಾನ ವಿನಿಯೋಗ ಸಮಾರಂಭ

ವರ್ಷದ ದಸರಾ ವಸ್ತುಪ್ರದರ್ಶನದಲ್ಲಿ ಭಾಗ
ಪ್ಪ, ಅಂಗಡಿಗಳ ಮತ್ತು ಕೈಗಾರಿಕಾ ಪ್ರದರ್ಶನ
ವಿಶೇಷ ಸ್ಥಾನಗಳನ್ನು ಗಳಿಸಿದವರಿಗೆ ಒಹುಮಾ
ಪ್ಪು ಹಂಚುವ ಸಮಾರಂಭವು ೧೯ನೆಯ ತಾರೀ
ದಿವಸ ಶ್ರೀಮನ್ಮಹಾರಾಜರ ಅಮೃತ ಹಸ್ತದಿಂದ
ವೈಭವದೊಡನೆ ನೆರವೇರಿತು ಆಗ್ಗೆ ಪ್ರಭುಗಳು
ಗೆ ಕಂಡಂತೆ ಭಾಷಣ ಮಾಡಿದರು

ಮಹಾಪ್ರಭುಗಳವರ ಭಾಷಣ

ವರ್ಷದ ವಸ್ತುಪ್ರದರ್ಶನಕ್ಕೆ ಬಂದಿದ್ದಪ್ಪು
ರು ಹಿಂದಿನ ಯಾವ ವಸ್ತು ಪ್ರದರ್ಶನದಲ್ಲಿಯೂ
ಲ್ಲಿಲ್ಲವೆಂದೂ, ಪ್ರವೇಶ ಧನದ ಮೂಲಕ ಈಸಾರೆ
ನೆಯಾಗಿರುವಪ್ಪು ಹಣವು ಹಿಂದಿನ ಯಾವ
ಪ್ರದರ್ಶನದಲ್ಲೂ ಹುಟ್ಟುವೆಯಾಗಿರಲಿಲ್ಲವೆಂದೂ
ನಮ್ಮ ಮೆಹಸ್ಸಿಗೆ ಹರ್ಷವುಂಟಾಗಿದೆ ಈ ವಸ್ತು
ನವು ಜನರಿಗೆ ಹೆಚ್ಚು ಹೆಚ್ಚು ಪ್ರಿಯವಾಗುತ್ತ
ದೆಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ ಇಷ್ಟೇ
ನಮ್ಮ ದೇಶದ ಕೈಗಾರಿಕೆ ಮತ್ತು ವ್ಯವಸಾಯದ
ದ್ಧಿಯ ವಿಷಯದಲ್ಲಿಯೂ ಮತ್ತು ಸಂಸ್ಕೃತಿ
ವಾಣಿಜ್ಯ ಸಂಬಂಧದ ಪ್ರಗತಿಸಾಧನೆಯ
ದಲ್ಲಿಯೂ ಜನಗಳಿಗೆ ಹೆಚ್ಚು ಹೆಚ್ಚಿನ ಆಸಕ್ತಿ
ಯಾಗುತ್ತಿದೆಯೆಂಬುದೂ ಕೂಡ, ಇದರಿಂದ ಸೂಚಿ
ಸುತ್ತದೆ

ಸೂರು ಸಂಸ್ಥಾನವು ವಿಶೇಷವಾಗಿ ಪ್ರಗತಿಹೊಂದಿ
ತಿಯನ್ನು ಸಾಧಿಸಿರುವ ಸಂಸ್ಥಾನವೆಂದು ಪೊದ
ಲಾ ಖ್ಯಾತಿಯನ್ನು ಗಳಿಸಿದೆ. ಈ ವಿಷಯದಲ್ಲಿ
ಮೆಮ್ಮೆಪಡುವುದು ನ್ಯಾಯವಾಗಿಯೇ ಇದೆ.

ನದು, ಭರತಖಂಡದಲ್ಲಿ ಬಹುತ್ವರ್ಯವಾಗಿ
ಸಾಧನೆಯು ನಡೆಯುತ್ತಿರುವಕಾಲ ಇಂಥ ಕಾಲ
ವಿದ್ದೇನೆ

ಗೆ ಭರತಖಂಡಕ್ಕೆ ಸ್ವಾತಂತ್ರ್ಯವು ಲಭಿಸಿರು
ಮ್ಮ ಸಂಸ್ಥಾನದಲ್ಲಿ ಕೂಡ, ಪ್ರಜೆಗಳ ಪ್ರತಿನಿಧಿ
ಜ್ಯಾಡಳಿತದ ಜವಾಬ್ದಾರಿಗಳನ್ನು ವಹಿಸಿದ್ದಾರೆ
ಮತ್ತು ಸಾಂಸ್ಕೃತಿಕ ಪುರೋಭಿವೃದ್ಧಿ ಸಾಧ
ಧಾರದ ಮೇಲೆ ಶಾಂತಿಯೂ ಅಭ್ಯುದಯವೂ
ಸುಖ ಕಾಲವು ಶೀಘ್ರವಾಗಿ ಬರಲೆಂದು
ೀಕ್ಷಿಸುತ್ತಿದ್ದೇವೆ.

ದೇಶಕ್ಕೆ ಈಗ ಮೊಟ್ಟಮೊದಲು ಬೇಕಾಗಿರು
ವಾರ. ಮೈಸೂರು ಸಂಸ್ಥಾನದಲ್ಲಿ ಈಗ ತೆಗೆ
ಆಹಾರಧಾನ್ಯಗಳ ಪರಿಮಾಣವು ಸಂಸ್ಥಾನದ
ಗಳಿಗೆ ಸಾಕಾಗುತ್ತಿರಲಿಲ್ಲ. ಹೊಸ ಸಂಸ್ಥಾನಕ್ಕೆಲ್ಲ
ಸುಮಾರು ೮೦ ಲಕ್ಷ ಜನಗಳದ್ದಾರೆ ಅಷ್ಟು ಸಂಖ್ಯೆಯ
ಜನಗಳಿಗೆ, ತಕ್ಕಷ್ಟು ಆಹಾರವನ್ನು ಒದಗಿಸಬೇಕಾದರೆ
ಸಮೃದ್ಧಿಯಾಗಿ ಜಲವನಸಿರುವಕ್ಕೆ ಸುಮಾರು ಒಂದು
ಕೋಟಿ ೨೦ ಲಕ್ಷ ಎಕರೆಗಳಷ್ಟು ಪ್ರದೇಶದಲ್ಲಿ ಸಾಗು
ವಳಿ ನಡೆದರೆ ಸರ್ವೇ ಸಾಧಾರಣವಾಗಿ ಸಾಕಾಗುವದು
ಉಳುಮೆಯ ಮುಂತಾದ ಕೆಲಸಗಳಿಗೆ ಯಂತ್ರಸಾಧನಗಳನ್ನು
ಉಪಯೋಗಿಸಿ ಉತ್ತಮವಾದ ಗೊಬ್ಬರವನ್ನು ಹಾಕಿ
ಸಾಗುವಳಿ ನಡೆಯುಸಿದರೆ ಸಂಸ್ಥಾನದಲ್ಲಿ ಅಗತ್ಯ
ಬೆಳೆಯು ಸಂಸ್ಥಾನದ ಜನಗಳ ಬಳಕೆಗೆ ಸಾಕಾಗುವುದು
ಮಾತ್ರವೇ ಅಲ್ಲವೆ, ನಮ್ಮ ಅಕ್ಕಪಕ್ಕದ ಪ್ರಾಂತಗಳ
ಜನಗಳಿಗೂ ಸ್ವಲ್ಪಮಟ್ಟಿಗೆ ಒದಗಿಸಿ ಸಹಾಯ ಮಾಡು
ವುದಕ್ಕೂ ಸಾಕಾಗುವಂತಾಗುತ್ತದೆ ಹಾಗೆ ಮಾಡುವು
ದಕ್ಕೆ ಈ ವಸ್ತುಪ್ರದರ್ಶನದಿಂದ ಸ್ಫೂರ್ತಿಪೊರೆತು
ಸಹಾಯವಾದಲ್ಲಿ, ಅದರಿಂದ ದೊಡ್ಡ ಕಾರ್ಯಸಾಧನೆ
ಯಾದಂತಾಗುತ್ತದೆ

ವಸತಿ ಗೃಹಗಳ ಯೋಜನೆ

ಆಕರ್ಷಕವಾಗಿರುವ ಮತ್ತು ಆರೋಗ್ಯಕರವಾಗಿರುವ
ವಾಸಪದ್ಧತಿಗಳನ್ನು ಸ್ವಲ್ಪವೆಚ್ಚದಲ್ಲಿ ಕಟ್ಟಿಸಿಕೊಡುವು
ದಕ್ಕೆ ಸಂಬಂಧಪಟ್ಟ ಒಂದುಯೋಜನೆಯು ನಮ್ಮಸರ್ಕಾ
ರದವರ ಗಮನದಲ್ಲಿದೆ ಸಂಸ್ಥಾನದಲ್ಲಿ ಪ್ರತಿಯೊಂದು
ಕುಟುಂಬದವರಿಗೂ ತಕ್ಕಷ್ಟುಸ್ಥಳವನಸಿಯಿರುವ ಉತ್ತಮ
ವಾದೊಂದು ಮನೆಯು ಇರುವಂತಾಗಬೇಕೆಂಬುದು
ನಮ್ಮ ಅಭಿಲಾಷೆಯಾಗಿದೆ ಈ ಉದ್ದೇಶವು ನೆರವೇರಲು
ಸರ್ವ ಪ್ರಯತ್ನಗಳೂ ನಡೆಯುತ್ತಲಿರುತ್ತವೆಂದು ನಾವು
ನಂಬಿದ್ದೇನೆ

ಜನಗಳ ಆರ್ಥಿಕ ಪುರೋಭಿವೃದ್ಧಿಯಂತೆಯೇ, ವಿದ್ಯಾ
ಸಂಬಂಧವಾದ ಮತ್ತು ಸಂಸ್ಕೃತಿ ಸಂಬಂಧವಾದ ಪ್ರಗ
ತಿಯೂ ಅವರಷ್ಟೇ ಮುಖ್ಯವೆಂದು ಸೂಚಿಸಲಿಚ್ಛಿಸು
ತ್ತೇನೆ ಜೀವನದ ಘನತೆ ಮತ್ತು ಗಾಂಭೀರ್ಯಗಳನ್ನು
ಕಾಪಾಡಿಕೊಳ್ಳುವ ವಿಷಯದಲ್ಲಿ ನಮ್ಮ ಜನಗಳು
ಪ್ರಪಂಚದ ಇತರ ಯಾವ ದೇಶದವರಿಗೂ ಕಡಿಮೆ
ಯಾಗಿಲ್ಲ ಹೊರದೇಶಗಳಿಗೆ ಹೋಗಿಬಂದವರಂದಲೂ
ನಮಗೆ ಈ ಅಂಶವು ತಿಳಿಬಂದಿದೆ, ಅಲ್ಲದೆ ನಾವೇ
ಪರೀಕ್ಷಿಸಿ ನೋಡುವುದರಿಂದಲೂ ಅದೇ ರೀತಿ ಕಂಡು
ಬಂದಿದೆ ಲಲಿತಕಲೆಗಳ ಕ್ಷೇತ್ರದಲ್ಲಿ ನಮ್ಮವರು
ಹೆಚ್ಚಿನ ಕೀರ್ತಿಯನ್ನು ಗಳಿಸಿದ್ದಾರೆ ನಮ್ಮ ಚಿತ್ರ
ಲೇಖಕರೂ ಮತ್ತು ಇತರ ಕಲಾವಿದರೂ, ನಮ್ಮ
ಸಂಗೀತಗಾರರೂ ಮತ್ತು ಇವರೆಲ್ಲರ ಶ್ರೇಷ್ಠವರ್ಗದವ
ರೆಂದು ಪ್ರಖ್ಯಾತರಾಗಿದ್ದಾರೆ ಇದು ನಮಗೆ ಹೆಮ್ಮೆಯ
ವಿಷಯವಾಗಿದೆ. ಹೀಗೆ ನಮಗೆ ಲಭಿಸಿರುವ ಉನ್ನತಿಯ
ಸ್ಥಿಗಿಸಿಕೊಂಡು ಬರುವುದಕ್ಕೂ ಮತ್ತು ' ಅದನ್ನು
ಇನ್ನೂ ಮೇಲಿನ ಮಟ್ಟಕ್ಕೆ ಹೆಚ್ಚಿಸುವುದಕ್ಕೂ ನಾವು
ಪ್ರಯತ್ನಿಸಬೇಕಾಗಿದೆ. ಅದೇ ರೀತಿ ಪಮ್ಮೂರಿ ಪ್ರಯತ್ನ
ನಡೆಯುತ್ತಿದೆಯೆಂಬುದು ಈ ವಸ್ತುಪ್ರದರ್ಶನವಸ್ಥೆ
ಮತ್ತು ಅದರ ಅಭ್ಯಕಲಾಪಗಳನ್ನು ನೋಡುವುದಿಂದ
ಸ್ಪಷ್ಟವಾಗಿ ಕಾಣಬರುವುದು.

ಸ್ಪೆಷಲ್ ಟ್ರೇನು

೩೦ ಡಿ. ೦೩೫ ರೂ.

ತಾ॥ ೬—೧೧—೧೯೪೪ ರಂದು ಕಾರ್ತಿಕ ಶುದ್ಧ ಪಂಚಮಿ ಶನಿವಾರ ದಿವಸ ಹುಬ್ಬಳ್ಳಿಯಿಂದ ಒಳ್ಳೆ, ನೈಋತದೊಡನೆ ಹೊರಡುವದು

ಮುಂಬಯಿ, ಉಜ್ಜಯಿನಿ, ಪ್ರಯಾಗ, ಕಾಶಿ, ಗಯಾ, ಅಯೋಧ್ಯೆ, ಹರದ್ವಾರ, ದಿಲ್ಲಿ, ಆಗ್ರಾ ಮುಂತಾದ ಪ್ರಸಿದ್ಧ ೫೦ ಕ್ಷೇತ್ರಗಳಿಗಾಗಿ ಮತ್ತು ಶ್ರೀಜಗದ್ಗುರು ಕಾಶೀ ವಿಶ್ವಾರಾಧ್ಯಪೀಠ (ಜಂಗಮವಾಡಿಮಠ) ದ ಪಟ್ಟಾಭಿಷೇಕಮಹೋತ್ಸವಕ್ಕಾಗಿ ಹೊರಡುವದು ಶ್ರೀಹುಲಿ ಮುಂತಾದ ಸ್ವಾಮಿಗಳವರು ಈ ಮಹೋತ್ಸವಕ್ಕೆ ಬರುವರು ಟಿಕೇಟುಗಳು ಸ್ಪೆಶ್ಲೇ ಉಳಿದಿನ ಬರತಕ್ಕವರು ತಾರೀಖ ಮೂಲಕ ಟಿಕೇಟಿನ ಹಣವನ್ನು ಕಳಿಸಬೇಕು ನಿರ್ದೇಶ ಮಾಹಿತಿಯ ಜಾಹೀರಕಾಗಿ ಈ ದಿವಸೇ ನಮಗೆ ಪತ್ರ ಬರೆಯಿರಿ

ಶ್ರೀಗೌರೀಶಂಕರ ಕಂಪನಿ, ಹುಬ್ಬಳ್ಳಿ.

ನೂತನ ರೀತಿಯ ವಿಮಾನಗಳು

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಮೂರು ವಿಧವಾದ ನೂತನ ರೀತಿಯ ವಿಮಾನಗಳು ತಯಾರಾಗುತ್ತವೆ ಇವಲ್ಲದೆ, ನೂರು ಹೊಸ ಮಾದರಿಯ ಮೂರನೆಯ ತರಗತಿ ರೈಲುಗಾಡಿಗಳನ್ನೂ ತಯಾರಿಸಲಾಗುತ್ತದೆ

ಕಾಸಿಂರಜ್ವಿ ಸೋದರನ ದಸ್ತಗಿರಿ

ಸೈಯದ್ ಕಾಸಿಂ ರಜ್ವಿಯ ಸೋದರನಾದ ಅಬ್ದುಸ್ ರಜ್ವಿ ಎಂಬವನನ್ನು ಹೈದರಾಬಾದಿಗೆ ೬೦ ಮೈಲಿ ದೂರ ದಲ್ಲಿರುವ ಕಾಮರೆಡ್ಡಿ ಎಂಬ ಸ್ಥಳದಲ್ಲಿ ದಸ್ತಗಿರಿ ಮಾಡ ಲಾಗಿದೆಯೆಂದು ತಿಳಿದುಬಂದಿದೆ

ಸ್ವೀಕಾರ

ಅರಸೀಕೆರೆ ತಾ॥ ತುಂಬಾಪುರ ಗ್ರಾಮದಲ್ಲಿರುವ ಮ॥ಡಾ॥ ಸಿದ್ಧಲಿಂಗೇಗೌಡರು ತಮ್ಮ ಗ್ರಾಮದಲ್ಲಿ ಒಂದು ಸ್ಕೂಲನ್ನು ಕಟ್ಟಿಸಿ ಆದರ ಪ್ರಾರಂಭೋತ್ಸವವನ್ನು ನೆರೆ ನೇರಿಸಿದ ಸಮಯದಲ್ಲಿ ಪ್ರಭಾಧೋಷಣಕ್ಕೋಸ್ಕರ ಸುಮಾರಿಸಿದ್ದ ೨ ರೂ. ಗಳು ಶಿಷ್ಟವೊರಿಲ್ಲದಿರುವ ವೇಗ ತುಂಬಾಪುರ ಮಹಜರ ಪಂಚಾಂಡಯ್ಯನವರ ಮ್ಯಾನ ತಲುಪಿದ್ದುವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಶಿಷ್ಯಮಂಗಲಶ್ಲೋಕವೆಂದು ಹಾಸ್ಯಿಸುತ್ತೇವೆ

ವಿಜಯನಗರಸಾಮ್ರಾಜ್ಯ ಸ್ಥಾಪನೆಗೆ ಶ್ರೀರೇಣುಕಾಚಾರ್ಯರ ಅನುಗ್ರಹ

—

ನಮ್ಮ ಕರ್ಣಾಟಕದೇಶವು ಜಗದ್ವಿಖ್ಯಾತವಾದ ದೇಶವು ಈ ದೇಶವು ಅನಾದಿಕಾಲದಿಂದ ಈ ಹೊತ್ತಿನ ವರೆಗೆ ಸಮಸ್ತ ವೈಭವಗಳಿಗೆ ತವರ್ಮನೆಯಾಗಿರುವು ದೆಂಬುದನ್ನು ಎಲ್ಲರೂ ಬಲ್ಲರು ಕರ್ಣಾಟಕದೇಶದ ಪವಿತ್ರತಾಮಾನವನ್ನು ವ್ಯಾಸಮಹರ್ಷಿಗಳೂ ಕೂಡ ಸ್ವಂದ ಪುರಾಣಾಂತರ್ಗತ ಕಾಶೀಖಂಡದ ೩೫ ನೆಯ ಅಧ್ಯಾಯ ದಲ್ಲಿ ಉಲ್ಲೇಖಿಸಿದ್ದಾರೆ ಈ ದೇಶವನ್ನು ಅನಾದಿಕಾಲ ದಿಂದ ಅನಂತಾನಂತಶಿವಸಂಗಾರಿಗಳು ಆಳಿದ್ದಾರೆ ಆದರೆ ಈಗಿನ ಚರಿತ್ರಕಾರರು ಬಹುವ್ಯಾಖ್ಯೇಸರಾಗಿ ಚರಿತ್ರ ವನ್ನು ಕೋಡಿಸಿ ಬರೆಯದಿರುವುದು ವ್ಯಸನಕರವಾದ ವಿಷಯವಾಗಿದೆ ಅಸ್ತು! ಕರ್ಣಾಟಕದೇಶವು ಪೂರ್ವದಲ್ಲಿ **"ಕುಂತಲದೇಶ"** ಎಂಬ ನಾಮದಿಂದ ಪ್ರಸಿದ್ಧ ವಾಗಿತ್ತು ಕ್ರಿಸ್ತಶಕಕ್ಕೆಂತಲೂ ೪೦೦ ವರ್ಷಗಳ ಪೂರ್ವ ದಲ್ಲಿದ್ದ ನಂದರು ಕರ್ಣಾಟಕ ದೇಶವನ್ನು ಳುತ್ತಿದ್ದ ರೆಂದೂ, ಚಂದ್ರಗುಪ್ತನು ಮೈಸೂರು ರಾಜ್ಯದಲ್ಲಿರುವ ಚಂದ್ರಗಿರಿಯಲ್ಲಿ ತಪಸ್ಸನ್ನಾ ಚರಿಸಿದನೆಂದೂ ಕೆಲವು ಶಾಸ ನಗಳಿಂದ ತಿಳಿದುಬರುತ್ತದೆ ಕ್ರಿ ಪೂ ೨೫೦ ವರ್ಷಗಳ ಪೂರ್ವದಲ್ಲಿದ್ದ ಆಶೋಕ ಚಕ್ರವರ್ತಿಯು ಕನ್ನಡದೇಶ ವನ್ನು ಆಳುತ್ತಿದ್ದನೆಂಬ ವಿಷಯವು ಮೈಸೂರು ರಾಜ್ಯಕ್ಕೆ ಸೇರಿರುವ ಮೋಘಲ್ಲುರು ತಾಲೂಕಿನಲ್ಲಿರುವ ಪ್ರಿಯ್ಯ ಗಿರಿ ಜರ್ಜರಗುಡಿಯ ಶ್ವರ ಗುಡ್ಡಗಳಲ್ಲಿರುವ ಶಿಲಾಶಾಸನ ಗಳಿಂದ ಗೊತ್ತಾಗುತ್ತದೆ ಮುಂದೆ ಈ ದೇಶವನ್ನು **ಕದಂಬರು-ಗಂಗರು-ಚಾಳುಕ್ಯರು-ರಾಷ್ಟ್ರಕೂಟರು-ಯಾದವರು** ಜನುತ್ತರುವಾಗಿ ಆಳಿದು ಆ ಸಂತತಿ ಯನೆಲ್ಲರೂ ನಾಮಾವಶೇಷರಾದನೆಂಳೆ ವಿಜಯ **ನಗರ ಸಾಮ್ರಾಜ್ಯವು** ತನ್ನ ಪ್ರಜ್ವಲನ್ನು ನೆಲೆಗೊಳಿ ಸಿತು ಕರ್ಣಾಟಕದಲ್ಲಿ ಅನಾದಿ ಕಾಲದಿಂದ ಪ್ರಸಿದ್ಧ ವಾಗಿದ್ದ ರಾಜ್ಯಳಲ್ಲಿ ವಿಜಯ ನಗರ ಸಾಮ್ರಾಜ್ಯವೇ ದಿಗಂತವಿಶ್ರುತಿ ಕೀರ್ತಿಶಾಲಿಯಾಗಿ ಮೆರೆಯಿತು ಈ ಸಾಮ್ರಾಜ್ಯವು ಕ್ರಿ ಶ ೧೩೩೬ ರಲ್ಲಿ ಸ್ಥಾಪಿತವಾಗಿ ೨೦೦ ವರ್ಷಗಳ ವರೆಗೆ ಜಗತ್ಪಸಿದ್ಧ ತನ್ನ ಅಮೃದ್ಭುತ ಶಕ್ತಿಯನ್ನು ತೋರ್ಪಡಿಸಿತು ಅನೇಕ ಜನ ಶೂರರು ಈ ಸಾಮ್ರಾಜ್ಯ ಸಿಂಹಾಸನವನ್ನಾ ರೋಹಣಮಾಡಿ ಕರ್ಣಾಟ ಭೂಮಾತೆಯ ಸೌಖನವನ್ನು ಶತಗುಣಿತ ವನ್ನಾಗಿ ಮಾಡಿದರು ಈ ಸಾಮ್ರಾಜ್ಯಕ್ಕೆ ಮುಖ್ಯವಾದ ರಾಜಧಾನಿಯು **"ವಿಜಯನಗರ"** ಎಂಬ ಹೆಸರಿನಿಂದ ಪ್ರಖ್ಯಾತವಾಗಿದ್ದಿತು ಆದೇ ಈಗ "ಹಂಪೆ" ಎಂಬ ಹೆಸರಿನಿಂದ ಪ್ರಸಿದ್ಧವಿರುತ್ತದೆ ಈ ರಾಜಧಾನಿಯು ಸವಿತೃಶಾಖಾ ಶುಂಭಪ್ರವರವಿಯು ತೀರದಲ್ಲಿ ವಿರಾಜಿಸು ತ್ತಿದ್ದು. ಲಕ್ಷಾವಧಿ ಸುಂದರಮಂದಿರಗಳಿಂದಲೂ, 'ಇವಿ ರಾರು ಮಹಾದೇವಾಲಯಗಳಿಂದಲೂ, ನಾನಾ ವಿಧವಾದ ಉದ್ಯಾನಗಳಿಂದಲೂ, ರಾಜಬೀಥಿಗಳಿಂದಲೂ, ಸವಿರಾರು ಆನೆಗಳಿಂದ ಅಲಂಕೃತವಾಗಿರುವ ಗಜಶಾಲೆಗಳಿಂದಲೂ, ಲಕ್ಷಾಂತರ ಅಶ್ವಗಳಿಂದ ರಾರಾಜಿಸುತ್ತಿರುವ ಅಶ್ವಶಾಲೆ ಗಳಿಂದಲೂ, ಅಪರಿಮಿತಸೈನಿಕಸಮೂಹದಿಂದಲೂ ಸದಾ ಇಂದ್ರನ ರಾಜಧಾನಿಯಾದ ಅಮರಾವತಿಯಂತೆ ಪರಿ ಶೋಭಿಸುತ್ತಿದ್ದಿತು ಈ ರಾಜಧಾನಿಯು ೧೪ ಮೈಲು ಉದ್ದವಾಗಿಯೂ, ೧೦ ಮೈಲು ಆಗಲವಾಗಿಯೂ ಇತ್ತು, ೬೦ ಲಕ್ಷ ಜನ ಪ್ರಜೆಗಳಿಂದ ಕೂಡಿದ್ದಿತಂತೆ! ಇನ್ನೆನ್ನಿಲ್ಲ ವಿಮರ್ಶ ಮಾಡಿನೋಡಿದರೆ, ಈಗ ಪ್ರಸಂಚದಲ್ಲಿ ೧ ನೆಯ ಪಟ್ಟಣವೆಂದು ಹೇಳಿಕೊಳ್ಳುತ್ತಿರುವ 'ಲಂಡನ್' ನಗರದಂತೆ, ವಿಜಯನಗರವು ಆಗಿನ ಕಾಲದಲ್ಲಿ ಪ್ರಂಪಂಚ ದಲ್ಲಿ ೧ ನೆಯ ಪಟ್ಟಣವೆನಿಸಿ ಮೆರೆಯುತ್ತಿದ್ದಿತೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಆ ಕಾಲದಲ್ಲಿ ಈ ನಗರದ ವೈಭವವನ್ನು ಕೆಲಜನ ವಿದೇಶೀಯರು ಕಣ್ಣಾರೆ ಕಂಡು ಬಹು ಮನೋಹರವಾಗಿ ಬಣ್ಣಿಸಿರುವರು. ಶ್ರೌಢ ದೇವರಾಯನು ಈ ರಾಜ್ಯವನ್ನಾಳುತ್ತಿದ್ದಾಗ್ಗೆ—ಕ್ರಿ. ಶ. ೧೪೮೨ ರಲ್ಲಿ **ಅಬ್ದುಲ್ ರಜಾಕ್** ಎಂಬವನು ಇರಾಣ ದೇಶದಿಂದ ವಿಜಯನಗರಕ್ಕೆ ರಾಯಭಾರಿಯಾಗಿ ಬಂದಿ ದ್ದನು. ಅವನು ವಿಜಯನಗರದ ರಾಜರ ಅತಿಶ್ಲಘೆಲ್ಲ ಕೆಲವು ದಿವಸಗಳವರೆಗೆ ಇದ್ದನು ಅವನು ಈ ಸಾಮ್ರಾ ಜ್ಯದ ವೈಭವವನ್ನೆಲ್ಲ ಪ್ರತ್ಯಕ್ಷವಾಗಿ ನೋಡಿ—

"ಈ ಮಹಾರಾಜನ ಸ್ವಾಧೀನದಲ್ಲಿ ೩೦೦ ಬಂದರುಗ ಳಿರುವವೆಂದೂ, ೧೧ ಲಕ್ಷ ಜನ ಸೈನಿಕರುಗಳಿರುವೆಂದೂ, ಅಂತಹ ಸಂಖ್ಯಾಬಲಿಷವಾದ ಮಹಾರಾಜಸನ್ನು ಈ ಜಗತ್ತಿನಲ್ಲಿ ಕಾಣು ವುದು ಮರ್ಲಭನೆಂದೂ, ಈ ಮಹಾರಾಜನ ಪಟ್ಟಣಕ್ಕೆ ಸಮಾನವಾದ ಪಟ್ಟಣವೇ ಈ ಪ್ರಪಂಚದಲ್ಲಿರುವುದಿಲ್ಲವೆಂದೂ, ನಗರದ ಮಧ್ಯದಲ್ಲಿ ಅಲ್ಲಲ್ಲಿ ಮನೋಹರವಾದ ಉದ್ಯಾನಗಳಿರುವ ವೆಂದೂ, ಸುಂದರವಾದ ಕಲ್ಲುಗಳಿಂದ ಕಟ್ಟಿದ ಕಾಲುದಾರಿಗಳು ಅಚ್ಚಾದಕರವಾಗಿ ಹರಿಯುತ್ತಿರುವವೆಂದೂ, ಈ ನಗರದ ಪೇಟೆಯಲ್ಲಿ ಮುತ್ತು-ನವರತ್ನ-ಪಟ್ಟೆ-ವಜ್ರ-ವೈಡೂರ್ಯಗಳ ವ್ಯಾಪಾರವು ವಿಶೇಷವಾಗಿ ನಡೆಯುತ್ತಿರುವುದೆಂದೂ, ಈ ರಾಜ್ಯ ದಲ್ಲಿ ಸಾಮ್ಯಗಳನ್ನು ನೂಡುವುದಕ್ಕಾಗಿ ಒಂದು ದೊಡ್ಡ ಟಂಕ ಸಾಲೆಯನ್ನಿಟ್ಟಿರುವೆಂದೂ, ಆ ಟಂಕಸಾಲೆಯ ಮುಂಭಾಗದಲ್ಲಿ ನಗರದ ಮುಖ್ಯಾಧಿಕಾರಿಯು ಪಸಿಯುಂಟೆಂದೂ, ಅದರ ರಕ್ಷಣೆಗಾಗಿ ಆಲ್ಲಿ ೧೩೦೦೦ ಜನ ಸೈನಿಕರುವರೆಂದೂ"

ಈ ಪ್ರಕಾರ ನಾನಾರೀತಿಯಾಗಿ ಬಣ್ಣಿಸಿದ್ದಾನೆ ಇನ್ನು ಬರಣಿಗೆಯನ್ನು ನೋಡಿದರೆ ವಿಜಯನಗರದ ವೈಭವವು ಸೂರ್ಯದಲ್ಲಿ ಎಷ್ಟುಮಟ್ಟಿಗೆ ಇರಬಹುದೆನ್ನುವದು ಸರ್ವ ರಿಗೂ ಸ್ಪಷ್ಟವಾಗಿ ಒಡೆದು ತೋರುತ್ತದೆ ಕ್ರಿ ಶ ೧೫೨೦ ರಲ್ಲಿ ಇಟಲಿದೇಶದಿಂದ ವಿಜಯನಗರಕ್ಕೆ ಬಂದಿದ್ದ "ನಿಕೊಲಿಸ್ ಕೊಂಟಿ" ಎಂಬನೂ, ಕ್ರಿ. ಶ ೧೫೨೦ ರಲ್ಲಿ ಪೋರ್ಚುಗೀಸ್ ದೇಶದಿಂದ ಬಂದಿದ್ದ "ಪೇಯಸ್" ಎಂಬವನೂ ಇದೇರೀತಿಯಾಗಿ ವರ್ಣಿ ಸಿದ್ದಾರೆ ಇಂತಹ ಜಗದ್ವಿಖ್ಯಾತವಾದ ನಗರವು ಇಂದು ಕಲ್ಲುಮಣ್ಣುಗಳಿಂದ ಕೂಡಿರುವುದನ್ನು ನೋಡಿದರೆ ಯಾರಿಗೆ ತಾನೇ ಸಿಡಿಲುಬಡಿದಂತಾಗಿರಲ್ಲಿಲ್ಲ? ಕಾಲ ಗತಿಯು ವಿಚಿತ್ರವಾದುದನ್ನುವುದಕ್ಕೆ ಇದೇ ಒಂದು ದೊಡ್ಡ ಸಾಕ್ಷಿ! ಕಾಲಾಯ ತಸ್ಮೈ ನಮಃ!

ವಿಜಯನಗರಸಾಮ್ರಾಜ್ಯವನ್ನು ಸ್ಥಾಪಿಸಿದ ಹುಕ್ಕಬುಕ್ಕರ ಸೂಕ್ಷ್ಮ ಪರಿಚಯ

ಇಂತಹ ವೈಭವಯುತವಾದ ಕರ್ಣಾಟಕಮಹಾ ಸಾಮ್ರಾಜ್ಯವನ್ನು ಹುಕ್ಕಬುಕ್ಕ ರೆಂಬ ವೀರಾಗ್ರಣಿಗಳು ಸ್ಥಾಪಿಸಿದರೆ ಇವರು ಮೊದಲು ಒರಂಗಲ್ಲಿನ ರಾಜಪ್ರಾಪ ಪ್ರತಾಪರುದ್ರನೆಂಬ ಮಹಾರಾಜನಲ್ಲಿ ಕೋಶಾಧಿಕಾರಿ ಗೌಂಗಿದ್ದರೆಂ ೧೩೨೩ ನೆಯ ಇಸ್ವಿಯಲ್ಲಿ ಮಹಮದ್ ತೊಗಲಕನು ಒರಂಗಲ್ಲಿಗೆ ಮುತ್ತಿಗೆಯನ್ನು ಹಾಕಿ, ಪ್ರತಾಪರುದ್ರನನ್ನು ಮತ್ತು ಹುಕ್ಕಬುಕ್ಕರನ್ನು ಪೆರೆ ಹಿಡಿದು ದಿಲ್ಲಿಗೆ ಒಯ್ದ ಒಂಭನದೆಲ್ಲಪ್ಪನು ಕೆಲವು ದಿವಸಗ ಇವನೇಲೆ ಮಹಮ್ಮದನು ಹುಕ್ಕಬುಕ್ಕರ ಕೌರ್ಯಧೈರ್ಯಾದಿಗಳನ್ನು ನೋಡಿ ಸಂತೋಷಪಟ್ಟು, ಇವರನ್ನು ಸೆರೆಯಿಂದ ಬಿಡುಗಡೆಮಾಡಿ, ಇವರ ಸ್ವಾಧೀ ನಕ್ಕೆ ಒಂದು ಸೈನ್ಯವನ್ನು ಕೊಟ್ಟು, ಇವರನ್ನು ದಕ್ಷಿಣ ದೇಶದಲ್ಲಿದ್ದ ಒಲ್ಲಾಳಾಜನೊಡನೆ ಯುದ್ಧಮಾಡಲು ಕಳುಹಿಸಿದನು ಆಗ ಈ ಉಭಯ ಸಹೋದರರು ಮಹಮ್ಮದನ ಆಜ್ಞೆಯಂತೆ ಸೈನ್ಯಸಹಿತರಾಗಿ ಹೊರಟು, ಕೃಷ್ಣಾನದಿಯನ್ನು ದಾಟಿ, ಬಲ್ಲಾಳರಾಜನ ರಾಜ್ಯವನ್ನು ಪ್ರವೇಶಿಸಿ ಯುದ್ಧವನ್ನು ಸಾರಿದರು. ಆಗ ಬಲ್ಲಾಳ ರಾಜನ ಸೈನಿಕರಿಗೂ ಇವರಿಗೂ ಘೋರವಾದ ಯುದ್ಧ ವಾಯಿತು ಆ ಯುದ್ಧದಲ್ಲಿ ಇವರಿಗೆ ಜಯವು ದೊರೆ ಯದೆ ಸೋಕುಹೋದರು ಇವರ ಸಂಗಡ ಬಂದಿದ್ದ ಸೈನ್ಯವು ದಿಕ್ಕುಪಾಲಾಗಿ ಓಡಿಹೋಯಿತು ಈ ವಿಧ ವಾದ ವಿಪನ್ನಾವಸ್ಥೆಯನ್ನು ನೋಡಿ ಹುಕ್ಕಬುಕ್ಕರು ಅತ್ಯಂತವ್ಯಸನಾಕ್ರಾಂತರಾಗಿ, ತಾವು ಸಹ ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ಘೋರಾರಣ್ಯವನ್ನು ಸೇರಿದರು. ಈ ರೀತಿಯಾಗಿ ಈ ಸಹೋದರರು ಅನಾಥಾರಣವಾದ ವ್ಯಸನದಿಂದ ಕೂಡಿ ಆರಣ್ಯದಲ್ಲಿ ಕಾಲವನ್ನು ಕಳೆಯು ತ್ತಿರಲು, ಒಂದಾನೊಂದು ದಿವಸ ಹುಕ್ಕ (ಹರಿಹರ) ನ ಸ್ವಪ್ನದಲ್ಲಿ **ಶ್ರೀ ಜಗದ್ಗುರು ರೇಣುಕಾಚಾರ್ಯರ** ಶುಭದರ್ಶನವಾಗಿ, ಶುಭಸಂದೇಶವು ಪ್ರಾಪ್ತವಾಯಿತು

ಶ್ರೀ ರೇಣುಕಾಚಾರ್ಯರ ಪ್ರಥಮಾನುಗ್ರಹ

ಹುಕ್ಕಬುಕ್ಕ ಸಹೋದರರು. ಶ್ರೀ ರೇಣುಕಾಚಾರ್ಯರ ಅಸಾಧಾರಣ ಭಕ್ತರು. ಇವರಿಗೆ ಯಾವಾಗಲೂ ಶ್ರೀ ರೇಣುಕನ ಧ್ಯಾನವಲ್ಲದೆ, ಮತ್ತಾವ ಧ್ಯಾನವೂ ಇಲ್ಲಿಲ್ಲ ಇವರು ಹಾಲುಮತವರು. ಅನಾದಿಕಾಲದಿಂದ ಇಂದಿನವರೆಗೂ ಹಾಲುಮತವರಿಗೆಲ್ಲ ಶ್ರೀರೇಣುಕ ಸಿದ್ಧೇಶ್ವರನೇ ಕುಲದೇವರೆಂಬುದು ಸರ್ವರಿಗೂ ವಿಷಯವೇ ಆಗಿದೆ ಶ್ರೀರೇಣುಕಸಿದ್ಧೇಶ್ವರನಲ್ಲಿ ಇವರಿಗೆ ಅಸಾಧಾರಣವಾದ ಭಕ್ತಿಯಿದ್ದುದಕ್ಕೆ ಇದೇ ಮುಖ್ಯ ಕಾರಣವು. ಇಂತಹ ಭಕ್ತೋತ್ತಮರು ಅನ್ಯಾನ್ಯದುಃಖಕ್ಕೀಡಾಗಿ ಘೋರಾರಣ್ಯದಲ್ಲಿ ಕಾಲವನ್ನು ಕಳೆ ತ್ತಿರಲು, ಒಂದಾನೊಂದು ದಿವಸ ಅಣ್ಣನಾದ ಹುಕ್ಕ (ಹರಿಹರ)ನು ವಿಕೇಷ ವ್ಯಸನದಿಂದ ತಮ್ಮನಾದ ಬುಕ್ಕನ ತೊಡೆಯಮೇಲೆ ತಲೆಯಿಟ್ಟು ಮಲಗಿ ಕೊಂಡನು. ಅಪ್ಪರಲ್ಲಿ ಹರಿಹರನಿಗೆ ನಿದ್ರೆ ಹತ್ತಿ ಆಗ್ಗೆ ಶ್ರೀರೇಣುಸಿದ್ಧನು ತನ್ನ ಪರಮಭಕ್ತ ಹರಿಹರನಿಗೆ ಸ್ವಪ್ನದಲ್ಲಿ ದರ್ಶನಕೊಟ್ಟು, ಧೈರ್ಯಗೊ ಹೇಳಿ, ವಿಜಯನಗರ ಸಾಮ್ರಾಜ್ಯಸ್ಥಾಪನೆಯ ಸಮ ವನ್ನೂ ಸಹ ವಿಶದವಾಗಿ ಅಪ್ಪಣೆಕೊಡಿಸಿ ಅಂತರ್ಧಾ ನಾದನು. ಈ ವಿಷಯವು ಶೃಂಗೇರಿ ಪೀಠದ ಪರಂಪರೆಯನ್ನು ಪ್ರತಿಪಾದಿಸುವ **"ಗುರುವಂ ಶಾವ್ಯ"** ಎಂಬ ಪ್ರಾಚೀನ ಸಂಸ್ಕೃತ ಗ್ರಂ ಹೇಳ್ಪಟ್ಟಿದೆ ಈ ಗ್ರಂಥವು ಶೃಂಗೇರಿಮಠದ ಗ್ರಂ ಯಲ್ಲಿ ದೊರೆತಿದ್ದು, ಮದ್ರಾಸ ಇಲಾಖಾ ಶ್ರೀರಂ ಲ್ಲಿರುವ ವಾಣಿವಿಲಾಸ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿ ಈ ಗ್ರಂಥದ ೫ ಮತ್ತು ೬ ನೆಯ ಸರ್ಗಗಳಲ್ಲಿ—

ಬಲ್ಲಾಳಕ್ಷತ್ರಶಾಲಕೇನ ವಿಜಿತಾ ಯುದ್ಧೇನ ಮಧ್ಯೇ ಮಾ
ವಲ್ಲೀಭ್ಯುದಿಪಸಿಸ್ಯ ಚಕ್ರತುರಸೌ ಸ್ಥಾಂತ್ಯೋದಧೇರಂಬು
ನಿದ್ರಾಯಾಃ ಸಪಜಾಂಕಗೋ ಹರಿಹರಕ್ಷ್ಮಾಣೀಭೃದೇಸ
ಭವ್ಯಂ ರೇಣುಸಿದ್ಧಯೋಗ್ಯಧಿಗಮಃಸ್ವಪ್ನಂ ತದಾಪೌ

ಗು ಕಾ ೫ ನೆಯ ಸ

ಸ್ವಸ್ತಿ ಶ್ರೀಮನ್ನೃಪ ತನ ಭವೆಬ್ಭಿರೇನಿಂಹಾಸನಸ್ಥೇ
ವಿದ್ಯಾರಣ್ಯಪ್ರಚುರಕೃಪಯಾ ಸರ್ವಸಂಪತ್ತಿದಾಯಿ
ಪಶ್ಚಿಮಾತ್ತುಂಗಂ ಪಿಜಯಕ ಕೆಲಯೋಜ್ಯಂದ್ರಮೌಳೀಕಲಿಂ
ಭಾವಾಕ್ಷೇತ್ರಾಶ್ವಾಸ್ತಿಗುಣಗಣಿತೈಶ್ವಾಕಥಾಶ್ವಾಪ್ತಾಶ್ವಾಃ

ಅಗ್ರೇ ಭಾವೀ ಶ್ರಿಧಾವನನುತೋ ವೀರಭೂಪೋ ವಸಂ
ಸರ್ವಾಮುರ್ವೀಂ ಸಚಿರಾನಸಿತಾ ಧಾರ್ಮಿಕಃ ಸರ್ವಭೌ
ಉತ್ಸಾ ಸ್ಸನ್ನೇ ಸಮಸದನ್ಯದಂ ರೇಣನಾಮಾದ್ರಿಯೋಗಾ
ದಂತರ್ಧಾನಂ ಸಮುಭಜದಥ ಸ್ವಾಬುಭಕ್ತೊಪ್ಪಿಂ ಭೂಪಃ

ಭೃತ್ಯೌಸಾವಾದೀತ್ಕೃತಿಯನಸಿ ಸ್ವಸ್ಯಕೃತ್ಯಂ ಸಮಸ್ತಂ
ಸರ್ವೋತ್ಕರ್ಷಂ ಸಹ ಸಮಭವಾನಾ ಸೋಽಪಿ ಸಂಶ್ರಾ ಮ
ಭೃತ್ಯಂ ಸ್ವೇಷ್ಟಂ ತಪಸಿ ನಿಪತತೇ ಸರ್ವಮಾನಾತ್ಮಯೋಪೇ
ವಿದ್ಯಾರಣ್ಯಾತ್ಮಯಮುನಿಪವರಾನಂದಪೂರ ಸಂದರ್ಶರ್

ಗು ಕಾ ೬ ನೆಯ ಸ

ಬಲ್ಲಾಳರಾಜನು ಯುದ್ಧದಲ್ಲಿ ಅಣ್ಣತಮ್ಮಂದಿ ಹರಿಹರ ಮತ್ತು ಬುಕ್ಕ ಇವರೀರ್ವರನ್ನು ಸೋಲಿ ನೆಂದೂ, ಆಗ್ಗೆ ಅವೀರ್ವರೂ ಚಿಂತಾಕ್ರಾಂತರಾಗಿ ಅರಣ್ಯವನ್ನು ಸೇರಿದರೆಂದೂ, ಚಿಂತಾವಿಕೇಷದಿಂ ಹರಿಹರನು ಬುಕ್ಕನ ತೊಡೆಯಮೇಲೆ ತಲೆಯಿಟ್ಟು ಕೊಂಡು ಮಲಗಿದನೆಂದೂ, ಆ ಸಮಯ ಶ್ರೀರೇಣಸಿದ್ಧತಿಪಾಚಾರ್ಯರು ಹರಿಹರನ ನಿದ್ದೆ ಬಂದು, "ಎಲ್ಲೆ ಹರಿಹರನೇ! ವಿದ್ಯಾರಣ್ಯ ದಯೆಯಿಂದ ನಿನಗೆ ರಾಜ್ಯಸಂಪತ್ತು ದೊರೆತಿ ಕರ್ತ ವಾಗುವುದೆಂದೂ, ಇದಕ್ಕಾಗಿ ನೀನು ಲೋಕನಿವ ವಾದ ಶ್ರೀಚಂದ್ರಮೌಳೀಶ್ವರಲಿಂಗದ ದರ್ಶನ ಮಾಡಿಕೊಳ್ಳಬೇಕೆಂದೂ, ಆಮೇಲೆ ನಿನ್ನ ರಾಜ್ಯ ಸನವನ್ನು ನಿನ್ನ ವಂಶದವರು ಅವಿಚ್ಛಿನ್ನವಾಗಿ ಕಾಲದವರೆಗೆ ಉತ್ತಮರೀತಿಯಿಂದ ರಾಜ್ಯಪರಿಪಾ ಮಾಡುವರೆಂದು ಸ್ವಪ್ನದಲ್ಲಿ ಹೇಳಿ ಅಂತರ್ಧಾನ ರೆಂದೂ, ಬಳಿಕ ಹರಿಹರನು ಎಚ್ಚೆತ್ತು ಸ್ವಪ್ನವೃತ್ತಾ ವನ್ನೆಲ್ಲ ತಮ್ಮನಾದ ಬುಕ್ಕನಿಗೆ ಹೇಳಿದನೆಂದೂ, ಮಂಗಳಕರವಾದ ಸ್ವಪ್ನದಿಂದ ಅಣ್ಣತಮ್ಮಂದಿರಿಗೆ ಅಸಾಧಾರಣವಾದ ಸಂತೋಷದಿಂದ ಯುಕ್ತರಾದೆವೆ ಆಮೇಲೆ ದಿಕ್ಕುಪಾಲಾಗಿ ಓಡಿಹೋಗಿದ್ದ ಇವರ ವೆಲ್ಲವೂ ಇವರ ಹತ್ತರ ಬಂದು ಒಕ್ಕುಟ್ಟಿಗೆ ಕೂಡಿತೆ ಬಳಿಕ ವಿದ್ಯಾರಣ್ಯರೂ ಸಹ ದರ್ಶನವನ್ನಿತ್ತರೆಂದೂ ಶ್ಲೋಕಗಳ ಅಭಿಪ್ರಾಯವಾಗಿರುತ್ತದೆ ಅತ್ಯಂತ

ಲ್ಲಿದ್ದ ತನ್ನ ಭಕ್ತೋತ್ತಮನಾದ ಹರಿಹರನಿಗೆ
ಣಾಚಾರ್ಯರು ಸ್ವಸ್ಥದಲ್ಲಿ ದರ್ಶನವನ್ನಿತ್ತು,
ವಗರದ ಸಾಮ್ರಾಜ್ಯಸ್ಥಾಪನೆಗೆ ಕಂಕಣಾನುಜ್ಞೆ
ಾದ ಪ್ರಥಮಾನುಗ್ರಹವನ್ನು ಮಾಡಿದ ವಿಷ
ಪ್ರತಿಯೊಬ್ಬ ಕರ್ನಾಟಕ ದೇಶಾಭಿಮಾನಿಗೂ
ಸ್ಮರಣೀಯವಾಗಿದೆ ವಿಜಯನಗರ ರಾಜ್ಯಸ್ಥಾಪ
ತಿ ಮುಖ್ಯವಾಗಿರುವ ಈ ವಿಷಯವನ್ನು ಚಿರಕೃ
ಬರೆಯದೆ ಬಿಟ್ಟಿರುವುದು ವಿಷಾದಕರವಾಗಿದೆ.
ಯಾಗಿರುವ ಯಥಾರ್ಥ ವಿಷಯವನ್ನು ಪೂರ್ಣ
ದಲ್ಲಿಯೇ ಬರೆಯುಸಿಟ್ಟಿರುವ ಶ್ರೀ ಕೃಷ್ಣಗೇರಿ
ಧಿಪತಿಗಳ ಉಪಕಾರವನ್ನು ಎಷ್ಟು ಸ್ಮರಿಸಿದರೂ
ಾಗಿದೆ

ೀರೇಣುಕಾಚಾರ್ಯರು ಸ್ವಸ್ಥದಲ್ಲಿ ಅಪ್ಪಣೆಕೊಡಿಸಿ
ಜಗದ್ಗುರುಣಿಪ್ಸೆತರಾದ ಶ್ರೀ ವಿದ್ಯಾರಣ್ಯರು
ಬುಕ್ಕರಿಗೆ ಶೀಘ್ರದಲ್ಲಿಯೇ ದರ್ಶನವನ್ನಿತ್ತು,
ಗೆ ನಾನಾವಿಧವಾದ ಸದುಪದೇಶಾದಿಗಳನ್ನು
ಿ, ಅವರೆಷ್ಟು ಮಹಾಧೈರ್ಯಶಾಲಿಗಳನ್ನಾಗಿ
ದರು ಆ ಸಮುದಯದಲ್ಲಿ ವೆತ್ತಿಣಹಿಂದೂಸ್ಥಾನದಲ್ಲಿ
ಲ್ಯಾನರ ಹಾವಳಿಯು ವಿಶೇಷವಾಗಿತ್ತು. ಮುಸ
ರಾಜರ ಹೊಡೆತಕ್ಕೆ ಶಿಲುಕಿ ಹಿಂದೂ ರಾಜರು
ಹಜ್ಜಾಗಿದ್ದರು ಹಿಂದೂ ರಾಜರಾದರೂ ಏಳ್ಮದಿಂ
ತಮ್ಮತಮ್ಮೊಳಗೆ ಹೊಡೆದಾಡುತ್ತ ಚಿಕ್ಕಚಿಕ್ಕ
ಗಳನ್ನು ಕಟ್ಟಿಕೊಂಡು, ಅತ್ಯಂತ ಹೀನಾವಸ್ಥೆ
ದ ಬಳಲುತ್ತಿದ್ದರು ಹಿಂದೂ ರಾಜರ ಈ ವಿಧವಾದ
ನ್ನು ಕಂಡೆ ಮುಸಲ್ಮಾನರು, ದಕ್ಷಿಣ ದೇಶವ
ಮಿಸಿ, ಹಿಂದೂ ರಾಜರನ್ನು ಸದೆಬಡೆಯುತ್ತಿದರು
ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ವಿದ್ಯಾರಣ್ಯರು ತಮ್ಮ
ವೈವಾದ ಬುದ್ಧಿಸ್ವಭಾವದಿಂದ ಹಿಂದೂ ರಾಜರಲ್ಲಿ
ನ್ನು ಒಂಟುಮಾಡುತ್ತ, ಅವರೆಲ್ಲರ ಒಟ್ಟುಗೂಡಿಸಿ,
ಬುಕ್ಕರ ಸಹಾಯಕ್ಕೆ ಒಟುಗಿಸಿಕೊಟ್ಟ "ವಿಜಯ
ಸಾಮ್ರಾಜ್ಯ" ಎಂಬ ಹೆಸರಿನ ಕರ್ನಾಟಕ
ಾಮ್ರಾಜ್ಯವನ್ನು ಸ್ಥಾಪಿಸಿದರು

ಾಮ್ಯಾಣತಯುಕ್ತಶ್ರಿ ಚಂದ್ರಯುಕ್ತಶಕಾಖ್ಯ ತೀ ।
ಪ್ತೇ ಸಿತಸಪ್ತಮ್ಯಾಂ ನೈರುಚೇ ಮಾಸಿ ಭಾಸ್ಕರೇ ।
ೀ ಬಭಸಪ್ತಕ್ಷೇ ಮಘಾಜ್ಯೇ ಚ ಜಕೇಚಕಃ ।
ಾ ನಗರೇ ರಮ್ಯಾ ಪುರುಷಾ ತ್ಕಾರಿಸೀ ॥

ಿಜಯನಗರವು ಶಾಲಿವಾಹನಶಕ ೧೨೫೮ ಧಾತ್ಯ
ು ಸಂವತ್ಸರ ವೈಶಾಖ ಶು॥ ೩ ದಿನಸ ಸ್ಥಾಪಿಸ
ತೆಂದು "ವಿದ್ಯಾರಣ್ಯ ಕಾಲಜ್ಞಾನ" ಎಂಬ
ಥವಲ್ಲಿ ಉಲ್ಲಿಖಿತವಾಗಿದೆ ಈ ಪ್ರಮಾಣಾನು
ವಾಗಿ, ವಿಜಯನಗರ ರಾಜ್ಯವು ಸ್ಥಾಪಿಸಲ್ಪಟ್ಟಿ
ವರ್ಷಗಳ ಮೇಲಾಯಿತೆಂದು ಸ್ಪಷ್ಟವಾಗುತ್ತದೆ

ವಿದ್ಯಾರಣ್ಯರ ಪ್ರಭಾವದಿಂದ ಹುಕ್ಕ (ಹರಿಹರ) ನಿಗೆ
ಪಟ್ಟಾಭಿಷೇಕವಾಯಿತು ಈತನೇ "ಹರಿಹರ
ು" ನೆಂದು ಪ್ರಸಿದ್ಧನಾದನು ಈ ಹರಿಹರ
ನು ಅಳಿದ ಮೇಲೆ "ಬುಕ್ಕರಾಯ" ನು
ವಾಳಿದನು ಇವೇ ರೀತಿ ಇವರ ವಂಶದವರು
ವರ್ಷಗಳ ವೆರೆಗೆ ಈ ಕರ್ನಾಟಕ ಸಾಮ್ರಾಜ್ಯ
ಬಹು ವೈಭವದಿಂದ ಆಳಿದರು.

ಿಜಯನಗರಸಾನ್ರಾಜ್ಯವು ಸ್ಥಾಪಿತವಾದಂದಿನಿಂದ
ದಿನೇ ಅಭಿವೃದ್ಧಿಯನ್ನು ಹೊಂದಲಿಕ್ಕೆ ಶ್ರೀರೇಣು
ಾರ್ಯರು ಹರಿಹರರಾಯನ ಸ್ವಸ್ಥದಲ್ಲಿ ಬಂದು,
ನು ಜಗದ್ವಿಖ್ಯಾತವಾದ ಚಂದ್ರಮೌಳೀಶ್ವರ
ನವನ್ನು ಹೇಳಿಸಿ." ಎಂದು ಅಪ್ಪಣೆಕೊಡಿಸಿ
ಮೂಲಕಾರಣವಾಯಿತು ಆದರಂತೆಯೇ ಹರಿ
ಯನು ಪ್ರತಿದಿವಸವೂ ವಿದ್ಯಾರಣ್ಯರದ್ವಾರಾ ಶ್ರೀ
ಮೌಳೀಶ್ವರಲಿಂಗದ ಪ್ರಸಾದವನ್ನು ಸ್ವೀಕರಿಸುತ್ತ,
ಸಾಮ್ರಾಜ್ಯವನ್ನು ಸಂಪಾದಿಸಿದನು ಈ ಚಂದ್ರ
ೀಶ್ವರಲಿಂಗವಾದೂರ ಆದಿಯಲ್ಲಿ ಶ್ರೀರೇಣುಕಾ
ಂದ ಅಧ್ಯಕಂಠಕಾಚಾರ್ಯರಿಂದೆ ಅನುಗ್ರಹೀತ
ು, ಗುರುಪರಂಪರೆಯಿಂದೆ ವಿದ್ಯಾರಣ್ಯರಿಗೆ ಪ್ರಾಪ್ತ
ತು. ವಿದ್ಯಾರಣ್ಯರು ಮಹಾಭಲಕ್ತರಾದುದಾದ ಈ
ಗುರುಭಕ್ತಿಯಷ್ಟು ಅಸಾಧಾರಣಭಕ್ತಿಭಾವದಿಂದ
ಕ್ತಿಸ್ಥರು. ಈ ಚಂದ್ರಮೌಳೀಶ್ವರಲಿಂಗವು ವಿದ್ಯಾ
ರಣ್ಯರಿಗೆ ಹೇಗೆ ಪ್ರಾಪ್ತವಾಯಿತೆಂಬ ವಿಷಯವು "ಶಿವ
ತತ್ತ್ವರತ್ನಾಕರ" ಎಂಬ ಮಹಾಗ್ರಂಥದಲ್ಲಿ ಸ್ಪಷ್ಟ
ವಾಗಿ ಪ್ರತಿಪಾದಿಸಲ್ಪಟ್ಟಿರುವುದು ಈ ಮಹಾಗ್ರಂಥವು
ಮದ್ಯಾರ್ಜುನವೇಂಟಿನವರಿಂದ ಮುದ್ರಿಸಲ್ಪಟ್ಟಿದೆ
ಈ ಗ್ರಂಥದ ನಾಲ್ಕನೆಯ ಕಲ್ಲೋಲದ ೧೨ನೆಯ
ತರಂಗದಲ್ಲಿ—

ಶಮಃ ಸ ರೇಣಕಾಸಿದ್ಧ ಸಂಪ್ರದಾಯಪ್ರವರ್ತನಾಂ ।
ಕಂಠಾಚಾರ್ಯಮಾರ್ಯಾಣಾಂ ಶಾಂಭವ್ಯಕ್ರಮಮಾಗತಂ ॥೯॥
ಸನ್ಯಾಸಿನಮುಪಾಶ್ರಿತ್ಯ ವಿನಯಾವನತೋತ್ತಮಂ ।
ವೃತ್ತಾಂತಮಮಬೀಲಾ ತ್ಕೈ ಮೃಡಾಯೇ ಸ್ಮಂ ಸ್ಮಜ್ಞಿ ಪತಾಗಂ ॥೧೦॥
ರೇಣಕಾಸಿದ್ಧ ಸಂಪ್ರಾಪ್ತಂ ಶಿಂದ್ರಮೌಳೀಶಮಸ್ಮತ್ಪಾತ್ ।
ಅಷ್ಟಾಭ್ಯಾನೇನ ಲಿಂಗೇನ ತವಾಭೀಷ್ಟಾಪ್ತಿರಿಷ್ಯತಿ ॥

ಎಂದು ಬರೆಯಲ್ಪಟ್ಟಿದೆ ಈ ೧೨ನೆಯ ತರಂಗದಿಂದ
ತಿಳಿದುಬರುವದೇನೆಂದರೆ—ಶಿವಧರ್ಮನೆಂಬ ಬ್ರಾಹ್ಮ
ಣನು ಬಡತನದ ವ್ಯಸನದಿಂದ **ರೇಣಕಸಿದ್ಧ ಸಾಂಪ್ರ
ದಾಯಿಕರಾದ ಶ್ರೀಕಂಠಕಾಚಾರ್ಯರ ಪೀಠಕ್ಕೆ**
ಅಧಿಪತಿಗಳಾಗಿದ್ದ ನಿದ್ಯಾಕಂಠರತೀರ್ಥಸ್ವಾಮಿಗಳವರಲ್ಲಿ
ಬಂದು ತನ್ನ ನಿಜಸ್ಥಿತಿಯನ್ನು ಹೇಳಿಕೊಂಡನೆಂದೂ,
ಶ್ರೀಸ್ವಾಮಿಗಳವರು ಅವನಿಗೆ ಶ್ರೀಚಕ್ರವನ್ನಾ ಕೀರ್ವದಿಸಿ
ಅದನ್ನು ಪೂಜಿಸಲು ಅಪ್ಪಣೆಯನ್ನು ಮಾಡಿದರೆಂದೂ,
ಆ ಶ್ರೀಚಕ್ರಪೂಜೆಯ ಸಾಮರ್ಥ್ಯದಿಂದಲೇ ಅವನು
ಮಹಾಜ್ಞಾನಿಯಾಗಿ, ಆ ಸ್ವಾಮಿಗಳವರಿಂದಲೇ ಸನ್ಯಾಸ
ದೀಕ್ಷೆಯನ್ನು ಪಡೆದುಕೊಂಡು **ವಿದ್ಯಾರಣ್ಯ**ನೆಂಬ ನಾಮ
ಧೇಯದಿಂದ ಪ್ರಸಿದ್ಧನಾದನೆಂದೂ, ಶ್ರೀಸ್ವಾಮಿಗಳವರು
ತಮ್ಮ ಶಿಷ್ಯರಾದ ಆ ವಿದ್ಯಾರಣ್ಯರಿಗೆ, ಅದಿಯಲ್ಲಿ ಶ್ರೀ
ರೇಣುಕಾಚಾರ್ಯರಿಂದ ಶ್ರೀಕಂಠಕರಾಚಾರ್ಯರಿಗೆ ಪ್ರಾಪ್ತ
ವಾಗಿದ್ದು ಗುರುಪರಂಪರೆಯಿಂದ ಬಂದ **ಶ್ರೀಚಂದ್ರ
ಮೌಳೀಶ್ವರಲಿಂಗವನ್ನು** ಕೊಟ್ಟು, "ನೀನು ಈ ಲಿಂಗ
ವನ್ನು ಪೂಜಿಸು, ಇದರಿಂದ ನಿನ್ನ ಮನೋಭೀಷ್ಟವು
ಪೂರ್ತಿಯಾಗುವದು" ಎಂದು ಆಜ್ಞೆಯನ್ನಿತ್ತರೆಂದೂ
ತಿಳಿದುಬರುತ್ತದೆ

ಜಗದ್ವಿಖ್ಯಾತವಾದ ಶ್ರೀಚಂದ್ರಮೌಳೀಶ್ವರಲಿಂಗವನ್ನು
ಶ್ರೀರೇಣುಕಾಚಾರ್ಯರು ಶ್ರೀಮದಾದ್ಯಶಂಕರಾಚಾರ್ಯರಿಗೆ
ಅನುಗ್ರಹಿಸಿದುದರ ವಿಷಯವನ್ನು ಶಿವತತ್ವರತ್ನಾಕರವಲ್ಲದೆ,
ರೇಣುಕವಿಜಯ, ವೇದಾಂತ ಸಾರವೀರಶೈವ
ಚಿಂತಾಮಣಿ, ಗುರುವಂಶಕಾವ್ಯ, ಪಿತಾಮಹ
ಸಂಹಿತೆ, ವಿದ್ಯಾರಣ್ಯಕೃತಿ ಇತ್ಯಾದಿ ಪರಮಪ್ರಾಚೀನ
ಗ್ರಂಥಗಳಲ್ಲಿಯೂ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವುದು ಪೂರ್ವ
ದಲ್ಲಿ ತ್ರಿಯಂಗೇರಿ ಮಹಾನಿಪತಿಗಳಾಗಿದ್ದ ಶ್ರೀಸಚ್ಚಿದಾ
ನಂದಭಾರತೀಶ್ರೀಪಾದಗಳವರಿಂದ ಬರೆಯಲ್ಪಟ್ಟಿರುವ
"ಗುರುವಂಶಕಾವ್ಯ"ದ ಮೂರನೆಯ ಸರ್ಗದಲ್ಲಿ—

ಶ್ರೀಶಂಕರಾಚಾರ್ಯರು ಭರತಖಂಡವನ್ನೆಲ್ಲ ಸುತ್ತಿ
ರಿಸಿ ಕಾಶ್ಮೀರದೇಶಕ್ಕೆ ಹೋಗಿ, ಅಲ್ಲಿರುವ ಶಾರದಾದೇವಿ
ಯನ್ನು ತಂದು ತ್ರಿಂಗೇರಿಯಲ್ಲಿ ಸ್ಥಾಪಿಸಿದನೆಂದೂ,
ಅವಿಂತರ ತಾವು ಕಾಂಚೀಕ್ಷೇತ್ರಕ್ಕೆ ಹೊರಡಲು ನಿಶ್ಚ
ರಾಗಿ ಸುರೇಶ್ವರಾಚಾರ್ಯನೆಂಬ ತಮ್ಮನ್ನು ಶೃಂಗೇರಿ ಮಠದ
ಶೃಂಗೇರಿ ಮೇರೆ ಸುಪ್ಪನ್ನು ಕಟ್ಟಿಪಡೆಂದೂ, ಅಮೇಲೆ
ಸುರೇಶ್ವರಾಚಾರ್ಯರಿಗೆ **"ಎಲೈ ಸುರೇಶ್ವರಾಚಾರ್ಯನೇ,
ನೀನು ಶ್ರೀರೇಣುಕಾಚಾರ್ಯರು** ನನಗೆ ಈ ಮೊದಲು
ಅಮಗ್ರಹಿಸಿರುವ ಚಂದ್ರಮೌಳೀಶ್ವರಲಿಂಗವನ್ನೂ
ಮತ್ತು ರತ್ನಗರ್ಭಗಣಪತಿಯನ್ನೂ ಪೂಜಿಸು" ಎಂದು
ಆಜ್ಞೆಯನ್ನು ನೀಡಿ ಕಾಂಚೀಕ್ಷೇತ್ರಕ್ಕೆ ತೆರಳಿದರೆಂದೂ
ಇತ್ಯಾದಿ ವಿಷಯವು ಬರೆಯಲ್ಪಟ್ಟಿರುತ್ತದೆ ಆ ಗ್ರಂಥ
ದಲ್ಲಿದ್ದ ಶ್ಲೋಕಗಳು ಈ ಕೆಳಗೆ ಉದಾಹರಿಸಲ್ಪಟ್ಟಿವೆ.

ಶ್ರೀಚಂದ್ರಮೌಳೀಶ್ವರಲಿಂಗಮಸ್ಮೈ ಸದ್ಭಕ್ತಗರ್ಭಗಣ ಗಾ
ನಾಯಕಂ ಚ । ಸ ಪಿತೃರೂಪಾಯ ಸುಸಿದ್ಧದತ್ತಂ ದತ್ತಾ
ತ್ಮಗಾದಿತ್ಯಮಹರ್ಮಣೀಂ ॥೬೫॥

ಸುರೇಶ್ವರಾಚಾರ್ಯ ಸದಕ್ಕಿಣಂ ತ್ವಂ ಸಂಪೂಜಯಸ್ವಾಸ್ಮಿನ್ನ
ಚಾಂಬಿಕೇಶೇ । ದತ್ತಾಭಿಧಸ್ಯಾಸ್ಯ ವಿಸರ್ಜನಾಯ ಕಕ್ಷ್ಯಾಸ್ಥಿತೈ
ಸ್ಮಯತ್ಕೈಸ್ಮಿತಾಯ ಚಾಂಚೀಶೇ ॥೬೬॥

ಮೇಲಿನ **'ಸದ್ಭಕ್ತಗರ್ಭಕ್ಕೆ "ಸುಸಿದ್ಧದತ್ತಂ"** ಎಂಬ ಪದಕ್ಕೆ—

"ಸುಸಿದ್ಧೇನ ರೇಣಕಾಸಿದ್ಧ ಮತಾಯೋಗಿನಾ ದತ್ತಂ ಶ್ರೀಚಂದ್ರ
ಸೌಂಲಿಂಗೇಶ್ವರಲಿಕಿಗಂ ಸದ್ಭಕ್ತಗರ್ಭಗಂ ಸಪ್ತಸ್ಥಂ ಮಾಣಿಕ್ಯಂ
ಗರ್ಭೇ ಯಸ್ಯ ಸ ತಥೋಕ್ತಸ್ತಂ ಗಣನಾಯಕಂ ಚ"

ಎಂದು ಈ ಗ್ರಂಥವನ್ನು ರಚಿಸಿದ ಕವಿಗಳೇ ಸಂಸ್ಕೃ
ತದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ.

ಇತ್ಯಾದಿ ವಿಷಯಗಳನ್ನು ಪರ್ಯಾಲೋಚಿಸಿ
ನೋಡಿದರೆ ಶ್ರೀಚಂದ್ರಮೌಳೀಶ್ವರಲಿಂಗವು ಶ್ರೀಮ
ದಾದ್ಯಶಂಕರಾಚಾರ್ಯರಿಗೆ ಶ್ರೀರೇಣುಕಾಚಾರ್ಯರಿಂದ
ಅನುಗ್ರಹಿಸಲ್ಪಟ್ಟಿತೆಂದೂ, ಗುರುಪರಂಪರಾದ್ವಾರಾ ಆ
ಲಿಂಗವು ಶ್ರೀವಿದ್ಯಾರಣ್ಯರಿಗೆ ಪ್ರಾಪ್ತವಾಯಿತೆಂದೂ,
ವಿದ್ಯಾರಣ್ಯರ ದ್ವಾರಾ ಆ ದಿವ್ಯಲಿಂಗದ ಪ್ರಸಾದವು ಹರಿ
ಹರರಾಯನಿಗೆ ಪ್ರಾಪ್ತವಾಯಿತೆಂದೂ ಸ್ಪಷ್ಟವಾಗುತ್ತದೆ.
ಹರಿಹರರಾಯನು ಶ್ರೀರೇಣುಕಾಚಾರ್ಯರ ಆಶೀರ್ವಾದ
ಪ್ರಭಾವದಿಂದ ವಿಜಯನಗರ ಸಾಮ್ರಾಜ್ಯವನ್ನು
ಸ್ಥಾಪಿಸಿ, ಆ ಸಾಮ್ರಾಜ್ಯನ ಕೀರ್ತಿಯನ್ನು ಈ
ಭೂಮಂಡಲದಲ್ಲಿ ಸೂರ್ಯಚಂದ್ರರಿರುವರೆಗೆ ಸ್ಥಿರ
ಗೊಳಿಸಿದನು ಇಂತಹ ಮಹಾಸಾಮ್ರಾಜ್ಯವನ್ನು
ಸ್ಥಾಪಿಸಿ ದಿಗಂತವಿಖ್ಯಾತಕೀರ್ತಿಶಾಲಿಯಾದ ಶ್ರೀರೇಣು
ಸಿದ್ಧನ ಮಹಾಭಕ್ತನಾದ ಹರಿಹರರಾಯನ ನಿರ್ಮಲ
ಕೀರ್ತಿಯು ಧರಾತಲದಲ್ಲಿ ಸದಾ ಬೆಳಗುತ್ತಿರಲಿ!

ನಾನು ಕಂಡ ಅಮೆರಿಕಾ

(ಬರೆದವರು—ಶ್ರೀಮತಿ ಕಾವೇರಿ ರಾಮಚಂದ್ರರಾವ್)

ನಾನು ಅಮೆರಿಕಾಕ್ಕೆ ಹೋಗುವ ಮುನ್ನವೇ ಅಲ್ಲಿ
ಸರ್ವ ಕಾರ್ಯಗಳೂ ಯಂತ್ರಗಳಿಂದಲೇ ನಡೆಯು
ತ್ತವೆಂದು ಓದಿದ್ದೆ. ಆದರೆ ಓದಿದ ಆ ಯಂತ್ರಗಳ
ವಿವರ, ಅವುಗಳಿಂದಾಗುವ ಕಾರ್ಯ ಏನೇನೋ
ಇಂದ್ರಜಾಲ, ಮಹೇಂದ್ರಜಾಲಗಳನ್ನೊಳಗೊಂಡ
ಒಂದು ಕಥೆಯಂತಿದ್ದಿತು ಅಮೆರಿಕಾಕ್ಕೆ ಹೋಗಿ
ಅಲ್ಲಿ ಈ ಯಂತ್ರಗಳನ್ನು ಪ್ರತ್ಯಕ್ಷ ನೋಡಿದ ಮೇಲೆ
ಸ್ವಲ್ಪ ಅರ್ಥವಾಯಿತು, ಆಶ್ಚರ್ಯವೂ ಆಯಿತು.
ಎತ್ತತಿರುಗಿದರೂ ಯಂತ್ರಗಳೇ ಸುರಂಗಮಾರ್ಗ
ದಲ್ಲಿ ಹೋಗುವ ರೈಲುಗಳಲ್ಲಿ ಮತ್ತು ರಸ್ತೆಗಳಲ್ಲಿ
ಚಾಕಲೇಟ್, ಸಿಗರೇಟ್ ಮತ್ತು ತಂಪಾದ ಪಾನೀ
ಯವನ್ನು ಕೊಡುವ ಯಂತ್ರಗಳು ಇರುತ್ತವೆ. ಮನೆ
ಯಲ್ಲಿ ಗೃಹಿಣಿಯರಿಗೆ ಅನುಕೂಲವಾಗಿ, ಕಸ ಗುಡಿ
ಸಲು, ಮನೆ ತೊಳೆಯಲು, ಹಣ್ಣೆನರಸಿ ಹಿಂಡಲು,
ಹುರಿಯಲು ಮತ್ತು ಕರಿಯಲು ಇರುವ ಯಂತ್ರ
ಗಳಿಗೆ ಬಟ್ಟೆಗಳನ್ನು ಹಿಗೆದು, ಹಿಂಡಿ, ಪಣ
ಗಿಸುವ ಮತ್ತು ಪಾತ್ರೆ ತೊಳೆಯುವ ಯಂತ್ರ
ಗಳೂ ಇವೆ. ಹೊಲ ಉಳಲು, ಬಿತ್ತಲು, ಕಳೆ
ಕೀಳಲು ಮತ್ತು ಸೈರನ್ನು ಕೀಳುತ್ತಲೇ ಧಾನ್ಯ
ವನ್ನು ತೆನೆಯಿಂದ ಬೇರೆಮಾಡಿ ಚೀಲಕ್ಕೆ ತುಂಬುವ
ಯಂತ್ರಗಳೂ ಇವೆ. ಇವಲ್ಲದೆ ಹಾಲು ಕರೆಯಲು,
ಅದನ್ನು ಹಿಂಗಿಸಿ ಶೀತಗಳಿಗೆ ತುಂಬಲು ಯಂತ್ರ
ಗಳಿವೆ. ಗೋಶಾಲೆಯನ್ನು ಶುಭ್ರವಾಗಿಡುವ
ಯಂತ್ರಸಾಧನಗಳಿವೆ. ಆ ದೇಶದ ಜನರು ತಮ್ಮ
ಜೀವನವನ್ನು ಯಂತ್ರಯುಗಕ್ಕೆ ಸರಿಹೋಗಿಸಿ
ಕೊಂಡಿರುವಂತೆ ಮೂಕಪ್ರಾಣಿಗಳಿಗೂ ಕೆಲವು
ಯಂತ್ರಗಳ ಉಪಯೋಗವನ್ನು ಕಲಿಸಿದ್ದಾರೆ.
ದನಗಳು ನೀರು ಕುಡಿಯಲು ಆವುಗಳ ಮುಂದೆ
ಸಣ್ಣ ಪಾತ್ರೆ ಅಂದರೆ ಆವುಗಳ ಬಾಯಿ ಮಾತ್ರ
ಹಿಡಿಯಬಹುದಾದಷ್ಟು ಅಗಲವಾದ ಪಾತ್ರೆಯನ್ನು
ಇಟ್ಟಿರುತ್ತಾರೆ. ದನಗಳು ತಮಗೆ ನೀರು ಬೇಕಾ
ದಾಗ ಆ ಪಾತ್ರೆಯಲ್ಲಿ ಮುಖವಿಟ್ಟು ಒತ್ತುತ್ತವೆ.
ಹೀಗೆ ಒತ್ತಿದಾಗ ಆ ಪಾತ್ರೆಯ ತುಂಬಾ ಚಲ್ಲುವೆ
ಯಂತೆ ನೀರು ತುಂಬಿಕೊಳ್ಳುತ್ತದೆ. ದನಗಳು ತಮ
ಗೆ ಬೇಡಾದಷ್ಟು ನೀರು ಕುಡಿದು ತೃಪ್ತಿತೊಂದು

ತ್ವವೆ ಕಾರ್ಖಾನೆಗಳಲ್ಲಿಯಾದರ್ಶೋ ಕೆಲಸ ಗಳೆಲ್ಲವೂ ಯಂತ್ರದಿಂದಲೇ ನಡೆಯುತ್ತವೆಂ ಬುದು ಎಲ್ಲರಿಗೂ ತಿಳಿದ ವಿಷಯವೇ ನಾವು ಹಿಂದುಸಲ ಹಿಂದು ದೂಡ್ಡ ಬಿಳಿಸುದ್ದಿ ಗಣಿಯನ್ನು ನೋಡಲು ಹೋಗಿದ್ದೆವು ಇಲ್ಲಿ ಸುದ್ದಿಯನ್ನು ತೆಗೆದು ಅಗಾಧವಾದ ಹಳ್ಳವಾಗಿದೆ ನಾವು ಅಲ್ಲಿಗೆ ಹೋದಾಗ ಕೇವಲ ಎರಡು ಟ್ರಕ್‌ಗಳು ಮಾತ್ರ ಇದ್ದವು ಈ ನಿರ್ಜನ ಪ್ರದೇಶವನ್ನು ನೋಡಿ ಅಂದು ರಜವಿರಲಿಬಹುದೆಂದಿದ್ದೆವು ನಾವು ನೋಡು ತ್ತಿದ್ದಂತೆಯೇ ಒಂದು ಟ್ರಕ್‌ನಲ್ಲಿದ್ದ ಯಂತ್ರವು ಮಣ್ಣನ್ನು ಅಗೆದು ರಾಶಿಹಾಕಿತು ಇನ್ನೊಂದು ಯಂತ್ರವು ಈ ಮಣ್ಣನ್ನು ಲಾರಿಗೆ ತುಂಬಿತು ಟ್ರಕ್ ನಲ್ಲಿ ಯಂತ್ರವನ್ನು ನಡೆಸಲು ಇಬ್ಬರು ಮನುಷ್ಯರು ಇದ್ದರು ಇನ್ನು ಈ ಸುದ್ದಿಯ ತೊಳಿದು ಬೆರೆದಿರುವ ಅಭ್ರಕವನ್ನು ಬೇರ್ಪಡಿಸಲು ಇರುವ ಕಾರ್ಖಾನೆಗಳಲ್ಲೂ ಅಷ್ಟೆ ೫೬ ಜನ ಕೆಲಸಮಾಡು ತ್ತಿದ್ದರು ಇಲ್ಲಿ ದಿನಕ್ಕೆ ೧೦೦೦ ಟನ್ ನಷ್ಟು ಸುದ್ದಿಯನ್ನು ತೆಗೆಯುತ್ತಾರಂತೆ ! ಹೀಗೆ ಈ ರೀತಿಯ ಯಂತ್ರಸಹಾಯವಿಲ್ಲದಿದ್ದಲ್ಲಿ ಸುಮಾರು ಸಾವಿರ ಜನರಾದರೂ ಕೆಲಸಮಾಡಬೇಕಾಗಿತ್ತು. ಬಾಲ್ಟಿಮೋರ್ ಪಟ್ಟಣದಲ್ಲಿ ತಾಮ್ರವನ್ನು ಕರಗಿಸಿ ಶುದ್ಧಿಮಾಡುತ್ತಾರೆ ಅಲ್ಲಿ ಕೇವಲ ೪೦೦ ಜನ ಕೆಲಸಗಾರರಿದ್ದಾರೆ ನಮ್ಮದೇಶದಲ್ಲಾಗಿದ್ದರೆ ಕನಿಷ್ಠಪಕ್ಷ ೧೦೦೦ ಸಂಖ್ಯೆ ಜನರಾದರೂ ಈ ಕೆಲಸಮಾಡಬೇಕಾಗುತ್ತಿತ್ತು

ಇನ್ನು ಆಫೀಸ್ ಮತ್ತು ಅಂಗಡಿಗಳಲ್ಲಿ ಟೈಪು ಮಾಡುವ ಯಂತ್ರಗಳೂ, ಲೆಬ್ಬುಮಾಡುವ ಯಂತ್ರ ಗಳೂ ಮತ್ತು ಇತರ ಅನುಕೂಲಗಳಿಗೆ ಬೇಕಾದ ಸಣ್ಣಪ್ರಮಾಣದ ಯಂತ್ರಗಳೂ ಇವೆ ಎರಡು ಮನೆಯ ಹಳ್ಳಿಯಾದರೂ ಪ್ರತಿಯೊಬ್ಬರ ಮನೆಯಲ್ಲೂ ರೇಡಿಯೋ, ಟೆಲಿಫೋನ್ ವ ತ್ತು ರಿಫ್ರಿಜರೇಟರ್ ಗಳು (ಅಂದರೆ ಪದಾರ್ಥಗಳನ್ನು ತಂಪಾಗಿ ಇಡುವ ಯಂತ್ರಗಳ) ಇದ್ದೇ ಇರುತ್ತವೆ ಮನೋರಂಜನೆ ಗಾಗಿ ಇರುವ ಯಂತ್ರಗಳಂತೂ ಲೆಕ್ಕವೇ ಇಲ್ಲ ಕೆಲವು ಯಂತ್ರಗಳ ಮುಂದೆ ನಿಯಮಿತವಾದ ದುಡ್ಡನ್ನು ಹಾಕಿ ನಿಂತರೆ, ಹಿಂದು ನಿಮಿಷದಲ್ಲಿ ನಮ್ಮ ಫೋಟೋ ತೆಗೆದು ಕಟ್ಟುಹಾಕಿ ತಯಾರಾಗಿ ಬರುತ್ತದೆ ಮತ್ತೆ ಕೆಲವು ಯಂತ್ರಗಳ ಮುಂದೆ ನಿಂತು ಹಾಡಿದರೆ ಅಥವಾ ಮಾತನಾಡಿದರೆ ನಮ್ಮ ಧ್ವನಿ ರಿಕಾರ್ಡಾಗಿ ಟಪಾಲಿಗೆ ಹಾಕಲೂ ಸಹ ಸಿದ್ಧ ವಾಗಿ ಹೊರಬೀಳುತ್ತದೆ ಆಟಪಾಟಗಳಾದವ ಮತ್ತು ಚಿತ್ರಗಳನ್ನು ನೋಡುವ ಯಂತ್ರಗಳೂ ಇವೆ ಇಲ್ಲಿ ಮೋಟಾರ್ ಕಾರುಗಳ ವಿಷಯವನ್ನಂತೂ ಹೇಳಬೇಕಾಗಿಯೇ ಇಲ್ಲ ಜನಸಂಖ್ಯೆಗಿಂತ ಇವೇ ಹೆಚ್ಚಾಗಿರುವಂತೆ ಕಾಣುತ್ತದೆ ಹೀಗಾಗಿ ಅವನ್ನು ನಿಲ್ಲಿಸಲು ಸ್ಥಳವಿಲ್ಲ ಆದಕ್ಕಾಗಿ ಗೊತ್ತಾಗಿರುವ ಸ್ಥಳದಲ್ಲಿ ದುಡ್ಡುಕೊಟ್ಟು ನಿಲ್ಲಿಸಬೇಕು.

ಅಮೆರಿಕಾ ದೇಶವು ಎತ್ತ ತಿರುಗಿದರೂ ಯಂತ್ರ ಮಯವೇ ಆಗಿದೆ. ಇದರಿಂದ ಜನರಿಗೆ ಎಷ್ಟೋ ಅನುಕೂಲಗಳೂ ಆಗಿವೆ. ಜನರ ಕೆಲಸಗಳು ಸುಲಭವಾಗಿಯೂ, ಶೀಘ್ರವಾಗಿಯೂ ಆಗು ತ್ತವೆ ಇದರಿಂದ ಅವರಿಗೆ ವ್ಯಾಸಂಗ ಮತ್ತು ಮನೋರಂಜನೆಗೆ ಹೆಚ್ಚು ಅವಕಾಶ ಸಿಕ್ಕುತ್ತದೆ ಅಲ್ಲದೆ ಜನರ ಜೀವನ ಮಟ್ಟವೂ ಉತ್ತಮಗೊಂಡು ಬಡತನದ ಕೊರಗು ತಮಿಮೆಯಾಗಿ ಜನರು ಉಲ್ಲಾ ಸದಿಂದ ಜೀವನನಡೆಸಲು ಸಹಾಯವಾಗಿದೆ ನಮ್ಮ ದೇಶದಲ್ಲಿ ರಾಜಾಧಿರಾಜರೂ, ಲಕ್ಷಾಧೀಶ್ವರರೂ ಕಲ್ಪಿಸಿಕೊಳ್ಳಲಸಾಧ್ಯವಾದ ಸೌಕರ್ಯಗಳನ್ನು ಅಮೆರಿಕದ ಸಾಮಾನ್ಯಪ್ರಜೆಗಳು ಸುಲಭವಾಗಿ ಪಡೆ ದಿದ್ದಾರೆ ! ಅಮೆರಿಕನ್ನರು ಯಂತ್ರಸಹಾಯವಿಲ್ಲದೆ ಜೀವನ ಸಾಗಲೆಂಬಷ್ಟು ಈ ಯಂತ್ರಯುಗಕ್ಕೆ ತವ್ಮ ಜೀವನವನ್ನು ಹೊಂದಿಸಿಕೊಂಡಿದ್ದಾರೆ ಆದರೂ ಒಂದು ದೃಷ್ಟಿಯಿಂದ ನೋಡಿದರೆ ಈ ಅಮೆರಿಕನ್ನರು ಯಾವುದೋ ಅರ್ಥವಾಗದ ಅತು ರಕ್ಕೆ, ಗೊಂದಲಕ್ಕೆ ಸಿಕ್ಕಿಕೊಂಡಿದ್ದಾರೆಂಬಂತೆ ಕಾಣುತ್ತದೆ ಇಷ್ಟು ಸೌಲಭ್ಯಗಳಿದ್ದೂ ಜನರಲ್ಲಿ ಅತೃಪ್ತಿ ಅಶಾಂತತೆ ಎದ್ದುಕಾಣುತ್ತದೆ ನೋಡಿ ಮತ್ತು ಕೇಳಿದವರಿಗೆ ಯಂತ್ರಸ್ವಾಬಲ್ಯದ ಗೊಂದಲ ದಲ್ಲಿ ಈ ದೇಶದಲ್ಲಿ ಗೃಹಕೈಗಾರಿಕೆಗೂ ಅವಕಾಶ ವಿದೆಯೆ ? ಎಂದು ಆಶ್ಚರ್ಯವಾಗುತ್ತದೆ ಅಮೆರಿ ಕನ್ನರು ಕೈಯಲ್ಲಿ ತಯಾರಾದ ವಸ್ತುವನ್ನು ನೋಡಿ ದರೇ ಆಶ್ಚರ್ಯಪಡುತ್ತಾರೆ ಅಲ್ಲದೆ ಅದಕ್ಕೆ ಅಧಿಕ ಬೆಲೆಕೊಟ್ಟು ಕೊಳ್ಳುತಾರೆ ಅಂತಹ ವಸ್ತು ವನ್ನು ಬೆಲೆಯಾದ ಮತ್ತು ಪ್ರೀತಿಯ ವಸ್ತುವನ್ನು ಕಾಪಾಡುವಂತೆ ಜಾಗರೂಕತೆಯಿಂದ ನೋಡಿ ಕೊಳ್ಳುತ್ತಾರೆ ಇದಲ್ಲವೆ ಯಂತ್ರದಿಂದ ತಯಾ ರಾದ ವಸ್ತ್ರವಿನಲ್ಲಿ ಕಲಾಕೌಶಲಕ್ಕೆ ಅವಕಾಶ ವಿಲ್ಲವೆಂದು ಮನಗಂಡಿದ್ದಾರೆ

ಹೈದರಾಬಾದಿನ ಅಡಳಿತದಲ್ಲಿ ಪುನರ್ವ್ಯವಸ್ಥೆ

ಮಿಲಿಟರಿ ಗವರ್ನರಾದ ಮೇ|| ಜ|| ಚೌಧರಿಯವರು ನಿಜಾಮರು ನಿಯಮಿಸಿದ್ದ ಸಲಾಹಸಮಿತಿಯನ್ನು ರದ್ದು ಮಾಡಿ ಮಿಲಿಟರಿ ಮಂತ್ರಿಮಂಡಲ 'ವನ್ನು ಸ್ಥಾಪಿಸು ದ್ದಾರೆಂದು ತಿಳಿದುಬಂದಿದೆ ಈ ಅಡಳಿತ ಮಂಡಲಿಯಲ್ಲಿ ಮೇ|| ಜ| ಚೌಧರಿ ಶ್ರೀಗಳಾದ ಡಿ ಎಸ್ ಭಕ್ಷಿ, ಡಿ ಆರ್ ಪ್ರಧಾನ್ ನವಾಬ್ ಜೈ ಯಾರ್ ಜಂಗ್, ರಾಜಪ್ರೋಂಡ್ ರಾಜ ಇವರುಗಳಿರುವರು

ಪೋರ್ಟ್‌ಫೋಲಿಯೋಗಳ ಹಂಚಿಕೆ

ಈ ನೂತನ ವ್ಯವಸ್ಥೆಯ ಪ್ರಕಾರ ಮೇ|| ಜ|| ಚೌಧರಿ ಯವರು ಸೈನ್ಯ ಪೋಲೀಸ್ ಕಮ್ಯೂನಿಕೇಷನ್ಸ್ ಇಲಾಖೆಗಳನ್ನು ವಹಿಸಿಕೊಂಡಿದ್ದಾರೆ ಮಿ|| ಡಿ ಎಸ್ ಭಕ್ಷಿಯವರಿಗೆ ಪೊಲಿಟಿಕಲ್ ಸರ್ವಿಸಸ್, ಒಳಾಡಳಿತ (ಪೋಲೀಸ್ ವಿನಾ) ಗಳನ್ನು ವಹಿಸಲಾಗಿದೆ ಶ್ರೀ ಡಿ ಆರ್ ಪ್ರಧಾರವರು ಹಣಕಾಸು, ರಿವಿನ್ಯೂ, ಕಾಮರ್ಸ್, ಕೈಗಾರಿಕೆ ಇಲಾಖೆಗಳನ್ನು ನೋಡಿಕೊಳ್ಳುವರು ಪಬ್ಲಿಕ್ ವರ್ಕ್ಸ್, ಗಾಮಾಭಿವೃದ್ಧಿ ಲೇಬರ್ ಇಲಾಖೆಗಳನ್ನು ನವಾಬ್ ಜೈನ್‌ಯಾರ್ ಜಂಗರವರಿಗೆ ಕೊಡಲಾಗಿದೆ ರಾಜಪ್ರೋಂಡ್ ರಾಜರವರು ವಿದ್ಯಾಖಾತೆ, ಕಸ್ಟಮ್ಸ್, ಎಕ್ಸೈಸ್, ನಿರಾಶ್ರಿತರ ಪುನರ್ವಸತಿ ಮುಂತಾದ ಖಾಖೆ ಗಳನ್ನು ವಹಿಸಿಕೊಂಡಿದ್ದಾರೆ

ಸೆಕ್ರೆಟೇರಿಯೆಟ್ಟಿನಲ್ಲಿ ಸುಧಾರಣೆಗಳು

ಚೀಫ್ ಸಿವಿಲ್ ಅಡ್ಮಿನಿಸ್ಟ್ರೇಟರಾದ ಮಿ|| ಡಿ ಎಸ್ ಭಕ್ಷಿಯವರು ಸೆಕ್ರೆಟೇರಿಯೆಟ್ಟನ್ನು ಪುನರ್ವ್ಯವಸ್ಥೆಗೊಳಿಸಿ ದ್ದಾರೆ

ವಿದೇಶಾಂಗ ತಾಜೆ ರದ್ದಾಯಿತು

ವಿದೇಶಾಂಗ ಇಲಾಖೆ ಮತ್ತು ಪ್ಲಾನಿಂಗ್ ಇಲಾಖೆ ಗಳನ್ನು ರದ್ದುಗೊಳಿಸಲಾಗಿದೆ ಇವುಗಳಿಗೆ ಪ್ರತ್ಯೇಕ ವಾಗಿದ್ದ ಪ್ರಕಟಣ ತಾಜೆ ಮತ್ತು ಪ್ರಾಜೆಕ್ಟಿಂಗ್ ಇಲಾಖೆಗಳನ್ನು ಒಳಾಡಳಿತ ಇಲಾಖೆಗೆ ಸೇರಿಸಲಾಗಿದೆ.

ಹೊಸದಾಗಿ ರೇಜರ್ ಮತ್ತು ಕಮ್ಯೂನಿಕೇಷನ್ಸ್ ಇಲಾಖೆಗಳನ್ನು ನಿರ್ಮಿಸಲಾಗಿದೆ.

ಪೋಲೀಸ್ ಡೈರೆಕ್ಟರ್ ಜನರಲ್ಲರಿಗೆ ಶಿಕ್ಷೆ

ಹೈದರಾಬಾದಿನ ಹಳೇ ಸರ್ಕಾರದಲ್ಲಿ ಪೋಲೀಸ್ ಇಲಾಖೆಯ ಡೈರೆಕ್ಟರ್ ಜನರಲ್‌ರವರಾಗಿದ್ದ ನವಾಬ್ ದೀರ್ ಯಾರ್ ಜಂಗ್‌ರವರನ್ನು ಸಸ್ಪೆಂಡ್ ಮಾಡಲಾ ಗಿದೆ ಅವರು ಅಧಿಕಾರ ಬಿಟ್ಟುಕೊಟ್ಟರು

ಕುಂಭಕರ್ಣ ನಿದ್ರೆಯ ಕರಡಿ

ಪರಂಗಿ ಸೀಮೆಯ ಚಳಗಾಲವನ್ನು ಕಡೆಯುವುದೆ ಕ್ಯಾಗುವುದಿಲ್ಲ ನೀರೆಲ್ಲ ಗಡ್ಡೆಕಟ್ಟಿಕೊಂಡುಬಿಟ್ಟಿರುತ್ತವೆ ನೆಲಿಗಳು ಹೆಪ್ಪುಕಟ್ಟಿಕೊಂಡಿರುತ್ತವೆ '

ಇಂಥ ಕಾಲದಲ್ಲಿ ನನುಷ್ಯರು ಓಡಾಡಲೇ ಬೇಕಾ ಇಲ್ಲದಿದ್ದರೆ ಕೆಲಸ ಸಾಗದು ಆದರೆ ಪ್ರಾಣಿಗಳು ಹಾಗಲ್ಲ ಚೆನ್ನಾಗಿ ನಿದ್ದೆಮಾಡಿಬಿಡುತ್ತವೆ

ರಷ್ಯಾ ದೇಶದಲ್ಲಿ ಒಂದು ಬಗೆಯ ಕರಿಯ ಕರಡಿ ಯುಂಟು ಚಳಗಾಲದಲ್ಲಿ ಆ ಕರಡಿಯು ನಾಲ್ಕುತಿಂಗಳ ಕಾಲ ಒಂದೇ ಸಮನೆ ನಿದ್ದೆಮಾಡುತ್ತದೆ ಅದಕ್ಕೆ ಎಚ್ಚರವೇ ಆಗುವುದಿಲ್ಲ

ಹೆಣ್ಣುಕರಡಿಯು ಈ ರೀತಿ ಕುಂಭಕರ್ಣ ನಿದ್ರೆ ಮಾಡುತ್ತಿರುವಾಗಲೇ ಮರಿಗಳು ಹುಟ್ಟುತ್ತವೆ ಸಣ್ಣ ಗಳು ತಾಯಿಯ ಮೊಲೆಯನ್ನು ಕಂಡುಹಿಡಿದು ಆಚೆ ವಿಲ್ಲದೆ ಹಾಲು ಕುಡಿಯುತ್ತವೆ ಮರಿಗಳು ಹುಟ್ಟಿ ಎಂಟು ಅವಚೆಕೊಂಡು ಹಾಲನ್ನು ಕುಡಿಯುತ್ತಿದ್ದರೂ ತಾಯಿ ಅದರ ಅರಿವೇ ಇರುವುದಿಲ್ಲ ತಾಯಿಯು ಚಳಗಾ ಕಳೆದು ಬೇಸಿಗೆಯಲ್ಲಿ ಏಳುವ ವೇಳೆಗೆ ಮರಿಗಳಾಗಲೆ ಬಲಿತುಕೊಂಡುಬಿಟ್ಟಿರುತ್ತವೆ ತಾಯಿಯ ಬೆನ್ನಮೇ ಹತ್ತುವುದು, ಧುಮುಕುವುದು, ಓಡಾಡುವುದು, ಉರುಳಾ ವುದು ಮುಂತಾದವನ್ನೆಲ್ಲ ಕಲಿತಿರುತ್ತವೆ ಅದು ಕ ಯುವುದಕ್ಕೆ ಇನ್ನೂ ಬೇಕಾದಷ್ಟಿರುತ್ತವೆ ಅವುಗಳ ತಾಯಿ ಹೇಳಿಕೊಡುತ್ತದೆ

ಉದಾರ ದಾನ

ಅರಸೀಕೆರೆ ತಾ|| ತುಂಬಾಪುರ ಗ್ರಾಮದಲ್ಲಿ ವಾಸವಾಗಿರುವ ದೊಡ್ಡನಂಜೇಗೌಡರ ಮಕ್ಕಳು ಸಿದ್ದಲಿಂ ಗೌಡರು ಗುರುಭಕ್ತ ತಿಪಾಮಣಿಗೌಡರಿದ್ದು ದಾನಶೂ ರಾಗಿರುವರು ಇವರಿಗೆ ಒಸಪ್ಪ ಎಂಬ ಪುತ್ರರಿರುವರು ಇವರಲ್ಲಿ ದೊಡ್ಡವರಾದ ತಂದೆಯವರಂತೆ ಒಳ್ಳೆ ಉದಾರಿಗಳಾಗಿ ಪಿತೃಭಕ್ತ, ದೈವಭಕ್ತ, ಗುರುಭಕ್ತಿಪರಿಪೂರ್ಣರಾಗಿರುವರು ಈ ಗ್ರಾಮದಲ್ಲಿ ಚಿಕ್ಕಮಕ್ಕಳಿಗೆ ಸ್ಕೂಲು ಇಲ್ಲದೆ ಬಹಳ ತೊಂದರೆಯಾಗಿತ್ತು ಇದನ್ನು ಕಂಡು ಶ್ರೀ ಸಿದ್ದಲಿಂಗೌಡರು ೪೦೦೦ ರೂ ಗಳನ್ನು ಖರ್ಚುಮಾಡಿ ಧರ್ಮಾರ್ಥವಾಗಿ ಸ್ಕೂಲನ್ನು ಕಟ್ಟಿಸಿ ವಿದ್ಯಾ ಇಲಾಖೆಗೆ ಸೇ ತಾ|| ೩೫ ಳನೇ ದಿನಕ್ಕೆ ಹಾಸನ ಡಿ|| ವಿದ್ಯಾಧಿಕಾರಿ ಗುಳಾದ ಶ್ರೀ ಟಿ. ಎನ್ ಕೃಷ್ಣರಾವ್ ಎಂ ಎ ಇವ ಅಧ್ಯಕ್ಷತೆಯಲ್ಲಿ ಪ್ರಾಥಮಿಕ ಪಾಠಶಾಲೆಯ ಪ್ರಾರಂಭೋ ತ್ಸವವನ್ನು ನೆರವೇರಿಸಿ, ನಮ್ಮ ಮಹಾಪ್ರಭುಗಳಾ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರರ ಮತ್ತು ಮಹಾತ್ಮಾ ಗಾಂಧೀಜಿಯವರ ಭಾವಚಿತ್ರ ಗಳನ್ನು ಅನಾವರಣ ಮಾಡಿಸಿದರು ಈ ಉತ್ಸವದ ಅರಸೀಕೆರೆ ತಾ|| ರೇಂಜ್ ಇನ್ಸ್‌ಪೆಕ್ಟರವರು, ಅರಸೀಕೆ ಮಿಡಲ್‌ಸ್ಕೂಲ್ ಹೆಡ್‌ಮಾಸ್ಟರವರು, ರೆವಿನ್ಯೂ ಇ ಪೆಕ್ಟರವರು, ಶಾನುಭೋಗರು, ಅರಸೀಕೆರೆ ವರ್ತಕ ಆಗಮಿಸಿದ್ದರಲ್ಲದೆ ಸುತ್ತಮುತ್ತ ಗ್ರಾಮಗಳಿಂದ ಸ ರಾರು ಜನರು ಬಂದಿದ್ದರು ಇವರುಗಳಿಗೆಲ್ಲಾ ಉ ಸಂತರ್ಪಣೆಯನ್ನು ಉತ್ಸವ ರೀತಿಯಲ್ಲಿ ವರ್ಷಾಶನ ಇದಕ್ಕಾಗಿ ೧೦೦೦ ರೂ ಗಳ ಮೌಲ್ಯವುಳ್ಳ ಪೆಕ್ಕಮ ದರು ಈ ಉತ್ಸವ ಕಾರ್ಯವನ್ನು ನೇ|| ಮಕ್ಕಳ ಪ ಬಸವಯ್ಯನವರು, ಪಬೇಲ್ ಚನ್ನಬಸಪ್ಪಶೆಟ್ಟ ಮತ್ತು ಗ್ರಾಮ ಪ್ರಮುಖರುಗಳು ಬಹಳ ಶ್ರದ್ಧೆಯಿ ನೆರವೇರಿಸಿದರು ದಾನಶೂರರಾದ ಶ್ರೀ ಸಿದ್ದಲಿಂ ಗೌಡರಂಗೂ ಇವರ ಪುತ್ರರಾದ ಬಸಪ್ಪನವರಿಗೂ ಶ್ರೀ ಪೆಕ್ಕರರು ಆಯುರಾರೋಗ್ಯ ಭಾಗ್ಯಾದಿಗಳನ್ನು ಅ ಹಿಸರೆಂದು ಪ್ರಾರ್ಥಿಸುತ್ತೇನೆ.

ಟಿ. ಎಂ. ಪಂಚು
ತಿಪಟೂರು

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road Mysore.

REGISTERED No M 2266 ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಕರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ವರ್ಷದವರಿಗೆ ೩ ರೂ ೪ ಆಣೆ ಪರಸ್ಥಳದವರಿಗೆ ೩ ರೂ ೮ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ನವೆಂಬರ್ ೧೯೪೮ [ಸಂಚಿಕೆ ೨೫

ೀಜಗದ್ಗುರುಗಳ ದಸರಾಮಹೋತ್ಸವ, ತಪಟೂರು

ೀಮದ್ರಂಭಾಪುರೀ ಜಗದ್ಗುರುಗಳ ದಸರಾಮಹೋ
ಯ ಈ ವರ್ಷ ತಿಪಟೂರು ನಗರದಲ್ಲಿ ಹತ್ತು ದಿನಗಳ
ಮಹಾವಿದ್ಯಾಭಿಷೇಯಿಂದ ನಡೆಯಿತು ತಾ॥ ೩ ರಲ್ಲಿ
ಳೂರು ಜಾಮರಾಜೇಂದ್ರ ಸಂಸ್ಕೃತಕಾಲೇಜಿನ
ಪಾಲರಾದ ಧರಣೇಂದ್ರಯ್ಯನವರು " ಗುರುಪೀಠ
ಜನಪೀಠವೂ ಎಂಬ ವಿಷಯದ ಮೇಲೆ
ಣಮಾಡಿದರು ತಾ॥ ೪ ರಲ್ಲಿ ರಾಮಸ್ವಾಮಿ
ುರವರಿಂದ " ಶಿವಲೀಲಾ ಸುಗುಣಾಮಣಿ ಎಂಬ
ನವೂ, ತಾ॥ ೫ ರಲ್ಲಿ ಕೇರ್ತನಕೇಸರಿ ಶ್ರೀಪ್ಪೆಮ್ಮ
ಾಸ್ತ್ರಿಗಳಿಂದ " ಚಂದನಾದೇವಿ ' ಕೇರ್ತನವೂ,
೬ ರಲ್ಲಿ ಶ್ರೀಗುಬ್ಬಿ ವೀರಣ್ಣಶಾಸ್ತ್ರಿಗಳಿಂದ
ಾಮ್ಮಾದೇವಿ" ಕೇರ್ತನವೂ, ತಾ॥ ೭ರಲ್ಲಿ ಶ್ರೀ ರೇಣು
ಧ್ಯರಿಂದ " ಇಂದ್ರ ಕೇಲಾಸೋದ " ಕೇರ್ತನವೂ,
ಲ ರಲ್ಲಿ ಶ್ರೀ ರೇಣುಕಾರಾಧ್ಯರಿಂದ " ರಾಜಪೀಠರ
ಸ " ಎಂಬ ಕೇರ್ತನವೂ, ತಾ॥ ೯ ರಲ್ಲಿ ಶ್ರೀ ಎಂ
ವಲಿಂಗಾರಾಧ್ಯರಿಂದ ನೀರಕ್ಷ್ಯವಮತಖಾಶಸ್ತ್ರ
ಭಾಷಣವೂ, ಆಸ್ಥಾನ ವಿದ್ವಾನ್ ಶ್ರೀನಂಜುಂಡಾ
ಸ್ತ್ರಿಂದ " ಶಿವಾದ್ವೈತ ಎಂಬ ಬಗ್ಗೆ ಭಾಷಣವೂ
೧೦ ರಲ್ಲಿ ದೊಡ್ಡ ಒಬ್ಬಾಪುರದ ಶ್ರೀಚಿನವೀರಭದ್ರಶಾಸ್ತ್ರಿ
ದ " ಚಿರಭಿಲಿಯಾರ್ ಅಥವಾ ಪಾವನ
ಕಲ್ಯಾಣ " ಎಂಬ ಕೇರ್ತನವೂ ತಾ॥ ೧೧ ರಲ್ಲಿ
ಲ್ಲುಬಿದರೆ ಆರಾಧ್ಯಮಠದ ಶ್ರೀವಿರೂಪಾಕ್ಷಶಾಸ್ತ್ರಿ
ದ " ಭಕ್ತಿಯೋಗ ' ಶ್ರೀ ಪಿ ಆರ್ ಹಿರೇ
ನಕೇರಿ ಹುಬ್ಳಳ್ಳಿ ಇವರಿಂದ ' ಪಂಚಪೀಠರಿಗಳ
ಶ್ವ ' ಎಂಬ ಭಾಷಣಗಳೂ ನಡೆದವು ಸು॥ ರಾ॥
ಜ್ ವಿಣ್ಣನವರು ಪೋಲೀಸ್ ಸರ್ ಇನ್ಸ್ಪೆ
ಚಿಕ್ಕನಾಯಕನಹಳ್ಳಿ ಇವರು " ಕಬ್ಬಿಣ ಸರಪಳಿ
ಯುವುದು, ಭರ್ತೀಗಾಡಿಯನ್ನು ಎದೆಯೇರಿ
ಕೊಳ್ಳುವುದು " ಇತ್ಯಾದಿ ಸಾಹಸಕಾರ್ಯಗಳನ್ನು
ತೋರಿಸಿದರು ಅಜ್ಜಂಪುರಮಾಸ್ತರ ಶ್ರೀಮರುಳ
ಯ್ಯನವರ ಪುತ್ರಿಯರಾದ ಪುಷ್ಪಾಂಬಿಕಾ ಮತ್ತು
ನಂದಕುಮಾರಿ ಇವರ ಇಂಪಾದ ಸಂಗೀತವು
ತಾ॥ ೧೨ ಪ್ರಾತಃಕಾಲ ಶ್ರೀಜಗದ್ಗುರು
ಕಮೂರ್ತಿಗಳೂ, ವೀರೇಶಪೀಠ ವಿಕಾಪಡಲುದ್ರಾ
ಸಹಸ್ರವಿಬಿಲ್ವಾರ್ಚನೆ, ಶ್ರೀಭದ್ರಕಾಳೀದೇವಿಗೆ
ವರ್ಚನೆ ಜರುಗಿ ಆನ್ನಸಂತರ್ಪಣೆಯಾ
ಮಧ್ಯಾಹ್ನ ೩ ಘಂಟೆಗೆ ಶ್ರೀಗಳವರ ಸುವರ್ಣ
ಂಪೋಲಿಕೋತ್ಸವವು ವನ್ನಿನ ಪ್ರಮುಖಬೀದಿ
ಂ ೫॥ ಸಾವಿರ ಜನಸ್ತೋಮದೊಡನೆ ಸೆಕ
ಅಮೇಲೆ ಶ್ರೀಜಗದ್ಗುರುಗಳು ಸಿಂಹಾಸನಾ
ವನ್ನು ಮಾಡಿದರು. ವಿದ್ಯಾಧಿಗಳಿಂದ ವೇದ
ಮೇಲೆ ಮಂ॥ ತರೀಕ್ಷರಶಾಸ್ತ್ರಿಗಳಿಂದ ಪ್ರಾಸ್ತಾ
ನವಾಯಿತು. ಸಂಸ್ಥಾಪದ ಪದ್ಧತಿಯಂತೆ
ಗಳು ಶಾಲೆಯಷ್ಟು ನಮಸ್ಕರಿಸಿದರು. ಆಗ್ಗೆ
ತಿ ಶಕ್ಷೇತ್ರದ ಕಬ್ಬಪ್ಪದೊರೆಗಳು ಒಂದು
ಸಾವಿರದ ಒಂದು ರೂಪಾಯಿಯನ್ನು ಸಮರ್ಪಿಸಿದರು
ಶ್ರೀಗಳವರು " ವಿಶ್ವಶಾಂತಿ ಎಂಬ ವಿಷಯದಲ್ಲಿ
ಅಮೂಲ್ಯಭಾಷಣಮಾಡಿದರು ಬಳಿಕ ಸಭಾಸಜ್ಜನ
ವಾಯಿತು ತಾ॥ ೧೩ ರಲ್ಲಿ ಪಂಡಿತರಿಗೂ, ಕೇರ್ತನ
ಕಾರರಿಗೂ ಸಂಗೀತಕಲಾವಿದರಿಗೂ ಗುರುಸೇವೆಯನ್ನು
ಮಾಡಿದವರಿಗೂ ಪ್ರಸ್ತುತಿಗಳು ಕೊಡಲ್ಪಟ್ಟವು ಸ್ವಾಗತ
ಕಮಿಟಿಯವರು ಒಂದಜನಗಳ ಆದರಾಭಿಧ್ಯವನ್ನು ಬಹು
ಶ್ರದ್ಧಾಭಕ್ತಿಗಳಿಂದ ಮಾಡಿದರು ಜಗದಾಚಾರ್ಯರು ಸವ
ರಿಗೂ ಮಂಗಳವನ್ನೀಯಲು ಉತ್ಸವ ಸಮಾಪ್ತಿಯಾಯಿತು

ಸನಾತನಧರ್ಮಪ್ರಚೋದಕರ ಸರ್ಕೀಟಿನ ಶುಭಾಗಮನ, ಕಳಸ

ಧಾರವಾಡ ಡಿ॥ ಸಿ॥ ಎಂ ತಾ॥ ಕಳಸ ಗ್ರಾಮದ ಸನಾತನ ಧರ್ಮಪ್ರಚೋದಕರಾದ ಶ್ರೀ ಚಿಕ್ಕಮಣ್ಣಿಯರು ಪಟ್ಟದಸ್ವಾಮಿಗಳವರು ಆಗಮಿಸಿದರು ಕಾಳೀಕಾ ದೇವಿಯ ಮಂದಿರದಲ್ಲಿ ತಾ॥ ೯-೧೧-೪೮ ನೇ ದಿನದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ನೆರೆದೀರಿತು ಸಭೆಗೆ ಶ್ರೀಪುರುಷರು ವಿಶೇಷವಾಗಿ ಆಗಮಿಸಿದ್ದರು ಮೊದಲು ವೇ॥ ಷಡಕ್ಷರಯ್ಯನವರು ನುಂಜುಸ್ತವದಿಂದ ಶ್ರೀ ಜಗದ್ಗುರು ಪಂಚಾಚಾರ್ಯರ ಸ್ತೋತ್ರಗಳನ್ನು ಹಾಡಿದರು ಆಮೇಲೆ ಸ್ವಾಮಿಗಳು ಶ್ರೀ ಜಗದ್ಗುರು ರೇಣುಕಾಚಾರ್ಯರು ಮಾಡಿದ ಅನಂತ ಲೀಲೆಗಳನ್ನು ಕಥಾರೂಪವಾಗಿ ಬೋಧಿಸುತ್ತಾ ಸರ್ವರನ್ನೂ ಸಂತೋಷಪಡಿಸಿದರು ಮರುದಿವಸ ಪುನ ಸಭೆಯು ನಡೆಯಿತು ಜನರು ವಿಶೇಷವಾಗಿ ಬಂದಿದ್ದರು ಆಗ್ಗೆ ಸ್ವಾಮಿಗಳವರು ತಾಹಿನಿದ್ರೆಯಲ್ಲಿದ್ದ ಗುರುವರ್ಗದವರನ್ನು ಎಚ್ಚರಗೊಳಿಸಿ ಪಂಚಪೀಠಿಗಳನ್ನು ಮುಂದಕ್ಕೆ ತೆಂದು ಪಂಚಾಚಾರ್ಯರ ಪ್ರಭಾವವನ್ನು ಪ್ರಪಂಚದಲ್ಲಿ ವ್ಯಾಪಿಸುವಂತೆ ಮಾಡಿದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರ ಉಪಕಾರವು ಸಮಾಜದ ನೇ ವಿಶೇಷವಾಗಿರುವುದೆಂದೂ ಅದರಲ್ಲಿಯೂ ಅವರ ಉಪಕಾರವು ಗುರುವರ್ಗದ ಮೇಲೆ ವಿಶೇಷವಾಗಿ ಆಗಿರು ವುದರಿಂದ ಗುರುವಂಶೀಯರೆಲ್ಲರೂ ಅವರ ಉಪಕಾರ ವನ್ನು ಜನ್ಮಜನ್ಮಾಂತರವಲ್ಲಿಯೂ ಸ್ಮರಿಸಬೇಕಾಗಿದೆ ಯೆಂದೂ, ಸ್ಮರಿಸದೆ ಇದ್ದರೆ ಕೃತಘ್ನರಾಗುವೆವೆಂದೂ, ಪಂಡಿತರು ಮೊದಲು ಅನೇಕ ಗ್ರಾಮಗಳಲ್ಲಿ ಧಾರ್ಮಿಕ ಪರಿಷತ್ತುಗಳನ್ನು ಕೂಡಿಸಿ ಗುರುವರ್ಗದವರನ್ನು ಜಾಗೃತಗೊಳಿಸಿದೆಂದೂ, ಅನೇಕ ಮತಗ್ರಂಥಗಳನ್ನು ಮುದ್ರಿಸಿ ಸಮಾಜಕ್ಕೆ ಮಹೋಪಕಾರಮಾಡಿದರೆಂದೂ, ಸರ್ವರೂ ಆವರು ತೋರಿಸಿರುವ ಮಾರ್ಗದಲ್ಲಿಯೇ ಹೋಗಬೇಕೆಂದೂ ಒಳ್ಳೆ ಪರಿಣಾಮವಾಗುವಂತೆ ಧಾರವಾಡಮಾಡಿದರು ಸದರಿ ಸ್ವಾಮಿಗಳವರು ಈ ಗ್ರಾಮದಲ್ಲಿರುವ ಅನೇಕರ ಮನೆಯಲ್ಲಿ ಜಗದಾಚಾರ್ಯರ ಧಾರವಾಡಗಳು ವಿರಾಜಿಸುವಂತೆ ಮಾಡಿರುವುದು ಸ್ತೋತ್ರಾರ್ಹವಾಗಿದೆ. ಮಹಾತಪಸ್ವೀ! ತೆಕ್ಕಲಿ ಹುಣ್ಣಿರು ಸ್ವಾಮಿಗಳವರು ಈ ಪ್ರಾಂತದಲ್ಲಿ ಆಗುಮಿ ವನಸಿಗ್ಗೆಲಿ ಗ್ರಾನಾಳ, ಸಂಕಲಿಪುರ, ಕಳಸ ಮೊದಲಾದ ಗ್ರಾಮಗಳಲ್ಲಿ ಸಭೆಗಳನ್ನು ಮಾಡಿ ಭಕ್ತಸೋಹೇಶ್ವರ ರನ್ನು ಸ್ಥಾಪಿಸುತ್ತ ಅವರಲ್ಲಿ ಗುರುಭಕ್ತಿಯನ್ನು ನೆಲೆ ಗೊಳಿಸುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ

ಓರ್ವ ಗುರುಭಕ್ತ

ಉಜ್ಜಯಿನೀ ಜಗದ್ಗುರುಗಳವರು ಕಾತಿಗೆ ದಯಮಾಡಿಸುವ ಪ್ರೋಗ್ರಾಂ

೪-೧೧-೪೮ } ೫-೧೧-೪೮ } ೬ ೧೧-೪೮ } ಸೊಲ್ಲಾಪುರ ಮುಕ್ಕಾಂ

೭-೧೧-೪೮ } ೮-೧೧-೪೮ } ಮುಂಬಯಿ ಮುಕ್ಕಾಂ

೯ ೧೧ ೪೮ } ೧೦ ೧೧ ೪೮ } ಜಳಗಾಂವ ಮುಕ್ಕಾಂ

೧೧-೧೧-೪೮ ಜಬ್ಬಲಪುರ ಮುಕ್ಕಾಂ

೧೨-೧೧-೪೮— ಶ್ರೀಮಿತ್ರ ಕಾಶೀ

ಎಚ್ ಎಂ ಸಿದ್ಧಮರಿಸ್ವಾಮಿ
ಏಜೆಂಟ್,
ಶ್ರೀಜಗದ್ಗುರು ಉಜ್ಜಯಿನೀ ಶಂಹ್ವಾನಮತ

ಸ್ಪೆಷಲ್ ಟ್ರೇನು

೩೦ ಡಿ. ೧೩೫ ರೂ.

ತಾ॥ ೬ -೧೧—೪೮ರಲ್ಲಿ ಕಾರ್ತೀಕ ಕುದ್ಯ ಪಂಚಮಿ ಶನಿವಾರ ದಿವಸ ಹುಬ್ಬಳ್ಳಿ ಯಿಂದ ಒಳ್ಳೆ ವೈಭವದೊ ಡನೆ ಹೊರಡುವದು

ಮುಂಬಯಿ, ಉಜ್ಜಯಿನಿ, ಪ್ರಯಾಗ, ಕಾಶಿ, ಗಯಾ, ಅಯೋಧ್ಯೆ, ಹರಿದ್ವಾರ, ದಿಲ್ಲಿ, ಆಗ್ರಾ ಮುಂತಾದ ಪ್ರಸಿದ್ಧ ೫೦ ಕ್ಷೇತ್ರಗಳಿಗಾಗಿ ಮತ್ತು ಶ್ರೀಜಗದ್ಗುರು ಕಾಶೀವಿಶ್ವಾರಾಧ್ಯಪೀಠ (ಜಂಗಮವಾಡಿಮಠ) ದ ಪಟ್ಟಾಭಿಷೇಕಮಹೋತ್ಸವಕ್ಕಾಗಿ ಹೊರಡು ನದು ಶ್ರೀಹೂಲಿ ಮುಂತಾದ ಸ್ವಾಮಿಗಳವರು ಈ ಮಹೋತ್ಸವಕ್ಕೆ ಬರುವರು. ಟಿಕೇಟುಗಳು ಸ್ವಲ್ಪೇ ಉಳಿದಿವೆ. ಬರತಕ್ಕವರು ತಾರೀಖ ಮೂಲಕ ಟಿಕೇಟಿನ ಜಾಹಿರಾತನ್ನು ಕಳಿಸಬೇಕು. ವಿಶೇಷ ಮಾಹಿತಿಯ ಜಾರೀ ರಿಗಾಗಿ ಈ ದಿವಸೇ ನಮಗೆ ಪತ್ರ ಬರೆಯಿರಿ.

ಶ್ರೀಗೌರೀಶಂಕರ ಶಂಪಶಿ, ಹುಬ್ಬಳ್ಳಿ.

ವೀರಶೈವ ವರ್ಣಾಶ್ರಮವಿವೇಕ

ನಮ್ಮಿಬ್ಬರಶಖಂಡದಲ್ಲಿ ಅತಿ ಪ್ರಾಚೀನವೆಂದು ಪರಿಗಣಿಸಲ್ಪಟ್ಟಿರುವ ಆಸ್ತಿಕಮತಗಳಲ್ಲಿ ವೀರಶೈವಮತವೂ ಒಂದಾಗಿದೆ. ಸಾಮಾನ್ಯವಾಗಿ ಹಿಂದೂಧರ್ಮದಲ್ಲಿ ವರ್ಣಾಶ್ರಮ ಧರ್ಮವೇ ಆದರೆ ವಿಶೇಷ ವಾಗಿ ವೀರಶೈವಮತ ವರ್ಣಾಶ್ರಮವಿಲ್ಲದ ಸುತವು ಅನ್ಯವಸ್ತುಶಮತವೆಪಿಸುವಪರಲ್ಲಿ ಸಂಶಯವಿಲ್ಲ.

ಸಾಮಾಜಿಕ ಸೈತಿಕಾದಿ ದೃಷ್ಟಿಯಿಂದಲೂ ವರ್ಣಾಶ್ರಮಪದ್ಧತಿಯ ವೈಶಿಷ್ಟ್ಯವನ್ನು ತಳೆದಿರುವದು ವರ್ಣಾಶ್ರಮವಿದಮ ಕ್ಷೇಮವೇ ನೀರೆವೆದುಬಿಟ್ಟು ಬೌದ್ಧಾದಿ ಮತಗಳೂ ಕೂಡ ಕಡೆಗೆ ಅವನ್ನು ಅನುಸರಿಸದೆ ವಿಡಲಿಲ್ಲ ವೇದಾದಿಗ್ರಂಥವನ್ನು ವಿಸ್ತರಿಸಿರುವ ಜೈನವಿದ್ವಾಂಸರು ಸಹ ಜೈನ್ಯಾಸ್ಥಾಪನ ಜೈನ ಧರ್ಮಿಯ ಜೈನೇತ್ಯಕ್ಕ ಇತ್ಯಾದಿನಾಮಗಳಿಂದ ಪ್ರಸಿದ್ಧರಾಗಿರುವರಾರ

ಆದ್ಯರಿಂದ ವೇದಾಮತಿಯು ವೈದಿಕರಿಗೆ ಧರ್ಮದೃಷ್ಟಿಯಿಂದಲೇ ವರ್ಣಾಶ್ರಮಗಳನ್ನು ವಿಭಾಗಗೊಳಿಸಿರುವದು ಎಮ್ಮ ಮೊದಲ್ವಮೋತಕವಿದಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಆಮಾರಾಣನೇ ನೆದಿಸೋತವಾದ ವೀರಶೈವಮತವನ್ನು ವರ್ಣಾಶ್ರವಿರವಿಭಾಗವು ಪರಿತಾಸಿಸುವದು ವೇಕಿಸ್ಪುಟ್ಟು ತದು ಬ್ರಾಹ್ಮಣರು ಕ್ಷತ್ರಿಯರು ವೈಶ್ಯರು ಶೂದ್ರಾದಿ ಗುರುಭಾವಾಭಿಗಳಿಂದ ಪ್ರಾಪ್ತವಾಗಿರುವದು ಹೊಸ ಮಾತ್ರವಲ್ಲ.

ಆದರೆ ವರ್ಣಾಶ್ರಮವಿವೇಕವಿದ್ದಲ್ಲಿ ಸಮಸ್ತ ಟಾಗುವುದಿಲ್ಲ ಕಾರಣವೆಂದರೆ ವರ್ಣಾಶ್ರಮಗಳು ಅನಾದಿ ಸುಸಿದ್ಧ ಸಂಪ್ರದಾಯವಾಗಿದ್ದು ಸಾಮಾನ್ಯವಾಗಿ ಯಾವ ಗಲೂ ಲೌಕಿಕದ ಕಡೆಗೆ ಹೊರಳಿದ ಸಮಾಜವನ್ನು ಅಧಾತ್ಮಕ್ಕೆ ತರಲು ಪ್ರಯತ್ನಿಸಿದಾಗ ಅಲ್ಲಿ ಸ್ವಲ್ಪ ಮಾತ್ರ ಕ್ರಾಂತಿಯನ್ನು ಕಿತ್ತೆ ಯಾ ಪರಿವರ್ತನೆಗಳನ್ನು ಬಿಗಿದ ಸಂಗತಿ ಇಂತಹ ಜ್ಞಾನದಿಂದ ಒಬ್ಬರಿಗೆ ಲಿಂಗ ಪ್ರಜ್ಞಾದಿಗಳೂ ಕೂಡ ಅತಿಕ್ಷುಲ್ಲಕವೆಂದು ಮಾಡುವದು ಅವಿವೇಕ ಕಾರಣವೇ ಶ್ರೇಷ್ಠ ಸಂಸ್ಕಾರವು—

ವರ್ಣಾಶ್ರಮಾಚಾರವಿಹೀನಮಾಪಾ ಪ್ರಯೋಗ ಸರ್ವಂ ನಿಷ್ಫಲಮಾಹುರಾರ್ಯಾಃ ।
ಆರಾಧ್ಯತೇ ಯೇನ ಪುಮಾನಪಾರಂ ಸರ್ವಾತ್ಮಕಂ ಶಂಭುಮಶೇಷ ರೂಪಂ ॥
(ಆ ಲಿಂ)

ವರ್ಣಾಶ್ರಮಧರ್ಮಗಳನ್ನು ಪರಿಪಾಲಿಸುವ ಮಾನವರು ಮಾತ್ರ ಪರಿವರ್ತನೆಯನ್ನು ಹೊಸ್ಪಿಯಿಂದ ಸೃಜಿಸುವರೆಂದು ದುರಾಚಾರಿಗಳು ಸಹಿಸುವದಿಲ್ಲವೆಂದೂ ಸ್ವಂದಪುರಾಣಾಂತರ್ಗತ ಶಂಕರಸಂಹಿತೆಯ ಪ್ರಭಾಷಿತಿಯು ದುದು ಮೇಲ್ಕಂಡ ಅಭಿಸ್ಪಾಯವನ್ನೇ ವ್ಯಕ್ತಗೊಳಿಸುವದು ಅವಶ್ಯಕಾರಣ ವೀರಶೈವರು ಚತುರ್ವರ್ಣ, ಚಿತರಾಶ್ರಮ, ಅಷ್ಟಾವಸ್ಥ ಉಪವರ್ಣ, ೧೦೧ ಕುಲಗಳನ್ನು ಅಲ್ಲಾಳಿಯಲಿಕ್ಕೆ ಎಂದಿಗೂ ಸಮರ್ಥರಾಗಲಾರರು

ತಥಾಸಿ ಸ್ಮಕುಲಾಚಾರಂ ಲೌಕಿಂ ವೈದಿಕಂ ತು ಯಾ ।
ಸಾನಧಾನೇನ ಕುರ್ವೀತ ಶಿವಾರ್ಚನವಿಧಿಯಾ ನರಃ ॥

ಯಾವತ್ ಸ್ಯಾದ್ಗುರ್ಕೋಲ್ಕೇ ಸಂಸಾರಮಿಥ್ಯತೇ ।
ತಾವತ್ ಕುರ್ಯಾತ್ ಕರ್ಮಾಣಿ ವೇದತಂತ್ರೋದಿತಾನಿ ಚ ॥

ಯಥಾ ವೃಕ್ಷಫಲಂ ವೃಕ್ಷಾತ್ಪತನಂ ಲಭತೇ ಸ್ವತಃ ।
ತಥಾ ಸರ್ವಾಣಿ ಕರ್ಮಾಣಿ ಪತಂತಿ ಶಿವಯೋಗಿನಃ ॥

ತಿವಿಧಕ್ಕರು ಪ್ರಾರಬ್ಧಪ್ರತಿಭಾಸದ ನಾಶಪರ್ಯಂತವೂ ವೈದಿಕ ಲೌಕಿಕರೂಪ ಸ್ವಕುಲಾಚಾರವನ್ನು ಸಾನಧಾನವಾಗಿ ಆಚರಿಸಲೇಬೇಕು ಆವಶ್ಯಕತೆಯಲ್ಲಿ ಗಿಡದಲ್ಲಿದ್ದ ಫಲವು ಗಿಡದ ಆಶ್ರಯವನ್ನೇ ಹೇಗೆ ಹೊಂದಬೇಕಾಗುವದೋ, ಹಾಗೆಯೇ ವೀರತ್ರಿವರಿಗೆ ವೇದಾಗಮೋಕ್ತ ವರ್ಣಾಶ್ರಮಧರ್ಮಗಳು ಪ್ರಾರಂಭ ಪ್ರತಿಭಾಸ ಪರ್ಯಂತವಿದ್ದು ಪರಿಪಕ್ವದೆಸೆಯಲ್ಲಿ ಗಿಡದಿಂದ ಹಣ್ಣು ತಾನೇ ಉದುರಿಬೀಳುವಂತೆ ಅವನ ಎಲ್ಲ ಕರ್ಮಗಳೂ ತಾವೇ ಬಿದ್ದು ಹೋಗುತ್ತವೆ ಇಂತಿಂಬ ಆಗಮವಚನಗಳು ಪ್ರಮಾಣವಾಗಿವೆ

ಆತ್ಮರಿಂದ ಶಿವದೀಕ್ಷಿತನಾದ ವೀರಶೈವಸಾಧಕನು ಸಾಧ್ಯರೂಪವಲಿಂಗಸಾಮರಸ್ಯವನ್ನು ಹೊಂದುವುದ ಕ್ಕಾಗಿ ವರ್ಣಾಶ್ರಮಬದ್ಧನಾಗಿಯೇ ಇರಬೇಕೆಂಬುದು ಸಿದ್ಧಾಂತವು ಭಗವತ್ಪಾದ ರೇಣುಕರು—

ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾ ಹಿ ದೃಢಾ ಸುತಾ ।
ಏತಾ ಶಿವೇನ ನದಿಷ್ಟಾ ಬ್ರಹ್ಮಣಾ ಕಥಿತಾ ಪರಾ ॥

ವರ್ಣಾಶ್ರಮಾದಿ ಧರ್ಮಗಳ ವ್ಯವಸ್ಥೆಯು ಎರಡು ಪ್ರಕಾರವಾಗಿದ್ದು ಒಂದು ಶಿವನಿಂದ ನಿರ್ದಿಷ್ಟವಾದ ದುವ ತ್ತೊಂದು ಬ್ರಹ್ಮನಿಂದ ನಿರ್ದಿಷ್ಟವಾದುದು ಶಿವಧರ್ಮಸ್ಥವಾದ ವರ್ಣಾಶ್ರಮಾಚಾರಗಳನ್ನು ವೀರತ್ರಿವರು ತಪ್ಪದೆ ಆಚರಿಸಬೇಕೆಂದು ಅಪ್ಪಣೆಕೊಡಿಸಿರುವರು ಆದುಕಾರಣ ವರ್ಣ ಜಾತಿ ಕುಲಾಚಾರಗಳನ್ನು ಯಾರೂ ಅಲ್ಲಗಳೆಯಲಿಕ್ಕೆ ಬರುವುದಿಲ್ಲ ಸಿದ್ಧಾಂತವು ಹೀಗಿದ್ದರೂ ಇದನ್ನು ಉಲ್ಲಂಘಿಸುವದು ಎಷ್ಟು ತಪ್ಪಾಗುವುದೆಂಬುದನ್ನು ಎಲ್ಲರೂ ಆರಿತು ವರ್ಣಾಶ್ರಮದರ್ಮದಂತೆ ನಡೆದು ಪರಶಿವನ ಕೃಪೆಗೆ ಪಾತ್ರರಾಗಿ ಕೈವಲ್ಯಸುಖವನ್ನು ಅನುಭವಿಸಬೇಕೆಂದಾಶಿಸುತ್ತೇನೆ

ವರ್ತಮಾನಸಂಗ್ರಹ

ಪಾಕಿಸ್ತಾನ್ ಸೈನಿಕರ ದೌರ್ಜನ್ಯ

ಆಸ್ಸಾಂ—ಪೂರ್ವ ಪಾಕಿಸ್ತಾನದ ಗದಿಯಲ್ಲಿ ಮಿಾರು ಮಾರ ಪ್ರತಿ ಭಾರತ ದಾಸಿಯನ್ನಿಗೆ ಸೇರಿದ ಬೆಸ್ಸರ ಬೆಲೆ ಸಂಸ್ಥಾನದ ನೈಸಿಕರು ಸ್ವತಃಜೆಯಾಗಿ ಗುಂಡು ಹಾಯಿಸಿದರೆ ಮೂ ಇದರಿಂದ ಆಗಿರುವ ಗಾಯಗೊಂಡಿ ವ್ಯಾರೆಂದೂ ನರಿದಿಯಾಗಿದೆ ಈ ಸಿಟಿಸಿಯು 'ಡಾಕೆ' ಎಂಬ ಪ್ರದೇಶದಲ್ಲಿ ಸಂಭವಿಸಿತು

'ಡಾಕೆ' ಪ್ರದೇಶದಲ್ಲಿ ಭಾರತದ ಅಂಚೆ ಮತ್ತು ತಂತಿ ಇಲಾಖೆಯವರು ಬೆಲ್ಗಾಮ್ ಲೈನುಗಳನ್ನು ಸರಿ ಪಡಿಸಿ ತ್ತಿದ್ದಾಗ ಪಾಕಿಸ್ತಾನದ ಯೋಧರು ಅವರ ಮೇಲೆ ಗುಂಡುಹಾರಿಸಿದರು ಗಾಯಗೊಂಡವರನ್ನು ಪಾಕಿಸ್ತಾನಕ್ಕೆ ತೆಗೆದುಕೊಂಡು ಹೋರಟುಹೋದರು 'ಡಾಕೆ' ಪ್ರದೇಶಕ್ಕೆ ಆಸ್ಸಾಂ ಗವರ್ನರು ಹೋಗಿ ಪರಿಶೀಲಿಸಿದ್ದಾರೆ

ಕಾಶ್ಮೀರವು ಪಾಕಿಸ್ತಾನದ ರಕ್ಷಣೆಗೆ ಅತಿ ಮುಖ್ಯವಾದುದು

"ಮೈಸೂರಿನಲ್ಲಿ ನಾವು ಇನ್ನೂ ನಮ್ಮ ವಾರಿಯನ್ನು ಹುಡುಕುತ್ತಿದ್ದೇನೆ ಆಡಳಿತಾಧಾರದಲ್ಲಿ ಅನುಭವವಿಲ್ಲದ ನಾಯಕರ ಕೈಯಲ್ಲಿ ಅಧಿಕಾರವಿದೆ ಪ್ರಜೆಗಳ ಸರ್ಕಾರವು ಯಶಸ್ವಿಯಾಗುವಂತೆ ಮಾಡಲು ಪ್ರಜೆಗಳ ಪಾಣಿ ಎಷ್ಟಿ ಸಿರುವ ಕಾಂಗ್ರೆಸ್ಸು ಒಹಳವಾಗಿ ಪ್ರಯತ್ನಪಡುತ್ತಿದೆ ಕೈಗಾರಿಕೆ, ವಾಣಿಜ್ಯ ಇನೇ ಮೊದಲಾದ ಎಲ್ಲ ಖಾಲು ಗಳಲ್ಲಿಯೂ, ಭದ್ರವಾದ ಆಡಳಿತ ರೀತಿನೀತಿಗಳನ್ನು ರೂಪುಗೊಳಿಸಿ ಜೀನನೆ ಅನುಷ್ಠಾನಕ್ಕೆ ತರಬೇಕೆಂದು ಅವಿರ ಮೈಸೂರು ಕಾಂಗ್ರೆಸ್ ಸಮಿತಿಯು ಮಂತ್ರಿ ಮಂಡಲಕ್ಕೆ ಒತ್ತಾಯವಡಿಸಿದೆ

ಆದರೆ ಇದುವರೆಗೂ ಆ ರೀತಿನೀತಿಗಳನ್ನು ಅನುಷ್ಠಾ ನಕ್ಕೆ ತಂದಿಲ್ಲ ಈ ಮುಬ್ಬೆ ಆಡಳಿತ ಖಾಲಿಗಳಲ್ಲಿರುವ ತಥಿಕಾರಿಗಳಲ್ಲಿಯೂ ನೌಕರರಲ್ಲಿಯೂ ಪರ್ಯಾಪ್ತ ಅನು ಕೂಲವಾಗಿಲ್ಲ ಉತ್ಪತ್ತಿ ಆಡಿಮೆಯಾಗುತ್ತಿದೆ ಪದಾರ್ಥ ಗಳ ಜೆಲೆ ಮಿತಿಮೀರಿ ಹೆಚ್ಚುತ್ತಿದೆ ಸ್ವಾತಂತ್ರ್ಯಬರು ವುದಕ್ಕೆಂತ ಮುಂಚೆ ಇದ್ದ ಸ್ಥಿತಿಗಿಂತ ಇಂದಿನ ಸ್ಥಿತಿ ಹೀನವಾಗಿದೆಯೆಂದು ಸಾಮಾನ್ಯ ಪ್ರಜೆಯು ಭಾವಿಸು ವ್ದಾನೆ

ಈ ಪರಿಸ್ಥಿತಿಯನ್ನು ತಡೆಗಟ್ಟಲು ಕಾಂಗ್ರೆಸ್ ತೆಲಸ ಗಾರರು ಬಹಳ ಪ್ರಯತ್ನ ಪಡುತ್ತಿದ್ದಾರೆ ಎಂಬಿಸಿ ಅಧಿವೇಶನಗಳಲ್ಲಾಗಲಿ ಸಮಿತಿ ಸಭೆಗಳಲ್ಲಿಯೂ ಈ ವಿಷಯಗಳನ್ನು ಒತ್ತಿತ್ತೇಳಲಾಗಿದೆ ಆಜೀವ ಗೆಳೆಯರನ್ನು ಗಳುವ ಪರಿಸ್ಥಿತಿಯೊಂದನ್ನು ಬಿಟ್ಟು ಇನ್ನೆಲ್ಲವು ದೂರ ಹೋಗಿ ಒತ್ತಾಯವಡಿಸಿ ಹೇಳಬಹು ಮೋ ಅಷ್ಟನ್ನೂ ಹೇಳಲಾಗಿದೆ ಇಂದಿನ ಪರಿಸ್ಥಿತಿಯಲ್ಲಿ ಭಿನ್ನಾಭಿಪ್ರಾಯಗಳ ವಿಷಯದಲ್ಲಿ ದೂರವಾಗುವುದು ಕ್ಷೇಮವಲ್ಲವೆಂದು ಅನೇಕರು ಭಾವಿಸಿರುವುದರಿಂದ ಅಷ್ಟು ದೂರ ಮುಂದೆ ಬೇಗಾಗಿಲ್ಲ

ಈ ರೀತಿ ಸ್ವಲ್ಪ ಸುಧಾರಿಸಿಕೊಂಡಿರುವುದನ್ನೆ ಕೆಲವು ಮಂದಿ ಕಾಂಗ್ರೆಸ್ ಸದಸ್ಯರು ತಮ್ಮ ಸ್ವಾರ್ಥ ತ್ಯಾಗ ಮಾಡಿ ಪರೋಗಪಡಿಸಿಕೊಂಡಿದುವುದು ಗೊತ್ತಾ ಗಿದೆ ಅಂತಹವರ ಕಾಲವು ಸಮೀಪಿಸುತ್ತಿದೆಯೆಂದು ಎಚ್ಚರಿಸುತ್ತಾ, ನನ್ನ ಸ್ನೇಹಿತರು ತಮ್ಮ ಮುಂದಿರುವ ಒಪಾತ್ಮ ಧ್ಯೇಯಗಳ ಸಾಧನೆಗೆ ತಾತ್ಕಾಲಿಕವಿದ ಮಡಿಯ ಬೇಕಿದ್ದು ನಾನು ಕೋರುತ್ತೀನೆ" ಎಂಬುದಾಗಿ ಸೂಚಿ ಸಿದ್ದಾರೆ

ಮರಣ ದಂಡನೆಯು ರಹಸ್ಯವಾಗಿ ನಡೆಯುವುದು

ಜಪಾನಿನ ಟೋಜೋ ಮತ್ತು ಯುದ್ಧಪಾತಕಿಗಳಾದ ಇನ್ನು ಅಯಿದಿನ ಮರಣದಂಡನೆಯು ಸಮಯದಲ್ಲಿ ಆ ಸ್ಥಳದಲ್ಲಿ ಜಪಾನೀಯರೆನ್ನಲಿ ಇಂಲು ಅವಕಾಶ ವಿರುವಂತಿಲ್ಲ ಆ ಸ್ಥಳದಲ್ಲಿ ಆರು ಜನ ಅಮೆರಿಕನ್ನರಿಗೆ ಮಾತ್ರ ಇರುವರು.

ಪಂಡಿತ ಶ್ರೀಕಾಶೀಸಾಧಶಾಸ್ತ್ರಿಗಳವರಿಂದ ಹೊಸದಾಗಿ ವಿರಚಿತವಾದ

ಶ್ರೀಜಗದಾಚಾರ್ಯರ ಸ್ತೋತ್ರಗಳಿಂದ ಕೂಡಿರುವ

ಗ್ರಾಮೋಫೋನ್ ರಿಕಾರ್ಡುಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಸ್ತೋತ್ರ ಪದ

ಪ್ಲೇಟ್ ನಂಬರ್ 8810 (ಪಾಹಿ ರೇಣುಕ)

ಹಾಡಿರುವವರು —ಸುಪ್ರಸಿದ್ಧ ಸಂಗೀತ ವಿದ್ವಾಂಸ ಶ್ರೀ ಕೊಟ್ಟೂರಪ್ಪನವರು

ಶ್ರೀಜಗದ್ಗುರು ವಂಡಿತಾರಾಧ್ಯರ ಸ್ತೋತ್ರ ಪದ

ಪ್ಲೇಟ್ ನಂಬರ್ 8816 (ಶ್ರೀಶೈಲಾಲಯ)

ಹಾಡಿರುವವರು —ಕುನೂರಿ ನರೋಜ

ಮೇಲ್ಕಂಡ ೨ ಪ್ಲೇಟುಗಳು ಈಗ ಹೊಸದಾಗಿ ತಯಾರಾಗಿವೆ. ಬಹು ಇಂಪಾದ ಗಾನದಿಂದ ಕೂಡಿರುವುದರಿಂದ, ಗ್ರಾಮೋಫೋನುಗಳನ್ನಿಟ್ಟಿರುವವರೆಲ್ಲರೂ ತರಿಸಿಕೊಂಡು, ಜಗದಾಚಾರ್ಯರ ಸ್ತೋತ್ರಗಳನ್ನು ಕೇಳಿ ದನ್ಯರಾಗಬೇಕು. ಬೆಂಬೊಂದು ಪ್ಲೇಟಿನ ಬೆಲೆ **4** ರೂಪಾಯಿ

ಈ ರಿಕಾರ್ಡುಗಳನ್ನು ಇಂಪೀರಿಯಲ್ ಮಾಸ್ಟರ್ಸ್ ಮಾಯಿಸ್ ಕಂಪನಿ ಮದ್ರಾಸ್ ಇವರು ತಯಾರಿಸಿರುವರು. ಇಂಡಿಯಾದಲ್ಲಿ ಗ್ರಾಮೋಫೋನ್ ರಿಕಾರ್ಡು ಗಳನ್ನು ಮಾರತಕ್ಕ ಪ್ರತಿಯೊಂದು ಅಂಗಡಿಯಲ್ಲಿಯೂ ದೊರೆಯುತ್ತವೆ. ಒಂದು ವೇಳೆ ಅಂಗಡಿಗಳಲ್ಲಿ ಸ್ಟಾಕು ಇಲ್ಲದಿದ್ದರೆ ನೇಲ್ಕಂಡ ಪ್ಲೇಟಿನ **8810—8816** ನಂಬರುಗಳನ್ನು ತಿಳಿಸಿದರೆ ಅಂಗಡಿಯವರು ತರಿಸಿಕೊಡುತ್ತಾರೆ

ರೋಗಿಗಳ ಬಳಿಗೆ ಹೋಗುವ ಆಸ್ಪತ್ರೆ

ನಮ್ಮ ದೇಶದಲ್ಲಿ ಪ್ರತಿವರ್ಷವೂ, ಪ್ರತಿದಿನವೂ ಅನೇಕ ಜನರು ರೋಗದಿಂದ ಮೃತರಾಗುತ್ತಿದ್ದಾರೆ! ಇವರಲ್ಲಿ ಅನೇಕರು ರೋಗಬಂದಾಗ ಆಸ್ಪತ್ರೆಗೆ ಹೋಗಲು ನಿಶ್ಶಕ್ತರಾಗಿರುತ್ತಾರೆ ಆಸ್ಪತ್ರೆಯು ಬಹಳ ದೂರ ಇರುತ್ತದೆ ಜಾಗರೂಕತೆಯಿಂದ ಅಷ್ಟುದೂರ ನಡೆದು ಹೋಗುವುದಕ್ಕೆ ತೊಂದರೆಯಾಗುತ್ತದೆ ಕೆಲವು ಹಳ್ಳಿಗಳಲ್ಲಿ ಆಸ್ಪತ್ರೆಗಳಿರುವುದೇ ಇಲ್ಲ ಮೂರು ನಾಲ್ಕು ಗ್ರಾಮಗಳಿಗೆ ಒಂದು ಆಸ್ಪತ್ರೆ ಇರುತ್ತದೆ ಕೆಲವರು ದೂರದ ಆಸ್ಪತ್ರೆಗೆ ಹೋಗಲು ಅಶಕ್ತರಾಗಿರುತ್ತಾರೆ ಆದರೆ ಆಸ್ಪತ್ರೆ ಕೆಲವರು ಹತ್ತಿರದ ಆಸ್ಪತ್ರೆಗಳಿಗೆ ಹೋಗುವುದಕ್ಕೂ ಹಿಂಜರಿಯುತ್ತಾರೆ ಸಣ್ಣ ಕಿಡಿ ಎಂದು ಆದನ್ನ ಆರಿಸದ ಬಿಟ್ಟರೆ, ಕೊನೆಗೆ ಆ ಕಿಡಿಯು ದೊಡ್ಡ ಅಗ್ನಿಯಾಗಿ ಮನೆನ ರಗಳನ್ನು ಸಡು ವಂತೆ, ಸಣ್ಣಗಾಯವೆಂದು ಅಸಡ್ಡೆಯಿಂದ ಇದ್ದರೆ, ಆ ಗಾಯನೇ ದೊಡ್ಡದಾಗಿ ಸಾವಿಗೆ ದಾರಿಯಾಗುತ್ತದೆ ನಮ್ಮ ಹಳ್ಳಿಗಳಲ್ಲಿಯಾ, ಪಟ್ಟಣಗಳಲ್ಲಿಯೂ ಈರೀತಿ ಸಣ್ಣ ರೋಗವನ್ನು ಲಕ್ಷಿಸದೆ ಇರುವವರು ಬಹಳ ಮಂದಿ ಇದ್ದಾರೆ ಹೆದೆಲ್ಲದೆ, ಕೆಲವು ವೇಳೆ ಔಷಧಕ್ಕಾಗಿ ದುಡ್ಡಿಲ್ಲದ ರೋಗದಿಂದ ನರಳುವುದೂ ಉಂಟು

ಈರೀತಿ ಭಾರತದ ಎಲ್ಲ ಗ್ರಾಮಗಳಲ್ಲಿಯೂ, ಎಲ್ಲ ಪಟ್ಟಣಗಳಲ್ಲಿಯೂ ಪ್ರತಿದಿನವೂ ಪಡೆಯುತ್ತಿರುತ್ತದೆ ಆದರೆ, ಈರೀತಿಯ ತೊಂದರೆಯನ್ನು ತಪ್ಪಿಸಿ ಜನರ ರೋಗವನ್ನು ವಾಸಿಮಾಡಲು ಉಪಾಯವಿಲ್ಲವೇ? ಇದೆ ದೇಶಕ್ಕೆ ಸ್ವಾತಂತ್ರ್ಯವು ದೊರಕಿ ಇನ್ನೂ ಒಂದು ವರ್ಷವಾಯಿತು ಸರ್ಕಾರದವರು ಪ್ರಜೆಗಳ ಯೋಗಕ್ಷೇಮಕ್ಕಾಗಿ ಅನೇಕ ಯೋಜನೆಗಳನ್ನು ಮಾಡಿದ್ದಾರೆ

ಬೊಂಬಾಯಿಯಲ್ಲಿ ಒಂದು ಮಾದರಿಯ ಸಂಚರಿಸುವ ಆಸ್ಪತ್ರೆಗಳನ್ನು ಏರ್ಪಡಿಸಲಾಗಿದೆ ಈ ಆಸ್ಪತ್ರೆಗಳು ಜನರ ಬಳಿಗೆ ಹೋಗಿ ಅವರಿಗೆ ಉಚಿತವಾಗಿ ಔಷಧವನ್ನು ಕೊಡುತ್ತವೆ ಅಷ್ಟಡ್ಡೆ ಯಿಂದಿದ್ದು ಮರಣದತೆಯಲ್ಲಿದ್ದ ಅನೇಕ ರೋಗಿ ಗಳನ್ನು ಗುಣಪಡಿಸುತ್ತವೆ

ಬೊಂಬಾಯಿಯಲ್ಲಿ ಕೇಟಾಣಿ ಎಂಬ ಸಹೊ ದರರು ಈರೀತಿಯ ಆಸ್ಪತ್ರೆಗಳನ್ನು ಸ್ಥಾರಂಭಿಸಿದ್ದಾರೆ ಒಂದೊಂದು ಸಂಚರಿಸುವ ಆಸ್ಪತ್ರೆಯಲ್ಲಿಯೂ ಉತ್ತಮ ಶಿಕ್ಷಣ ಪಡೆದ ವೈದ್ಯರು, ಕಾಂಪೌಂಡರು ಮತ್ತು ಇಬ್ಬರು ಸ್ವಯಂಸೇವಕರಿರುತ್ತಾರೆ ಈ ಆಸ್ಪತ್ರೆಯನ್ನು ದೊಡ್ಡ ಮೋಟಾರಿನಲ್ಲಿ ಜೋಡಿಸಲಾಗಿದೆ ಅದರಲ್ಲಿ ಔಷಧ ಕೊಡುವು ದಕ್ಕೂ, ರೋಗದ ಪರೀಕ್ಷೆಗೂ ಪ್ರತ್ಯೇಕ ಸ್ಥಳ ಗಳಿವೆ ಶಸ್ತ್ರಚಿಕಿತ್ಸೆಗೆ ಮತ್ತು ಇಂಜೆಕ್ಷನ್ನಿಗೆ ಬೇಕಾದ ಸಾಧನಗಳೆಲ್ಲವೂ ಇರುತ್ತವೆ ಸಾರ್ವ ಜನಿಕರು ದಾನವಾಗಿ ಕೊಡುವ ಹಣದಿಂದ ಈ ತಸ್ಪತ್ರೆಗಳನ್ನು ನಡೆಸಲಾಗುತ್ತಿದೆ

ಎದ್ಯತೆ ಬೊಂಬಾಯಿಯ ೧೪ ಮೊಹಲ್ಲಾಗಳಲ್ಲಿ ಈ ಆಸ್ಪತ್ರೆಗಳು ಕೆಲಸ ಮಾಡುತ್ತಿವೆ ಪ್ರತಿ ಮೋಟಾರಿನ ಆಸ್ಪತ್ರೆಯೂ ದಿನವೊಂದಕ್ಕೆ ಎರಡು ಅಥವಾ ಮೂರು ಮೊಹಲ್ಲಾಗಳಿಗೆ ಹೋಗಿ, ಸುಮಾರು ೨೫೦ ರೋಗಿಗಳಿಗೆ ಉಪಚಾರನನ್ನು ಮಾಡುತ್ತಿದೆ. ನಿಣ್ಣ ರೋಗಗಳನ್ನು ಆಯಾ ಸ್ಥಳಗಳಲ್ಲಿಯೇ ವಾಸಿಮಾಡಲಾಗುತ್ತಿದೆ ಅದರೆ ರೋಗವು ತೀಣವಾಗಿದ್ದರೆ ಆ ರೋಗಿಗಳನ್ನು ಆ ವೈದ್ಯರುಗಳು ಆಸ್ಪತ್ರೆಗಳಿಗೆ ಸಾಗಿಸುತ್ತಾರೆ.

ಸದ್ಯಃ ಈರೀತಿಯಾಗಿ ಎರಡು ಸಂಚರಿಸು ಆಸ್ಪತ್ರೆಗಳನ್ನೆ ಆಶ್ರಗಳಲ್ಲಿ ೧೧೦ ಸಾವಿರ ರೂ ಗ ಶಸ್ತ್ರಚಿಕಿತ್ಸೆಯ ಸಾಮಗ್ರಿಗಳಿವೆ ಪ್ರತಿ ತಿಂಗಳ ಡಾಕ್ಟರುಗಳ ಸಂಬಳ ಮತ್ತು ಔಷಧಕ್ಕಾಗಿ ಸಾವಿರ ರೂ ಖರ್ಚಾಗುತ್ತದೆ ಪ್ರತಿ ತಿಂಗಳ ಈ ಆಸ್ಪತ್ರೆಗಳಿಂದ ಸುಮಾರು ೧೫೦ ಸಾವಿ ರೋಗಿಗಳು ಸಹಾಯ ಪಡೆಯುತ್ತಾರೆ

ಈ ಆಸ್ಪತ್ರೆಗಳು ಕಳೆದ ೧೦ ತಿಂಗಳಿಂದ ಕೆಲ ನಾಡುತ್ತಿವೆ ಆದರೆ, ಈರೀತಿಯ ಆಸ್ಪತ್ರೆಗಳ ಬೊಂಬಾಯಿಯಲ್ಲಿ ಇನ್ನೂ ಹೆಚ್ಚ ಬೇಕು. ಇಷ್ಟೆ ಇಲ್ಲದೆ ಯಾವ ರೀತಿಯ ವೈದ್ಯ ಸಹಾಯವೂ ಇಲ್ಲದೆ, ರೋಗಗಳಿಗೆ ತೌರುಮನೆಯಾಗಿರು ಭಾರತದ ಸಹಸ್ರಾರು ಹಳ್ಳಿಗಳಲ್ಲಿ ಈರೀತಿಯ ಸಂಚರಿಸುವ ಆಸ್ಪತ್ರೆಗಳು ಏರ್ಪಡಬೇಕು ಇ ರಿಂದ ರೋಗಿಗಳಿಗೆ ಸರಿಯಾದ ಸಹಾಯವು ಸಿಗುವುದಲ್ಲದೆ, ದೇಶದ ಜನರು ದೃಢಕಾಯ ರಾಗುವರು ದೇಶವೂ ಅಭಿವೃದ್ಧಿಹೊಂದುವುದು

ಕಾನೂನುಗಳ ವಿಷಯದಲ್ಲಿ ಉಚಿತ ಸಲಹೆ

ಭಾರತದೇಶದಲ್ಲಿ ಎಷ್ಟೋ ಜನರು ಪ್ರತಿನಿತ್ಯವೂ ಕೋರ್ಟುಗಳಿಗೆ ಅಲೆಯುತ್ತಿರುವುದನ್ನು ನೀವು ನೋಡಿರಬಹುದು ಹಳ್ಳಿಯ ಜನರು ಕೋರ್ಟಿಗೆ ಹೋಗುವುದು ಹೆಚ್ಚು. ಸಣ್ಣ ವ್ಯಾಜ್ಯವನ್ನು ದೊಡ್ಡದಾಗಿ ಮಾಡಿ, ಕೋರ್ಟುಗಳಿಗೆ ಹೋಗಿ, ವಕೀಲರಿಗೆ ಹೇರಳವಾಗಿ ದುಡ್ಡು ಕೊಟ್ಟು ಕೊನೆಗೆ ಗತಿಯಿಲ್ಲದಂತಾಗುವುದನ್ನು ಪ್ರತಿದಿನವೂ ನೋಡಬಹುದು

ಅನೇಕರು ಕೋರ್ಟಿಗೆ ಹೋಗಿ ನ್ಯಾಯ ಪಡೆಯಲು ದುಡ್ಡಿಲ್ಲದೆ, ತಮಗಾಗಿರುವ ಅನ್ಯಾಯವನ್ನು ಅನುಭವಿಸುತ್ತಿರುತ್ತಾರೆ ಅಮೆರಿಕಾದಲ್ಲಿ ಈರೀತಿಯ ಜನರಿಗೆ ಸಹಾಯಮಾಡುವುದಕ್ಕಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಲಾಗಿದೆ ಆ ಸಂಸ್ಥೆಯ ಸದಸ್ಯರೆಲ್ಲರೂ ವಕೀಲರು. ಜನರಿಗೆ ಉಚಿತವಾಗಿ ಕಾನೂನು-ಗಳ ಬಗ್ಗೆ ಇವರು ಸಲಹೆ ಕೊಡುತ್ತಾರೆ ಪಕ್ಷ ಪ್ರತಿಪಕ್ಷಗಳೊಡನೆ ಸಂಧಾನ ನಡೆಸುತ್ತಾರೆ ಕೊನೆಗೆ ದುಡ್ಡಿಲ್ಲದೆ ಅನ್ಯಾಯ-ದಿಂದ ಕಷ್ಟಪಡುತ್ತಿರುವವನಿಗೆ ಕೋರ್ಟಿನಲ್ಲಿ ನ್ಯಾಯ ದೊರಕಿಸಲು, ಈ ವಕೀಲರು ಸಹಾಯ ಮಾಡು ತ್ತಾರೆ ಆದರೆ ಇವರ ಸಹಾಯಕ್ಕಾಗಿ ಒಂದು ಕಾಸನ್ನೂ ಕೇಳುವುದಿಲ್ಲ ಒಂದು ಲಕ್ಷ ಜನರು ಇರುವ ಅಮೆರಿಕಾದ ಪ್ರತಿಯೊಂದು ಗೂರಿನಲ್ಲಿಯೂ ಈರೀತಿಯ ವಕೀಲರ ಸಂಸ್ಥೆಗಳಿವೆ

ಪಾಕಿಸ್ತಾನದ ಗೊಡ್ಡು ಬೆದರಿಕೆಗೆ ಭಾರತ ಹೆದರುವುದಿಲ್ಲ

ಕಾಶ್ಮೀರವು ಭಾರತದ ಮೊರೆಹೊಕ್ಕಿರುವುದರಿಂದ ಅದನ್ನು ತಪ್ಪುಗಳಿಂದ ಬಿಡಿಸಿಕೊಳ್ಳುವುದು ಭಾರತದ ಮುಖ್ಯ ಕರ್ತವ್ಯವಾಗಿದೆ "ಪಾಕಿಸ್ತಾನವು ತನ್ನ ಸೈನ್ಯ ಶಕ್ತಿಯನ್ನೆಲ್ಲಾ ಉಪಯೋಗಿಸಿ ಭಾರತವನ್ನು ಯುದ್ಧದಲ್ಲಿ ಎದುರಿಸಲು ಪಣತೊಟ್ಟಿರುವುದೆಂದು ಹೇಳಿರುವ ಜಿ ರುಲ್ಲಾಖಾನರವರ ಗೊಡ್ಡು ಬೆದರಿಕೆಗೆ ಭಾರತವು ಎಂದಿಗೂ ಹೆದರುವುದಿಲ್ಲ ಪಾಕಿಸ್ತಾನವು ಬಾಯಲ್ಲಿ ಹೇಳುತ್ತಿರುವ ದನ್ನು ಭಾರತವು ಕಾರ್ಯಕ್ಕೆ ತೋರಿಸಬೇಕಾದೀತು" ಎಂಬುದಾಗಿ ಸರ್ದಾರ್ ಪಟೇಲರು ಕಾಶಿಯಲ್ಲಿ ನಾವಿ ಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತ ತಿಳಿಸಿದರು

Edited Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನವಪಂಕಜಾತಶಯಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧಿಯಾಮಕರ್ ಪರಿಲಸತ್ಪಂಚಾಕ್ಷರೀಭೋಧಕರ್ । ಪಂಚಾಚಾರ್ಯಜಗದ್ಗುರೋತ್ತಮವರರ್ ಪಾಲಿಪ್ಪಿ ದೀರೇಶಮಂ ॥

ಸ್ಥಳವನಿಗೆ ೨ ರೂ ೪ ಆಣೆ. ಪರಸ್ಥಳವನಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೩೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೬ನೇ ಡಿಸೆಂಬರ್ ೧೯೪೪ [ಸಂಚಿಕೆ ೩೦

ಶ್ರೀಕಾಶೀನಾಥಪಂಡಿತವಿರಚಿತಂ

ಶ್ರೀವೀರಭದ್ರಪಂಚಕಂ

ದಕ್ಷಪ್ರಜ್ಞಹ್ಯವಿಶಾಲ ಯಜ್ಞವಿನಿನಸ್ರಧ್ವಂಸದಾವಾನಲಂ ।
ಯಾಗಾಭ್ಯಾಗತಮೇಶಮುಖ್ಯವಿಬುಧವ್ರಾತಾದ್ರಿನಜ್ರಾಯುದಂ ॥
ಭ್ರೂಪ್ರಾಭಾಭವನಪ್ರಚಂಡಪವನಂ ಪ್ರತ್ಯರ್ಥಿಪಂಚಾನನಂ ।
ಭಿವ್ಯಾನಂದಮಯಂ ವಿಭೂತಿನಿಲಯಂ ಶ್ರೀವೀರಭದ್ರಂ ಭಜೇ ॥೧॥

ಲೀಚಿತ್ರಸರೋಜಭಾಸ್ಕರರಸಮಂ ಕೈವಲ್ಯಕಲ್ಪದ್ರುಮಂ ।
ೀನೋದ್ಧಾರಪರಾಯಣಂ ಗಜಮೃಗಂ ಸದ್ಭಕ್ತಚಿಂತಾಮಣಿಂ ॥
ಭದ್ರಾಕ್ಷಾಭರಣಂ ತ್ರಿತಾಪಹರಣಂ ದಾರಿದ್ರ್ಯವಿದ್ರಾವಣಂ ।
ಭವ್ಯಾನಂದಮಯಂ ವಿಭೂತಿನಿಲಯಂ ಶ್ರೀವೀರಭದ್ರಂ ಭಜೇ ॥೨॥

ಹ್ಮೇಂದ್ರಮಹೇಂದ್ರಗೀಪ್ಪತಿಮುಖೈರ್ವ್ಯಂದಾರಕೈರ್ವನ್ದಿತಂ ।
ಂದ್ಯೈರ್ವಂದಿತಂ ಗಜಮುಖಸ್ಕಂದಾದಿಭಿರ್ನಂದಿತಂ ॥
ಾರೀಸಾಧಪದಾಬ್ಜಪೂಜನರತಂ ಕೋದಂಡಬಾಣಾನ್ವಿತಂ ।
ವ್ಯಾನಂದಮಯಂ ವಿಭೂತಿನಿಲಯಂ ಶ್ರೀವೀರಭದ್ರಂ ಭಜೇ ॥೩॥

ತ್ಯಾಧೀಶಹಿರಣ್ಯಕಾಸುರವಧೋನ್ಮತ್ತಂ ನೃಸಿಂಹಂ ಪ್ರುತಂ ।
ಂಹರ್ತುಂ ಶರಭಾಕೃತಿಂ ಭಯಕರೀಂ ಧೃತ್ವಾ ಚ ಹತ್ವಾ ಹರಿಂ ॥
ಂಕಾನಾಮಭಯಂಕರಂ ಶಿವಕರಂ ಕಾರುಣ್ಯರತ್ನಾಕರಂ ।
ವ್ಯಾನಂದಮಯಂ ವಿಭೂತಿನಿಲಯಂ ಶ್ರೀವೀರಭದ್ರಂ ಭಜೇ ॥೪॥

ಂಗಾರೀಕರಪದ್ಮರತ್ನಮುಕುರಂ ತ್ರೈಲೋಕ್ಯರಕ್ಷಾಕರಂ ।
ವ್ಯಸ್ಮಂಗಲದಂ ವಿಮೋಕ್ಷವರದಂ ವಿಶ್ವೇಶತೋಷಪ್ರದಂ॥
ತ್ಯಾಯಂ ಭವಿಕಾಲಯಂ ಭಯಲಯಂ ಶ್ರೀಭದ್ರಕಾಲೀಪ್ರಿಯಂ ।
ವ್ಯಾನಂದಮಯಂ ವಿಭೂತಿನಿಲಯಂ ಶ್ರೀವೀರಭದ್ರಂ ಭಜೇ ॥೫॥

ಕಾಶೀನಾಥಕವಿಪ್ರೋಕ್ತಂ ವೀರಭದ್ರಸ್ಯ ಪಂಚಕಂ ।
ಯಃ ಸೇವೇತ್ಸರಯಾ ಭೀತ್ಯಾ ಸ ಪ್ರಾಪ್ನೋತಿ ಪರಂ ಪದಂ ॥

ದುಶ್ಚಟಗಳನ್ನು ದೂರೀಕರಿಸಬೇಕು

ಲೇ —ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಟ್ಟೂರು

ಪಾರಿದ್ರ್ಯಹೀರೇಃ ನರಕಸ್ಯ ಮಾರ್ಗಂ ಸ್ವೈರ ಮುಂಚಃ ।
ಪಾಪಾತ್ತೋರೇ ಮಾರ್ಗಾಲಸ್ಯಸಾರ್ಗಂ ಸ್ವೈರ ಮುಂಚಃ ॥

ಭಿಕ್ಷವನ್ನು ಹೊಡೆದರೂ ಸಹ ಅದು ಇಲಿ ಹಿಡಿಯುವದನ್ನು ಹೇಗೆ ಬಿಡುವದಿಲ್ಲವೋ, ಹಾಗೆಯೇ ಮನುಷ್ಯನು ದರಿದ್ರನಾದರೂ ಸಹ ತಂಬಾಕಿನ ಚಟವನ್ನು ಎಂದೂ ಬಿಡುವದಿಲ್ಲವೆಂಬುದು ಮೇಲಿನ ಶ್ಲೋಕದ ಅಭಿಪ್ರಾಯವಾಗಿರುವದು. ಮನುಷ್ಯನು ಯಾವುದಾದೊಂದು ಚಟವನ್ನು ಕಲಿತರೆ ಅವನು ಅದನ್ನು ಎಂದೂ ಬಿಡುವುದಿಲ್ಲ ಚಟಗಳಲ್ಲಿ ದುಶ್ಚಟಗಳೆಂದೂ ಉತ್ತಮ ಚಟಗಳೆಂದೂ ಎರಡು ಪ್ರಕಾರವುಂಟು

ತಂಬಾಕು ಸೇದ ವದು, ತಿನ್ನುವದು, ನಾಸಿಪುಡಿ ಏರಿಸುವದು, ಜಹಾಕಾಪಿ ಕ ಡಿಯುವದು, ಮದ್ಯ ಮಾಂಸಗಳನ್ನು ತಿನ್ನುವದು, ವೃಥಾಖರ್ಚು ಮಾಡುವುದು ಇತ್ಯಾದಿಗಳೆಲ್ಲಾ ದುಶ್ಚಟಗಳೆನಿಸುವವು

ಹಾಲು ಕುಡಿಯುವದು, ಹಣ್ಣುಹಂಪಲ ತಿನ್ನುವದು, ತಾಂಬೂಲ ಸ್ವೀಕರಿಸುವದು ನೀತಿಯ ಗ್ರಂಥಗಳನ್ನು ಓದುವದು, ಶಿವನನ್ನು ಭಜಿಸುವದು, ಪೂಜಿಸುವದು ಇತ್ಯಾದಿ ಚಟಗಳೆಲ್ಲಾ ಸದ್ವರ್ತನೆಯ ಚಟಗಳೆನಿಸುವವು ದುಶ್ಚಟವು ಮಾನವನ ಶರೀರವನ್ನು ಕೆಡಿಸಿ ಆಕಾರೋಗ್ಯವನ್ನುಂಟುಮಾಡಿ ಶೀಘ್ರದಲ್ಲಿ ಮೃತ್ಯುವಿನ ಬಾಯಿಗೆ ತುತ್ತುಮಾಡಿ, ಇಹಪರದಲ್ಲಿ ಅಪಕೀರ್ತಿಯನ್ನುಂಟುಮಾಡಿ ಅಧೋಗತಿ ಗೀಡುಮಾಡುವದು

ಸದ್ವರ್ತನೆಯ ಚಟವು ಮಾನವನ ಶರೀರವನ್ನು ಆರೋಗ್ಯದಿಂದ ಪುಷ್ಟಿಯನ್ನಾಗಿಮಾಡಿ ದೀರ್ಘಕಾಲ ಬಾಳುವಂತೆ ಮಾಡಿ, ಇಹಪರದಲ್ಲಿ ಕೀರ್ತಿಯನ್ನುಂಟುಮಾಡಿ ಊರ್ಧ್ವಗತಿಗೀಡುಮಾಡುವದು ಮನುಷ್ಯನು ಅಜ್ಞಾನದಿಂದ ಯಾವುದಾದರೊಂದು ದುಶ್ಚಟವನ್ನು ಮಾಡಲಿಕ್ಕೆ ಹತ್ತಿದ್ದರೆ, ಬಲ್ಲವರೆ ಉಪದೇಶದಿಂದಾಗಲಿ ಅಥವಾ ಸ್ವಂತಜ್ಞಾನದಿಂದಾದರೂ ಆ ದುಷ್ಟಚಟವನ್ನು ಸಂಪೂರ್ಣ ಬಿಟ್ಟು ಬಿಡಬೇಕು ದುಷ್ಟಚಟವನ್ನು ಹಿಡಿದನೇಲೆ ಅದನ್ನು ಬಿಡುವುದು ಬಹಕಠಿಣ! ಮೊದಲೇ ಆ ದುಷ್ಟ ಚಟಕ್ಕೆ ಅಪ್ಪದ ಕೊಡದಿರುವದು ಎಲ್ಲಕ್ಕೂ ಮೇಲು ಯಾವ ಮಾನವನು ಮನಸ್ಸಿನ ಅಧೀನನಾಗಿರುವನೋ ಅವನು ದುಷ್ಟ ಚಟಗಳ ವಶವಾಗುವನು ಅವನಿಗೆ ದುಷ್ಟ ಚಟಗಳನ್ನು ಬಿಡಲಿಕ್ಕೆ ಎಂದೂ ಸಾಧ್ಯವಿಲ್ಲ ಯಾವ ಮಾನವನು ಮನಸ್ಸನ್ನು ತನ್ನ ಅಧೀನ ಮಾಡಿಕೊಂಡಿರುವನೋ ಅವನಿಗೆ ಮಾತ್ರ ಹಿಡಿದ ದುಷ್ಟ ಚಟವನ್ನು ಬೇಕಾದಾಗ ಬಿಡಲಿಕ್ಕೆ ಸಾಧ್ಯವುಂಟು

ನೀರು ಹಳ್ಳವಿದ್ದ ಕಡೆಗೆ ಹರಿಯುವದು ಸ್ವಭಾವನಾಗಿದೆ ಅದಕ್ಕೆ ಯಾರ ಆಶ್ರಯವೂ, ಶ್ರಮವೂ ಬೇಕಾಗಿಲ್ಲ ಅದೇ ನೀರನ್ನು ಮೇಲಕ್ಕೆ ಏರಿಸಬೇಕಾದರೆ ವಿಶೇಷ ಶ್ರಮಪಡಬೇಕಾಗುತ್ತದೆ ಅದರಂತೆಯೇ ಮನುಷ್ಯನ ಮನಸ್ಸು ವಿಕೇಷವಾಗಿ ದುಷ್ಟ ಚಟಗಳ ಕಡೆಗೆ ಹರಿಯುವದು ಸ್ವಭಾವಿಕವಾಗಿದೆ ಇದಕ್ಕೆ ಯಾರ ಉಪದೇಶವೂ, ಜ್ಞಾನವೂ, ಶ್ರಮವೂ ಬೇಕಾಗಿಲ್ಲ ಆದೇ ಮನಸ್ಸನ್ನು ಸತ್ಕರ್ಮಾನುಷ್ಠಾನ ಸದ್ವರ್ತನೆಯ ಕಡೆಗೆ ಹೋಗುವಂತೆ ಮಾಡಬೇಕಾದರೆ, ಬುದ್ಧಿಮಂತರು ವಿಕೇಷ ಶ್ರಮತೆಗೆದುಕೊಂಡು ಸದುಪದೇಶಮಾಡಬೇಕಾಗುತ್ತದೆ.

ಈಗಿನ ಕಾಲದಲ್ಲಿ ಎಲ್ಲಿ ನೋಡಿದರೂ ದುಷ್ಟ ಚಟಗಳುಳ್ಳ ಜನರ ಸಂಖ್ಯೆಯೇ ವಿಕೇಷವಾಗಿ ಕಾಣುಬರುವದು ಯಾವ ಮನುಷ್ಯಸಲ್ಲಾದರೂ ಯಾವುದಾದರೊಂದು ದುಶ್ಚಟವಿಲ್ಲದೇ ಇರುವದು ಯಾವುದೊಂದೂ ದುಶ್ಚಟವಿಲ್ಲದ ಮಾನವಪ್ರಪ್ಪು ಕಾಣುವದು ದುರ್ಲಭವೇ ಸರಿ! ಚಟವು ಎಂಥವಪ್ಪಾದರೂ ಒಂದೊಂದು ಕಾಲದಲ್ಲಿ ಫಲ್ಲೆ ಬೇಡಲಿಕ್ಕೆ ಹಚ್ಚುವದು ಅದುದರಿಂದ ಪ್ರತಿಯೊಬ್ಬ ಮಾನವನು ಧರ್ಮವಿರೋಧವಾಗಿ ಕೆಂಟುಬರುವ ಕರ್ಮವನ್ನು ಹಾಳುಮಾಡಿ, ನರಕಕ್ಕೆಳೆದುಕೊಂಡು ಹೋಗುವ ದುಷ್ಟ ಚಟಗಳನ್ನು ದೂರೀಕರಿಸಿ, ಶರೀರಕ್ಕೆ ಸೌಖ್ಯವನ್ನುಂಟುಮಾಡಿ ಪರಮಾತ್ಮನ ಸಾನ್ನಿಧ್ಯವನ್ನುಂಟುಮಾಡುವ ಸತ್ಕರ್ಮಾನುಷ್ಠಾನ ಮೊದಲಾದ ಒಳ್ಳೆಯ ಚಟಗಳನ್ನು ಕಲಿತು ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಮೂರ್ಖರ ಬಗ್ಗೆ ಮೌನನೇ ಮಹೌಷಧ

ಅಕಬರನ ಪ್ರಶ್ನೆಗೆ ಬೀರಬಲ್ಲನ ಸಮರ್ಪಕವಾದ ಉತ್ತರ

ಬೀರಬಲ್ಲನು ಅಕ್ಬರ್ ಚಕ್ರವರ್ತಿಯ ಆಸ್ಥಾನದಲ್ಲಿ ಬಹಳ ಪ್ರಸಿದ್ಧನಾಗಿದ್ದನು ಚಕ್ರವರ್ತಿಯು ಅವನನ್ನು ವಿಶೇಷ ಪ್ರೀತಿಸುತ್ತಿದ್ದನು ಈ ಕಾರಣದಿಂದ ಅಕ್ಬರನ ಆಸ್ಥಾನದಲ್ಲಿದ್ದ ಇತರ ದರ್ಬಾರಿಗಳು ಅವನನ್ನು ಕಂಡು ಬಹಳ ಅಸೂಯೆ ಪಡುತ್ತಿದ್ದರು ಅವರು ಮನಸ್ಸಿನಲ್ಲಿ ಬೀರಬಲ್ಲನಿಗೆ ಏನಾದರೂ ಕೆಡಕುಮಾಡಬೇಕೆಂದು ಯೋಚಿಸುತ್ತಿದ್ದರು ಆದರೆ ಚಕ್ರವರ್ತಿಯ ಹೆದರಿಕೆಯಿಂದ ಅವರು ಏನೂ ಮಾಡುವಾಗಿರಲಿಲ್ಲ

ಒಂದು ದಿನ ಒಬ್ಬ ದರ್ಬಾರಿಯು ಚಕ್ರವರ್ತಿಯನ್ನು ಕಂಡು " ಸ್ವಾಮಿ, ಬೀರಬಲ್ಲನನ್ನು ತಾವು ಅನ್ನು ಪ್ರೀತಿಸಲು ಕಾರಣವೇನು? " ಎಂದು ಕೇಳಿದನು ಅದಕ್ಕೆ ಚಕ್ರವರ್ತಿಯು " ಬೀರಬಲ್ಲನು ಒಬಳ ಚತುರನು ಅವನು ನನ್ನ ಪ್ರಶ್ನೆಗಳಿಗೆ ಯೋಗ್ಯ ಉತ್ತರಗಳನ್ನು ಕೊಡುತ್ತಾನೆ ಆದ್ದರಿಂದಲೇ ನಾನು ಅವನನ್ನು ಹೆಚ್ಚು ಪ್ರೀತಿಸುತ್ತೇನೆ ಅವನು ಇಲ್ಲದಿದ್ದರೆ ದರ್ಬಾರಿನಲ್ಲಿ ಲಕ್ಷಣವೇ ಇರುವುದಿಲ್ಲ " ಎಂದನು

ಇದನ್ನು ಕೇಳಿ ದರ್ಬಾರಿಯು ಚಕ್ರವರ್ತಿಯನ್ನು ಕುರಿತು " ಇಲ್ಲಾ ಸ್ವಾಮಿ, ನಾವೂ ಸಹ ತಮಗೆ ಸಂತೋಷವನ್ನುಂಟುಮಾಡಬಲ್ಲೆವು ಮತ್ತು ತಮ್ಮ ಪ್ರಶ್ನೆಗಳಿಗೆ ಯೋಗ್ಯ ಉತ್ತರಗಳನ್ನು ಕೊಡಬಲ್ಲೆವು " ಎಂದರು ಚಕ್ರವರ್ತಿಯು " ಒಳ್ಳೆಯದು, ನೀವು ಒಬಳ ಚತುರರೇ ಅಲ್ಲವೇ ಎಂಬ ಪರೀಕ್ಷೆಯು ನಾಳೆ ನಡೆಯುವುದು ನೀವು ನಾಳೆ ಬನ್ನಿ ' ಎಂದನು

ಮಾರನೆಯ ದಿನ ಎಲ್ಲಾ ದರ್ಬಾರಿಗಳೂ ನೆರೆದರು ಆಗ ಚಕ್ರವರ್ತಿಯು ಅವರನ್ನು ಕುರಿತು, " ಮೂರ್ಖನು ಅಹಂಕಾರದಿಂದ ಮನಬಂದಂತೆ ನಡೆದರೆ ಏನು ಮಾಡಬೇಕು? ಎಂಬ ಪ್ರಶ್ನೆಗೆ ಉತ್ತರ ಕೊಡಿರಿ " ಎಂದು ನುಡಿದನು ಅದಕ್ಕೆ ಒಬ್ಬನು " ಸ್ವಾಮಿ, ಅಂತಹ ಮೂರ್ಖನನ್ನು ಕಟ್ಟುಗಾಡಿಂದ ಹೊರಕ್ಕೆ ಕಳುಹಿಸಬಹುದಬೇಕು " ಎಂದು ಉತ್ತರ ಕೊಟ್ಟನು ಎರಡನೆಯನನು " ಆ ಮೂರ್ಖನನ್ನು ಒಂದು ಕತ್ತಲ ಕೋಣೆಯಲ್ಲಿ ಹಾಕಿಬಿಡಬೇಕು " ಎಂದನು ಮೂರನೆಯವನು " ಇಲ್ಲ ಸ್ವಾಮೀ, ಆ ಮೂರ್ಖನ ಕಣ್ಣಿಗೆ ಬಟ್ಟೆಕಟ್ಟಿ ಅವನನ್ನು ನಾಲ್ಕು ದಿಕ್ಕಿನಲ್ಲೂ ತಿರುಗಿಸಬೇಕು " ಎಂದು ಹೇಳಿದನು

ಕೊನೆಗೆ ಚಕ್ರವರ್ತಿಯು ಬೀರಬಲ್ಲನನ್ನು ಕುರಿತು " ನೀನು ಈ ಪಶ್ನೆಗೆ ಉತ್ತರ ಕೊಡು " ಎಂದನು. ಆದಕ್ಕೆ ಬೀರಬಲ್ಲನು " ಸ್ವಾಮೀ, ಇನ್ನು ಹತ್ತು ದಿನಗಳಾದ ಮೇಲೆ ನನ್ನ ಸಹೋದರನು ಈ ಪ್ರಶ್ನೆಗೆ ಉತ್ತರವನ್ನು ಕೊಡುವನು ಅವನು ಬಹಳ ಬುದ್ಧಿವಂತನು, ತಿವನು ಇಲ್ಲಿಂದ ಬಹಳ ದೂರದಲ್ಲಿದ್ದಾನೆ ಆದ್ದರಿಂದ ಅವನನ್ನು ಕರೆಯಿಸಲು ತಾವು ನನಗೆ ೧೦ ದಿನಗಳು ರಜ ಮತ್ತು ಖರ್ಚಿಗಾಗಿ ಇನ್ನೂರು ರೂಪಾಯಿಗಳನ್ನು ಕೊಡಬೇಕು " ಎಂದನು. ಇದಕ್ಕೆ ಚಕ್ರವರ್ತಿಯು ಒಪ್ಪಿದನು ಬೀರಬಲ್ಲನು ದುಡ್ಡನ್ನು ತೆಗೆದುಕೊಂಡು ತನ್ನ ಮನೆಗೆ ಹೋಗಿ ಆನಂದದಿಂದ ಕಾಲಕಳೆಯತೊಡಗಿದನು.

ಒಂಭತ್ತನೆಯ ದಿನ ಬೀರಬಲ್ಲನು ತಿರುಗಾಡಲು ಹೊರಟನು ರಸ್ತೆಯಲ್ಲಿ ಅವನಿಗೆ ಒಬ್ಬ ಮನುಷ್ಯನು ಸಿಕ್ಕನು. ನೋಡುತ್ತಲೇ ಅವನು ಬಹಳ ಮೂರ್ಖನಂತಿ ಕಾಣುತ್ತಿದ್ದನು ಬೀರಬಲ್ಲನು ಅವನನ್ನು ಕುರಿತು " ಏನಯ್ಯಾ, ನೀಕರೀ ಮಾಡುತ್ತೀಯಾ? ಒಂದೇ ಒಂದು ದಿನಕ್ಕೆ ೫೦ ರೂ. ಸಂಬಳ ಕೊಡುತ್ತೇನೆ " ಎಂದನು. ಅದಕ್ಕೆ ಆ ಮನುಷ್ಯನು ಬಹಳ ಸಂತೋಷಗೊಂಡು " ಸ್ವಾಮಿ, ಏನು ಕೆಲಸ ಮಾಡಬೇಕು? " ಎಂದು ಕೇಳಿದನು.

ಅದಕ್ಕೆ ಬೀರಬಲ್ಲನು, " ಕೆಲಸವೇನೂ ಇಲ್ಲ, ನಮ್ಮನೆ ನನ್ನ ಜೊತೆಯಲ್ಲಿ ರಾಜಾಸ್ಥಾನಕ್ಕೆ ಬರಬೇಕು ಅಲ್ಲಿ ನಿನ್ನೊಡನೆ ಯಾರಾದರೂ ಮಾತನಾಡಿದರೆ ಅದಕ್ಕೆ ಉತ್ತರಕೊಡದೆ ಸುಮ್ಮನೆ ಇರಬೇಕು ಅವರು ನಿನ್ನ ಕಿವಿಯಲ್ಲಿ ಜೋರಾಗಿ ಕೂಗಿಕೊಂಡರೂ ತುಟಿಯನ್ನೂ ಸಹ ಅಲ್ಲಾಡಿಸಬಾರದು, ಇದು ನಿನ್ನಿಂದ ಆಗುವುದೇ? ' ಎಂದು ಕೇಳಿದನು ಇದಕ್ಕೆ ಆ ಮನುಷ್ಯನು ಒಪ್ಪಿಕೊಂಡನು ಬೀರಬಲ್ಲನು ಅವನನ್ನು ಮನೆಗೆ ಕರೆದುಕೊಂಡುಹೋಗಿ ಊಟಏರ್ಪಾಡಿಸಲು ಮಾರನೆಯ ದಿನ ಬೆಳಿಗ್ಗೆ ಅವನಿಗೆ ಒಳ್ಳೆಯ ಬಟ್ಟೆಯನ್ನು ಹಾಕಿ ರಾಜಾಸ್ಥಾನಕ್ಕೆ ಕರೆದುಕೊಂಡು ಹೋದನು ಬೀರಬಲ್ಲನನ್ನು ನೋಡುತ್ತಲೇ ಚಕ್ರವರ್ತಿಯು ' ಏನಯ್ಯಾ ಬೀರಬಲ್ಲಾ, ನನ್ನ ಪ್ರಶ್ನೆಗೆ ಉತ್ತರವನ್ನು ತಂದೆಯಾ? ' ಎಂದು ಕೇಳಿದನು

ಬೀರಬಲ್ಲನು ತಾ ಕರೆದುಕೊಂಡು ಬಂದಿದ್ದ ಮನುಷ್ಯನನ್ನು ಚಕ್ರವರ್ತಿಯ ಮುಂದೆ ನಿಲ್ಲಿಸಿ, ' ಮಹಾಪ್ರಭುವೇ, ಇವನೇ ನನ್ನ ಸಹೋದರ, ಇವನನ್ನು ಕೇಳಿ, ಇವನೇ ತಮ್ಮ ಪ್ರಶ್ನೆಗೆ ಉತ್ತರಕೊಡುವನು ' ಎಂದನು

ಚಕ್ರವರ್ತಿಯು " ಅಯ್ಯಾ, ಮೂರ್ಖನು ಅಹಂಕಾರದಿಂದ ಮನಬಂದಂತೆ ನಡೆದರೆ ಏನು ಮಾಡಬೇಕು? ' ಎಂದು ಕೇಳಿದನು ಅದಕ್ಕೆ ಆ ಮನುಷ್ಯನು ಏನೂಹೇಳದೆ ಸುಮ್ಮನೆ ನಿಂತನು ಆಗ ಚಕ್ರವರ್ತಿಯು ಅವನು ಕಿವುದನಿರಬಹುದೆಂದು ಭಾವಿಸಿ, ಬಹಳ ಜೋರಾಗಿ ಆ ಪ್ರಶ್ನೆಯನ್ನು ಪುನಃ ಕೇಳಿದನು ಆದರೂ ಆ ಮನುಷ್ಯನು ಏನೂ ಉತ್ತರಕೊಡಲಿಲ್ಲ ಇದನ್ನು ನೋಡಿ ಚಕ್ರವರ್ತಿಗೆ ಬಹಳ ಕೋಪಬಂತು ಬೀರಬಲ್ಲನನ್ನು ಕುರಿತು, ಏನಯ್ಯಾ ಬೀರಬಲ್ಲಾ, ನಿನ್ನ ಸಹೋದರನು ಏನೂ ಉತ್ತರವನ್ನೇ ಕೊಡುವುದಿಲ್ಲವಲ್ಲಾ? ' ಎಂದು ಕೇಳಿದನು ತಪ್ಪಕ್ಕೆ ಬೀರಬಲ್ಲನು ' ಸ್ವಾಮೀ, ನನ್ನ ಸಹೋದರನು ಉತ್ತರ ಕೊಡುತ್ತಿದ್ದಾನೆ ' ಎಂದನು

ಆಗ ಚಕ್ರವರ್ತಿಯು ' ಎಲ್ಲಿ? ಅವನು ಸುಮ್ಮನೆ ಮಾತಾಡದೆ ಏಂತಿದ್ದಾನೆ' ಎಂದು ಕೇಳಿದುದಕ್ಕೆ ಬೀರಬಲ್ಲನು, ' ಸ್ವಾಮಿ, ಮೂರ್ಖನಿಗೆ ಮಾಡುವ ಉಪದೇಶವು ಕುವಿಯನ ಎಚ್ಚೆಗೆ ನೀರೆರೆದಂತಾಗುವುದರಿಂದ ಅವನು ಮನಬಂದಂತೆ ನಡೆದರೆ ಸುಮ್ಮನಿರಬೇಕೆಂಬುದೇ ತಮ್ಮ ಪ್ರಶ್ನೆಗೆ ಉತ್ತರ " ಎಂದು ನುಡಿದನು ಚಕ್ರವರ್ತಿಯು ಇದನ್ನು ಕೇಳಿ ಬಹಳ ಸಂತೋಷಗೊಂಡು, " ಬೀರಬಲ್ಲಾ, ನೀನು ನನ್ನನ್ನೂ ಸಹ ಮೂರ್ಖನನ್ನಾಗಿ ಮಾಡಿದೆ " ಎಂದು ನಗುತ್ತ ನುಡಿದನು. ಇನ್ನಿತರ ದರ್ಬಾರಿಗಳು ಬೀರಬಲ್ಲನ ಚತುರತೆಯನ್ನು ನೋಡಿ ಆಶ್ಚರ್ಯಸಾಗರದಲ್ಲಿ ಮುಳುಗಿದರು ಆ ದಿನದಿಂದ ಅವನ ಮೇಲೆ ಅಸೂಯೆಪಡುವುದನ್ನು ಬಿಟ್ಟು ಪ್ರೀತಿಯಿಂದ ಇರಲಾರಂಭಿಸಿದರು. ಆದುದರಿಂದ ಅಹಂಕಾರದಿಂದ ಕೂಡಿರುವ ಮೂರ್ಖರ ಬಗ್ಗೆ ಮೌನತಾಳುವುದೇ ಮಹೌಷಧ

(ಬೆಳಕು ' ಪತ್ರಿಕೆಯಿಂದ)

ಅಹಂಕಾರವು ಮಾನವನನ್ನು ಅಧೋಗತಿಗೀಡುಮಾಡುವುದು

ಮಾನವಜನ್ಮವ ತಾಳಿದ ಮೇಲೆ ಅರಿವು ಬರಬೇಕಯ್ಯಾ, ಮರವೆ ಮರೆಯಾಗಬೇಕಯ್ಯಾ, " ನಾನು–ನನ್ನದು " ಎಂಬ ಅಹಂಕಾರ ಮಮಕಾರಗಳು ಅಳಿಯಬೇಕಯ್ಯಾ, " ನೀನು–ನಿನ್ನದು " ಎಂಬ ಭಾವವು ಬೆಳೆಯಬೇಕಯ್ಯಾ, ಅಹಂಕಾರವೆಂಬುದು ಅರಿಗೂ ಒಳ್ಳೆಯದಲ್ಲವಯ್ಯಾ, ಅಹಂಕಾರದಿಂದ ರಾವಣನು ಕೆಟ್ಟನಯ್ಯಾ, ಬಲಿಚಕ್ರವರ್ತಿಯು ರಸಾತಳವನ್ನೈ ದಿದನಯ್ಯಾ, ನಹುಷನು ಸರ್ಪವಾದನಯ್ಯಾ, ತನಗೆ ವರವನ್ನು ಕೊಟ್ಟವನ ಮೇಲೆಯೇ ತಿರುಗಿ ಬಿದ್ದ ಭಸ್ಮಾಸುರನು ಭಸ್ಮೀಭೂತನಾದನಯ್ಯಾ, ಈ ಕಾರಣದಿ ಸರ್ವಶಕ್ತಿ ಕಂಚನ್ನಿರಾದ ಮಹಾಮಹಾಶಕ್ತೇಶ್ವರೇರೇ ಅಹಂಕಾರ–ಮಮಕಾರರಹಿತರಾಗಿ ವಿನಯಾನ್ವಿತರಾಗು ಶ್ರಿಯವಲ್ಲಿ. ಯಾವ ಶಕ್ತಿಯೂ ಇಲ್ಲದ ಕ್ಷುದ್ರಳಕರು ಅಹಂಕಾರದಿಂದ ಝೇಂಕರಿಸುತ್ತಿರುವುದು ಕುದ್ದ ಮೂಢತನವಯ್ಯಾ, ಅಹಂಕಾರಗಳ ತ್ಯಾಗವನ್ನು ಜಪಮೊದಲು ತಿಳಿಯದೆ ಮೋಸಹೋಗುವರಯ್ಯಾ, ತಿರ್ಸುವ ಮೇಲೆ ಪೇಚಾಡುವರಯ್ಯಾ, " ವಿವೇಕರಾಲೇ ವಿವೃ ಬುದ್ಧಿ: " ಎಂಬ ಆರ್ಯೋಕ್ತಿಗಸಾರವಾಗಿ, ವಿನ ಕಾಲದಲ್ಲಿ ವಿಕರೀತಬುದ್ಧಿರೂಪವಾದ ಅಹಂಕಾ ಅಂಕುರಿಸುವದಯ್ಯಾ, " ಆಟ್ಟುಮೇಲೆ ಒಲೆ ಆ ಯಿತು, ಕೆಟ್ಟ ಮೇಲೆ ಬುದ್ಧಿ ಬಂದಿತು " ಎಂಬ್ಯ ಗಾದೆಗನುಸಾರವಾಗಿ ಕೆಟ್ಟ ಮೇಲೆ ಬುದ್ಧಿಬರುವಾ ಕ್ಕಿಂತಲೂ, ಮೊದಲೇ ಆ ಬುದ್ಧಿಯನ್ನು ತನ್ನ ಆ ದಲ್ಲಿಟ್ಟುಕೊಳ್ಳುವುದು ಶ್ರೇಯಸ್ಕವಯ್ಯಾ, ಇದೆ ಯೋಚಿಸಿ ಅಧೋಗತಿಗೆ ಕಾರಣವಾದ ಅಹಂಕಾ ಕೆಲಸ ದೂರೀಕರಿಸುವುದು ಮಂಗಲಪ್ರದವಯ್ಯಾ ಶ್ರೀನಿವಾಸ ನಾಥೇಶ್ವರಾ ॥

ಮಾನವನಿಗೆ ವಿನಯವೇ ಭೂಷಣವಯ್ಯಾ, ವಿನಯವೇ ದಿವ್ಯರಕ್ಷವಯ್ಯಾ, ವಿನಯವೇ ಮಹಾಪಿಧಿಯಯ್ಯಾ, ವಿನಯಶಾಲಿಯನ್ನು ಸರ್ವರೂ ಮನ್ನಿಸುವರಯ್ಯಾ, ಸೇವಿಸುವರಯ್ಯಾ, ಸ್ತುತಿಸುವರಯ್ಯಾ, ಗೌರವಿಸುವರಯ್ಯಾ, " ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಂ " ಎಂದು ಮಹಾತ್ಮರು ವಿನಯದ ಮಹತ್ವವನ್ನು ಬೋಧಿಸಿರುವರಯ್ಯಾ, ಕಿಂಕರತ್ವದಿಂದ ಶಂಕರತ್ವವು ಪ್ರಾಪ್ತವಾಗುವುದಯ್ಯಾ, ವಿನಯದಿಂದ ವಿಶ್ವವನ್ನು ಜಯಿಸಬಹುದಯ್ಯಾ, ಆದುಕಾರಣ ಸರ್ವರೂ ವಿನಯಸಂಪನ್ನರಾಗಿ ವಿಶ್ವಮಾನ್ಯರಾಗುವುದು ಭೂಷಣವಯ್ಯಾ ಶ್ರೀಸಿದ್ಧನಾಥೇಶ್ವರಾ ॥

ಓರ್ವ ಗುರುಭಕ್ತ

ವರ್ತಮಾನಸಂಗ್ರಹ

ಅಮೆರಿಕನ್ನರಿಗೆ ಭಾರತ ರಾಯಭಾರಿಯ ಮನವಿ

ಈ ಕಷ್ಟ ಕಾಲದಲ್ಲಿ ಅಮೆರಿಕವು ಭಾರತದ ಕೈ ಬಿಡಬಾರದು

ನಮ್ಮ ಇತಿಹಾಸದಲ್ಲಿ ಅತ್ಯಂತ ಕ್ಲಿಷ್ಟಕಾರಿಯ ಸಮಯದಲ್ಲಿ ಅಮೆರಿಕವು ನಮ್ಮನ್ನು ಕೈ ಬಿಡದೆ ಮ ಹತ್ತಿದಂದ ಆರ್ಥಿಕ ನೆರವು ನೀಡಿ, ಪ್ರಬಂಧದ ಅ ದ್ದಿಗೆ ಭಾರತವು ತನ್ನ ಕಾಣಿಕೆಯನ್ನು ಸಲ್ಲಿಸಲು ಸಹ ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತ ಎಂಬುದಾಗಿ ನ್ಯೂಯಾರ್ಕಿನಲ್ಲಿ ಭಾರತದ ಕಾರ್ಯ ಜನರಲ್‌ರವರಾದ ಶ್ರೀರಾಮಚಂದಾಮ್ ಸಾಕ್ಸೇನಾ ರವು, ಜಾಹೀರಾತಸಂಘದಲ್ಲಿ ಮಾತನಾಡುತ್ತಿರುವಾ

" ಯೂರೋಪಿನ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಕುಂಬಾ ಹದಗೆಟ್ಟಿದೆ. ಅದರ ಗಾಯಗಳು ಮೇಲೆ ಇರುವುದರಿಂದ ಅವನ್ನು ಯಾರು ಬೇಕಾದರೂ ನೋಡ ಬಹುದು ಆದರೆ ಭಾರತದ ಒಳಗಾಯಗಳ ಯಾ ಕಣ್ಣಿಗೂ ಕಾಣಿಸುವುದಿಲ್ಲ ಅಲ್ಲದೆ ಈ ಒಳಗಾಯಗಳ ಹೊರಗಾಯಗಳಿಗಿಂತ ಕೀಟ್ಟವಾಗಿವೆ.

" ಸೊರಗಿದ ದೇಹಗಳನ್ನು ನೋಡಿದರೆ ಭಾರತ ಕಷ್ಟ ಪರಿಸ್ಥಿತಿ ಅರಿವಾಗುತ್ತದೆ ನಮ್ಮ ಆರ್ಥಿಕ ಜೀವ ನನ್ನು ಪುನರುದ್ಧಾರಗೊಳಿಸುವ ಹೋರಾಟವನ್ನಡೆದಿ ಎಂದು ಅವರು ತಿಳಿಸಿದರು.

ಅಮೆರಿಕದಲ್ಲಿ ಶ್ರೀ ದಿನಕರರಾವ್ ದೇಸಾಯಿಯವರ ಭಾಷಣ

ಭಾರತವು ಕನ್ಯೂನಿಜಂ ಸಮಸ್ಯೆಯನ್ನು ಯಶ ಯಾಗಿ ಎದುರಿಸಲ್ಪಟ್ಟದು. ಕಮ್ಯೂನಿಜಂ ಬಿಡಗು ನೆಯ ಮೇಲೆ ಬೆಳೆಯುತ್ತದೆಂಬುದನ್ನು ನಾನು ಒಪ್ಪು ತ್ತೇನೆ. ಅದರೆ ಈಗ ನಮಗೆ ಸಮೃದ್ಧಿರಾಷ್ಟ್ರಗಳ ದೊರೆಯುತ್ತಿರುವ ಸಹಕಾರದಿಂದ ನಾವು ಕಮ್ಯೂನಿ ಎದುರಿಸುವುದು ಕಠಿಣವಾಗಲಾರದೆಂದು ತಿಳಿಯುತ್ತೇ ಭಾರತದ ಅತ್ಯಲ್ಪ ಕಮ್ಯೂನಿಜಂ ಹಿಡಿಸುವುದಿಲ್ಲ. ಎ ಜೊಂಬಾಯಿ ಸರ್ಕಾರದ ಪೂರ್ವಿಕೆ ಮಂತ್ರಿಗಳಾದ ದಿವಕರರಾವ್ ದೇಸಾಯಿಯವರು ವಾಷಿಂಗ್ಟ ಸೇರಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶ್ರೀದಿನಕರರಾವ್ ದೇಸಾಯಿಯವರು ಕೆಲವು ಗಳಿಗೆಗಳಿಗೆ ಉತ್ತರ ಕೊಡುತ್ತ, ಇದುವರೆಗೂ ಕಮ್ಯೂ ತತ್ವವು ಭಾರತದಲ್ಲಿ ಅಷ್ಟಾಗಿ ಗಂಭೀರ ಸ್ವರೂಪ ಲ್ಲವೆಂದು ಹೇಳಿದರು. ಆಹಾರ ಮತ್ತು ಕೃಷಿ ಸ್ಯ ಕಾರ್ಯಗಳ ಬಗ್ಗೆ ತಮಗೆ ತೃಪ್ತಿಯುಂಟಾಗಿದೆ ುಂದೂ ವಿಶೇಷತಃ ಅಕ್ಕಿ ನಿಯೋಗಮಂಡಲಿಯೊಂದನ್ನು ದ್ಯ ಸೂಕ್ತವಾದುದೆಂದೂ ಶ್ರೀ ದೇಸಾಯಿಯವರು ಾಯಪಟ್ಟರು

ರತವು ಸ್ವತಂತ್ರವಾದ ಮೇಲೆ ಉಂಟಾಗಿರುವ ಾವನೆ ಬಗ್ಗೆ ಪ್ರಶ್ನಿಸಿ ಪ್ರತಿನಿಧಿಯೊಬ್ಬನು ಕೇಳಿದ ್ನೆಗೆ ಶ್ರೀ ದೇಸಾಯಿಯವರು ಉತ್ತರ ಕೊಡುತ್ತ, ರವು ಬ್ರಿಟಿಷ್ ಆಡಳಿತದಲ್ಲಿ ಇದ್ದುದಕ್ಕಿಂತ ಈಗ ಮಾನವಾಗಿದೆಯೆಂದು ತಿಳಿಸಿದರು ಮುಂದುವರೆ ತ್ತಾ ಪ್ರಗತಿ ಹೊಂದಲು ನಾವು ನೂತನ ಯೋಜನೆ ನ್ನು ರಚಿಸಿಕೊಳ್ಳಬಹುದು ಯಾರೂ ಸಮನೆ ಡ್ಡಿ ಂತಿಲ್ಲ ನಾವು ಏನುಮಾಡಬೇಕೆಂಬುದನ್ನು ವು, ಅದನ್ನು ಮಾಡಲು ಆರಂಭಿಸಿದ್ದೇನೆ ಬ್ರಿಟ ಆಡಳಿತದಲ್ಲಿ ನಾಡಲುಸಾಧ್ಯವಾದದ್ದನ್ನೆಲ್ಲ ಈಗ ಡುತ್ತಿದ್ದೇನೆ.

ಚೀನಾ ಸರ್ಕಾರವು ನ್ಯಷನ್‌ಕಿಂಗ್ ಬಿಟ್ಟು ಹೋಗುವುದಿಲ್ಲ

ನ್ಯಾನ್‌ಕಿಂಗ್ ರಾಜಧಾನಿಗೆ ಗಂಡಾಂತರ ಒದಗಿದ್ದರೂ ರವು ಬೇರೆಡೆಗೆ ಸ್ಥಳ ಬದಲಾಯಿಸುವುದಿಲ್ಲವೆಂದು ೀ ಮಂಡಲು ನಿರ್ಧರಿಸಿದೆ

ಸರ್ಕಾರಿ ಉನ್ನತ ಆದಿಕಾರಿಗಳು ತಾತ್ಕಾಲಿಕವಾಗಿ ಅಧಿಕಾರ ಬಿಟ್ಟು ಹೋಗುವುದನ್ನಾಗಲೀ, ತಮ್ಮ ಗಳಿಗೆ ರಾಜಿನಾಮೆ ಕೊಡುವುದನ್ನಾಗಲೀ ಪ್ರತಿ ದಿಸಿಲಾಗಿದೆ

ಚೀನೀ ಸರ್ಕಾರದ ಅನೇಕ ಶಾಖೆಗಳು ಕ್ಯಾಂಟನ್ ಮತ್ತು ಚುಂಕಿಂಗಿಗೆ ವರ್ಗಾಂತರ ಹೊಂದಿವೆಯೆಂದು ಜಪಾನೀ ವರದಿಗಳು ಬಂದಿವೆ ಚೀನೀ ಪ್ರಮುಖ ಧಿಕಾರಿಗಳ ಆಶ್ರಿತರು ನ್ಯಾನ್‌ಕಿಂಗ್ ಮತ್ತು ಷಾಂಗ್ಹೈ ುಂದ ಸುರಕ್ಷಿತ ಪ್ರದೇಶಗಳಿಗೆ ಹೋದರು.

ಪೆಂಗ್‌ಪೂಮೇಲೆ ಫಿರಂಗಿ ಗುಂಡಿನ ಮಳೆ

ಕಳೆದ ಭಾನುವಾರದಿಂದ ಪೆಂಗ್‌ಪೂ ನಗರವು ಫಿರಂಗಿ ುಂಡಿನ ಸುರಿಮಳೆಯಿಂದ ತತ್ತರಿಸಿಹೋಗಿದೆ. ಸಂಖ್ಯಾ ೇನೆಗಳು ರೈಲ್ವೆ ಪ್ರಮುಖ ಕೇಂದ್ರವಾದ ಕುಚಿಂಗ್ ನ ೫೫ ಮೈಲಿ ಹಿಂದಕ್ಕೆ ಸರಿದವು.

ಪೆಂಗ್‌ಪೂವನ್ನು ರಕ್ಷಿಸುತ್ತಿರುವ ಸರ್ಕಾರಿ ಸೇನೆಗಳು ಕುದುರೆಲಾಳದ ಆಕಾರದಲ್ಲಿ ಶತ್ರುಗಳನ್ನು ಸುತ್ತುಗಟ್ಟಿರು ುವುದಲ್ಲದೆ, ಸೂಚೌ ಬಳಿ ಇರುವ ೦೦ ಸಾವಿರ ಸರ್ಕಾರಿ ೈನಿಕರನ್ನು ಕೂಡಿಕೊಳ್ಳಲು ಯತ್ನಿಸುತ್ತಿವೆ.

ಕಮ್ಯೂನಿಸ್ಟರ ಮೇಲೆ ಬಾಂಬುಗಳು

ನ್ಯಾನ್‌ಕಿಂಗಿಗೆ ಉತ್ತರ ದಿಕ್ಕಿನಲ್ಲಿರುವ ಪೆಂಗಪೂ ಬಳಿ ಜಮುವ ಕಮ್ಯೂನಿಸ್ಟ್ ಸೇನೆಗಳ ಮೇಲೆ ಸರ್ಕಾರಿ ವಿಮಾನಗಳು ಹೆಚ್ಚಿನ ಪ್ರಮಾಣದಲ್ಲಿ ಬಾಂಬುಗಳನ್ನು ಸುರಿಯುತ್ತಿವೆಯೆಂದು ವರದಿಯಾಗಿದೆ ಕೃಷ್ಣೋ ನದಿ ಡನ ಬಳಿ ಇರುವ ಕಮ್ಯೂನಿಸ್ಟ್ ಸೇನೆಗಳ ಮೇಲೆ ುತ್ತರ ಮತ್ತು ದಕ್ಷಿಣ ದಿಕ್ಕಿನಿಂದ ಎರಡು ಸರ್ಕಾರಿ ೀನೆಗಳು ನುಗ್ಗಿ ದಾಳಿಮಾಡಿದುವು

ಷಾಂಗ್ಹೇ ನಗರ ರಕ್ಷಣೆಗಾಗಿ ಸಿದ್ಧತೆ

ಚೀನಾದ ಮುಖ್ಯ ಬಂದರು ಮತ್ತು ವ್ಯಾಪಾರ ಸ್ಥಳ ವಾದ ಷಾಂಗ್ಹೈ ನಗರವನ್ನು ರಕ್ಷಿಸಲು ಚೀನಿ ಡೆಪ್ಯುಟಿ ಪ್ರಮುಖ ದಂಡನಾಯಕ ಜನರಲ್ ಟಾಂಗ್ ಎನ್‌ಪೊ ರವರು ಸೈನಿಕ ಗೌಪ್ಯತೆ ಮತ್ತು ನೌಕಾ ಸಮ್ಮೇಳನ ನೊಂದನ್ನು ಕರೆದಿದ್ದರು. ಷಾಂಗ್ಹೈ ನಗರದ ರಕ್ಷಣೆಯ ವಿಭಾಗವಾಗಿ ಆರ್ಡಿಯಾಯಿತೆಂದು ತಿಳಿಯಬಂದಿದೆ.

ಉತ್ತರ ಚೀನಾದಲ್ಲಿ ಕಮ್ಯೂನಿಸ್ಟರು ಪೀಪಿಂಗ್ ಟೇಗ್ಯೂನ್ ಪ್ರದೇಶವನ್ನು ಕತ್ತರಿಸಿಹಾಕಲು ಪ್ರಯತ್ನಿಸು ತ್ತಿದ್ದಾರೆ

ಹೈದರಾಬಾದಿನಲ್ಲಿ ಶಾಸನ ಸಭೆ ರದ್ದು

ಹೈದರಾಬಾದಿನಲ್ಲಿ ಈಗ ಇರುವ ಶಾಸನ ಸಭೆಯನ್ನು ನೈಜಾಮರು ರದ್ದು ಮಾಡಿದರು ಅನಂತರ ಎಲ್ಲಿರುವ ಮಿಲಿಟೆರಿ ಆಡಳಿತಗಾರರು, ಸೆನೇಷಣೆ ಹೊರಡಿಸಿ, ರಾಜ್ಯಾಂಗರಚನಾಸಭೆಯನ್ನು ಏರ್ಪಡಿಸಿದರು

ಹೈದರಾಬಾದಿನ ಒಪ್ಪಂದ

ನಿಜಾಂ ಸರ್ಕಾರವು ಬೂರಪ ಸರ್ಕಾರದೊಡನೆ ಈಗ್ಗೆ ಐದು ವರ್ಷದ ಹಿಂದೆ ಮಾಡಿಕೊಂಡಿದ್ದ ಒಪ್ಪಂದದ ಅವಧಿಯು ಕಳೆದ ಸೋಮವಾರಕ್ಕೆ ಮುಕ್ತಾಯವಾ ಯಿತು ಈ ಒಪ್ಪಂದದ ಪ್ರಕಾರ ನೈಜಾಮರು ತಮ್ಮ ಸಂಸ್ಥಾನದ ರಕ್ಷಣೆ, ಸಂಚಾರ, ಸಮಾಚಾರ, ಮತ್ತು ವಿದೇಶ ವ್ಯವಹಾರ ಈ ವಿಷಯಗಳ ಆಡಳಿತವನ್ನು ಭಾರತ ಸರ್ಕಾರಕ್ಕೆ ವಹಿಸಿದ್ದರು ಒಪ್ಪಂದ ಮುಗಿಯು ವುದಕ್ಕೆ ಒಂದು ವಾರದ ಮುಂಚೆ, ನೈಜಾಮರು ಭಾರತ ಸರ್ಕಾರಕ್ಕೆ ಪತ್ರ ಒಕ್ಕಿ, ಭಾರತ ಸರ್ಕಾರವರು ಈ ವಿಷಯಗಳಲ್ಲಿ ಆಡಳಿತವನ್ನು ಮುಂದುವರಿಸಬೇಕೆಂದು ಕೇಳಿಕೊಂಡಿರುವರು

ಹೈದರಾಬಾದ್ ಪರಿಸ್ಥಿತಿ

ಮೇ|| ಜಂ ಚೌಧರಿಯವರ ಡೈರಿಕೆ

ಹೈದರಾಬಾದಿನ ಇಂದಿನ ರಾಜಕೀಯ ಸ್ಥಿತಿಯನ್ನು ಮೇಜರ್ ಜನರಲ್ ಚೌಧರಿಯವರು ಇಂಡಿಯಾ ಮತ್ತು ಪರದೇಶಗಳ ಪ್ರತ್ರಿಕೋದ್ಯೋಗಿಗಳಿಗೆ ತಿಳಿಯಪಡಿಸಿದರು

ಸಿಬ್ಬಿಸಾರ್ಟರವರು ಹೈದರಾಬಾದಿಗೆ ಯುದ್ಧಸಾಮಗ್ರಿ ಗಳನ್ನು ತಂದಿದ್ದರಲ್ಲಿ ಸುಳ್ಳಾಲು ಜಾಸ್ತಿಯಿವೆ ಈಗ ನಮ್ಮ ವರದಿಪ್ರಕಾರ ನಿಜಾಮರು ಇಂಡಿಯನ್ ಆರ್ಮಿಯೊಂದಿಗೆ ಹೈದರಾಬಾದು ಸೈನ್ಯವರು ಸಣ್ಣ ಕಲಿಸಿ ನಡೆಯುತ್ತಿ ರುವರೆಂದೂ ನೆರೆಯಲ್ಲಿರುವವರು ರಜಾಕರರು ಮತ್ತು ಕ್ರಿಮಿನಲ್‌ಗಳು ಮಾತ್ರವೆಂದೂ, ಸಂಸ್ಥಾನದಲ್ಲಿ ಅಚ್ಚಿಗೆ ನಡೆಯುತ್ತಿರುವ ಕಮ್ಯೂನಿಸ್ಟ್ ಚಳವಳಿಯನ್ನು ತಡೆ ಯಲು ಸಕಲ ಸನ್ನಾಹವೂ ನಡೆದಿದೆಯೆಂದೂ ತಿಳಿಸಿ ದ್ದಾರೆ

ದೇಶದ್ರೋಹಕರವಾದ ನಿರ್ಧಾರ

ರೈಲ್ವೆ ಫೆಡರೇಷನ್ನಿನ ನಿರ್ಧಾರದ ಬಗ್ಗೆ ಪ್ರೊ|| ರಂಗನವರ ಖಂಡನೆ

ಆಲ್ ಭಾ|| ರೈಲ್ವೆ ನೌಕರರ ಫೆಡರೇಷನ್ ಸಂಸ್ಥೆಯು ಭಾರತಾದ್ಯಂತ ಮುಷ್ಕರ ಹೂಡಬೇಕೆಂದು ಮಾಡಿರುವ ನಿರ್ಧಾರವನ್ನು ಲಿಬರ‍್ಯಾಸ್ಯಂತನ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಪ್ರೊ|| ಎ ಜಿ ರಂಗನವರು ತೀವ್ರವಾಗಿ ಖಂಡಿಸಿದ್ದಾರೆ ಈ ನಿರ್ಧಾರವು ಸರಿಯಾದುದ್ದುವೆಂದೂ ಪಾಪ್ತ ದೇಶದ ಹಿತಕ್ಕೆ ಹಾನಿಯನ್ನುಂಟುಮಾಡುವು ದೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ

ಬಟ್ಟೆ ಪರಿಸ್ಥಿತಿ ತೃಪ್ತಿಕರವಾಗಿದೆ

೧ ನೆಯ ತಾ|| ನಿಂದ ಭಾರತಾದ್ಯಂತವೂ ಬಟ್ಟೆ ಉತ್ಪನ್ನವು ಸರ್ಕಾರದ ಹತೋಟಿಗೆ ಬಂದಿತು ಮಧ್ಯ ಪ್ರಾಂತ್ಯ, ಬೊಂಬಾಯಿ ಮತ್ತು ದೆಹಲಿಗಳಲ್ಲಿ ಬಟ್ಟೆ ರೇಷನಿಂಗ್ ಪದ್ಧತಿಯು ಜಾರಿಗೆ ಒಂದಿತು ಇತರ ಪ್ರಾಂತಗಳಲ್ಲಿ ಬೆಲೆ ನೂತ್ರ ನಿರ್ಧರಿಸಿ ಎಷ್ಟು ಬೇಕಾ ದರೂ, ಬಟ್ಟೆಗಳನ್ನು ಅವಕ್ಕಾಶ ಮಾಡಿಕೊಡಲಾಗಿದೆ.

ಈಗ ದೇಶದಲ್ಲಿ ಸುಮಾರು ೫ ಲಕ್ಷ ಬೇಲುಗಳ ಬಟ್ಟೆ ಏರೇವಾಗಿ ಇವೆಯಲ್ಲದೆ ಮಿಲ್ಲುಗಳಲ್ಲಿ ಸುಮಾರು ೨೫೫,೦೦೦ ಬೇಲುಗಳು ಇರುವುದರಿಂದ ಬಟ್ಟೆ ಪರಿಸ್ಥಿ ತಿಯು ತೃಪ್ತಿಕರವಾಗಿದೆ ಪರಿಸ್ಥಿತಿಯು ಈಗಿನಂತೆ ಮುಂದಿನ ಒಂಬತ್ತು ತಿಂಗಳಲ್ಲೂ ಇದ್ದರೆ ಕಂಟ್ರೋ ಲನ್ನು ಮುಂದುವರುವ ಪ್ರಸಕ್ತಿಯವಿರಲಾರದೆಂದು ಲನ್ನು ಮುಂದುವರುವ ಪ್ರಸಕ್ತಿಯವಿರಲಾರದೆಂದು ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿಗಳು ಹೇಳಿರುವರು.

ದೈವಭಕ್ತಿಯುಳ್ಳ ಪತ್ನಿ

ಪೂಜಾಸಮಯಕ್ಕೆ ಸರಿಯಾಗಿ ಬರುತ್ತಿದೆ

ನುದಾಸ್ ನಗರದಲ್ಲಿರುವ ಕವಾಲೇಶ್ವರ ದೇವಾ ಲಯದಲ್ಲಿ ಪೂಜೆಯ ವೇಳೆಗೆ ಸರಿಯಾಗಿ ಪ್ರತಿದಿನವೂ ದೇವರ ದರ್ಶನಕ್ಕಾಗಿ ಒಂದು ಪತ್ನಿ ಬರುತ್ತಿದೆ ಇದನ್ನು ನೋಡಲು ಸಹಸ್ರಾರು ಜನರು ಬರುತ್ತಿದ್ದಾರೆ.

ರೋಗ ನಿವಾರಣೆಗೆ ಮನೋಧೈರ್ಯವು ಒಂದು ಸಾಧನ

ಈ ಪ್ರಪಂಚದಲ್ಲಿ ರೋಗವಿಲ್ಲದ ಮನುಷ್ಯರು ದೊರೆ ಯುವುದು ಬಹು ದುರ್ಲಭ! ಎಂತಹ ಸಾರ್ವಜನಿಕ ಸೇವಾ ನನ್ನಾದರೂ ರೋಗಗಳು ಬಿಡುವುದಿಲ್ಲ ರೋಗ ನಿವಾರಣೆಗೆ ಸಿದ್ಧಾಷಧವೆಂದರೆ ಧೈರ್ಯವು ಆಯು ರ್ವೇದ ಶಾಸ್ತ್ರದಲ್ಲಿ ತದ್ವಿರುದ್ಧಕಾರಿ ಎಂಬ ಚಿಕಿತ್ಸೆಯುಂಟು. ಇದರಲ್ಲಿ ಯಾವ ಪದಾರ್ಥದ ಪ್ರಯೋಗವೂ ನಾವು ಊಹಿಸಿದ ಫಲವು ಒದಗುವುದೋ ಅದೇ ಪದಾರ್ಥ ವನ್ನು ಬೇರೆ ರೀತಿ ಉಪಯೋಗಿಸುವುದರಿಂದ ವಿರುದ್ಧ ವಾದ ಫಲವು ಒದಗುವುದು ಉದಾಪಶಮನಿಗಾಗಿ ಜಾಪಾಲ ಬೀಜವನ್ನು ಶಕ್ತಿವರ್ತಕ ಔಷಧಿಯನ್ನಾಗಿ ಪ್ರಯೋಗಿಸಿದರೆ ಅಮ ರೋಗಿಯು ಹೊಟ್ಟೆ ಮತ್ತು ಕರುಳುಗಳಲ್ಲಿ ಬಹುದೂರ ಪ್ರವೇಶಿಸಿ ಮಲಗಳನ್ನೆಲ್ಲಾ ಹೊರಬೂಮಿ ಕರೀರವನ್ನು ಸೃಚ್ಯವಾಗಿ ಮಾಡುತ್ತದೆ. ಆದರೆ ಇವನ್ನೇ ಶಕ್ತಿ ಕದಮಯಿಗಾಗಿ (Dilute) ಪ್ರಯೋಗಿಸಿದರೆ ಅತಿಯಾಗಿ ಭೇದಿಯಾಗುತ್ತಿರುವುದನ್ನು ನಿಲ್ಲಿಸಿಬಿಡುತ್ತದೆ ನಾವು ಚಿಂತಾಯುಕ್ತವಾದ ಯಾವ ಮನಸ್ಸಿನಿಂದ ರೋಗವನ್ನು ಆಸುಭಪಡುತ್ತಿದ್ದೇವೆಯೋ ಅದೇ ಮನಸ್ಸನ್ನು ಧೈರ್ಯಯುಕ್ತ ರೀತಿಯಲ್ಲಿಟ್ಟು ಕೊಳ್ಳುವುದರಿಂದ ರೋಗವನ್ನು ಹೋಗಲಾಡಿಸಿಕೊಳ್ಳ ಬಹುದು ಮನಸ್ಸಿನ ಮನಸ್ಸು ಧೈರ್ಯ-ಸ್ಥೈರ್ಯ ಗಳಿಂದ ಕೂಡಿದ್ದರೆ ರೋಗನೆಂಬುದು ಕೂಡಲೇ ಮಾಯವಾಗುತ್ತದೆ ರೋಗವನ್ನು ಹೊರದೂಡಲು ಮನಸ್ಸು ಎಜನ್ಸಿಯಂತೆ ಕೆಲಸಮಾಡುತ್ತದೆ ಮನಸ್ಸು ಸರಿಯಾಗಿಲ್ಲದಿದ್ದರೆ ಅನೇಕ ಸಾರಿ ಶಕ್ತಿವಂತವಾದ ಔಷಧಗಳೂ ಸಹ ಕೆಲಸಮಾಡದೆ ನಿರುಪಯೋಗ ವಾಗುವುವು ಅನೇಕ ಚಿಂತೆಗಳಿಗೆ ಮನೆಯಾಗಿರುವ ಮನಸ್ಸೇ ಪ್ರಪಂಚದಲ್ಲಿರುವ ಸರ್ವರೋಗಗಳಿಗೂ ಮೂಲಕಾರಣವು ಮನಸ್ಸು ಕೆಲವು ವೇಳೆ ಸ್ವಲ್ಪ ಜ್ವರವನ್ನೇ ವೈದ್ಯಾಯ್ಯಗೂ, ಸ್ವಲ್ಪ ಕೆಮ್ಮನ್ನೇ ಕ್ಷಯ ಅಥವಾ ನ್ಯೂ ಅನೇಸ್ತೀಯಾಕ್ಕೂ ಗುರಾಯಿ ರುದ್ರ ಭೂಮಿಗೆ ಒಯ್ಯಲು ಕಾರಣವಾಗುತ್ತದೆ ಚಿಂತೆಯಿಂದ ಬಿಡುಗಡೆ ಹೊಂದಿದ ಮನಸ್ಸು ಅನೇಕ ರೋಗಗಳನ್ನು ನಿರ್ಮೂಲನಮಾಡಲು ಆಟೊಬಾಂಬಿಗೆ ಸಮಾನನಾಗಿರು ವುದು ಮನಸ್ಸಿನ ಕಾಂತಿಯೇ ಎಕ್ಸ್‌ರೇ ವೇಳೆ ಶಕ್ತಿವಂತವಾದ ಔಷಧಿಗಳಿಂದಾಗದ ಕಾರ್ಯವನ್ನು ನಾವಾಗುತ್ತವೆ ಯಾರು ಆರೋಗ್ಯವಂತರಾಗಿರಬೇಕೆಂದು ಬಯಸುವರೋ ಅವರು ಪ್ರಸಂಚದ ಗೊಂದಲದಲ್ಲಿ ಹೆಚ್ಚು ಬೀಳಬಾರದು ಇದು ಒಮ್ಮೆಲೇ ಸಾಧ್ಯವಾಗುವ ದಿಲ್ಲ ಅದರೆ ಕ್ರಮಕ್ರಮವಾಗಿ ಸಾಧಿಸಬೇಕು ಮನಸ್ಸಿಗೆ ಸಂತೋಷಕರವಾದ ಕಥೆಗಳನ್ನು ಓದಬೇಕು. ಹರ್ಷ ದಾಯಕವಾದ ನೋಟುಗಳನ್ನು ನೋಡಬೇಕು. ಅನೇಕ ಚರ್ಚೆಗಳಲ್ಲಿ ಭಾಗವಹಿಸಿ ಜಯಸಬೇಕು ಅಂದರೆ ಮನಸ್ಸಿಗೆ ಹರ್ಷವುಂಟಾಗುತ್ತದೆ ಗಂಭೀರ ಸ್ವಭಾವದ ದೊಡ್ಡ ಮನುಷ್ಯರ ಮಧ್ಯದಲ್ಲಿದ್ದು ಆದರುಗಳು ಹಾಕಿ ಕೊಟ್ಟ ದಾರಿಯಲ್ಲಿಯೇ ನಡೆದುಬಾದರೆ, ಸೂರ್ಯನ ಕಿರಣಗಳಂದ ಮಂಜು ಕರಗಿ ಶೀಘ್ರಗುಮನಿ ಹಿಗೆ ಸೀರಾಗಿ ಹರಿದುಹೋಗುವುವು ಈ ಮೇಲೆ ಹೇಳಿದವು ಸಾಧನಗಳನ್ನು ಅನುಸರಿಸುವುದು ಶಕ್ತಿವಂತಾದ ಟಾನಿಕ್ಕಿಗಿಂತ ಹೆಚ್ಚಾಗಿ ಕೆಲಸಮಾಡುವುದರಲ್ಲಿ ಸಂದೇಹ ವಿಲ್ಲ. ಆದುದರಿಂದ ಮಾನವರು ಮನಸ್ಸನ್ನು ಧೈರ್ಯ ಸ್ಥೈರ್ಯಸ್ಥಿತಿಗೆ ತಂದುಕೊಂಡು ರೋಗಗಳಿಂದ ದೂರಾಗಿ ಧನ್ಯರಾಗಬೇಕು.

ಎಚ್. ವಿ. ಶ್ರೀನಿವಾಸಮೂರ್ತಿ
ಆಯುರ್ವೇದ ವಿದ್ವಾನ್, ಎಲ್.ಎ.ಎಂ.ಎಸ್.
ಮೈಸೂರು.

ಪಂಡಿತ ಶ್ರೀಕಾತೀನಾಥಶಾಸ್ತ್ರಿಗಳವರಿಂದ ಹೊಸದಾಗಿ ವಿರಚಿತವಾದ

ಶ್ರೀಜಗದ್ಗುರು ಸ್ತೋತ್ರಗಳಿಂದ ಕೂಡಿರುವ

ಗ್ರಾಮೋಫೋನ್ ರಿಕಾರ್ಡುಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಸ್ತೋತ್ರ ಪದ

ಪ್ಲೇಟ್ ನಂಬರ್ 8810 (ಸಾಹಿ ರೇಣುಕ)

ಹಾಡಿರುವವರು :—ಸುಪ್ರಸಿದ್ಧ ಸಂಗೀತ ವಿದ್ವಾನ್ ಶ್ರೀ ಕೊಟ್ಟೂರಪ್ಪನವರು

ಶ್ರೀಜಗದ್ಗುರು ಪಂಡಿತಾರಾಧ್ಯರ ಸ್ತೋತ್ರ ಪದ

ಪ್ಲೇಟ್ ನಂಬರ್ 8816 (ಶ್ರೀಶೈಲಾಲಯ)

ಹಾಡಿರುವವರು —ಕುಮಾರಿ ಸರೋಜ

ಮೇಲ್ಕಂಡ ೨ ಪ್ಲೇಟುಗಳು ಈಗ ಹೊಸದಾಗಿ ತಯಾರಾಗಿದ್ದು ಬಹು ಇಂಪಾದ ಗಾನದಿಂದ ಕೂಡಿರುವುದರಿಂದ, ಗ್ರಾಮೋಫೋನುಗಳೆನ್ನಿಟ್ಟುಕೊಂಡಿರುವವರೆಲ್ಲರೂ ತಪ್ಪಿಸಿಕೊಂಡು, ಜಗದ್ಗುರು ಸ್ತೋತ್ರಗಳನ್ನು ಕೇಳಿ ಧನ್ಯರಾಗಬೇಕು. ಒಂದೊಂದು ಪ್ಲೇಟಿನ ಬೆಲೆ **4** ರೂಪಾಯಿ.

ಈ ರಿಕಾರ್ಡುಗಳನ್ನು ಓರಿಜ್ ಮೂಸ್ಸರ್ಸ್ ನಾಯಿಸ್ ಕಂಪನಿ ಮದ್ರಾಸ್ ಇವರು ತಯಾರಿಸಿರುವರು. ಇಂಡಿಯಾದಲ್ಲಿ ಗ್ರಾಮೋಫೋನ್ ರಿಕಾರ್ಡುಗಳನ್ನು ಮಾರತಕ್ಕ ಪ್ರತಿಯೊಂದು ಅಂಗಡಿಯಲ್ಲಿಯೂ ದೊರೆಯುತ್ತವೆ ಒಂದು ವೇಳೆ ಅಂಗಡಿಗಳಲ್ಲಿ ಸ್ಟಾಕು ಇಲ್ಲದಿದ್ದರೆ, ಮೇಲ್ಕಂಡ ಪ್ಲೇಟಿನ **8810—8816** ನಂಬರುಗಳನ್ನು ತಿಳಿಸಿದರೆ ಅಂಗಡಿಯವರು ತರಿಸಿಕೊಡುತ್ತಾರೆ.

ದೇಶಕ್ಕೆ ಸರ್ದಾರ್ ಪಟೇಲರ ಭಾಷಣ

ಭಾರತದ ಉಪಪ್ರಧಾನ ಮಂತ್ರಿಗಳಾದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಈಚೆಗೆ ಶನಿವಾರ ಅಲಹಾಬಾದ್ ವಿಶ್ವವಿದ್ಯಾನಿಲಯದವರು 'ಡಾಕ್ಟರ್ ಆಫ್ ಲಾಸ್' ಎಂಬ ಗೌರವ ಪ್ರಶಸ್ತಿಯನ್ನು ಕೊಟ್ಟರು. ಆ ಸಮಾರಂಭದಲ್ಲಿ ಸರ್ದಾರ್ ಪಟೇಲರು ಭಾಷಣಮಾಡಿ ಈರೀತಿ ತಿಳಿಸಿದರು :—

ದೇಶ ಕಲಿತ ಪಾಠ

ಪೂರ್ವದಲ್ಲಿ ಭಾರತದಲ್ಲಿ ಸಣ್ಣಸಣ್ಣ ವ್ಯಾಮ್ಯಗಳನ್ನು ಉಂಟುಮಾಡಿಕೊಂಡು, ಸ್ವಾರ್ಥಸಾಧನೆಗಾಗಿ ಪ್ರಯತ್ನಪಟ್ಟಿದ್ದರಿಂದ ದೇಶದ ಸ್ವಾತಂತ್ರ್ಯವನ್ನು ಕಳೆದುಕೊಂಡೆನೆಂಬುದು, ಭಾರತದ ಚರಿತ್ರೆಯಿಂದ ತೀರಿಯುತ್ತದೆ. ದೇಶಕ್ಕೆ ಅಪಾಯ ಒದಗಿದಾಗ ಎಲ್ಲರೂ ಐಕಮತ್ಯದಿಂದ ಹೋರಾಡಬೇಕಾದಾಗ, ನಮ್ಮಲ್ಲಿ ಭಿನ್ನಭಾವನೆಗಳು ಬಂದುವು. ದ್ವೇಷ, ಅಸೂಯೆ ನಮ್ಮನ್ನು ಕುರುಡರನ್ನಾಗಿ ಮಾಡಿದುವು. ನಮ್ಮ ಶಿಸ್ತು ಹಾಳಾಯಿತು. ಒಂದು ದೇಶವು ತನ್ನ ಚರಿತ್ರೆಯ ಪಾಠಗಳನ್ನು ಮರೆತರೆ ವಿಪತ್ತು ನಿಶ್ಚಿತ!

ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಅನೇಕ ತೊಂದರೆಗಳು ಒದಗಿದುವು. ದೈವನಶಾತ್ ಇವೆಲ್ಲವನ್ನೂ ಬಗೆಹರಿಸಿಕೊಂಡು, ನಮ್ಮ ಸ್ವಾತಂತ್ರ್ಯವನ್ನು ಕಾಪಾಡಿಕೊಂಡಿದ್ದೇನೆ. ಆದರೆ ಸ್ವಾತಂತ್ರ್ಯವು ನಮ್ಮ ಮೇಲೆ ಹೊರಿಸಿರುವ ಜವಾಬ್ದಾರಿಯನ್ನು ನಿರ್ವಹಿಸಲು ನಾವು ತಯಾರಾಗಿದ್ದೇವೆಯೇ? ಸ್ವಾತಂತ್ರ್ಯದ ಹೋರಾಟ ನಡೆದಿದಾಗ ಇದ್ದ ಶಿಸ್ತು ಈಗ ನಮ್ಮಲ್ಲಿದೆಯೇ? ನಮ್ಮ ಅನುಭವಗಳಿಂದ ನಾವು ಬುದ್ಧಿ ಕಲಿಯದಿದ್ದರೆ, ನಾಶವಾಗುತ್ತೇನೆ

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಕಾಲದಲ್ಲಿ ಸತ್ಯ ಮತ್ತು ಅಹಿಂಸೆಯು ನಮ್ಮ ಮಾರ್ಗದರ್ಶಿಗಳಾಗಿದ್ದುವು. ಆದರೆ ಈಗ ನಮ್ಮ ಹೃದಯದಲ್ಲಿ ಕೋಪ ಕಾಣುತ್ತಿದೆ. ಸತ್ಯವು ದೂರಾಗಿದೆ ನಮ್ಮ ನಮ್ಮಲ್ಲೇ ಒಡಕು ಕಾಣುತ್ತಿದೆ.

ದೇಶದ ಸಮಸ್ಯೆಗಳು

ನಮ್ಮ ಜೀವನದ ಖರ್ಚು ಮಿತಿಮೀರಿದೆ. ಪದಾರ್ಥಗಳ ತಯಾರಿಕೆ ಸಾಕಷ್ಟು ಇಲ್ಲ. ಪರದೇಶಗಳಿಂದ ಬರುವ ಪದಾರ್ಥಗಳಿಗೆ ಹಣಕೊಡಲು ನಮ್ಮಲ್ಲಿ ಶಕ್ತಿ ಇಲ್ಲ. ನಮ್ಮ ಸೈನ್ಯವನ್ನು ನೂತನ ಮಾದರಿಯಲ್ಲಿ ಸಜ್ಜುಗೊಳಿಸಬೇಕು. ರೈತಾಗೂ, ಕಾರ್ಮಿಕನಿಗೂ, ಬಂಡವಾಳಗಾರನಿಗೂ ಇರುವ ಸಂಬಂಧವನ್ನು ಸರಿಪಡಿಸಬೇಕು. ದೇಶವನ್ನು ಪರರ ಆಕ್ರಮಣದಿಂದ ರಕ್ಷಿಸಿಕೊಳ್ಳಬೇಕು. ಜನರ ಜೀವನದ ಮಟ್ಟವನ್ನು ಹೆಚ್ಚಿಸಬೇಕು.

ತಯಾರಿಕೆ ಹೆಚ್ಚಿಬೇಕು

ಇಂಥ ಕಷ್ಟಕಾಲದಲ್ಲಿ ನಾವು ಅನೇಕ ಭಿನ್ನಾಭಿಪ್ರಾಯಗಳಿಂದ ಐಕಮತ್ಯವನ್ನು ಕಳೆದುಕೊಳ್ಳುತ್ತಿದ್ದೇನೆ. ಈಗ ನಮ್ಮಲ್ಲಿ ಶೈಥಿಲ್ಯಗಳು ಹೆಚ್ಚಾಗಬೇಕು. ತಯಾರಿಕೆಯು ಅಧಿಕವಾಗಬೇಕು. ಅದಕ್ಕೆ ಪ್ರತಿಯಾಗಿ ಮುಷ್ಕರಗಳಿಂದ ತಯಾರಿಕೆಗೆ ಅಡ್ಡಿ ಮಾಡುತ್ತಿದ್ದೇನೆ. ಶೈಥಿಲ್ಯಗಳನ್ನು ಪ್ರಾರಂಭಿಸುವ ಬದಲು, ಹಣವನ್ನು ಕೂತಿಟ್ಟು ಕುಳಿತಿದ್ದೇನೆ. ಕಾರ್ಮಿಕರು, ಹಣ ಸಂಪಾದನೆಗೆ ಮುಂಚಿತವಾಗಿ, ಹಣದ ಹಂಚಿಕೆಗಾಗಿ ಹೊಡೆದಾಡುತ್ತಿದ್ದಾರೆ. ಭೋಗ್ಯನಸ್ತುಗಾಗಿಯೂ, ದುಂದುವೆಚ್ಚಕ್ಕಾಗಿಯೂ ನಮ್ಮ ಸಂಪತ್ತನ್ನು ಕಳೆದುಕೊಳ್ಳುತ್ತಿದ್ದೇವೆ

ನಮ್ಮ ಸ್ವಾತಂತ್ರ್ಯವು ಇನ್ನೂ ಮಗುವಿನ ತೆರುವಾಗಲೇ ಅದರ ಬೆಳವಣಿಗೆಯು ಕಕ್ಷ್ಯಯುವಾಗಿಯೂ, ಆರೋಗ್ಯಕರವಾಗಿಯೂ ಆಗುದನ್ನು ನೋಡಿಕೊಳ್ಳಬೇಕು.

ಐಕಮತ್ಯದಿಂದ ಕಾರ್ಯ ಮಾಡಬೇಕು

ಈಗ ನಾವು ಒಗ್ಗಟ್ಟಿನಿಂದ ಕಾರ್ಯ ಮಾಬೇಕು. ದೇಶವನ್ನು ಜೀವಿಸಲು ಸುಖಕರವಾಪ್ರದೇಶವನ್ನಾಗಿ ಮಾಡಬೇಕು. ಭಾರತವು ವಿಖಂಡದಲ್ಲೆಲ್ಲಾ ಅತಿ ಪ್ರಮುಖಸ್ಥಾನವನ್ನುಗಳಿಸಿದೆ. ನಮ್ಮಗೆ ದೇಶಾದ ವಸ್ತುಗಳೆಲ್ಲವನ್ನೂ ನಾವೇ ತಯಾರಿಸಿಕೊಳ್ಳಬೇಕು. ಈ ಪ್ರದಾರ್ಥಗಳನ್ನು ಪರದೇಶಗಳಿಗೆ ತೆಗೆದುಕೊಂಡು ಹೋಗುವುದಕ್ಕಾಗಿ ಹಡಗುಗಳನ್ನು ಕಟ್ಟಬೇಕು. ಜನರೆಲ್ಲರಿಗೂ ಊಟಮಾಡಲು ಹೆಚ್ಚಾಗಿ ಆಹಾರ ಬೆಳೆಯಬೇಕು. ಬಟ್ಟೆಯ ತಯಾರಿಕೆಯನ್ನು ಹೆಚ್ಚಿಸಬೇಕು. ನಮ್ಮ ದೇಶವು ಮೃನಾಯದ ದೇಶ. ಅದ್ದರಿಂದ ವಸತಿದಲ್ಲಿ ಬಹುಕಾಲ ತೆಲಸಿಲ್ಲದಿರುವ ರೈತರಿಗಾಗಿ ಗೃಹಕೈಗಾರಿಕೆಗಳನ್ನು ಏರ್ಪಡಿಸಬೇಕು.

ನಾವು ಈಗ ಸ್ವಾತಂತ್ರ್ಯದ ನಿಜವಾದ ಅರ್ಥವೆನ್ನು ತಿಳಿಯೋಣ. ನಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸೋಣ!

ನ್ಯೂಯಾರ್ಕ್‌ನಲ್ಲಿ ಇಂಡಿಯಾ ಸರ್ಕಾರದ ಭವನ

ನ್ಯೂಯಾರ್ಕ್ ನಗರದ ಪ್ರಮುಖ ಸ್ಥಾನದಲ್ಲಿರುವ ಒಂದು ಭವ್ಯವಾದ ಭವನವನ್ನು ಇಂಡಿಯಾ ಸರ್ಕಾರವು ೩೪೦,೦೦೦ ಡಾಲರುಗಳಿಗೆ ಕೊಂಡುಕೊಂಡಿದೆ. ಈ ಕಟ್ಟಡವನ್ನು ಭಾರತ ಸರ್ಕಾರದ ಕಾರ್ಯಕಲಾಪಗಳಿಗಾಗಿ ಉಪಯೋಗಿಸಲಾಗುವುದು

ಬರ್ಮಾದಲ್ಲಿ ಭಾರತೀಯರಿಗೆ ನಷ್ಟ

ಬರ್ಮಾದಲ್ಲಿ ಭೂಮಿ ಎಲ್ಲವನ್ನೂ ಸರಕಾರದ ಆಡಳಿತಕ್ಕೆ ಸೇರಿಸಿಕೊಳ್ಳಲಾಗುವುದೆಂದು ಒಂದು ಕಾನೂನನ್ನು ಜಾರಿಗೆ ತರಲಾಗಿದೆ ಇದರಿಂದ ಆ ದೇಶದಲ್ಲಿ ಇರುವ ಭಾರತೀಯರಿಗೆ ಅಪಾರ ನಷ್ಟವಾಗಿದೆ. ಭಾರತೀಯರು ಅಲ್ಲಿ ೯೦ ಕೋಟಿ ರೂ. ಬೆಲೆಬಾಳುವ ೩೦ ಲಕ್ಷ ಎಕರೆ ಭೂಮಿಯನ್ನು ಪಡೆದಿದ್ದಾರೆ.

ಪರದಾ ತಪ್ಪಿಸಲು ಸತ್ಯಾಗ್ರಹ

ಶೆಲ್ಯತ್ಯದಲ್ಲಿ ಈಗ್ಗೆ ಕೆಲವು ದಿನಗಳ ಹಿಂದೆ ಮಾರ್ವಾಡಿಗಳ ಮನೆಯಲ್ಲಿ ಮದುವೆ ನಡೆಯಿತು ಮಾರ್ವಾಡಿಗಳ ಹೆಂಗಸರು ಇನ್ನೂ ಘೋಷಾ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ಮದುವಣಗಿತ್ತಿಯು ಪರದಾ ಧರಿಸಬಾರದೆಂದು, ಮದುವೆ ಮನೆಯ ಮುಂದೆ, ಕೆಲವು ಮಾರ್ವಾಡಿ ಯುವಕರು ಸತ್ಯಾಗ್ರಹ ಹೂಡಿದ್ದರು.

ಭಾರತದಲ್ಲಿ ವಿಮಾನಯಾನ ಸೌಕರ್ಯ

ಭಾರತದ ಹವಾಗುಣವು ವಿಮಾನಯಾನಕ್ಕೆ ಅತ್ಯಂತ ಹಿತಕರವಾಗಿದೆಯೆಂದೂ ಅತ್ಯಲ್ಪಕಾಲದಲ್ಲಿಯೇ ಭಾರತದಲ್ಲಿ ವಿಮಾನಯಾನ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದೆಂದೂ ಪಂ|| ನೆಹರೂ ತಿಳಿಸಿದರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

EGISTERED No M. 2266 « ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು » REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಸೀರಾಧಿಪರ್ ಪಂಚಕ್ಲೇಶವಿನಾಶಕರ್ ಪರಶಕ್ತ್ಯಪಂಜಲಿಂಗೋದ್ಭವರ್ ॥
ಪಂಚಾಚಾರಪಿಯೂಷಮಾಕರ್ ಪರಿಲಸತ್ಪಂಚಾಕ್ಷರೀಮೋದಕರ್ ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀ ಲೋಕಮಂ ॥

ವರ್ಷದವರಿಗೆ ೩ ರೂ. ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೩ನೇ ಡಿಸೆಂಬರ್ ೧೯೪೮ [ಸಂಚಿಕೆ ೩೧

ಮನುಷ್ಯನ ಬಂಧನವ್ಯಕ್ತಿಗೆ ಉಪಾಯ

ಲೇ.—ಎಸ್ ಜಿ ಚನ್ನಬಸವನಗೌಡ ಪಾಟೀಲ್
ಬಸವನಬ್ಯಾಣ, ಚನ್ನಗಿರಿ ತಾ॥

ಇರುವೆ ಮೊದಲು ಬ್ರಹ್ಮನು ಕರೆಯಾಗಿ ಪ್ರಂಪಚ ಸೃಷ್ಟಿಗಳಿಗೆ ಸಕಲ ಪ್ರಾಣಿಗಳೂ ಸದಾ ಸುಖವೇ ಬೇಕೆಂಬುದು, ದುಃಖವನ್ನು ಸರ್ವಥಾನ್ನ ಬೇಡವೆಂಬುದು, ಯಾಸುಸುಪ್ತಿರುವುವು. ಯಾವ ಪ್ರಾಣಿಗೂ, ಸಂಸಾರದಲ್ಲಿ ಪ್ರಾಣಿಕಸುಖವಲ್ಲದೆ ಶಾಶ್ವತ ಸುಖವೆ ಎಲ್ಲಿಯೂ ದೊರೆ ಯುವುದಿಲ್ಲ. ಪುತ್ರ, ಮಿತ್ರ ಕಲತ್ರಾದಿಗಳ ದರ್ಶನಾದಿ ಆಂದುಂಟಾಗುವ ಸುಖವು ಒಂದು ಕ್ಷಣಾವಿದ್ದರೆ, ಅವುಗಳ ವಿಯೋಗದಿಂದ ಮತ್ತೊಂದು ಕ್ಷಣದಲ್ಲಿ ದುಃಖವುಂಟಾ ಗುವದು ಶಾಶ್ವತ್ಯವು ಪ್ರಾಣಿಮಾತ್ರವನ್ನು ಎಡಬಿಡದೆ ಕ್ರಮಿಸುತ್ತಿರುವುದು. ಈ ಪ್ರಕಾರವಾದ ದುಃಖಮಯ ಸಂಸಾರದಲ್ಲಿ ತೊಳಲಿ ಬಳಲುತ್ತಿರುವ ಪ್ರಾಣಿಗಳ ಉದ್ಧಾರಕ್ಕಾಗಿಯೇ ಸಮ್ಯ ಪೂರ್ವಾಚಾರ್ಯರು ಮತ್ತು ಮಹರ್ಷಿಗಳು ಭಕ್ತಿಮಾರ್ಗ, ಜ್ಞಾನಮಾರ್ಗ, ಯೋಗ ಮಾರ್ಗ, ಕರ್ಮಮಾರ್ಗಗಳೆಂಬ ನಾಲ್ಕು ಉಪಾಯ ಗಳನ್ನು ಬೋಧಿಸಿರುವರು. ಮನುಷ್ಯನ ಬಂಧನವ್ಯಕ್ತಿಗೆ ಮುಖ್ಯ ಉಪಾಯಗಳೆಂದರೆ ಇವು ನಾಲ್ಕೇ! ಇವುಗಳನ್ನು ಬಿಟ್ಟು ಯಾವ ರೀತಿಯಿಂದಲೂ, ಮನುಷ್ಯನು ಸುಖ ವಾಗಿ ಬದ್ಧತೆಗಳನ್ನು ಕಾಣಲಾಗದು. ಇವುಗಳ ಅಧಾರದ ಮೇಲೆಯೇ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವೋತ್ತರಮೀಮಾಂಸೆಗಳೆಂಬ ಷಡ್ದರ್ಶನಗಳು ಸ್ಮೃತಿಶಾಸ್ತ್ರವಪ್ಪ ಮಹಾಪುರಾಣಗಳು ಭಾರತಾದಿ ಇತಿಹಾಸಗಳು ಮತ್ತು ಸಕಲ ಮತಗಳು ಹುಟ್ಟಿರುವವು. ವೀರಶೈವ ಮತವು ಮಾತ್ರ ಈ ನಾಲ್ಕರ ಸಮ್ಮಿಲನ ವೆಂದೊಡಗೂಡಿ, ಜಗತ್ತಿನಲ್ಲಿ ಶ್ರೇಷ್ಠವೆನಿಸುತ್ತಿರುವುದು. ಆದರಂತೆ ಸರ್ವಾಂಗಸುಂದರ ಮತವು ಈ ಪ್ರಪಂಚದಲ್ಲಿ ಮತ್ತೊಂದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಿಸಿದು ಸರ್ವಕಾಲದಲ್ಲಿ ಈ ಮತವು ಸಂಪೂರ್ಣ ಭಾರತ ಮಾಮಿಯನ್ನೇ ವ್ಯಾಪಿಸಿಕೊಂಡಿದ್ದಿತೆಂಬುದಕ್ಕೆ ನಮ್ಮ ಪೂರ್ವಾಚಾರ್ಯರು ಕಾಶಿ, ಹಿಮವತ್ಕೇದಾರ, ರಂಭಾ ಪುರಿ, ಉಜ್ಜಯಿನಿ, ಶ್ರೀಶೈಲ ಈ ಪಂಚ ಪುಣ್ಯಸ್ಥಲಗ ಳಲ್ಲಿ ಸ್ಥಾಪಿಸಿರುವ ಧರ್ಮಪೀಠಗಳೇ ಪ್ರಬಲವಾದ ಸಾಕ್ಷಿಗಳಾಗಿರುವವು ಮತ್ತೀಯರಿಲ್ಲದಿದ್ದರೆ ಮತಸ್ಥಾಪ ಕರ ಪೀಠಗಳಿರುವುದು ಅನಾವಶ್ಯಕವೇ ಸರಿ. ಈರೀತಿ ನೋಡಲು ವೈಭವದಿಂದ ಮೆರೆದ ಈ ಮತವು ಸದ್ಯ ಗುರಿಹೀನಳಿಳ್ಳೆ ಬಾರದಷ್ಟು ಅವನತಿಯನ್ನು ಹೊಂದಿರುವ ದಕ್ಕೆ ಅಜ್ಞಾನ, ಅಲಸ್ಯ, ಅವೈಕ್ಯತೆಗಳೆಂಬ ಮೂರು ಪ್ರಬಲವಾದ ಕಾರಣಗಳಿರುವುವು. ಇವುಗಳಿಂದಲೇ ಪ್ರತಿ ಯೊಂದು ಸಮಾಜವು ಹೀನಸ್ಥಿತಿಯನ್ನು ಹೊಂದುವುದು. ವೀರಶೈವ ಮತೀಯರಲ್ಲಿಂತೂ ಈ ತ್ರಿದೋಷಗಳು ಮೂರ್ತೀಕರಿಸುತ್ತಾಗಿ ವಾಸಮಾಡಿಕೊಂಡಿರುವವು ಈ ದೋಷಗಳನ್ನು ದೂರಮಾಡಿದ ಹೊರತು ಈ ಮತವು ಎಂದಿಗೂ ಉನ್ನತಿಯನ್ನು ಹೊಂದಲಾರದು ಈ ತ್ರಿದೋಷಗಳನ್ನು ದೂರಮಾಡುವುದಕ್ಕೆ ಶ್ರಮವಾಗಿ ವಿದ್ಯೆ, ಉತ್ಸಾಹ, ಐಕ್ಯಗಳೇ ಮುಖ್ಯ ಸಾಧಕಗಳಾ ಗಿರುವವು ಈ ಸಾಧಕಗಳಿಂದಲೇ ಈಗಿನ ಪಾಶ್ಚಾತ್ಯ ಜನಾಂಗವು ಮಹೋನ್ನತಿಯ ಶಿಖರವನ್ನು ಹೊಂದಿರುವುದು ಸರ್ವರಿಗೂ ತಿಳಿದ ಸಂಗತಿಯಾಗಿದೆ ಈ ಮೂರಿ ರಲ್ಲಿ ವಿದ್ಯೆಯೇ ಮುಖ್ಯವಾದುದು ಆದ್ದರಿಂದ ಸರ್ವರೂ ಮೊದಲು ವಿದ್ಯಾವಂತರಾಗಿ ಏಕ್ಯಭಾವನೆಯಿಂದ ಲುಪ್ತ ಪ್ರಾಯಗಳಾದ ಪ್ರಾಚೀನ ಸದ್ಧರ್ಮಾಚಾರಗಳನ್ನು ಉತ್ಸಾಹಪೂರ್ವಕವಾಗಿ ಪುನರ್ಜೀವನಗೊಳಿಸಿದರೆ ಶ್ರೇಷ್ಠ ದರ್ಜೆಯೇ ಮತವು ವಿದ್ಯಾಲಿನಂತೆ ಸುವ್ಯವ್ಯಸ್ಥಿತರೂಪ ವಳ್ಳಿ ದ್ಯಾಗುವುದು ವಿದ್ಯೆಯು ಅಜ್ಞೇಕಪಿಧವಾಗಿರುವುದು ಆದರಲ್ಲಿ ಅತ್ಯೊನ್ನತಿಗೆ ಮುಖ್ಯ ಸಾಧನವಾದುದೆಂದರೆ ಅಧ್ಯಾತ್ಮ ವಿದ್ಯೆ ಇದರಿಂದ ಪರಮಪುರುಷಾರ್ಥವಾದ ನೋಕ್ಷವು ಲಭಿಸುವದು ನಮ್ಮ ಪ್ರಾಚೀನ ಆಚಾರ್ಯರೂ ಮಹರ್ಷಿಗಳೂ ಲೋಕಕಲ್ಯಾಣಾರ್ಥವಾಗಿ ತತ್ತಾತ್ಕಾಲ್ಯ ವಿಷಯವನ್ನು ಸೂತ್ರ, ವಾರ್ತಿಕ, ಭಾಷ್ಯಾದಿ ರೂಪದಿಂದ ಸಂಸ್ಕೃತ ಭಾಷೆಯಲ್ಲಿ ಒದಿರುವರು ಇದು ಸಂಸ್ಕೃತ ಭಾಷಾಜ್ಞಾನವಿಲ್ಲದೆ ಪರಿತಿಲಿಸಲು ಅಶಕ್ಯವು ಸಂಸ್ಕೃತ ವಿದ್ಯಾಪ್ರವೀಣತೆಯು ಸದ್ಯಃ ಪರಿಶ್ಯಿತಿಗನುಸರಿಸಿ ಸರ್ವರಿಗೂ ಸಾಧ್ಯವಾಗುವುದಿಲ್ಲ ಸಂಸ್ಕೃತ ಭಾಷಾ ಪರಿಚಯವಿಲ್ಲದ ಜಿಜ್ಞಾಸುಗಳ ಹಿತಾರ್ಥವಾಗಿ ಸಿದ್ಧಾಂತ ರಹಸ್ಯವನ್ನು ಆಯಾ ಭಾಷೆಗಳಲ್ಲಿ ಮಹಾಪುರುಷರು ಬರೆದಂತೆ ನನ್ನು ಕನ್ನಡ ಭಾಷೆಯಲ್ಲಿ ಶ್ರೀ ನಿಜಗುಣಾ ರಾಧ್ಯ, ಮೆಗ್ಗೆದು ಮಾಯಿದೇವ, ಸರ್ವಭೂಷಣ ಶಿವಯೋಗಿ ಮುಂತಾದ ಮಹಾಮಹಾವರು ಅನೇಕ ದಿವ್ಯಗ್ರಂಥಗಳನ್ನು ರಚಿಸಿರುವರು ತಾವಾದರೂ ಪೌಢ ರೀತಿಯಿಂದ ಬರೆಯಲ್ಪಟ್ಟಿರುವುದರಿಂದ ಸರ್ವಸಾಮಾನ್ಯ ರಿಗೂ ತಿಳಿಯಲಿಕ್ಕೆ ಸಾಧ್ಯವಿಲ್ಲ ಅವಕ್ಕೋಸುಗ ವೇ॥ ಪಂ॥ ಶ್ರೀಕಾಶೀನಾಥಶಾಸ್ತ್ರೀಜಿಯವರು ಬಹಳ ಶ್ರಮ ವಹಿಸಿ ಸಿದ್ಧಾಂತಶಿಖಾಮಣಿ, ಶಿವಾದ್ವೈತಮಂಜರಿ, ವೀರಶೈವರತ್ನ, ಶ್ರೀಜಗದ್ಗುರು ಪಂಚಾಚಾರ್ಯ ಪ್ರಾಚೀ ನತ್ವ, ಶಿವಾಗಮಸಂಗ್ರಹ, ಶ್ರೀಶಂಕರಭಾಷ್ಯ ಮೊದಲಾದ ಅನೇಕ ಗ್ರಂಥಗಳನ್ನು ಕನ್ನಡದಲ್ಲಿ ಎಲ್ಲರಿಗೂ ತಿಳಿಯು ವಂತೆ ಒದಿದು ವೀರಶೈವ ಪ್ರಪಂಚಕ್ಕೆ ಮಲೋಪಕಾರ ವನ್ನು ಮಾಡಿದ್ದಾರೆ ಆದ್ದರಿಂದ ಪ್ರತಿಯೊಬ್ಬರೂ ಮೇಲ್ಕಂಡ ಪುಸ್ತಕಗಳನ್ನು ತರಿಸಿ ಒದಿ ಸಿದ್ಧಾಂತ ರಹಸ್ಯವನ್ನು ತಿಳಿದುಕೊಂಡು ಪರಮಾತ್ಮನ ಕೃಪೆಗೆ ಪಾತ್ರರಾಗಬೇಕಾಗಿ ಪ್ರಾರ್ಥಿಸುತ್ತೇನೆ

ವಿವಾಹಮಹೋತ್ಸವ, ಎಲವಿಗಿ

ಧಾರವಾಡ ಡಿ॥ ತಿಂಗಳಿ ತಾ॥ ಎಲವಿಗಿ ಗ್ರಾಮದಲ್ಲಿ ರುವ ತಿಗ್ಗಳಿ ಕೊಡಲಮಠದ ವೇ॥ ಬವಯ್ಯನವರ ಪುತ್ರ ಚಿ॥ ಸೌ॥ ಶಾರದಮ್ಮನನ್ನು ಸಂತಿ ಹಿರೇಮಠದ ವೇ॥ ನಿರಂಜನಯ್ಯನವರ ಪುತ್ರ ಚಿ॥ ಶಾಂತಯ್ಯನವರಿಗೆ ಇದೇ ಸರ್ವಧಾರಿನಾಮ ಸಂವತ್ಸರ ಮಾರ್ಗ ಕೃಷ್ಣ ದ್ವಿತೀಯ ಶುಕ್ರ ೨ ಗುರುವಾರದ (ತಾ॥ 2-12-48) ನೆಯ ದಿವಸ ಎಲವಿಗಿ ಗ್ರಾಮದಲ್ಲಿ ವಿವಾಹಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು. ಮಾಡಾಪುರ ಬೃಹನ್ಮಾಠಾಧ್ಯಕ್ಷರಾದ ಶ್ರೀ ಜಿ॥ ಬ॥ ಶಿವಸ್ವಾಮಿ ಗಳವರ ಗುರುತ್ವದಲ್ಲಿಯೂ ಗುಡಗೇರಿ ಹಿರೇಮಠದ ವೇ॥ ಶಂಕರಯ್ಯನವರ ವೈದಿಕತ್ವದಲ್ಲಿಯೂ ವಿವಾಹಾಂಗ ಭೂತವಾದ ಸಮಸ್ತ ಕಾರ್ಯಗಳು ವಿಘ್ನರಹಿತವಾಗಿ ನೆರ ವೇರಿದುವು ಕನ್ಯೆಯು ದಾನಕೂರೆಂದು ವ್ಯಾಪಿವೆಕ್ಕೆ ಶಿಗ್ಗಲಿ ಕೊಡಲಿಮಠದ ಕೈ॥ ಸಿದ್ಧಯ್ಯನವರ ಮೊಮ್ಮ ಗಳು ಈ ವಿವಾಹಸಮಾರಂಭಕ್ಕೆ ಅನೇಕಜನ ಬಂಧು ಬಾಂಧವರೂ ಇತರ ಪ್ರತಿಷ್ಠಿತ ಗೃಹಸ್ಥರೂ ಆಗಮಿಸಿ ದ್ದರು ವಧುವಿನ ಮಾತಾಮಹರಾದ ಗದಗಿನ ಮಂಗ ಳೂರು ಅರಿಳೆಲೆ ಮಕದ ವೇ॥ ಯಜಮಾನ ಸಿದ್ಧಲಿಂಗ ಯ್ಯನವರ ಸೂಚನೆಯಂತೆ ಪ್ರಭಾಪೋಷಣಕ್ಕಾಗಿ ವಧೂ ವರರ ಕಡೆಯಿಂದ ಎಪ್ಪತ್ತು ರೂಪಾಯಿಗಳು ತೆಗೆಯಿಸ ಲ್ಪಟ್ಟವು ಶ್ರೀಜಗದ್ಗುರು ಪಂಚಾಚಾರ್ಯರು ನೂತನ ದಂಪತಿ ಗಳಿಗೂ ಈ ಮಂಗಲಕಾರ್ಯದಲ್ಲಿ ಭಾಗವಹಿಸಿದ ಸರ್ವ ರಿಗೂ ಆಯುರಾರೋಗ್ಯಭಾಗ್ಯಾದಿಗಳನ್ನು ಅನುಗ್ರಹಿಸ ಲೆಂದು ಪ್ರಾರ್ಥಿಸಿದೆ.

ಪ್ರತ್ಯಕ್ಷದರ್ಶಿ.

ಸ್ವೀಕಾರ

ಧಾರವಾಡ ಡಿ॥ ತಿಗ್ಗಾವಿ ತಾ॥ ಎಲವಿಗಿ ಗ್ರಾಮದ ಲ್ಲಿರುವ ವೇ॥ ತಿಗ್ಗಲಿ ಕೊಡಲಮಠದ ಬವಯ್ಯನವರ ಪುತ್ರ ಚಿ॥ ಸೌ॥ ಶಾರದಮ್ಮನನ್ನು ವೇ॥ ಸಂತಿ ಹಿರೇ ಮಠದ ನಿರಂಜನಯ್ಯನವರ ಪುತ್ರ ಚಿ॥ ಶಾಂತಯ್ಯ ನವರಿಗೆ ಕೊಟ್ಟು ಎಲವಿಗಿ ಗ್ರಾಮದಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ಸಮರ್ಪಿಸಲ್ಪಟ್ಟ 10 ರೂ. ಗಳು ವೇ॥ ಸಿದ್ಧಲಿಂಗಯ್ಯನವರು ಮಂಗಳೂರು ಅರಳೆಲೆಮಕ ಇವರ ದ್ವಾರಾ ತಲಪಿರುತ್ತವೆ.

ಬಳ್ಳಾರಿ ಡಿ॥ ಶಿರಗುಪ್ಪ ತಾ॥ ಕೊಂಚಿಗೇರಿ ಗ್ರಾಮದ ಲ್ಲಿ ನೆಲೆಸಿರುವ ಶ್ರೀ ಸಿದ್ಧರಾಮೇಶ್ವರ ಪುಣ್ಯ ಸಮಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಮ॥ ರಾ॥ ತೆಳ್ಳಲಕೇರಿ ಮುಷ್ಟಿವೀರಪ್ಪನವರು 4 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ

ಧಾರವಾಡ ಡಿ॥ ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಮ॥ ರಾ॥ ಹೂವಿನ ಗಂಗಪ್ಪನವರು ತಮ್ಮ ಪುತ್ರ ಚಿ॥ ಡಾ॥ ಶಾಂತಪ್ಪ ಹೊಳಲು ಇವರ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂ. ಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಬಳ್ಳಾರಿ ಡಿ॥ ಅದೆವಾನಿ ತಾ॥ ಹಾಲ್ವಿಗ್ರಾಮದ ಧರ್ಮಪರಾಯಣ ಶ್ರೀಮಂತ ಕೋಣಂಗಿ ಅಮರಪ್ಪ ನವರು ೨೭-೧೧-೪೮ ನೆಯ ದಿವಸ ತೀರ್ಥಿನಿಧಾನದ ಸಮಯದಲ್ಲಿ ಅವರ ಪುತ್ರ ಚಿ॥ ತಿಪ್ಪಪ್ಪನಿಂದ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 1 ರೂ. ವೇ॥ ಮೆಹದ ಅಜ್ಜಿಮಲ್ಲಯ್ಯನವರ ದ್ವಾರಾ ತಲಪಿರುತ್ತದೆ.

ಈ ಮೇಲ್ಕಂಡ ಮಹಾಕಾರ್ಯಗಳೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು, ಸಿದ್ಧಿಮಂಗಲವಪ್ಪ ಗೆಯಲೆಂದು ಹಾರೈಸುತ್ತೇವೆ.

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಹೊಸದಾಗಿ ವಿರಚಿತವಾದ

ಶ್ರೀಜಗದಾಚಾರ್ಯರ ಸ್ತೋತ್ರಗಳಿಂದ ಕೂಡಿರುವ

ಗ್ರಾಮೋಫೋನ್ ರಿಕಾರ್ಡುಗಳು

ಶ್ರೀಜಗದ್ಗುರು ರೇಣುಕಾಚಾರ್ಯರ ಸ್ತೋತ್ರ ಪದ

ಪ್ಲೇಟ್ ನಂಬರ್ 8810 (ಪಾಹಿ ರೇಣುಕ)

ಹಾಡಿರುವವರು.—ಸುಪ್ರಸಿದ್ಧ ಸಂಗೀತ ವಿದ್ವಾನ್ ಶ್ರೀ ಕೊಟ್ಟೂರಪ್ಪನವರು

ಶ್ರೀಜಗದ್ಗುರು ಪಂಡಿತಾರಾಧ್ಯರ ಸ್ತೋತ್ರ ಪದ

ಪ್ಲೇಟ್ ನಂಬರ್ 8816 (ಶ್ರೀಶೈಶಾಲಯ)

ಹಾಡಿರುವವರು —ಕುಮಾರಿ ಸರೋಜ

ಮೇಲ್ಕಂಡ ೨ ಪ್ಲೇಟುಗಳು ಈಗ ಹೊಸದಾಗಿ ತಯಾರಾಗಿದ್ದು ಬಹು ಇಂಪಾದ ಗಾನದಿಂದ ಕೂಡಿರುವುದರಿಂದ, ಗ್ರಾಮೋಫೋನುಗಳನ್ನಿಟ್ಟುಕೊಂಡಿರುವವರೆಲ್ಲರೂ ತರಿಸಿಕೊಂಡು, ಜಗದಾಚಾರ್ಯರ ಸ್ತೋತ್ರಗಳನ್ನು ಕೇಳಿ ಧನ್ಯರಾಗಬೇಕು. ಒಂದೊಂದು ಪ್ಲೇಟಿನ ಬೆಲೆ **4** ರೂಪಾಯಿ

ಈ ರಿಕಾರ್ಡುಗಳನ್ನು ಓಜ್ ಮೋಸ್ಪರ್ಸ್ ಮಾಮಿಸ್ ಕಂಪನಿ ಮದ್ರಾಸ್ ಇವರು ತಯಾರಿಸಿರುವರು. ಇಂಡಿಯಾದಲ್ಲಿ ಗ್ರಾಮೋಫೋನ್ ರಿಕಾರ್ಡುಗಳನ್ನು ಮಾರತಕ್ಕ ಪ್ರತಿಯೊಂದು ಅಂಗಡಿಯಲ್ಲಿಯೂ ದೊರೆಯುತ್ತವೆ ಒಂದು ವೇಳೆ ಅಂಗಡಿಗಳಲ್ಲಿ ಸ್ಟಾಕು ಇಲ್ಲದಿದ್ದರೆ, ಮೇಲ್ಕಂಡ ಪ್ಲೇಟಿನ **8810—8816** ನಂಬರುಗಳನ್ನು ತಿಳಿಸಿದರೆ ಅಂಗಡಿಯವರು ತರಿಸಿಕೊಡುತ್ತಾರ

ಗೃಹಕೈಗಾರಿಕೆಗಳು

ಭಾರತವು ಅಭಿವೃದ್ಧಿಹೊಂದಬೇಕಾದರೆ, ಕೈಗಾರಿಕೆಗಳು ಹೆಚ್ಚಬೇಕು ನನ್ನ ದೇಶದಲ್ಲಿ ಖನಿಜಸಂಪತ್ತು ಹೇರಳವಾಗಿವೆ. ಅರಣ್ಯಸಂಪತ್ತು ಇದೆ. ಜಲಶಕ್ತಿ ಇದೆ. ಮಾನವಶಕ್ತಿಗೇನೂ ಕೊರತೆ ಇಲ್ಲ. ಇಷ್ಟಾದರೂ ನಾವು ನಮಗೆ ಬೇಕಾದ ವಸ್ತುಗಳೆಲ್ಲವನ್ನೂ ಪರದೇಶಗಳಿಂದ ತರಿಸಿಕೊಳ್ಳುತ್ತೇವೆ ಹಿಂದಕ್ಕೆ ಎರಡರಷ್ಟು ದುಡ್ಡು ಕೊಟ್ಟು, ಪರದೇಶಗಳ ಪದಾರ್ಥಗಳನ್ನು ಕೊಂಡು ಬಡವರಾಗುತ್ತಿದ್ದೇವೆ ನಮ್ಮ ಜನರು ಉದ್ಯೋಗವಿಲ್ಲದೆ ದರಿದ್ರರಾಗುತ್ತಿದ್ದಾರೆ. ಇವೆಲ್ಲಕ್ಕೂ ಕಾರಣವೆಂದರೆ ಕೈಗಾರಿಕೆಯ ಅಭಿವೃದ್ಧಿ ಸಾಕಷ್ಟು ಆಗದಿರುವುದು. ಕೈಗಾರಿಕೆ ಹೆಚ್ಚಾದಂತೆಲ್ಲಾ ನಮಗೆ ಬೇಕಾದ ಪದಾರ್ಥಗಳನ್ನು ನಾವೇ ತಯಾರಿಸಿಕೊಳ್ಳಬಹುದು. ನಮ್ಮ ಹಣ ನಮ್ಮಲ್ಲಿಯೇ ಇರುತ್ತದೆ. ಜನರಿಗೆ ಉದ್ಯೋಗ ದೊರಕುತ್ತದೆ. ದೇಶವೂ ಅಭಿವೃದ್ಧಿಗೆ ಬರುತ್ತದೆ.

ಕೈಗಾರಿಕೆ ಎಂದರೆ, ದೊಡ್ಡ ಕಾರ್ಖಾನೆಗಳೇ ಏರ್ಪಡಬೇಕೆಂದಲ್ಲ, ದೊಡ್ಡ ಕೈಗಾರಿಕೆಗಳ ಜೊತೆಗೆ ಗೃಹಕೈಗಾರಿಕೆಗಳು ಏರ್ಪಡಬೇಕು. ದೇಶದ ಜನರು ತಮಗೆ ದೊರೆತ ವಿಶ್ರಾಮಕಾಲವನ್ನು ದುರುಪಯೋಗಪಡಿಸಿಕೊಳ್ಳದೆ ಯಾವುದಾದರೊಂದು ಗೃಹಕೈಗಾರಿಕೆಯನ್ನು ಪ್ರಾರಂಭಿಸಬೇಕು. ಜಪಾನಿನ ಉದಾಹರಣೆಯನ್ನು ನೋಡಿ. ಯುದ್ಧ ಕೈ ಮುಂಚೆ ಜಪಾನಿನಿಂದ ಅನೇಕ ಪದಾರ್ಥಗಳು ನಮ್ಮ ದೇಶಕ್ಕೆ ಬರುತ್ತಿದ್ದವು. ಕಾಗದದ ಪೊಟ್ಟಣದಿಂದ ಮೊದಲಾಗಿ, ಗಡಿಯಾರ, ಸೈಕಲ್ ಮೊದಲಾದ ಪದಾರ್ಥಗಳೆಲ್ಲವೂ ಜಪಾನಿನಿಂದ ಬರುತ್ತಿದ್ದುವು. ಇವೆಲ್ಲ ದೊಡ್ಡ ಕಾರ್ಖಾನೆಗಳಲ್ಲಿ ತಯಾರಾಗುತ್ತಿದ್ದುವೆಂದು ತಿಳಿಯಬೇಡಿರಿ. ಈ ಪದಾರ್ಥಗಳು ಸಣ್ಣ ಸಣ್ಣ ವ ನೆಗಳಲ್ಲಿ ತಯಾರಾಗುತ್ತಿದ್ದುವು ಕೇವಲ ನಾಲ್ಕೈದು ಜನರು ಸೇರಿ ನಾನಾವಿಧ ಕೈಗಾರಿಕೆಗಳನ್ನು ಪ್ರಾರಂಭಿಸುತ್ತಿದ್ದರು ಹೆಂಗಸರೂ, ಗಂಡಸರೂ, ಮಕ್ಕಳೂ ಈ ಕೆಲಸವನ್ನು ಮಾಡುತ್ತಿದ್ದರು ಜಪಾನಿನಲ್ಲಿ ಯುದ್ಧಕ್ಕೆ ಮುಂಚೆ ತಯಾರಾಗುತ್ತಿದ್ದ ಪದಾರ್ಥಗಳಲ್ಲಿ ನೂರರ ಕೈ ಭಾಗವನ್ನು ಸಣ್ಣ ಕಾರ್ಖಾನೆಗಳು ತಯಾರಿಸುತ್ತಿದ್ದುವು. ಈ ಕಾರ್ಖಾನೆಗಳನ್ನು ಒಬ್ಬೊಬ್ಬರು ಅಥವಾ ನಾಲ್ಕೈದು ಜನ ಮಾತ್ರ ನಡೆಸುತ್ತಿದ್ದರು.

ಯುದ್ಧಕ್ಕೆ ಮುಂಚೆ ಪ್ರಸಂಚದಲ್ಲೆಲ್ಲಾ ಬಟ್ಟೆಯನ್ನು ಹೆಚ್ಚಾಗಿ ರಫ್ತುಮಾಡುತ್ತಿದ್ದ ದೇಶ ವೆಂದರೆ ಜಪಾನ್. ಆದರೆ ಈ ಬಟ್ಟೆಯಲ್ಲಿ ಹೆಚ್ಚು ಭಾಗವು ಜಪಾನಿನ ಮನೆಗಳಲ್ಲಿ ಏರ್ಪಟ್ಟಿದ್ದ ಸಣ್ಣ ಕಾರ್ಖಾನೆಗಳಲ್ಲಿ ತಯಾರಾಗುತ್ತಿತ್ತು. ರೇಷ್ಮೆ ವಸ್ತ್ರಗಳನ್ನೂ ಮಹಿಳೆಯರೆ ಉಡುಪನ್ನೂ ಜಪಾನಿನ ಮನೆಗಳಲ್ಲಿ ತಯಾರಿಸಲಾಗುತ್ತಿತ್ತು.

ನಾಲ್ಕೈದು ಜನರು ಮಾತ್ರ ಸೇರಿ ಕೆಲಸಮಾಡುತ್ತಿದ್ದ ಸೂರಾರು ಸಣ್ಣ ಕಾರ್ಖಾನೆಗಳಲ್ಲಿ ಸೈಕಲ್ಲುಗಳು, ರಬ್ಬರ್ ಮತ್ತು ವಿದ್ಯುತ್ತಿನ ಸಾಮಾನುಗಳು, ಗಡಿಯಾರ, ಪೌಂಟನ್‌ಪೆನ್, ಸುಂದರವಾದ ಮಣ್ಣಿನ ಪಾತ್ರೆಗಳು, ಗಾಜಿನ ಸಾಮಾನುಗಳು ಮೊದಲಾದ ನೂರಾರು ರೀತಿಯ ಉಪಯೋಗಕರವಾದ ಪದಾರ್ಥಗಳನ್ನು ತಯಾರಿಸುತ್ತಿದ್ದರು. ಸೈಕಲ್ಲುಗಳನ್ನು ಮನೆಗಳಲ್ಲಿ ತಯಾರಿಸುತ್ತಿದ್ದರೆಂದು ಹೇಳಿದರೆ ನಿಮಗೆ ಆಶ್ಚರ್ಯವಾಗಬಹುದು.

ಈ ರೀತಿ ಪದಾರ್ಥಗಳನ್ನು ಮನೆಗಳಲ್ಲಿಯೇ ತಯಾರಿಸಲು ಜಪಾನಿನಲ್ಲಿ ಕೆಲವು ಅನುಕೂಲಗಳಿದ್ದುವು. ಬಹಳ ಕಡಿಮೆದರದಲ್ಲಿ ವಿದ್ಯುಚ್ಛಕ್ತಿ ಸರಬರಾಜಾಗುತ್ತಿತ್ತು. ಕಡಿಮೆ ಕೂಲಿಗೆ ಜನರು ದೊರೆಯುತ್ತಿದ್ದರು ಕೈಗಾರಿಕೆಗಳನ್ನು ವಂಶಾಪಾರ್ಜಿತವಾಗಿ ನಡೆಸುತ್ತಿದ್ದುದರಿಂದ ಅವರ ಕಾರ್ಯದಲ್ಲಿ ಪ್ರೀತಿ ವಿಶ್ವಾಸವಿತ್ತು.

ಗೃಹಕೈಗಾರಿಕೆಗಳು, ಜಪಾನಿನ ಪ್ರತಿಹಳ್ಳಿಗಳಲ್ಲಿಯೂ ಏರ್ಪಟ್ಟಿವೆ. ರೈತರಿಗೆ ಬೇಸಾಯದ ಕೆಲಸವಿಲ್ಲದಿರುವಾಗ, ಉದ್ಯೋಗವನ್ನು ದೊರಕಿಸಲು ಜಪಾನಿನ ಹಳ್ಳಿಗಳಲ್ಲಿ ಸುಮಾರು ೫೦ ಸಾವಿರ ಗೃಹಕಾರ್ಖಾನೆಗಳಿವೆ ಕೇವಲ ಮೂರು ಹಳ್ಳಿಗಳಲ್ಲಿ ೩,೨೦೦ ಗೃಹಕಾರ್ಖಾನೆಗಳಿವೆ. ಪ್ರತಿ ಮನೆಯೂ ಕಾರ್ಖಾನೆ ಎಂದು ಹೇಳಬಹುದು ಹಿಂದು ಹಳ್ಳಿಯಲ್ಲಿ ಸುಮಾರು ಹಿಂದುಸಾವಿರ ಮನೆಗಳಲ್ಲಿ ಕೈಯಿಂದ ಕಾಗದವನ್ನು ತಯಾರಿಸುತ್ತಾರೆ. ಗ್ರಾಮಸ್ಥರಿಗೆ ಶಿಕ್ಷಣಕೊಡಲು ಸರ್ಕಾರದವರು ಹಳ್ಳಿಗಳಲ್ಲಿ ಶಿಕ್ಷಣಶಾಲೆಗಳನ್ನು ಏರ್ಪಡಿಸಿದ್ದಾರೆ ಮತ್ತೊಂದು ಹಳ್ಳಿಯಲ್ಲಿ ಹಿಂದು ಸಾವಿರ ಮನೆಗಳಲ್ಲಿ ಬೊಂಬಿನಿಂದ ನಾನಾತರಹದ ಪದಾರ್ಥಗಳನ್ನು ತಯಾರಿಸಿ, ಅಮೆರಿಕಾವಿಗೆ ಕಳುಹಿಸುತ್ತಾರೆ ಬೊಂಬಿನಿಂದ ಸುಮಾರು ೧೫೦ ರೀತಿಯ ಪದಾರ್ಥಗಳನ್ನು ತಯಾರಿಸುತ್ತಾರೆ. ಇವಲ್ಲದೆ ಈ ಗೃಹಕಾರ್ಖಾನೆಗಳಲ್ಲಿ ಬೂಷ್ಟು, ರೇಡಿಯೋ ಯಂತ್ರಗಳು ಮೊದಲಾದವನ್ನು ಹೇರಳವಾಗಿ ತಯಾರಿಸುತ್ತಾರೆ ಗೃಹಕೈಗಾರಿಕೆಯು ಜಪಾನಿನ ಬೆನ್ನೆಲುಬಿನಂತಿದೆ

ಭಾರತದಲ್ಲಿ ಕೈಗಾರಿಕೆಗೆ ಬೇಕಾದ ಪದಾರ್ಥಗಳಿಗೆ ಕೊರತೆ ಇಲ್ಲ ಜನರು ಗೃಹಕೈಗಾರಿಕೆಗಳನ್ನು ನಡೆಸುವ ಅಭಿಮಾನ ಪಡೆದಿರಬೇಕು ಗೃಹಕೈಗಾರಿಕೆಗಳಿಂದ ಪ್ರತಿಮನೆಯೂ ಅಭಿವೃದ್ಧಿಹೊಂದುವುದಲ್ಲದೆ ದೇಶವು ಮುಂದಕ್ಕೆ ಬರುವುದು ಬಡತನ ನೀಗುವುದು ಜನರ ಜೀವನದ ಮಟ್ಟವು ಏರುವುದು

ಬತ್ತದ ಬೇಸಾಯ

ಆಸ್ಟ್ರೇಲಿಯಾದಲ್ಲಿ ನ್ಯೂಸೌತ್‌ವೇಲ್ಸಿನ ಮುರೇ ಬಿಡ್ಗೀ ಪ್ರಾಂತದಲ್ಲಿ ಬತ್ತದ ಬೇಸಾಯದಿಂದ ಜಮಿನು ಫಲವತ್ತಾಗುತ್ತದೆಂಬುದು ಕಂಡು ಬಂದಿದೆ ಈ ಪರೀಕ್ಷೆಗಳನ್ನು ರೈತರು ಮತ್ತು ಡಿಸ್ಟ್ರಿಕ್ ಪರೀಕ್ಷಾ ಸಂಘದವರು ನಡೆಸಿದರು ಸಂಘದ ಕಾರ್ಯದರ್ಶಿಯವರು ಆ ಪ್ರಾಂತದ ಜಮಿನಾನ್ದಾರರ ಸುಮಾರು ೬೦೦-೭೦೦ ಎಕರೆ ಜಮಿನನ್ನು ಒಂದುವರ್ಷ ಸಾಗುವಳಿಗೆ ತೆಗೆದುಕೊಂಡು ಬತ್ತದ ಬೇಸಾಯ ಮಾಡಿಸಿ ಅವೇಳೆ ಹಿಡಿವಳಿದಾರರಿಗೆ ಅವರವರ ಜಮಿನಾನ್ನು ಹುಲ್ಲುಗಾವಲು ಮಾಡಲು ಹಿಂದಕ್ಕೆ ಕೊಟ್ಟರು. ಇದರಿಂದ ಫಲಿತಾಂಶಗಳು ಬಹಳಸಮರ್ಪಕವಾಗಿ ಕಂಡುಬಂದುವು. ಬತ್ತದಬೇಸಾಯದಿಂದ ಜಮಿನಾನಲ್ಲಿ ಶೌಳು ಕಡಮೆಯಾಗುತ್ತದೆ. ಹುಲ್ಲುಗಾವಲು ಮಾಡಲು ಹೆಚ್ಚು ಅನುಕೂಲ. ಬತ್ತದ ಸಾಗುವಳಿಗಾಗಿ ಜಮಿನಿನ ಮೇಲೆ ನೀರು ಹರಿಸುವುದರಿಂದ ಶೌಳ್ಳವು ಕರಗುತ್ತದೆ. ೪ ಮೇಲೆ ಹುಲ್ಲು ಬೆಳೆಸಿದರೆ ಮತ್ತೆ ಶೌಳು ತಲೆಯೆತ್ತುವುದಿಲ್ಲ. ಆದ್ದರಿಂದ ಹಿಂದು ಬತ್ತದ ಬೆಳೆಯಿಟ್ಟು ಜಮಿನು ಉತ್ತಮಗೊಂಡ ಮೇಲೆ ದ್ವಿದಳ ಧಾನ್ಯಗಳನ್ನು ಬೆಳೆಯಬೇಕು. ಆಗ ಜಮಿನು ಹೆಚ್ಚು ಸಾರ ವತ್ತಾಗುತ್ತ ಹೋಗುತ್ತದೆ

(ಮೈಸೂರು ಕೃಷಿಕಾಯ ಕೋಳಿ ಸಂಘದ ಪತ್ರಿಕೆಯಿಂದ)

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No. M. 2266 ಶ್ರೀರಂಗಪ್ಪರು ಸಂಸ್ಥಾಪಕರು ಶ್ರೀಮಂತರು REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಸ್ಥಪಂಚಾಶತ್ಪಂಚಾಕ್ಷರೀಪಂಚಾರ್ಥಿ ಪಂಚಾಚಾರ್ಯಪರಮರ್ಷಿ ಪರಶಕ್ತಿಪಂಚಲಿಂಗೋದ್ಭವರ್ ॥
ಪಂಚಾಚಾರಧನಿಯಮಕರ ಪರಿಲಸತ್ಪಂಚಾಕ್ಷರೀಮೋಹರ್ ! ಪಂಚಾಚಾರ್ಯಜಗದ್ಗುರೂತ್ತಮರವರ್ ಬಾಲಿಪ್ಪುದೀಲೋಕಮಂ ॥

ಒಳಗವರಿಗೆ ೨ ರೂ. ೪ ಆಣೆ. ಪರಕ್ಕೆಳವರಿಗೆ ೩ ರೂ ವಿ. ಪಿ. ಖರ್ಚು ಸೇರಿ ೩ ರೂ. ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೦ನೇ ಡಿಸೆಂಬರ್ ೧೯೪೪ [ಸಂಚಿಕೆ ೩೨

ಮೈಸೂರು ಸಂಸ್ಥಾನದಲ್ಲಿ ನೆಹರೂರವರ ಕಾರ್ಯಕ್ರಮ

ಮೈಸೂರು ಸರ್ಕಾರದಿಂದ ಹೊರಬಿದ್ದ ಅಧಿಕೃತ ಪ್ರಕಟಣೆಯ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಪಂಡಿತ ನೆಹ್ರುರವರ ಕಾರ್ಯಕ್ರಮವನ್ನು ಕೆಳಗೆ ಕಂಡಂತೆ ಗೊತ್ತು ಮಾಡಲಾಗಿದೆ.

ಬೆಂಗಳೂರಿನಲ್ಲಿ

ಡಿಸೆಂಬರ್ ೨೬ (ಭಾನುವಾರ) :—ಮಧ್ಯಾಹ್ನ ೩ ಘಂಟೆಯಿಂದ ೪ ಘಂಟೆಯವರೆಗೆ ಕಾಂಗ್ರೆಸ್ಸಿನವರೊಡನೆ ಸಭೆ, ೪ ರಿಂದ ೫ರ ವರೆಗೆ ಪ್ರಮುಖರಿಗೆ ಭೇಟಿ, ೫ ಘಂಟೆಗೆ ಸತ್ಕಾರ ಕೂಟ.

೨೭ ನೇ (ಸೋಮವಾರ) :—ಪ್ರಾತಃಕಾಲ ೯ ರಿಂದ ೧೦ ೩೦ ವರೆಗೆ ಸಿವಿಕ್ ರಿಸೆಪ್ಷನ್ ಮತ್ತು ಸಾರ್ವಜನಿಕ ಭಾಷಣ. ೧೦-೩೦ ರಿಂದ ೧೧-೩೦ ರ ವರೆಗೆ ಭಾರತದ ವೈದೇಶಾಂಗಿಕ ಸೊಸೈಟಿಯ ಸ್ಥಾಪನೋತ್ಸವ ೧೧ ೪೫ ರಿಂದ ಮಧ್ಯಾಹ್ನ ೧-೧೫ ಘಂಟೆಯವರೆಗೆ ತಾತಾ ವಿಜ್ಞಾನಮಂದಿರದಲ್ಲಿ ಆಧ್ಯಕ್ಷ್ಯ (೧) ವಿದ್ಯುತ್ಶಕ್ತಿ ಕಮ್ಯುನಿಕೇಷನ್ ಎಂಜನಿಯರಿಂಗ್ ಇಲಾಖೆಯ ಅಭಿವೃದ್ಧಿಪರ ತಂಕಸಾಹಿತ್ಯಸಂಸ್ಥೆಯ ಪ್ರಾರಂಭೋತ್ಸವ (೨) ಸಂಸ್ಥೆಯ ನಾನಾ ವಿಭಾಗಗಳಿಗೆ ಭೇಟಿ.

ಮಧ್ಯಾಹ್ನ ೧-೩೦ ರಿಂದ ೩ ರವರೆಗೆ ವಿರಾಮ ೩ ರಿಂದ ಸಂಜೆ ೪-೩೦ ರವರೆಗೆ ವಿಮಾನ ಕಾರ್ಖಾನೆಗೆ ಭೇಟಿ ಸಂಜೆ ೫ ರಿಂದ ೫-೩೦ ರವರೆಗೆ ವಿದ್ಯಾರ್ಥಿಗಳ ಸಭೆಯಲ್ಲಿ ಭಾಷಣ. ೭-೩೦ಕ್ಕೆ ನೆಹ್ರುರವರ ಬಳಗಿನ ಸ್ನೇಹಿತರಿಗೆ ಔತಣ ಕೂಟ.

೨೮ ನೇ (ಮಂಗಳವಾರ) :— ಪ್ರಾತಃಕಾಲ ೭-೧೫ ಘಂಟೆಗೆ ಮೈಸೂರು ಫ್ಲೈಯಿಂಗ್‌ಕ್ಲಬ್‌ನ ಸ್ಥಾರೋಹಣೋತ್ಸವ.

ಮೈಸೂರಿನಲ್ಲಿ

೨೮ ನೇ ತಾರೀಖು ಪ್ರಾತಃಕಾಲ ೮-೧೫ ಘಂಟೆಗೆ ಮೈಸೂರಿಗೆ ತಲುಪುವರು. ೯-೪೫ ಘಂಟೆಗೆ ವಿಶ್ವವಿದ್ಯಾನಿಲಯದ ಕಾನ್ವೋಕೇಷನ್, ೧೦-೧೫ಕ್ಕೆ ಸಿವಿಕ್ ರಿಸೆಪ್ಷನ್ ಮತ್ತು ಸಾರ್ವಜನಿಕ ಸಭೆ, ೧೧-೩೦ ಕ್ಕೆ ಮೈಸೂರಿನಿಂದ ಕಾರಾಪುರಕ್ಕೆ ಪ್ರಯಾಣ, ಮಧ್ಯಾಹ್ನ ೨-೩೦ ರಿಂದ ಸಂಜೆ ೫-೩೦ ವರೆಗೆ ಕೆಷ್ಟಾ ವೀಕ್ಷಣೆ, ಸಂಜೆ ೬ ಘಂಟೆಗೆ ಕಾರಾಪುರದಿಂದ ಮೈಸೂರಿಗೆ ವಾಪಸು, ೭-೩೦ ಕ್ಕೆ ಮೈಸೂರಿಗೆ ಆಗಮನ, ೭-೪೫ ರಿಂದ ರಾತ್ರಿ ೮ ೪೫ ರವರೆಗೆ ಬೃಂದಾವನಕ್ಕೆ ಭೇಟಿ, ರಾತ್ರಿ ೯ ಘಂಟೆಗೆ ಬೃಂದಾವನದಲ್ಲಿ ಭೋಜನ

೨೯ ನೇ (ಬುಧವಾರ) ಪ್ರಾತಃಕಾಲ ೭-೩೦ಕ್ಕೆ ರಾಜಧಾನಿಯ ಜೆಲಪಾಲ ಮೈದಾನಕ್ಕೆ ಭೇಟಿ. (ಉಪಾಧ ಸಂಬಂಧದ ಹೆಚ್ಚಿನ ಕಾರ್ಯಕ್ರಮಗಳು ಇನ್ನಷ್ಟೆ ತಿಳಿಯಬೇಕಾಗಿದೆ.)

ಪಂಡಿತ ಮಂಡಲದ ಸಮ್ಮೇಳನದಲ್ಲಿ ದಿವಾನರ ಭಾಷಣ

ಹಿಂದೂ ಧರ್ಮ ಮತ್ತು ಆದರ ಸಂಸ್ಕೃತಿಯು ಅಳಿಯದಂತೆ ಅತ್ಯುತ್ಸಹದಿಂದ ರಕ್ಷಿಸಿ ಪ್ರಾಚೀನ ಭಾರತದ ಹಿರಿಮೆಯ ಜ್ಯೋತಿಯನ್ನು ಎತ್ತಿಹಿಡಿಯುತ್ತಿರುವ ಕೀರ್ತಿ ಮುಖ್ಯವಾಗಿ ನಮ್ಮ ಪಂಡಿತ ವರ್ಗದವರಿಗೇ ಸೇರಿದ್ದು ಎಂದರೆ ಅತಿಶಯೋಕ್ತಿಯಾಗಲಾರದು ನಮ್ಮ ಪಂಡಿತ ವರ್ಗದ ಉದಾರ ಮನೋಭಾವವು ಜ್ಞಾಳೆನೀರು ವಾದದ್ದು ಅವರ ತರ್ಕಜ್ಞಾನವು ಅಪ್ರತಿಮವೂ ಅಸಾಧಾರಣವೂ ಆದುದು. ಯು ಎ. ಪಿ. ದಲ್ಲಿ ನನಗಿಂತಲೂ ಜೆನ್ನಾಗಿ ವಾದಮಾಡಬಲ್ಲ ಸಮರ್ಥರು ಈ ಪಂಡಿತ ಮಂಡಲಿಯಲ್ಲಿದ್ದಾರೆ ಎಂದು ನಂಬಿದ್ದೇನೆ.

ಭಾರತವು ಮತದೂರವಾದ ರಾಷ್ಟ್ರವಾಗಿರಬೇಕೆಂಬ ಈಗಿನ ಪ್ರಭುಕ್ಕರ ನೀತಿಗೆ ಕಾರಣವಿದೆ. ಹಿಂದೂಮತವು ಇತರ ಮತೀಯರನ್ನು ತನ್ನ ಮತಕ್ಕೆ ಸೇರಿಸಿಕೊಳ್ಳುವ ಧರ್ಮವಾಗಿಲ್ಲ. ಧಾರ್ಮಿಕ ಅನುಷ್ಠಾನವೇ ಹೊರತು ಮತಾಂತರಗೊಳಿಸುವುದಲ್ಲ ಎಂಬ ದೃಢನಂಬಿಕೆಯೇ ಅದರ ಬಲ. ಎಂದರು

ಸ್ವಾಮೀ ವಿವೇಕಾನಂದರ ಪ್ರಚಾರದ ಫಲವಾಗಿ ಹಿಂದೂ ಧಾರ್ಮಿಕ ಮತ್ತು ಸಂಸ್ಕೃತಿ ಬಗ್ಗೆ ವಿದೇಶೀಯರಲ್ಲಿ ಆಸಕ್ತಿಯಿರುವ ತಾವು ಫ್ರಾನ್ಸಿನಲ್ಲಿ ಪ್ರವಾಸಮಾಡುತ್ತಿದ್ದಾಗ ಅಲ್ಲಿ ೧೫೦ ಮನೆಗಳುಳ್ಳ ಸಣ್ಣ ಹಳ್ಳಿಯೊಂದರಲ್ಲಿ ಫ್ರೆಂಚ್ ಭಾಷೆಗೆ ತರ್ಜುಮೆಯಾದ ರಾಜಯೋಗ ಮತ್ತು ಜ್ಞಾನಯೋಗ ಮುಂತಾದ ಉಪನಿಷತ್ ಗ್ರಂಥಗಳು ಮಾರಾಟವಾಗುತ್ತಿದ್ದ ಸಂಗತಿಯನ್ನು ತಿಳಿಸಿದರು.

ನಮ್ಮ ಧರ್ಮ, ಸಂಸ್ಕೃತಿಗಳು ವಿದೇಶಗಳಲ್ಲಿ ಮಾತ್ರ ಮಲ್ಲದೆ ನಮ್ಮ ದೇಶದಲ್ಲೂ ಸಾರ್ವತ್ರಿಕವಾಗಿ ಬೆಳೆಯುವ ದೂರದೃಷ್ಟಿಯ ಅವಶ್ಯಕತೆ ಅಮೆರಿಕಾದಲ್ಲಿ ಪ್ರತಿ ಹೋಟಲ್ಲಲ್ಲೂ ದೂರವಿಟ್ಟಿರುವ ಬೈಬಲ್ ಗ್ರಂಥವನ್ನು ಕೈಬೆರುತ್ತಾರೆ. ನಮ್ಮ ದೇಶದಲ್ಲೂ ಅಲ್ಲಿರುವಂತೆಯೇ ಧರ್ಮಾಭಿಮಾನಿಗಳೇನೂ ಕೊರತೆ ಇಲ್ಲ. ಇವರೆಲ್ಲರೂ ಸ್ವಲ್ಪ ಮುಂದೆ ಬಂದು ಒತ್ತಾಸೆಯಾಗಿ ನಿಂತರೆ ನಮ್ಮ ಧರ್ಮಗ್ರಂಥಗಳೂ ದೇಭಾಷೆಗಳಲ್ಲಿ ಸಂಪೂರ್ಣವಾಗಿ ತರ್ಜುಮೆಯಾಗಿ ಆ ಸಾಮಾನ್ಯರಿಗೆ ಸುಲಭವಾಗಿ ದೊರೆಯಬಲ್ಲಂತಾಗಿ ಲಕ್ಷೋಪಲಕ್ಷ ಜನರಿಗೆ ಉಪಕಾರವಾಗುವುದು.

ದಿವಾನರು ಈಗ ಎದ್ದಿರುವ ಭಾಷಾಸಮಸ್ಯೆಯನ್ನು ಪ್ರಸ್ತಾಪಿಸಿ, ನಮ್ಮ ನಮ್ಮ ದೇಶದ ಸಕಲ ಭಾಷೆಗಳೂ ಬೆಳೆದು ನಮ್ಮ ಸಂಸ್ಕೃತಿ ವಿಶಿಷ್ಟ ಹೂಗಳಂತೆ ಕಂಗೊಳಿಸಿ ಹಾರದಂತಾಗಿ, ಆದರೆ ಸೂಗಸು ಎಲ್ಲರಿಗೂ ದೊರೆಯುವ ಮಹಾಗುಣವಾಗಬೇಕು ಎಂದು ಆಶಿಸಿದರು.

ಕೊಡಗು ಮೈಸೂರಿನೊಡನೆ ಏಕ್ಯವಾಗಲಿದೆ

ಕೊಡಗು ಶ್ರೀಶೈಲಕ್ಷೇತ್ರ ಮೈಸೂರು ಸಂಸ್ಥಾನದೊಡನೆ ಏಕ್ಯವಾಗುವುದೆಂದು ಹೇಳಲಾಗಿದೆ. ಈ ಬಗ್ಗೆ ವಿವರಗಳನ್ನು ತರ್ಜುಮೆಯು ಇಂಡಿಯಾ ಸರ್ಕಾರದ ಸೆಕ್ರೆಟರಿಗಳಾದ ಶ್ರೀ ಎಚ್. ವಿ. ಆರ್. ಅಯ್ಯಂಗಾರ್ ರವರು ಕೊಡಗಿಗೆ ಬರುವವರೆಗೂ ತೀರು ಬಂತಿದೆ. ಡಿಸೆಂಬರ್ ೨೭ನೆಯ ತಾ॥ ಕೊಡಗಿನ ವಿಧೇಯಗವೊಂದು ಬೆಂಗಳೂರಿನಲ್ಲಿ ಸಂ॥ ನೆಹ್ರೂರವರನ್ನು ಕಾಣುವುದು.

ಮೈಸೂರು ಸಂಸ್ಥಾನದಲ್ಲಿ ಬಟ್ಟೆ ಹಂಚಿಕೆ

ಸಂಸ್ಥಾನದ ಸಿವಿಲ್ ಸರಬರಾಜು ಕಂಟ್ರೋಲರವರಾದ ಶ್ರೀ ಎಂ ಕೆ ಅಪ್ಪಾಜಪ್ಪನವರು ಬೆಂಗಳೂರಿನ ಪತ್ರಿಕಾ ಸಮ್ಮೇಳನದಲ್ಲಿ ಸಂಸ್ಥಾನದ ಬಟ್ಟೆ ಹಂಚಿಕೆಯ ವಿಷಯ ವನ್ನು ವಿವರಿಸಿದರು.

ಸಂಸ್ಥಾನದ ಪ್ರತಿಪ್ರಜೆಗೂ ೧೦ ಗಜದಂತೆ ಬಟ್ಟೆ ಸಿಗಲು ವರ್ಷಾದು ಮಾಡಲಾಗುವುದು. ಬಟ್ಟೆ ಹಂಚಿಕೆ ಯಾಗಿ ಕೂಪನ್ನು ಗಳನ್ನು ಹಂಚಲು ಸ್ವಲ್ಪಕಾಲವಾಗು ವುದು ಅಲ್ಲಿಯವರೆಗೆ, ಜನರಿಗೆ ತೊಂದರೆಯಾಗದಂತೆ. ಪ್ರತಿಯೊಬ್ಬರಿಗೂ, ಏರು ಗಜ ಬಟ್ಟೆಯನ್ನು ಕೊಡ ಲಾಗುವುದು ಒಟ್ಟಿಗಳನ್ನು ಮಾರಲು ಸಂಸ್ಥಾನದಲ್ಲಿ ಒಟ್ಟು ೧೦ ಸಾವಿರ ಜನರಿಗೆ ಲೈಸನ್ಸ್ ಕೊಡಲಾಗಿದೆ. ಕಾಳಸಂತೆ ವ್ಯಾಪಾರ ನಡೆಸುತ್ತಿದ್ದವರಿಗೆ ಲೈಸನ್ಸ್ ಕೊಟ್ಟಿಲ್ಲ

ಭಾರತಕ್ಕೆ ಅಧ್ಯಕ್ಷರು

ದೇಶೀಯ ಸಂಸ್ಥಾನಗಳಿಗೆ ರಾಜರು ಇರುವಂತೆ, ಇನ್ನು ಮುಂದೆ ಭಾರತಕ್ಕೆ ಒಬ್ಬರು ಅಧ್ಯಕ್ಷರಿರುವರು. ಇವರನ್ನು, ಭಾರತದ ಜಾನ ಸಭೆಯ ಸದಸ್ಯರೂ, ಪ್ರಾಂತ್ಯಗಳ ಮತ್ತು ಸಂಸ್ಥಾನಗಳ ಶಾಸನ ಸಭೆಗಳ ಸದಸ್ಯರೂ ಆರಿಸುತ್ತಾರೆ

ಸ್ವೀಕಾರ

ನಿಜಾಂ ಇಲಾಹಿ ಹುಮಣಾಬಾದ್ ತಾಲೂಕಿನಲ್ಲಿರುವ ವೇ॥ ಬಂಗಿ ಸಿದ್ಧರಾಮಯ್ಯನವರು ಶಿವಾಧೀನರಾದ ಸಮಯದಲ್ಲಿ ಶ್ರೀಧಾರೇಶಹಳ್ಳಿಯ್ಯರ ಸಮರ್ಪಿಸಲ್ಪಟ್ಟ ೨ ರೂ ಗಳು ಅವರ ಪುತ್ರರಾದ ವೇ॥ ಪಂಚಾಕ್ಷರಯ್ಯನವರ ದ್ವಾರಾ ತಲುಪಿಬಿತ್ತಿದೆ.

ಬೆಳಗಾಂವ ತಾ॥ ಸಕ್ಕರಿಗೇರಿ ಗ್ರಾಮದಲ್ಲಿರುವ ಮಾ॥ ರಾ॥ ಬಸರೀಗಿಡದ ಗುರುವ್ಯವರು ಶಿವಾಧೀನರಾದ ಸಮಯದಲ್ಲಿ ಪ್ರಭಾಕೇಶಹಳ್ಳಿಯ್ಯರ ಸಮರ್ಪಿಸಿದ ೨ ರೂ. ಯು. ಸಕ್ಕರಿಗೇರಿ ಬೃಹನ್ಮಠದ ಶ್ರೀ ಪಟ್ಟಿದ ಸ್ವಾಮಿಗಳವರ ದ್ವಾರಾ ತಲುಪಿಬಿತ್ತಿದೆ.

ಈ ಮೇಲ್ಕಾಣಿ ಮಾಹಿತಿಯಲ್ಲಿನ್ನಾ ಶ್ರೀರಂಗಪ್ಪರು ಸಂಸ್ಥಾಪಕರು ಶ್ರೀಮಂತರು ಏಕ್ಯಮಂಗಳಾಗ್ರಾಣಿಯೆಂಬು ಹಾಕಿಸುತ್ತೀದೆ.

॥ ಶ್ರೀಜಗದ್ಗುರು ಪಾರುಕಾಚಾರ್ಯಾಯ ನಮಃ ॥

ತನಗೆ ತಾನೇ ಬಂಧುವು

—

ಲೇ —ನುಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಲೇಮಠ, ಮುದಿಕೊಂಡ

ಈ ಕರ್ಮಭೂಮಿಯಲ್ಲಿ ಅತಿನಿಬಿಡವು ಬಯ ಭಯಂಕರವೂ ಆದ ಪರ್ವತಶ್ರೇಣಿಯಲ್ಲಿ ಆನೇಕ ಕಲ್ಲು ಮುಳ್ಳು ನಿಡಗಟೆಗಳನ್ನು ಹುಲಯುತ್ತ ಒಂಡೇಳನ್ನು ಎಡೆಬೆತ್ತ ಮುಗ್ಗುರಿಸುತ್ತ ಬೀಳುತ್ತ ಏಳುತ್ತ ಒಂದು ಸಾಹಸದಿಂದಲೂ ಗೌರೀಶಂಕರವಿಖರಾಗ್ರಕ್ಕೆ ಹೋಗಿ ತಲ್ಲಿದಂತೆ ಈ ಮಾನವಜನ್ಮನ್ನು ಬಂದ ನಾನಾ ಹೀತ ಯೋಸಿಗಳಲ್ಲಿ ಜನ್ಮಪೆತ್ತಿ ಆವರಿಸುತ್ತೇ ಸಾಧಿಸಿಕೊಂಡು ಪಡೆದ ಉನ್ನತ ಶಿಒನ್ಮಾನಾನುಪದು ಸಾರ್ಥಾಜಿತ ಪುಣ್ಯಾರ್ಜನೆಯಿಂದ ಜಿರಕಿರನ ಈ ದೀಪವು ಭವ ಸಾಗರದಿಂದ ಪಾರಾಗಲು ವರ್ತಿಸಿನಿಂತಿರುವುದು ಈ ನರದೀಹದ ನರಪಿಂಡ ತತ್ವಜ್ಞಾನ್ಮಾಕ್ಷರಾಗಿ ಕೊಂಡು ಮುಕ್ತರಾಗುವದು ಆಸ್ತಿಕವುತಾನುಯಾಯಿ ಗಳ ವಿಶ್ಯಿಕರ್ತವ್ಯವಾಗಿರುವದು ಇದನ್ನು ಬಿಟ್ಟು ವಸಿತಾದಿ ವಿಷಯಭೋಗ ಲಲ್ಲಿಯು ದನಸಂಗೈಹ ದಲ್ಲಿಯೂ ಮಗ್ನರಾಗಿ ಶಿಸ್ ಸ್ಥಾನ ಬನರುಗತ್ತೆ ಬರುವುದು ಹೇಗಾಗುವುದೆಂದರೆ ವೇಳೆ ಹೇಳದಂತೆ ಒಂದು ಪ್ರಯಾಸದಿಂದ ಹೊಗಿ ತಲ್ಲಿದ ತಿಬಿರಾಗ್ರದಿಂದ ಒನ್ಮಿಂದೊಮ್ಮೆಲೆ ತಲೆಕೆಳಗಾಗಿ ತಪ್ಪಿಸಿಕೊಂಡು ದರಿ ಯಲ್ಲಿ ಬಿದ್ದಂತಾಗುವದು

ಈ ಸಂಸಾರದಲ್ಲಿ ತನಗೆ ತಾನೇ ಒ ದುಷ್ಟಬಿದ ಹೆಂಡತಿ ಮಕ್ಕಳು ಸ್ನೇ ಇರಿದಿ ಎನಸ್ಸಾ ಬಂದುಗೆಳಾಗುವದಿಲ್ಲ ತನ್ನ ಎನಿಗೆ ತಾನು ಉಣ್ಣಾ ಬೇಕಾಗಿರುವಂತೆ ತನ್ನ ಉದ್ಧಾರ ತಾನು ಯತ್ನಮಾಡಿ ಕೊಳ್ಳಬೇಕು ವ ತ್ಪಸ್ಥಿತಿಯ ಒಗಿರು ಕೆಲವರು ತನ್ನ ವಶು ಸಹಾಸರ ಸಾಧಾರಣೋಪಾಯ ಮಕ್ಕಳಿಗೆ ಆಸ ಸಂಪದಿ ಸಂಪಾದಿಸಿಕೊಡುವ ಸಲು ಮೋಸ, ಲ್ಯಾತ ಕೊಲೆ ಸಲಿಗೆ ಇತ್ಯಾದಿ ಕ್ರೂರ ಕೃತಗಳನ್ನ ಪಾಪವೆಂತಾರಿ ಸದರೆ ಅವು ಮಾಡಿದ ಕರ್ವಕ್ಕೆ ಅವೇ ಸಂಭ ಗಿಸ್ಯಂತ್ಯಪೆಂಬುದನ್ನು ಅವರಿಯರು ಈ ಬಗ್ಗೆ ಒಂದ ಇತಿಹಾಸನಿರುವದು

ಶ್ರೀಮಕಾಲದಲ್ಲಿ ಒಬ್ಬ ಜೋತ್ಸ್ಯಾಸರನು ಕಾಡಿ ನಲ್ಲಿ ಬರಹೋಗುವವರನ್ನ ಕೂಲಿಗಾಲಿಗೆ ನೂಡುತ್ತಾ ಸಂಸಾರ ಸಾಗಿಸುತ್ತಿರುವ ಒಂದು ದಿನ ಒಬ್ಬ ಸಾತ್ಸಿಕಮನುಷ್ಯನು ಆ ಮಾರ್ಗ ವಾಗಿ ಹೋಗುತ್ತಿರು ವಾಗ ತ ಕ್ಕನು ಕೆಯಲ್ಲಿ ಕೊಡಲಿಯನು ಹಿಡಿದು ಕೊಂಡು ತನ್ನ ಕಾರ್ಯದಂತೆ ಜನರ ಜೆನ್ನಿತ್ತಿಹಾಗಿ ಮುಂದೆ ನಿಂತುಕೊಂಡನು ಆಗ ಸಾರಿಕಾರನು ಗಾಬರಿ ಯಿಂದ ಏನಯ್ಯಾ ನೀನು ಯಾರು ? ವಿಕಕ್ಕೆಸ್ಕೂರ ಇಷ್ಟು ಸಂಭ್ರಮದಿಂದ ಓಡಿಬಂದೆ ? ನನ್ನಿಂದೇನಾಗ ಬೇಕಾ ಹೇಳು ?' ಎಂದನು ಆದಕ್ಕೆ ಕ್ಕನು ನನು ನಗುತ್ತ ನಾನು ಒಬ್ಬ ಕ್ಕನು, ನನ್ನ ಕಾರ್ಯವೇನಿರ ಒಹುದು ? ನಿನ್ನಲ್ಲಿಗೇತಕ್ಕೆ ಒಂದಿರಬಹುದೆಂಬುದನ್ನು ನೀನೇ ವಿಚಾರಿಸಿಂದನು ಆಗ ದಾರಿಕಾರನು, ಆಕ್ಕಾ, ಜೊಂಂಗ್ಯಗಿಯೇ, ನನ್ನಲ್ಲಿ ಏದುನೂರು ಸುವರ್ಣ ನಾಣ್ಯಗಳವೆ ಅವನ್ನು ನಿನಗೆ ಸಂತೋಷದಿಂದ ಕೊಡು ವೆನು ಆದರೆ ನನಗೆ ಸಂದೇಹಾಸ್ಪದವಾದ ಕೆಲವು ವಿಷಯಗಳನ್ನು ಕೇಳಬೇಕಿರುವೆನು , ದಯವಿಟ್ಟು ಹೇಳುವೆಯಾ ? ಎಂದನು ಆಗ ಆ ತಲೆಬಡಕನು ಆಗಲಿ, ಅದೇನು ಕೇಳಿಂದನು ಮಾರ್ಗಸ್ಥನು, 'ಆಗ ನೀನು ನನ್ನ ನಾಣ್ಯಗಳನ್ನು ಹೇಗೂ ಅಪಹರಿಸುವೆ , ಒಂದು ಪಕ್ಷ ನಾನು ಕೊಡಲು ಸನ್ನತಿಸದಿದ್ದರೆ ನನ್ನನ್ನು ಸಂಹರಿಸಿ ತೆಗೆದುಕೊಳ್ಳುವಿಯಪ್ಪೆ ! ಇದು ಪಾಪ ಕಾರ್ಯವೋ ಪುಣ್ಯಕಾರ್ಯವೋ ' ಎಂದು ಕೇಳಿದನು ಆದಕ್ಕೆ ಆ ಕ್ಕನು, ಮನದಲ್ಲಿ ಯೋಚಿಸಿ ಳಳಂಕಳುಳ್ಳ ವೆನಿದಾಗ್ಯೂ ಅದನ್ನು ಬಹಿರಂಗಪಡಿಸದೆ " ಅದೇನಾದ ರೇನು ? ನಿನಗೇನು ಹೇಳುವುದು ? " ಎಂದನು ಆಗ ದಾರಿಗನು ಖಾಂತಿಯಿಂದ ಅಯ್ಯಾ, ನನ್ನ ಸಂದೇಹ ಗಳನ್ನು ಕೇಳುವಂತೆ ವಿಚಕ್ಷಣನಿಲ್ಲವು ಆಗ ನಿನಾಕರಿಸು ವುದು ನಿನಗೆ ಉಚಿತವೇ ? ಎನ್ನಲು, ಕ್ಕನು ಒಂದು ಪಕ್ಷ ಪಾಪಕಾರ್ಯವೇ ಇರಬಹುದು , ಆದರೆಹಾನೇ ಏನು ? ಎಂದು ನುಡಿದನು ಪಥಿಕನು ಅಯ್ಯಾ, ನಿನ್ನ ಮನೆ ಯಲ್ಲಿ ಯಾರುಯಾರಿರುವರು ? ಹೋಗಲು—ನನ್ನ ಹೆಂಡತಿಮಕ್ಕಳು ಇನ್ನೂ ಇತರ ಬಾಂಧವರೂ ಇರು ವರು ಹಾಗಾದರೆ ನಡೆ ನಿನ್ನ ಮನೆಗೆ ನಾನೂ ಬರುವೆನು ಆದರೆ ನಿನ್ನ ಪ್ರೀತಿಯ ಹೆಂಡತಿ ಪ್ರೇಮದ ಮಕ್ಕಳು ಬಂಧುಬಾಂಧವರನ್ನು ಕುರಿತು, " ಹೇ ನನ್ನ ಪ್ರಿಯ ಬಂಧುಗಳಿರಾ, ನಾನಾವಿಧವಾದ ಕ್ರೂರಕೃತ್ಯಗಳನ್ನು ಮಾಡಿ ಸಂಪಾದಿಸಿಕೊಂಡು ಬಂದು ನಿಮ್ಮನ್ನು ಕಾಪಾ ಡುತ್ತೇನಲ್ಲಾ ! ಈ ಪಾಪಕಾರ್ಯದ ಫಲಕ್ಕೆ ಭಾಗಿ ಗಳಾರು ? ಎಂದು ಕೇಳು ಮತ್ತು ಈಗ ನಾನು ಒಬ್ಬ ವರ್ತಕನನ್ನು ಕೊಂದು ರಾಜಭಟರ ಕೈವಕನಾಗಿ ರಾಜನಿಂದ ಮರಣದಂಡನೆಯನ್ನು ಹೊಂದಿರುವೆನು ನಾನು ಬಹು ದೀನಭಾವದಿಂದ ರಾಜನನ್ನು ಪ್ರಾಣದಾನ ಮಾಡಿಂದು ಬೇಡಿಕೊಳ್ಳಲು, ಅಗ್ಗೆ ಆ ರಾಜನು ಕನಿಕರ ಗೊಂಡು, ಇವನಿಗೆ ಇನ್ನೂ ಕೆಲವು ಕಾಲ ಜೀವಿಸಿರ ಬೇಕೆಂಬ ಆಕ ತುಂಬಾ ಇರುವಂತೆ ಕಾಣುವುದರಿಂದ ಅವನಕಡೆಯವರಾರಾದರೂ ತಮ್ಮ ಪ್ರಾಣವನ್ನು ಕೊಟ್ಟು ಈತನನ್ನು ಳಿಸಿಕೊಂಡರೆ ಅಗಬಹುದೆಂದು ಆಜ್ಞೆ ಯನ್ನು ಮಾಡಿ ಈತನನ್ನು ನನ್ನ ಸಂಗಡ ಕಳುಹಿಸಿರು ವನು ಎಂದು ಕೇಳು ಅದಕ್ಕೆ ಅವರೇನು ಹೇಳು ವರೋ ಆದನ್ನು ನನಗೆ ಹೇಳಿ ಆನಂತರ ನಿನ್ನಿಷ್ಟ ಪ್ರಕಾರ ನನ್ನ ಧನವನ್ನು ತೆಗೆದುಕೊಂಡು ನನ್ನನ್ನು ಜೀವ ಸಹಿತ ಬಿಟ್ಟರೂ ಬಿಡು ಇಲ್ಲವೇ ನನ್ನ ಇಹೋಕ ಯಾತ್ರೆಯನ್ನು ಪೂರ್ಣಿಸಿಬಿಡು ಭಗವದಿಚ್ಛೆಯಿದ್ದಂತಾ ಗಲಿ ಯಾವುದು ಆಗುವುದಿದ್ದಾರೇ ಅದು ಎಮುನಾಡಿ ದರೂ ಆಗುವುದೇ ಇಲ್ಲ ಯಾವುದು ಆಗತಕ್ಕದ್ದೋ ಅದು ಪ್ರಯತ್ನ ವಿಲ್ಲದಿದ್ದರೂ ಆಗಿಯೇ ತೀರುವದು ಅಸಾ ಧಾನ ಪ್ರಾಣಿಗೆ ಯಾವ ಸಮಯದಲ್ಲಿ ಯಾವ ಸ್ಥಳ ದಲ್ಲಿ ಯಾವ ರೂಸದಿಂದ ಎಷ್ಟರಮಟ್ಟಿಗೆ ಶುಭಾಶುಭ ಗಳು ಪ್ರಾಪ್ತವಾಗಬೇಕೋ, ಮರಣಾನಂತರೋ ಆ ಪ್ರಾಣಿಗೆ ಆ ಸಮಯದಲ್ಲಿ ಆ ಸ್ಥಳದಲ್ಲಿ ಆ ರೂಪದಿಂದ ಅಪ್ಪರಲ ಟ್ಟಿಗೆ ಸುಖದುಃಖಗಳೂ ಮರಣವೂ ಉಂಟಾ ಎಂದನು

ಆಗ ಜೋತ್ಸ್ಯೇಸರನು ಆತನ ಮಾತಿಗೆ ಒಪ್ಪಿ ಹಣವನ್ನು ತನ್ನ ವಶಕ್ಕೆ ತೆಗೆದುಕೊಂಡು ಆತನನ್ನು ನ ನೆಗೆ ಕರೆದುಕೊಂಡು ಹೋಗಿ ತನ್ನ ಒಳಗವನ್ನು ಕರೆದು ಸರ್ವಾನ್ನಾಗ್ರಗಳನ್ನು ತವರ ಮುಂದೆ ಸುರುವಿನನು ಆಗ ಹೆಂಡತಿಯು ಆದನ್ನು ನೋಡಿ ಸಂತುಷ್ಟಳಾಗಿ ಗಂಡನನ್ನು ಒಳು ವಿಧವಾಗಿ ಶ್ಲಾಘಿಸಿ ದಳು

ಆ ಮೇಲೆ ಕ್ಕನು, " ಎಲೈ ನನ್ನ ಪ್ರಿಯಪತ್ನೀ ಪುತ್ರಾದಿಗಳಾರಾ, ನಿಮಗೋಸ್ಕರ ನಾನು ಹಗಲಿರುಳೂ ಪ್ರಾಣಾಹಾರಗಳಲ್ಲದೆ ನಾನಾ ಹಿಂಸೆಗಳನ್ನಾ ಮಭವಿಸುತ್ತ ಪ್ರಾಣಿಸಾಯವನ್ನೂ ಸಾಸವನ್ನೂ ಲೆಕ್ಕಿಸದೆ ಜರ ಕೊಲೆ ಸುಲಿಗೆಯನ್ನು ಮಾಡಿ ನಿಮ್ಮನ್ನು ಪೋಷಿಸುತ್ತೇ ನಲ್ಲಾ ! ಈ ಪಾಪಫಲಕ್ಕೆ ಭಾಗಿಗಳಾರು ? ' ಎಂದು ಕೇಳಲು ಹೆಂಡತಿಯು ಮುಂದೆ ಬಂದು ಗಹಗಹಿಸಿ ನಗುತ್ತ, " ಅಯ್ಯೋ ಮುಚ್ಚು ಗಂಡಸೇ, ಈ ಅಲ್ಪ ವಿಷಯದಲ್ಲಿ ನನ್ನುನ್ನು ಕೇಳುವುದಕ್ಕೆ ನಿನಗೆ ಪರಿಜ್ಞಾನ ವಿಲ್ಲವೇ ? ಮೊನ್ನೆ ನೀನೇ ಹರಕೆಕ್ಕೆಯನ್ನು ಕುಡಿದಿದ್ದೆ ಯಲ್ಲಾ ! ಆಗ ಯಾರಿಗೆ ಭೇದಿಯಾಯಿತು, ಗೊತ್ತಿ ಲ್ಲವೇ ? ತಾನು ಮಾಡಿದ್ದನ್ನು ತಾನೇ ಅನುಭವಿಸ ಬೇಕೆಂದು ಜನರಾಡುವ ಮಹಾವಾಕ್ಯವು ನಿನಗೆ ಗೊತ್ತಿ ಲ್ಲವೇ ? ನೀನು ಮಾಡಿದ ಪಾಪಪುಣ್ಯಗಳ ಫಲಕ್ಕೆ ನೀನೇ ಭಾಗಿಯಾಗುವದೆ ಬೇರೆಯವರು ಭಾಗಿಗಳಲ್ಲ ನೀನು ಪಾಪ ವನ್ನಾದರೂ ಮಾಡು, ಪುಣ್ಯವನ್ನಾದರೂ ಮಾಡು, ಅಂಡುಹಾಕಿದ್ದನ್ನು ತಿಂದುಹಾಕುವುದೊಂದೇ ನಮ್ಮ ಕೆಲಸ ! " ಎಂದಳು ಆಗಲವು ಹೆಂಡತಿಯ ಶಾಸ್ತ್ರಿಕ್ಷಮಾತುಗಳನ್ನು ಕೇಳಿ, ಬಹು ವಿನ್ನನಾಗಿ— " ಪ್ರಿಯೇ, ಆ ವಿಷಯ ಹಾಗಿರಲಿ, ಈಗ ನನಗೊಂದು ಪ್ರಾಣಾಪತ್ತು ಸಂಭವಿಸಿರುವದಲ್ಲಾ ಏನು ಮಾಡಿ ? ನನ್ನ ಪ್ರಾಣ ಉಳಿಯುವುದಕ್ಕಾಗಿ ನೀವು ಯಾರಾದರೂ ಮರಣದಂಡನೆಗೆ ಗುರಿಯಾಗುವಿರಾ ? ಅಂತ್ಯಕಾಲದಲ್ಲಿ ನಾನು ನಿಮ್ಮೆಲ್ಲರನ್ನು ನೋಡಿಕೊಂಡು ಹೋಗಿ ಸಾಯ ಬೇಕೆಂದಿದುವೆನು " ಎಂದು ಬಿಕ್ಕಿ ಬಿಕ್ಕಿ ಅಳತೊಡಗಿ ದನು ಆಗ ಅವರೆಲ್ಲರೂ ಅವನ ಸುತ್ತುವರೆದು ಪರಿ ಪರಿಯಾಗಿ ಗೋಳಾಡತೊಡಗಿದರು. (ವಾಚಕರೇ, ಅವ ರೆಲ್ಲರೂ ಇವನು ಸತ್ತರೆ ಮುಂದೆ ನಮ್ಮ ಗತಿಯೇನೆಂದು ಅಳುತ್ತಿದ್ದರಲ್ಲದೆ ಅವನು ಸಾಯುವನೆಂದಲ್ಲಾ ! ಎಂದು ಅಳುತ್ತಿರಲಿಲ್ಲ). ಸ್ವಲ್ಪ ಹೊತ್ತಿನಮೇಲೆ ಆ ಕ್ಕನು ನನಗೆ ಹೊತ್ತಾಯಿತು ರಾಜದೂತರು ಆವಸರಮಾಡು ತ್ತಿರುವರು ನಾನು ಇನ್ನು ಹೊರಡುವೆನೆಂದು ಕೃತ್ರಿವು ವಾಗಿ ಕಣ್ಣೀರಿಡುತ್ತ ಹೊರಡಲನುವಾದನು ಆ ಸನು ಯದಲ್ಲಿ ಎಲ್ಲರೂ ಪರಿಪರಿಯಾಗಿ ಅಳುತ್ತಿದ್ದರೇ ಹೊರತು ಇವನ ವಿಷಯ ಹೇಗೆ ಪರಿಹಾರವಾದೀತೆಂದು ಯೋಚಿಸ ಲಿಲ್ಲ , ಮತ್ತು ನಮಗೋಸ್ಕರವಾಗಿ ನೀನು ಈಗ ಪ್ರಾಣ ಪಾಯಕ್ಕೆ ಗುರಿಯಾಗಿರುವೆ , ಇಗೋ ನಿನಗಾಗಿ ನಾವು ಪ್ರಾಣಕೊಡುತ್ತೇವೆ, ನೀನು ದುಃಖಪಡೇಡವೆಂದು ಪ್ರೇಮದ ಹೆಂಡತಿಯಾಗಲಿ, ಪ್ರೀತಿಯ ಮಕ್ಕಳಾಗಲಿ, ಇತರ ಆಪ್ತಒಂದುಗಳಾಗಲಿ, ಯಾರೂ ಮುಂದೆಬಂದು ಧೈರ್ಯವನ್ನು ಹೇಳಲಿಲ್ಲ ಆಗ ಜೋತ್ಸ್ಯರು ಸಚಿಸುತ್ತ ಬಂಧುಬಾಂಧವರ ಮೇಲಿನ ಮೋಹಪಾಶವನ್ನು ಮನಸ್ಸಿ ನಿಂದ ಸಮೂಲವಾಗಿ ಕಿತ್ತಿಸೆದು, ತಾನು ತಂದ ದ್ರವ್ಯ ವನ್ನು ತೆಗೆದುಕೊಂಡು ಅವರ ಕಡೆಗೆ ಸಹ ನೋಡದೆ ದಾರಿಕಾರನನ್ನು ಹಿಂಬಾಲಿಸಿ ಬರುತ್ತ ತನ್ನ ಮನದಲ್ಲಿ ಈ ರೀತಿ ಚಿಂತಿಸಿದನು ಏನೆಂದರೆ—ಈ ಪ್ರಪಂಚದಲ್ಲಿ ತನಗೆ ತಾನೇ ಬಂಧುವಲ್ಲದೆ ಮತ್ತೊಬ್ಬರಿಲ್ಲ ತನಗೋಸ್ಕರ ಈ ಬಾಂಧವರನ್ನು ಕೂಡಿಕೊಂಡು ಹೋಗುವೇಕು ತಂದುಹಾಕಿದರೆ ಎಲ್ಲರೂ ಉಂಡುಟ್ಟು ಕುಲುಕುಲು ನಗುತ್ತಾ ವಿಶ್ವಾಸ ತೋರಿಸುವರಲ್ಲದೆ ತಾನು ಕೆಡುವ ಕಾಲಕ್ಕೆ ಯಾರೂ ಆಗುವುದಿಲ್ಲ ಈ ವಿಷಕಪ್ರಪಂಚಕ್ಕೆ ನನ್ನ ವರೆಂದು ನಾನು ಹೇಗೆ ಭಾವಿಸಲಿ ? ಈ ಕೃತ್ರಿಮ ಬಂಧುಗಳಿಗಾಗಿ ಉತ್ಸಾಹಸಾಹಸಗಳಿಂದ ವರ್ಷ ಸಲಸದಳನಾದ ಕ್ರೂರಕೃತ್ಯಗಳನ್ನು ಮಾಡುತ್ತಿದ್ದ ನನಗೆ ಆವರ ಕೃತ್ರಿಮ ಬಂಧುತ್ವವನ್ನು ಮನವದಿಟ್ಟಾಗು ವಂತೆ ಮಾಡಿ ತೋರಿಸಿ, ದುಷ್ಕೃತ್ಯಗಳಿಂದ ನನ್ನನ್ನು ಕಟ್ಟಿಸಿ ಉದ್ಧಾರಗಮಾಡಿದ ಈ ಮಹಾಪುರುಷನ ಪರಮ ಆನದ್ಧಂಧುವು' ಎಂಗು ಯೋಚಿಸಿ ನಾನು ಜನರನ್ನು ವಂಚಿಸಿ ಆವರ ಸಂಪ ತ್ತನ್ನು ಅಪಹರಿಸುವದು ಯಾವ ನ್ಯಾಯ ? ಆದೂ ಹೋಗಲಿ, ನಿರಾಪರಾಧಿಗಳಾದ ಆವರನ್ನು ಕೊಲ್ಲುವದು ಯಾವ ಧರ್ಮ ? ಇದೂ ಹಾಗಿರಲಿ, ಈ ಲೋಕದ ಬಾಂಧವ್ಯವಾದರೂ ಎಂಥದು ? ಎಂದು ಪರಿಪರಿಯಾಗಿ ಯೋಚಿಸಿ ತನ್ನ ಹೀನದೀನ ಕೃತ್ಯಕ್ಕಾಗಿ ಬಹು ಪಶ್ಚಾ ತ್ತಾಪಪಟ್ಟು " ಎಲೈ ಮಹಾನುಭಾವನೇ ! ಆಪದ್ಬಂ ಧುವೇ ! ನಿನ್ನ ಸಮಾಗಮದಿಂದ ನನಗೆ ಜ್ಞಾನೋ ದಯವಾಯ ತು , ಆದರೆ ನಾನು ಇದುವರೆಗೆ ಸರಮಾ ತ್ಮನ ಕಟ್ಟುನೆಗಳನ್ನು ಮೀರಿ ಆಗನಿತ ಪಾಪಕಾರ್ಯಗಳನ್ನು ಮಾಡಿರುವೆನು ಇದರ ಫಲವಾಗಿ ನಾನು ಘೋರ ನರಕಯಾತನೆಯನ್ನು ಆನುಭವಿಸುವದು ನಿಶ್ಚಯ ನಾಶ ! ನಾಶ ! ಈ ಚಿಂತಾಲಕ್ಕತ್ತೆಯು ! ಇಗೋ ! ಇಂದಿನಿಂದ ಈ ಕೆರಾತಕೃತ್ಯವನ್ನು ಸತಿಸುತರೆಂಬ ಮೋಹವನ್ನೂ ಬಿಟ್ಟೆನು ಪಾಪಸಾಗರದಲ್ಲಿ ಮುಳು ಗೇಳುತ್ತಿದ್ದ ನನಗೆ ನೀನೇ ಗುರುವು. ಎಂದು ಮುಪ್ಪಾನು ಗಳನ್ನು ಸುರಿಸುತ್ತ ಅವನ ಪಾದಗಳಮೇಲೆ ಬಿದ್ದು ಕ್ಷಮೆ ಯನ್ನು ಬೇಡಿದನಲ್ಲದೆ, ಮರಣಾವಧಿ ಇಂತಹ ಕೆರಾತ ಕೃತ್ಯವನ್ನು ಮಾಡುವದಿಲ್ಲೆಂದು ಪ್ರತಿಜ್ಞೆಯನ್ನು ಮಾಡಿ ಅವನ ಹಣವನ್ನು ಅವನಿಗೆ ಕೊಟ್ಟು ಳಳುಬಿಸಿ ದನು ಅಮೇಲೆ ಒಂದು ಮುಷ್ಕಾಶ್ರಮವನ್ನು ಸೇರಿ ಆವರ ಸೇವೆಯನ್ನು ಮಾಡಿಕೊಂಡಿದ್ದು, ಕಾಲಾಂತರದಲ್ಲಿ ಅವನೂ ಒಬ್ಬ ಮಹಾತಪಸ್ವಿಯಾದನೆಂಬ ಇತಿಹಾಸ ವಿರುವದು ಅದಪ್ರಯುಕ್ತ ಆಪದ್ಬಾಂಧವರಾದ ಸಂಪದ್ಬಾಂಧವರಾದ ಸತೀಸುತರಿಗಾಗಿ ಗೃಹ ಕ್ಷೇತ್ರ ಧನ ಕನಕಾದಿಗಳನ್ನು ಗಳಸುವುದಕ್ಕಾಗಿ ರಾಜನ ತಾಮಸಾಹಂಕಾರಗಳಲ್ಲಿ ಮುಳುಗೇಳುತ್ತ ರಕ್ತಪಾತಾಭ ಳಾಸಿಗಳಾದ ಕ್ರೂರ ಹುಲಿ ಸಿಂಹಗಳಂತೆ ಹಿಂಸಾ ಕೃತ್ಯಗಳನ್ನು ಮಾಡಿ ತನ್ನ ಅವಶ್ಯಕತೆಯನ್ನು ಕಲ್ಪಿಸಿ ಕೊಳ್ಳುವದು ಮನುಷ್ಯಜನ್ಮಕ್ಕೆ ಭೂಷಣವಲ್ಲ ! ಸರ್ವಥಾ ಭೂಷಣವಲ್ಲ ! !

ಪಟ್ಟಿಣ ಬಂಗಾಳ ಪ್ರಾಂತದ ಪ್ರಾಥಮಿಕ ಶಾಲೆ ಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಸುವುದನ್ನು ನಿಲ್ಲಿಸ ಲಾಗಿದೆ. ಇಂದಿ ಕಾಲದಲ್ಲಿ ವಿದ್ಯಾರ್ಥಿಗಳಿಗೆ ಗೃಹ ಕೈಗಾರಿಕೆಯನ್ನು ಕಲಿಸಲಾಗುವುದು.

ವರ್ತಮಾನ ಸಂಗ್ರಹ

ಹೈದರಾಬಾದಿಗೆ ಪಂ॥ ನೆಹ್ರೂರವರ ಆಗಮನ

ಭಾರತದ ಮುಖ್ಯ ಮಂತ್ರಿಗಳಾದ ಪಂಡಿತ್ ಜವಹರ್‌ಲಾಲ್ ನೆಹ್ರೂ ಅವರು ಮೈಸೂರು ಸಂಸ್ಥಾನಕ್ಕೆ ಬರುವ ಮುಂಚೆ, ಇದೇ ತಿಂಗಳು ೨೪ನೆ, ೨೫ ಮತ್ತು ೨೬ ನೆಯ ತಾರೀಖುಗಳಲ್ಲಿ ಹೈದರಾಬಾದಿಗೆ ಹೋಗಲಿದ್ದಾರೆ ಎಂದು ಅವರು ಸಾರ್ವಜನಿಕ ಸಭೆಯಲ್ಲಿಯೂ ರೇಡಿಯೋ ಮೂಲಕವೂ ಭಾಷಣ ಮಾಡುವರು ಅನಂತರ ಪ್ರಜಾ ಪ್ರಭುತ್ವವನ್ನೂ, ಇತರ ಪ್ರಜಾಸಮುದಾಯಗಳನ್ನೂ ಕಾಣುವರು ಪಂ॥ ನೆಹರೂ ಅವರು ಹೈದರಾಬಾದಿನಲ್ಲಿ ಮಿಲಿಟರಿ ಆಡಳಿತಾಧಿಕಾರಿಗಳಾಗಿರುವರು

ಹೈದರಾಬಾದಿನ ಆಡಳಿತದ ಬಗ್ಗೆ ನೈಜಾಮರು ತೃಪ್ತಿ

ಪಾಕಿಸ್ತಾನದ ವಿದೇಶಾಂಗ ಮಂತ್ರಿಗಳಾದ ಸರ್ ಜಫರುಲ್ಲಾಖಾನರು, ಈಚೆಗೆ ಹೈದರಾಬಾದಿನ ಪರಿಸ್ಥಿತಿ ಬಹಳ ಕೆಟ್ಟದಾಗಿದೆ ಎಂದು ಹೇಳಿದರಷ್ಟೆ! ಈ ಸಂದರ್ಭದಲ್ಲಿ ಹೈದರಾಬಾದಿನ ನೈಜಾಮರು ತಮ್ಮ ಸಂಸ್ಥಾನದಲ್ಲಿ ಭಾರತ ಸರ್ಕಾರದವರು ನೇಮಿಸಿರುವ ಮಿಲಿಟರಿ ಆಡಳಿತಗಾರರಿಗೆ ಒಂದು ಪತ್ರ ಬರೆದಿದ್ದಾರೆ

"ಹೈದರಾಬಾದಿನ ಪರಿಸ್ಥಿತಿ ಈಗ್ಗೆ ಕೆಲವು ತಿಂಗಳಿಗೆ ಹಿಂದೆ ಇದ್ದುದಕ್ಕಿಂತ ಬಹಳ ಉತ್ತಮವಾಗಿದೆ ನಮ್ಮ ಪ್ರಜೆಗಳಲ್ಲಿಯೂ ಶಾಂತಿಯಿಂದ ಜೀವಿಸುತ್ತಿದ್ದಾರೆ ಹಿಂದಿನ ಮಂತ್ರಿಮಂಡಲದ ಕಾಲದಲ್ಲಿ ಆಡಳಿತವು ತುಂಬಿ ವಿಭಿತ್ತು ಈಗಿನ ಮಿಲಿಟರಿ ಆಡಳಿತವು ಎಲ್ಲವನ್ನೂ ಸರಿಪಡಿಸಿದೆ" ಎಂಬುದಾಗಿ ನೈಜಾಮರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ

ನೈಜಾಮರನ್ನು ಪದಚ್ಯುತರನ್ನಾಗಿ ಮಾಡಲು ಸೋಷಲಿಸ್ಟರ ಪ್ರಯತ್ನ

ಹೈದರಾಬಾದಿನ ಸೋಷಲಿಸ್ಟ್ ಪಕ್ಷದವರು ನೈಜಾಮರನ್ನು ಪದಚ್ಯುತರನ್ನಾಗಿ ಮಾಡುವ ಚಳುವಳಿಯನ್ನು ಹೂಡಿದ್ದಾರೆ ಪಂ॥ ನೆಹರೂರವರಿಗೆ ಒಪ್ಪಿಸುವ ವಿಜ್ಞಪ್ತಿಯೆಯ ರೂಪದಲ್ಲಿರುವ ಲಕ್ಷಾಂತರ ಪ್ರಸ್ತಪತ್ರಿಕೆಗಳನ್ನು ಹಂಚಲಾಗಿದೆ ಈ ಪತ್ರಿಕೆಗಳಿಗೆ ಹೈದರಾಬಾದಿನ ಪ್ರಜೆಗಳು ಸಹಿ ಮಾಡಿ ಪಂ॥ ನಹರೂರವರಿಗೆ ಕಳುಹಿಸಬೇಕೆಂದು ಪ್ರಾರ್ಥಿಸಿದ್ದಾರೆ

ಪೋಲೀಸರಿಗೆ ಸರ್ದಾರರ ಉಪದೇಶ

ಭಾರತದ ಉಪಪ್ರಧಾನ ಮಂತ್ರಿಗಳಾದ ಸರ್ದಾರ್ ವಲ್ಲಭಭಾಯಿ ಪಟೇಲರು ಕಳೆದ ವಾರ ದೆಹಲಿಯಲ್ಲಿ ಪೋಲೀಸರ ಸಭೆಯೊಂದರಲ್ಲಿ ಭಾಷಣ ಮಾಡುತ್ತ—

ಭಾರತವು ಸ್ವತಂತ್ರವಾಗುವ ಮುಂಚೆ ಪೋಲೀಸರು ಜನರೊಡನೆ ಹೋಗಾಡಬೇಕಾಗಿತ್ತು, ಇದರಿಂದ ಪೋಲೀಸರಿಗೆ ಅಪಕೀರ್ತಿ ಬಂದಿತ್ತು. ಈಗಲೂ ಸ್ವಲ್ಪ ಮಟ್ಟಿಗೆ ಈ ಅಪಕೀರ್ತಿ ಉಳಿದಿದೆ ಈಗ ದೇಶದಲ್ಲಿ ಪರಿಸ್ಥಿತಿ ಬದಲಾಯಿಸಿದೆ ಪೋಲೀಸರೂ, ಜನರೂ ತಮ್ಮ ಧೋರಣೆಯನ್ನು ಬದಲಾಯಿಸಬೇಕು ದೆಸ್ಸರಾದ ಪೋಲೀಸರು ಇಲ್ಲದಿದ್ದರೆ ಸರ್ಕಾರವು ಕಾರ್ಯಮಾಡುವುದೆಷ್ಟಾಗುವುದಿಲ್ಲ ದೇಶದ ಒಳಗೆ ಶಾಂತಿಯನ್ನು ಕಾಪಾಡುವುದು ಪೋಲೀಸರ ಜವಾಬ್ದಾರಿ

ಪೋಲೀಸರು ಜನರೊಡನೆ ಸಹಕಾರದೇಕು ಅವರ ವಿಶ್ವಾಸವನ್ನು ಸಂಪಾದಿಸಬೇಕು ಪೋಲೀಸರು ಸತ್ಯ ಮಾರ್ಗದಲ್ಲಿ ಇಷ್ಟರಿಗೆ ಸೇವೆ ಸಲ್ಲಿಸಿದರೆ, ಜನರ ವಿಶ್ವಾಸ ಮತ್ತು ಗೌರವವನ್ನು ಪಡೆಯಬಹುದು ಕಾನೂನು ಗಳನ್ನು ಮುರಿದವರನ್ನು ಹಿಂಸಿಸಾರದು. ಅವರನ್ನು ಗೌರವ ಪ್ರಜೆಗಳನ್ನಾಗಿ ಮಾಡುವುದು ಪೋಲೀಸರ ಕಾರ್ಯ ಎಂಬುದಾಗಿ ಬುದ್ಧಿವಾದ ಹೇಳಿದರು.

ದೆಹಲಿಯ ಸಮ್ಮೇಳನ

ಭಾರತ ಪಾಕಿಸ್ತಾನಗಳಿಗೆ ಅದ ಒಪ್ಪಂದಗಳು ಭಾರತ ಸರ್ಕಾರದ ಅಧಿಕೃತ ಪ್ರಕಟಣೆ

ದೆಹಲಿಯಲ್ಲಿ ನಡೆದ ಅಂತರ ಡೊಮಿನಿಯನ್ ಸಮ್ಮೇಳನದಲ್ಲಿ ಆದ ತೀರ್ಮಾನಗಳಲ್ಲಿ ಒಟ್ಟಿಗೆ ಭಾರತ ಸರ್ಕಾರವು ಅಧಿಕೃತ ಪ್ರಕಟಣೆ ಹೊರಡಿಸಿದೆ

ಕಲ್ಕತ್ತ ಸಮ್ಮೇಳನದಲ್ಲಿ ಅಂಗೀಕೃತವಾದ ಪರತ್ತು ಗಳನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲು ಒಂದು ಇಂಟರ್ ಡೊಮಿನಿಯನ್ ಇಂಪರ್ಮೇಂಟ್ ಮತ್ತು ಕಾಸ್ಟ್ ಲೈಜಿಂಗ್ ಸಮಿತಿಯನ್ನು ಏರ್ಪಡಿಸಬೇಕೆಂದು ಎರಡು ಪಕ್ಷಗಳೂ ಒಪ್ಪಂದವಾದಿದೆ ಪೂರ್ವ ಮತ್ತು ಪಶ್ಚಿಮ ಬಂಗಾಳ ಮತ್ತು ಪೂರ್ವಬಂಗಾಳ ನ ಶ್ರ ಅಸ್ಸಾಂ ಇವುಗಳ ಗಡಿ ವ್ಯವಹಾರವನ್ನು ಸೂಕ್ತರೀತಿಯಲ್ಲಿ ಒಗೆಹರಿಸಲು ಜನವರಿ ೩೧ರ ಒಳಗಾಗಿ "ಜುಡಿಷಿಯಲ್ ಟ್ರಿಬ್ಯೂನಲ್" ನಿರ್ಮಿಸಬೇಕೆಂದು ತೀರ್ಮಾನ ವಾಗಿದೆ

ಅರ್ಥಿಕ ವಿಚಾರಗಳ ಬಗ್ಗೆ ಒಪ್ಪಂದ

ಕಲ್ಲತ್ತ ಮತ್ತು ಕರಾಚಿ ಒಪ್ಪಂದದಲ್ಲಿ ನಮೂದಿಸಿದ ಅಧಿಕ ವಿಚಾರಗಳ ಬಗ್ಗೆಯೂ ತೃಪ್ತಿಕರವಾದ ಒಡಂಬಡಿಕೆಯಾಗಿದೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಂಚರಿಸುವ ಜನರಿಗೆ ಉಂಟಾಗಬಹುದಾದ ತೊಂದರೆ ಯನ್ನು ಅರಸ್ಸು ಕಡಿಮೆ ಮಾಡಿಸಿ ಉದ್ದೇಶದಿಂದ ಪ್ರಯಾಣಿಕರ ಶೋಧನ, ಪ್ರಯಾಣ ಸೌಕರ್ಯಗಳು, ಪಾಸ್ಪೋರ್ಟ್ ರವಾನೆ ಇವುಗಳಿಗೆ ಸಂಬಂಧಪಟ್ಟ ನಿಯಮ ನಿಬಂಧನೆಗಳನ್ನು ಸುತಮಗೊಳಿಸಲಾಗುವುದು

ಆತ್ಯಾವಶ್ಯಕ ಪದಾರ್ಥಗಳನ್ನು ಬೇಗ ರವಾನಿಸಲು ಸೌಕರ್ಯ ಏರ್ಪಾಟ್ಲು ಉಭಯ ಪಕ್ಷಗಳೂ ಒಪ್ಪಿವೆ

ನಿರಾಶ್ರಿತರ ಆಸ್ತಿ ವಿಷಯಗಳಿಗೆ ಸಂಬಂಧಪಟ್ಟ ಅನೇಕ ಸುಖ ಸಮಸ್ಯೆಗಳ ಬಗ್ಗೆಯೂ ಒಪ್ಪಂದವಾಗಿದೆ

ಒಟ್ಟಿನಲ್ಲಿ ಕಾಶ್ಮೀರ ಸಮಸ್ಯೆಯೊಂದರ ಹೊರತು ಉಳಿದ ಅನೇಕ ಪ್ರಮುಖ ಸಮಸ್ಯೆಗಳ ಬಗ್ಗೆ ಸೌಹಾರ್ದಯುತ ಒಪ್ಪಂದವಾಗಿದೆ ಇನ್ನೂ ಇತ್ಯರ್ಥವಾಗದೆ ಉಳಿದಿರುವ ಹಲವು ಪ್ರಶ್ನೆಗಳನ್ನು ಜನವರಿ ೧೯ ನೆಯ ಶಾ॥ ಕರಾಚಿಯಲ್ಲಿ ಜರುಗಲಿರುವ ಇಂಟರ್ ಡೊಮಿನಿಯನ್ ಸಮ್ಮೇಳನದಲ್ಲಿ ಪರಿಶೀಲಿಸಲಾಗುವುದು

ಧಾರ್ ಸಮಿತಿಯ ವರದಿ

"ಸದ್ಯ ಭಾಷಾನುಗುಣ ಪ್ರಾಂತ್ಯ ರಚನೆಯು ಕಾರ್ಯ ಕ್ರಮವನ್ನು ಕೈಗೆತ್ತಿಕೊಡುದು ದೇಶದ ಸ್ಥಿರತೆಯು ಸಂಪೂರ್ಣವಾಗಿ ಭದ್ರವಾಗುವುದೇಲೆ, ಆಡಳಿತಕಾರ್ಯಕ್ಕೆ ಅನುಕೂಲವಾಗುವಂತೆ ಕೆಲವು ಪ್ರಾಂತ್ಯಗಳನ್ನು ಭಿನ್ನ ವ್ಯವಸ್ಥೆಗೊಳಪಡುವು

—ಎಂಬುದಾಗಿ ಭಾರತ ರಾಜ್ಯಾಂಗ ಸಭೆಯ ಅಧ್ಯಕ್ಷರು ನೇಮಿಸಿದ ಭಾಷಾವಾರು ಪ್ರಾಂತ್ಯ ಸಮಿತಿಯು ವರದಿ ಮಾಡಿದೆ

ಸಮಿತಿಯವರು ಭಾಷಾವಾರು ಪ್ರಾಂತ್ಯ ನಿರ್ಮಾಣದ ಬಗ್ಗೆ ಜನರ ಆಕಾಂಕ್ಷೆ ಒಲವಾಗಿದೆಯೆಂಬುದು ಅವರು ಸಾದಿಸಲ್ಪಡದಿದ್ದರೆ ಬಹಳ ನಿರಾಸೆಗೆ ಕಾರಣವಾಗಬಹುದೆಂದೂ ಸಮಿತಿಯು ಹೇಳಿ "ಆದರೂ ಭಾರತದ ಈಗಿನ ವಿಷಮ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ್ಯ ರಚನೆಯು ಬೇಡಿಕೆಗೆ ಕಿವಿಗೊಡುವುದು ಉಚಿತವೆನಿಸುವುದಿಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ

"ಭಾಷಾವಾರು ಪ್ರಾಂತ್ಯ ರಚನೆಯಿಂದ ಜೀನೆ ಭಾಷೆ ಮಾತನಾಡುವ ಅಲ್ಪಸಂಖ್ಯಾತರ ಮೇಲೆ ದ್ವೇಷ ಬುದ್ಧಿ ಹುಟ್ಟುತ್ತದೆ ಆ ಪ್ರಾಂತಗಳಲ್ಲಿ ಪ್ರಾಂತೀಯ ಮನೋಭಾವ ಹೆಚ್ಚುತ್ತದೆ ಗಡಿ ನಿರ್ಣಯ ಮಾಡುವಾಗ ವಿಪರೀತ ಭಿನ್ನಾಭಿಪ್ರಾಯಗಳಿಗೆ ಅವಕಾಶವಾಗುತ್ತದೆ ಮದ್ರಾಸ್ ಮತ್ತು ಬೊಂಬಾಯಿ ನಗರಗಳ ಸಮಸ್ಯೆಯು ಆತಿ ತೊಡಕಾಗಿದೆ" ಎಂದು ಸಮಿತಿ ವರದಿ ಮಾಡಿದೆ

ವರದಿಯ ಸಾರಾಂಶ

೧೯೨೧ರಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಆಂಧ್ರ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ ಗಳು ಭಾಷಾನುಗುಣವಾಗಿ ರಚಿತವಾಗಬೇಕೆಂಬು ಒಪ್ಪಿ ಕೊಂಡಿದ್ದಿತು ಆದರೆ ಈಗ ಪರಿಸ್ಥಿತಿಗಳು ವಿಪರೀತ ವ್ಯತ್ಯಾಸವಾಗಿ ಕಾಂಗ್ರೆಸ್ ೧೯೨೬ ರಲ್ಲಿ ಭಾಷಾನುಗುಣ ಪ್ರಾಂತ್ಯ ರಚನೆ ಬಗ್ಗೆ ಮಾಡಿದ ಘೋಷಣೆಯನ್ನು ಪುನಃ ಘೋಷಿಸಬಹುದು ಅಷ್ಟೆ!

ಸ್ವಾತಂತ್ರಗಲು ಅರ್ಹತೆ

ಯಾವುದೇ ಒಂದು ಪ್ರದೇಶವಾಗಲು ಅರ್ಹತೆ ಪಡೆಯಬೇಕಾದರೆ ಅದಕ್ಕೆ ಮೂಲಭೂತವಾದ ಕೆಲವು ಲಕ್ಷಣಗಳಿರಬೇಕು ಭೌಗೋಳಿಕ ಸಾಮರಸ್ಯ, ಅರ್ಥಿಕ ಸ್ವಾವಲಂಬನೆ, ಮುಂದಿನ ಜೀವನದಿಗೆ ಸಾಕಷ್ಟು ಆಸು ಕೂಲ್ಯಗಳಿರುವುದು, ಮತ್ತು ಸಂಸ್ಕೃಥಪಟ್ಟ ಜನಗಳ ಪಮ್ಮತಿ ದೊರೆಕಿಸಿಕೊಳ್ಳುವುದು ಇವು ಮುಖ್ಯವಾಗಿವೆ

ಈಕಾಲದಲ್ಲಿ ಭಾರತವು ಒಂದು ರಾಷ್ಟ್ರವಾಗಿ ರಚಿತ ವಾಗಬೇಕಾಗಿದೆ ಭಾರತೀಯರ ಶಕ್ತಿ ಸಾಮರ್ಥ್ಯಗಳು ಭಾಷಾನುಗುಣ ಪ್ರಾಂತ ರಚನೆಯಲ್ಲಿ ವಿನಿಯೋಗವಾಗ ಲಾರಂಭಿಸಿದರೆ ಭಾರತವು ಎದುರಿಸಬೇಕಾಗಿರುವ ಮಹಾ ಸಮಸ್ಯೆಗಳು ಮೂಲೆಗುಂಪಾಗುವುವು ಇದರಲ್ಲಿ ಶಿಕ್ಷಿತ ತರ ಪುನರ್ನಿಷೆ ಕಾರ್ಯಕ್ರಮವು ಆತಿ ಮುಖ್ಯವಾದು ದಾಗಿದೆ

ಭಾಷಾನುಗುಣ ಪ್ರಾಂತಗಳ ರಚನೆಯಾದರೆ ನಾಲ್ಕು ಹೊಸ ರಾಜಧಾನಿಗಳನ್ನು ಕಟ್ಟಬೇಕಾಗುತ್ತದೆ ಈಗಾ ಗಲೇ ಕಟ್ಟಿಡದ ಸಾಮಾನುಗಳ ಅಧಾವದಿಂದ ಜನರ ವಾಸಕ್ಕೆ ಮನಗಳೇ ಇಲ್ಲವಾಗಿವೆ ಹೊಸ ಮತ್ತು ಅನಾವ ಶ್ಯಕ ಕಟ್ಟಡಗಳನ್ನು ಈಗ ಕಟ್ಟಲು ಸಾಧ್ಯವೇ ಇಲ್ಲ

ಭಾಷಾನುಗುಣ ಪ್ರಾಂತ ರಚನೆಯಾದರೆ ಆ ಪ್ರಾಂತದ ಜನರು ತಮ್ಮ ಹಾಗೂ ಭಾರತದ ಪ್ರಗತಿಗೆ ನೆರವಾಗಲು ಸಹಾಯಕರಾಗುವರೆಂದು ಕೆಲವರು ಅಭಿಪ್ರಾಯ ಪಡುತ್ತಾರೆ ಆದರೆ ಒಂದು ಪ್ರದೇಶದ ಸಂಕುಚಿತ ಹಿತಕ್ಕೆಂತ ಸರ್ವ ಗ್ರ ಭಾರತದ ಹಿತವನ್ನು ಲಕ್ಷಿಸಬೇಕಾಗಿದೆ ಭಾರತದ ಹಿತಕ್ಕೆ ಧಕ್ಕೆ ಒರಿಸ ಬಹುದಾದ ಕಾರ್ಯಕ್ರಮವನ್ನೂ ತೆಗೆದುಕೊಳ್ಳಕೂಡದು

ಅಡ್ಡಿ ಆತಂಕಗಳು

ಜಿಲ್ಲೆಗಳ ಗಡಿ ನಿರ್ಣಯಿಸುವುದು ಅತಿ ಕಷ್ಟ ಸಾಧ್ಯವಾದ ಮಾತಾಗಿದೆ ಕೆಲವು ಗಡಿ ಪ್ರದೇಶಗಳಲ್ಲಿ ವಿಶೆ ಭಾಷೆಯೊರೆವೆ ದ್ವಿಭಾಷೆಗಳಿರುತ್ತವೆ ಅಕ್ಕಪಕ್ಕದ ಎರಡು ಜಿಲ್ಲೆಯವೂ ಎರಡು ಭಾಷೆಗಳನ್ನೂ ಸಮಸಮನಾಗಿ ಮಾತನಾಡುತ್ತಾರೆ ಇವನ್ನು ಯಾವ ಜಿಲ್ಲೆಗೆ ಹಂಚಿ ಹಾಕಿದರೂ ವೈಷಮ್ಯಕ್ಕೆ ಕಾರಣವಾಗುತ್ತದೆ

ಬೊಂಬಾಯಿ-ಮದ್ರಾಸ್ ನಗರಗಳು

ಬೊಂಬಾಯಿ ಮತ್ತು ಮದ್ರಾಸ್ ನಗರಗಳನ್ನು ಯಾವ ಪ್ರಾಂತಕ್ಕೆ ಹಂಚಿದರೂ ಭಾರತಕ್ಕೆ ತೊಂದರೆ ಆಗುತ್ತದೆ. ಈ ಪಟ್ಟಣಗಳಲ್ಲಿ ಯಾವ ಒಂದೇ ಭಾಷೆ ಯನ್ನು ಜನರು ಆಡುತ್ತಿಲ್ಲ ನಾನಾ ಪ್ರಾಂತೀಯರು ನಾನಾ ಭಾಷೆಗಳನ್ನಾಡುತ್ತಾರೆ ಈ ನಗರಗಳನ್ನು ಹಂದು ಹಂಚಲೂ ಸಾಧ್ಯವಿಲ್ಲ—ಎಂಬುದಾಗಿ ಸಮಿತಿಯು ತಿಳಿಸಿದೆ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ೧೬ ನೆಯ ತಾರೀಖು ಗುರುವಾರ ವಿನಸ ಜಯಪುರದ ಬಳಿ ರಚಿತ ವಾಗಿರುವ ಗಾಂಧೀ ನಗರದಲ್ಲಿ ಸಮಾವೇಶಗೊಂಡಿತು. ೧೫ ನೆಯ ತಾ॥ ಬುಧವಾರ ಮಧ್ಯಾಹ್ನ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಡಾ॥ ಪಟ್ಟಾಭಿಸೀತಾ ರಾಮಯ್ಯನವರು ಗಾಂಧೀ ನಗರಕ್ಕೆ ಆಗಮಿಸಿದರು ಅವರನ್ನು ಎರಡು ವೈಭವದ ಬೆಳ್ಳಿ ಯ ರಥದಲ್ಲಿ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು.

ಮೆರವಣಿಗೆಯ ಮುಂಚೆ ಎರಡು ಅನೆಗಳು ತ್ರಿವರ್ಣ ಧ್ವಜಗಳನ್ನು ಎತ್ತಿ ಹಿಡಿದು ಹೊರಟವು ಅವುಗಳ ಹಿಂದೆ ಒಂಟೆಗಳು ರಾಜವಾಡೆಗಳ ಹಿಂದಿನ ಕಾಲದ ಬಾಡೂಕಗಳನ್ನು ಹೊತ್ತು ಹೊರಟವು. ಅವುಗಳ ಹಿಂದೆ ಸುಮಾರು ೪ ಸಾವಿರ ಸ್ವಯಂಸೇವಕರು ಬಳಿದು ಮತ್ತು ಹಾಕಿ ಕಾಯಿದ್ದ ಧರಿಸಿ, ಉಡುಪಿ ಮತ್ತು ಸೈಕಲ್ಲುಗಳ ಮೇಲೆಯೂ, ಕಾಲ್ನಡಿಗೆಯಲ್ಲೂ ಹೊರಟಿದ್ದರು.

ಅವರ ಹಿಂದೆ ಸಿಖ್ ಸ್ವಯಂಸೇವಕರೂ ಜಯಪುರದ ಸಂಸ್ಥಾನದ ಮಿಲಿಟರಿಯವರೂ ನಡೆದರು

ಜಯಪುರದ ಮುಖ್ಯ ಬೀದಿಗಳಲ್ಲೆಲ್ಲಾ ತಳಿರು ತೋರಣಗಳನ್ನು ಕಟ್ಟಲಾಗಿತ್ತು ಸಹಸ್ರಾರು ಜನರು ರಸ್ತೆಯ ಎರಡು ಪಕ್ಕಗಳಲ್ಲೂ ತುಂಬಿದ್ದರು ಹತ್ತು ವರ್ಷಗಳನಂತರ, ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ ಇಷ್ಟು ವೈಭವದಿಂದ ನಡೆದಿರುವುದು ಇದೇ ಮೊದಲು

ಜಯಪುರದಲ್ಲಿ ಕಾಂಗ್ರೆಸ್ ಮಹಾಸಭೆ

೧೬ನೆಯ ತಾ॥ ದಿವಸ ಭಾರತದ ವಿದೇಶ ವ್ಯವಹಾರ ನೀತಿಯ ಬಗ್ಗೆ ವರ್ಕಿಂಗ್ ಕಮಿಟಿಯು ತಂದ ನಿರ್ಣಯವು ವಿಷಯ ನಿಯಾಮಕ ಸಮಿತಿಯಲ್ಲಿ ವಿಶೇಷ ಬಹುಮತಗಳಿಂದ ಅಂಗೀಕೃತವಾಯಿತು ವಿಶ್ವಸಂಘದ ಪ್ರಾಣಿಕೆಯಲ್ಲಿ ಅಡಕವಾಗಿರುವ ತತ್ವಗಳಿಗೆ ಕಾಂಗ್ರೆಸ್ಸು ಹೃತ್ಪೂರ್ವಕವಾಗಿ ಮನ್ನಣೆ ಕೊಡುವೆದೆಂದೂ ಕಾರ್ಮಿಕೆಲ್ಲ್ ರಾಷ್ಟ್ರಗಳೊಂದಿಗೆ ಭಾರತವು ಸಂಬಂಧ ಸುಧರ್ಸಗಳನ್ನು ಇಟ್ಟುಕೊಳ್ಳುವುದಕ್ಕೆ ಅನುಮೋದನೆ ಕೊಡುವದೆಂದೂ ಈ ನಿರ್ಣಯದಲ್ಲಿ ತಿಳಿಸಲಾಗಿದೆ ಸುಮಾರು ೧೦-೧೨ ಜನ ಭಾಷಣಕಾರರು ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿದ್ದರು

ನಿರ್ಣಯಕ್ಕೆ ವಿರೋಧ

ನಿರ್ಣಯವನ್ನು ವಿರೋಧಿಸಿದವರು ಕೆಲವು ಕಾಮನ್ ವೆಲ್ತ್ ರಾಷ್ಟ್ರಗಳಲ್ಲಿ ವರ್ಣಜನಾಂಗದ ನೀತಿ ಇರುವುದು ಭಾರತವು ಕಾಮನ್‌ವೆಲ್ತ್‌ನಲ್ಲಿರುವುದು ಕಾಂಗ್ರೆಸ್ ಸ್ವತತ್ವಕ್ಕೆ ವಿರೋಧವಾಗಿದೆ ಎಂದು ವಾದಿಸಿದರು

ನೆಹರೂರವರ ಉತ್ತರ

ಪಂಡಿತ ನೆಹರೂರವರು ಆಕ್ಷೇಪಗಳಿಗೆ ಉತ್ತರ ಕೊಡುತ್ತ ಭಾರತವು ಸಂಪೂರ್ಣ ಸ್ವತಂತ್ರ ಪ್ರಜಾ ಪ್ರಭುತ್ವ ರಾಷ್ಟ್ರ ಎಂದು ಮುಂತಾಗಿ ಯಾವ ಹೆಸರು ಕೊಂಡಾದರೂ ಕರೆದುಕೊಳ್ಳಬಹುದೆಂದೂ, ಆದರೆ ಇಂದಿನ ಪರಿಸ್ಥಿತಿಯಲ್ಲಿ ಯಾವ ರಾಷ್ಟ್ರವೇ ಆಗಲಿ ಒಂಟಿಯಾಗಿ ಬಾಳಲು ಸಾಧ್ಯವಿಲ್ಲೆಂದೂ ತಿಳಿಸಿದರು

ಭಾರತವನ್ನು ರಾಜಕೀಯ ದಾಸ್ಯಂದ ಬಿಡುಗಡೆ ಯಾಗುವಂತೆ ಮಾಡಬೇಕಾದರೆ ಇನ್ನೂ ಹೆಚ್ಚಿನ ಕಾರ್ಯಸಾಧನೆಯಾಗಬೇಕು ಈಗ ಎಲ್ಲರೂ ಸ್ವತಂತ್ರ ರಾಗಿದ್ದೇವೆ ಈ ಒಗ್ಗೆ ನಮಗೆ ಅನುಮಾನ ಉಂಟಾದರೆ ನನ್ಮಲ್ಲಿ ಆತ್ಮವಿಶ್ವಾಸ ಸಾಲದೆಂದು ಹೇಳಬೇಕು— ಎಂದು ಹೇಳಿದರು

ಭಾರತವು ಕಾಮನ್‌ವೆಲ್ತ್ ಸಂಬಂಧವನ್ನು ಕಡಿದು ಕೊಳ್ಳಬೇಕೆಂಬ ಬೇಡಿಕೆಗೆ ಉತ್ತರಕೊಡುತ್ತ, "ಕಾಮನ್ ವೆಲ್ತಿನಲ್ಲಿ ಭಾರತವು ಇರದೇ ಹೋದರೆ ನಮಗೆ ಹೊರ ಪ್ರಪಂಚದ ಎಲ್ಲ ಸಂಬಂಧಗಳೂ ಇಲ್ಲವಾಗುವುವು ' ಎಂದು ಹೇಳಿದರು

ಪಂಡಿತ ನೆಹರೂರವರು ತಮ್ಮ ಭಾಷಣವನ್ನು ಮುಂದುವರಿಸುತ್ತ, " ಈಗ ಭಾರತಕ್ಕೆ ಸ್ವಾತಂತ್ರ್ಯ ಬಂದು ಸುಮಾರು ೨ ವರ್ಷಗಳಾದವು ಆದಾಗ್ಯೂ ಅನೇಕ ಜನರು ತಾವು ದಾಸ್ಯದಿಂದ ಪಾರಾಗಿದ್ದೇವೆಂಬ ಭಾವನೆಯನ್ನೇ ತಳೆದಿಲ್ಲ ಯಾವ ರಾಷ್ಟ್ರವೇ ಆಗಲಿ ಇಂದು ಸಂಪೂರ್ಣ ಸ್ವತಂತ್ರವಾಗಿ ಅಥವಾ ಒಂಟಿಯಾಗಿ ಉಳಿಯಲು ಸಾಧ್ಯವಿಲ್ಲ ಇತರ ರಾಷ್ಟ್ರಗಳೊಂದಿಗೆ ಒಂದು ವಿಧವಾದ ಸಂಬಂಧ ಹಚ್ಚಿಕೊಳ್ಳಬೇಕು ಇದರಿಂದ ಉಭಯರ ಕಲ್ಯಾಣ ಮತ್ತು ಪ್ರಗತಿಗೆ ಅನುಕೂಲವಾಗುತ್ತದೆ. ಈ ಸಾಧನೆಯಿಂದ ವಿಶ್ವಶಾಂತಿಯನ್ನೂ ಹೊಂದಬಹುದು—ಎಂದು ಪಂಡಿತ ನೆಹರೂ ಹೇಳಿದರು.

ಕಾಂಗ್ರೆಸ್ಸಿನಲ್ಲಿ ಪವಿತ್ರತೆ ಉಳಿದಿದೆಯೇ?

" ಕಾಂಗ್ರೆಸ್ಸಿನವರು ಹಿಂದೆ ಗಳಿಸಿದ ತ್ಯಾಗವನ್ನು ಈಗ ಮಾರಿಕೊಳ್ಳುತ್ತಿದ್ದಾರೆ.

" ಯಾವ ರೀತಿಯ ತ್ಯಾಗಕ್ಕೂ ಅವರಲ್ಲಿ ಪ್ರೇರಣೆಗೆ ಯೆಂಬುದೇ ಕಂಡುಬರುವುದಿಲ್ಲ."

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅಮೃತಶಿಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ೧೫		೦—೬—೦
ಶ್ರೀವೀರಾ-ಕಾಶಾಚಾರ್ಯರ ಲಿಂಗಸಹಿತದ ಫೋಟೋ (ಸಾಮಾನ್ಯಭಕ್ತರಿಗೆ ಮುದ್ರಿಸಲಾದುದು)ಸೈಜು ೧೪×೧೦ ಬೆಲೆ		೦—೩—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಪೀಠಗಳಿಗೆ ತಿರಿದಿಷ್ಟಾಂಜನವನ್ನು ಉಪದೇಶಿಸುವ ಫೋಟೋ		೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಸಹಿತದ ಫೋಟೋ ಸೈಜು ೧೪×೧೦ ಬೆಲೆ ೧೫	..	೦—೩—೦
" " " ಚಿಕ್ಕ ಸೈಜು ಬೆಲೆ	..	೦—೦—೬
ಶ್ರೀ ಜಗದ್ಗುರು ರುದ್ರಮುನಿಕ್ಷರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ	..	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನಿಕ್ಷರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡಿಸಿದ ಫೋಟೋ	..	೦—೧—೬
ಶ್ರೀವೀರಾಶಾಚಾರ್ಯರು ಶ್ರೀಚಂಳೇಶ್ವರಾಚಾರ್ಯರಿಗೆ ಜಂಬ್ರಮೊತ್ತೀಕ್ಷ್ಯರಿಂಗವನ್ನು ಅನುಗ್ರಹಿಸುವ ಫೋಟೋ		೦—೦—೬
ಶ್ರೀವೀರಾಶಾಚಾರ್ಯರು ವಿಧೀಕಪಡೆದ ಪ್ರಾಣಪ್ರತಿಷ್ಠೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ		೦—೦—೬
ಶ್ರೀ ಕಾಶೀ ಜಗದ್ಗುರು ವೀರಕೆಥಪ್ರತಿಷ್ಠಾಚಾರ್ಯಮಹಾಸ್ವಾಮಿಗಳವರ ಫೋಟೋ (ಸಾಮಾನ್ಯಭಕ್ತರಿಗಲ್ಲ)		೦—೪—೦
ಶ್ರೀಲಕ್ಷೀಪಾರ್ವತಿಯರು ಶ್ರೀವಿರೂಪಾಕ್ಷರ ಜಗದ್ಗುರುಗಳು ತಿರಿಪತಿಯಾತ್ರೆಯಲ್ಲಿ ಮಾಡಿಸಿದ ಫೋಟೋ	....	೦—೧—೬
ಶ್ರೀಮಜ್ಜಗದ್ಗುರುಯೋಗಿ ಸಿದ್ಧಾಸನಸ್ಥಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ		೦—೧—೬
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ವಿಜಯಲಿಂಗಶಿವಾಚಾರ್ಯರು ಮಹಾಸ್ವಾಮಿಗಳವರ ಫೋಟೋ	.	೦—೧—೬
ಶ್ರೀ ಮಹಜ್ಜಗದ್ಗುರು ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಪಕುಳಂತಿರುವ ಫೋಟೋ		೦—೧—೬
ಪಂಡಿತ ಶ್ರೀಲಕ್ಷೀನಾಥಶಾಸ್ತ್ರಿಗಳವರ ಫೋಟೋ (ಸಾಮಾನ್ಯ ಬಣ್ಣಗಳಿಂದ ಮುದ್ರಿಸಲಾದುದು) ಚಿಕ್ಕ ಸೈಜು ಬೆಲೆ		೦—೨—೦
ಪಂಡಿತ ಶ್ರೀಲಕ್ಷೀನಾಥಶಾಸ್ತ್ರಿಗಳವರ ಫೋಟೋ (ಸಾಮಾನ್ಯ ಬಣ್ಣಗಳಿಂದ ಮುದ್ರಿಸಲಾದುದು) ದೊಡ್ಡ ಸೈಜು ಬೆಲೆ		೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾಜ್ಞಾರದ ಅಕ್ಕಿಂತ ಸುಂದರವಾದ ಫೋಟೋ ಬೆಲೆ	..	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅಕ್ಕಿಂತ ಪ್ರಾಚೀನ ಕಳ್ಳಿಪಡೆದ ಸುಂದರ ಫೋಟೋ ಬೆಲೆ	...	೦—೧—೬
ಶ್ರೀ ಜಗದ್ಗುರು ಕೇದಾರೀಸಂಪ್ರದಾಯದ ಅಕ್ಕಿಂತ ಸುಂದರವಾದ ಗೋಡ್ಡರದ ಫೋಟೋ		೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮಚ್ಛಾಸ್ತ್ರಾಚಾರ್ಯರು ವಿರಾಜಿಸುತ್ತಿರುವ ಫೋಟೋ		೦—೧—೬
ಮೈಸೂರು ಕಂಟೋನ್ಮೆಂಟ್‌ನಲ್ಲಿ ನೆಲವೇರಿದ ರಂಭಾಪುರೀ ಜಗದ್ಗುರುಗಳ ಅಶ್ವ ಪಕ್ಷಲ್ಲಿ ಮಹೋತ್ಸವದ ಫೋಟೋ		೦—೧—೬
ಶ್ರೀಜಗದ್ಗುರುರಂಭಾಪುರೀ ಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿವಾಜಿಸಮನೀಯ	..	೦—೨—೦

ಸೂಚನೆ—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

" ಇಂದು ಕಾಂಗ್ರೆಸ್ಸಿನಲ್ಲಿ ಸತ್ಯಕ್ಕೆ ಸ್ಥಾನವೇ ಇಲ್ಲ '

" ಈಗ ಕಾಂಗ್ರೆಸ್ಸಿನಲ್ಲಿ ಅಧಿಕಾರಕ್ಕಾಗಿ ಅವರವರಲ್ಲೇ ಕಚ್ಚಾಟ ಮತ್ತು ಹೊಟ್ಟೆಕಿಚ್ಚು ತಾಂಡವವಾಡುತ್ತಿದೆ."

ಎಂಬುದಾಗಿ ಗಾಂಧೀಜಿಯವರ ಪಟ್ಟ ಶಿಷ್ಯರಾದ ಶ್ರೀ ಆಚಾರ್ಯಾ ವಿನೋಭ ಭಾವೆಯವರು ಜೈಪುರದಲ್ಲಿ ಸರ್ವೋದಯ ವಸ್ತು ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸುವಾಗ ಭಾಷಣ ಮಾಡಿದರು

ಅಮೆರಿಕವು ಚೀನಾ ಸರ್ಕಾರಕ್ಕೆ ೫ೀಕ್ಷ್ರು ಸಹಾಯ ನೀಡುವುದು

ಚಿಯಾಂಗ್ ಕೈಷೇಕರ ಸರ್ಕಾರಕ್ಕೆ ಅಮೆರಿಕವು ಜೆಂಬಲ ನೀಡುವುದಾಗಿ ಅಮೆರಿಕನ್ ಸರ್ಕಾರವು ಆಶ್ವಾಸನವಿತ್ತಿದೆ ಚೀನೀ ಸರ್ಕಾರಕ್ಕೆ ಅಮೆರಿಕನ್ ಸರ್ಕಾರವು ತನ್ನ ಶಕ್ತಿ ಮೀರಿ ಸಹಾಯ ನೀಡುವುದು ಎಂಬುದಾಗಿ ಅಮೆರಿಕ ತಾತ್ಕಾಲಿಕ ಸ್ಟೇಟ್ ಸೆಕ್ರಟರಿಯವರಾದ ಮಿ॥ ರಾಬರ್ಟ್‌ಲೋವೆಟ್‌ರವರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.

ಚೀನಾದಲ್ಲಿ ಮಿಶ್ರ ಮಂತ್ರಿಮಂಡಲ ಏರ್ಪಡುವುದಕ್ಕೆ ಅಮೆರಿಕ ಒತ್ತಾಯವಿದೆಯೇ ? ಎಂಬ ಪ್ರಶ್ನೆಗೆ ಮಿ॥ ಲೋವೆಟ್‌ರವರು ಉತ್ತರ ಕೊಡುತ್ತಾ ಈಗಿನ ಚಿಯಾಂಗ್ ಸರ್ಕಾರದಲ್ಲಿ ಯಾವ ಬದಲಾವಣೆಗೂ ಅವಕಾಶವಿಲ್ಲೆಂದು ಹೇಳಿದರು.

ಚಿಯಾಂಗರು ಅಮೆರಿಕಕ್ಕೆ ಬರಲಿದ್ದಾರೆಂದು ಕೆಲವೆಡೆ ಗಳಲ್ಲಿ ಹೇಳಲಾಗಿದೆಯೆಂದೂ ಆದರೆ ನಮಗೆ ಈ ವಿಚಾರ ಯಾವುದೂತಿಳಿಯದೆಂದೂ ಮಿ॥ ಲೋವೆಟ್ ಹೇಳಿದರು. ಮೊದಲೇ ಫಿರ್ಯಾದಿಕೆ ಅಮೆರಿಕನ್ ಸರ್ಕಾರವು ಚೀನಾಕ್ಕೆ ಸಹಾಯ ನೀಡುತ್ತ ಹೋಗುವುದು ಮಾತ್ರಲ್ ಸಹಾಯವನ್ನು ತಾವು ಮಿ॥ ವಾರ್‌ಡಾಫ್ ಮಷ್ಟರೊಂದಿಗೆ ಚರ್ಚಿಸಿ ಚೀನಾಕ್ಕೆ ಯಾವರೀತಿ ಹಣಗಳಲ್ಲಿ ಸಾಮಾನು ಳಿಸಬೇಕೆಂಬ ಬಗ್ಗೆ ಸಹ ಚರ್ಚಿಸ ಲಾಗಿದೆಯೆಂದು ತಿಳಿಸಿದರು.

ಅಂಡಮಾನಿಗೆ ನೇತಾಜಿ ಬೋಸರ ಹೆಸರು

ಅಂಡಮಾನ್ ದ್ವೀಪಗಳಿಗೆ ನೇತಾಜ ಸುಭಾಸ್ ಬೋಸರ ಹೆಸರನ್ನು ಇಡಬೇಕೆಂಬ ಸಲಹೆಗೆ ಕೇಂದ್ರ ಸರ್ಕಾರದ ಮಂತ್ರಿವರ್ಗದಲ್ಲಿ ಬೆಂಬಲ ದೊರಕಿದೆಯೆಂದು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಗಳಾದ ಡಾ॥ ಬಿ ಸಿ ರಾಯ್‌ರವರು ತಿಳಿಸಿರುವ ನೇತಾಜಿಬೋಸರು ಳಕ್ಷದ ಯುದ್ಧಸಮಯದಲ್ಲಿ (೧೯೪೨ ನೇ ಇಸವಿಯಲ್ಲಿ) ಅಂಡಮಾನಿಗೆ ಭೇಟಿ ಇತ್ತಿದ್ದರು

ಮುಖಪಾರ್ಶ

ನಿಜಾಂ ಇಲಾಖಾ ಹುಮನಾಬಾದ್ ನಗರದಲ್ಲಿರುವ ವೇ॥ ಬಂಗಿ ಸಿದ್ಧರಾಮಯ್ಯನವರು ಇದೇ ಮಾರ್ಗಶೀರ್ಷ ಶುದ್ಧ ನವಮಿ ಗುರುವಾರದ ದಿವಸ ತಿನಾಧೀನ ರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವ್ಯಸನ ವೆನಿಸುತ್ತದೆ ಇವರು ಒಳ್ಳೆ ಧರ್ಮಾಭಿಮಾನಿಗಳಾಗಿದ್ದು ತಮ್ಮ ಜೀವನಸಾನದಲ್ಲಿ ಧರ್ಮಪ್ರಚಾರದವನ್ನು ವಿಶೇಷವಾಗಿ ಮಾಡಿದರು. ಪಂಚಪೀಠಗಳ ಬಗ್ಗೆ ಇವರಲ್ಲಿ ಅಪಾರವಾದ ಭಕ್ತಿಯಿದ್ದಿತು. ಈ ಕಾಲದಲ್ಲಿ ಇಂತಹ ಧರ್ಮಾಭಿಮಾನಿಗಳನ್ನು ಕಾಣುವುದು ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು. ಇವರ ವಿಯೋಗದಿಂದ ಹುಮನಾಬಾದಿನ ಹಿಂದೂ ಮುಸಲ್ಮಾನರೆಲ್ಲರೂ ಬಹಳ ವ್ಯಸನವನ್ನು ಪ್ರಕಟಿಸಿದರು. ಶ್ರೀ ಜಗದ್ಗುರುಗಳು ಇವರ ಆತ್ಮಕ್ಕೆ ಶಾಂತಿಯನ್ನುಗ್ರಯಲೆಂದು ಪ್ರಾರ್ಥಿಸುವ.

ಓಂ ಧರ್ಮಾಭಿಮಾನಿ

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜಸಿತರ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶರಶ್ರೀಪಂಚಲಿಂಗೇಶ್ವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀರೇಳಕಮಂ ॥

ಸ್ಥಳದವರಿಗೆ ೩ ರೂ ೪ ಆಣೆ. ಪರಸ್ಥಳದವರಿಗೆ ೩ ರೂ ವಿ ಪಿ ಖರ್ಚು ಸೇರಿ ೩ ರೂ ೪ ಆಣೆ

ಸಂಪುಟ ೨೨] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ ನೇ ಡಿಸೆಂಬರ್ ೧೯೪೪ [ಸಂಚಿಕೆ ೩೩

ಶ್ರೀಜಗದ್ಗುರು ವಿಶ್ವಾರಾಧ್ಯ ಗುರುಕುಲ ಹರಿತೀ ಪರೀಕ್ಷಾಫಲ

ಶ್ರೀವಿಶ್ವಾರಾಧ್ಯ ಗುರುಕುಲದ ವಾರ್ಷಿಕ ಪರೀಕ್ಷಾ ಫಲವು ಕೆಳಗೆ ಕಾಣಿಸಿದಂತಿದೆ —

(೧) ಶ್ರೀಸಿದ್ಧರಾಮ ತಿವಾಚಾರ್ಯ ರೊಡಕುಂದಿ 'ವೇದಾಂತಶಾಸ್ತ್ರಿ" (ಪ್ರಥಮಶ್ರೇಣಿ) ಗವರ್ನಮೆಂಟ್ ಸಂಸ್ಕೃತ ಕಾಲೇಜ ಬನಾರಸ್,

(೨) ಶ್ರೀಸಂಚಾರ್ಯರೆ ತಿವಾಚಾರ್ಯ ನೈರಂಗ 'ನ್ಯಾಯಸಂಪೂರ್ಣ ಮಧ್ಯಮಾ" (ಪ್ರಥಮಶ್ರೇಣಿ) ಗವರ್ನಮೆಂಟ್ ಸಂಸ್ಕೃತ ಕಾಲೇಜ್ ಬನಾರಸ್

(೩) ವೇ॥ ಗಂಗಾಧರಶಾಸ್ತ್ರೀ ಅನುಗೊಂಡ ಶಾಲಾಮರ "ವ್ಯಾಕರಣ ಮಧ್ಯಮ" ನ್ಯಾಯ ಆದ್ಯ' ಕುಲಕತ್ತಾ ಸಂಸ್ಕೃತ ಅಸೋಸಿಯೇಶನ್

(೪) ವೇ॥ ಸೋಮಶೇಖರಶಾಸ್ತ್ರೀ ರಾಯಚೂರು "ಇಂಟರ್ ಮಿಡಿಯೇಟ್" ಯು. ಪಿ ಬೋರ್ಡ್, ಅಲಹಾಬಾದ

ವೈವಸ್ಥಾಕ
ಜಂಗಮವಾಡೀ ಮಠ ಕಾಶೀ

ಹೂವಿನಗದ್ದುಗೆ ಮಹೋತ್ಸವ ರಾಮಪುರ

ಜಗದಾದಿಯಲ್ಲಿ ಪರಮೇಶ್ವರನ ಪಂಚಮುಖಗಳಿಂದ ಅವತರಿಸಿದ ಶ್ರೀ ಜಗದ್ಗುರು ಪಂಚಾಚಾರ್ಯ ಗುರು ಸಾರ್ವಭೌಮರಲ್ಲಿ ಒಬ್ಬರಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಶಾಖಾಮಹಿಮದ ತಿವಮೊಗ್ಗ ಜಿ॥ ಹೊನ್ನಾಳಿ ತಾ॥ ತುಂಗಭದ್ರಾತೀರದಲ್ಲಿ ವಿರಾಜಿಸುತ್ತಿರುವ ರಾಮಪುರದ ಶ್ರೀ ಸದ್ಗುರುತಿವಯೋಗಿ ಶ್ರೀ ಹಾಲಸ್ವಾಮಿ ಗಳವರ ಹೂವಿನಗದ್ದುಗೆಯ ಮಹೋತ್ಸವವನ್ನು ಪೌಷ್ಯ ತಿಯ ಪ್ರಕಾರ ತಾ॥ ೧೩-೧೨ ಆ ನೇ ಸೋಮವಾರ ದಿವಸ ಸದರಿ ಗ್ರಾಮದ ಸಮಸ್ತ ಭಕ್ತಾದಿಗಳು ಬಹಳ ವೈಭವದಿಂದ ನೆರವೇರಿಸಿದರು ಶ್ರೀಗಳವರ ಉತ್ಸವವು ಕತ್ಯಗದ್ದುಗೆಯಿಂದ ಸಾಯಂಕಾಲ ೬ ಗಂಟೆಯಿಂದ ಹೊರಟು ಗ್ರಾಮದ ಮುಖ್ಯ ಬೀದಿಗಳಲ್ಲಿ ನಡೆಯುತ್ತಿರಲು ಮುತ್ತೈದೆಯರು ಕಾಯಿಕರ್ಪೂರಾರತಿಯನ್ನು ಆರ್ಪಿಸುತ್ತಿದ್ದರು ಗ್ರಾಮದ ಪ್ರತಿಯೊಂದು ಬೀದಿಯು ಕಳಶತೋರಣಗಳಿಂದ ಅಲಂಕರಿಸಲ್ಪಟ್ಟಿತ್ತು. ಸದರಿ ಗ್ರಾಮದ ಪಂಚಾಚಾರ್ಯ ಭಜನಸಂಘದವರ ಜಗದಾಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿತ್ತು ಸಂಗೀತ ವಿದ್ವಾನ್ ಸುದಿಬಸಪ್ಪನವರ ವಾದ್ಯವೃಂದ ಸಮಸ್ತರನ್ನು ಆನಂದಗೊಳಿಸುತ್ತಿತ್ತು. ಈ ಮಹೋತ್ಸವಕ್ಕೆ ಹಂಪಳದಲ್ಲಿರುವ ಹಾಲಸ್ವಾಮಿ ಮಠಾಧೀಶರಾದ ಶ್ರೀ ತಿವಮೃತ್ಯುಂಜಯರವರು ಮತ್ತು ಮೇಲುಂತಿ ಸಾಮಜಾರ್ ಗುರುಭಕ್ತಕೇಸರಿ ಹುಚ್ಚಪ್ಪಗೌಡ್ರ ಕಮ್ಮತ್ತರ ವೀರಪ್ಪನವರು ಆಗಮಿಸಿದ್ದರು ಉತ್ಸವವು ರಾತ್ರಿ ೧೦ ಗಂಟೆಗೆ ಮರವನ್ನು ಸೇರಿ ಮಹಾಮಂಗಳಾರತಿಯೊಡನೆ ಮೇಲೆ ಹಾಲ್ಸ್ವಾಮಿ ಮಹಿಮೆ ಮೊಗೇರ್ ವೇ॥ ಶಾಲಪ್ಪಯ್ಯನವರು ಗುರುಹಿರಿಮೆ ಎಂಬ ವಿಚಾರದಲ್ಲಿ ಭಾಷಣ ಮಾಡಿ ಸಮಸ್ತ ಭಕ್ತಾದಿಗಳನ್ನೂ ಆನಂದಸಾಗರದಲ್ಲಿ ಮುಳುಗುವಂತೆ ಮಾಡಿದರು ಈ ಮಹಾಕಾರ್ಯಕ್ಕೆ ಕಂಕಣಬದ್ಧರಾದ ಕೆಂಪನಳ್ಳಿ ಮರದ ವೇ॥ ಹಾಲಭದ್ರಪ್ಪಯ್ಯನವರು, ಹಾಲಸ್ವಾಮಿ ಮಠದ ಮುದಿಹಾಲಪ್ಪಯ್ಯ ಚವರ ಚಿಕ್ಕಪ್ಪ ವೇ॥ ಮುರಿಗಿಪ್ಪಯ್ಯನವರು ಶಿರೀಳ್ರ ಮರದ ವೀರಪ್ಪಯ್ಯನವರ ವೇ ಗುರುವೀರಪ್ಪ ಶಾಲಪ್ಪಯ್ಯನವರು ಸ್ಟೂಲ ಮಾಸ್ಟರ್, ಸಂ ರಾ॥ ಸ್ಕೂಲ್ ಮಾಸ್ಟರ್ ಲಿಂಗಪ್ಪನವರು ಪಟೇಲ್ ಹಾಲಸಿದ್ಧಪ್ಪನವರು, ತಿರ ಕನ್ನಗೌಡರ ಹಾಲಸಿದ್ಧಪ್ಪನವರು, ಮಿ॥ ಸ್ಕೂ॥ ಹೆ॥ ರುವೆನ್ನಪ್ಪನವರು ಮೋಟಪ್ಪನ ಹಾಲಪ್ಪನವರು, ಕಾಯ ಕಟ್ಟೆ ಸಿದ್ಧಲಿಂಗಪ್ಪನವರ, ಸಣ್ಣಗೌಡರ ಮಾಲಪ್ಪನವರು, ದೊಡ್ಡಗೌಡರ ಹಾಲಪ್ಪನವರು, ಶಾನುಭೋಗ ಹಾಲಸಿದ್ಧಪ್ಪನವರು ಹುಲ್ಲುಮನೆ ಡಾಲಪ್ಪನವರು, ಸಿದ್ಧಲಿಂಗಪ್ಪನವರ ಮಹಾದೇವಪ್ಪನವರು, ಶಂಕರಪ್ಪ ನೌಡ್ರ ರುದ್ರಪ್ಪನವರು, ಜೆಟ್ಟೀರ ಹಾಲಸಿದ್ಧಪ್ಪ ಡಿ ಹಾಲಪ್ಪನವರು ದೇವಾಂಗಮತದ ಶ್ರೀ ಆರ್ ಸಿದ್ಧಪ್ಪ, ಗಿರಿಯಪ್ಪನವರು, ಸಾಹುಕಾರ್ ಹಾಲಪ್ಪನವರು, ಜೋಡಗೌರ ರಾಮಪ್ಪ ಸಾಹುಕಾರರು, ಪೋರೇಸಾಬರ ಮೊಡ್ಡ ಬುಡೇನ್ ಸಾಹೇಬರು, ಖಾಪಮ್ಮನ ಬುಡೇನ್ ಸಾಹೆಬರು, ಗೌಸೂ ಸಾಹೆಬರು, ಒಸವಾಪ್ಪೀಣ್ಣದ ಅನು ಗೋಡು ಮಠದ ಎ ಎಂ ಹಾಲಸಿದ್ಧಪ್ಪಯ್ಯನವರೂ ಇತ್ಯಾದಿ ಜನಗಳಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯವನ್ನು ದಯಪಾಲಿಸಬೇಕೆಂದು ಬೇಡಿಕೊಳ್ಳುತ್ತೇನೆ

ಓರ್ವ ಉತ್ಸವಭಾಗಿ

ಹಣ್ಣುಗಳ ಪ್ರಯೋಜನ

ಲೇಖಕರು —ವೀ॥ ವಿ ಶ್ರೀನಿವಾಸಾಚಾರ್ ಬಿ ಎಲ್ ಎ ಎಂ ಎಸ್, ಮೈಸೂರು

ಮನುಷ್ಯನ ಶರೀರವು ಸ್ಥೂಲವರ್ಗ ಮತ್ತು ಫಲಗಳಂದ ಕಟ್ಟಲ್ಪಟ್ಟಿರುವ ಒಂದು ಮನೆಯಾಗಿರುವುದು ಇಂತಹ ಶರೀರದಲ್ಲಿ ಉಂಟಾಗುವ ಯಾವ ವ್ಯಾಧಿಗಳನ್ನೇ ಆಗಲಿ ಸರಿಪಡಿಸಬೇಕಾದರೆ ಫಲಗಳ ಅವಶ್ಯಕತೆಯು ಬಹಳ ಹೆಚ್ಚಾಗಿದೆ ಇಂತಿಯಾ ದೇಶವು ಫಲಗಳನ್ನು ಬೆಳೆಯುವುದರಲ್ಲಿ ಮಿಕ್ಕ ದೇಶಗಳಿಗಿಂತ ಮುಂದುವರಿದಿದೆ ಆದರೆ ಇಲ್ಲಿಯ ಜನರು ಅವುಗಳನ್ನು ಉಪಯೋಗಿಸುವ ವಿಧಾನವನ್ನು ತಿಳಿದುಕೊಂಡಿಲ್ಲ ಈ ದೇಶದಲ್ಲಿ ಬೆಳೆಯುವ ಫಲಗಳೇ ಇಲ್ಲ ಸತ್ವಭರಿತಗಳಾದ ದ್ರಾಕ್ಷಿ, ಕಿತ್ತಳೆ, ಸೇಬು, ಅಂಜೂರ, ಆಕ್ರೋಟ್, ಅಣಾನಾಸ್, ರಸಬಾಳೆ, ಖರ್ಜೂರ, ಪಪ್ಪಾಯಿ, ಪಪ್ಪಿರಿಕೆ, ಮಾವು ಇತ್ಯಾದಿ ಉತ್ಕೃಷ್ಟ ಫಲಗಳು ಹೇರಳವಾಗಿ ಬೆಳೆಯುವ ಪ್ರದೇಶ, ಮನುಷ್ಯನು ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡುವುದರಿಂದ ಧನಿಕನೆನಿಸಿಕೊಳ್ಳುವುದಿಲ್ಲ ಆರೋಗ್ಯ ಭಾಗ್ಯವನ್ನು ಸಂಪಾದಿಸಿದಾತನೇ ನಿಜವಾದ ಧನಿಕನೆನಿಸಿಕೊಳ್ಳುವ ವಿಷಯ ಕಾಲದಲ್ಲಿ ಸತ್ವಭರಿತವಾದ ಹಸಿ ಗೆಡ್ಡೆಗೆಣಸುಗಳನ್ನು ಭಕ್ತಿಸುವುದರ ಮೂಲಕ ದೃಢ ಕಾಯರಾಗುತ್ತಿದ್ದರು ಆದರೆ ಈ ನವೀನ ಫಲಕಿನ ಕಾಲದಲ್ಲಿ ಆ ಗೆಡ್ಡೆಗೆಣಸುಗಳನ್ನು ಚಿಪ್ಸ್‌ಚಾಪಲ್ಯಕ್ಕಾಗಿ ಬೇಯಿಸಿ ಆವುಗಳನ್ನು ನಿಸ್ಸತ್ವವನ್ನಾಗಿ ಮಾಡಿ ಭಕ್ಷಣ ಮಾಡುವ್ರಾರೆ ಹೀಗೆ ಮಾಡುವುದರಿಂದ ಆರೋಗ್ಯವು ಸಂಭಾರಿಸುವುದಿಲ್ಲ ಕೇವಲ ಸಲಗಳ ಭಕ್ಷಣೆಯನ್ನೇ ನಿತ್ಯಕರ್ಮವನ್ನಾಗಿ ಮಾಡಿಕೊಂಡರೆ ಈಗ ನಾವು ಸೇವಿಸುವ ಆಹಾರಕ್ಕೆಂತಲೂ ಹೆಚ್ಚು ಫಲವನ್ನು ಹೊಂದಬಹುದು ನಾವು ಈ ನೀಲ್ಕುಂಡ ಸಾತ್ವಿಕ ವಸ್ತುಗಳನ್ನು ಬಾಯಿ ಎಂಬ ಪೋಸ್ಟ್ ಪೆಟ್ಟಿಗೆಯಲ್ಲಿ ಹಾಕಿಬಿಟ್ಟರೆ ಅದು ಕರುಳು ಎಂಬ ಮತ್ತೊಂದು ಪೋಸ್ಟ್ ಸ್ಟೇಷನ್ನನ್ನು ತಲುಪಲು ೩ ಘೆಂಟೆ ಹಿಡಿಯುತ್ತದೆ ಶರೀರವೆಂಬ ಕಟ್ಟಡವನ್ನು ಕಟ್ಟಲು ಸಾಮಗ್ರಿಗಳನ್ನೆಲ್ಲಾ ಈ ಕರುಳುಗಳು ಒಯಿದುಸುವುವು ಈ ಸಾಮಗ್ರಿಗಳ ನ್ನೆಲ್ಲಾ ರಕ್ತನಾಡಿಗಳೆಂಬ ಕೂಲಿಯಾಳುಗಳು ಆಯಾ ಭಾಗಕ್ಕನುಸಾರವಾಗಿ ಒಯಿದುಸುತ್ತವೆ ಆದರೆ ಇಂತಹ ಪ್ರದೇಶದಲ್ಲಿ ಇಂತಹ ಸಾಮಗ್ರಿಯೇ ಬೇಡಿಸಬ್ಬಹುದು ಬೇಕೆಂಬ ಕಂಟ್ರಾಕ್ಟ್ ಕೆಲಸವನ್ನು ವಿಟಮಿನ್ ಎಂಬ ಅಣ್ಣೆಗೆ ಕಾಣದ ಜೀವವು ಮಾಡುತ್ತದೆ ವಿಟಮಿನ್ ಗಳು ವಿಶೇಷವಾಗಿ ಹಣ್ಣುಗಳಲ್ಲಿಯೇ ಅಡಗಿರುವುವು ಈಗ ಕಿತ್ತಳೆಹಣ್ಣಿನ ವಿಷಯವನ್ನು ವಿಮರ್ಶಿಸೋಣ

ಕಿತ್ತಳೆ ಹಣ್ಣಿನ ಪ್ರಭಾವವು ಪ್ರಾಚೀನ ವೈದ್ಯಗ್ರಂಥಗಳಲ್ಲಿ ವಿಶದೀಕರಿಸಲ್ಪಟ್ಟಿರುವುದು ಧನ್ವಂತರಿ ನಿಘಂಟು ವಿನಲ್ಲಿ—

ಅಮ್ಲಂ ಸುಮಧುರಂ ಹೃದ್ಯಂ ವಿಷಘ್ನಂ ಭುಕ್ತಶೋಷಣಂ ।
ವಾತಘ್ನಂ ದುರ್ಜರಂ ಶ್ರೋಷ್ಣಂ ನಾರಂಗಸ್ಯ ಫಲಂ ಗುಣಃ ॥

ನಾರಂಗ (ಕಿತ್ತಳೆ ಹಣ್ಣು) ಫಲವು ಸ್ವಲ್ಪ ಹುಳಿಯಾಗಿಯೂ, ಮಧುರತಾಯಿಯೂ ಇದ್ದು ವಿಷವನ್ನೂ ವಾತವನ್ನೂ ಅಕಾಲಿಕ ಮುಪ್ಪನ್ನೂ ನಾಶಮಾಡುವ ದಲ್ಲದೆ ಮಲಬದ್ಧತೆಯನ್ನು ಹೋಗಲಾಡಿಸುವುದೆಂದು ನಿರ್ದೇಶವಾಗಿರುವುದು. ರಾಜನಿಘಂಟುವಿನಲ್ಲಿ—

ನಾರಂಗಂ ಮಧುರಂ ಜ್ಞಾನ್ಯಂ ಗುರುಷ್ಣಂ ಹೃದ್ಯ ದೀಪನಂ
ವಾತಾಶ್ಮಕಾಮಕಾಲಘ್ನಂ ಶ್ರಮಘ್ನಮೃತಲಕ್ಷಣಂ ॥

ಅಂದರೆ ಕಿತ್ತಳೆ ಹಣ್ಣು ಹುಳಿಯಿಂದ ಕೂಡಿ ಮಧುರವಾಗಿರುವುದೆಂದೂ, ಕೆಂಪಿಕ್ ಉತ್ಪನ್ನಗುಣತ್ಪಳ್ಳದ್ದೆಂದೂ, ಬಲವಾಯಕವಾದದ್ದೆಂದೂ, ವಾಯು, ಅಮ್ಲ, ಕೃಮಿ, ತೊಡರೋಗಗಳನ್ನು ನಾಶಮಾಡುವುದೆಂದೂ, ಶ್ರಮವನ್ನು ಪರಿಹರಿಸುವುದೆಂದೂ, ವರ್ಣಿಸಲಾಗಿರುವುದು.

ಕಿತ್ತಳೆ ಹಣ್ಣಿಗೆ ವೈದ್ಯಶಾಸ್ತ್ರದಲ್ಲಿ, ತಾರಂಗ, ಕೃಷ್ಣ ಸುಗಂಧ, ನಾಗರಂಗ, ಮುಖಪ್ರಿಯ, ರಾಜಾರೋಹ,

(೪ ನೆಯ ಪುಟದಲ್ಲಿ ನೋಡಿ)

ಸಂಸ್ಕೃತವು ರಾಷ್ಟ್ರಭಾಷೆಯಾಗಬೇಕು

[ಶಕ್ತಿಮ ಬಂಗಾಳಾ ಗವರ್ನರ್ ಡಾ|| ಕೈಲಾಸನಾಥ ಕಾಟ್ಜುರವರು ಮಾಡಿದ ಭಾಷಣದ ಸಾರ]

ನಾನು ಸಂಸ್ಕೃತದ ಪರವಾಗಿ ವಾದಿಸುತ್ತಿದ್ದೇನೆ ಅಂಗ್ಲರು ನನ್ನ ದೇಶದಲ್ಲೆಲ್ಲಾ ಆಂಗ್ಲಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಿ ಬಲವಂತವಾಗಿ ನಮ್ಮ ಮೇಲೆ ಹೇರಿಸಿದರು ಸ್ವಾವಮೇ ರಾಷ್ಟ್ರಭಾಷೆಯಾಗಲೀ ಅದು ಆಂಗ್ಲಭಾಷೆಯಂತೆ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳ ರಾಜಭಾಷೆಯಾಗಬೇಕೆಂದು ಯಾರೂ ಭಾವಿಸುತ್ತಿಲ್ಲ ಪ್ರಾಂತ್ಯಗಳಲ್ಲಿ ಪ್ರಾದೇಶಿಕ ಭಾಷೆಯೇ ರಾಜಭಾಷೆಯೂ ಶಿಕ್ಷಣ ಮಾಧ್ಯಮವೂ ಆಗಬೇಕೆಂಬ ತತ್ವವನ್ನು ಎಲ್ಲರೂ ಒಪ್ಪಿರುತ್ತಾರೆ

ಜನರಿಗೆ ತಮ್ಮ ಪ್ರಾದೇಶಿಕ ಭಾಷೆಗಳ ಮೇಲೆ ಅತಿಶಯವಾದ ಮಮತೆಯಿದೆ ಈ ಆಧಾರದಿಂದಲೇ ಭಾಷಾನುಗುಣ ಪ್ರಾಂತಗಳ ಬೇಡಿಕೆಯೂ ಹೊರಬಿದೆ ಅದುದರಿಂದ ರಾಷ್ಟ್ರಭಾಷೆಯು ಬಾರತದಲ್ಲೆಲ್ಲಾ ಸಾರ್ವಜನಿಕವಾದ ಭಾಷೆಯಾಗಲು ಸಾಧ್ಯನೇ ಇಲ್ಲ ಸರ್ಕಾರವು ಬಲಾತ್ಕಾರವಹಿಸಬೇಕೇ ಹೊರತು ಬೇರೆ ಮಾರ್ಗವಿಲ್ಲ ಕೆಲವು ಆಂಗ್ಲ ಭಾಷಾ ಪತ್ರಿಕೆಗಳನ್ನು ಬಿಟ್ಟರೆ ಸಮಸ್ತ ವಿಷಯಗಳೂ ಪ್ರಾಂತೀಯ ಭಾಷೆಗಳ ಮೂಲಕವೇ ಹರಡುತ್ತಿವೆ ರೇಡಿಯೋಗಳಲ್ಲಿಯೂ ಸಂಗೀತವಿದಿಗಳು ಪ್ರಾಂತೀಯ ಭಾಷೆಗಳಿಂದಲೇ ನಡೆಯುತ್ತಿವೆ ಶಾಲಕ್ರಮವಿದ್ದಲ್ಲಿ ಈ ಭಾಷೆಗಳು ಇನ್ನೂ ಪ್ರಬಲವಾಗುವುದರಲ್ಲಿ ಸಂಶಯವಿಲ್ಲ ಹಿಂದಿಯಲ್ಲಿ ಭಾಷೆಯು ಜನಸಾಮಾನ್ಯದ ಭಾಷೆಯಾಗುವುದೂ ಭಾವಿಸುವುದೂ ಕೂಡ ಅರ್ಥವಿಲ್ಲದ ಕಲ್ಪನೆ

ಸಾವಿರಾರು ವರ್ಷಗಳಿಂದಲೂ ಹೀಗೆಯೇ ನಡೆದು ಬರುತ್ತಿದೆ ರಾಷ್ಟ್ರಭಾಷೆಯನ್ನು ಒಲವಂತವಾಗಿ ಕಲಿಸಿದರೂ ಕೂಡ ಮುಸಲ್ಮಾನರ ಮತ್ತು ಆಂಗ್ಲರ ಅಳ್ವಿಕೆಯಲ್ಲಿ ಉರ್ದು- ಮತ್ತು ಇಂಗ್ಲೀಷ್ ಭಾಷೆಗಳ ಪ್ರಚಾರ ಸೆಚ್ಚಡಪ್ಪಾದರೂ ಇವರ ಉದ್ದೇಯೋಗ ಹೆಚ್ಚುತ್ತದೆಯೆಂಬ ವಿಷಯ ದಲ್ಲಿ ಸಂಪೇಸನೇ ಇದೆ ರಾಷ್ಟ್ರಭಾಷೆಯು ಜನರಲ್ಲಿ ಸಹಜವಾದ ಸಾರ್ವಜನಿಕ ವಾತ ಸ್ಫೂರ್ತಿಯನ್ನು ಉಂಟುಮಾಡ ವುದಾಗಿರಬೇಕು ಇಲ್ಲದಿದ್ದರೆ ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುವವರು ಮಾತ್ರ ಅದರಲ್ಲಿ ಪಾಂಡಿತ್ಯವನ್ನು ಪಡೆಯಲು ಬಯಸುತ್ತಾರೆ ಕೇಂದ್ರದ ನ್ಯಾಯವಿಧಾಯಕ ಸಭೆಯಲ್ಲಿಯೂ ಕೂಡ ಸದಸ್ಯರಿಗೆ ತಮ್ಮ ತಮ್ಮ ಮಾತೃಭಾಷೆಯಲ್ಲಿ ಮಾತನಾಡಲು ಅವಕಾಶವಿದೆ ಸರ್ವಿಯರ್ ಮತ್ತು ಆರೇಬಿಕ್ ಶಬ್ದ ಪ್ರಚುರವಾದ ಯಂದೂಸ್ತಾನಿಯು ಉತ್ತರ ಭಾರತದಲ್ಲಿ ಕೂಡ ಸರ್ವರ ಸಾಮಾನ್ಯ ಭಾಷೆಯಾಗುವುದೆಂದು ತಿಳಿಯುವುದು. ವ್ಯರ್ಥವಾದ ಕಲ್ಪನೆ ದಕ್ಷಿಣ ಭಾರತದಲ್ಲಿಯಂತೂ ಅದು ಸಾಧ್ಯನೇ ಇಲ್ಲ ಆದರಂತೆಯೇ ಸಂಸ್ಕೃತ ಪದ ಪ್ರಚುರವಾದ ಹಿಂದಿಯೂ ಸಹ ಭಾರತದ ಎಲ್ಲಾ ಭಾಗಗಳ ಜನರ ಸಾಮಾನ್ಯ ಭಾಷೆಯಾಗಬಲ್ಲುದೆಂದು ತಿಳಿಯುವುದೂ ಕೂಡ ನನ್ನ ಅಭಿಪ್ರಾಯದಲ್ಲಿ ಒಂದು ಕನಸು ಇದು ಹಿಂದಿಯನ್ನು ಆಡದ ಭಾರತದ ಭಾಗಗಳಲ್ಲಿ ಎಲ್ಲರ ಸಾಮಾನ್ಯ ಭಾಷೆ ಆಗಲಾರದೆಂದು ನನ್ನ ಅನುಭವದಿಂದ ಹೇಳುತ್ತೇನೆ ಶಾಲೆಯಲ್ಲಿ ಬಲವಂತದಿಂದ ಕಲಿಸಿದರೂ ಬಾಲಕರು ಮುಂದೆ ಅಭ್ಯಾಸವಿಲ್ಲದೆ ಉಪಯೋಗವಿಲ್ಲದೆ ಇದನ್ನು ಮರೆತುಬಿಡುತ್ತಾರೆ ಉರ್ದು ಅಕ್ಷರಮಾತ್ರ ಜನಸಾಮಾನ್ಯರನ್ನೂ ತನ್ನ ಕಡೆ ಆಕರ್ಷಿಸುವುದೇ ಇಲ್ಲ. ಇದು ನಿರ್ವಾದವಾದ ನೂತು

ಹಿಂದೂಸ್ತಾನೀ ಮಾತನ್ನು ಆಡದ ಪ್ರದೇಶಗಳಲ್ಲಿರುವ ಮುಸಲ್ಮಾನರೂ ಕೂಡ ಹಿಂದೂಗಳಂತೆಯೇ ತಮ್ಮ ಪ್ರಾಂತೀಯ ಭಾಷೆಗಳಲ್ಲಿ ಅಭಿಮಾನವುಳ್ಳವರಾಗಿರುತ್ತಾರೆಂಬುದನ್ನು ಎಲ್ಲರೂ ನೆನಪಿನಲ್ಲಿಡಬೇಕು. ಒಕಿಸ್ಸಾದಲ್ಲಿ ಉರ್ದೂ ತಿಳಿದ ಮುಸಲ್ಮಾನರು ಒಂದು ಅಣಾ ಪ್ರಮಾಣದಲ್ಲಿ ಮಾತ್ರ ಇರುವುದನ್ನು ನಾನು ಬಲ್ಲೆನು ಅವರ ಮಾತೃಭಾಷೆ ಒರಿಯ ಬಂಗಾಳದ ಮುಸಲ್ಮಾನರ ಬಂಗಾಳೀ ಶೈಲಿವು ಪ್ರಸಿದ್ಧವಾಗಿಯೇ ಇದೆ ಗುಜರಾತ್, ಮಹಾರಾಷ್ಟ್ರ, ದಕ್ಷಿಣ ಭಾರತ ದೇಶಗಳಲ್ಲಿಯೂ ಇನೇ ಸ್ಥಿತಿ

ಹಿಂದಿಗೆ ಸರ್ಕಾರದ ಒತ್ತಾಯವಿದ್ದರೂ ಭಾರತ ದೇಶದಲ್ಲೆಲ್ಲಾ ಎಲ್ಲರೂ ಓದಿ ಒರೆದು ಮಾತನಾಡಬಲ್ಲ ಸಾಮಾನ್ಯ ಭಾಷೆಯಾಗುವುದು ಸಾಧ್ಯವೇ? ಆಗುವುದಿಲ್ಲವೆಂದು ಈ ಮೇಲಿನ ಅಂಶಗಳಿಂದ ತಿಳಿದುಬರುತ್ತದೆ ರಾಷ್ಟ್ರೀಯ ಸಾಹಿತ್ಯ, ವಿಜ್ಞಾನದ ಅಭ್ಯಾಸ, ಭವ್ಯ ಭಿನ್ನ ಭಾಗಗಳ ಜಕ್ಕರಸ್ಯರಲ್ಲಿಯೂ ವಿದ್ಯಾಂಸರಲ್ಲಿಯೂ ವಿಚಾರ ವಿನಿಮಯ, ಅಂತಃ ಪ್ರಾಂತೀಯ ವ್ಯವಹಾರ ಇವುಗಳಿಗೆ ನಿಸ್ಸಂದೇಹವಾಗಿ ಸಂಸ್ಕೃತ ಭಾಷೆಯೇ ಅತ್ಯುತ್ತಮವಾದ ಸಾಧನವೆಂದು ನನ್ನ ಅಭಿಮತ ಈ ವಿಷಯದಲ್ಲಿ ನನಗಿಂತಲೂ ಹೆಚ್ಚು ಅಧಿಕಾರವಾಣಿಯಿಂದ ಹೇಳಬಲ್ಲ ಶ್ರೀ ಡಾ|| ಅಮರನಾಥ ಜಾರವರ ಹೇಳಿಕೆಯನ್ನು ಇಲ್ಲಿ ಉದ್ಧರಿಸುತ್ತೇನೆ 'ಒಂದು ಕಾಲದಲ್ಲಿ ಸಂಸ್ಕೃತವೇ ವಿಶ್ವಭಾಷೆಯಾಗಿತ್ತು ಯಾವ ನಿಧವಾದ ಸಾಂಸ್ಕೃತಿಕತ್ವವು ಚೀಕಾದರೂ ಅದನ್ನು ಕಲಿಯುತ್ತಿದ್ದರು ಅದರ ತಿಳಿವು ಸಭ್ಯತೆಯು ಸಂಸ್ಕೃತಿಯ ಕುರುಹಾಗಿತ್ತು ಇದ ವಿದ್ವಾಂಸರೆಲ್ಲರ ವ್ಯಾವಹಾರಿಕ ಭಾಷೆಯಾಗಿತ್ತು ಶಾಲ್ಯ ಚಿಕೆಗಳ ಭಾಷೆಯಾಗುತ್ತಿತ್ತು ನ್ಯಾಯ ಪುಸ್ತಕಗಳ ಭಾಷೆಯಾಗಿತ್ತು ವ್ಯಾಕರಣ, ಅರ್ಥಶಾಸ್ತ್ರ, ಗಣಿತ, ಜ್ಯೋತಿಷ ಮತ್ತು ವೈದ್ಯಗ್ರಂಥಗಳ ಭಾಷೆಯಾಗಿತ್ತು ಅನೇಕ ಪ್ರಾಂತೀಯ ಭಾಷೆಗಳು ಪ್ರಚಾರದಲ್ಲಿದ್ದರೂ ಸಂಸ್ಕೃತವು ಅಂತಃಪ್ರಾಂತೀಯ ಭಾಷೆಯಾಗಿತ್ತು ಪ್ರಾಂತ ಭಾಷೆಗಳು ಅದ್ಭುತವಾಗಿ ಮುಂದು ನರೆದಿದ್ದರೂ ಕೇವಲ ಸಾಂಸ್ಕೃತಿಕ ಗ್ರಂಥಗಳ ವೈದುತ್ಯ ತ್ಯಾಗಿಯೇ ಅಭಿವ್ಯಸಿಲ್ಪಡಬಹುದಾದ ಸತ್ಯ ಭಾಷೆಯಾಗಿರಲಿಲ್ಲ ಈಗಲೂ ದೇಶದಾದ್ಯಂತ ಶಿಕ್ಷಣಭಾಷೆಯಂತೆಯೇ ಸುಲಭವಾಗಿ ತಿಡೆಯಲ್ಪಡದ ಮಾತನಾಡಬಲ್ಲ ಸಂಸ್ಕೃತ ಪಂಡಿತರೂ ಕಾಣುತ್ತಾರೆ ಸಂಸ್ಕೃತ ವಿದ್ಯಾಭ್ಯಾಸವನ್ನು ಸವ ವಿಧದಲ್ಲಿಯ ೂ ಪ್ರೋತ್ಸಾಹಿಸಬೇಕು ಎಂದು ಮದ್ರಾಸು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಮುಂದೆ ಕೊಟ್ಟರುವ ಅಭಿಪ್ರಾಯವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೀನೆ

ಸಂಸ್ಕೃತ ಸಾಹಿತ್ಯದಲ್ಲಿ ನಮ್ಮನಾಡಿನ ಸಂಸ್ಕೃತಿಯೇ ಅಭಿವ್ಯಕ್ತಿತವಾಗಿದೆ ಆ ಭಾಷೆಯ ಐಕ್ಯದ ಭಾವನೆನ್ನು ಸ್ಫೂರ್ತಿಗೊಸಲು ದೊಡ್ಡ ಸಾಧನವಾಗಿದೆ ವಾಲ್ಮೀಕಿಯ ಒಂದು ಪದ್ಯ ಉಪನಿಸತ್ತಿನ ಒಂದು ವಾಕ್ಯ, ಒಂದು ಕಾಳಿದಾಸನ ಉಪಮೆ ಸಾಕು ಅವು ನಮ್ಮ ಹೃದಯ ದಲ್ಲಿ ಯೋಚಭರಿತವೂ, ಮಹತ್ತರವೂ ಆದ ನಮ್ಮ ಭೂತಕಾಲದ ಸಾವಿರಾರು ಭವ್ಯಚ್ಛಾಯೆಗಳನ್ನು ತಂದು ಹೃತಶಕ್ತಿಗಳನ್ನು ಮಿಡಿಸುತ್ತಿನೆ ನಾವು ಈಗ ಕೆಲವು ಅಂಧಾನುಕರಣದಿಂದ ಬೇಧಭಾವಗಳಿಂದ ಬಿದ್ದಾಡುತ್ತಿದ್ದೇವೆ ಸಂಸ್ಕೃತವು ನಮ್ಮ ರಕ್ಷ ಸಂಸ್ಕೃತ ಸಾಹಿತ್ಯವನ್ನು ಸಾಯಲು ಬಿಡಕೂಡದು

ಸಂಸ್ಕೃತವು ಎಲ್ಲಾ ಭಾಷೆಗಳ ತಾಯಿ ನಮಗೆ ಸಂಸ್ಕೃತದ ಪರಿಚಯವು ಕಡಿಮೆಯಾಗಿರುವುದರಿಂದ ಅದನ್ನು ಸತ್ತಭಾಷೆಯೆಂದು ತಿಳಿದಿದ್ದೇವೆ ಇದು ಎಲ್ಲಾ ಭಾಷೆಗಳ ತಾಯಿಯಾಗಿ ಉಳಿದಿದೆ ನಾವು ನಿಜವಾಗಿ ಯತ್ನಿಸುವುದಾದೆ ಹತ್ತು ವರ್ಷಗಳಲ್ಲಿ ನನ್ನ ರಾಷ್ಟ್ರೀಯ ಅರ್ಥಿಕ ನೀತಿಯಲ್ಲಿ ಇದು ಒಂದು ಸ್ಥಾನವನ್ನು ಒಡೆಯಬಹುದು ಸಂಯುಕ್ತ ಪ್ರಾಂತ್ಯದ ಉರ್ದೂ ಮಾತನಾಡುವ ಭಾಗದಲ್ಲಿಯೂ ಹಿಂದುಗಳಲ್ಲದ ಅಲ್ಪಸಂಖ್ಯಾತರೂ ಕೂಡ ಒಂದು ಸಲ ಈ ಭಾಷೆಯ ಮಾಧುರ್ಯವನ್ನು ಆರಿತಿರೆಂದರೆ ಅದನ್ನಿಂದಿಗೂ ಬಿಡರು ಸಂಸ್ಕೃತ ಪ್ರಚುರವಾದ ಹಿಂದೀ ಭಾಷೆಯು ಬೇರವಣಿಗೆಯು ಅತ್ಯಸಾರವಾದ ಬೇರಣಿಗೆ ಅದು ಎಂಥಾ ಸಂಸ್ಕೃತ ಅಂದನನ್ನೂ ಮಾಧುರ್ಯವನ್ನೂ ಹೊಂದದು ಈ ನಮ್ಮ ಅಮೂಲ್ಯವೂ, ಜ್ಞಾನದಾಯ ಕವೂ ಎನಿಸಿದ ಸಂಸ್ಕೃತ ವಿಧಿಯನ್ನು ಎಸೆಯಲು ನಾವು ಇಚ್ಛಿಸಬಹುತ್ತಿರುವುದು ವಿಷಾದಕರವಾದ ವಿಷಯ ಮುಂದೆ ಬರಲಿರುವ ಪೀಳಿಗೆಯವರು ಖಂಡಿತವಾಗಿ ನಮ್ಮ ಭವ್ಯವಾದ ಪರಂಪರೆಯಿಂದ ಬಂದ ಸಂಸ್ಕೃತಿ ಪೂರ್ಣವಾದ ಸಂಸ್ಕೃತದ ಮಹಿಮೆಯನ್ನು ಅರಿಯುವರೆಂದು ನನ್ನ ಅತ ಪ್ರಾದೇಶಿಕ ಭಾಷೆಗಳು ತಮ್ಮ ತಮ್ಮ ಪ್ರದೇಶ ಗಳಲ್ಲಿ ಜೀವ್ಯಾಗಿ ಬೆಳೆದುವುದಕ್ಕೆ ಬಬ್ಬುದಿಡಬೇಕು. ಹಿಂದಿನಂತೆ ಸಂಸ್ಕೃತವು ನಮ್ಮ ನಾಡಿನ ಏಕ್ಯವನ್ನು ಬಿಗಿಪಡಿಸಲು ಸಾಧವವಾಗಿ ಪರಿಣಮಿಸಬೇಕು ಎಂದು ನಾನು ಒತ್ತಿ ಹೇಳುತ್ತೇನೆ.

(ಕಾಯಾಜಾತ)

ವರ್ತಮಾನ ಸಂಗ್ರಹ

ಇತಿಹಾಸ ಸಂಶೋಧಕ ಸಂಸ್ಥೆಯ ರಜತೋತ್ಸವದಲ್ಲಿ

ಪೂಂ ನೆಹ್ರೂರವರ ಭಾಷಣ

ಪಂಡಿತ ನೆಹರೂರವರು ಭಾರತ ಏತಿಹಾಸಿಕ ರೀಕಾರ್ಡ್ಸ್ ಕಮೀಷನ್ನಿನ ರಜತಮಹೋತ್ಸವದ ಆರು ಭೋತ್ಸವವನ್ನು ನೆರವೆರಿಸುತ್ತ ಪ್ರಸಂಗವನ್ನು ಏಕ್ಯಗೊಳಿಸುವ ಚಾರಿತ್ರಿಕ ಘಟನೆಗಳನ್ನು ಇತಿಹಾಸಜ್ಞರು ಒತ್ತಿ ಹೇಳಬೇಕೆಂದು ತಮ್ಮ ಭಾಷಣದಲ್ಲಿ ತಿಳಿಸಿದರು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಸ್ವಾರಸ್ಯವಾಗಿ ಇತಿಹಾಸ ಬರೆಯಲ್ಪಡಬೇಕೆಂದೂ ಮತ್ತು ರಾಜರುಗಳ ಅಲ್ಲದೆ, ಯುದ್ಧ ಮತ್ತಿತರ ಘಟನೆಗಳನ್ನು ಮಾತ್ರ ವಿವರಿಸುವುದಲ್ಲದೆ ಸಮಾಜದ ಬೆಳವಣಿಗೆ ಹೇಗೆ ಆಗುತ್ತಾ ಬಂದಿದೆ ಮತ್ತು ಮುಂದೆ ಯಾವರೀತಿ ಅದು ಮಾರ್ಪಾಡಾಗಬಹುದು ಎಂಬುದನ್ನು ಚರಿತ್ರೆಯು ಚಿತ್ರಿಸುವಂತೆ ರಚಿಸಬೇಕೆಂದು ನುಡಿದರು

ಹೈದರಾಬಾದಿಗೆ ಪಂ|| ನೆಹರೂರವರ ಆಗಮನ

ಭಾರತದ ಮಹಾ ಪ್ರಧಾನ ಪಂಡಿತ ಜವಹರಲಾಲ ನೆಹರೂರವರು ೨೪ನೇ ತಾ|| ಮಧ್ಯಾಹ್ನ ಹಕೀಮಪೇಟೆ ವಿಮಾನನಿಲ್ದಾಣಕ್ಕೆ ವಿಶೇಷ ವಿಮಾನದಲ್ಲಿ ಆಗಮಿಸಿದರು

ಅವರನ್ನು ಮಿಲಿಟರಿ ಗವರ್ನರಾದ ಮೇ|| ಜ|| ಜೆ ಎನ್ ಚೌಧರಿಯವರು ಚೀಫ್ ಸಿವಿಲ್ ಆಡ್ವಿಸ್ಸೈಟ್ ರಾದ ಶ್ರೀ ಡಿ ಎ ಭಕ್ಲೆ, ನಿಜಾಮರ ಪ್ರತಿನಿಧಿಯಾಗಿ ಬಿರಾನಿ ರಾಜಕುವರರು ಸ್ವಾಗತಿಸಿದರು

ಪಂಡಿತ ನೆಹರೂರವರೊಂದಿಗೆ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು, ಬೆಲ್ಗಿಯಂ ರಾಯಭಾರಿಯ ರಾಜ ಕುಮಾರಿಯವರು, ಇಂಡಿಯಾ ಸರ್ಕಾರದ ವಾರ್ತಾ ಶಾಖೆಯ ಅಧಿಕಾರಿಗಳಾದ ಶ್ರೀ ಎ ಎಸ್ ಅಯ್ಯಂಗಾರವರು ಬಂದಿದ್ದಾರೆ

ಪಂಡಿತ ನೆಹರೂರವರು ವಿಮಾನದಿಂದ ಇಳಿದ ಕೂಡಲೇ ಭಾರತೀಯ ಸೇನೆಗಳು ಕೊಟ್ಟ ಗಾರ್ಡ್ ಆಫ್ ಆನರ್ ಸ್ವೀಕರಿಸಿದರು ಪಂಡಿತರು, ರಮಾನಂದ ತೀರ್ಥರವರು ಮತ್ತು ಇತರರೊಡನೆ ಕುಶಲ ಸಂಭಾಷಣೆ ನಡೆಸಿ ಬೋಲಾರಮ್ಮಿಗೆ ಕಾರಿನಲ್ಲಿ ಪ್ರಯಾಣ ಬೆಳೆಸಿದರು ಸಾವಿರಾರ ಜನ ಗಂಡಸರು ಮತ್ತು ಹೆಂಗಸರು ವಿಮಾನ ನಿಲ್ದಾಣದಲ್ಲಿ ನೆಹರೂರವರ ದರ್ಶನಕ್ಕೆ ಬೆಳಿಗಿನ ಜಾವದಿಂದ ಕಾದಿದ್ದರು ಪಂಡಿತರ ವಿಮಾನವು ನೆಲ ಮುಟ್ಟುಮೊದಲೆ " ಜೈ ಹಿಂದ್ " ಮತ್ತು " ಪಂಡಿತ ನೆಹರೂಕಿ ಜೈ" ಎಂಬ ಘೋಷಣೆಗಳನ್ನು ಮಾಡಿದರು ಜೋಲಾರಂ ರೆಸಿಡೆನ್ಸಿಯಿಂದ ವಿಮಾನ ನಿಲ್ದಾಣಕ್ಕೆದ್ದ ೩ ಮೈಲಿ ದಾರದವರೆಗೆ ಜನರು ಇಕ್ಕಡೆಗಳಲ್ಲೂ ನಿಂತಿದ್ದರು ನೆಹರೂರವರು ಜನರ ನಮಸ್ಕಾರಗಳನ್ನು ಸ್ವೀಕರಿಸಿ ಮುಗುಳ್ನಗೆಯಿಂದ ಪ್ರತಿವಂದಿಸಿದರು

ಮೊನ್ನೆ ಶನಿವಾರ ಬೆಳಿಗ್ಗೆ ನೆಹರೂರವರು ನಿಜಾಮರ ಅರಮನೆಗೆ ಹೋಗಿ ನಿಜಾಮರೊಡನೆ ೪೫ ನಿಮಿಷಗಳ ವರೆಗೆ ಮಾತನಾಡಿದರು ಮಧ್ಯಾಹ್ನ ನಿಜಾಮರು ನೆಹರೂ ರವರು ವಾಸವಾಗಿರುವ ರೆಸಿಡೆನ್ಸಿಗೆ ಹೋಗಿ ೧೫ ನಿಮಿಷಗಳವರೆಗೆ ಮಾತನಾಡಿದರು ನೆಹರೂರವರು ಒಂದು ದೊಡ್ಡ ಸಾರ್ವಜನಿಕ ಸಭೆಯಲ್ಲಿ ಹೈದರಾಬಾದಿನ ಭವಿಷ್ಯವನ್ನು ಹೈದ್ರಾಬಾದಿನ ಪ್ರಜೆಗಳೇ ನಿರ್ಧರಿಸ ಬೇಕೆಂದು ಹೇಳಿದರು

ಪಂ|| ನೆಹ್ರೂರವರಿಗೆ ಹೈದ್ರಾಬಾದ್ ಸೋಷಿಯಲಿಸ್ಟರ ಮನವಿ

ನಿಜಾಮರನ್ನು ಪದಚ್ಯುತಗೊಸ್ಸಾಗಿ ಮಾಡಬೇಕೆಂದು ಹೈದರಾಬಾದ್ ಸಮಾಜವಾದಿ ಪಕ್ಷವು ಪಂ|| ಜವಹರ್ ಲಾಲ್ ನೆಹ್ರುರವರಿಗೆ ಒಂದು ಏನೇವನ ಪತ್ರವನ್ನು ಅರ್ಪಿಸಿರುವುದು ಈ ಪತ್ರಕ್ಕೆ ೪೦,೦೦೦ ಜನರ ಸಹಿಗಳುತೊಳ್ಳಲಾಗಿದೆ. ಮತ್ತು ನಿಜಾಮರು ಮಾಡಿರುವ ಅಪಥ್ಯಗಳನ್ನು ಅದರಲ್ಲಿ ಪಟ್ಟಿಮಾಡಿಸಲಾಗಿದೆ.

ದಿವಾನರಿಂದ ಕೆಡ್ಡಾ ವರ್ಕಾಟನ ಪರಿಶೀಲನೆ

ದಿವಾನರಾದ ರಾಜಮಂತ್ರಿ ಶಿಂತಾಮಣಿ ಸರ್ ಎ ರಾಮಸ್ವಾಮಿ ಮೊದಲಿಯಾರವರು ಕಾರಾಧ್ಯರಕ್ಕೆ ತೆರಳಿ, ಕೆಡ್ಡಾ ವರ್ಕಾಟುಗಳನ್ನು ಪರಿಶೀಲಿಸಿದರು

ಮೈಸೂರಿಗೆ ಪಂಡಿತ ನೆಹರೂರವರ ಆಗಮನ

ಪಂ॥ ನೆಹರೂರವರು ನೆನ್ನೆ ದಿವಸ ಹೈದರಾಬಾದಿನಿಂದ ಬೆಂಗಳೂರಿಗೆ ಆಗಮಿಸಿದರು ನಾಳೆ ದಿವಸ ಮೈಸೂರಿಗೆ ಆಗಮಿಸಿ, ಮೈಸೂರು ವಿಶ್ವವಿದ್ಯಾನಿಲಯದವರು ಸಮರ್ಪಿಸುವ "ಡಾಕ್ಟರ್ ಆಫ್ ಲಾಸ್" ಎಂಬ ಪದವಿಯನ್ನು ಸ್ವೀಕರಿಸುವದಾಗಿದ್ದಾರೆ ಆಮೇಲೆ ಅವರಿಗೆ ಏರ್ಪಡಿಸಿರುವ ಮೈಸೂರಿಗೆ ಕೆಡ್ಡಾಕ್ಕೆ ಹೋಗಿ ಅಲ್ಲಿಯ ಕಾರ್ಯಕ್ರಮವನ್ನು ಪರಿಶೀಲಿಸಿ ಮೈಸೂರಿಗೆ ಆಗಮಿಸುವರು ಬಳಿಕ ದಿಲ್ಲಿಗೆ ಪ್ರಯಾಣಮಾಡುವರು

ಶ್ರೀ ಡಿ. ಎಸ್. ಗಾರ್ಡನ್‌ರವರ ನಿವೃತ್ತಿ

ಮೈಸೂರು ವಿಶ್ವ ವಿದ್ಯಾನಿಲಯದ ರಿಜಿಸ್ಟ್ರಾರರಾದ ಶ್ರೀ ಡಿ ಎಸ್ ಗಾರ್ಡನ್‌ರವರಿಗೆ ನಿವೃತ್ತರಾಗುವ ಮುನ್ನ ೨೨ ನೇ ತಾರೀಖಿನಿಂದ ೬ ತಿಂಗಳಕಾಲ ರಜ ಕೊಡಲಾಗಿದೆ

ಲಂಚದ ಆಪಾದನೆ

ಆ॥ ಕಮೀಷನರ್ ಮೇಲೆ ಚಾರ್ಜ್ ಷೀಟು

ಬೆಂಗಳೂರು ರೆಂಟ್ ಕಂಟ್ರೋಲರಾಗಿದ್ದ ಆ॥ ಕಮಿಷನರ್ ಜಿ॥ ಬಷೀರುದ್ದೀನ್ ಅಹಮದ್‌ರವರ ಮೇಲೆ ಲಂಚ ತೆಗೆದುಕೊಂಡರೆಂಬ ಆಪಾದನೆಯ ಮೇಲೆ ~ ಪಿ ಸಿ. ೧೬೧ ಮತ್ತು ಲಂಚ ನಿರೋಧ ಕಾನೂನಿನ ೫ನೇ ವಿಧಿಯ ೨ನೇ ಕಲಮ್ಮಿನ ಪ್ರಕಾರ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ರವರು ಮೊಕದ್ದಮೆ ಹೂಡಿರುವರು

ಜಿ॥ ಬೀಸುದ್ದೀನ್ ಅಹಮದ್‌ರವರ ಮೇಕ್ಳಾದ ಆ॥ ಕಬೀರುದ್ದೀನ್ ಅಹಮದ್‌ರವರು ತಿಳಿದಿದ್ದೂ ಸಹ ಅವರೊಡನೆ ಸಹಕರಿಸಿದರೆಂಬ ಆಪಾದನೆಯ ಮೇಲೆ ಅವರ ಮೇಲೂ ಮೊಕದ್ದಮೆ ಹೂಡಲಾಗಿದೆ

ಇಂಡೋನೇಷ್ಯ ಸಮಸ್ಯೆ

ಇಂಡೋನೇಷ್ಯಾ ವಿವಾದದ ಬಗ್ಗೆ ರಕ್ಷ ತನ್ನದೇ ಆದ ಕೆಲವು ಸೂಚನೆಗಳನ್ನು ಭದ್ರತಾ ಸಮಿತಿಗೆ ಒಪ್ಪಿಸಲಿದೆ

ಅಮೆರಿಕ, ಸಿರಿಯಾ ಮತ್ತು ಕೊಲಂಬಿಯಾ ರಾಷ್ಟ್ರಗಳು ಇಂಡೋನೇಷ್ಯಾದಲ್ಲಿ ಈ ಕೂಡಲೇ ಯುದ್ಧ ನಿಲ್ಲಿಸಬೇಕೆಂದು ತಂದ ಕರಡು ನಿರ್ಣಯವನ್ನು ರಷ್ಯದ ಪ್ರತಿನಿಧಿ ಜಾಕೊಬ್ ಮಾಲಿಕ್‌ರವರು ನಿರಾಕರಿಸಿದರು ಡಚ್ಚರ ಮೇಲೆ ನೇರವಾದ ಆಪವಾದ ಹೊರಿಸಿದ್ದಕ್ಕೆ ತಮ್ಮ ನಿರಾಕರಣೆಗೆ ಕಾರಣವೆಂದು ತಿಳಿಸಿದರು

ಆಸ್ಟ್ರೇಲಿಯನ್ ರಾಜ್ಯನಿಧಿಯು ತ್ರಿರಾಷ್ಟ್ರಗಳು ಸೂಚಿಸಿದ್ದ ಕರಡು ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ಸೂಚಿಸಿ ಜಾಕೊಬ್ ಮಾಲಿಕ್‌ರವರ ನಿರ್ಣಯದಲ್ಲಿ ತಮ್ಮ ತಿದ್ದು ಪಡಿ ಆಡಕವಾಗಿವೆಯೆಂಬು ತಿಳಿಸಿದರು

ಕಬಿಕ್ಷಕ್ಷ ೬ ರಾಷ್ಟ್ರಗಳಾದರೂ ಒಪ್ಪಿದಲ್ಲಿ ಮಾತ್ರ ನಿರ್ಣಯವು ಜಾರಿಗೆ ಒರಲು ಸಾಧ್ಯವಿದೆ

ಡಚ್ಚರ ಮೇಲೆ ದಿಗ್ಬಂಧನ

ಇಂಡಿಯ, ಪಾಕಿಸ್ತಾನ ಮತ್ತು ಸಿರೋನ್ ಈ ಮೂರು ರಾಷ್ಟ್ರಗಳು ಡಚ್ ಮಿಲಿಟರಿ ವಿಮಾನಗಳು ತಮ್ಮ ವಿಶ್ವಾಣದಲ್ಲಿ ಇರಯಲು ಅವಕಾಶ ಕೊಟ್ಟಿಲ್ಲ ಈ ಕಾರಣದಿಂದ ಮತ್ತು ಆಸ್ಟ್ರೇಲಿಯನ್ ಬಂದರು ಕೆಲಸಗಾರರು ಡಚ್ಚರ ಹಡಗುಗಳಲ್ಲಿನ ಇಂಧನಾಗಿಗಳನ್ನು ಮುಟ್ಟುವುದಿಲ್ಲವೆಂದು ತೀರ್ಮಾನಿಸಿದರಿಂದ ಹಾಲೆಂಡಿನಿಂದ ಇಂಡೋನೇಷ್ಯಾದಲ್ಲಿರುವ ಡಚ್ಚರಿಗೆ ಯುದ್ಧ ಸಲಕರಣೆಗಳು ಬರುವಂತಿಲ್ಲ

ನಾಲ್ಕು ದಿನಗಳ ಹೋರಾಟದ ಬಗ್ಗೆ ಡಚ್ ಪ್ರಕಟಣೆ ಯೊಂದು ಈ ರೀತಿ ತಿಳಿಸುತ್ತದೆ ದಕ್ಷಿಣ ಮತ್ತು ಮಧ್ಯಬಾಗದಲ್ಲಿ ಮಾತ್ರ ರಿಪಬ್ಲಿಕನ್ನರ ಪ್ರತಿಭಟನೆ ಇತ್ತು

ಅಮೆರಿಕದಲ್ಲಿಯೂ ೫೩ ದೊಡ್ಡ ಕಾರ್ಮಿಕ ಸಂಘದ ಅಧ್ಯಕ್ಷರಾದ ಮಿ॥ ಫಿಲಿಪ್ ಮುರ್ರೆಯವರು ಅಮೆರಿಕದ ಸ್ಟೇಟ್ ಸೆಕ್ರೆಟರಿಯನರಾದ ಜಾರ್ಜ್ ಮಾರ್ಷಲ್‌ರವರಿಗೆ ಒಂದು ಮನವಿ ಕಳುಹಿಸಿ, ಈ ಕೂಡಲೇ ಡಚ್ಚರ ಅಕ್ರಮಣವನ್ನು ನಿಲ್ಲಿಸಬೇಕೆಂದು ಕೇಳಿಕೊಂಡಿದ್ದಾರೆ

ವಿಶ್ವಭಾರತಿಯ ಘಟಿಕೋತ್ಸವದಲ್ಲಿ ಡಾಕ್ಟರ್ ಕಾಟ್ಜುರವರ ಭಾಷಣ

'ಗುರುದೇವ ಬಾಗೂರವರನ್ನು ಕಣ್ಣಾರೆ ಕಂಡಿದ್ದ ನಾನೇ ಧನ್ಯ.' ವಿಶ್ವ ರವೀಂದ್ರ ಗೋಷ್ಠಿಯ ಭ್ರಾತೃತ್ವ ಕಾಲದಲ್ಲಿದ್ದ ಸಂಬಂಧವನ್ನು ಪುನರುಜ್ಜೀವನಗೊಳಿಸಿ ಶಾಂತಿನಿಕೇತನವನ್ನು ಈ ಶ್ರೇಷ್ಠ ಸಂಸ್ಕೃತಿಗೆ ನೆಲೆಯನ್ನಾಗಿ ಮಾಡಿದೇಲೆಯು ಈ ರವೀಂದ್ರರು ಆಶಿಸಿದ್ದರು ಅವರ ಕನಸನ್ನು ನಾವು ಕಾರ್ಯಗತ ಮಾಡಬೇಕು ' ಎಂದು ಪಶ್ಚಿಮಬಂಗಾಳದ ಗೌರ್ನರ್‌ರವರಾದ ಡಾಕ್ಟರ್ ಕೈಲಾಸನಾಥ ಕಾಟ್ಜುರವರು ವಿಶ್ವಭಾರತಿಯ ಘಟಿಕೋತ್ಸವ ಸಮಾರಂಭದಲ್ಲಿ ಭಾಷಣ ಮಾಡಿದರು

ಶ್ರೀ ವಿ. ಕೆ. ಕೃಷ್ಣಮೆನನ್ನರ ವರ್ಗದ ಸುದ್ದಿ ಸುಳ್ಳು

ಲಂಡನ್ನಿನಲ್ಲಿ ಭಾರತದ ಹೈಕಮಿಷನರಾಗಿರುವ ಶ್ರೀ ವಿ ಕೃಷ್ಣಮೆನನ್‌ರವರನ್ನು ಬೇರೆ ಹ ದ್ದೆಗೆ ನರ್ಗಾಯಿಸಿ ಅವರ ಸ್ಥಾನಕ್ಕೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ನೇಮಕ ಮಾಡಲಾಗುವುದೆಂದು ಪತ್ರಿಕೆಗಳಲ್ಲಿ ಹೊರಡಿಸಿರುವ ಸುದ್ದಿ ನಿರಾಧಾರವಾದುದೆಂದು ಇಂಡಿಯಾ ಸಂಸ್ಥಾರವು ಪ್ರಕಟಿಸಿದೆ

ಸಿಮ್ಲಾ ಜಾಡಮಾಲಿಗಳ ಮುಷ್ಕರ

ಸಿಮ್ಲಾ ಝಾಡಮಾಲಿಗಳ ಮುಷ್ಕರವು ಮುಂದುವರಿದಿದೆ ಪೌರಸೂಪ ಸದಸ್ಯರುಗಳು ಮತ್ತಿತರ ಜನರು ಸೇರಿ ಬೀದಿಗಳನ್ನು ಗುಡಿಸಿದರು ಝಾಡಮಾಲಿ ಹೆಂಗಸರು ಒಂದು ಮೆರವಣಿಗೆಯನ್ನು ತೆಗೆದುಕೊಂಡು ಹೋಗಿ ಪುರಜನರು ಜಾಗಗಳನ್ನು ಜೋಕ್ಯಟು ಮಾಡುತ್ತಿದ್ದುದನ್ನು ತಡೆದುದಾಗಿ ವರದಿಯಾಗಿದೆ

ಚೈನಾದಲ್ಲಿ ಯುದ್ಧಕ್ಕಾಗಿ ಎರಡು ಪಕ್ಷಗಳ ಅಗಾಧ ಸಿದ್ಧತೆ

ಚೀನಾದ ನೂತನ ಪ್ರಧಾನಿ ಡಾ॥ ಸಂಪೋರವರು ತಮ್ಮ ಅಧಿಕಾರವನ್ನು ಸ್ವೀಕರಿ. ಅವರ ಮಂತ್ರಿ ಮಂಡಲವು ಕಮ್ಯೂನಿಸ್ಟ್‌ರೊಂದಿಗೆ ಸಂಧಾನ ನಡೆಸಲು ಸಿದ್ಧವಾಗಿರುವದಾಗಿ ಅವರಿಕೃತವಾಗಿ ಹೇಳಲಾಗಿದೆ. ಆದರೆ ನೂತನ ಮಂತ್ರಿಮಂಡಲದ ೫ ಸ್ಥಾನಗಳನ್ನು ವಾಷಿಂಗ್‌ಟನ್, ಲಂಡನ್ ಫ್ರುತ್ತು ಮಾಸ್ಕೋಗಳಲ್ಲಿ ಹೆಚ್ಚಿನ ಅಸಕ್ತಿ ಹುಟ್ಟಿಸುವುದಿಲ್ಲವೆಂದು ವಿದೇಶೀರಾಯ ಭಾರಿ ಕಚೇರಿಯವರು ಅಭಿಪ್ರಾಯಪಟ್ಟಿದ್ದಾರೆ.

ರಣಂಗದಲ್ಲಿ ಸಿದ್ಧತೆಗಳು

ಕಮ್ಯೂನಿಸ್ಟರು ನಾನ್‌ಕಿಂಗನ್ನು ಇಪ್ಪರಲ್ಲೇ ಆಕ್ರಮಿಸುವುದು ಖಂಡಿತವೆಂದು ಎಲ್ಲರೂ ನಂಬಿದ್ದಾರೆ ಉಭಯ ಪಕ್ಷಗಳೂ ಇದಕ್ಕಾಗಿ ಅವಶ್ಯಸಿದ್ಧತೆಗಳನ್ನು ಮಾಡಿಕೊಳ್ಳುತ್ತಿವೆ ಪವಾಯ ನಡೆಸಿರುವ ದಾ ಮುಗಿದಲಾ ಡಲೇ ಕಮ್ಯೂನಿಸ್ಟರು ನಾನ್‌ಕಿಂಗ್ ಕಡೆಗೆ ಸಾಗುವ ಕೆಂದು ಊಹಿಸಲಾಗಿದೆ.

ವ ಧ್ಯ ಚೀನಾದಲ್ಲಿ ಕಮ್ಯೂನಿಸ್ಟರಿಂದ ಪೆಟ್ಟು ತಿಂದ ೧೧ ಸರ್ಕಾರಿ ಸೇನೆಗಳು ಜಾಕ್ತಿರ್ ಯುದ್ಧದಲ್ಲಿ ಭಾಗವಹಿಸುವುದೆಂದು ತಿಳಿಯಬಂದಿದೆ.

ಉತ್ತರ ರಣಕ್ಷೇತ್ರದಲ್ಲಿ ಇಂದಿನ ಲೇಟೆಸ್ಟ್‌ನೀಸ್ ಯುದ್ಧದಲ್ಲಿ ಮುಖ್ಯಸ್ಥಿರುವ ಕಮ್ಯೂನಿಸ್ಟ್ ದಾಳಿಯನ್ನು ತಡೆಯಲಾರದೆ ಸರ್ಕಾರಿ ಸೇನೆಗಳು ರಕ್ಷಣಾ ಸ್ಥಳಗಳಿಗೆ ಒಂದಕ್ಕೆ ಸರಿಯುತ್ತಿವೆ

೫ ಸಾವಿರ ಕಮ್ಯೂನಿಸ್ಟರ ಸಾವು ನೋವುಗಳು

ಚೀನಾದ ಪೂರಾತನ ರಾಜಧಾನಿ ಪೀಪಿಂಗಿನ ಪಶ್ಚಿಮ ಉತ್ತರಗಡದ ಬಳಿ ಸರ್ಕಾರಿ ಸೇನೆಗಳು ೫ ಸಾವಿರ ಕಮ್ಯೂನಿಸ್ಟರಿಗೆ ಸಾವುನೋವುಗಳನ್ನುಂಟುಮಾಡಿರುವೆಂದು ಸರ್ಕಾರಿ ಪ್ರಕಟಣೆಯೊಂದು ತಿಳಿಸುತ್ತದೆ ಮತ್ತು ಪೀಪಿಂಗ್ ನಗರದ ದಕ್ಷಿಣದಲ್ಲಿ ಸರ್ಕಾರಿ ಸೇನೆಗಳು ಕಮ್ಯೂನಿಸ್ಟರ ಮೇಲೆ ಪ್ರತಿ ಧಾಳಿ ಹೂಡಿರುವೆಂದು ತಿಳಿಯಬಂದಿದೆ

ಜಪಾನಿನೆ ಯುದ್ಧಪಾತಕಿಗಳನ್ನು ಗಲ್ಲಿಗೇರಿಸಲಾಯಿತು

ಜಪಾನಿನ ಯುದ್ಧಕಾಲದ ಪ್ರಧಾನಿ ಜನರಲ್ ಹಿದೆಕಿ ಟೋಜೋ ಮತ್ತು ಇತರ ಆರು ಜನ ಯುದ್ಧಪಾತಕಿಗಳನ್ನು ೨೩ನೇ ತಾ॥ ಬಿನ್ನ ಗಲ್ಲಿಗೇರಿಸಲಾಯಿತು

ಜನರಲ್ ಟೋಜೋ, ಕೀಕಿ ಹಿರೋಟ ಕೆಂಜಿ ಒಯ್ ಸಾರ್, ಹಿಟೇರಿ ಕಿಮುರ, ಆಕಿರಾ ಮುಟೋ ಮತ್ತು ಇವಾನ ಮಟ್ಸುಯಿ ಇವರೆಲ್ಲ ಅಂತರ ರಾಷ್ಟ್ರೀಯ ನ್ಯಾಯಸ್ಥಾನದಲ್ಲಿ ಮರಣದಂಡನೆಯ ತೀರ್ಪಿಗೆ ಗುರಿಯಾಗಿದ್ದರು

ಏಷ್ಯಾದ ಜನರ ಬಗ್ಗೆ ಸಕಾನುಭೂತಿ ತೋರಿ ಬೇಕೆಂದೂ, ಅವರನ್ನು ಸರಿಯಾಗಿ ಅರ್ಥಮಾಡಿಕೆಳ್ಳ ಬೇಕೆಂದೂ, ಟೋಜೋ ಗಲ್ಲಿಗೇರುವ ಮುಷ್ಟ ಬೌದ್ಧ ಪುಣ್ಯಾರ್ಚಿಯೊಬ್ಬನಿಗೆ ಒಂದು ಸಂದೇಶ ಕೊಟ್ಟಿದ್ದಾನೆ

ಜಪಾನಿ ಸೈನ್ಯ ಮತ್ತು ನೌಕಾ ಪಾತೆಯಲ್ಲಿರುವ ಕೇವಲ ಕೆಲವು ಜನರು ಮಾತ್ರ ಹಿಂಸಾಕೃತ್ಯ ನಡೆಸಿದ ದೆಂದೂ ಮತ್ತು ಯುದ್ಧಪಾತಕಗಳಿಗೆ ಅವರೇ ಹೊಣೆ ಯೆಂದೂ, ಜಪಾನೀಯರು ಕ್ರೂರಿಗಳಲ್ಲವೆಂದೂ, ಟೋಜೋ ಸಂದೇಶದಲ್ಲಿ ತಿಳಿಸಿದ್ದಾನೆ ಯುದ್ಧದಲ್ಲಿ ನೈತಿಕವಾದ ಜವಾಬಿಯರ ಕುಟುಂಬಗಳ ಬಗ್ಗೆ ಜಗತ್ತಿನ ಜನರು ಅನುಕಂಪ ತೋರಬೇಕು—ಎಂದು ಟೋಜೋ ಕೇಳಿಕೊಂಡಿದ್ದಾನೆ.

ಇತರರನ್ನು ನಿಶ್ಯಸನೆ ಯುದ್ಧದ ಸಮಗ್ರ ಹೊಣೆಯನ್ನು ತಾನು ಹೊರಲು ಸಾಧ್ಯವಾಗದೆ ಇದ್ದ ಬಗ್ಗೆ ತನಗೆ ದುಃಖವಾಯಿತೆಂದೂ ಜಪಾನ್ ಚಕ್ರವರ್ತಿಯವರು ಈ ಗದ್ದಲದಲ್ಲಿ ಸಿಕ್ಕದೆ ಹೋದದ್ದು ತನಗೆ ಸಂತೋಷ ಉಂಟುಮಾಡಿತೆಂದೂ ಟೋಜೋ ಸಂದೇಶದಲ್ಲಿ ತಿಳಿಸಿದ್ದಾನೆ

ಸ್ವೀಕಾರ

ಶಿವಮೊಗ್ಗಾ ಡಿ। ಹೊನ್ನಾಳಿ ತಾ॥ ರಾಮುಬುರಮ್ಮ ದೇವರು ಶ್ರೀರಾಘವೇಶ್ವರಾಮಿಗಳವರ ಹುಟ್ಟಿನ ಗದ್ದುಗೆ ಮಹೋತ್ಸವವನ್ನು ಮಹಾ ಭಕ್ತಿಯಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾವೋಷಣಕ್ಕೊಸ್ಕರ ಸಮರ್ಪಿಸಿದ ೨ ರೂ ಗಳು ಶ್ರೀರಾಘವೇಶ್ವರಾಮಿಗಳವರ ಮ್ಯಾನೇಜರ್ ವೇಳಿ ಹಾಲಪ್ಪಯ್ಯನವರ ದ್ವಾರಾ ತಲುಪಿರುತ್ತವೆ

ಬೆಂಗಳೂರು ಸಿಟಿ ವಿಕ್ಟೋರಿಯರಲ್ಲಿರುವ ಡಿ॥ ಇನ್ ಕಮರ್ಟ್ಯಾಕ್ಸ್ ಆ॥ ಕಮಿಷನರ್ ಕೋರ್ಟ್ ಒಡೆಯರ್ ಮಠದ ವೇಳಿ ಜ ಶ್ರೀ ರುದ್ರಾರ್ಯರ ಕೃತಿಯ ಪುತ್ರ ಚಿ॥ ಜ. ಶ್ರೀ ಗುರುನಾಥಾರ್ಯಸ್ವಾಮಿಯು ಎಸ್ ಎಸ್ ಎಲ್ ಸಿ. ಪರೀಕ್ಷೆಯಲ್ಲಿ ತೀರ್ಣರಾಗಿ ಹೊಂದಿಕೆ ಸಂತೋಷಕ್ಕಾಗಿ ಸಮರ್ಪಿಸಿದ ೫ ರೂ ಯು ಆಶ್ರಮದಾಶ್ರಯದಲ್ಲಿರುವ ಇವರ ಜ್ಯೇಷ್ಠ ಪುತ್ರರಾದ ಶ್ರೀವಿಷ್ಣು ಜ. ಶ್ರೀ ಸ್ವಾಮಿಯವರ ದ್ವಾರಾ ತಲುಪಿರುತ್ತದೆ.

ಈ ಮೇಲ್ಕಾಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪೂಜಾಕಾರ್ಯರು ನಿತ್ಯಮಂಗಳವನ್ನೇ ಆಶಿಸಿಂತು ಆಶೀರ್ವದಿಸುತ್ತೇವೆ.

(೧ನೆಯ ಪುಟದಿಂದ ಮುಂದುವರಿದುದು)

ಯೋಗೀ, ವಕ್ರಾಧಿನಾಪನ ಇತ್ಯಾದಿ ಪರ್ಯಾಯ ನಾಮಗಳು ಹೇಳಲ್ಪಟ್ಟಿರುವುವು ಈ ವಿಷಯವನ್ನು ಸ ರೂಂ ಅವಲೋಕಿಸಿ ಈ ಫಲವನ್ನು ಕ್ರಮವರಿತು ಸೆ ವಿಸಬೇಕು ಈಗ ಎಲ್ಲರೂ ಕೆತ್ತಳೇ ಹಣ್ಣಿನ ಸಿಪ್ಪೆಯನ್ನು ಮೊದಲು ಸುಲಿದು ತಿನ್ನಲಿಕ್ಕೆ ಅನುಕೂಲವಾಗುವಂತೆ ಬಿಡಿ ಬಿಡಿಯಾಗಿ ಮಾಡಿ ಅದರಲ್ಲಿರುವ ಬೀಜಗಳನ್ನು ಚಲ್ಲಿ ಮೆತ್ತಗಿರುವ ಭಾಗವನ್ನು ಸೇವಿಸುತ್ತಾರೆ ಆದು ಹುಳಿಯಾಗಿದ್ದರೆ ರಂತೂ ಅನ್ನುವುದೇ ಇಲ್ಲ ಮೇಲಿನ ಸಿಪ್ಪೆಯಲ್ಲಿ ಎಷ್ಟು ಉಪಯೋಗವಿದೆಯೆಂಬುದು ಬಹು ಜನಗಳಿಗೆ ತಿಳಿದೇ ಇಲ್ಲ ಕೆತ್ತಳೇ ಹಣ್ಣಿನ ರಸದಲ್ಲಿ ವಾಯುಹಿಡಿದಿರುವ ಕೀಲುಗಳನ್ನು ಸ್ಥಿರಮಾಡುವ ಗುಣವಿದೆ ಇದರಲ್ಲಿ 'ಬಿ' ಮತ್ತು 'ಸಿ' ವಿಟಮಿನ್‌ಗಳಿವೆ ಈ ವಿಟಮಿನ್‌ಗಳು, ನರಗಳು, ಮಿದುಳು, ಎಲುಬು, ಕರುಳಿನ ಮೊಂಭಾಗಗಳು ಮೊದಲಾದುವುಗಳನ್ನು ದೃಢಪಡಿಸುವುದು ಇದರ ಒಳಪೊರೆಯಲ್ಲಿರುವ ಬೀಜಭಾಗದ ಸತ್ವವು ಮಲಕೋಶದ ಕಾರ್ಯಸಾಮರ್ಥ್ಯವನ್ನು ದೃಢಪಡಿಸುತ್ತದೆ ಇಂತಹ ಅತ್ಯುಪಯುಕ್ತವಾದ ಭಾಗವನ್ನು ಅಮೆರಿಕನ್ನರು ಒಂದು ರೀತಿಯ ಮೊರಬ್ಬವನ್ನಾಗಿ ಮಾಡುವರು ಇದು ಟಾನಿಕ್‌ನಂತೆ ಕೆಲಸಮಾಡುವುದು ಕೆತ್ತಳೇ ಹಣ್ಣಿನ ದಪ್ಪವಾದ ಸಿಪ್ಪೆಯನ್ನು ಹೇರಳೆಹಣ್ಣಿನ ಸಿಪ್ಪೆಯಂತೆಯೇ ಗೊಜ ನ್ನು ಮಾಡಿ ಉಪಯೋಗಿಸಬಹುದು ಇನ್ನು ಒಳಗಿರುವ ಬೀಜಗಳು ರುಳಿನಲ್ಲಿ ಹುಳ ಮತ್ತು ಸೀ ಎಂದು ಎರಡು ವಿಧವಾಗಿರುವುದು ಹುಳಿ ಹಣ್ಣನ್ನು ನಮ್ಮ ದೇಶದಲ್ಲಿ ಬಹುಜನರು ವಿರೋಧಿಸುತ್ತಾರೆ ಇದು ಶುದ್ಧ ಹೆಬ್ಬು, ಈ ಹುಳಿರಸದಲ್ಲಿ ಕ್ರಿಮಿಗಳನ್ನು ನಾಶಮಾಡುವ ಶಕ್ತಿಯುಂಟು ಈ ರಸದ ಸೇವನೆಯಿಂದ ಮಧುಮೇಹ ಅಜೀರ್ಣ ಪ್ಲೀಹ ದೋಷ ಇವುಗಳನ್ನು ನಿವಾರಿಸಿಕೊಳ್ಳಬಹುದು ಇದರ ಲ್ಲಡಗಿರುವ ಬೀಜಗಳನ್ನು ಉಗಿಯದೆ ನುಂಗುವುದನ್ನು ಕಲಿಯಬೇಕು

ಈ ಬೀಜಗಳಲ್ಲಿ ಮಲೇರಿಯಾ ರೋಗವನ್ನು ಪ್ರತಿ ಬಂಧಿಸ ಜಯುತ ಶಕ್ತಿಯಿದೆ ಇದು ಬಹುಜನಗಳಿಗೆ ತಿಳಿದಿಲ್ಲ ಸ ಶಾಸ್ತ್ರೀಯ ಈ ಬೀಜಗಳಿಂದ ದ್ರವರೂಪ ನಂದ ಔಷಧವನ್ನೂ ತಯಾರಿಸಿ ಅತ್ಯಧಿಕ ಬೆಲೆಗೆ ನಮಗೇ ಮಾರಿ ಶ್ರೀಮಂತರಾಗುತ್ತಿದ್ದಾರೆ ಇದು ಒಂದು ವಿಷಾದಕರವಾದುದು ಮಕ್ಕಳಿಗೆ ಈ ಹಣ್ಣುಗಳನ್ನು ಅದಿಕಾಂಶದಲ್ಲಿ ಕೊಡಬೇಕು ಆದರಿಂದ ಎಲುಬುಗಳು ಗಟ್ಟಿಯಾಗಲಿಕ್ಕೆ ಬೇಕಾದ ಕ್ಯಾಲ್ಸಿಯಂ ಎಂಬ ಭಾಗವು ಚಿಕ್ಕವಯಸ್ಸಿನಲ್ಲಿಯೇ ಆಂಟಿ ಮುಂದ ಆಗಬಹುದಾದ ಅನೇಕ ಆನರ್ಥಗಳನ್ನು ತಪ್ಪಿಸುವುದು ಕೆತ್ತಳೇಹಣ್ಣು ವಾಯುರೋಗಕ್ಕೂ ಮಲವಿಸರ್ಜನೆಯಾಗದಿರುವ ರಿಗೂ ದಿವ್ಯೌಷದ ಇದೇ ರೀತಿ ಇತರ ಹಣ್ಣುಗಳಲ್ಲಿ ಜೀವಸತ್ವಗಳು ಅಡಗಿರುವುವು ದೇವರು ಮನುಷ್ಯರ ಉದ್ಧಾರಕ್ಕಾಗಿ ನಿರ್ಮಿಸಿರುವ ಹಣ್ಣುಗಳನ್ನು ಸರ್ವರೂ ಸೇವಿಸಿ ಆರೋಗ್ಯಭಾಗ್ಯಶಾಲಿಗಳಾಗಬೇಕು

ವಾಣಿಜ್ಯ ಸಮ್ಮೇಳನದಲ್ಲಿ ಶ್ರೀ॥ ಘೋಷರ ಭಾಷಣ

ಇಂದಿನ ಭೀರತದ ಆರ್ಥಿಕ ಪರಿಸ್ಥಿತಿಯಲ್ಲಿ ಖಾಸಗಿ ಉದ್ಯಮಗಳಿಂದ ಆಗಬೇಕಾದ ಕಾರ್ಯವು ಮಹತ್ತರವಾದುದು ಈಗ ತಾನ ಸ್ವಾತಂತ್ರ್ಯವನ್ನು ಗಳಿಸಿದ ನಾವು, ಮಿಲಿಟರಿ ವಿಂಂತಾದ ವಿಷಯಗಳಲ್ಲಿ ಇನ್ನೂ ಒಲಯುತರಾಗಿಲ್ಲ ಆರ್ಥಿಕ ಸ್ಥಿತಿಯು ಸುಧಾರಿಸಿಲ್ಲ ಉದ್ಯೋಗ ರಂಗದಲ್ಲಿ ಬೆಕ್ಕಿಲ್ಲ ಲ್ಲ ಮೇಧಾವಿಗಳು ಇಲ್ಲವೆಂದೇ ಹೇಳಬಹುದು ಇದನ್ನೆಲ್ಲಾ ಪರಿಶೀಲಿಸಿದಲ್ಲಿ ಖಾಸಗಿ ಉದ್ಯಮಗಳು ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡಿದರೆ ಮಾತ್ರ ಭೀರತವು ಸಮೃದ್ಧಿಯಾಗಿ ಮುಂದುವರಿಯಲು ಸಾಧ್ಯವಿದೆ ಎಂಬ ಮಾತು ಇಂದು ಭೂರತ ವಾಣಿಜ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಆಲಹಾಬಾದ್ ವಿಶ್ವ ವಿದ್ಯಾನಿಲಯದ ಶ್ರೀ ಎಂ ಕೆ ಘೋಷರವರು ತಿಳಿಸಿದರು

ಸಿದ್ಧಾಂತ ಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ನೂ ಸದ್ವಿಚಾರಶಿಖಾಮಣಿಗ್ರಂಥವನ್ನು ಖ್ಯಾತಿಯಿಂದಿರುವುದು ಈ ಸುಜನಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜ ದ್ವಿಪ್ರಸಂಖ್ಯದ ಆಗ್ರಸ್ಥಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ಮೇರ ಶೈವಜಂಗಮರಿಗೆ ಸದ್ಗ ದೊಂಬುತಕ್ಕ ಗ್ರಂಥಗಳೆಲ್ಲಲ್ಲ ಇಂತೆ ಲಬುದ ಪುರಾತನಗ್ರಂಥಶಿಖಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೫೫೦ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿವಾಚಾರ್ಯರಿಂದ ಆಜ್ಞಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಸೂಲಭೂತವಾಧಾರವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದು ಒಂದು ವ್ಯಾಖ್ಯಾನದಲ್ಲಿಯೂದರಂತೆ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬದಿಯಲ್ಲಲ್ಲಿ ಈ ಕೆ ರೆತಿಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಕಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ + ಸಂಸ್ಕೃತ ಒಟ್ಟು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿದೊಡನೆಯೇ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ಚೆನ್ನಾಗಿ ಅನುಭವಕ್ಕೆ ಬರುವುದು ಪಾಠಕರ ಆನುಕೂಲ್ಯಾರ್ಥ ಬಹು ಪ್ರಮುಖವಾದ ಸಿದ್ಧಾಂತವಿಷಯಾನುಕ್ರಮಣಿಕೆಯೂ ಕೊಟ್ಟಿರುವುದು ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿರುವ ಈ ಗ್ರಂಥವು ಒಟ್ಟು ೬೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀ ಗದ್ದುರೇಣುಕಾಚಾರ್ಯರ ಲಿಲಾಚಕ್ರವಾದ ಮನೋಜರದ್ಭಾವಚಿತ್ರಗಳು ಜೊತೆಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಶೈವಜಂಗಮರು ತಪ್ಪದೆ ಕೊಳ್ಳಲೇಬೇಕಾದ ಅಪೂರ್ವ ಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು

ಬೆಲೆ ೨ ರೂಪಾಯಿ.

ಸಿದ್ಧೋದ್ಧಾರಕ ಪುಸ್ತಕಾಲಯದ ಮುದ್ರಿತ ಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ	ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಸಜ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ	ವೀರಶೈವನಮಹಾತ್ಮರು	೮ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ	ಬಸವಧ್ಯಾನಂತವಿವಾಕರ (೩ನೆಯ ಆವೃತ್ತಿ)	೮ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ	ಆಗಮಪರಿಜ್ಞಾನ	೮ ಆಣೆ
ಸಂಶ್ಲಿಷ್ಟ ಶಿವಪೂಜಾವಿಧಿ (೮ನೆಯ ಆವೃತ್ತಿ)	೨ ಆಣೆ	ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾವಣಮು (ತೆಲುಗು)	೮ ಆಣೆ
ಶ್ರೀಪೆಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ	ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯರ್ಕೃತ) ..	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಬಸವಾದಿಪ್ರಮಥಸ್ತವರ್ಷಣ (೪ನೆಯ ಆವೃತ್ತಿ)	೨ ಆಣೆ	ಶಿಖಾಸೂತ್ರಸಿದ್ಧಾಂತದರ್ಪಣ ..	೧೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ	ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೨ ಆಣೆ	ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ಶ್ರೀರುದ್ರಮುನಿವಿಜಾರ್ಯಶತಕ ..	೨ ಆಣೆ	ವೈದಿಕಶಿವಪೂಜಾವಿಧಿ (೪ನೆಯ ಆವೃತ್ತಿ, ಚಿತ್ರಸ್ತರಮುಖ್ಯಪಾಮಯ)	೧ ರೂ
ತಿವಶಕ್ತಿವಿಲಾಸ	೨ ಆಣೆ	ಶ್ರೀಕರಭಾಷ್ಯಂ (ಚಿಕಬ್ಸ್ಟೂಪ್ರೀ)	೨ ರೂ
ವಿಜಯನಗರ ಸಾಮ್ರಾಜ್ಯಂ ಶ್ರೀರೇಣುಕಾಚಾರ್ಯರೂ ..	೨ ಆಣೆ	ವೀರತ್ಯಾಗವರತ್ನ (೩ನೆಯ ಆವೃತ್ತಿ, ೫೦ ಮತ್ತಕ್ಕದ ಫೋಟೋಗಳಿರುವುವು)	೨ ರೂ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) ..	೨ ಆಣೆ	ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨ ರೂ
ಪಂಚಾಚಾರ್ಯಪ್ರಕಾಶ	೩ ಆಣೆ	ಸಿದ್ಧಾಂತಶಿಖಾಮಣಿ (ಕನ್ನಡ ವೀಕಾಸಹಿತ)	೨ ರೂ
ಪಂಚಾಚಾರ ಪ್ರಕಾಶಿಕಾ	೩ ಆಣೆ	ತಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರತ್ಯಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ	ತಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
ಲಿಂಗಧಾರಣವಿಧಿ	೪ ಆಣೆ	A brief life-sketch of Pandit Sri Kashinatha Shastriji: (*English*)	4 As
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ	The Philosophical Aspect of Viraasivism (*English*) ..	8 As
ಶ್ರೀಪಶಿಸಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ	Speeches by Pandit Shri Kashinatha Shastriji (*English*)	12 As
ಕೈವೋಪನಷತ್ಸಂಗ್ರಹ: (ಸಂಸ್ಕೃತ) (೨ನೆಯ ಆವೃತ್ತಿ)	೬ ಆಣೆ	ಶಿವಾಚಾರಚಂದ್ರಿಕಾ (ತಲುಗು) ...	೩ ರೂ
ವೀರಶೈವ ಸ್ತ್ರಾಯಶ್ಚಿತ್ತವಿಧಿ	೪ ಆಣೆ	ಶಿವಾಚಾರಚಂದ್ರಿಕಾ (ತಮಿಳು)	೧ ರೂ.
ವೈದಿಕಸಾಮ್ಯಾಯರಹಸ್ಯ	೪ ಆಣೆ	ಸಚ್ಚಾಚಾರಚಂದ್ರಿಕೋದಯ (ಶಿವಚಾರಚಂದ್ರಿಕಾ-ತೆಲುಗು)	೧ ರೂ.
ಸಜ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ	ಶಿವಾಚಾರಚಂದ್ರಿಕಾ (ತೆಲುಗು)	೩ ಆಣೆ
ವೀರತ್ಯಾಂಶ್ಕೈಷ್ಟಿ-ಶ್ರಾದ್ಧವಿಧಿ	೬ ಆಣೆ		
ಸಿದ್ಧಾಂತ ಶಿಖಾಮಣಿ (ಮೂಲಗ್ರಂಥ. ಚಿತ್ರಸ್ಥಿತಿ)	೮ ಆಣೆ		

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

Edited, Printed and Published by Pandit Kashinatha Shastri at Shri Panchacharya Electric Press, Sayaji Rao Road, Mysore